Registered No M. 49

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ಸರಾಸರಿಗೆ ರೂ 1—4—0 ಟಪ್ಪಾಲು ಹಾಗೂ ಶೀಘ್ರ ರೂ 2—1—0

ಪುಸ್ತಕ IX ಮಂಗಳೂರು ತಾ ೧೫ನೇ ನವಂಬರ ಶುಕ್ರವಾರ 1915 ಸಂಚಿಕೆ 46

ಅತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು

ಸೆಶಿಂತಾನ್.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು ಈ ಸೆತಿಂತಾನದ ಸೇವನೆಯಿಂದುಟಾಗತಕ್ಕ ಗುಣಗಳೆಲ್ಲ ಕೆಲವನು ಮಾತ್ರ ಇಲ್ಲಿ ಕೊಟ್ಟಿದೆ

1 ಇದು ಶರೀರವನ್ನು ವೃದ್ಧಿಪಡಿಸುವುದಲ್ಲದೆ ತಲೆಸೋವು ಕೀಲುನೋವು, ವಾತಬಂಧ ಮೊದಲಾದ ರೋಗಗಳನ್ನು ಶೀಘ್ರದಲ್ಲಿ ಪರಿಹರಿಸುವುದು

2 ದಣಿವಾದಿಗಳಿಂದ ಕೂಡಿದ ಮಾಂಸಿಗ ಶಕ್ತಿಸಮನ್ವಿತವಾದ ಪಥ್ಯ ಪೌಷ್ಟಿಕಾನ್ನವನ್ನು ಕೂಡತಕ್ಕವರಿಗೆ ಮಹಾಪ್ರಸಾದವಾಗಿರುವುದು

3 ಔಟ್ಟಾದವರಿಂದ ಬಹುಕಾಲ ತೀವ್ರ ಜ್ವರವನ್ನನುಭವಿಸಿದವರಲ್ಲಿ ಈ ಮಾತ್ರೆಗಳನ್ನುಪಯೋಗಿಸತಕ್ಕದ್ದಲ್ಲಿ ತಿಂದೆನ್ನೆವು ಜೀರ್ಣವಾಗದಲ್ಲದೆ, ಕಾಲಪ್ರವೃತ್ತಿಯು ಕ್ರಮಕ್ರಮವಾಗಿ ಆಗುತ್ತಿದೆ ಯಾವಾಗಲೂ ಗಕ್ಕೆ ಅಸ್ವಸ್ಥವಾಗಿರುವುದು

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೂಡುತ್ತಿರುವುದಲ್ಲದೆ ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು

5 ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6 ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಹು ಚಿಕ್ಕ ಪ್ರಯತ್ನದಿಂದ ನಿವಾರಣೆಯನ್ನು ಮಾಡುವುದು

7 ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು

ಆದುಕಾರಣ ಇಂತಹ ಗುಣಕಾರಿಯಾದ ಸೆಶಿಂತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟಣ 1ಕ್ಕೆ 0—2—0 200 ಮಾತ್ರೆಗಳ ಪೊಟ್ಟಣ 1ಕ್ಕೆ 0—7—0 80 ಮಾತ್ರೆಗಳ ಟಿನ್ 1ಕ್ಕೆ 0—4—0 500 ಮಾತ್ರೆಗಳ ಮಂದಪೆಟ್ಟಿಗೆ 1ಕ್ಕೆ 1—7—0
95 ,, ,, ,, 0—4—6 200 ಟಿನ್ 0—9—0 100 ಕೇಸ ,, 0—4—6 1200 ,, ,, 2—0—0

1 ರೂಪಾಯಿಗೆ ಕಡಿಮೆಯಾಗಿ ವಿ ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ವೀಳ್ಯವು

ಬರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು — ದಿ ಊಲನ್‌ಮಾರ್ಟ್, ಮಂಗಳೂರು

ಸೋಲ್ ಏಜಂಟ್ಸ್ — ಸೆಶಿಂತಾನ್ ಡ್ರಿಗ್ಸ್,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ 2

TOM VICTOR & CO'S
BUSINESS
Shorthand and Typewriting Institution.

Instruction given in Commercial Subjects, French, Shorthand and Typewriting from "Oct. 10th to Jan 10th, Jan 15th to April 15th, June 15th to Sept. 15th"

N. B. JOB-WORK and Typewriter Repairs undertaken at very cheap rates.

MILAGRES, MANGALORE.

ವಿನಾಮೂಲ್ಯ' ವಿನಾಮೂಲ್ಯ" ವಿನಾಮೂಲ್ಯ"'

ಆರ್ಷಚಿಕಿತ್ಸಾರಹಸ್ಯ.

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ್ಯಕ್ತವಾಗುವದು ಕನ್ನಡ ನುಡಿಯ ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಷಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳಿಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ವಿಳಾಸವನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರೆಯುವದು

ಎಂ. ವಿ ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

ರಮಾಮಾಧವ.

ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್
ಮ ರಾ ಬಿ ರಾವ ರಾವ್ ಎಂ ಎ,ಎಲ್,ಎಲ್‌ಬಿ.
ಇವರಿಂದ

ಈ ಕಾದಂಬರಿಯ ಕಥಾನಕವು ಬಹು ಹೃದಯಂಗವಾದ್ದಾಗಿಯೂ, ಸ್ತ್ರೀಪುರುಷರೂ ಬಾಲ್ಯ ವಯಸ್ಸಿನವರೂ ಓದುವುದಕ್ಕೆ ತಕ್ಕುದಾಗಿಯೂ ಇದ್ದು, ಸಂಸಾರಿಕರು ಸುಖಿಗಳ್ಳಾಗಿ ಬಾಳುವ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತಲಿದೆ.

ಬೆಲೆ ಪ್ರತಿಯೊಂದಕ್ಕೆ 6 ಆಣೆ. ಅಂಚೆಯ ಹಾಸಲು ಬೇರೆ.

ವಿಳಾಸ:— ಮ್ಯಾನೇಜರ್,
ಶಾರದಾ ಪೈನ್ಸ್, ಮಂಗಳೂರು, ದ. ಕ.

ಹುಳಬಿದ್ದ ಹುಣ್ಣುಗಳು.

ಪಡುಬಿದ್ರೆ ಕಾಡಿಪಟ್ಣ ಮೊಗೇರ ತೀಪು ಹೆಂಗಸು ಬರೆಯುತ್ತಾಳೆ:—ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳಂತಾಗಿ ಆ ಛಿದ್ರದಲ್ಲಿ ಹುಳಗಳೆ ತುಳುಕುತಿತ್ತಲ್ಲದೆ ಸದರಿ ವ್ರಣಗಳು ಕರಗಿ ಅಧೋಗತಿ ಗಾತ್ರವಾಗಿತ್ತು. ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿನ್ನಲ್ಲಿಯೇ ಇದ್ದೆನು. ದೈವವಶಾತ್ ತಮ್ಮ ಸಲಹೆ ಪ್ರಕಾರ ಫೋಟೆಯಾಗಿ ಸರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟೆಡ್ ತೈಲವನ್ನು ಕೊಂಡುಕೊಂಡು ಹಚ್ಚಿದೆನು. ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಒಣಗಿ ನಡಿಯಲು ಅನುಕೂಲವಾಗಿದೆ ಎಂಬುದನ್ನು ತಿಳಿಸಲು ಸಂತೋಷಪಡುತ್ತೇನೆ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ। ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಾಡುತ್ತಿದ್ದ ಕೊಪ್ಪೆನೋವಿನಿಂದ ನರಳುತ್ತಿದ್ದ ತನ್ನ ತಾಯಿಗೆ ಒಂದು ಸಲ ಕೊಟ್ಟವ್ವರಲ್ಲಿ ಸ್ವಲ್ಪ ಉಪಶಮನಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ, ಆರ್ಡರ ಪ್ರಕಾರ ಸೀಸೆ ವಿ ಪಿ ಮಾಡಿ ಕಳುಹಿಸಿರಿ.

ಇದು ಸಂಜೀವಿನಿಗಿಂತೀ ಸರಿ!!

ಮಾ। ಕಾ। ತುಕ್ಕಪ್ಪ, ಟಿ ಎಮ್ಮಾರ್ಕಳಕಾಂ, ಮುಂಬೈ:—ಕೆಲವು ಸಮಯದಿಂದ ಕೆಮ್ಮು ಉಬ್ಬಸದಿಂದ ಪೀಡಾಗ್ರಸ್ತನಾಗಿದ್ದೆನು. ಕೆಲವು ಕಾಲದಿಂದ ಕೊಪ್ಪೆನೋವಿನಿಂದ ನರಳುತ್ತಿದ್ದ ಮುದುಕಿಯೊಳಗೂ ನಿಮ್ಮಲ್ಲಿ ದೊರೆಯತಕ್ಕ ಯುಕಲಿಪ್ಟಸ್ ತೈಲವನ್ನು ನನ್ನ ಸ್ನೇಹಿತರಾದ ಪೈ. ಕೊರಗಪ್ಪನವರಿಂದ ಪಡಕೊಂಡು ಕೊಟ್ಟಲ್ಲಿ ಇಬ್ಬರೂ ಗುಣಹೊಂದಿರುತ್ತಾರೆ. ಕೆಮ್ಮು, ಉಬ್ಬಸ, ಕೊಪ್ಪೆನೋವು, ಸರ್ದಿ ತರದ ವಾಯುರೋಗಗಳಿಗೆ ಇದು ಸಂಜೀವಿನಿಯಂತೆ ಇದೆ. ಆದುದರಿಂದ 2 ಡಜನ್ ವಿ ಪಿ ಮಾಡಿ ಕಳುಹಿಸಿರಿ. ಪೈನ್ ಸೀಸೆ 1ಕ್ಕೆ ॥—ಗೆ—॥ ಡಜನ್ ಸೀಸೆಗಳಿಗೆ ವಿ ಪಿ ಸಹಿತ ರೂ 3—12—ಗೆ ಅನುಕೂಲ ಪತ್ರಿಕೆ ಸೀಸೆಯೊಂದಿಗೆ.

ನಮ್ಮಲ್ಲಿ ಹೊರುಹೋಕವು ಮತ್ತು ಬೇರೆ ಔಷಧಿಗಳು ದೊರೆಯುವವು ಕೇಳಿರಿ.

ವಿಳಾಸ:— ವಿಜಂಟರು.—

ಇಕ್ಲಿಪ್ಸ್ ವಿಜನ್ಸ್, ಸುಗಂಧವಿಲಾಸ,
ಮಂಗಳೂರು ಪದವೀದ, ಮಂಗಳೂರು.

GRAND CLEARANCE SALE RS 1 15 0

ಯೋಗ್ಯತಾ ಪತ್ರಿಕೆ:—ನಾನು ಬಾತ್ರಿಯಿಂದ ಎಲ್ಲಾ ಕಾಲಕ್ಕೂ ತೀರ ಪದೇಪದೇ ನಿಮ್ಮಿಂದ ನಾನು ತಗೊಂಡ ಲೇಡಿಸ್ ಗಡಿಯಾರಕ್ಕೆ ಒಳ್ಳೆ ಸ್ಟೈಲಾಗಿದೆ ಗಂಟೆ ತೋರಿಸುವದರಲ್ಲಿ ಒಂದು ಸೆಕೆಂಡ್ ತಪ್ಪುವದಿಲ್ಲ ನಿಮ್ಮ ಕಂಪನಿಯವರು ಇಂಥಾ ಗಡಿಯಾರವನ್ನು ಕಳ ಹಿಸುವದಿಲ್ಲ ಮತ್ತು ಗಡಿಯಾರಗಳನ್ನು ವಿ ಪಿ ಮೂಲಕ ಕಳ ಹಿಸಿಕೊಡಿ

ಮ್ಯಾನೇಜರ್, ಇಂಡಿಯನ್ ಟ್ರೇಡಿಂಗ್ ಕಂಪನಿ

ಸುಂದರವಾದ ಲೇಡಿಸ್ ಸ್ಪ್ರಿಂಗ್ ಸಾಕೆಟ್ ವಾಚ್.

ಅಸಲಿ ಕ್ರಯ ರೂ 3-14-0, ಈಗ ರೂ 1 15 0

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರವು ಕಂಪನಿ ಸೆವನ್ ಜ್ಯಾಲೆಲ್ಸ್ ಲಕ್ಸ್ ಸ್ಟೀಲಗಾಂಧ ಗಡಿಯಾರ ಇದು ನೋಡುವದಕ್ಕೆ ಮೊಟ್ಟಮೊದಲಾಗಿ ಕಾಣುತ್ತೆ ಇತರ ಚಿಲ್ಲರೆ ಎರಡು ಮೂರು ರೂಪಾಯಿ ಕ್ರಯದ ಬೋಂಬಾಯಿ ಗಡಿಯಾರಗಳನ್ನು ಕೊಂಡು ಹಣ ಕಳಕೊಂಡು ನಂಬಿ ಮೋಸಹೋಗಬೇಡಿ ವರ್ಷಗಳ ಗ್ಯಾರಂಟಿ. ಇದೇ ಅಕ್ಕೋಬರ ತಿಂಗಳ ಒಳಗಾಗಿ ತರಿಸಿಕೊಳ್ಳುವವಗೆ ಮಾತ್ರ ರೂಪಾಯಿ 1—15—0 ಕೊಡಬೇಕೆಂದು ನಮ್ಮ ವರ್ತಮಾನ ಆಗಿದೆ.

ನಮ್ಮ ವಿಳಾಸ:—

ರಾಸ್ ವಾಚ್ ಎಂಡ್ ಕಂಪನಿ,
3. ಇರುಳಪ್ಪನ ಬೀದಿ, ಮದರಾಸು.

ಕರ್ನಾಟಕ ವೃತ್ತ ಮತ್ತು ಧನಂಜಯ.

ಕಳದ 25 ವರ್ಷಗಳಿಂದ ಭಾಷಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತ್ತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ನ್ಯುಟ ಲೇಖನಗಳುಳ್ಳ ಮುಂಬಯಿ ಕರ್ನಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ಚೊಕ್ಕ ರೊಯಿಲ್ ಸ್ಯಾಟಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಸೊಬಲಗಳೆ ಟಪ್ಪಾಲು ಹಾಸಲು ಸೇರಿ ರೂ. ೩—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ನಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

Vikata Vinodini.

An illustrated Kannada monthly journal, full of humourous stories, witty sayings, comic sketches, moral truths, Etc.

Annual subscription (including postage) Re. 1—0—0 only.

Address.— **Vikata Vinodini Office.**
Cottonpet, Bangalore City.

ಕನ್ನಡ ಮಾಸಪತ್ರಿಕೆ.

ವಿಕಟ ವಿನೋದಿನಿ.

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪರವಾದ ಹಾಸ್ಯೋಲ್ಲೇಖನಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ.

ನಮ್ಮ ವಿಳಾಸ:— "ವಿಕಟ ವಿನೋದಿನಿ" ಆಫೀಸು,
ಆರಳೆಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ಸಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂಪಾವತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಮಠ ಮಿಕ್ಸನ್ ಚೇಕುಗಳೂ; ಜೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಕ್ಸನ್ ಕೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಸೆಲ್ಲು ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಎಂ ತೀರಿಗಳೂ, ಜೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ತೀರಿಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಇಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗೈರೆ.

ವಿಳಾಸ:— ಜೆ. ಎಸ್. ಜೋಜ ಎಂಡ್ ಕಂಪೆನಿ,
ಕಂಪನ್ಸಳಟ್ಟಾ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ ಸಂಧಿವಾತ, ತಲೆನೋವು, ಶಿರೋಧಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಅನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟಿ ಒಂದರ ಕಿಮ್ಮತ್ತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲಿ ಹಲವು ನಮೂನೆಯ ಔಷಧಗಳಿವೆ ಬರೀ ಜೋಕೆನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ. ಪಿ ಪ್ರತ್ಯೇಕ.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹೊಟ್ಟೆ ಬಯಲ್ ಇಲ್ಲಾ ಇದು ಗಿಡವ ಬೇರಿಕಾಯಿಂದಲೂ ಒದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬಳಿಯುವವು

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0

ಸುಂದರಿ ಮುಲಾಮು.

ಮುದ್ದುಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುವೃದ್ಧಿ, ದಾರ್ಢ್ಯವೃದ್ಧಿ ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಷಿಯಲ್ ರಿಫೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಒಹಳ ಉತ್ತಮವಾದ ಔಷಧ

ಡಬ್ಲ್ಯೂ ಮೆಕ್ಸ್‌ವೆಲ್, ಮೈಸೂರು.—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತದೆ

ಆರ್. ಆರ್ ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ಡಾಂಡೇಕರ್, ಎಲ್ ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ —ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಶಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಸ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ್‌ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	...	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital ...	...	225,000—0—0	ಹುಟ್ಟಿಬಂದ ಮೂಲ ಧನವು ,, ...	225,000—0—0
Subscribed Capital	...	219,100—0—0	ಪ್ರತಿಜ್ಞಾತ ಮೂಲ ಧನವು ,, ...	219,100—0—0
Paid up Capital		194,100—0—0	ಆಗತ ಮೂಲ ಧನವು ,, ...	194,100—0—0
Deposits ...	... ...	386,774—8—4	ಠೇವಣಾತಿಯಾಗಿ ಕೊಡೋಣಾದ ಸೊಬಲುಗುಗಳು ...	386,774—8—4
Reserve Fund ...	... ...	33,500—0—0	ರಕ್ಷಿತ ಧನವು	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past yeafs and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 1, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 Rs and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

Canara Bank Ltd,
Mangalore, 1st November 1915.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಸೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ 29,300ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಸೊಬಲುಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಖಲ್ಲಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆನೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಣಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಆದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ಸಿದಲ್ಲಿ ಸಾಲ್ಮ ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂಗಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿನಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ ಸೀಸೆಗೆ 2-0-0. 1 ಡ್ರಾಮ್ ಸೀಸೆಗೆ 0—12—0 ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents:—MOHINI AGENCY,
3 Fida Building, Jumma Musjid, BOMBAY.
Agents:—Bhagavandas Choonilal & Co.,
177 China Bazar Road, MADRAS.

ಪ್ರೊಪ್ರೈಟರರು:—ಒರಿಯಂಟಲ್ ಡ್ರಗ್ ಎಂಡ್ ಕೆಮಿಕಲ್ ಕೋ.
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದಿ, ಬೊಂಬಾಯಿ.
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.
177 ಚೀನಾ ಬಜಾರ್ ರಸ್ತೆ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 5ನೇ ನವಂಬರ 1915

ಮಂಗಳೂರು ಅರಸಿಕೆರೆ ರೈಲ್ವೆ.

ಕಳೆದ ಸುಮಾರು ಮೂವತ್ತು ವರ್ಷಗಳಿಂದಲೂ ಜೀವಿತ ನದಿಯತಿಯಾಗಿ ಕೊನೆಗೆ ಮೂರು ವರ್ಷಗಳ ಇತ್ತಲಾಗಿ ಖಂಡಿತವಾಗಿ ನಿರೀಕ್ಷಿಸಿರುವುದೆಂಬ ಮಹತ್ತರವಾದ ಆಶೆಯನ್ನು ನಮ್ಮ ಬಿಲ್ಲೆಯ ಮಹಾಜನರುಗಳಲ್ಲಿ ಹುಟ್ಟಿಸಿ, ಕಳೆದ ಗತಿಗಳೇ ಜುಲೈ ತಿಂಗಳಿಂದ ನಮ್ಮ ಬಿಲ್ಲೆಯವರು ತಾವಾಗಿಯೇ ಅವಕಾಶಕ್ಕಾಗಿ ಕರವನ್ನು ಕೂಡ ಹೊರಿಸಿಕೊಳ್ಳುವ ಮಟ್ಟಿಗೆ ಮುಂದರಿಸಿದ್ದ ಮಂಗಳೂರು ಅರಸಿಕೆರೆ ರೈಲ್ವೆಯ ವಿಚಾರವು ಅಕಸ್ಮಾತ್ತಾಗಿ ತಿರಿಗಿ ಹೋಯಿತೆಂದೋ, ಹೋಗಿವುದರಲ್ಲಿದೆಯೆಂದೋ ಉಂಟಾಗಿರುವ ಸಮಾಚಾರವನ್ನು ನಮ್ಮ ಹಿಂದಿನ ಸಂಚಿಕೆಯೊಂದರಲ್ಲಿ ತಿಳಿಸಿಯೇ ಇರುವೆವು. ಮೈಸೂರು ದಿವಾನರಾದ ಶ್ರೀಮನ್ ಸರ್ ವಿಶ್ವೇಶ್ವರ ಅಯ್ಯರವರು ಕಳೆದ ಜುಲೈ ತಿಂಗಳ ೩೦ನೇ ತಾರೀಕಿನಲ್ಲಿ ಮೈಸೂರು ನ್ಯಾಯವಿಧಾಯಕ ಸಭೆ ಸೇರಿದ್ದಾಗ, ಸದಸ್ಯರನ್ನು ಉದ್ದೇಶಿಸಿ:— 'ಈ ಕೆಲಸವನ್ನು ಉಸಕ್ರಮಿಸಬೇಕೆಂದು ನಾವು ಈ ಮೊದಲು ನಿಶ್ಚಯಿಸಿದ್ದಿವು ನಿಜವೇ. ಆದರೆ ತದನಂತರ ಪರಿಶೋಧನೆ ನಡೆಯಿಸಿದುದರಲ್ಲಿ ಹಲವು ವಿಧವಾದ ಆಕ್ಷೇಪಣೆಗಳೂ ಅಡಚಣೆಗಳೂ ಗೋಚರಕ್ಕೆ ಬಂದುವು. ಯಾವುದಕ್ಕೂ ಮುಖ್ಯವಾಗಿ, ಮಂಗಳೂರು ಬಂದರಿನ ಸೌಕರ್ಯಗಳನ್ನು ಹೆಚ್ಚಿಸಿಕೊಡಲು ಮದ್ರಾಸು ಸರಕಾರದವರಿಗೆ ಇಷ್ಟವಿಲ್ಲವೆಂಬುದಾಗಿಯೂ, ಸದ್ಯದಲ್ಲಿ ಅವರು ಗಮನವನ್ನೆಲ್ಲ ಕೊಚ್ಚಿಯ ರೇವನ್ನು ಸಂಸ್ಕರಿಸುವುದರಲ್ಲಿ ನೆಲಸಿ ನಿಂತಿರುವುದೆಂಬುದಾಗಿಯೂ ನಮಗೆ ಖಂಡಿತವಾಗಿ ತಿಳಿದು ಬಂದಿತು. ಮಂಗಳೂರು ಒಂದರಲ್ಲಿ ವರ್ಷದಲ್ಲಿ ಮೂರು ನಾಲ್ಕು ತಿಂಗಳ ಕಾಲ ಹಡಗುಗಳ ಬರಹೋಗುವಿಕೆಗೆ ಅನುಕೂಲವಾಗುವಲ್ಲವೆಂಬ ವಿಷಯವು ನಿಮಗೆ ತಿಳಿದೇ ಇರುವುದು. ಮಂಜಿರಾಬಾದು ಗಟ್ಟದ ಮಾರ್ಗವಾಗಿ ರೈಲನ್ನು ರೇವಿಗೆ ಒಯ್ಯುವುದಕ್ಕೆ ಅಪಾರವಾದ ವೆಚ್ಚ ತಗಲುವಂತಿದೆ. ಮತ್ತು ವರ್ಷವೆಲ್ಲ ಹಡಗಿನ ಮೂಲಕ ವ್ಯಾಪಾರ ನಡೆಯಲು ಬಾರದಂಥ ರೇವಿಗೆ ನಮ್ಮ ರೈಲ್ವೆಯನ್ನು ಕೊಂಡು ಹೋಗಿ ನಿಲ್ಲಿಸಿದ ಪಕ್ಷದಲ್ಲಿ ಅದು ಲಾಭಪ್ರದವಾಗಲಾರದೆಂದು ಮೈಸೂರು ದೊರೆತನದವರಿಗೆ ತೋರುತ್ತಲಿದೆ. ನಮ್ಮ ಸೀಮೆಯ ಕಾಶ್ವತವಾದ ಹಿತಾಬಿವೃದ್ಧಿಗಳಿಗೆ ಇದಕ್ಕೂ ಅಧಿಕಾನುಕೂಲವಾದ ಬಂದರೆ ಬೇಕಾಗಿರುವುದು. ಈ ವಿಚಾರಣೆಗೆ ಒದಲಾಗಿ ಬೇರೆ ಯಾವ ಬಂದರಿಗೆ ರೈಲ್ವೆಯನ್ನು ಕೊಂಡು-ಹೋದರೂ ಅದರಿಂದ ಕೂಡಾ ಪ್ಲಾಂಟರುಗಳಿಗೆ ಪ್ರಯೋಜನವಾಗುವ ವಿಷಯದಲ್ಲಿ ನನಗೆ ಸಂದೇಹವಿಲ್ಲ' ಎಂಬುದಾಗಿ ಅಪ್ಪಣೆ ಕೊಡಿಸಿದರು. ದಿವಾನ್ ಸಾಹೇಬರವರು ಅಪ್ಪಣೆಕೊಡಿಸಿದ ರೀತಿಯಾಗಿ ಮಂಗಳೂರಿಗೆ ರೈಲ್ವೆಯನ್ನೊಯ್ಯುವ ವಿಚಾರಣೆ ತಿರುಗಿರುವುದು ಖಂಡಿತವೆಂದಾದರೆ ನಮ್ಮ ಕನ್ನಡ ಬಿಲ್ಲೆಯವರ ದೌರ್ಭಾಗ್ಯಕ್ಕೆ ಸೀಮೆಯೇ ಇಲ್ಲವೆನ್ನಬೇಕು. ಆದರೆ ಇದು ಖಂಡಿತವೆಂದು ಹೇಳಬರುವಂತಿದೆಯೇ?

ದಕ್ಷಿಣ ಹಿಂದೂಸ್ಥಾನದ ಯುನೈಟೆಡ್ ಪ್ಲಾಂಟರ್ಸ್ ಎಸೋಸಿಯೇಶನ್ ಎಂಬ ಸಂಘದವರು ಕಳೆದ ಅಗಸ್ಟು ೧೭ನೇ ತಾರೀಕಿನ ದಿನ ಬೆಂಗಳೂರಿನಲ್ಲಿ ಮಹಾಸಭೆ ಕೂಡಿದ್ದಾಗ, ಮೈಸೂರಿನ ರೆಸಿಡೆಂಟರಾದ ಬಹುಮಾನಪಟ್ಟ ಸರ್ ಹ್ಯೂ. ಡ್ಯಾಲಿಯವರು ಸಭಿಕರನ್ನುದ್ದೇಶಿಸಿ, 'ಮಂಗಳೂರಿಗಿಂತ ಹೆಚ್ಚು ಅನುಕೂಲವಾದ ಬೇರೆ ಬಂದರು ಸಿಕ್ಕದಿದ್ದಲ್ಲಿ ಮೈಸೂರು ದೊರೆತನದವರು ರೈಲನ್ನು ಮಂಗಳೂರಿಗೇ ಒಯ್ಯುವರು' ಎಂಬುದಾಗಿ ಹೇಳಿದ್ದರು. ಹಾಗೆಯೇ ರೈಲ್ವೆ ಬೋರ್ಡಿನ ಮೆಂಬರರಾದ ಮಿ| ಎಂಡರ್ಸನ್ ಸಾಹೇಬರವರು ಬೆಂಗಳೂರಿಗೆ ಬಂದಿದ್ದಾಗ ನಡೆದ ಚರ್ಚೆಯಲ್ಲಿ ಮಂಗಳೂರು ಬಂದರು ವರ್ಷದಲ್ಲಿ ಕೆಲವು ತಿಂಗಳು ಮುಚ್ಚಿರುವ ದೆಸೆಯಿಂದ ಮಲ್ಲೆಯನ್ನೋ ಕೊಚ್ಚಿಯನ್ನೋ ರೇವಾಗಿ ವಿಶ್ಚಯಿಸಿಕೊಳ್ಳುವ ಕುರಿತು ಮಾತುಗಳು ಬಂದಿದ್ದುವೆಂದು ಕಳೆದ ಅಗಸ್ಟು ೧೫ನೇ ತಾರೀಕಿನ 'ನ್ಯೂ ಇಂಡಿಯಾ' ಪತ್ರಿಕೆಯಿಂದ ತಿಳಿಯಬರುತ್ತಿದೆ. ಇನ್ನು ಕಳೆದ ಅಗಸ್ಟು ೪ನೇ ತಾರೀಕಿನ 'ಮದ್ರಾಸು ಮೈಲ್' ಪತ್ರಿಕೆಯಲ್ಲಿ; 'ಪ್ರಕೃತದಲ್ಲಿ ತಿರುಮೊಗ್ಗೆಯಿಂದ ಜಟ್ಟಳಕ್ಕೆ ರೈಲ್ವೆಯನ್ನು ಒಯ್ಯುವ ಆಲೋಚನೆಯು ಮೈಸೂರು ಸರಕಾರದವರಿಗೆ ಮೆಚ್ಚುಗೆಯಾಗಿದೆ' ಎಂಬುದಾಗಿ ಒಳಗುಟ್ಟಿನ ಪತ್ರಿಕಾ ದಾರರೊಬ್ಬರು ಬರೆದಿದ್ದರು. "ಕಾರ್ವಾರ ಮತ್ತು ಮಂಗಳೂರಿಗೆ ನಡುವೆ ಪಶ್ಚಿಮ ಕರಾವಳಿಯಲ್ಲಿ ಎಲ್ಲಾದರೊಂದುಕಡೆ ಉತ್ತಮವಾದ ಬಂದರು ವಿಚಾರಿಸಬೇಕೆಂಬ ಆಲೋಚನೆ"ಯನ್ನು ಕುರಿತು ಸಿಮಲಾದಿಂದ ಅಗೋಸ್ತು ೩ನೇ ತಾರೀಕಿನ ದಿನ ಬಂದ ಪತ್ರಿಕೆಗಳಲ್ಲಿ ಪ್ರಚುರವಾದ ತಂತೀ ಸಮಾಚಾರವೂ ಈ ಭಟ್ಟಿಳ ಬಂದರಿನ ಆಲೋಚನೆಗೆ ಪುಷ್ಟಿಕೊಡುತ್ತಿದೆ.

ಮೈಸೂರು ಪ್ರಜಾಪ್ರತಿನಿಧಿ ಸಭೆ ನೆರೆದಿದ್ದಾಗ ಕಳೆದ ಅಕ್ಟೋಬರ್ ೧೫ನೇ ತಾರೀಕಿನ ದಿನ ದಿವಾನ್ ಸಾಹೇಬರು ಪೂರ್ವೋಕ್ತ ಕಾರಣಗಳ ವಿಷಯವಾಗಿ ನಮ್ಮ ಮೂಲೋದ್ದೇಶವು ನ್ಯಾರೋಗೇಜಿನಲ್ಲಿ (Narrow gauge) ಕಂಬಿಗಳನ್ನು ಹಾಕುವುದಾಗಿದ್ದಿತು. ಆದರೆ ನಮ್ಮ ರಾಜ್ಯದೊಳಗಣ ಮುಖ್ಯ (ರೈಲ್ವೆ) ಮಾರ್ಗಗಳೆಲ್ಲಾ ಮೀಟರು ಗೇಜಿನ (Metre) ವಾಗಿರುವುದರಿಂದ ಇದೊಂದನ್ನು ಮಾತ್ರ ನ್ಯಾರೋಗೇಜಿನಲ್ಲಿ ಹಾಕಿದೆವಾದರೆ ನಡುವೆ ಒಂಡಿಗಳನ್ನು ಒದಲಿಸಬೇಕಾದ ಸಂದರ್ಭವು ಉಂಟಾಗುತ್ತಿದ್ದಿತು. ಪಕ್ಷಾಂತರದಲ್ಲಿ ಮೀಟರುಗೇಜಿನಲ್ಲಿಯೇ ಮಂಜಿರಾಬಾದು ಗಟ್ಟದಿಂದ ಮಾರ್ಗಮಾಡಿದ ಪಕ್ಷದಲ್ಲಿ ವೆಚ್ಚವು ಒಂದು ಕೋಟಿ ರೂಪಾಯಿಗಿಂತ ಹೆಚ್ಚಾಗಿ ಬೀಳುವಂತಿದೆ. ಯುದ್ಧದ ಮೂಲಕ ಮಾರ್ವಾರಿಗೊಂಡ ಇಂಥ ಪರಿಸ್ಥಿತಿಯಲ್ಲಿ ನಾವು ಇಷ್ಟೊಂದು ಭಾರಿ ವೆಚ್ಚವನ್ನು ಸಹಿಸಲಾರದವರಾಗಿರುವೆವು. ಇನ್ನು ನೆರೋಗೇಜು ಮಾರ್ಗವು ನಮ್ಮ ಅವಶ್ಯಕತೆಗಳಿಗೆ ಸಾಕಾಗುವಂತಿಲ್ಲ. ಏಕೆಂದರೆ ಮೈಸೂರು ಸೀಮೆಯ ಕೊನೆಯಲ್ಲಿ ಗೇಜು ಒದಲಿಸಬೇಕಾಗುವ ತೊಂದರೆಯೊಂದು ಮತ್ತು ಪಶ್ಚಿಮ ತೀರದಲ್ಲಿ ಅಸಮರ್ಪಕವಾದ ಒಂದಿಷ್ಟಲ್ಲ ಅನು ನಿಂತುಹೋಗುವ ಅಡಚಣೆಯೊಂದು, ಹೀಗೆ ಎರಡು ಅನನುಕೂಲತೆಗಳುಂಟಾಗುತ್ತವೆ. ಇವಕ್ಕೂ ಅಧಿಕ ಸುಕರವಾದ ಬೇರೆ ಒಂದರ ಹುಡುಕುವ ಕೆಲಸದಲ್ಲಿ ಉದ್ಯುಕ್ತರಾಗಿರುವೆವು. ಕಳೆದ ಹಂ ವರ್ಷಗಳಿಂದಲೂ ಪಶ್ಚಿಮ ಕರಾವಳಿಯಲ್ಲೊಂದು ಒಂದರ ಹುಡುಕುವ ನಮ್ಮ ಉದ್ದೇಶದ ನಿರೀಕ್ಷಣೆಯು ಈಗಲೂ ಕೇವಲ ತತ್ಕಾಲ ನಮ್ಮನ್ನು ಬಿಡುವನ್ನವಲಂಬಿಸಿರುವುದು ಎಂಬುದಾಗಿ ತಿಳಿಯಪಡಿಸಿದರು. ಇತ್ತಲ್ಲಿ ಪಶ್ಚಿಮ ತೀರದ ಒಂದರನ್ನು ಗೊತ್ತುಪಡಿಸುವ ಕುರಿತು ಮೈಸೂರು ಸರಕಾರದವರು ಇಂಡಿಯಾ ಗವರ್ನ್‌ಮೆಂಟಿನವರೊಡನೆ ಈಗಲೂ ಪತ್ರವ್ಯವಹಾರ ನಡೆಯಿಸುತ್ತಿರುವರೆಂಬ ವಿಷಯವನ್ನು ಕಳೆದ ಅಕ್ಟೋಬರ ೨೪ನೇ ತಾರೀಕಿನ ಸಿಮಲಾದಿಂದ ಬಂದ ತಂತೀ ಸಮಾಚಾರವು ಸ್ಪಷ್ಟಗೊಳಿಸುತ್ತಿದೆ.

ಹೀಗೆ ಈ ಯಾವತ್ತು ಸಂಗತಿಗಳನ್ನು ಕಣ್ಣಮುಂದಿಟ್ಟುಕೊಂಡು ಹೇಗೆ ಎಣಿಸಿನೋಡಿದರೂ, ಮೈಸೂರು ಸೀಮೆಯಿಂದ ಪಶ್ಚಿಮ ತೀರದ ಇಂಥಾ ಒಂದರಿಗೆ ರೈಲು ಒಯ್ಯಬೇಕೆಂಬ ಆಲೋಚನೆಯು ಇನ್ನೂ ಗಟ್ಟಿಯಾಗಿಲ್ಲವೆಂದೂ, ಮಂಗಳೂರು ಆಗದಿದ್ದರೆ ಒಹಶಃ ಮಲ್ಪೆಯೋ ಕೊಚ್ಚಿಯೋ ಭಟ್ಕಳವೋ ಮೈಸೂರಿನವರಿಂದ ಅಂಗೀಕರಿಸಲ್ಪಡುವುದರಲ್ಲಿಗೆ ಎಂತೂ ದಾವಿಸಿಕೊಳ್ಳಲು ಸಾಕಾದಷ್ಟು ಆಧಾರವಿದೆ. ಅದುದರಿಂದ ಈ ವಿಷಯವನ್ನು ಕುರಿತು ಸಾಧಕ ಬಾಧಕ ಕಾರಣಗಳನ್ನು ಕೊಟ್ಟು, ಕನ್ನಡ ಬಿಲ್ಲೆಯ ಹಾಗೂ ಮೈಸೂರು ಸೀಮೆಯ ಮಹಾಜನರುಗಳಿಗೆ ಒಹು ಮುಖ್ಯವಾದ ಈ ಸಂದರ್ಭದಲ್ಲಿ ಅವರು ಹೇಗೆ ಕರ್ತವ್ಯ ತತ್ಪರರಾಗಿರಬೇಕೆಂಬುದನ್ನು ಒಂದೆರಡು ಲೇಖನಗಳ ಮೂಲವಾಗಿ ಸೂಚಿಸಬೇಕೆಂದು ಉದ್ದೇಶಿಸಿರುವೆವು.

ಸಾರ್ವಜನಿಕ ಕರ್ತವ್ಯಗಳು.

ಲೇಖಾಂಕ ೨.

ವಿಭಾಗ ಮತ್ತು ಸಾಧನೋಪಾಯ.

ಕಳೆದ ಸಾರಿ ಸೂಚಿಸಿದ್ದಂತೆ ಸಾರ್ವಜನಿಕ ಕರ್ತವ್ಯಗಳ ಧೇಯಗಳೆಷ್ಟು ಮತ್ತು ಅವುಗಳನ್ನು ಸಾಧಿಸುವುದು ಹೇಗೆ ಎಂಬುದರ ಕುರಿತು ಈಗ ವಿಚಾರಮಾಡಬೇಕಾಗಿದೆ. ಈ ಸಾರ್ವಜನಿಕ ಕರ್ತವ್ಯಗಳಲ್ಲಿ ಮುಖ್ಯವಾಗಿ ಎರಡು ವಿಭಾಗಗಳನ್ನು ಮಾಡಬಹುದು. ಸಮಾಜಕ್ಕೆ ಸಂಬಂಧಪಟ್ಟ ಸಾರ್ವಜನಿಕ ಕರ್ತವ್ಯಗಳು ಮತ್ತು ದೇಶಕ್ಕೆ ಸಂಬಂಧಪಟ್ಟ ಕಾರ್ಯಗಳು. ಯೋಗ್ಯ ಶಿಕ್ಷಣವಿಲ್ಲದೆ ಇರುವುದರಿಂದ ಒಂದು ಸಮಾಜದ ಸ್ಥಿತಿಯು ಯಾವಾಗ ನಿಕೃಷ್ಟವಾಗಿರುತ್ತದೋ, ಒಂದೇ ಮರದ ಗೆಲ್ಲುಗಳಂತೆ ಇರುವ ಒಂದೇ ವರ್ಗದ ಜನರು ಬೇರೆ ಬೇರೆ ದೇಶಗಳಲ್ಲಿ ವಾಸಿಸಿ ಕಾಲಕ್ರಮೇಣ ಅವರಲ್ಲಿ ಆಚಾರ, ವಿಚಾರ ಮತ್ತು ವ್ಯವಹಾರಗಳಲ್ಲಿ ಕೊಂಚ ಕೊಂಚ ವ್ಯತ್ಯಾಸವಾದ್ದಲ್ಲಿ ಅವರ ಏಕತ್ವ ಬುದ್ಧಿಯು ಯಾವಾಗ ನಷ್ಟವಾಗುತ್ತದೋ, ಸ್ವೈರ ಪ್ರವರ್ತನೆಗೆ ಎಡೆ ಇಡದೆ ಧರ್ಮ, ಶಾಸನ, ಶಿಷ್ಟಾಚಾರ, ಸಮಾಜ ಹಿತ ಈ ತ್ರಿವೇಣಿ ಸಂಗಮದಿಂದ ದೋಷರಹಿತವಾದ

ಒಂದು ಹೊಸ ರೂಢಿಯನ್ನು ಪ್ರವರ್ತಿಸುವುದು ಯಾವಾಗ ಪ್ರಸಂಗವಿರುತ್ತದೋ, ತಾತ್ಪರ್ಯ—ಒಂದು ವಿವಕ್ಷಿತ ಜನಸಮುದಾಯದ ಅಸ್ತಿತ್ವಕ್ಕೆ ಮತ್ತು ಉತ್ಕರ್ಷಕ್ಕೆ ಯಾವಾಗ ಒಂದು ಸಂಗತಿಯು ಅವಶ್ಯವಿರುತ್ತದೋ ಆಗ ಸಮಾಜದ ಹಿತೈಷಿಗಳು ಮಾಡತಕ್ಕ ಕಾರ್ಯವು ಸಮಾಜಕ್ಕೆ ಸಂಬಂಧಪಟ್ಟ ಸಾರ್ವಜನಿಕ ಕರ್ತವ್ಯವೆನಿಸಲ್ಪಡುವುದು. ಇದಲ್ಲದೆ, ಸ್ತ್ರೀ ಶಿಕ್ಷಣ, ಪ್ರೌಢವಿವಾಹ, ಪತಿತಪರಾವರ್ತನ ಮತ್ತು ಇತ್ತಿತ್ತ ಅಸ್ಪೃಶ್ಯೋದ್ಧಾರ ಮೊದಲಾದ ಹಲವು ಸಂಗತಿಗಳನ್ನು ಸಮಾಜ ಸೇವೆಯಲ್ಲಿ ಸೇರಿಸುವ ಶಿಷ್ಟ ಸಂಪ್ರದಾಯವುಂಟಾಗಿದೆ. ಪಾಶ್ಚಾತ್ಯ ದೇಶದ ಸಮಾಜ ಸೇವೆಯು ಕೆಲ ಕೆಲ ವಂದರಲ್ಲಿ ರೂಪಾಂತರಿ ಹೊಂದಿದೆ ಇಲ್ಲಿನಂತೆ ಅಲ್ಲಿಯ ಸಮಾಜಕ್ಕೆ ಧರ್ಮನಿರ್ಬಂಧನೆಗಳ ತೊಂದರೆಯು ವಿಶೇಷವಾಗಿರದೆ ಇರುವುದರಿಂದ ಸಾಮಾಜಿಕ ಚಳವಳಿಗಳ ಕಾರ್ಯಕ್ರಮದಲ್ಲಿ ಮೇಲೆ ಹೇಳಿದ ಎಷ್ಟೋ ವಿಷಯಗಳು ಬರುವುದಿಲ್ಲ ಆದರೆ ಇಲ್ಲಿ ಇಲ್ಲದ ಎಷ್ಟೋ ವಿಷಯಗಳು ಅಲ್ಲಿ ಸಮಾಜೋನ್ನತಿಯ ಕಾರ್ಯಗಳೆನಿಸಲ್ಪಡುತ್ತವೆ ಉದಾಹರಣೆಗಾಗಿ ಮಹಾಭಿಲಾಷಿಣಿ ಸ್ತ್ರೀಯರ ಪ್ರಯತ್ನವನ್ನೇ ತೆಗೆದುಕೊಳ್ಳಿರಿ ಇನ್ನೊಂದು ಸಂಗತಿಯನ್ನು ಹೇಳಬಹುದು. ಅದು ಯಾವುದೆಂದರೆ ಬೇರೆ ಎಲ್ಲಾ ದೇಶಗಳ ಸಮಾಜಗಳಲ್ಲಿ ಇರುವಂತೆ ಪಾಶ್ಚಾತ್ಯ ಸಮಾಜದಲ್ಲಿ ಸಹ ಐಶ್ವರ್ಯವಂತರು, ದರಿದ್ರರು ಎಂದು ಸಾಂಪತ್ತಿಕ ದೃಷ್ಟಿಯಿಂದ ಎರಡು ವಿಧದ ಲೋಕಸ್ತೋಮವಿದೆ ಆದರೆ "ಕೆಲವರು ಐಶ್ವರ್ಯವಂತರೂ, ಅಧಿಕಾರಿಗಳೂ ಆಗಿದ್ದು ಕೆಲವರು ದರಿದ್ರರೂ ಸೇವಕರೂ ಆಗಿರುವುದು ನ್ಯಾಯವಲ್ಲ, ಈಶ್ವರನ ಸೃಷ್ಟಿಯಲ್ಲಿ ಎಲ್ಲರು ಒಂದೇ ತರಗತಿಯವರಾಗಿರಬೇಕು ಕೆಲವರು ಶ್ರೀಮಂತರು, ಇನ್ನು ಕೆಲವರು ದರಿದ್ರರು ಈ ರೀತಿಯಿಂದ ಸಂಪತ್ತು ವಿಷಯವಾಗಿ ವಿಭಾಗಿಸಲ್ಪಡುವುದು ಯುಕ್ತವಲ್ಲ" ಇವೇ ಮೊದಲಾದ ವಿಚಾರಗಳಿಂದ ಪ್ರೇರಿತರಾಗಿ ತಾತ್ಪರ್ಯ ಉದ್ಯೋಗ ಮಾಡುವವರು ತಮ್ಮನ್ನು ಸಮಾಜ ಸೇವಕರೆಂದೆನಿಸಿಕೊಳ್ಳುತ್ತಾರೆ ಸಮಾಜ ಸೇವೆಯ ಕ್ಷೇತ್ರವು ಎಷ್ಟು ಉದ್ದವಿದೆ, ಅದರಲ್ಲಿ ಯಾವ ಯಾವ ಸಂಗತಿಗಳನ್ನು ಸೇರಿಸಬಹುದು, ಮುಂತಾದ ಸಂಗತಿಗಳನ್ನು ನಿರೀಕ್ಷಿಸುವುದು ಬಹು ಮನೋರಂಜಕವು ಆದರೆ ಅನ್ಯದೇಶದ ಸಾಮಾಜಿಕ ಕಲ್ಪನೆಗಳನ್ನಾಗಲಿ ಯತ್ನಗಳನ್ನಾಗಲಿ ಚರ್ಚಿಸುವುದು ತುಪ್ತಿಕಂಡನ ಪ್ರಾಯವಲ್ಲಾದರೂ ಅಷ್ಟೊಂದು ಪ್ರಯೋಜನಕರವೂ ಅಲ್ಲ ಆಯಾ ದೇಶ, ಲೋಕ ಸಮಾಜ ಇವುಗಳಿಗೆ ಅನುಗುಣವಾಗಿ ಅಲ್ಲಲ್ಲಿ ಪ್ರಯತ್ನಗಳು ನಡಿಯುತ್ತವೆಂಬುದನ್ನು ಹೇಳುವುದೇ ನಮ್ಮ ತಾತ್ಪರ್ಯವು ಸಮಾಜಕ್ಕೆ ಸಂಬಂಧಪಟ್ಟ ಸಾರ್ವಜನಿಕ ಕರ್ತವ್ಯವು ಎಷ್ಟು ದೊಡ್ಡದಿದ್ದರೂ ದೇಶಹಿತಕ್ಕಾಗಿ ಯತ್ನಮಾಡುವುದು ಮೇಲಾದುದೆಂದು ಇತಿಹಾಸ ಬೆಕ್ಕರೂ ಸ್ವಲ್ಪವಷ್ಟಿಗೆ ತಾರತಮ್ಯವಿರುವವರೂ ಕೂಡ ಹೇಳುತ್ತಾರೆ —ಆದುದರಿಂದ ದೇಶಕ್ಕೆ ಸಂಬಂಧಪಟ್ಟ ಸಾರ್ವಜನಿಕ ಕರ್ತವ್ಯಗಳು ಯಾವುವು ಎಂಬುದನ್ನು ಸಂಕ್ಷೇಪವಾಗಿಯೇ ನೋಡವ

ದೇಶಹಿತದ ಅನೇಕ ಪ್ರಕಾರಗಳಿವೆ ಅಜ್ಞರಾದ ದೇಶಬಾಂಧವರ ವಿದ್ಯೆಗಾಗಿ, ಉಚ್ಚ ಶ್ರೇಣಿಯಿಂದ ಪ್ರವೃತ್ತವಾದ ದೇಶೀಯ ವಿದ್ಯಾಲಯಗಳಲ್ಲಿ ನಿರ್ವಾಹಕತ್ವಕ್ಕೆ ತಕ್ಕುದ್ದು ವೇತನ ತಕ್ಕೊಂಡು ಕೆಲಸ ಮಾಡುವವರು ದೇಶಹಿತೈಷಿಗಳೇ ಅಜ್ಞಾನದ ನಿದ್ರೆಯನ್ನು ಹೋಗಲಾಡಿಸಿ ಲೋಕಮತವಲ್ಲಿ ಸಾತ್ವಿಕವಾದ ಚಟುವಟಿಕೆಯನ್ನು ಹುಟ್ಟಿಸುವುದಕ್ಕಾಗಿ, ಸಭೆಗಳಲ್ಲಿ ವ್ಯಾಖ್ಯಾನ ಮಾಡುವವರಾಗಲಿ, ವೃತ್ತಪತ್ರ ಮುಂತಾದವುಗಳಲ್ಲಿ ಲಾಖನ ಮುಂತಾಂತರವಾಗಲಿ ಪರಿಶ್ರಮ ಮಾಡುವವರು ದೇಶ ಹಿತ ಚಿಂತಕರೇ "ರಿಂಪರ್ಚ ಇನ್‌ಸಿಟ್ಯೂಶನ್" ಪ್ರಭೃತಿ ಸಂಸ್ಥೆಗಳನ್ನು ಹೊರಡಿಸಿ ದೇಶಕ್ಕೆ ಋಣಿಯಾಗಿ ಮಾಡುವ ಮಹನೀಯರಾದ ಟಾಟರಂತಹರು ದೇಶೋದ್ಧಾರಕರಲ್ಲಿ ಅಗ್ರೇಸರರೇ ಸರಿ ದೇಶದ ರಾಜಕೀಯ ಉನ್ನತಿಗಾಗಿ, ಸ್ವಾಮಾನಕತನದಿಂದ, ರಾಜಭಕ್ತಿಯನ್ನು ಉಲ್ಲಂಘಿಸದೆ, ತನ್ನ ದೇಶದಲ್ಲಿಯೂ, ಪರದೇಶದಲ್ಲಿಯೂ ವಿದ ವಿದದಿಂದ ಲೋಕಮತವನ್ನು ಜಾಗೃತ ಮಾಡುವವರು ದೇಶಭಕ್ತರೇ ಪರದೇಶದಲ್ಲಿ ಹೋಗಿ ಹೊಟ್ಟೆಯ ನಲುವಾಗಿ ಉದ್ಯೋಗ ಮಾಡುತ್ತಿರುವ ಸ್ವಕೀಯರಿಗೆ ನಾಗರಿಕತೆಯ ನ್ಯಾಯವಾದ ಹಕ್ಕುಗಳಿಲ್ಲದೆ ಇರುವುದರಿಂದ ಅನುಭವಿಸಬೇಕಾದ ಛಲನೆಗಳನ್ನು ಅಶಸ್ತ್ರ ಪ್ರತಿಕಾರದ ಮಾರ್ಗದಿಂದ ನಿವಾರಿಸಲು ಯತ್ನಿಸುವಾಗ ಬರುವ ಕಾರಾಗೃಹ ಮುಂತಾದ ಕಠಿಣ ಆಪತ್ತುಗಳನ್ನು ಕೂಡ ಬಹು ಶಾಂತವಾಗಿ ಸಹಿಸುತ್ತಿರುವ ಶ್ರೀಮಾನ್ ಗಾಂಧಿಯಂತಹ ಮುಖಂಡರು ವಂದ್ಯರಾದ ದೇಶಸೇವಕರೇ. ಕಾಯದೆ ಕೌನ್ಸಿಲಿನಲ್ಲಿಯೂ, ಮ್ಯುನಿಸಿಪಾಲಿಟಿಗಳಲ್ಲಿಯೂ, ಲೋಕಲ್ ಬೋರ್ಡುಗಳಲ್ಲಿಯೂ ಮೆಂಬರರಾಗಿ ಬಂದು ದೇಶ ಸೇವೆಯ ಪವಿತ್ರ ಕಾರ್ಯವನ್ನು ಮಾಡುವವರೂ ಸಾಮಾನ್ಯರಲ್ಲ. ಇದಲ್ಲದೆ, ಮದ್ಯಪಾಯಿಗಳ ಸಮಾಜದಲ್ಲಿ ಹೋಗಿ ಮದ್ಯದಿಂದ ಆಗತಕ್ಕ ನೈಯಕ್ತಿಕ, ಸಾಮಾಜಿಕ ಮತ್ತು ಕೊನೆಗೆ ಶಾಸ್ತ್ರೀಯ ಹಾನಿಗಳನ್ನೆಷ್ಟಪದೇಶಿಸಿ ಆ ಮದ್ಯಪಾನದಿಂದ ಅವರನ್ನು ನಿವರ್ತಿಸುವ ಮತ್ತು ದೊಡ್ಡ ಯಾತ್ರಾಮಹೋತ್ಸವಗಳಲ್ಲಿ ಜನರಿಗೆ ಉಂಟಾಗುವ ಸೌಕರ್ಯಗಳನ್ನು ಪರಿಹರಿಸುವ ಸ್ವಯಂ ಸೇವಕರು ದೇಶ ಸೇವೆಯ ಬಾಲಪಾಠಗಳನ್ನು ಕಲಿಯುವರೆಂದೆನ್ನಲು ಸಂದೇಹವಿಲ್ಲ, ಸಾರಾಂಶವೇನೆಂದರೆ ದೇಶಸೇವೆಯು ಗಂಗೆಯಂತೆ ಸಹಸ್ರ ಮುಖಿಯಾಗಿರುವುದು; ಮಾತ್ರವಲ್ಲ, ಪೇಷಮಾಲೆಯಂತೆ ಒಗೆ ಬಗೆಯ ಶರೀರವುಳ್ಳದ್ದಾಗಿದೆ.

ಸಮಾಜ ಸೇವಕರಾಗಲಿ, ದೇಶಸೇವಕರಾಗಲಿ ಸ್ವೀಕೃತ ತಮ್ಮ ಕರ್ತವ್ಯವನ್ನು ಮಾಡುವಾಗ ಅವರು ಸ್ವಾರ್ಥವನ್ನು ಬಿಡಬೇಕಾಗುತ್ತದೆ ಮತ್ತು ಅವರು ಅದನ್ನು ಬಿಟ್ಟೇ ಬಿಡುತ್ತಾರೆ ಪಾಶವ ವೃತ್ತಿಯಿಂದ ಸ್ವಾರ್ಥವನ್ನು ಸಾಧಿಸುವವರಿಂದ ಸಮಾಜಕ್ಕೆ ಅಥವಾ ದೇಶಕ್ಕೆ ಸಂಬಂಧ ಸಾರ್ವಜನಿಕ ಕರ್ತವ್ಯ ಮಾಡಲು ಸಾಧ್ಯವಿಲ್ಲ. ಒಂದುವೇಳೆ ಅಂತಹ ಜನರು ಮಿಥ್ಯಾಯೋಲೋಲಪರಾಗಿ ತಾವು ಸಮಾಜೋದ್ಧಾರಕರು, ದೇಶಭಕ್ತರು ಎಂದು ನಟಿಸಿ ತೋರಿಸಿದರೂ ಆ ನಟನೆಯಿಂದ ಲೋಕಕ್ಕೆ ಒಂದು ಎಳ್ಳಿನಷ್ಟು ಸಹ ಪ್ರಯೋಜನವಾಗದು ಸ್ವಾರ್ಥಸಾಧನೆಯು ಗುಪ್ತಹೇತುವನ್ನು ಅಂತರಂಗದಲ್ಲಿ ಬಚ್ಚಿಟ್ಟುಕೊಂಡು ಹೊರಗೆ ಪರೋಪಕಾರ, ಲೋಕಕಲ್ಯಾಣ ಮುಂತಾದ ವಿಷಯದಲ್ಲಿ ಉದ್ದ ಉದ್ದೆ ಪುರಾಣಗಳನ್ನು ಓದುವವರು ಕೇವಲ ಲೋಕವಂಚನಾ ಪರರೇ ಸರಿ ಇಂತಹ ಜನರಿಂದ ದೇಶಸೇವೆಯ ಸಂಗತಿಯಂತು ಇರಲಿ, ದೇಶೋಪದ್ರವ ಮಾತ ಸಂಭವಿಸೀತು ಇಷ್ಟು ಮಾತ್ರವಲ್ಲ, ಅದರಿಂದ ಅವರ ಸ್ವಹಿತವೇ ಕೆಟ್ಟು ಹೋಗೀತು. ಆದುದರಿಂದ ಯಾರು ಕೈಲಾದ ಮಟ್ಟಿಗೆ ಸ್ವಾರ್ಥತ್ಯಾಗ ಮಾಡಿ ಪರೋಪಕಾರದ ನಿಜವಾದ ಬುದ್ಧಿಯಿಂದ ಸಮಾಜದೇಶ ಇವುಗಳ ಹಿತಕ್ಕಾಗಿ ಮನಃಪೂರ್ವಕಯತ್ನಿಸುವರೋ ಅವರೇ ಧನ್ಯರು ಮತ್ತು ಆದುದರಿಂದಲೇ ಭರ್ತೃಹರಿಯು "ಇತೀದೇ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಾನ್ ಪರಿತ್ಯಜ್ಯಯೇ" ಎಂದರೆ ಸ್ವಾರ್ಥವನ್ನು ತ್ಯಜಿಸಿ ಪರಾರ್ಥಮಾಡುವವರು ಸತ್ಪುರುಷರೆಂದೆನ್ನುತ್ತಾರೆ ಮಹಾಭಾರತದಲ್ಲಿ ಕೂಡ ಸಾವಿತ್ರಿದೇವಿಯು ಯಮದರ್ಶನ ಬಳಿಗೆ ಹೋಗುವುದೇನೆಂದರೆ: "ಸಂತಃ ವರಾವರ್ಂ ಕುರ್ವಾಣಾ ನಾಪೇಕ್ಷಂತೇ ಪ್ರತಿಕ್ರಿಯಾಮ್" ಸಾಧುಗಳು ಪ್ರತಿಫಲದ ಇಚ್ಛೆಯನ್ನು ಬಿಟ್ಟು ಪರೋಪಕಾರವನ್ನು ಮಾಡುವರು

ಈ ಮೇಲಿನ ಉಪನಾದನವನ್ನು ನೋಡಿ ಸಾರ್ವಜನಿಕ ಕರ್ತವ್ಯದಲ್ಲಿ ಸ್ವಾರ್ಥದ ಮೇಲೆ ನೀರು ಚಲ್ಲಬೇಕಾಗುವುದು ಅದು ಯಾರಿಗೆ ಸಾಧ್ಯವು? ಎಂದು ಕೆಲವರು ಬಜುಪಡುಬಹುದು ಆದರೆ ಈ ಸಂಗತಿಯನ್ನು ವಿಚಾರಪೂರ್ವಕ ವಿಮರ್ಶಿಸಿದರೆ ಇದರಲ್ಲಿ ಅಸ್ವಾಭಾವಿಕವೇನೂ ಇಲ್ಲವೆಂತ ಕಂಡುಬರುವುದು ಗತಿಯ ಪರಮಾವಧಿಯು ಸ್ಥಿತಿಯು ಎಂದರೆ ಸ್ಥಿರತ್ವವು ಎಂತ ಗತಿಶಾಸ್ತ್ರಜ್ಞರು ಒಂದು ಅನುಭವಸಿದ್ಧ ತತ್ವವನ್ನು ಹೇಳಿದರು. ಹಾಗೆ ಎಲ್ಲ ಗುಣಗಳ ಪರಮಾವಧಿಯು ನಿರ್ಗುಣತ್ವವೆಂದು ತತ್ರ ಶಾಸ್ತ್ರಜ್ಞರು ಹೇಳುವರು ಈ ಎರಡು ತತ್ವಗಳಂತೆಯೇ ಸ್ವಹಿತದ ಪರಮಾವಧಿಯೇ ಪರಹಿತವೆಂದೆನ್ನಲು ಅಡ್ಡಿಯಿಲ್ಲ. ಮತ್ತು ವ್ಯವಹಾರದಲ್ಲಿ ನೋಡಿದರೂ ಕೂಡ ಶುದ್ಧ ಮತ್ತು ಉನ್ನತವಾದ ಸ್ವಾರ್ಥವು ಪರಾರ್ಥವಾಗಿಯೇ ಇರುವುದು. ಈ ದೃಷ್ಟಿಯಿಂದ ವಿಚಾರಮಾಡಿದರೆ ಸಾರ್ವಜನಿಕ ಕೆಲಸಗಳಲ್ಲಿ ಪ್ರವರ್ತಿಸುವವರಿಗೆ ಯಾವ ವಿಷಯದಲ್ಲಿಯೂ, ಮುಖ್ಯವಾಗಿ ತಮ್ಮ ಸ್ವಾರ್ಥ ಹೋದೀತೆಂಬ ವಿಷಯದಲ್ಲಿ ಭಯಪಡಬೇಕಾದ್ದಿಲ್ಲ.

ಸ್ವಾರ್ಥ ಬಿಟ್ಟು ಪರಾರ್ಥವನ್ನು ಸಾಧಿಸುವುದೇ ದೇಶ ಮತ್ತು ಸಮಾಜಗಳ ಹಿತವೆಂಬುದನ್ನಿಟ್ಟುಕೊಳ್ಳಿರಿ, ಅಥವಾ ಶುದ್ಧ ಮತ್ತು ಉದಾತ್ತವಾದ ಸ್ವಾರ್ಥವೇ ಪರಹೀವೆಂದು ನೆನಿಸಿರಿ, ಹೇಗೆ ತಿಳಿದರೂ ಇದೊಂದು ಸಂಗತಿಯು ಮುಖ್ಯವಾದುದು, ಅದೇನೆಂದರೆ ಸಾರ್ವಜನಿಕ ಕರ್ತವ್ಯಗಳ ದೀಕ್ಷೆ ತಕ್ಕೊಳ್ಳುವವರು ತಮ್ಮ ಪಾಶವವೃತ್ತಿಯ ದುಃಸ್ವಾರ್ಥವನ್ನು ದೂರದಲ್ಲಿಟ್ಟು, ಈ ಲೇಖದ ಪ್ರಥಮಭಾಗದಲ್ಲಿ ಹೇಳಿದ್ದಂತೆ ದೇಶವೇ ತನ್ನ ಮನೆಯೆಂಬ ವ್ಯಾಪಕಭಾವನೆಯಿಂದ ಕಾರ್ಯೋದ್ಯುಕ್ತರಾಗಬೇಕು ಎಂದರೆ ಅವರು ಮನಃಪೂರ್ವಕವಾಗಿ ಆತ್ಮಯಜ್ಞವನ್ನು ಮಾಡಬೇಕು. ಆದುದರಿಂದಲೇ ಶ್ರೀಯೋಗೀಶ್ವರಗೀತೆಯೊಳಗೆ ದದೀಚಿಯ ವೃತ್ತಾಂತದ ಉಪಸಂಹಾರದಲ್ಲಿ "ಸಂತಃ ಪ್ರಾಣವ್ಯಯೇನಾಪಿ ಪರಾರಾಧನ ದೀಕ್ಷಿತಾಃ" ಎಂತ ಇದೇ ಅಭಿಪ್ರಾಯವು ವ್ಯಕ್ತಪಡಿಸಿದೆ ಅಸ್ತು, ಈ ಎಲ್ಲ ಅಭಿಪ್ರಾಯದ ಮೇಲಿಂದ ಸಾರ್ವಜನಿಕ ಕರ್ತವ್ಯದ ಭೇದಗಳು, ಸಾಧನೋಪಾಯಗಳು ಯಾವುವು ಎಂಬುದು ಸಹಜವಾಗಿ ಗೊತ್ತಾಗುವುದು.

ವಿಶ್ವವಿದ್ಯಾಲಯಗಳ ಸುಧಾರಣೆ. *

ಕಳೆದ ಅಕ್ಟೋಬರು ೨೫ನೇ ಸೋಮವಾರ ದಿನ ಮದ್ರಾಸು ಮಹಾಜನ ಸಭಾ ನವನದಲ್ಲಿ ಪ್ರೊ| ರಾಮಲಿಂಗರೆಡ್ಡಿಯವರು ಮೇಲಿನ ವಿಷಯವನ್ನು ಕುರಿತು ಮಾತ ನಾಡುತ್ತ ಇಂತೆಂದರು:—

ಮದ್ರಾಸು ಆದಿಪತ್ಯದಲ್ಲಿ ಉಚ್ಚ ಪ್ರತಿಯ ಒಂದು ವಿಶ್ವವಿದ್ಯಾಲಯವನ್ನು ಹೊರ ತರಬೇಕಾದರೆ ಪ್ರಪಂಚದಲ್ಲಿಯ ಬೇರೆ ಬೇರೆ ಯೂನಿವರ್ಸಿಟಿಗಳ ರಚನೆಯನ್ನೂ, ನಿರ್ದೇಶಗಳನ್ನೂ ಮೊದಲು ತಿಳಿದುಕೊಳ್ಳವುದು ಅಗತ್ಯವಾಗಿದೆ ಈ (ಮದ್ರಾಸು) ಯೂನಿವರ್ಸಿಟಿಯು ಇಂಡಿಯದೊಳಗಣ ಇತರ ಯೂನಿವರ್ಸಿಟಿಗಳಂತೆಯೇ ಆಕ್ಸ್‌ ಫೋರ್ಡ್ ಮತ್ತು ಕ್ಯಾಂಬ್ರಿಜ್ ಯೂನಿವರ್ಸಿಟಿಗಳ ಕ್ರಮವನ್ನು ಅವುಗಳಲ್ಲಿಯ ಕುಂದಕಗಳೆ ಮಟ್ಟಿಗೆ ಮಾತ್ರ ಅನುಸರಿಸಿ ನಿರ್ಮಿಸಿರುವುದು ಮತ್ತು ಕೇವಲ ಇತ್ತ ರಾಗಿನವರೆಗೆಂಬಂತೆ ಸಮಸ್ತ ದೇಶಗಳ ಪರಿಹಾಸಕ್ಕೆ ಪಾತ್ರವಾಗಿದ್ದಿತು. ಈಚೀಚೆಗೆ ಇಂಡಿಯದ ಯೂನಿವರ್ಸಿಟಿಗಳಲ್ಲಿ ಹಲವು ವಾರ್ಪುಗಳುಂಟಾಗಿವೆ ತಥಾಪಿ ಅವು ಗಳ ದೆಸೆಯಿಂದ ವಿದ್ಯಾಪ್ರಸರಣದ ಕಾರ್ಯದಲ್ಲಿ ಅಮರಿರುವ ವಿದ್ಯಾವಂತರಿಗೆ ಕಿಂಚಿತ್ತೂ ತೃಪ್ತಿಯುಂಟಾದಂತೆಯೂ ಇಲ್ಲ, ಮಾಡಿದ ತಿದ್ದುಪಾಟುಗಳು ಕೂಡ ಕೇವಲ ಅನುಕೂಲವಾದುವುಗಳೆಂದು ಹೇಳಬರುವುದೂ ಇಲ್ಲ

ತೀಕ್ಷ್ಣ ಸಾಮರ್ಥ್ಯದಲ್ಲಿ ತುಂಬ ಹೆಚ್ಚಳಕೆಯಿಲ್ಲದ ಹಲವು ಕಾಲೇಜು ಗಳು ಒಂದೇ ಯೂನಿವರ್ಸಿಟಿಗೆ ಜೋಡಿಸಲ್ಪಟ್ಟಿರುವುದು ನಮ್ಮಲ್ಲಿಯ ಮುಖ್ಯವಾದ ಒಂದು ನ್ಯೂನತೆಯಾಗಿದೆ. ಪರದೇಶಗಳಲ್ಲಿಯು ಸಂಗತಿಯೇ ಬೇರೆ ಅಲ್ಲೆಲ್ಲ ಯೂನಿವರ್ಸಿಟಿ ಯೆಂಬುದು ಒಂದೇ ಸಂಸ್ಥಾಪನೆ, ಅದರಲ್ಲಿಯೇ ಜ್ಞಾನವರ್ಧಕ ಮತ್ತು ವ್ಯಾವಹಾರಿಕ (Theoretical & practical) ವ್ಯಾಸಂಗದ ಬೇರೆ ಬೇರೆ ಶಾಖೆಗಳಿರುವುವು ಆ ಯೂನಿವರ್ಸಿಟಿಗಳಲ್ಲಿ ವಿದ್ಯಾರ್ಥಿಗಳು 'ಡಿಗ್ರಿ'ಗಳನ್ನು ಮಾತ್ರ ಪಡೆಯುವುದಲ್ಲ, ತಮಗೆ ವಿಶೇಷವಾದ ಅಭಿರುಚಿಯುಳ್ಳ ಒಂದು ಅಥವಾ ಅಧಿಕ ವಿದ್ಯಾಶಾಖೆಗಳಲ್ಲಿ ವಿಶೇಷ ವ್ಯಾಸಂಗ ಮಾಡಿಕೊಳ್ಳಲು ಬೇಕಾದಷ್ಟು ಅವಕಾಶವಿರುವುದು, ಹಾಗಾದೇ ವಿದ್ಯಾರ್ಥಿಗಳಿಗೆ ವಿಜಯ ಪತ್ರಿಕೆ (ಸರ್ಟಿಫಿಕೇಟು)ಗಳನ್ನೂ ಪ್ರಶಸ್ತಿ (ಡಿಪ್ಲೋಮಾ) ಗಳನ್ನೂ ಹೊಂದಲು ತುಂಬ ಪ್ರೋತ್ಸಾಹ ಕೊಡಲ್ಪಡುತ್ತದೆ. ಇಷ್ಟೇ ಅಲ್ಲದೆ ಪರ ದೇಶಗಳಲ್ಲಿಯ ಯೂನಿವರ್ಸಿಟಿಗಳು ವ್ಯಾಸಂಗ ವಿಚಾರದಲ್ಲಿ ಗೊತ್ತಾದ ಕೆಲಸಕ್ಕಿಂತ ಹೆಚ್ಚಿನ ಕೆಲಸಗಳನ್ನು ಮಾಡುವುವು. ಈ ಸ್ಥಿತಿಯು ನಮ್ಮ ದೇಶದಲ್ಲಿ ಕಂಡುಬರುವುದಿಲ್ಲ. ಇನ್ನು ಪರದೇಶೀಯ ವಿಶ್ವವಿದ್ಯಾಲಯಗಳು ಕೇವಲ ಜನರುಗಳ ಧನ ಸಹಾಯದಿಂದಲೇ ನಡೆಯುತ್ತವೆ ನಮ್ಮ ಇಂಡಿಯಾದ ಯೂನಿವರ್ಸಿಟಿಗಳಲ್ಲಿ ವಿಸ್ತಾರವಾದ ಪ್ರಮಾಣದಲ್ಲಿ ಯಾವ ಕೆಲಸವೂ ನಡೆಯುವುದಿಲ್ಲ

ಇಂಡಿಯದಲ್ಲಿ ಜನರು (ಗುರುಕುಲವನ್ನು ಹೋಲುವ) ರೆಸಿಡೆನ್ಶಿಯಲ್ ಯೂನಿ ವರ್ಸಿಟಿಗಳ ಕಡೆಗೆ ಗಮನಕೊಡತೊಡಗಿರುವರು ಆಕ್ಸ್‌ಫರ್ಡ್ ಕ್ಯಾಂಬ್ರಿಜ್ (Oxford & Cambridge) ಇವೆರಡನ್ನು ಬಿಟ್ಟರೆ, ನನಗೆ ತಿಳಿದಮಟ್ಟಿಗೆ, ಈ ವಿಧವಾದ ಯೂನಿವರ್ಸಿಟಿಗಳು ಪ್ರಪಂಚದ ಬೇರೆ ಯಾವ ಭಾಗದಲ್ಲಿಯೂ ಇರುವುದಿಲ್ಲ

ಬೇರೆ ಬೇರೆ ಜಾತಿಮತಗಳ ಭಾರತೀಯ ವಿದ್ಯಾರ್ಥಿಗಳು ಸೇರತಕ್ಕ ಕಾಲೇಜುಗಳ ಮತ್ತು ಹೈಸ್ಕೂಲುಗಳ ಆಡಳಿತವೂ ವೀಲ್ಫೇರವೂ ಅನ್ಯ ದೇಶೀಯರ ಕೈಯಲ್ಲಿ ರುವುದು ಹಿತಕಾರಿಯಾಗಲಾರದು, ಅನ್ಯ ದೇಶೀಯರಿಗೆ ಭಾರತೀಯ ವಿದ್ಯಾರ್ಥಿಗಳ ನಡೆನುಡಿಗಳೊಂದೂ ಗೊತ್ತಾಗಿರುವುದಿಲ್ಲ ಪರೀಕ್ಷೆಯಲ್ಲಿ ಉತ್ತೀರ್ಣನಾಗುವಿಕೆಯು ಪರದೇಶಗಳಲ್ಲಿ ಅಷ್ಟೊಂದು ದೊಡ್ಡ ವಿಷಯವಾಗಿ ತಿಳಿಯಲ್ಪಡುವುದಿಲ್ಲ, ನವ್ಯಲ್ಲಿ ಮಾತ್ರ ಅದು ಅನನ್ಯ ಸಾಧಾರಣವಾದ ಆನಂದ ವಿಷಯವಾಗಿ ತಿಳಿಯಲ್ಪಡುವುದು. ಇನ್ನು ಪರದೇಶೀಯ ಯೂನಿವರ್ಸಿಟಿಗಳಲ್ಲಿ ಓದುವ ಎಲ್ಲರೂ ಎಂಬಂತೆ ಉತ್ತೀರ್ಣರಾ ಗಿಯೇ ಆಗುವರು; ಅದೇ ಸಾಮಾನ್ಯ ಕ್ರಮವು. ಇಂಡಿಯದಲ್ಲಿಯ ಸ್ಥಿತಿಯು ಇದಕ್ಕೆ ತೀರ ವಿಪರೀತವಾಗಿದೆ. ಇಲ್ಲಿ ಉತ್ತೀರ್ಣರಾಗುವವರ ಪ್ರಮಾಣವು ಬಲು ಸಣ್ಣದು. ಇದಕ್ಕಾಗಿ ಎಷ್ಟು ಚಿಂತಿಸಿದರೂ ಸಾಲದು ಈ ಪ್ರಮಾಣವನ್ನು ಹಾಗೆ ಸಣ್ಣದಾಗಿ ಇಡುವುದೇ ಯೂನಿವರ್ಸಿಟಿಗಳ ಕರ್ತವ್ಯಗಳಲ್ಲಿ ಒಂದೆಂದು ಇಲ್ಲಿ ತಿಳಿಯಲ್ಪಡುತ್ತಿದೆ. ಇನ್ನು ಧಾರಾಭ್ಯಾಸ ವಿಷಯವಾಗಿ ಹೇಳುವುದಾದರೆ ಇಂಗ್ಲಿಷನ್ನು ಆವಶ್ಯಕ ವಿಷಯ ವಾಗಿ ಕಲಿಸಲೇ ಬೇಕು ನಿಜವಾದರೂ ದೇಶಧಾಷೆಗಳು ಕೂಡ ಅದರಂತೆಯೆ ಅಗತ್ಯ ವಿಷಯವಾಗಿ ಪಾಠಕ್ರಮಗಳಲ್ಲಿ ಇರಲೇಬೇಕೆಂದು ನನಗೆ ತೋರುತ್ತಿದೆ ಉಪಾಧ್ಯಾಯ ವೃತ್ತಿಯವರಿಗೂ, ಇತರರಿಗೂ ಯೂನಿವರ್ಸಿಟಿಗಳ ವಿಚಾರದಲ್ಲಿ ಇತ್ತೀಚ್ಚಲಾಗೆ ಕೇವಲ 'ಎಜ್ಞೆ ಸೀಗೆ'ಯಂತೆ ನಡೆಯಲು ಪ್ರಾರಂಭವಾಗಿದೆ ಇದು ಯುಕ್ತವಲ್ಲ ಒಬ್ಬರ ಮನೋಗತವನ್ನೊಬ್ಬರು ತಿಳಿದುಕೊಂಡು ಪರಸ್ಪರ ಸ್ನೇಹಭಾವದಿಂದ ಎರಡೂ ಕಡೆ ಯವರೂ ತಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳವುದು ಅಗತ್ಯವೆಂದು ಕೋರುವೆನು

* ಮೈಸೂರು ಮಹಾರಾಜಾ ಕಾಲೇಜಿನ ಪ್ರೊಫೆಸರ್ ರಾಮಲಿಂಗರೆಡ್ಡಿ ಎಂ ಎ. ಯವರ ಹೆಸರು ಕನ್ನಡಿಗರಿಗೆ ತಿಳಿಯದಿದ್ದಲ್ಲ ಇವರ ವಿದ್ವತ್ಪವನ್ನೂ ವಿವೇಚನಾಶಕ್ತಿಯನ್ನೂ ಕಂಡು, ಪ್ರಪಂಚದಲ್ಲಿಯ ಬೇರೆ ಬೇರೆ ವಿಶ್ವವಿದ್ಯಾಲಯಗಳ ಕ್ರಮವನ್ನು ತಿಳಿದುಬರುವಂತೆ ಮೈಸೂರು ಸರ ಕಾರದವರು ಇವರನ್ನು ಎರಡು ಮೂರು ವರ್ಷಗಳಿಗೆ ಹಿಂದೆ ಇಂಗ್ಲಂಡು, ಅಮೇರಿಕ ಜಪಾನು ಮೊದಲಾದ ದೇಶಗಳಿಗೆ ಕಳುಹಿಸಿದ್ದರು. ಆಗ ಇವರು ಬರೆದ ವರದಿಯು (Report) ಬಹು ಸ್ವಾರಸ್ಯವಾಗಿದೆ. ಆದರ ಸಾರಾಂಶವನ್ನು ಮುಂದೆ ಒಂದು ಸಂಚಿಕೆಯಲ್ಲಿ ಕೊಡಬೇಕೆಂಬು ಉದ್ದೇ ಶವಿರುವುದು. ಶ್ರೀ ರೆಡ್ಡಿಯವರು ಕಳೆದ ತಿಂಗಳ ಕಾಂಗ್ರೆಸಿನಲ್ಲಿ ನಡೆದ ಸಿತೀಟು ಸಭೆಗಾಗಿ ಬಂದಿ ದ್ದಾಗ ಮುಖ್ಯವಾದ ಕೆಲವೆಲವು ವಿಷಯಗಳನ್ನು ಕುರಿತು ಕೊಟ್ಟು ಎರಡು ಮೂರು ಉಪನ್ಯಾಸ ಗಳನ್ನು ಸಂಗ್ರಹವಾಗಿ ಕೊಡಬೇಕೆಂದಿರುವೆವು.

(Progress of Literature, Science and Art.)
ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

ಇತ್ತಲಾಗಿನ ವರೆಗೂ ಏಕಾಭಿಪ್ರಾಯವು ಅಸಾಧ್ಯವೆಂದು ತಿಳಿಯಲಾಗಿದ್ದ ಮತ ವಿಷಯದಲ್ಲಿ ಕೂಡ ಸಂಸ್ಕೃತಿಯು ಎಂಥ ವಿಚಾರಕ್ರಾಂತಿಯನ್ನುಂಟು ಮಾಡಿತ್ತಿದೆ ಎಂಬುದನ್ನು ಈ ಕೆಳಗಣ ಉದಾಹರಣದಿಂದ ತಿಳಿಯಬಹುದಾಗಿದೆ ಅಮೇರಿಕದ ಕ್ರೈಸ್ತ ದೇವಾಲಯಗಳ ಮಹಾ ಸಭೆಯೊಂದರಲ್ಲಿ ರೆವರೆಂಡ್ ಡಬ್ಲ್ಯು ವೆಂಟ್ (Rev W Wendt) ಎಂಬವರು ಪೌರಾತ್ಯ ವ ತಗಳನ್ನು ಕುರಿತು ಮಾತನಾಡುತ್ತ ಇಂತೆಂದರು 'ಕ್ರೈಸ್ತ ಧರ್ಮೀಯರು ತಮಗೆ ಮಾತ್ರವೇ ದಿವ್ಯವಾದ ಬಾಧ್ಯತೆ (Divine Privilege) ಯಿರುವುದೆಂದೂ ಕ್ರೈಸ್ತನ ಮೂಲಕವೇ ಸ್ವರ್ಗದ್ವಾರವು ಮುಕ್ತವಾಗಿರುವುದೆಂದೂ ತಿಳಿಯುತ್ತಿರುವಷ್ಟು ದಿನವೂ, ಭೂಮಂಡಲದ ವೀಲಣ ವ್ರಾಜೀನವಾದ ಇತರ ಮಹಾ ಧರ್ಮಗಳನ್ನು ಅವರು ತಿರಸ್ಕಾರ ಅಪ್ರೀತಿಗಳೊಡನೆ ಕಾಣುತ್ತಿರುವಷ್ಟು ಕಾಲವೂ, ಜನಾಂಗಗಳೊಳಗೆ ಸೌಹಾರ್ದವೂ ಸ್ಥಿರವಾದ ಸಮಾ ಧಾನವೂ ನೆಲಸಿರಲಾರದು ಜಪಾನ, ಚೀನ ಅಥವಾ ಇಂಡಿಯದ ಧರ್ಮಾನುಷ್ಠಾನ ಗಳನ್ನು ನಿಂದಿಸುವ ಕ್ರೈಸ್ತೋಪದೇಶಕರು ತನ್ಮೂಲವಾಗಿ ಆ ಪ್ರದೇಶದ ಸಿದ್ಧ ರಾದ ಜನರುಗಳಿಗೆ ಮರ್ಮಾಂತಿಕವಾದ ವೇದನೆಯನ್ನುಂಟು ಮಾಡಿ, ಜನಾಂಗಗಳೊಳಗೆ ಪರಸ್ಪರ ವೈಮನಸ್ಯವೂ ಕಲಹಗಳೂ ಉಂಟಾಗಲು ಕಾರಣರಾಗುತ್ತಾರೆ ಅನೇಕಾವೃತ್ತಿ ಇಂಥ ವಿಷಯರಿಗೆಳನ್ನು ಆಯಾ ರಾಷ್ಟ್ರಗಳ ದೊರೆತನದವರು ತಮ್ಮ ಪ್ರತಿಷ್ಠೆಯನ್ನೂ ಆಡಳಿತವನ್ನೂ ಪರದೇಶಗಳಲ್ಲಿ ಒಲಪಡಿಸುವುದಕ್ಕಾಗಿ ಉಪಯೋಗಿಸಿಕೊಳ್ಳುವರು. ಆಗ ವಿಷಯರಿಗಳೇ ಯುದ್ಧಕ್ಕೂ ಹಿಂಸೆಗೂ ಮೂಲಕಾರಣರಾಗಿ ಪರಿಣಮಿಸುವರು. ಇದರ ದೆಸೆಯಿಂದಲೇ 'ಮೊದಲು ವಿಷಯರಿ, ಹಿಂದಿನಿಂದ ವರ್ತಕ, ಅದಕ್ಕೆ ಹಿಂದೆ ಯುದ್ಧನಾವೆ ಎಂಬ ತೀಕ್ಷ್ಣವಾಕ್ಯ ಪ್ರಾಜ್ಞಜನರ ಬಾಯಲ್ಲಿ ಕೇಳಿಸುತ್ತಿದೆ. ಇಂಥ ವಿಷಯರಿಗಳು ತಮ್ಮ ತಮ್ಮ ಸ್ವದೇಶಕ್ಕೆ ಒಂದು ತನ್ನನ್ನು ಕೆಲಸದ ಮೇಲಿಟ್ಟುಕೊಂಡುದರ ಸಫಲತೆ ಯನ್ನು ತೋರುವುದಕ್ಕಾಗಿ, ಪರದೇಶಗಳಲ್ಲಿಯ ಕ್ರೈಸ್ತೇತರರ ನೈತಿಕ ಮತ್ತು ಆತ್ಮಿಕ ದುರವಸ್ಥೆಯನ್ನು ಕುರಿತು ಬಹು ಹೀನವಾಗಿ ಬಣ್ಣಿಸುವರು ಇದರಿಂದ ಪೌರಾತ್ಯ ಜನಪದಗಳ ವಿಷಯದಲ್ಲಿ ಇತರರಿಗೆ ದುರಭಿಪ್ರಾಯವನ್ನು ಹುಟ್ಟಿಸಿದಂತೆಯೂ, ದ್ರುತ ಗತಿಯಿಂದ ವರ್ಧಿಸುತ್ತಿರುವ ಪೌರಾತ್ಯರ ರಾಷ್ಟ್ರೀಯ ಜಾಗೃತಿಗೆ ಮತ್ತು ಪೌರಾ ಚಾರ ವಿಷಯಕವಾದ ಗೌರವಕ್ಕೆ ಅಪಮಾನವನ್ನು ಮಾಡಿದಂತೆಯೂ, ಆಗುವುದು. ಅತವಿವ ಇಂಥ ಮಿಷನರಿಗಳು ಜಗತ್ತಿನಲ್ಲಿ ಸಮಾಧಾನವನ್ನು ಕೆಚ್ಚಿಸುವುದಕ್ಕೆ ಬದಲಾಗಿ ಕುಂದಿಸುವುದಕ್ಕೆ ಪ್ರಬಲಕಾರಣವಾಗುವರು ಪರಸ್ಪರರ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಒಬ್ಬರೊಬ್ಬರಿಗೆ ಗೌರವಿದ್ದರೇನೆ ವಿನಾ ಕ್ರೈಸ್ತ ಮತ್ತು ಕ್ರೈಸ್ತೇತರ ಜನಾಂಗಗಳೊಳಗೆ ಸಮಾಧಾನವು ನೆಲಸಿರುವುದು ಸಾಧ್ಯವಲ್ಲ"

* *

ಪಪ್ಪಾಯಿ ಗಿಡವನ್ನು ನೋಡಿ ತಿಳಿಯದವರು ಪ್ರಾಯಶಃ ನಮ್ಮ ದೇಶದಲ್ಲಿ ಒಬ್ಬರೂ ಇರಲಾರರು. ತಥಾಪಿ ಅದು ೧೬ನೆಯ ಶತಮಾನದಲ್ಲಿ ಅಮೇರಿಕದ ಉಷ್ಣ ವಲಯದಿಂದ ಮೊದಲು ಸಿಂಹಳ ದ್ವೀಪಕ್ಕೂ ಅಲ್ಲಿಂದ ಭಾರತವರ್ಷಕ್ಕೂ ಬಂದಿತೆಂದು ತಿಳಿಯಬರುತ್ತಿದೆ. ನಮ್ಮಲ್ಲಿ ಅದನ್ನು ವಿಶೇಷವಾಗಿ ಪಪ್ಪಾಯದ ಕಾಯಾಗಿ ಉಪ ಯೋಗಿಸುವರು. ಆದರೆ ಸಿಂಹಳ ದ್ವೀಪದಲ್ಲಿ ಅದರಿಂದಲೂ ವಪ್ಪೈನ್ (Papain) ಎಂಬ ಔಷಧವಸ್ತುವನ್ನು ಕೂಡ ತೆಗೆಯುತ್ತಿರುವರು. ಒಂದು ಎಲುಬಿನ ತುಂಡಿನಿಂದಾ ಗಲೀ ಪ್ಲೇನಾಕತ್ತಿಯಿಂದಾಗಲೀ ಮರದ ಮೇಲಿರುವ ಹಸಿಕಾಯಿಗೆ ಸಣ್ಣ ಸಣ್ಣ ಗಾಯ ಗಳನ್ನು ಮಾಡಲಾಗಿ ಒಡನೆಯೆ ಒಂದು ವಿಧವಾದ ಹಾಲು ಹೊರಡುವುದು. ಆ

ಹಾಲನ್ನು ಪಿಂಗಾಣಿಯ ಪಾತ್ರೆಗಳಲ್ಲಿ ಸಂಗ್ರಹಿಸಿಟ್ಟಲ್ಲಿ ಅದು ಕಾನಾಗಿಯೆ ಗಟ್ಟಿಯಾಗಿ ಒಂದು ಫಿಂಟಾದ ಮುದ್ದೆಯಾಗುವುದು. ಕೂಡಲೇ ಅದನ್ನು ಬಿಸಿಲಲ್ಲಿ ಕಾಯಿಸಿದ ಪಕ್ಷದಲ್ಲಿ ಅದು ಸ್ವಲ್ಪವೂ ಕೆಡದೆ ನಿರ್ಗಂಧವಾಗಿರುವುದು. ಕೆಡುವ ಸಂಭವವನ್ನು ಪೂರ್ತಿಯಾಗಿ ತಪ್ಪಿಸುವುದಕ್ಕೆ ಹಾಲಲ್ಲಿ ಒಂದಿನ್ನು ಫಾರ್ಮೆಲಿನ್ (Formalin) ಬೆರಸುವರು. ಹೀಗೆ ಪ್ರತಿ ಎರಡು ಮೂರು ದಿನಕ್ಕೊಮ್ಮೆ ಕಾಯಿಗಳಿಂದ ಹಾಲು ಸಂಗ್ರಹಿಸಲು ಒರುತ್ತದೆ. ಬೆನ್ನಾಗಿ ಒಣಗಿದ ಬಳಿಕ ಈ ಹಾಲನ್ನು ಬರನಿಗಳಲಿ ತುಂಬಿಸಿ ಪರದೇಶಗಳಿಗೆ ಕಳುಹಿಸುವರು. ಒಂದು ಸೆಲ ಗಾಯಹಾಕಿದ ಸಾಧಾರಣ ಗಾತ್ರದ ಹನ್ನೆರಡು ಕಾಯಿಗಳಿಂದ ಅರ್ಧ ಅಡಿ ಗಾತ್ರದ ಹಾಲಿನ ಗಟ್ಟಿ ದೊರೆಯುತ್ತದೆಂದು ಕಂಡು ಹಿಡಿಯಲಾಗಿದೆ ಪ್ರಾತಃಕಾಲದಲ್ಲಿಯೆ ಕಾಲು ಹೆಚ್ಚಾಗಿ ಹೊರಡುವುದರಿಂದ ಆಗಲೇ ಸಂಗ್ರಹಿಸಿಕೊಳ್ಳುವುದು ಅನುಕೂಲ ಪೆಪ್ಸೈನ್ ಎಂಬೀ ವಸ್ತುವನ್ನು ಅನೇಕರಿಕ ವೈದ್ಯರು ಅಗ್ನಿವರ್ಧಕ (Digestive) ವೆಂದು ವಿಶೇಷವಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ.

* *

ತಿರುವಾಂಕೋಡು ಸಂಸ್ಥಾನದ ಮಾವೆಲಿಕ್ಕರೆ ತಾಲೂಕು ಪೂರ್ವಕಾಲದಲ್ಲಿ ಬೌದ್ಧಧರ್ಮದ ಒಂದು ಮುಖ್ಯಸ್ಥಾನವಾಗಿದ್ದಿತೆಂದು ತೋರುವುದು. ಅಲ್ಲಿಗೆ ಸಮೀಪದಲ್ಲಿ ಪಿಲ್ಲಿಕಲ್ಲೆಂಬ ಗ್ರಾಮದಲ್ಲಿ ಪದ್ಮಾಸನ ಹಾಕಿ ಕುಳಿತ ಬುದ್ಧದೇವನ ಶಿಲಾಪ್ರತಿಮೆಯೊಂದು ಕಂಡು ಹಿಡಿಯಲಾಗಿದೆ ಅಲ್ಲಿಯ ಜನರು ಆ ಪ್ರತಿಮೆಯನ್ನು ಪುತ್ತರಚ್ಚನ್ (ಬುದ್ಧ ತಂದೆ) ಎಂದು ಕರೆಯುವುದಲ್ಲದೆ ಅದಕ್ಕೆ ಕಾಣಿಕೆಯನ್ನು ಹೊರುವರಂತೆ. ಅದರ ಒಳಿಯಲ್ಲಿ ಒಂದು ತೋಪು ಅದರಲ್ಲಿ ಒಂದು ಕಾಳಿಕಾಲಯವೂ ಇದೆ. ಸ್ವಲ್ಪಕಾಲಕ್ಕೆ ಹಿಂದೆ ಸಂಸ್ಥಾನದ ಶಾಸನ ಇಲಾಖೆಯ ಅಧ್ಯಕ್ಷರು ಮಾವೆಲಿಕ್ಕರೆಯ ಅಂಚೆಯ ಕಛೇರಿಯ ಒಳಿ ಅದೇ ವಿಧವಾಗಿ ಒಂದು ಪ್ರತಿಮೆಯನ್ನು ಕಂಡುಕೊಂಡಿದ್ದರು.

ಪತ್ರವ್ಯವಹಾರ.

ಗೋರಕ್ಷಣಾ ಸಭೆಯ ಕಾರ್ಯಕ್ರಮ ಸೂಚನೆ.

ಪ್ರಿಯ ಭ್ರಾತೃಗಳಿ

ಪೂರ್ವ ಸೂಚಿಕೆಯ ಪತ್ರಕ್ಕೆ ಉತ್ತರವನ್ನು ಕಳಿಸಿದ ಪ್ರೋತ್ಸಾಹಿಸಿದುದರಿಂದ ಇಂದಿನ ಲೇಖನವನ್ನು ಮುಂದುವರಿಸುವುದರಲ್ಲಿ ಉತ್ಸಾಹ ಹುಟ್ಟಾಗುತ್ತಿದೆ ಆಗಲಿ! ಕೇವಲ ಪ್ರಯೋಜನಕರವೂ, ಪವಿತ್ರಕರವೂ, ಪುಣ್ಯಪ್ರದವೂ ಆದ ಗೋರಕ್ಷಣೆಯಲ್ಲಿ ನಿರಂತರ ಉಪಯುಕ್ತವಾಗುವ ಈ ಪತ್ರವ್ಯವಹಾರ ದೇಶಾಭಿಮಾನಿಗಳೆಲ್ಲರೂ ಸಾವಧಾನದಿಂದ ಪರಾಲೋಚಿಸುವರೆಂಬ ನಂಬಿಕೆಯಲ್ಲಿ ಸಂದೇಹವಿಲ್ಲ.

ವೈಕ್ತಿಕ ಬದಿಕಾಸ್ಪದತೆಗೆ ಸದ್ಯವಾಗಿ ಕಾರಿಯಲ್ಲಿಯೂ, ಮಾಸ್ಪಷ್ಟತೆಗೆ ಮೂಲಸ್ಥಾನವಾದ ಉಡಿಯಲ್ಲಿಯೂ ತಮಗಿರುವ ಸಮಸ್ತ ಸ್ವಾತಂತ್ರ್ಯವನ್ನು, ಇಂತಹ ಸತ್ಕಾರ್ಯವು ಆಚಂದ್ರಾರ್ಕವಾಗಿ ನಡೆಯಲಂಬ ಅತ್ಯಂತೋಪದಿಂದ, ಮ. ರಾ. ರಾ ರಾಮಚಂದ್ರಯ್ಯನವರು ಧಾರಾದತ್ತವಾಗಿ ದರ್ಮಸಾಪನೆ ಮಾಡಿರುವಂತೆ ತೋರಿ ಬರುತ್ತೆ ಅಸ್ತಿಯ ವಿಸ್ತಾರ ಉತ್ಪತ್ತಿ ಮೊದಲಾದ ಯಥಾಸ್ಥಿತಿಯನ್ನು ನಾನು ಅರಿತವನಲ್ಲ ಆದರೂ ಸುಮಾರು ನಾಲ್ಕಾರು ಕೋಟಿಯ ಧಾನ್ಯೋತ್ಪತ್ತಿಯೂ ಸರಕಾರದ ಹಣಕ್ಕೆ ಸಾಕಾಗುವಷ್ಟು ದನಸಂತತಿಯೂ ದಾರಾಳವಾಗಿ ದೊರೆಯಬಹುದೆಂದೂ, ಸಾಗುವಳಿ ಭೂಮಿ ಸಕಾರಿಯಾಗಿ ಕಾಡುಗಳೆ ಹುಲ್ಲು ಸೀರುಗಳಂದೆ ನಿಬಿಡವಾಗಿರಬಹುದೆಂದೂ, ಸಾಮಾನ್ಯವಾಗಿ ಬೋಧೆಯಾಗುತ್ತಿದೆ. ಆದುದರಿಂದ ಈ ಸ್ಥಿರ ಸೊತ್ತಿನ ವಾರ್ಷಿಕೋತ್ಪತ್ತಿಯೇ ಇಂತಹ ಸತ್ಕಾರ್ಯಕ್ಕೆ ಸಾಧನೆಗೆ ಮೊತ್ತಮೊದಲು ಉಪಯುಕ್ತವಾದ ಮೂಲಧನವೆಂದು ಭಾವಿಸಬೇಕು. ದನಗಾರಿಕಾರಿಗಳು ಕರ್ತವ್ಯ ಕಾರ್ಯಭಾಗವನ್ನು ದಕ್ಷತೆಯಿಂದ ನಡೆಸುವುದಾದರೆ, ಆಯಾಯ ನದ್ದೆ ಹೊಲಗಳ ಸ್ಥಿತಿಗತಿಗಳ ಮೇಲೂ, ಸೊತ್ತುಮಂತ್ರಿನ ಪದ್ಧತಿಯ ಮೇಲೂ ಈಗಿರುವ ಗೇಣಿಯನ್ನು ಉಪಾಯಾಂತರದಿಂದ ಇನ್ನಷ್ಟು ವರಿಸಿ, ಜನಕ್ಕೊಪ್ಪುವ ನೆಲ್ಲುಗೇಣಿಯ ಮೇಲೆ ದನ ಕೊಡುವ ಹುಲ್ಲುಗೇಣಿಯನ್ನೂ ಹೊರಿಸಿ, ಒಕ್ಕಲು ದನಿಗಳ ವಿವಾದವನ್ನು ಒಮ್ಮೆ ವಿವೇಕದಿಂದ ನಿವಾರಿಸಿ, ಈಗಿರುವ ಉತ್ಪತ್ತಿಯನ್ನು ಇಮ್ಮಡಿಗೊಳಿಸಬಹುದು. ಗೋರಕ್ಷಣೆಯ ಧರ್ಮಕಾರ್ಯಕ್ಕೋಸ್ಕರ ವಿಹಿತವಾಗಿ ವರಿಸಿದ ಗೇಣಿಯನ್ನು ವರ್ಷಂಪ್ರತಿ ಕೊಡಲು ಒಕ್ಕಲುಗಳೆಲ್ಲರೂ ಒಪ್ಪಿಕೊಳ್ಳಬಹುದಲ್ಲದೆ ವಿನಾಕಾರಣವಾದ ಉಪದ್ರವನ್ನೆಂದಿಗೂ ಕೊಡಲಾರರು. ಇಂತಹ ಪ್ರವರ್ತನದಿಂದ ಸ್ಥಿರಸೊತ್ತಿನ ಉತ್ಪತ್ತಿಯಾದ ಮೂಲಧನವನ್ನು ಎತ್ತಿಕೊಳ್ಳುತ್ತ ಸಸೂತ್ರಗೊಳಿಸಬಹುದಾಗುವುದು.

ಆ ಮೇಲೆ ಮಂಗಳೂರಿನಲ್ಲಿ ಮುಖ್ಯ ಸಭೆಯನ್ನು, ಉಡುಪಿಯಲ್ಲಿ ಉಪ ಸಭೆಯನ್ನೂ ಸ್ಥಾಪಿಸಿ ಹುಲ್ಲು ನೀರಿಗೆ ಅನುಕೂಲವಾಗಿಯೂ, ಸಾಧ್ಯವಾದಷ್ಟು ವಿಸ್ತಾರವಾಗಿಯೂ, ಇರುವ ಸುಸ್ಥಳಗಳನ್ನು ಸಮಾಲೋಚಿಸಿ, ಈ ಎರಡು ಸ್ಥಾನಿಕ್ಯಗಳಲ್ಲಿಯೂ ಸಮುಚಿತವಾದ ಮಂದಿರಗಳನ್ನು ಶಮಿಷಷ್ಠವಾದ ಗೋಶಾಲೆಗಳನ್ನು ನಿರ್ವಹಿಸಬೇಕು ಉದ್ದವಾಗಿಯೂ, ಎತ್ತರವಾಗಿಯೂ ಇರುವ ಗೋಶಾಲೆಯಿಂದ ಇಮ್ಮಡಿಯಾದ ಪ್ರಯೋಜನವಿದೆ. ಉದ್ದವಾಗಿರುವದರಿಂದ ಬೀಜದ ಹೋರಿ, ಕೋಣ ಮುಂತಾದ ಸಂತಾನ ಗೋವಾಲರನ್ನು ಬೇರೆ ಇರಿಸುವುದಕ್ಕೂ, ಕರುಮರಿಗಳನ್ನು ಪ್ರತ್ಯೇಕಿಸಿಡುವುದಕ್ಕೂ, ಸಾಮಾನ್ಯ ಮಂದೆಯನ್ನು ಒಂದೆಡೆಯಲ್ಲಿ ಬಂಧಿಸಲಿಕ್ಕೂ, ಮಿಶ್ರಿಸುವುದಕ್ಕೂ, ಉಪಯುಕ್ತವಾಗುವಂತೆ ಯಥೇಷ್ಟವಾದ ವಿಸ್ತಾರಗಳನ್ನು ಮಾಡಿಕೊಳ್ಳಬಹುದು. ಎತ್ತರವಾಗಿರುವುದರಿಂದ ಪೂರಾ ಕೊಟ್ಟಿಗೆಗೂ ಉಪ್ಪರಿಗೆಯಂತೆ ಅಟ್ಟವನ್ನು ಹಾಕಿ ಮಳೆಗಾಲದಲ್ಲಿ ಬೇಕಾಗುವ ಹುಲ್ಲುಸೊಪ್ಪನ್ನು ಸೇಖರಿಸಿಕೊಳ್ಳಬಹುದು. ಇದಲ್ಲದೆ ಉದ್ದವೂ, ಉನ್ನತವೂ ಆದ ಗೋಶಾಲೆಯ ಹಿಂಬಾಗದಲ್ಲಿ ಎರಡುಮೂರು ಗಜ ಅಗಲವಾದ ಅಂತರ ಮಾಡಿನ ಇಳಿಸುವುದರಿಂದ ಬಿಸಿಲು ಮಳೆ ತಾಗದಂತೆ ಇದರಲ್ಲಿ ನಾನಾ ವಿಧವಾದ ಗೊಬ್ಬರ, ಬೂದಿ, ಮಳಲು ಮುಂತಾದುದನ್ನು ಸಾರವತ್ತಾಗಿ ಸಂಗ್ರಹಿಸಿಟ್ಟುಕೊಳ್ಳಬಹುದು. ಇನ್ನೂ ಜಾಗವಿದ್ದರೆ ಮನೆ ಬೇಸಾಯಕ್ಕೆ ಬೇಕಾಗುವ ಗಡುಮರಗಳ ನಸಿ ಸಾಕೆ ಮಾಡಲಿಕ್ಕೂ ಗುದ್ದಲಿ ಪಿಕ್ಕಾಸಿ ಮುಂತಾದ ಕೃಷ್ಯುಪಕರಣಗಳನ್ನಿಡಲಿಕ್ಕೂ ಈ ಸ್ಥಳವು ಉಪಯುಕ್ತವಾಗುವುದು

ಮನೆ ಬೇಸಾಯ ಗೋ ಸಂರಕ್ಷಣೆ ಎಂಬೀ ಎರಡು ಕೆಲಸಕ್ಕೂ ಏಕಕಾಲದಲ್ಲಿ ಉಪಯೋಗವಾಗುವಂತೆ ಸುಲಭವಾಗಿಯೂ ಸುಂದರವಾಗಿಯೂ ಇರುವ ರೀತಿಯಲ್ಲಿ ಗೋಶಾಲಾ ಸವಿಾಪದ ಮಂದಿರವು ವಿರಚಿತವಾಗಬೇಕು ಈ ಕಾರ್ಯಾರ್ಥದಲ್ಲಿ ಧಾರಾಳವಾಗಿ ನೀರುದೊರೆಯುವ ಕೆರೆ ಬಾವಿಗಳನ್ನೇರ್ಪಡಿಸುವುದು ಅತ್ಯವಶ್ಯಕವು. ಸಮೀಪವಾಗಿಯೂ ಒಮ್ಮುಖವಾಗಿಯೂ ಇರುವ ವಿಸ್ತಾರ ಪ್ರದೇಶವನ್ನು ಮನೆ ಬೇಸಾಯಕ್ಕಾಗಿ ಇಟ್ಟುಕೊಂಡು, ನೈಲ ವಿದ್ಯಮಾನಕ್ಕನುಸಾರವಾಗಿ ಇದರಲ್ಲಿಯೇ ಹಾಡಿ ಪಕ್ಕಲು ಹೊಲಗದ್ದೆ ಗೋವಾಳ ಹುಲ್ಲುಗಾವಲು ಮುಂತಾದುವನ್ನು ಕ್ರಮವಾಗಿ ವಿಂಗಡಿಸಿ ಸುರಕ್ಷಿತಗೊಳಿಸಬೇಕು ಗೋ ರಕ್ಷಣೆಯೇ ಮುಖ್ಯೋದ್ದೇಶವಾಗಿರುವುದರಿಂದ ಹೆಚ್ಚಿನ ಭಾಗವನ್ನು ಹುಲ್ಲುಗಾವಲಿಗಾಗಿ ಇಟ್ಟುಕೊಳ್ಳಬಹುದು. ವಿಸ್ತಾರವಾದ ಒಂದು ಪ್ರದೇಶವನ್ನು ಸುರಕ್ಷಿತಗೊಳಿಸಿ ಹುಲ್ಲಿನ ಬೀಜವನ್ನು ಮುಂಗಾರುಮಳೆ ಸಮಯದಲ್ಲಿ ಚಲ್ಲಿ ಒಂದೆರಡು ವರ್ಷ ವರ್ಷಂತರ ಜನಜಾನುವಾರು ಪ್ರವೇಶಿಸದಂತೆ ವಿಂಗಲಿಟ್ಟರೆ ಆ ಸ್ಥಾನಿಕ್ಯದಲ್ಲಿ ಹುಲಸಾದ ಪಸಿಯಹುಲ್ಲಿನ ಬೆಳಸಾಗುವುದು. ಇಂತಹ ಹುಲ್ಲು ಹೂತು ಒಣಿತು ನಿಸ್ಸಾರವಾಗುವುದಕ್ಕಿಂತ ಮುಂಚೆ ಅದನ್ನು ದಿನಂಪ್ರತಿ ಕೊಯ್ದು ದನಕರುಗಳಿಗೆ ಹಾಕಲೂ ಒಕ್ಕುದು ಒಮ್ಮೆಯೇ ಒಟ್ಟನಾಡಿ ಒಣಗಿಸಿ ಇಟ್ಟುಕೊಳ್ಳಲೂ ಬಹುದು. ಹೀಗೆ ಸುಮಾರು ಅರ್ಧ ಎಕರೆಯಲ್ಲಿ ಬೆಳೆದ ಹಸಿಯ ಹುಲ್ಲಿನಿಂದ ಹದಿನೈದು ದನಕರುಗಳನ್ನು ಮೂರು ತಿಂಗಳ ಪರ್ಯಂತರ ಸಾಕಬಹುದೆಂದು ನಾನು ಸ್ವಾನುಭವದಿಂದ ಸಾರುತ್ತೇನೆ.. ಆದರೆ ಇಂತಹ ಹುಲ್ಲುಗಾವಲು ಹೊಲದಲ್ಲಿ ಜಾನುವಾರುಗಳನ್ನೂ ಮಾತ್ರ ಯಾವಾಗಲೂ ಮೇಯಗೊಡಬಾರದು ಪ್ರಯುಕ್ತ ದನಕರುಗಳು ತಿರುಗಾಡಿ ಮೇಯಲಿಕ್ಕೆ ಬೇಕಾಗುವ ಗೋಮಾಳವನ್ನು ಪ್ರತ್ಯೇಕವಾಗಿ ನಿರ್ವಹಿಸಿಕೊಳ್ಳಬೇಕು.

ಮನೆ ಬೇಸಾಯದ ಭೂಮಿಯಲ್ಲಿ ಬಹಳ ಸುಲಭವಾಗಿದ್ದ ಪ್ರದೇಶವನ್ನು ಸಮತಟ್ಟುಮಾಡಿ ಸೊತ್ತಿಲೂ ಅಂಚುಕಟ್ಟು ಬತ್ತದಬೆಳೆಯುವಂತೆ ಬೆಟ್ಟುಗದ್ದೆಗಳನ್ನು ಮಾಡಬಹುದು. ಮಿಕ್ಕಳಿದ ಸಾಧಾರಣ ಸಮತಟ್ಟಿನ ಭಾಗಗಳಲ್ಲಿ ಸಾಮಾನ್ಯವಾಗಿ ಹುರುಳಿ ಉದ್ದು, ಹೆಸರು, ಅವಡೆ, ನೆಲಕಡಲೆ ಮುಂತಾದ ದ್ವಿದಳ ಧಾನ್ಯವನ್ನೂ ಸೊಪ್ಪಿಗೆ ವದಗುವ ತೆನೆ ಜೋಳವನ್ನೂ ಬೆಳೆಯುವುದು ಅತ್ಯಂತ ಪ್ರಯೋಜನಕಾರಿಯು. ಇವುಗಳಿಂದ ಧಾನ್ಯ ಮಾತ್ರ ದೊರೆಯುವುದಲ್ಲದೆ ಇವುಗಳ ಸೊಪ್ಪುಕಡ್ಡಿಗಳನ್ನು ಒಣಗಿಸಿ ಇಟ್ಟುಕೊಂಡರೆ ದನಕರುಗಳಿಗೆ ಬಹು ಸಾರವತ್ತಾದ ಆಹಾರ ಪದಾರ್ಥಗಳಾಗುವುವು. ಕೆಲವು ಪ್ರಾಂತ್ಯವನ್ನು ಜನ್ನಾಗಿ ಹೂಡಿ 'ಗಿನಿಗ್ರಾಸ್' ಎಂಬ ಹುಲ್ಲನ್ನು ಮುಂಗಾರು ಮಳೆಗಾಲದಲ್ಲಿ ಸಾಲುಸಾಲಾಗಿ ನೆಟ್ಟು ಚಿಗುರಿದ ಮೇಲೆ ಒಮ್ಮೆ ಬುಡಕ್ಕೆ ಹಾಕೆ ಕಾಪಾಡಿಕೊಂಡರೆ ಎರಡು ಮೂರು ತಿಂಗಳ ಮೇಲೆ ಆವುಗಳು ಬತ್ತದ ಪೈರಿನಂತೆ ಮೊಳತು ಪ್ರಬಲಿಸಿ ಹಸಿಯ ಹುಲ್ಲಿನಹಾಗೆಯೇ ಉಪಯೋಗಕ್ಕೆ ಬೀಳುವುವು. ಇದನ್ನು ಸಹ ನಿತ್ಯವೂ ಕೊಯ್ದು ಉಪಯೋಗಿಸಲೂ ಬಹುದು. ಒಮ್ಮೆಯೆ ಒಟ್ಟು ಮಾಡಿ ಒಣಗಿಸಿ ಇಟ್ಟುಕೊಳ್ಳಲೂ ಬಹುದು. (ಮುಂದೆ ಸಾಗುವುದು).

ಸೂಕ್ಷ್ಮದರ್ಶಿ ಸುಬ್ಬರಾವ್.

ಯುದ್ಧ ಸಮಾಚಾರ.

ಒಕ್ಟೋಬರ ತಾ. ೨೪-೧೦.

ಬೊಳ್ಶಿಕ್ ಸಮುದ್ರ ಪ್ರಾಂತ್ಯಗಳಲ್ಲಿರುವ ತಟಸ್ಥ ದೇಶಗಳಿಂದ ಜರ್ಮನಿಗೆ ಸರಕು ತುಂಬಿಸಿಕೊಂಡು ಹೋಗುವ ಹಡಗುಗಳ ವಿಷಯ ದರವು ಇಮ್ಮಡಿಯಾಗಿರುವದು. ಬೊಳ್ಶಿಕ್ ಸಮುದ್ರದಲ್ಲಿ ಜಲಂತರ್ಗಾಮಿ ನಾವೆಗಳ ಮತ್ತು ಮರ್ದಿನ ಸುರಂಗಗಳ ಕಾವಲಿಯು ವಿಶೇಷವಾಗಿರುವದರಿಂದ ವಿಮೆ ದರವು ಈ ರೀತಿ ಅಧಿಕವಾಗಲು ಕಾರಣವಾಯಿತೆಂಬ.ದಾಗಿ ತಿಳಿಯುತ್ತೆ.

ತಟಸ್ಥ ದೇಶಗಳ ಬಾವುಟಗಳನ್ನು ಹಡಗುಗಳಲ್ಲಿರಿಸಿ ಜರ್ಮನರ ನಾವೆಗಳು ವ್ಯಾಪಾರವನ್ನು ಅತ್ಯಿತ್ತ ವಯ್ಯದಂತೆ ಬ್ರಿಟಿಷ ಸರಕಾರದವರು ಇತ್ತಲಾಗೆ ಒಂದು ಆಜ್ಞೆಯನ್ನು ಪ್ರಕಟಿಸಿರುವರು ಬಾವುಟಗಳ ಬದಲಾವಣೆಯಿಂದ ಹಡಗುಗಳ ಮಾಲಿಕತನದ ಹಕ್ಕನ್ನು ಬದಲಾಯಿಸುವ ಉಪಾಯದಿಂದ ಶತ್ರುಗಳಿಗೆ ಅಲ್ಲ ಸ್ವಲ್ಪ ವ್ಯತ್ಯಾಸವನ್ನು ನಡಿಸಲು ಆಸ್ಪದವಿತ್ತ. ಈ ಆಜ್ಞೆಯಿಂದ ಸಮುದ್ರ ವ್ಯಾಪಾರಗಳಲ್ಲಿ ಜರ್ಮನರ ಯಾವ ಕುತಂತ್ರವು ನಡೆಯದು. ಇದಕ್ಕೆ ಪ್ರತಿಕಾರವಾಗಿ ಸ್ಕೆಂಡಿನೆವಿಯಾದಿ ದ ವಿತ್ರರ ರಾಷ್ಟ್ರಗಳಿಗೆ ಹೋಸಿಫ ವ್ಯಾಪಾರಕ್ಕೆ ಇದೇ ರೀತಿ ಜರ್ಮನರ ಪಡೆಹಾಕುವರೆಂದು ತಿಳಿದು ಬರತ್ತದೆ.

ಅಮೇರಿಕದವರು ಬ್ರಿಟಿಷರ ವಿರೋಧ ಆಜ್ಞೆಯಿಂದ ತಮ್ಮ ವ್ಯಾಪಾರಕ್ಕೆ ವಿಶೇಷ ಅಡಚಣೆಯುಂಟಾಗುವದೆಂಬದಾಗಿ ವಿರೋಧಿಸಿರುವರಂತೆ.

ಪಶ್ಚಿಮ ರಣರಂಗದ ಬೆಂಪನದಲ್ಲಿ ಫ್ರೆಂಚರು ಬಿಡಿಸಿಕೊಂಡಿದ್ದ ಕಂದಕ ಇತ್ಯಾದಿಗಳ ಮೇಲೆ ಶತ್ರುಗಳು ದಾಳಿ ಇಟ್ಟರು ಈ ಸೇನಾರಂಗದ ನಡುವೆ ಇರುವ ಕೆಲವು ಕಂದಕಗಳು ಶತ್ರುಗಳ ವಶವಾಗಿರುವವೆಲ್ಲದೆ ಇತರ ಎಲ್ಲಾ ನೆಲೆಗಳನ್ನು ಫ್ರೆಂಚರು ಧೀರತನದಿಂದ ಕಾಪಾಡಿಕೊಂಡಿದ್ದಾರೆಂಬದಾಗಿ ತಿಳಿದು ಬರುತ್ತದೆ.

ಸಂಯುಕ್ತ ಸೇನೆಯವರು ಶತ್ರುಗಳ ಮೇಲೆ ಇತ್ತಲಾಗೆ ನಡಿಸಿದ ಕದನಗಳಿಂದ ಜರ್ಮನರ ಸೇನೆಗಳಲ್ಲಿ ಅವ್ಯವಸ್ಥೆ ವ್ಯಾಪ್ತಿಸಿರುವುದೆಂತ ಕೆಲವು ತಂತೀ ವಾರ್ತೆಗಳಲ್ಲಿರುವದು ಜರ್ಮನರ ಸೇನಾಂಗಗಳು ಕಾದಾಡುವ ಎಡೆಗಳಲ್ಲಿ ಅವಗಳು ಸೋತುಹೋಗುವ ಸಂಭವವು ಕಂಡುಬಂದೊಡನೆ ಇಂಥಾ ಸೇನಾಂಗಗಳಿಗೆ ಬೆಂಬಲವನ್ನು ಕ್ರಮವಾಗಿ ಕಳುಹಿಸುವ ಕ್ರಮವು ಜರ್ಮನರ ಸೇನೆಯಲ್ಲಿತ್ತು. ಆದರೆ ಇತ್ತಲಾಗೆ ಹೀಗೆ ಬೆಂಬಲಗಳನ್ನು ಕಳುಹಿಸಿಕೊಡಲು ಸಾಧ್ಯವಾಗದ್ದೆ ಮಿತ್ರರ ಯುದ್ಧತಂತ್ರದಿಂದ ಶತ್ರುಗಳ ಇಮಮಾರು ಒಂದು ಲಕ್ಷಕ್ಕೆ ಮಿಕ್ಕಿದ ಸೇನೆಯು ಕಾದಾಡದೆ ಸುಮ್ಮನಿರಬೇಕಾಯಿತು ಜರ್ಮನಿಗೆ ಇನ್ನು ಳಕ್ಕನೆ ತಮ್ಮ ಸೇನೆಯನ್ನು ಮುಂಚಿನ ಮೈಸ್ಥಿಗೆ ತರಲು ಸಾಧ್ಯವಾಗದೆಂಬದಾಗಿ ಹಲವರು ಅಭಿಪ್ರಾಯ ಪಡುತ್ತಾರೆ

ಜಗತ್ತಿನಲ್ಲಿ ತನ್ನ ಶೋಭೆಗೆ ಪ್ರಖ್ಯಾತಿಪಟ್ಟ ಇಟೆಲಿಯ ವೆನಿಸ್ ಪಟ್ಟಣದ ಮೇಲೆ ಒಸ್ಟ್ರಿಯನರ ಆಕಾಶವಿಮಾನಗಳು ಬಂದು ಕೆಲವು ಸಿಡಿಮದ್ದಿನ ತೋಟಿಗಳನ್ನು ಬಿಸಾಡಿದವು ಇವುಗಳ ಸಿಡಿತದಿಂದ ನಷ್ಟವೇನೂ ಉಂಟಾಗಲಿಲ್ಲವೆಂಬದಾಗಿ ತಿಳಿದು ಬರತ್ತದೆ

ಇತ್ತಲಾಗೆ ಜೋರ್ಜ ಚಕ್ರವರ್ತಿಗಳು ತಮ್ಮ ಪ್ರಜಾ ಜನರಿಗೆ ದಯಪಾಲಿಸಿದ ನಿರೂಪಣೆ ಪ್ರಕಾರ ಪ್ರತಿನಿಧ್ಯದಲ್ಲಿಯೂ ಸೂರಾರು ಮಂದಿ ಜನರು ಬಂದು ಆಂಗ್ಲಾಳದಲ್ಲಿ ಸೇನೆಗೆ ಕೂಡುತ್ತಿದ್ದಾರೆ ಬ್ರಿಟಿಷರು ತಮ್ಮ ಮಿತ್ರರಿಗೆ ಇಂತಿಷ್ಟೇ ದೊಡ್ಡದಾದ ಸೇನೆಯನ್ನು ಸಿದ್ಧಗೊಳಿಸುವೆವೆಂದು ಹೇಳಿರುವದರಿಂದ ಇಂಥಾ ಸೇನೆಯನ್ನು ತಯ್ಯಾರಿಸಲು ಪ್ರತಿವಾರದಲ್ಲಿಯೂ ೪೦,೦೦೦ ಜನರು ಬೇಕಾಗಿರುವರೆಂದು ಕಿಚ್ನೆನರ್ ಪ್ರಭುಗಳ ಅಂದಾಜು ಆಗಿರುವುದೆಂದು ಆಂಗ್ಲಾಳದ ಕೂಲಿಜನಗಳ ಮುಂದಾಳುಗಳೊಬ್ಬರು ಹೇಳಿರುವರು

ಬ್ರಿಟಿಷರ ಸೇನೆ, ಕಾರ್ಖಾನೆಗಳು ಮತ್ತು ಯುದ್ಧಸಂಗ್ರಹಗಳ ವಿಷಯ ಶತ್ರುಗಳಿಗೆ ಬ್ರಿಟಿಷರ ಸಾಧನೋತ್ಸಾಯಗಳನ್ನು ತಿಳಿಯಹೇಳಲು ಪ್ರಯತ್ನಿಸಿದ ಬ್ರಿಟಿಷ ಪ್ರಜೆಗಳಲ್ಲೊಬ್ಬನಿಗೆ ಜೀವಾಂತ ಕಾವು ಶಿಕ್ಷೆಯು ಆಂಗ್ಲಾಳದಲ್ಲಿ ವಿಧಿಸೋಹಾಗಿರುವದು

ಮೂನೆ ಸಮುದ್ರ ಪ್ರಾಂತ್ಯಗಳಲ್ಲಿ ಜರ್ಮನರ ಮತ್ತು ಫ್ರೆಂಚರ ಸಂಕಾಪಾವಣೆಗೆ ಸಂಗ್ರಾಮ ನಡದು ಜರ್ಮನ್ನರ ಳಕ್ಷಾಶನಾವೆಗ ಕ್ಕೆ ಫ್ರೆಂಚರು ಬಿರಿದಿರುತ್ತಾರೆ.

ಬೆಲ್ಜಿಯಮಿನಲ್ಲಿ ೩೪ ಜನ ಬೆಲ್ಜಿಯನರ ಮೇಲೆ ಒಳಸಂಚು ರಾಜದ್ರೋಹ ಮೊದಲಾದ ತಪ್ಪುಗಳನ್ನು ಹೊರಿಸಿ ಜರ್ಮನರು ಇವರನ್ನು ಪ್ರಾಣದಂಡನೆಯ ಶಿಕ್ಷೆಗೆ ಗುರಿಪಡಿಸಿರುವರು. ಈ ಬಡ ಜನರು ಅಮೇರಿಕದ ಪ್ರೆಸಿಡೆಂಟ ವಿಲ್ಸನ್, ಪೋಪಜಗದ್ಗುರುಗಳು ಮೊದಲಾದವರಿಗೆ ಮೊರೆಯಿಟ್ಟಿರುವರು.

ಇತ್ತಲಾಗೆ ಜರ್ಮನರು ಕೊಲೆಮಾಡಹಾಕಿದ ಬ್ರಿಟಿಷ ಜನಾಂಗದ ಮಿಸ್ ಕೆವೆಲ್ಲರವರ ಸ್ಮರಣೆಯು ಸದಾ ಉಳಿಯುವಂತೆ ಥ್ರಾನ್ಸಿನಲ್ಲಿ ಒಂದು ರಸ್ತೆಗೆ ಇವರ ಹೆಸರನ್ನು ಕೊಟ್ಟಿರುವರು. ಅಂಗ್ಲಾಳದಲ್ಲಿ ಚಕ್ರವರ್ತಿನಿಯವರ ಹೆಸರಲ್ಲಿ ಸ್ಥಾಪಿತವಾಗುವ ಕೆಲವು ಚಿಕಿತ್ಸಾಗೃಹಗಳಿಗೆ ತನ್ನ ಹೆಸರಿನ ಬದಲಿಗೆ ಮಿಸ್ ಕೆವೆಲ್ಲರ ಹೆಸರನ್ನು ಕೊಡಬೇಕೆಂತ ಆಜ್ಞಾಪಿಸಿರುತ್ತಾರೆ

ಅಮೇರಿಕದಲ್ಲಿ ಮಿತ್ರರ ಸೇನೆಗಳಿಗೆ ಬೇಕಾದ ಯುದ್ಧ ಸಾಮಾಗ್ರಿಗಳನ್ನು ಒದಗಿಸಿಕೊಡುವ ಕಾರ್ಖಾನೆಗಳನ್ನೂ ಈ ಸಾಮಾಗ್ರಿಗಳನ್ನು ತುಂಬಿ ಹೊರಟಿರುವ ಹಡಗುಗಳನ್ನೂ ನಾಶಪಡಿಸಲು ಒಳಸಂಚು ನಡಿಸುತ್ತಿರುವ ಜರ್ಮನರನ್ನು ಪ್ರತಿನಿಧ್ಯದಲ್ಲಿ ಎಂಬಂತೆ ಹಿಡಿದ ಕೈದು ಮಾಡುತ್ತಿರುವರು

ಅಮೇರಿಕದವನೆಂತ ನಟಿಸುತ್ತಿದ್ದ ಒಬ್ಬ ಜರ್ಮನನನ್ನೂ ಜರ್ಮನರ ಹೆಸರನ್ನು ಹಾಕಿಕೊಂಡಿದ್ದ ಒಬ್ಬ ತುರ್ಕಿ ಜನಾಂಗದವನನ್ನೂ ಹಿಡಿದು ಪರೀಕ್ಷಿಸಿ ನೋಡಿದ್ದಲ್ಲಿ ಇವರಿಬ್ಬರೂ ಜರ್ಮನ ಕಡೆಯ ಗೂಢಾಚಾರರಾಗಿ ಬ್ರಿಟಿಷರ ಒಳಹನ್ನ ಶತ್ರುಗಳಿಗೆ ಹೇಳಲು ಬಂದವರೆಂದು ರುಜುವಾದದ್ದರಿಂದ ಇವರಿಬ್ಬರೂ ಮರಣದಂಡನೆಯ ಶಿಕ್ಷೆಗೆ ಗುರಿಮಾಡಲ್ಪಟ್ಟಿರುವರು

ಪಶ್ಚಿಮರಣರಂಗಕ್ಕೆ ಹೊಂದಿ ಜೋರ್ಜ್‌ಚಕ್ರವರ್ತಿಗಳಲ್ಲೂ ಫ್ರೆಂಚರ ಪ್ರೆಸಿಡೆಂಟಾದ ಪೊಯಿಂಕರೆಯವರಿಗೂ ಪರಸ್ಪರ ಸಂದರ್ಶನೆಯಾಯಿತ ಜನರಲ್ ಜೋಫ್ರೆಯವರಿಗೆ ಭೇಟಿಕೊಟ್ಟ ನಂತರ ಚಕ್ರವರ್ತಿಗಳು ಯುವರಾಜರ ಸಹಿತ ಫ್ರೆಂಚರ ಸೇನೆಯನ್ನು ಸಂದರ್ಶಿಸಿದರು.

ಪೂರ್ವರಣರಂಗದಲ್ಲಿ ಡ್ವಿನಾ ನದಿಯ ಬಳಿ ಯುದ್ಧವು ನಡಿಯುತ್ತಿರುವದ ದಕ್ಷಿಣದಲ್ಲಿ ಹತ್ತು ಮೈಲುಗಳ ದೂರದಿಂದ ರೀಗಾದ ಮೇಲೆ ದಾಳಿ ಇದಲು ಪ್ರಯತ್ನಿಸುತ್ತಿರುವರು

ಪೊಲೆಂಡದಲ್ಲಿ ಜನರು ಅನುಭವಿಸುತ್ತಿರುವ ಕಷ್ಟಗಳನ್ನು ಕೇಳಿ ಪೋಪ ಜಗದ್ಗುರಗಳ ಕನಿಕರಪಟ್ಟು ಕ್ರೈಸ್ತಾದಲ್ಲಿಯ ವಿಶೇಷ ರವರಿಗೆ ೩೫,೦೦೦ ಕ್ರೌನ್ ಎಂಬ ನಾಣ್ಯಗಳನ್ನು ಜನರ ಉಪಶಮನದ ಬಗ್ಗೆ ಕಳುಹಿಸಿಕೊಟ್ಟಿರುತ್ತಾರೆ ಅಕ್ಟೋಬರ ತಾ. ೩೧ ರಲ್ಲಿ ಭೂಲೋಕದ ಎಲ್ಲಾ ಕೆಥೋಲಿಕ ದೇವಾಲಯಗಳಲ್ಲಿ ಮೂಲಿಕ ಈ ಬಗ್ಗೆ ಚಂದಾದ್ರವ್ಯವನ್ನ ಕೂಡಿಸಬೇಕೆಂದು ಪೋಪ ಜಗದ್ಗುರುಗಳು ಸೂಚಿಸಿರುವರು

ಸರ್ವಿಯನರು ಥೆನಹ ಟ್ರೈಲು ಪಟ್ಟಣವನ್ನು ಶತ್ರುಗಳಿಂದ ಪಡೆದಿರುವರೆಂತ ತಿಳಿದುಬರುತ್ತದೆ

ಲೀಂಡ್ಸ್‌ಡೌನ್ ಪ್ರಭಗಳ ಬ್ರಿಟಿಷ ಪಾರ್ಲಿಮೆಂಟಿನ ಪ್ರಭುಸದನದಲ್ಲಿ ಯೆದ್ಧಸ್ಥಿತಿಯ ವಿಷಯ ಹೇಳಿದ ಮಾತುಗಳಿಂದ ಬಲ್ಕಾನ್ ಸಂಸ್ಥಾನಗಳಲ್ಲಿ ತಲೆದೋರಿರುವ ಸಂಗ್ರಾಮದ ವಿಶೇಷ ಕ್ಷತಿ ಮೈತ್ರವಾಗುವದು ಪಶ್ಚಿಮರಣರಂಗದಲ್ಲಿ ಸಮರ ಸಾಧನೆಯನ್ನು ಹೆಚ್ಚಿಂಡೆತ್ತಿಕೊಂಡ ಹೋಗಲಾರದ ಜರ್ಮನರೂ ಒಸ್ಟ್ರಿಯನರೂ ರಶ್ಯನನ್ನೊಡಸಿ ಯುದ್ಧವನ್ನು ತೀಗಿಸಬೇಕೆಂತ ಕರಿಣ ಕಾಳಗಗಳನ್ನ ಪೂರ್ವರಣರಂಗದಲ್ಲಿ ನಡಿಸಿದರು. ಅಲ್ಲಕ್ಕೂ ಸಹ ಹತಾಶರಾದ್ದರಿಂದಲೂ ಇಟೆಲಿಯು ಮಂಡೆತ್ತಿಕೊಂಡು ಬರುತ್ತಿದ್ದುದ್ದರಿಂದಲೂ ಮೆಸೊಪಾಟಾಮಿಯಾ ಮೊದಲಾದ ಕಡೆಗಳಲ್ಲಿ ಬ್ರಿಟಿಷರ ದಿಗ್ವಿಜಯಗಳನ್ನು ಕೇಳಿದ್ದರಿಂದಲೂ ಜರ್ಮನರು ಬೇರೇನೂ ಉಪಾಯಕಾಣದೆ ಬಲ್ಕಾನ್ ಸಂಸ್ಥಾನಗಳಲ್ಲಿ ಯುದ್ಧವನ್ನು ಬೆಳಸಲು ತೊಡಗಿರುವರು ಗೆಲಿಪೊಲಿ ಕೊನ್ಸ್‌ಟೆಂಟಿನೋಪಲ ಮತ್ತು ಐಗುಪ್ತ ಈ ಕಡೆಗೆ ತಮ್ಮ ಸೇನೆಯನ್ನು ಸಾಗಿಸಿಕೊಂಡು ಬ್ರಿಟಿಷ ಸಾಮ್ರಾಜ್ಯದ ಪೌರ್ವಾತ್ಯ ತೀಮೆಗಳ ಕಡೆಗೆ ದೃಷ್ಟಿಯನ್ನು ತಿರುಗಿಸಬಹುದೆಂಬ ಆಕಾಂಕ್ಷೆಯಿಂದ ಶತ್ರುಗಳು ಬಲ್ಕಾನ್ ಸಂಸ್ಥಾನಗಳಲ್ಲಿ ಯುದ್ಧ ಕೆಣಕಿಸಿರಬಹುದೆಂತ ಲೀಂಡ್ಸ್‌ಡೌನ್ ಪ್ರಭಗಳ ಈ ತಿಂಗಳ ತಾ. ೩೦ನೇಯ ಭಾಷಣದಿಂದ ವ್ಯಕ್ತವಾಗುತ್ತದೆ ಈ ಉದ್ದೇಶ ನೆರವೇರಿಕೆ ಬಗ್ಗೆ ಸರ್ವಿಯವನ್ನು ಕೆಡಹಿಬಿಡುವದು ಅಗತ್ಯವಾದ್ದರಿಂದ ಶತ್ರುಗಳು ಸರ್ವಿಯಾದ ಮೇಲೆ ಪ್ರತ್ಯಕ್ಷ ದಾಳಿ ಇಟ್ಟು ಮುಂದರಿಸುತ್ತಿದ್ದಾರೆ. ಶತ್ರುಗಳ ಈ ಸಂಕಲ್ಪವು ನೆರವೇರದಂತೆ ಬ್ರಿಟಿಷರೂ ಫ್ರೆಂಚ್ಚರೂ ಸರ್ವಿಯಾದ ರಕ್ಷಣಾರ್ಥವಾಗಿ ಸೈನ್ಯಗಳನ್ನು ಳಕ್ಕುಮಿಸಿರುತ್ತಾರೆ. ಗ್ರೀಸ ದೇಶವು ಸರ್ವಿಯಾದೊಂದಿಗೆ ಇರುವ ಕಾಪಾವನ್ನು ಗ್ರೀಸುದೇಶವು ಕಿಚ್ಚಿಸದೆ ಇರುವುದನ್ನು ನೋಡಿ ಮಿತ್ರರು ಬಹಳ ಮನಸ್ತಾಪಗೊಂಡಿರುವರ್ತು. ಫ್ರೆಂಚ್ ಮತ್ತು ಬ್ರಿಟಿಷ ಸೇನಾ ಅಧಿಕಾರಿಗಳೂ ನೌಕಾಸೈನ್ಯಗಳ ಪ್ರತಿನಿಧಿಗಳೂ ಕೂಡಿಕೊಂಡು ಈ ಸಂದರ್ಭದಲ್ಲಿ ಬೇಕಾದ ಕಾರ್ಯಾಲೋಚನೆಗಳನ್ನು ಮಾಡುತ್ತ ಯುಕ್ತವಾದ ಸಾಧನೆಗಳನ್ನು ಹೆಚ್ಚಿಸಲು ಜಾಗರೂಕತೆಯಿಂದ ವರ್ತಿಸುತ್ತಾರೆಂಬುದಾಗಿ ಲೀಂಡ್ಸ್‌ಡೌನ್ ಪ್ರಭುಗಳ ತಾ ೩೦ನೆಯ ಭಾಷಣದಿಂದ ತೋರಿಬರುತ್ತದೆ

ಮೂರ್ಮೋರಾ ಸಮುದ್ರದಲ್ಲಿ ಬ್ರಿಟಿಷರ ಜಲಂತರ್ಗಾಮಿ ನಾವೆಯು ತುರ್ಕರ ಯುದ್ಧ ಸಾಮಾಗ್ರಿಗಳನ್ನು ತುಂಬಿರುವ ಕೆಲವು ಹಡಗುಗಳನ್ನು ನಾಶಪಡಿಸಿರುತ್ತದೆ.

ಅಕ್ಟೋಬರ ತಾ. ೩೦-೩೧.

ಅಕ್ಟೋಬರ ತಿಂಗಳ ಕಾ ತಿಳಿದಂತೆ ಬ್ರಿಟಿಷ ಸೇನೆಯು ಮುಂದಿನ ರಣರಂಗದಲ್ಲಿ ಯುದ್ಧ ಸ್ಥಿತಿಯು ಯಾವರೀತಿಯಲ್ಲಿ ಯಾದರೂ ಮಾರ್ಪಡಿಲ್ಲವೆಂತ ಸರ್ ಜೆಫ್ರೀನ್ ಫ್ರೆಂಚರ ಸಮಾಚಾರದಿಂದ ತಿಳಿದುಬರುವದು ಬ್ರಿಟಿಷರ ಆಕಾಶವಿಮಾನಕಾರರು ಜರ್ಮನರ ಎರಡು ಆಕಾಶವಿಮಾನಗಳನ್ನು ಕೆಳಕ್ಕೆ ಇಳಿಸಿರುವರು

ಸ್ಪೈನ್‌ದೇಶದ ಅರಸರಿಗೂ ಅಮೇರಿಕದ ಪ್ರೆಸಿಡೆಂಟ ವಿಲ್ಸನರವರಿಗೂ ಸಂಧಾನ ವಿಷಯವನ್ನು ಯಾವ ಶರ್ತಗಳ ಮೇಲೆ ವಾದಿಸಲು ಸಿದ್ಧವಿರುವುದೆಂಬದನ್ನು ಜರ್ಮನಿಯು ಸದ್ಯದಲ್ಲಿ ತಿಳಿಯಪಡಿಸುವುದೆಂತ ಸ್ಪೈನ್‌ದೇಶದ ಕೆಲವು ಪತ್ರಗಳಲ್ಲಿರುವದೆಂತ ತಿಳಿದುಬರುತ್ತದೆ

ಸಂಧಾನ ವಿಷಯ ಬರ್ಲಿನ್ ಮತ್ತು ಲಂಡನ ಪಟ್ಟಣಗಳಿಗೆ ಯಾವ ವ್ಯವಹಾರವಾದರೂ ನಡದಿದ್ದಿಲ್ಲವೆಂತಲೂ ಸಂಧಾನದ ಪ್ರಸ್ತಾವವು ವಿತ್ರರು ಈ ಮೊದಲು ನಿರ್ಧರಿಸುವ ಶರ್ತಗಳಿಗೆ ಅನುಸಾರವಾಗಿ ನಮಸ್ಕಾರಾಗುವದು ವಿನಹ ಈ ಶರ್ತಗಳನ್ನು ಉಲ್ಲಂಘಿಸಿ ಸವ ಯಾವ ಪ್ರಸ್ತಾವವು ನಡೆಯದೆಂದು ಪಾರ್ಲಿಮೆಂಟ ಸಭೆಯಲ್ಲಿ ತಿಳಿಯ ಹೇಳಿರುತ್ತಾರೆ

ಬ್ರಿಟಿಷ ಸರಕಾರದ ಪ್ರಧಾನಿ ಮಂಡಲದ ಸಭಾನದರ ಸಂಖ್ಯೆಯನ್ನು ಕಡಮೆಮಾಡಬೇಕೆಂದು ಮಿ ಎಸ್ಕಿತರವರು ಯೋಚಿಸಿದ್ದಾರೆಂಕ ತಿಳಿದುಬರುತ್ತದೆ

ಫ್ರಾನ್ಸ್‌ದೇಶದ ಮಂತ್ರಿಗಳ ಕೂಟವು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿರುವದು ಹೊಸ ವಂತ್ರಿಗಳ ಕೂಟವು ಏರ್ಪಡಿಸಲು ಸೋಣಾಗುತ್ತಿರುವುದು

ಪೂರ್ವರಣರಂಗದಲ್ಲಿ ರೀಗಾದ ಹತ್ತಿರ ದಾಳಿ ಇಟ್ಟು ಬರುತ್ತಿರುವ ಜರ್ಮನರನ್ನು ರುಶ್ಯನರು ಆಟೋಪಿಸುತ್ತಿದ್ದಾರೆ

ಬಾಲ್ಕಾನ್ ಸಂಸ್ಥಾನಗಳಲ್ಲಿ ಸರ್ವಿಯಾ ಮತ್ತು ಗ್ರೀಕ್ ಸರಹದ್ದುಗಳಲ್ಲಿ ಫ್ರೆಂಚ್ ಮತ್ತು ಬ್ರಿಟಿಷ ಸೇನೆಗಳು ಕೂಡಿ ಸರ್ವಿಯಾಕ್ಕೆ ಸಹಾಯವನ್ನು ಮಾಡುತ್ತಿದ್ದಾರೆ.

ರುಶ್ಯನರ ನೌಕಾಸೇನೆಯು ಬಲ್ಕೇರಿಯದ ಸಮುದ್ರ ಕರಾವಳಿಯಲ್ಲಿರುವ ವಾರ್ನಾ ಮತ್ತು ಬರ್ಗಸ್ ಪಟ್ಟಣಗಳನ್ನು ಮುತ್ತಿಕೊಂಡು ತೋಪುಗಳನ್ನ ಹಾರಿಸಿ ಬಹಳ ಹಾವಳಿಯನ್ನುಂಟು ಮಾಡುತ್ತಿರುವವು

ಬಾಲ್ಕಾನ್ ಸಂಸ್ಥಾನಗಳಲ್ಲಿ ಲೀಂಡ್ಸ್‌ಡೌನ್ ಪ್ರಭುಗಳು ತಮ್ಮ ಭಾಷಣದಲ್ಲಿ ಸೂಚಿಸಿದ ಶತ್ರುಗಳ ಸಂಕಲ್ಪವು ನೆರವೇರುವದು ಅಸಾಧ್ಯವೆಂತ ನಂತರದ ಸುದ್ದಿಗಳಿಂದ ಗೊತ್ತಾಗುವದ್ದು ಕ್ರಮೆಲಯನ್ನು ಶತ್ರುಗಳಿಂದ ಪುನಹ ಪಡೆದ ವೃತ್ತಾಂತವು ಈ ಸುದ್ದಿಗಳಲ್ಲಿ ಒಂದಾಗಿರುವದು ರುಶ್ಯವು ಭೂಮಾರ್ಗವಾಗಿ ಒಂದು ದೊಡ್ಡ ಸೇನೆಯನ್ನು ಸರ್ವಿಯಕ್ಕೆ ಕಳುಹಿಸಿಕೊಡುವುದು. ಸರ್ವಿಯನರು ಕುಪ್ಪಲುವನ್ನು ಕೈವಶಮಾಡಿಕೊಂಡು ಇಸ್ತಿಪ ಎಂಬ ಪಟ್ಟಣಕ್ಕೆ ಮುತ್ತಿಗೆ ಹಾಕಲು ಕೊಡಗಿರುಕ್ತಾರೆ.

ಗ್ರೀಕ್ ಸರಕಾರದವರು ಫ್ರೆಂಚ್ ಮತ್ತು ಬ್ರಿಟಿಷರ ಸೇನೆಗಳಿಗೆ ವಿರೋಧವಾಗಿ ಯಾವ ಸಾಧನೆಯನ್ನಾದರೂ ಕೈಕೊಳ್ಳರೆಂತ ಗ್ರೀಕ್ ಮಂತ್ರಿಗಳು ಫ್ರಾನ್ಸ ದೇಶದ ವಿದೇಶ ಮಂತ್ರಿಗಳಿಗೆ ಧರವಸ್ತಕೆಕೊಟ್ಟಿರುತ್ತಾರೆ.

ಅಂಗ್ಲಾಳದಲ್ಲಿರುವ ಸ್ನೇಹಿತರೊಬ್ಬರಿಗೆ ಸರ್ವಿಯಾದಮಂತ್ರಿಗಳು ಬ್ರಿಟಿಷ ಜನರಿಗೆ ಮಾಡಿರುವ ಪ್ರಾರ್ಥನೆಯನ್ನು ತಂತೀ ಮೂಲಕ್ಕೆ ಈ ರೀತಿ ಸೂಚಿಸಿರುತ್ತಾರೆ.:—ಸರ್ವಿಯವು ವಿಶ್ವ ಪ್ರಯತ್ನಗಳಿಂದ ತನ್ನ ಇರವನ್ನು ಕಾಪಾಡಿಕೊಳ್ಳುತ್ತಿರುವದು. ಒಬ್ಬಿಯಾ ಜರ್ಮನ್ನು ಮತ್ತು ಬಲ್ಗೇರಿಯಾದವರು ಸರ್ವಿಯಾವನ್ನು ಸೋಲಿಸಲು ನಿಶ್ಚಯಮಾಡಿಕೊಂಡಿರುವರು. ತಮ್ಮ ಪೌರರು ಬಾ

ಪರಾಕ್ರಮದಿಂದ ಕಾದಾಡಿದರೂ ಬಹಳ ಕಾಲದವರೆಗೆ ಶತ್ರುಗಳನ್ನು ಅಂಕೆಯಲ್ಲಿಡಲಾಗಲಿಲ್ಲ. ಅಂಗ್ಲಾಳದಿಂದ ಸೇನೆಯು ಆದಷ್ಟು ಬೇಗನೆ ಸರ್ವಿಯಾಕ್ಕೆ ಬಂದು ತಲುಪುವಂತೆ ಸರ್ವಿಯಾವು ಅಂಗ್ಲಾಳ ದಲ್ಲಿರುವ ತನ್ನ ಸ್ನೇಹಿತರನ್ನು ಪ್ರಾರ್ಥಿಸುತ್ತಿರುವದು

ಮಿತ್ರರ ಒಂದು ಜಲಂತರ್ಗಾಮಿನಾವೆಯು ತುರ್ಕಿಯ ಧ್ವಜ ವನ್ನೇರಿಸಿಕೊಂಡು ಗಲಿಪೋಲಿಗೆ ಯುದ್ಧ ಸಾಮಾಗ್ರಿಗಳನ್ನು ಕೊಂಡು ಹೋಗುತ್ತಿದ್ದ ಒಸ್ಮಿಯನರ ತಡಗವನ್ನು ನಾಶಪಡಿಸಿರುವದು

ಜೋರ್ಜ್ ಚಕ್ರವರ್ತಿಗಳವರು ಫ್ರೆಂಚ್ ಸೇನೆಯ ನ್ನು ಕುರಿತು ಯೆನ್ನೇರಿಕೊಂಡು ಸಂದರ್ಶಿಸುತ್ತಿದ್ದರು. ಈ ಸಂದರ್ಭದಲ್ಲಿ ಸೇನಿ ಕರು ಚಕ್ರವರ್ತಿಗಳನ್ನು ಜಯ ಘೋಷಗಳಿಂದ ವಂದಿಸುತ್ತಿದ್ದಾಗ ಚಕ್ರವರ್ತಿಗಳ ಕುದುರೆಯು ಬೆಚ್ಚಿ ಬಿದ್ದು ಚಕ್ರವರ್ತಿಗಳವರು ಘಾಯಪಡೆದಿದ್ದರು. ಈ ಘಾಯಗಳ ಬೇನೆಯಿಂದ ಬಾಧಿಸಲ್ಪಡ ರವರು ಗುಣಹೊಂದುತ್ತಿರುವರೆಂಬುದನ್ನು ತಿಳಿಸಲು ಸಂತೋಷ ಪಡುತ್ತೇವೆ

ಜರ್ಮನಿಯಲ್ಲಿ ಕಾಂಬ್ರವ ಯುದ್ಧಕಾರ್ಯಗಳಿಗೆ ವಿಕ್ಕಿದ್ದ ರಿಂದ ಜರ್ಮನಿಯಲ್ಲರುವ ಫ್ರೇಮ್ ಗಾಡಿಗಳ ಕಾಂಬ್ರದ ಸರಿ ಯನ್ನು ತೆಗೆದು ಯುದ್ಧರಂಗದಲ್ಲಿ ಉಪಯೋಗಿಸುತ್ತಿರುವರೆಂತ ತಿಳಿದುಬರುತ್ತದೆ

ನವೆಂಬರ ತಾ ೧-೨.

ಸ್ಪೇಡನ್ ಪ್ರಾಂತ್ಯಗಳ ಸಮುದ್ರದಲ್ಲಿ ಅವಿತುಕೊಂಡಿದ ಜರ್ಮನರ ಒಂದು ತಡಗವನ್ನು ಬ್ರಿಟಿಷ ಜಲಾತರ್ಗಾಮಿ ನಾವೆಯು ನಾಶಪಡಿಸಿತ

ಜೋರ್ಜ ಚಕ್ರವರ್ತಿಗಳವರು ಬಿದ ಜೇನೆಯಿಂದ ಗುಣ ಹೊಂದುತ್ತಿರುವರೆಂಬ ತಿಳಿದುಬರುತ್ತದೆ

ಜನರಲ್ ಜೊಫ್ರೆಯವರು ಯುದ್ಧ ಭೂಮಿಯಿಂದ ಲಂಡನಿಗೆ ಬಂದಿದ್ದರು. ಯುದ್ಧ ಆಫೀಸಿನಲ್ಲಿ ಕೆಚ್ಚಿನ್ ಪ್ರಭುಗಳ ಭೇಟಿ ಯನ್ನು ಪಡದು ಮುಖ್ಯ ಮಿತ್ರ ವರ್ತಮಾನಿಕೆಯೊಡನೆ ಮಾತಾಡಿ ಚಕ್ರ ವರ್ತಿಯವರ ದರ್ಶನವನ್ನು ಹೊಂದಿ ಫ್ರಾನ್ಸಿಗೆ ಹಿಂದಿರುಗಿ ಹೋಗಿರುವರ

ಸ್ಪೈನ್ ಬಿಫೋರ್ಮಿಲ್ಲ ಯುವರಾಜರವರ ಫ್ರಾನ್ಸಿನಿಂದ ಅಂಗ್ಲಾ ಳಕ್ಕೆ ಬಂದಿರುವರ

ಪರ್ಷಿಯಲ್ಲಿಯೂ ಟೆಂಪರೆನ್ಸ್‌ದಲ್ಲಿಯೂ ಫ್ರೆಂಚರ ಶತ್ರು ಗಳು ವಿಲ್ಹಂಯಿದ ಭರದಂತೆ ತಡೆದು ಶತ್ರುಗಳ ಸ್ಥಾಧೀನ ವಿರುವ ಕೆಲವು ಇತ್ಯಾದಿಗಳನ್ನು ಕ್ರಮವಾಗಿ ಪಡೆಯುತ್ತಿರುವಘು ರ್ಡ್ಯಾನ್ ನದಿಯ ಪ್ರಾಂತ್ಯಗಳಿಂದ ಜರ್ಮನರು ಬೃಹತ್ ಸೈನ್ಯ ರಣ ರಂಗಕ್ಕೆ ವಿಶೇಷವಾಗಿ ಬಲವನ್ನು ಕಳುಹಿಸಿ ಕೊಡುತ್ತಿರುವರೆಂತ ಎನ್ನುತ್ತಿರ್ಡಾವೆ. ತಂತಿವಾರ್ತೆಯು ದ ತಿಳಿದುಬರುವದ

ಬೆಲ್ಜಿಯಮಿನಲ್ಲಿ ಜರ್ವನರ ವಾಛೆಯ ವಿಶೇಷವಾಗುತ್ತಿರ ವದು ಬಗೆಬಗೆಯ ತಪ್ಪುಗಳನ್ನು ನಿವಾಸಿಕರ ಮೇಲೆ ಹೊರಿಸಿ ಕೊಂಡು ನಿವಾಸಿಕರನ್ನು ಪರಾಧ ಪಡಿಸಿ ಗುಂಡಿಕ್ಕಿಸುತ್ತಿರುವರು.

ಫ್ರೆಂಚ್ ಸರಕಾರದ ನೂತನ ಎಂಬ್ರಸಿಯ ಎರ್ಪಡಿಸಲ್ಪ ಟ್ಟಿತು ಮೆ ಎಬ್ರೈಡ್‌ರವರು ಮಾಜಿ ಮಂತ್ರಿಗಳಿಗಿಂತ ವರ ಜಯವನ್ನು ಪಡೆಯ ಯತ್ನವನ್ನು ಕೊನೆಗಾಣಿಸಬೇಕೆಂಬ ಇಂಗಿತ ಯಲ್ಲಿ ಈ ನವೀನ ವರ್ತಮಾನಕಾರರವರು ಸಭೆ ಕಟ್ಟಿಬದ್ಧರಾಗಿರು ವರು.

ಬಲ್ಕಾನ್ ಪ್ರಾಂತದ ಯುದ್ಧರಂಗದಲ್ಲಿ ಫ್ರೆಂಚರು ಸ್ಥಮಿಟ್ಟಿ ವನ್ನು ಭದ್ರವಾಗಿ ಹಿಡಿವಿರುವದು. ಸರ್ವಿಯ ಮತ್ತು ಬಲ್ಗೇರಿಯದ ಸರಹದ್ದುಗಳಲ್ಲಿ ವಿಸ್ತರ ಸೇನೆಗಳೂ ಯುದ್ಧ ಸಾಮಾಗ್ರಿಗಳೂ ಬಂದು ತಲಪುತ್ತಲಿವೆಯೆಂತ ಪ್ಯಾರಿಸ್ ಪಟ್ಟಣದ ಒಂದು ಪತ್ರದಿಂದ ತೋರಿಬರುತ್ತದೆ ಮಳೆಯ ಸರ್ವಿಯದಲ್ಲಿ ಬರುತ್ತಿರುವದರಿಂದ ಸರ್ವಿಯದಲ್ಲಿ ಸಂಗ್ರಾಮಗಳ ಬಗ್ಗೆ ಸೇನೆಗಳ ಚಲನೆಯ ಕಷ್ಟ ಸಾಧ್ಯವಾಗಿದೆಂತ ಒಸ್ಮಿಯವರ ಯುದ್ಧಸಮಾಚಾರದಲ್ಲಿ ತಿಳಿ ರುತ್ತದೆ ಶತ್ರುವಿನ ನೌಕಾಸೇನೆಗೆ ಸೇರಿದ ತಡಗುಗಳು ತೋಪುಗಳನ್ನು ಹಾರಿ ಸುತ್ತ ಬಲ್ಗೇರಿಯದ ಕರಾವಳಿ ಪಟ್ಟಣಗಳಾದ ವಾರ್ನಾ ಮತ್ತು ಬೊರ್ಗಾಸ್ ಪಟ್ಟಣಗಳನ್ನು ಮುತ್ತಿದವು. ರುಶ್ಯನರ ಬಂಡರು ಗಳಿಂದ ದೊಡ್ಡ ಸೇನೆಯು ಬಲ್ಗೇರಿಯಾದ ಕರಾವಳಿಗೆ ಬಂದಿಳಿ ಯಲು ಹೊರಡಿರುವದೆಂತಲೂ ಬಲ್ಗೇರಿಯದ ಕರಾವಳಿಯ ಪಟ್ಟಣ ಗಳನ್ನು ಮುತ್ತಿದ್ದು ಸೇನೆಗಳನ್ನು ಆ ಪ್ರಾಂತ್ಯಗಳಲ್ಲಿ ಇಳಿಸಲಿಕ್ಕಾ ಗಿರಬಹುದೆಂದೂ ಯುದ್ಧಭೂಮಿಯ ಹತ್ತರವಿರುವ ಕೆಲವು ನಿವಾ ಸಿಕರ ಅಭಿಪ್ರಾಯವಾಗಿರುವದು..

ಬಲ್ಗೇರಿಯದವರು ಕುಮ್ಮಲುವನ್ನು ಪುನಃ ವಶ ಮಾಡಿ ಕೊಂಡಿರುವರೆಂತ ಗ್ರೀಕರ ಎಥೆನ್ಸ್ ಪಟ್ಟಣದಿಂದ ಟಾಮ್ಸ್ ಪತ್ರಿ ಕೆಗೆ ಬಂದ ತಂತೀ ವಾರ್ತೆಯಲ್ಲರುವದು.

ಪೂರ್ವರಣರಂಗದ ಸವಾಚಾರದಲ್ಲಿ ವಿಶೇಷವೇನೂ ಇರದು ಜರ್ಮನರಲ್ಲಿ ಯುದ್ಧ ಸಾಮಾಗ್ರಿಗಳ ಅಡಚಣೆಯು ಉಂಟಾಗಿದೆ ಈ ಮೊದಲು ರಣರಂಗದಲ್ಲಿ ಕಾದಾಡುತ್ತಲಿರುವ ಸೇನೆಗಳಿಗೆ ಬರು ತ್ತಿರುವ ಸೇನಿಕರ ಮತ್ತು ಸಾಮಾಗ್ರಿಗಳ ಸರಬರಾಯಿಯು ಈಗ ಜರ್ಮನ್ ಸೇನಾ ನಾಯಕರಿಗೆ ಕಷ್ಟವಾಗುತ್ತ ಬಂದಿದೆ

ಬೊಲ್ಗೆಕ್ ಸವಾಪ್ರದಲ್ಲಿ ರುಶ್ಯನರ ಸಬ್ ಮೈರ್ನ್‌ಗಳು ಜರ್ಮನರ ಎರಡು ತಡಗಗಳನ್ನು ಹಿಡಿದುಕಾಕಿವೆ

ಶತ್ರುಗಳ ವ್ಯೂಹಗಳನ್ನು ಮುರಿಯುತ್ತ ಇಟಲಿಯನರು ಶತ್ರು ಗಳ ದೇಶದಲ್ಲಿ ಮುಂದುವರಿಕೊಂಡು ಗಿರಿದುರ್ಗಗಳನ್ನು ಕ್ರಮವಶ ಮಾಡಿಕೊಳ್ಳುವರು. ಜೋರ್ಜ್ ಚಕ್ರವರ್ತಿಗಳವರು ಫ್ರಾನ್ಸಿನಿಂದ ಅಂಗ್ಲಾಳಕ್ಕೆ ಈ ತಿಂಗಳ ತಾ ೧ರಲ್ಲಿ ಬವಿರುವರು

ಜಾವಾನದಲ್ಲಿ ವದ್ದು ಮಾಡ್ತು ಆಯುಧ ಕಾರ್ಖಾನೆಗಳನ್ನು ನಾಶಮಾಡಿ ಬಿಡಲು ಏರ್ಪಡಿಸಿದ ಕಸಟೋಪಾಯಗಳನ್ನು ಅಲ್ಲಿಯ ಪೊಲೀಸಿನವರ ಕೆಡಹಿ ಹಾಕಿದರೆಂದು.

ನೀವಾ ನದಿಯ ನೀರು ಹೆಪ್ಪುಗಟ್ಟಿ ತ್ತಿರುವದರಿಂದ ಮಂಜು ಗಾಲವು ಇನ್ನು ಬೇಗನೆ ಪೂರ್ವ ರಣರಂಗದಲ್ಲಿ ಪ್ರಾರಂಭವಾಗುವ ದೆಂದು ಇದರ ಮೊದಲೇ ಡ್ವಿನಾನದಿ ಬಳಿ ಇಸ್ಕೊಂಡು ಸಲ ಕರಣ ಕಾಳಗವನ್ನು ಜರ್ಮನರು ನಡಿಸಬಹುದೆಂದು ಕೆಲವರು. ಆಳವಾ ಯಪಡುವರು ಜರ್ಮನರ ಸೈನ್ಯಕ್ಕೆ ಮಂಜುಗಾಲದಲ್ಲಿ ಬೇಕಾದ ಪೂರಾಸಿಕೆಯು ಇಲ್ಲದಿರಿಂದ ಯುದ್ಧವನ್ನು ಈ ವ್ಯಾಪ್ತಿಗಳಲ್ಲಿ ನಿಲ್ಲಿಸಿಬಿಡುವ ಯೋಚನೆಯು ಜರ್ಮನರಲ್ಲಿರಬಹುದೆಂತ ಕಂಡು ಬರುತ್ತದೆ.

ರುಶ್ಯನರ ಬಂದರುಗಳಾದ ಒಡೆಸ್ಸಾ ಮತ್ತು ಸೆವಸ್ಟೊಪೋಲ್ ಪಟ್ಟಣಗಳಿಂದ ರುಶ್ಯನರ ಸೇನೆಯ ತಡಗಗಳನ್ನು ಹತ್ತಿತ್ತಿರು ವದ ರುಶ್ಯನರ ಧ್ವಜವಾಪ ನೌಕಾಸೇನೆಯ ಕಾವಲಿನಲ್ಲಿ ಈ ಸೇನೆಯು ಬಲ್ಗೇರಿಯದ ಕರಾವಳಿಗೆ ಹೊರಟಿರುವದೆಂದ ಕೆಲವು ವರ್ತಮಾನ ಪತ್ರಗಳ ತಂತೀವಾರ್ತೆಗಳಲ್ಲಿ ತೋರಿಬರುವದು

ಬಾಲ್ಕಾನ್ ಸಂಸ್ಥಾನವಲ್ಲಿ ನಡಿಸಬೇಕಾದ ಯುದ್ಧ ಸಾಧನೋ ಪಾಯಗಳನ್ನು ಚರ್ಚಿಸುವರೆ ಜನರಲ್ ಜೊಫ್ರೆಯವರು ಅಂಗ್ಲಾ ಳಕ್ಕೆ ಬಂದಿದ್ದರಾಗಿ ತಿಳಿಯುತ್ತೇವೆ

ಉತ್ತರ ಹಿಂದೂಸ್ಥಾನ.

ಬಂಗಾಳದ ಗವರ್ನರರಾದ ಕಾರ್ಮಿಕಲ್ ಪ್ರಭು ಗಳು ಪೊಲೀಸು ಕಮಿಶನರ್ ಮತ್ತು ವಿಶ್ಯುಟಿ ಕಮಿಶನ ರೊಡನೆ ಒಂದು ಕಲ್ಕತ್ತೆಯ ಮುನಿಸಿಪಲ್ಟಿಯ ರಸ್ತೆಯಲ್ಲಿ ಸಬ್ ಇನ್ಸಪೆಕ್ಟರರಾದ ಗಿರೀಂದ್ರನಾಥ ಬೆನರ್ಜಿಯವರು ಕೊಲ್ಲಲ್ಪಟ್ಟ ಮನೆಯನ್ನು ನೋಡಿ ಹೋಗಿರುವರು

ಡಿಲ್ಲಿಗ ತೆರಳುವ ಬಹುಮಾನಪಟ್ಟ ಸರ್ ಶಂಕ ರನ್‌ನಾಯರರವರು ಕಳೆದ ತಿಂಗಳ ತಾ ೨೫ರಲ್ಲಿ ಕಲ್ಕ ತ್ತೆಗೆ ಹೋಗಿ ತಲ್ಪರಿಯರು ನ್ಯಾಯಾಧಿಪತಿಯವರನ್ನು ಕರ ಕೊಂಡು ಹೋಗಲು ಸರಕಾರದ ಮೋಟರ್ ಬಂಡಿಯಲ್ಲಿ ಬಂದು ಮೋಟರ್ ಬಂಡಿಯು ಬಿದ್ದಿತ್ತು ಸರ್ ಶಂಕರನ್ನಾಯರ ರನ್ನು ಎನಂಗೊರ್ಮೆಲ್ಲು ಬೊಪೆಂದ್ರನಾಥ ಬಾಸು ಮೊದಲಾದ ಅಂಗಳದ ದೇಶೀಯ ಮಹನೀಯರು ಫೈಲ್ಟ್ ಸೇಶಿನ್ ಎಂಬವರು ಕಲ್ಕತ್ತೆಯಲ್ಲಿ ಸರ್ ಶಂಕರ ನ್ಯಾಯರರವರ ಬಾಬು ಭೂಪೇಂದ್ರನಾಥ ಬಾಸುರವರ ಅತಿಥಿಗಳಾಗಿದ್ದರು ತಾ ೩೦ರಲ್ಲಿ ಕಲ್ಕತ್ತೆಯಿಂದ ದಿಲ್ಲಿಗೆ ಹೊರಟಿರುತ್ತಾರೆ

ವೈಮಾನಸಿಂಗ್‌ದಲ್ಲಿ ಸರಕಾರರ ಪ್ರಜೆರಿಯಿಂದ ೫೫೦೦೦ ರೂಪಾಯಿಗಳ ಕರೆನ್ಸಿ ನೋಟುಗಳು ಕಾಣೆ ಯಾಗಿ ಹೋಗಿಯವೆ ಎಂತ ತಿಳಿದುಬರುತ್ತದೆ ಧಂಡಾ ರದ ತನಿಖೆಯ ಸಮಯದಲ್ಲಿ ಹಾಜರಿದ್ದ ಪ್ರೆಜರರ್ ಬಾಬು ರೇವತಿ ಮೋಹನ್ ತಾಲೂಕುದಾರರವರಿಗೆ ೫೫೦೦೦ ರೂಪಾಯಿಗಳು ಇಲ್ಲದ್ದನ್ನು ನೋಡಿ ಕೂಡಲೆ ಸ್ವೈತ್ಯ ತಪ್ಪಿತಂತೆ.

ವೈದ್ಯರು ಕೃತಕ ದಿಗ್ವಿಗಳನ್ನು ತಮ್ಮ ಹೆಸರುಗಳಲ್ಲಿ ಸೇರಿಸದಂತೆ ಹಿಂದು ಕಾನೂನು ಮಸೂದೆಯು ತಯಾರಾಗುತ್ತಿದೆ. ಇಂಥಾ ಕಾನೂನು ಮಸೂದೆಯನ್ನು ಜಾರಿಗೆ ತರಕೂಡದೆಂಬ ಅಭಿಪ್ರಾಯವನ್ನು ಸರಕಾರದವರಿಗೆ ಸೂಚಿಸಲು ಖಾನಗಿ ವೈದ್ಯಕಾಲೇಗಳಲ್ಲಿ ಕಲಿತು ಚಿಕಿತ್ಸೆ ನಡಿಸುತ್ತಿರುವ ವೈದ್ಯರ ಸಭೆಯು ಮುಂಬಯಿಯಲ್ಲಿ ಕೂಡಿತ್ತು. ದಿಗ್ವಿಗಧರರು ತಮ್ಮ ದಿಗ್ವಿಗಳೊಡನೆ ತಾವು ಯಾವ ಕೊಲೇಜಿನಿಂದ ಪಾಸಾದವರೆಂಬುದನ್ನು ಹಾಕ ಬೇಕೆಂಬುದು ಈ ವಿಧಿಯ ಮೂಲಕ ನಿರ್ಣಯಿಸಲ್ಪಡ ಬೇಕಲ್ಲದೆ ಇತರರನ್ನು ಬಾಧಿಸುವ ಯಾವ ಬಗೆಯ ನಿರ್ಬಂಧ ವಾವದೂ ಇರಕೂಡದೆಂದು ಈ ಸಭೆಯುವರು ಸೂಚಿಸಿದ್ದಾ ರೆ

ಮುಂಬಯಿಯಲ್ಲಿ ಕೂಡುವ ರಾಷ್ಟ್ರೀಯ ಸಭೆಯ ಆಮಂತ್ರಣ ಕಮಿಟಿಯ ಅಧ್ಯಕ್ಷರನ್ನಾಗಿ ಮೆ. ಡಿ. ಇ. ವಾಚಾರವರನ್ನು ನೇಮಿಸಿರುವರು.

ಕೆಲವು ದಿವಸಗಳಿಂದ ಪುನೆಯಲ್ಲಿದ್ದ ಸಾಂಗ್ಲಿ ಸಂಸ್ಥಾ ನದ ಶ್ರೀಮಂತ ಚಿಂತ್ಯಮನರಾವ್ ಅಪ್ಪಾಸಾಹೇಬ ಪಟ್ ವರ್ಧನರವರು ಪುನೆಯ ಸೇವಾಸದನದ ಕಟ್ಟಡಕ್ಕಾಗಿ ರೂ ೬೦೦೦ವನ್ನು ಕೊಟ್ಟು ಇದರ ಪೋಷಣೆಗಾಗಿ ಮೂರು ವರುಷಗಳ ತನಕ ರೂ. ೫೦೦ರ ಪ್ರಕಾರ ಕೊಡು ತ್ತೇವೆಂದಾಗಿ ವಾಗ್ದಾನ ಮಾಡಿರುವರು. ಇಂಥಾ ಸಹಾ ಯವನ್ನು ಪ್ರೊಫೆಸ್ಸರ್ ಕರ್ವೆಯವರ ವಿಧವಾಗ್ರಹಕ್ಕೂ ಕೊಟ್ಟಿರುವರು

ಸೇಟ್ ಗೋವರ್ಧನದಾಸ ಮೋತಿಲಾಲ ಮೇಥಾ ಎಂಬ ಕರಾಚಿಯಲ್ಲಿರುವ ಸಂಪನ್ನ ಸದ್‌ಗೃಹಸ್ಥರೊಬ್ಬರು ಕರಾಚಿಯಲ್ಲಿ ಒಂದು ಕಣ್ಣಿನ ಚಿಕಿತ್ಸೆಯ ಆಸ್ಪತ್ರೆಯನ್ನು ಕಟ್ಟಿಸಲಿಕ್ಕೆ ರೂ. ೭೦,೦೦೦ವನ್ನು ಧರ್ಮಾರ್ಥವಾಗಿ ಕೊಟ್ಟಿರುತ್ತಾರೆ

ಲಾಹೋರಿನಲ್ಲಿ ವೈಜ್ಞಾನಿಕ ಸಂಸ್ಥೆಯ ಕಟ್ಟಡಕ್ಕಾಗಿ ಧೋಪಾಲನ ಬಿಗಮ್ ಸಾಹೇಬರವರು ರೂ. ೩೦೭೦ ವನ್ನು ಕೊಟ್ಟಿರುತ್ತಾರೆ.

ಮುಲ್ತಾನದಲ್ಲಿ ಸೇನಾ ಇಲಾಖೆಯಲ್ಲಿ ಗುಮಾಸ್ತನಾಗಿದ್ದ ಯುರೋಪಿಯ ಸರ್ಜಂಟನೊಬ್ಬನು ಸರಕಾರದ ರೂ. ೧೪,೦೦೦ವನ್ನು ತಕ್ಕೊಂಡು ಹೋಗಿ ಕಾಣೆಯಾಗಿರುವ ನಂತೆ.

ಸೆರೆಂಪುರದ ಸರಕಾರದ ಪ್ರೆಜರಿಯ ಸಬ್ ಟ್ರೆಜರ ರಾಗಿರುವ ಬಾಬು ದೇವಿಚರಣಸಿಂಗ್ ಎಂಬವನು ಸರ ಕಾರದ ಖಜಾನೆಯಿಂದ ರೂ ೬೦೦೦ ಬೆಲೆಯ ಕೋರ್ಟು ಪೀಸು ಸ್ಟಾಂಪನ್ನು ದುರುಪಯೋಗಿಸಿರುವನೆಂತ ಈತನ ಮೇಲ ಕ್ರಿಮಿನಲ್ ಮೊಕದ್ದಮೆಯು ಏರ್ಪಡಿಸಲ್ಪಟ್ಟಿರು ವದು

ಬಾರತೇಯ ಸ್ತ್ರೀಯರ ಒಗ್ಗೆ ವರುಷಗಿಕ್ಕೆ ೫೦೦ ಪವನುಗಳು ಕೊಡೋಣಾಗುವ ಒಂದು ವಿದ್ಯಾರ್ಥಿ ವೇತ ನವು ಬರುವ ವರುಷದಿಂದ ವಿಶ್ವವಿದ್ಯಾಲಯಗಳಿಂದ ದಿಗ್ವಿ ಪದವಿಧರರಾದ ದೇಶೀಯ ಸ್ತ್ರೀಯರಲ್ಲಿ ಒಬ್ಬರಿಗೆ ಕೊಡ ಬೋಣಾಗುವದು ಈ ವೇತನವನ್ನು ಪಡದವರು ಅಂಗ್ಲಾ ಳದಲ್ಲಿ ಅಥವಾ ಸರಕಾರದವರ ಅನುಮತಿಯನ್ನು ಪಡದು ಇತರ ವಿದೇಶಗಳಲ್ಲಿ ವೈದಕ ಶಿಕ್ಷಣವನ್ನು ಕುರಿತು ತರ ಬೇತಿ ಹೊಂದಬೇಕಾಗಿರುವದು.

ಹಿಂದೂ ವಿಶ್ವವಿದ್ಯಾಲಯ ಸಂಘದ ಕಮ್ಮಿಟಿ ಮೆಂಬ ರರ ಸಭೆಯು ಕಳೆದ ಶನಿವಾರ ಅಲ್ಲಾಹಾದಿನಲ್ಲಿ ಕೂ ಡಿತ್ತು. ವಿದ್ಯಾಲಯದ ಕಟ್ಟಡಗಳಿಗೆ ಬೇಕಾದ ಸ್ಥಳವನ್ನು ಕ್ರಯಕ್ಕೆ ಪಡಕೊಳ್ಳುವರೆ ರೂ. ೫ ಲಕ್ಷವನ್ನು ಕೊಡೋ ಣಾಗಬೇಕೆಂತ ನಿರ್ಣಯಿಸಲ್ಪಟ್ಟಿತು. ಮತ್ತು ೫ ಲಕ್ಷದು ಲಕ್ಷ ರೂಪಾಯಿಗಳು ಈ ಬಗ್ಗೆ ಸಾಲದೆಂದು ಕಂಡು

ಬಂದರೆ ಇನ್ನು ಮೂರು ಲಕ್ಷ ರೂಪಾಯಿಗಳನ್ನು ಈ ಬಗ್ಗೆ ವಿನಿಯೋಗಿಸಬಹುದೆಂದು ನಿಶ್ಚಯಿಸಲ್ಪಟ್ಟಿರುತ್ತದೆ.

ಮುಂಬಾಯಿಯಲ್ಲಿ ಈ ತಿಂಗಳ ತಾ. ೪ರಿಂದ ೬ರ ವರೆಗೆ ಜರುಗುವ ಆರ್ಯಭ್ರಾತೃಸಭೆ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಸರ್ ರಾಮಕೃಷ್ಣ ಬಂಡಾರಕಾರರವರು ವಹಿಸಿಕೊಳ್ಳುವರು. ಸರ್ ನಾರಾಯಣ ಗಣೇಶ ಚಂದಾವರಕರರವರು ಸಭಾ ಪ್ರಾರಂಭದ ಭಾಷಣವನ್ನು ಮಾಡುವರು.

ಕಲ್ಕತ್ತೆಯ ಲೇಂಡ್ಸ್‌ಡೌನ್ ಪೇಟೆ ಎಂಬ ರಸ್ತೆಯ ಸಂಬ್ರಾನೇ ಕಟ್ಟಿಸಿದುದಿಂದ ಕಾಣಿಯಾಗಿ ಹೋದ ೨೦೦೦, ರೂಪಾಯಿ ಕ್ರಯಬಾಳುವ ವಜ್ರದ ಆಭರಣಗಳ ಕಳವನ್ನು ಪೋಲೀಸಿನವರು ಶೋಧಿಸುತ್ತಿದ್ದಾರೆ.

ದಕ್ಷಿಣ ಹಿಂದೂಸ್ಥಾನ.

ರಾಜಮಹೇಂದ್ರಿಯ ರಾವ್ ಬಹದ್ದೂರ್ ವೀರೇಶ ಲಿಂಗಮ್ ಪಂತಲುರವರು "ಕಾರ್ಲೇಲಿಯನ್" ಎಂಬ ಪತ್ರದ ಸಂಪಾದಕರಾದ ರಾ॥ ಶ್ರೀ ರಾಮಲು ಎಂಬವರ ಮೇಲೆ ಕೆಲವು ಕಾಲದ ಹಿಂದೆ ಎರಡು ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲುಮಾಡಿದ್ದರು. ಇವುಗಳಲ್ಲಿ ಒಂದರಲ್ಲಿ ಶ್ರೀ ರಾಮಲುರವರ ಮೇಲೆ ತಪ್ಪು ರುಜುವಾಗಲಿಲ್ಲ. ಮತ್ತೊಂದು ವೀರೇಶ ಲಿಂಗಮ್ ಪಂತಲುರವರಿಂದಲೇ ಹಿಂದಕ್ಕೆ ತೆಗಿಯೋಣಾಯಿತು. ಶ್ರೀ ರಾಮಲುರವರು ಈಗ ವೀರೇಶ ಲಿಂಗಮ್ ಪಂತಲುರವರ ಮೇಲೆ ಸೆಂಕ್ಷೆನು ಕೇಳಿ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಎರಡು ಅರ್ಜಿಗಳನ್ನು ದಾಖಲು ಮಾಡಿರುವರು. ರಾಜೇಶ್ರೀಗಳಾದ ನಯಪತಿ ಸುಬ್ಬರಾವ್, ದಿವಾನ್ ಬಹದ್ದೂರ್ ಶೇಷಗಿರಿ ರಾವ್, ಟಿ. ಸೀತಾರಾಮಯ್ಯ ಡಿಮ್ಯುಟಿ ಕಲೆಕ್ಟರ್ ಈ ಮೊದಲಾದವರನ್ನು ಮುದ್ದೈಯಾಳಗಳನ್ನಾಗಿ ಸೇರಿಸುವರೆ ಅಪ್ಪಣೆಕೊಡಬೇಕೆಂತ ಶ್ರೀರಾಮಲುರವರ ಅರ್ಜಿಯಲ್ಲಿದೆ. ಒಂದು ಕಡೆಯಲ್ಲಿ ಪತ್ರಸಂಪಾದಕರೂ ಇನ್ನೊಂದು ಕಡೆಯಲ್ಲಿ ದಕ್ಷಿಣ ಹಿಂದೂಸ್ಥಾನದಲ್ಲಿ ಪ್ರಸಿದ್ಧ ಸುಧಾರಕರಾದ ವೀರೇಶಲಿಂಗಮ್ ಪಂತಲು ಮೊದಲಾದವರೂ ಕಕ್ಷಿ ಪ್ರತಿ ಕಕ್ಷಿಗಳಾಗಿ ಕೋರ್ಟುಗಳಲ್ಲಿ ಇದಿರು ಬಿದ್ದಿರುವ ಈ ಸಮಾಚಾರವು ಬಹಳ ವಿಶೇಷವಾಗಿರುವುದು.

ದಕ್ಷಿಣ ಕನ್ನಡ.

ವಿಟ್ಲ:—ಈ ಮೊದಲು ಇಲ್ಲಿ ಮಂಗಳೂರಿನ ಕಾಗದಗಳು ಒಂದೇ ದಿವಸದಲ್ಲಿ ಸಿಕ್ಕುತ್ತಿದ್ದವು ಈಗ ಸುಮಾರು ಒಂದು ತಿಂಗಳ ಲಾಗಾಯಿತು ಎರಡು ದಿವಸಗಳ ಮೇಲೆ ಸಿಕ್ಕುತ್ತವೆ ಪುತ್ತೂರು ಪೋಸ್ಟುಮಾಸ್ತರರು ಇಲ್ಲಿಯ ಟಪ್ಪಾಲನ್ನು ಸುಮಾರು ಮಧ್ಯಾಹ್ನ ೧೧ ಘಂಟೆಗೆ ರವಾನಿಸುತ್ತಾರೆಂಬದಾಗಿ ತಿಳಿದುಬರುತ್ತದೆ ಆ ವರೆಗೆ ಮಂಗಳೂರಿನ ಟಪ್ಪಾಲ ಬಾರದ್ದರಿಂದ ಈ ವಿಳಂಬ ಆಗಲಿಕ್ಕೆ ಕಾರಣವೆಂಬದಾಗಿ ಗ್ರಹಿಸುತ್ತೇವೆ. ಆದ್ದರಿಂದ ಇನ್ನು ಮುಂದೆ ಪುತ್ತೂರು ಪೋಸ್ಟುಮಾಸ್ತರರು ಮಂಗಳೂರಿನ ಟಪ್ಪಾಲು ಬಂದ ಮೇಲೆ ಇಲ್ಲಿಗೆ ಟಪ್ಪಾಲು ರವಾನಿಸುವದಾದರೆ ಇಲ್ಲಿಯ ನಿವಾಸಿಕರಿಗೆ ಒಂದು ಮಹತ್ತಾದ ಉಪಕಾರ ಮಾಡಿದ ಹಾಗೆ ಆಗುವದು. ಮಂಗಳೂರಿನ ಟಪ್ಪಾಲು ಪುತ್ತೂರಿಗೆ ನಿತ್ಯವೂ ಮಧ್ಯಾಹ್ನ ೩॥ ಘಂಟೆಯ ಒಳಗೆ ಯಾವಾಗಲಾದರೂ ತಲ್ಪದೆ ಇರದು. ಆದ್ದರಿಂದ ಸದರಿ ಟಪ್ಪಾಲನ್ನು ಸುಮಾರು ೧೧ ಘಂಟೆ ಸಮಯಕ್ಕೆ ಅಲ್ಲಿಂದ ಇಲ್ಲಿಗೆ ರವಾನಿಸುವುದರಿಂದ ಇಲಾಖೆಯವರಿಗೆ ಯಾವ ಅನಾನುಕೂಲತೆ ಇಲ್ಲವೆಂಬದಾಗಿ ನಾವು ನಂಬುತ್ತೇವೆ.

ಇಲ್ಲಿ ಶ್ರೀಮದನಂತೇಶ್ವರ ದೇವಸ್ಥಾನದ ಬಾಬತು ಸಣ್ಣ ೨ ಕೆರೆಗಳು ಮತ್ತು ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ಬಾಬತು ದೊಡ್ಡ ೧ ಕೆರೆ ಹೀಗೆ ೩ ಕೆರೆಗಳು ಇರುತ್ತವೆ. ಆ ಪೈಕಿ ಶ್ರೀ ಮದನಂತೇಶ್ವರ ದೇವಸ್ಥಾನದ ಬಾಬತು ಕೆರೆಗಳು ಬ್ರಾಹ್ಮಣರಿಗೆ ಅಲ್ಲದೆ ಇತರರಿಗೆ ಸ್ನಾನಕ್ಕಾಗಲಿ, ವಸ್ತ್ರ ತೊಳೆಯುವುದಕ್ಕಾಗಲಿ ಅನುಕೂಲ ಇಲ್ಲದೆ ಇರುವದರಿಂದ ಎಲ್ಲಾ ಮತಸ್ಥರಿಗೆ ಅನುಕೂಲವಾಗಿರುವ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ ದೊಡ್ಡ ಕೆರೆಯ ಒಡಲಿನಲ್ಲಿ ಕಲ್ಲು ವಗೈರೆ ಕಟ್ಟಿಸಿದ್ದು ಬಹಳ ಅಜೀರ್ಣಸ್ಥಿತಿಯಲ್ಲಿದೆ ಕಾಲಕ್ರಮೇಣ ಇದರಿಂದ ಯಾರಿಗಾದರೂ ಅಪಾಯ ಸಂಭವಿಸದೆ ಇರದ್ದರಿಂದ ಸದರಿ ಕೆರೆಯ ಅಧಿಕಾರಿಗಳಾದ ಇಲ್ಲಿಯ ಮ. ರಾ ರಾ ರವಿವರ್ಮ ನರಸಿಂಹರಾಜರವರು ಈ ವಿಷಯ ಆಲೋಚಿಸುವಾಗಿ ನಂಬುತ್ತೇವೆ

ಮಂಗಳೂರು.

ಕಳೆದವಾರ ಮುನ್ಸಿಪಾಲಿಟಿಯಲ್ಲಿ ಪ್ಲೇಗು ಮರಣಗಳನ್ನಿಲ್ಲವು

ಇಲ್ಲಿ ಕಲೆಕ್ಟರರಾಗಿದ್ದ ಪಿ ಎಮ್. ಇ ಕಾಚ್ ಪಿನ್ ಜೊರೆಗಳವರು ಗೋದಾವರಿ ಜಿಲ್ಲೆಯ ಕಲೆಕ್ಟರರಾಗಿ ನೇಮಿಸಲ್ಪಟ್ಟಿರುವರು

ಇಲ್ಲಿಯ ಪೋಲೀಸು ಸೂಪರಿಂಟೆಂಡೆಂಟರವರ ಮನೆಯಿಂದ ಪದಕವನ್ನೂ ಕಲ್ಲಿಕೋಟೆಯ ಪೋಸ್ಟ್‌ಮಾಸ್ಟರರ ಮನೆಯಿಂದ ಕೆಲವು ಚಿನ್ನಾಭರಣಗಳನ್ನೂ ಕಳವು ಮಾಡಿದ ಯಾತ್ರಿನ ರಂಪತಿಗಳನ್ನು ಕಳವಾದ ವಸ್ತುಗಳೊಡನೆ ಇಲ್ಲಿಯ ಸರ್ಕಲ್ ಇನ್ಸ್‌ಪೆಕ್ಟರಾಗಿರುವ ಅಬ್ದುಲ್ ಖಾದರ್ ಸಾಹೇಬರವರು ಪತ್ತೆಮಾಡಿದ ವರಾಗಿ ತಿಳಿಯುತ್ತೇವೆ

ದೀಪಾವಳಿ ಹಬ್ಬದ ವಿಶೇಷತ್ವವನ್ನು ಕುರಿತು ಇಲ್ಲಿಯ ಸ್ಪರ್ಡೆಂಟ್ಸ್ ಬ್ರದರ್‌ಹೂಡ್'ನವರ ವಿಜ್ಞಾಪನೆ ಪ್ರಕಾರ ಡಿಸ್ಟ್ರಿಕ್ಟ್ ಪೋಲೀಸು ಸೂಪರಿಂಟೆಂಡೆಂಟರಾದ ಮ. ರಾ ರಾ ಲರ್ನಿ ಸ್ಮಿ ರಾವ್‌ರವರು ಒಂದು ಭಾಷಣವನ್ನು ಕನ್ನಡದಲ್ಲಿ ಮಾಡುವರು

ಇಲ್ಲಿಯ ಗವರ್ನಮೆಂಟ್ ಕೊಲೇಜಿನ ಸೀನಿಯರ್ ಇಂಟರ್‌ಮಿಡಿಯೇಟ್ ಕ್ಲಾಸಿನಲ್ಲಿ ಓದುತ್ತಿದ್ದ ಕೊಡಗು ಪ್ರಾಂತ್ಯದ ಪಣಿಯಂಗಪ್ಪ ಎಂಬ ವಿದ್ಯಾರ್ಥಿಯು ಕರಂಗಲ್ಪಾಡಿಯಲ್ಲಿರುವ ತನ್ನ ಬಿಡಾರ ಸಮೀಪ ಬಾವಿಯಿಂದ ನೀರು ತೆಗೆದು ಸ್ನಾನ ಮಾಡುವಾಗ ಅಕಸ್ಮಿತವಾಗಿ ಬಾವಿಗೆ ಬಿದ್ದ ಕಾಲವಾದನೆಂಬುದನ್ನು ತಿಳಿಸಲು ವಿಷಾದ ಪಡುತ್ತೇವೆ.

ಬಿ ಎಲ್ ಪರೀಕ್ಷೆ ಬ್ಯೆ ಓದುತ್ತಿದ್ದ ಸಾವಕಾರ ಬಾಜ ಪೈಗಳವರ ಪುತ್ರ ಮತ್ತು ಕೆನರಾ ಬೆಂಕಿನ ಸೆಕ್ರೆಟರಿ ಗಳಾಗಿರುವ ಮ. ರಾ ವಾಂಗಾಳ ಗೋಪಾಳ ನ್ಯಾಕರವರ ಬಿಳಿಯ ಜನಾರ್ದನ ಪೈ ಎಂಬವರು ಈ ತಿಂಗಳ ತಾ ೧೫ನೇ ರಾತ್ರೆ ಅಕಸ್ಮಿತವಾಗಿ ಮೆಲಗಿದ್ದಲ್ಲಿಯೇ ಹೃದಯದ ರಕ್ತ ಚಲನೆಯು ನಿಂತು ಹೋಗಿ ಗತಿಸಿಹೋದರೆಂಬುದನ್ನು ತಿಳಿಸಲು ವಿಷಾದಪಡುತ್ತೇವೆ ಗತಿಸಿಹೋದವರ ನಿಂಟರಿಷ್ಟರೊಡನೆ ಸಹಸಂತಾಪವನ್ನು ಈ ಮೂಲಕ ಸೂಚಿಸಿರುವೆವೆಲ್ಲದೆ ಅತಿ ವಿಶೇಷವಾದ ಸಂತಾಪವು ಪತಿವಿಯೋಗದಿಂದ ಪ್ರಾಪ್ತವಾಗಿರುವ ಮೃತರ ಅಪ್ರಾಯಸ್ಥ ಸತಿಗೆ ಮನೋಶಾಂತಿಯನ್ನು ದೇವರು ದಯಪಾಲಿಸಲೆಂಬುದಾಗಿ ಪ್ರಾರ್ಥಿಸುತ್ತೇವೆ.

ಈ ಸಂಜಿಕೆಯ ಅಗ್ರಲೇಖವನ್ನು ಬರೆದಾದ ನಂತರ ಮೈಸೂರು ಸಂಸ್ಥಾನದ ಮುಖ್ಯ ಪಟ್ಟಣವಾದ ಮೈಸೂರಿನಿಂದ ಪಶ್ಚಿಮ ಕರಾವಳಿಯಲ್ಲಿರುವ ಮಲೆಬಾರಿನ ತಲಜೇರಿ ಬಂದರಕ್ಕೆ ರೈಲ್ವೆ ಮಾರ್ಗವನ್ನು ಹಾಕಿಸುವ ವಿಚಾರದಲ್ಲಿ ಮದ್ರಾಸು ಸರಕಾರದವರು ತಲಜೇರಿ ಬಂದರದಲ್ಲಿ ಧಕ್ಕೆ ಇತ್ಯಾದಿಗಳನ್ನು ಕಟ್ಟಿಸಲು ರೂ. ೨,೬೦,೦೦೦ವನ್ನು ಸೆಂಕ್ಷನು ಮಾಡಿರುವರೆಂಬದಾಗಿ ತಿಳಿಯುತ್ತೇವೆ. ಹೀಗೆ ಸೆಂಕ್ಷನು ಆದ ಹಣದಲ್ಲಿ ಒಂದು ಲಕ್ಷ ರೂಪಾಯಿಗಳು ೧೯೧೫-೧೬ನೇ ವರುಷದಲ್ಲಿಯೇ ಖರ್ಚಿನ ಬಗ್ಗೆ ಕೊಡೋಣಾಗುವದು.

ಅಮ್ಮೆಂಬಳ ಸುಬ್ರಾವ್ ಪೈ ಮೆಮೋರಿಯಲ್ ಫಂಡಿಗೆ ಕಳದ ಮಾರ್ಚ್ ತಿಂಗಳ ತಾ ೩೧ರ ನಂತರ ಮ॥ ರಾ॥ ರಾ॥ ಕಾರ್ಕಳ ಶ್ರೀನಿವಾಸರಾಯರು ರೂ. ೫೦, ಮ॥ ರಾ॥ ರಾ॥ ಪಣಂಬೂರು ನಾರಾಯಣ ಪೈಜಪ್ಪಬಂಡಾರಿಗಳು ರೂ. ೧೦೧, ಮ॥ ರಾ॥ ರಾ॥ ರಂಗಪೈಗಳವರು ರೂ ೧೦೧, ಮ॥ ರಾ॥ ರಾ॥ ಬಿ ವಿ ಬಾಳಿಗರವರು ರೂ ೫ ಪ್ರಕಾರ ವಂತಿಗೆ ಕೊಟ್ಟಿರುತ್ತಾರೆ. ಒಟ್ಟಿಗೆ ಈ ತನಕ ವಸೂಲಾದ ಮೊಬಲಗು ರೂ ೧೫೫೫ ಆಗಿರುತ್ತದೆ

ಅಮ್ಮೆಂಬಳ ಸುಬ್ರಾವ್ ಪೈಗಳವರ ಸ್ಮಾರಕ ದಿನವು ಇದೇ ತಿಂಗಳ ತಾ ೧೫ರಲ್ಲಿ ಸಾಯಂಕಾಲ ಪಂಟೆ ೪ಕ್ಕೆ ಕೆನರಾ ಹೈಸ್ಕೂಲಿನಲ್ಲಿ ಆಚರಿಸಲ್ಪಡುವುದು ಈ ದಿನಾಚರಣೆಯಲ್ಲಿ ಬಾಗಸ್ಥರಾಗಿರತಕ್ಕವರೆಲ್ಲರೂ ಈ ದಿನ ಕೆನರಾ ಹೈಸ್ಕೂಲಿಗೆ ದಯಮಾಡಿ ಒರಬೇಕೆಂಬ ಸುಬ್ರಾವ್ ಮೆಮೋರಿಯಲ್ ಫಂಡಿನ ಅಧಿಕಾರಿಗಳ ವಿಜ್ಞಾಪನೆ ಇರುವದು

ಮದ್ರಾಸಿನಲ್ಲಿ ಏರ್ಪಾದಿಸಲ್ಪಡುವ ಪ್ರದರ್ಶನವು.

ಇದೇ ಬರುವ ಡಿಸೆಂಬರ ತಿಂಗಳಿನಲ್ಲಿ ಮದ್ರಾಸಿನಲ್ಲಿ 'ಪಾರ್ಕ್ ಟೌನ್' ಎಂಬ ಪ್ರತಿವರ್ಷದಲ್ಲಿಯೂ ನಡೆಯುವ ಕಿರ್ನವಕಾಲದಲ್ಲಿ ಒಂದು ಪ್ರದರ್ಶನವು ಏರ್ಪಾದಿಸಲ್ಪಡುವದೆಂಬದಾಗಿ ಹಿಂದಿನ ಒಂದು ಸಂಚಿಕೆಯಲ್ಲಿ ಪ್ರಕಟಿಸಿದ್ದೆವು ಈ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಿಕೊಡಬೇಕೆಂತ ಅಪೇಕ್ಷಿಸುವವರ ಮಾಹಿತಿಗೆ ಈ ಕೆಳಗಿನ ವಿಷಯವನ್ನು ತರಬೇಕೆಂತ ಅಧಿಕಾರಿಗಳು ಅಪೇಕ್ಷಿಸಿರುತ್ತಾರೆ—ಪ್ರದರ್ಶನಕ್ಕೆ ಕಳುಹಿಸೋಣಾಗುವ ಖಾನಗಿ ವಸ್ತುಗಳ ಬ್ಯೆ ಪ್ರದರ್ಶನಾಲಯದಲ್ಲಿ ವಿಸ್ತಾರವಾದ ಸ್ಥಳಕ್ಕೆ ಆಪ್ಪದವಿಲ್ಲದ್ದರಿಂದ ನಿಯಮಿತ ಸ್ಥಳವು ಮಾತ್ರ

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O P ವಂಬ್ರ 113/1915

1 ಕೃಷ್ಣಯಂಬ್ರಾಂದ್ರಿ ಯಾನೆ ಕೃಷ್ಣಭಟ್ಟ
2. ತಿಮ್ಮಕ್ಕಾ
} ಅರ್ಜಿದಾರರು.

ಕಾಸರಗೋಡು ತಾಲೂಕು ಪೆರ್ಡಾಲ್ ಕಸಬಾ ಗ್ರಾಮದ ಖಂಡಿಗೆಯಲ್ಲಿ ವ್ಯತಪಟ್ಟ ಶಂಕರಯಂಬ್ರಾಂದ್ರಿ ಯಾನೆ ಶಂಕರಭಟ್ಟರ ಸಾಲಗಳ ವಸೂಲು ಬಗ್ಗೆ ವಾರಿಹಕ್ಕಿನ ಮೇಲೆ ಮೇಲ್ಕಂಡ 1ನೇ ಅರ್ಜಿದಾರನ ಹೆಸರಲ್ಲಿ ಸರ್ಟಿಫಿಕೇಟು ಕೊಡಬೇಕಾಗಿ ಸದರಿ ಅರ್ಜಿದಾರರು ಇ॥ ಕೊಂಡ ಮೇಲೆ ನಮೂದಿಸಿದ ಅರ್ಜಿಯನ್ನು ಸದರ ಕೋರ್ಟಿನಲ್ಲಿ ಇದೇ 1915ನೇ ನವಂಬರ ತಾರೀಕ 16ಕ್ಕೆ ತನಕೆಗೆ ಇಡೋಣಾಗಿಯದೆ. ಆಕ್ಷೇಪ ಇದ್ದವರು ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ತಾರೀಕಿನೊಳಗೆ ಜ್ಯಾಹೀರುಮಾಡತಕ್ಕದ್ದು.

ಮಂಗಳೂರು. ತಾ. 4—11—15. } A. Srinivasa Pai. ಅರ್ಜಿದಾರರ ಕಡೆಯ ವಕೀಲ

ಕೊಡೋಣಾಗುವದು. ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸುವವರು ಅಂಥಾ ವಸ್ತುಗಳ ವಿವರವನ್ನೂ ತಮ್ಮ ವಸ್ತುಗಳಿಗೆ ಬೇಕಾದ ಸ್ಥಳದ ವಿಸ್ತಾರವನ್ನೂ ಕುರಿತು ಈ ತಿಂಗಳ ತಾ. ೧೦ರೊಳಗೆ ಪ್ರದರ್ಶನದ ಕಾರ್ಯದರ್ಶಿಗಳಿಗೆ ಬರಕೊಳ್ಳಬೇಕಾಗಿರುವದು. ಇಂಥಾ ಪತ್ರಗಳು ಬಂದು ತಲ್ಪಿ ಅವುಗಳು ಪರ್ಯಾಲೋಚಿಸಲ್ಪಟ್ಟ ಮೇಲೆ ಯಾರ್ಯಾರಿಗೆ ಎಷ್ಟೆಷ್ಟು ಸ್ಥಳವು ಕೊಡಲು ಅನುಕೂಲವಾಗುವದೆಂಬುದು ಇತ್ಯರ್ಥಿಸಲ್ಪಡುವದು. ವಸ್ತುಗಳನ್ನು ಪ್ರದರ್ಶನಕ್ಕೆ ಇಡುವವರಿಂದ ಒಂದು ಚದರಿಂಚಿಕ ಆಡಿಸ್ಥಳಕ್ಕೆ ರೂಪಾಯಿ ಒಂದರ ಪ್ರಕಾರ ಫೀಸು ವಸೂಲು ಮಾಡೋಣಾಗುತ್ತದೆ. ವಸ್ತುಗಳನ್ನು ಸುರಕ್ಷಿತವಾಗಿ ಇಡುವ ಜವಾಬ್ದಾರಿಯು ಪ್ರದರ್ಶನ ಕಮ್ಮಿಟಿಯವರಮೇಲಿರದು. ವಸ್ತುಗಳನ್ನು ಪ್ರದರ್ಶನಕ್ಕೆ ಕಳುಹಿಸಿಕೊಡುವ ಮತ್ತು ಅವುಗಳನ್ನು ಹಿಂದಕ್ಕೆ ತಕ್ಕೊಂಡುಹೋಗುವ ವೆಚ್ಚವೆಲ್ಲವನ್ನು ವಸ್ತುಗಳ ಮ್ಹಾಲಿಕರು ವಹಿಸಿಕೊಳ್ಳಬೇಕಾಗಿರುವದು.

ವಿವಿಧ ವಿಷಯಗಳು.

"ಸಿಮೆಂಟ್" ಕೈಗಾರಿಕೆ.

ಸಿಮೆಂಟನ್ನು ತಯಾರ್ಮಾಡುವ ಕೆಲವು ಕಾರ್ಖಾನೆಗಳು ಹಿಂದು ದೇಶದಲ್ಲಿ ಈ ಮೊದಲೇ ಸ್ಥಾಪಿಸಲ್ಪಟ್ಟು ನಡೆಯುತ್ತಿವೆ. ಅದರೆ ಅವುಗಳಲ್ಲಿ ತಯಾರಾಗುವ ಸಿಮೆಂಟಿಗಿಂತಲೂ ಬಹಳ ಅಗ್ಗವಾಗಿಯೂ ವಿನೂತನ ಲಕ್ಷಣವುಳ್ಳದ್ದಾಗಿಯೂ ಇರುವ ಮತ್ತೊಂದು ಜಾತಿಯ ಸಿಮೆಂಟನ್ನು ದಕ್ಷಿಣ ಮಲಬಾರ್ ಜಿಲ್ಲೆಯ ಒಬ್ಬ ಎಂಜಿನೀರೂ ಒಬ್ಬ ವಿದ್ಯಾರ್ಥಿಯೂ ಸೇರಿ ತಯಾರ್ಮಾಡಲು ಪ್ರಯತ್ನಪಟ್ಟ ತಕ್ಕ ಮಣ್ಣನ್ನು ಶೋಧಿಸಿ ಗೊತ್ತುಮಾಡಿದ್ದಾರಂತೆ. ಈ ಸಿಮೆಂಟು ಕ್ರಮಕ್ಕೂ ಬೆಂಕಿಗೂ ಕೂಡ ಜಗ್ಗದೆ ಇರುವದಂತೆ. ಇದಕ್ಕೆ ಸ್ವಲ್ಪ ಬಿಸಿ ತಟ್ಟಿದ ಕೂಡಲೆ ಬೆಂಕಿಯನ್ನು ಆರಿಸುವ ಶಕ್ತಿಯುಳ್ಳ ಒಂದು ವಿಧವಾದ ವಾಯು ವಿಶೇಷವು ಈ ಸಿಮೆಂಟಿನೊಳಗಿನಿಂದ ಹುಟ್ಟುವುದಂತೆ. ಈ ಸಿಮೆಂಟು ತಯಾರಾಗುವ ಸ್ಥಳದಲ್ಲಿ ಇದನ್ನು ಪೀಪಾಯೊಂದಕ್ಕೆ ೬ ರೂಪಾಯಿ ಬೀರೆಗೆ ಮಾರಬಹುದಂತೆ. ವ್ಯಾಪಾರಕ್ಕೆಡಲು ಅನುಕೂಲವಾಗುವ ಹಾಗೆ ಇದನ್ನು ವಿಶೇಷವಾಗಿ ತಯಾರು ಮಾಡುವ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕಾಗಿ ಇಷ್ಟರಲ್ಲಿಯೇ ಒಂದು ವರ್ತಕ ಸಂಘವು ಆ ಜಿಲ್ಲೆಯಲ್ಲಿ ಏರ್ಪಾಡಾಗುವಂತಿದೆಯೆಂದು ಕೇಳುತ್ತೇವೆ. ಇದು ಕಾರ್ಯರೂಪುಗೊಂಡರೆ ಈ ಪ್ರಯತ್ನವು ಶ್ಲಾಘ್ಯವಾಗಿಯೂ ಲಾಭಕರವಾಗಿಯೂ ಇರುವುದಲ್ಲಿ ಸಂದೇಹವಿಲ್ಲ. ವೈ ಸೂರು ಸ್ಟಾರ್

ಕರ್ನಾಟಕ ಸಾಹಿತ್ಯ ಪರಿಷತ್

ಈ ಪರಿಷತ್ತಿಗೆ ಸೇರಿದ ಮೆಂಬರರುಗಳಿಂದ ವಸೂಲಾದ ಚಂದಾ ವಿವರ:—೧. ಮಾ ಜಿ. ಎಸ್. ಬೆಟ್ಟಗೇರಿ ಗಳಾ (೭-೫-೧೫ರಲ್ಲಿ ಬಂದುದು ರೂ. ೨೫; ೨. ಮಾ ಗುಂಡೂರು ಆನಂದರಾವ್, ಪುತ್ತೂರು (೨೦-೫-೧೫ ರಂದುದು) ರೂ. ೪; ೩. ಮಾ ವಿ. ಬಿ. ಧಾರ್ವಾರ್‌ಕರ್ ಧಾರ್ವಾಡ, ರೂ. ೧೫; ೪. ಮಾ ಎಚ್. ವೆಂಕಟರಾಯ ಏ, ಹೊಳನನ ಹಳ್ಳಿ (ತುಂಕೂರು) ರೂ. ೪; ೫. ಮಾ ಮ್ಮಪ್ಪ, ಎಸ್. ಚಿಕ್ಕೋಡಿ, ರಬಕವಿ, ಜಂಖಿಂಡಿ ಸಂ. ೫೦; ೬. ಮಾ ಎಸ್. ಕೋದಂಡರಾಮಶಾಸ್ತ್ರಿ, ನ್ನಪಟ್ಟಣ, ರೂ. ೪; ೭. ಮಾ ವಿ. ಬಿ. ಜೋಷಿ, ಧಾರ್ವಾಡ ರೂ. ೨೦; ೮. ಮಾ ಎ.ಕೇಶವಯ್ಯ, ಗುಡಿಬಂಡೆ, ರೂ. ೫೦; ೯. ಮಾ ಸೋಸಲೆ ಕೃಷ್ಣಸ್ವಾಮಿ ಶಾಸ್ತ್ರಿ, ಬೆಂಗಳೂರು, ರೂ. ೪. ೧೦. ಮಾ ಬಿ. ರಾಮರಾವ್, ಮದ್ರಾಸು, ೫೦; ೧೧. ಮಾ ವೈ. ಕೃಷ್ಣಾಜಾರ್, ತುಂಕೂರು, ರೂ. ೪; ೧೨. ಮಾ ವಿ. ಬಿ. ಆಲೂರು, ಧಾರವಾಡ, ರೂ. ೧೫; ೧೩. ಆರ್. ಎಸ್ ನರಗುಂದಕರ್, ಧಾರ್ವಾಡ ೧೫; ೧೪ ಮ. ಜಿ. ಕೆ. ಮುನಿಸ್ವಾಮಯ್ಯ, ಮಾಗಡಿ, ರೂ. ೪; ೧೫. ಮಾ ಎಚ್. ಹನುಮಂತಯ್ಯ, ಚಿಕ್ಕಬಾಣಾವರ, ರೂ. ೪; ಜುಮುಲಾ ರೂ. ೨೯೪.

ನೋಟೀಸು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಕ್ರಮ ಅರ್ಜಿ ನಂಬ್ರ 12/1915

ಪಿ. ಭವಾನಿಶಾವ್—ಅರ್ಜಿದಾರ.

ಮತ್ತು

ರಘುನಾಥಯ್ಯ—ರೆಸ್ಪೊಂಡಂಟ.

ಮೃತಪಟ್ಟ ಪಣಂಬೂರು ದೇವತಾಯನ ಮ್ಯಾನೇಜ್ ಮಗನಾದ ಸದಾಶಿವನ ಆಸ್ತಿಯ ಗಾರ್ಡಿಯನನಾಗಿ ರಾಜೇಶ್ರೀ ವಕೀಲ ಪಿ. ನರಸಿಂಗರಾಯರಿನ್ನು ಮೊಕ್ತೂರು ಮಾಡಬೇಕಾಗಿ ಅರ್ಜಿದಾರನು ಕೊಟ್ಟ ಅರ್ಜಿಯು 1915ನೇ ಇಸವಿ ನವೆಂಬರ ತಾರೀಕು ೨೯ನೇಗೆ ತನಕಿಗೆ ಇಟ್ಟಿಯಲಿಂತ ಈ ಮೂಲಕ ತಿಳಿಯಪಡಿಸೋಣಾಗುತ್ತದೆ.

ಮಂಗಳೂರು. } M. Ramachander.
ತಾ. 1—11—15 } ಅರ್ಜಿದಾರನ ವಕೀಲರು.

ಇಸ್ತಿಹಾರು.

ಶ್ರೀಮಜ್ಜಗದ್ಗುರು ಸಂಸ್ಥಾನ ಶ್ರೀಂಗೇರಿ ಶ್ರೀಮಠದ ಆಚಾರವಿಚಾರಾಧಿಕಾರಸ್ಥಾನದಿಂದ

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿರುವ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿರುವ ಶ್ರೀಮಠದ ಶಿಷ್ಯ ಜನರುಗಳ ಆಚಾರವಿಚಾರ ನಿಷ್ಠತಕ್ಕ ಬ್ಯೆ ತಾಲೂಕು ವಾರು ನೌಕರರು ಬೇಕಾಗಿರುತ್ತದೆ. ಪ್ರತಿ ಒಂದು ತಾಲೂಕಿಗೆ ಗುತ್ತಿಗೆ ಕೊಡಲ್ಪಡುತ್ತೆ. ಗುತ್ತಿಗೆ ರೂಪಾಯಿ ಒಂದರ ಮಂಜೂರಾದ ಪೊಲಿಲಗಿನಕ್ಕೆ ರೂಪಾಯಿ ಒಂದರ ನಾಲ್ಕಾಣೆಗಳು ಮಂಗಡವಾಗಿ ಗಾವತಿಬೇಕು. ಬಾಕೀ ಪೊಲಿಲಗಿಗೆ ಇತರರಿಗೆ ಯಾವ ವಿಧವಿಂದಲೂ ಪರಾಧೀನವಾಗದೆ, ಸ್ವಂತಖಾತೆಯಲ್ಲಿರುವ ಜಮಾನು ಸೆಕ್ಯೂರಿಟಿ ಕೊಡಬೇಕು. ಈ ಪರತ್ತಿಗೆ ಬಂದಪಟ್ಟ ಅಪೇಕ್ಷೆನತಕ್ಕವರು ಬ್ರಾಹ್ಮಣರಾಗಿಯೇ ಇರಬೇಕು. ಯಾವ ತಾಲೂಕು ಯಾರು ಅಪೇಕ್ಷಿಸುತ್ತಾರೊ ಅವರು ತಮ್ಮ ಅಪೇಕ್ಷೆಯ ಸವಾಲು ಎಷ್ಟರೂಪಾಯಿಗಳಿಗೆ ಎಂಬುದು ಸ್ಪಷ್ಟವಾಗಿ ನಮೂದಿಸಿ ಇದೇ ಇಸವಿ ದಶೆಂಬರ್ ತಿಂಗಳ ಅಖೈರು ಒಳಗಾಗಿ ಶ್ರೀಂಗೇರಿ ಶ್ರೀಮಠದ ಆಚಾರ ವಿಚಾರಾಧಿಕಾರಸ್ಥಾನಕ್ಕೆ ದರಖಾಸ್ತು ಅರ್ಜಿ ಒರದುಕೊಳ್ಳಬೇಕು. ಮತ್ತೂ ಹಾಗೆ ಗುತ್ತಿಗೆಗೆ ಪಡದುಕೊಳ್ಳತಕ್ಕವರು ಸಂಸ್ಥಾನದವರು ಅವ್ವಜೆಕೊಡಿಸುವ ವಿಮೊಪ್ರಕಾರಾ ನಡಕೊಳ್ಳಲು ಬದ್ಧರಾಗಿರಬೇಕು. ಯಾವ ಗುತ್ತಿಗೆಗೂ ಎರಡು ವರ್ಷಕ್ಕೆ ಮೇಲ್ಪಟ್ಟ ವಾಯಿದೆ ದೊರೆಯಲಾರದು. ಮತ್ತೂ ಯಾವ ತಾಲೂಕನ್ನು ಯಾರು ಗುತ್ತಿಗೆಗೆ ಅಪೇಕ್ಷಿಸುತ್ತಾರೊ ಅಂಥವರು ತಾವು ಇಷ್ಟು, ಬೇರೆಜನ ಜಮಿನುದಾರರೆಂಬುವದಕ್ಕೂ ಒಳ್ಳೆಯೋಗ್ಯತೆ ಉಳ್ಳವರೆಂಬುವದಕ್ಕೂ ಪಟೆಲರೂ ಮತ್ತೂ ಆ ತಾಲೂಕಿನ ಶಿಷ್ಯಜನರಲ್ಲಿ ಪ್ರಮುಖರಾದ ಐದು ಜನರ ಸರ್ಟಿಫಿಕೇಟ್ ಸಹಾ ಅವರ ದರಖಾಸ್ತಿನ ಸಂಗಡ ಕಳುಹಿಸತಕ್ಕದ್ದು. ಹೆಚ್ಚು ತಪ್ಸೀಲು ತಿಳಿಯಲಪೇಕ್ಷಿಸತಕ್ಕವರು ಖುದ್ದು ಹಾಜರಾಗಿ ತಿಳಿದುಕೊಳ್ಳಬಹುದು.

ತಾ. 10—10—15. } ಐ. ರಾಮೇಶ್ವರ ಶಾಸ್ತ್ರಿ.
ನೋಟ್ಸ್ ಶ್ರೀಂಗೇರಿ. } ಶ್ರೀಂಗೇರಿ ಆ. ವಿ. ಅಧಿಕಾರಿ.

ಡಾಕ್ಟಾರ್ ಪಿ. ಡಿ'ಲಿಮಾ.

ಎಂಬ

ದಂತ ವೈದ್ಯರು!

ಇನ್ನು ಇಲ್ಲಿ ಸ್ವಲ್ಪ ಕಾಲಮಯದವರೆಗಿರುವರು. ಬಿದ್ದು ಹೋದ ಅಥವಾ ಹುಳು ಹಿಡಿದು ಹಾಳಾದ ಹಲ್ಲುಗಳ ಸ್ಥಳಗಳಲ್ಲಿ ಏನೂ ಕುಂದು ಕೊರತೆಗಳಿಲ್ಲದಂತೆ ಕೃತಕ ದಂತಗಳನ್ನು ತಯ್ಯಾರಿಸಿಡುವರು.

ದರಗಳು ಸುಲಭ.

ವೈದಾಸಿನ ಇದಿರುಗಡೆಯಲ್ಲಿರುವ ಮೆ! ಪರ್ಲ್‌ರ ಶೋಪಿನ ಮಾಳಿಗೆಯಲ್ಲಿ ದಂತ ಚಿಕಿತ್ಸೆಯು ಮಾಡೋಣಾಗುವದು.

ವಿಳಾಸ:—

ಡಾಕ್ಟಾರ್ ಪಿ. ಡಿ'ಲಿಮಾ,
ದಂತ ವೈದ್ಯ,
ಪರ್ಲ್‌ರ ಶೋಪು, ಮಂಗಳೂರು.

ಜೀನಸು ಧಾರಣೆ.

ಮಸ್ಕತಿ ಅಕ್ಕಿ	6—0—0	6—8—0
ಗಾಡಿ ರಾಶಿ ,,	5—1—0	5—4—0
ಗುಡ್ಡು ,,	5—6—0	5—12—0
ಅವ್ವಲ್ ಬೆಲ್ತಿಗೆ ,,	6—8—0	7—0—0
ಗುಡ್ಡು ಬೆಲ್ತಿಗೆ ,,	6—14—0	6—2—0
ರಂಗೂನು ಬೆಲ್ತಿಗೆ ಗೋಣಿ ೧ರ	10—8—0	10—12—0
ಗೋದಿ ಗೋಣಿ ೧ರ	13—0—0	13—8—0
ಹುರುಳಿ ಗೋಣಿ ೧ರ	6—6—0	7—12—0
ಕಡಲೆ ಗೋಣಿ ೧ರ ಬೊಂಬ್ಬೆ	9—4—0	9—12—0
ತೊಗರಿ ಗ್ವೋಣಿ ೧ರ	12—8—0	13—12—0
ತೊಗರಿ ಬೇಳೆ ಗೋಣಿ ೧ರ	12—8—0	15—8—0
ಉದ್ದು ಗೋಣಿ ೧ರ	11—8—0	12—0—0
ಊರುಬೆಲ್ಲ ಖಂಡಿ ೧ರ	... ...	75—0—0
ಉಪ್ಪು ಗೋಣಿ ೧ರ	3—5—0	3—7—0
ಪೊಪ್ರಿ ಖಂಡಿ ೧ರ	75—0—0	82—8—0
ಪೊಪ್ಪಸಿಂಡಿ ಖಂಡಿ ೧ರ	20—0—0	21—0—0
ಎಳ್ಳಿಂಡಿ ಖಂಡಿ ೧ರ ಬೊಂಬ್ಬೆ	20—0—0	31—4—0
ಪೊಪ್ರಿ ಎಣ್ಣೆ ಮಣ ೧ರ.	6—7—0	6—14—0
ಎಳ್ಳೆಣ್ಣೆ ಮಣ ೧ರ(ಶುದ್ಧಾಸನ)	4—5—0	4—12—0
ಚಮಿನೆ ಎಣ್ಣೆ ಕೆಟ್ಟಿಗೆ ೧ರ	4—9—0	5—0—0
ಪೋರಿಸ್ ಪಕ್ಕ ತಿ ಮಣ ೧ರ.	4—0—0	4—6—0
ಕಾಫಿ ಖಂಡಿ ೧ರ.	240—0—0	252—0—0
ಹೊಸಬಲಗೋಟು ಖಂಡಿ೧ರ.	94—0—0	98—0—0
ಹೊಸ ಗೇರುಬೀಜ ಮುಡಿ ೧ರ		3—0—0
ಕಬ್ಬಿಣ ಖಂಡಿ ೧ರ.		50—0—0
ತಾಂಬ್ರ ಕಗದು ಮಣ ೧ರ.		20—0—0
ತಾಂಬ್ರ ಪಾತ್ರೆಳು ಮಣ ೧ರ		22—0—0
ಜೀನ ಬೆಳ್ಳಿ ತೀರು ೧ರ.		18—12—0
ಪಚ್ಚೆ ಹೆಸರು ಮುಡಿ ೧ರ	5—10—0	5—12—0

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಬರೆಯಲು ಅಗತ್ಯವುಳ್ಳ

1916ನೇ ವರುಷದ

ಪೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಲ್ಲಿ ಕೊಡಿಸೋಣಾ ವ ಪ್ರೊಸೆಸ್ ಫೀಸು, ಭತ್ತೆ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋ ಕಾಗುವ ದರಗಳ ಪಟ್ಟಿ, ವಕೀಲರ ರುಸು , ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ಟ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ಲಾನು ಬಾತಿಗೆ ಚೀಟು, ರಿಜಿಸ್ಟ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮುಗಳು, ಶಕಗಳ ಪೂರ್ಣಾದಿಕೆ ಪಟ್ಟಿ ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬತ್ತಿ ಎಳೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀಯ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರಿಗೆ ವರ್ತಮಾನರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೇಟು ಬುಕ್.

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8
ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4

ವ್ಯಾಪಾರಸ್ಥರಿಗೂ ರಿಯಾಯಿತಿ ದರಗಳಿವೆ

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳ ಹೊಲಿದ ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ

ಡೈರಿಗಳು ಸಿಕ್ಕುವ ವಿಳಾಸ — ಶಾರದಾ ಭಾಷಪಿನೆ,
ರಥಬೀದಿ, ಮಂಗಳೂರು

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲ ಬೇಡ ಯಾಕಂದರೆ, ಆಸ್ತಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಜಿಗಂತ ರೈಲ್ವೆ ಸ್ಟೇಷನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೈದುದು ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಸ್ಸೆನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರ ಕ್ತದೆ ಅಲ್ಲಿ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುಟ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಆಗುಸಂಭವತ್ತದೆ ಆದರೆ ಅಂತಹ ಅಪಾಯಗಳಿಗಾದರು ಹೇತವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಆರು ಚಿಯಸಗಲಿ ಗಂಧವಾಗಲಿ ಪುರುವದಿಲ್ಲ ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ ಕ್ಷಾಸ ಕೆಮ್ಮು, ಕ್ಷಯ, ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯ ವಿದೆಯೋ ಅಂತಹ ಶ್ವಾಸಕೋಶ ಕ್ಷಯದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ತಾಖಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಊಲನ್ ಮಾರ್ಟ್,
ಮಂಗಳೂರು. ದ. ಕ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ.

O. S. 381/1914 R. E P. 619/1915

ಹಾಜಿ ಅಬ್ದುಲ ಸತಾರ ಸೇಟ್—ವಾದಿ ಅಮಜಾರಿ ಅರ್ಜಿದಾರ.

1. ಇಜ್ಜಬ್ಬ್ಯಾರಿ—ಕಾಟುಬ್ಯಾರಿ ಮಗ
2. ಇನ್ನಮ್ಮ—ಕಾಟುಬ್ಯಾರಿ ಮಗಳು } ಮದಲ್ಕರುವರು ಪ್ರತಿವಾದಿರು. ರೆಸ್ಪೊಂಡೆಂಟರು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸ ಪಡೀನಂದರೆ —ಸದರಿ ಪ್ರತಿವಾದಿ ಬಾಬತು ಮೇಲಿನ ಅವ ಜಾರಿಯಲ್ಲಿ ಜಪ್ತಾದ ವಂಗಳೂರು ಪೋರ್ಟಿನ ನಂಬ್ರ 31ನೇ ಸಯದಗಾಂಜಾ ಎಂಬ ಕೆಲಸಿಕೊಟ್ಟಿ ವ ಅದಕ್ಕೆ ಒಪ್ಪಿದ ಹಳತು ಸಣ್ಣ ದೋಣಿ 1 ಹ್ಯಾಪ್ಟಗಳು, ಹಗ್ಗಗಳು, ಲಾಜಗಳು, ಟಾಂಕೆ ವಗೈರೆ ಸೊತ್ತು ತಣ್ಣೀರಬಾವಿ ಗ್ರಾಮದ ಬೆಂಗ್ರೆಯಲ್ಲಿ ಇದ್ದ ಸ್ಥಳದಲ್ಲಿಯೆ ಇದೇ 1915ನೇ ನವಂಬರ ತಾ 22ಲ್ಲಿ ಏಲಂ ಆಗುವರೆ ಸದರಿ ಅಮಲಜಾರಿಯಲ್ಲಿ ಆದ ಹುಕುಂ ಪ್ರಕಾರ ನಿಶ್ಚಯಿಸಲ್ಪಟ್ಟಿದೆ

ತಾ 1—11—1915 S Narsinga Naik.
Pleader for petitioner

ನೋಟೀಸು.

ನನಗೆ ಕುಂಜಾರು ಬಾವಬ್ಯಾರಿ ಮಗಳು ಐಸಮ್ಮನು 1918ನೇ ಇಸವಿ ಎಪ್ರಿಲ್ ತಾ 30ರಲ್ಲಿ ರೂಪಾಯಿ 150ಕ್ಕೆ ಒರಕೊಟ್ಟ ಅಡವು ಸೈವೇಜಿನ ಸೆಂಗಡ ಕೊಟ್ಟ ಜೈವಳ್ಳಿ ಗ್ರಾಮದ ಸೂರಿ ನಂಬ್ರ 11ನೇ ಕಟ್ಟಾಮಿ ವರ್ಗದ ಬಾಬತು ಮಂಜೇಶ್ವರ ಸಬ್ ರಿಜಿಸ್ಟ್ರಿ ಆಫೀಸಿನ 1ನೇ ಪುಸ್ತಕದ 57ನೇ ಸಂತಿಕೆಯ 399 400ನೇ ಪುಟಗಳಲ್ಲಿ ನಂಬ್ರ 1 ಸೇಗೆ ರಿಜಿಸ್ಟ್ರಿಯಾಗಿ ಕ್ರಯಚೀಟಿ ನಾನು ನನ್ನ ಖರ್ಚಿನಿಂದ ಮಂಗಳೂರಿಗೆ ಬರುವಾಗ್ಗೆ ದಿನ್ನಹೋಗಿಯದೆ ತಿಕ್ಕಿದವರು ಅದನ್ನು ನನಗೆ ಕೊಟ್ಟಿಲ್ಲ ಅವರಿಗೆ ರೂಪಾಯಿ 4ನ್ನು ಇನಾಮಾಗಿ ಕೊಡಲಿಕ್ಕೆ ಕೂಲು ಇರುತ್ತೇನೆ

ಕುಬನೂರು ಗ್ರಾಮದಲ್ಲಿರುವ ಉಪರಳೆ ಬಾವುಬ್ಯಾರಿ ಮಗ

ತಾ 1ನೇ ನವಂಬರ 1915 ಪೋಕ್ಕಬ್ಯಾರಿ ರುಜು.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕಿದೆ ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ ಭರವಸೆ ಕವಿತನ!!!

ಶತಮೂಲಿಕಾ ಆಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ಲೈಲ್ಯ, ಸದರ್ಶನ ನೂಲನಿ, ಗರುಡದ್ರಕ್ಷಕ, ಆನಂದವನ ವಿಲಾಸ, ಕಾಟ್ ಲಿವರ್ ಜ್ಞೀವನಿ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ

೧ ಕಂಠೀರವ ಈ ಸಿದ್ಧೌಷಧಾಯನದಿಂದ, ಲಕ್ಷಣ ಶುದ್ಧವಾಗಿ ಎಲ್ಲಾ ಕುಷ್ಠಮೇಹ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ 16 ಮಾತ್ರೆ ರೂ 1

೨ ಸೂರ್ಯಪ್ರಭಾ ಇದು ಸ್ತ್ರೀಯರ ಸರ್ವ ರೋಗಗಳನ್ನು ಶೀಘ್ರವಾಗಿ ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ ಬಾಟ್ಲಿ 1ಕ್ಕೆ ರೂ 1—4—0

೩ ಅಶೋಕಾರಿಷ್ಟ ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ ಬಾಟ್ಲಿ 1ಕ್ಕೆ ರೂ 1—4—0

೪ ಗರ್ಭ ಪ್ರಪ್ಟಿಕರಣ ಇದು ಸ್ತ್ರೀಯರ ಎಲ್ಲಾ ಜಿವ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಪುತ್ರಸಂತಾನವನ್ನೂ ಕೊಡುತ್ತದೆ ತೊಲೆ 6ಕ್ಕೆ ರೂ 1

೫ ಮಧುಮಾಧವಿ ಪಿಲ್ಸ್ ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ ಮಾತ್ರೆ 60ಕ್ಕೆ ರೂ 2

೬ ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ ಮಾತ್ರೆ 48ಕ್ಕೆ 1—8—0

೭ ದರ್ಬಾರ್ ಬ್ಯೂಟಿ ವೆನ್ನಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲ್ಲೆಗಳೂ ನಾಶವಾಗಿ ಮುಖವು ಪೂರ್ಣಚಂದ್ರನಂತೆ ಹೊಳೆಯುತ್ತದೆ ಬಾಟ್ಲಿ 1ಕ್ಕೆ 0—12—0

೮ ಅಮೃತಸಾರ. ಇದು ವಾಯು ದುರ್ಮಾನ್ ಎಂಬ ಬಲಿಷ್ಠ ಶೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ 1.

N B.—ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಿಗಳಿಗಾಗುವ ಪ್ರಾಯೋಗಿಕ ವಿಷಯಗಳನ್ನು ಕ್ರಮವೆ. ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಕಾರ್ಯ, ಮೆನೇಜರ್.

ಕನ್ನಡ ಕಥೆ ಪುಸ್ತಕಗಳು.

ಶುಕಸಪ್ತತಿ ೭೦ ಕಥೆಗಳು ಸಚಿತ್ರ	೨	೦	೦	ತೊರವೆ ರಾಮಾಯಣ ಪೀಯೂ	೧	೦	೦
ಸಚಿತ್ರ ವಿದ್ಯಾಮಂಜರಿ ಕಥೆಗಳು	೧	೮	೦	ಜೈನಿ ಭಾರತ ಗ್ರೇಜಅವ್ಸಲ್	೧	೪	೦
,, ಭಟ್ಟವಿರಚಿತಾದಿಶಂಕರಾಯನ ಕಥೆ	೧	೮	೦	,, ಡುಯ್ಯೂ	೦	೧೦	೦
ಸಚಿತ್ರ ರಾಮಾಯಣ ಕಥಾಸಂಗ್ರಹ				,, ಪೀಯೂ	೦	೬	೦
ಗ್ರೇಜ್ ಅವ್ಸಲ್	೧	೪	೦	ಗದ ಪರ್ವ ಭಾರತ	೨	೮	೦
,, ರಫ್ ಡುಯ್ಯೂ	೦	೧೨	೦	ಗತಿಸ್ಕೃಷ್ಣ ಭಾಗವತ ಗ್ರೇಜಅ	೫	೦	೦
ಜೈಮಿನಿ ಭಾರತ ಕಥಾಸಂಗ್ರಹ	೦	೧೨	೦	,, ಡಯ್ಯೂ	೪	೦	೦
ಕೃಷ್ಣಚೋಧಾಮೃತ	೦	೧೦	೦				
ಭಾರತ ಕಥಾಸಂಗ್ರಹ	೦	೬	೦	**ಪದಗಳು.**			
ಪ್ರಭಾವತಿ ಪುಕನು ಜರ ಕಥೆ	೦	೫	೦	ಪದ್ಮಪತ್ಯಕರ ಗಳೆ ಭಾಗ	೧	೦	೦
ಬಕಾವಳಿ ಕಥೆ	೦	೪	೦	ಪುರಂದರದಾಸರ ಕೀರ್ತನೆಗಳು ಅ	೦	೬	೦
ಮದನಮೋಹನರಾಜ ಚರಿತ್ರೆ	೦	೬	೦	,, ಗಳೂರು	೦	೬	೦
ಚಂಡಲಕಾಮನಾ ಕಥೆ	೦	೪	೦	ಕನಕದಾಸರ ಕೀರ್ತನೆಗಳು	೦	೪	೦
ಸಾಧ್ವಿ ಗೆಯವ ಜ ಕಥೆ		೫	೦	ಕರಪದ ಸಪಟೀರದಾಸಕೀರ್ತನೆ	೦	೩	೦
ಪತಿವ್ರತಾಮಹಾತ್ಮೆ ಕಥೆ	೦	೬	೦	ಗೀತಗೋವಿಂದ	೦	೪	೦
ಹರಿಶ್ಚಂದ್ರನ ಕಥೆ		೪	೦	ಗೀತಾಲಹರಿ ಕ	೦	೫	೦
ನಳದಮಯಂತಿಯರ ಕಥೆ	೦	೬		ಗೀತಾವಳಿ ದಾಸವಾಲಿಕಾ	೦	೩	೦
ಬತ್ತೀಸಪುತ್ಥಳಿ ಕಥೆ	೦	೫	೦	ಗಿತಿಕಾ ಕರಂಗಿ	೦	೪	೦
ಹುಚ್ಚುಮಂಡಿಗೆಯ ಕಥೆ	೦	೬	೦	ಬಂಗಲ ತಮಿಳಿನ ಪದ	೦	೦	೬
ಹಾಸ್ಯಸುಂದರಿ ಶುಕವಾಣಿ ಕಥೆ	೦	೪	೦	ಪಳೆಯ ತಿರುಪ್ಪಾವು	೦	೬	
ಮಂಜ ಪೋಷಾಶ್ಚಂಗಾರಾದು ತಕಥೆ	೦	೧೨		ಕರ ದಿವಾಸ್ವಮೋಹ	೦	೪	೦
ಹಾತಿಮತಾಯಿ ಕಥೆ	೦	೧೦		ಡ್ರೋಣಪರ್ವ	೦	೫	೦
				ಎಕ್ಕೋಕೋಭಾನೆ	೦	೧೦	೬
ಪುರಾಣಗಳು.				ಪಾಂಡವಗೀತೆ	೧	೦	೦
ತೊರವೆರಾಮಾಯಣ ಗ್ರೇಜಅವ್ಸಲ್	೨	೦	೦	ನಿಮ್ಮಪಹಸ್ರನಾಮ (ಶ್ಲೋಕ)	೦	೨	೦
,, ಡುಯ್ಯೂ	೧	೬	೦	ಹಾರ್ಮೋನಿಯಂಪ್ಲೇಬಿಂಗ್ಸಿ	೦	೪	೦

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಊತ್ತಿನ ತರದ ಊದ್ಬತ್ತಿಗಳೂ, ಅಗರಜ, ಪಿತ್ಳ, ರಶಾಂಗ, ಗಂಧದಪುಡಿ ಮೊದಲಾದ ಸುಗಂಧದ್ರವ್ಯಗಳೂ ಒಳಗೆ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ದೊರೆಯುವುದು ಅರ್ಧಾಣೆ ಸ್ಟಾಂಪ್ರ ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಶ್ರೀ ರಾಘವೇಂದ್ರ ಸೀಲಾಸ,
ರದಬೀದಿ ಮಂಗಳೂರು

ಔಷಧಗಳು.

ಮಹಾಮಹಿಮರ ಕಾಮೇಶ್ವರೀ ಲೇಹ್ಯ:—ಒಳಗೆ ಶರೀರವನ್ನು ಕೆಲಸ ಮಾಡಿದವರೂ ಬಂಕರಾಗಿ ಸತ್ತ ಜಾಸ್ತಿಯಾದ ಬೆಲ್ಯ ಜಲೋರ್ಣ, ಎದೆನೋವು, ಶರೀರದ ಪುಸಿದಿಂದಾಗಿ ನಿಶ್ಶಕ್ತಿ ಮೊದಲಾದ ಪ್ರಕೃತಿಯಲ್ಲಿ ಏನೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಆ ಎಷ್ಟು ಕಾಂತಿಯೂ ಬರುವುದು ಸೇವನಾ ಕ್ರಮ—ಅಧ್ಯಾನವುಳ್ಳವರು 1 ಗಾವಲಿ ತೂಕ ಯಾ ಗೋಲಿಗಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರೆ ಊಟದ ಪೀಲಿ ಸೇರಿಸಿ ಕಾಲು ಕುಡಿಯಕ್ಕನ್ನ

1 ಶೀಸಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳಿದ ದುರ್ಮಾಂಸ, ತಿಮಿರ, ಬೆಳ್ಳಿ ಪರ್ಷದ ಹೂವು, ಇರಳುಕಣ್ಣು, ತಾಇಬಿಂದು ಗುಣ

ಕ್ರಯ ರೂ 0—12—0

ಮಹಾಜ್ವರಾಂಕುರ —ವಿನಕೆಮ್ಮೆನ್ಮೈತ್ರಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ 0—8—0,

ಮೇಹಮುದ್ಗರನಟಿ:—2ನೆ ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಕಾಂತಿ ಗುಣ ಡಜನ್ 1ರ ಕ್ರಯ 1—2—0

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಬಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ ಡಜನ್ ಗುಟಿಕೆಯ ಕ್ರಯ 0—12—0

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯುಳ್ಳವರು ಕೆಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ರಕ್ತಶುದ್ಧಿ:— ರಕ್ತವೇ ಮನುಷ್ಯನಿಗೆ ಮುಖ್ಯ ಪ್ರಾಣಾಧಾರಭೂತವೆಂದು ಎಲ್ಲರೂ ಒಪ್ಪುವರು ರಕ್ತವು ಕೆಟ್ಟುಹೋದ ಪಕ್ಷದಲ್ಲಿ ಬಾಯಿನಲ್ಲಿ ಹುಣ್ಣು, ಕಣ್ಣಿನೋವು, ಮೂಗಿನಲ್ಲಿ ಕ್ರಿಮಿಸೇರಿ ವಿಕೆ, ಹಲ್ಲಿನಲ್ಲಿ ರಕ್ತ, ಕೀವು ಸೋರುವುದು, ತಿಟ್ಟೆಗಳು ಹಣ್ಣಾಗೋಣ, ಮುಖದ ಮೇಲೆ ಬೊಕ್ಕೆಗಳು, ದೇಹಾದ್ಯಂತವೂ ಗಜ್ಜಿ ತುರಿಮುಂತಾದುವು ಪ್ರಾಣಗಳು, ಚರ್ಮದ ಬಣ್ಣಕೆಡೋಣ, ಕೀಲುಗಳು ಸ್ವಾಧೀನವಿಲ್ಲದಿರೋಣ, ಸೈ ಎನ್ನಿ ವಿಕಾರವಾಗಿ ಕಮ್ಮು ಚುಕ್ಕೆಗಳುಂಟಾಗುವಿಕೆ ಚರ್ಮದ ತಿವಿಗಳ, ಮೂಗು ಪೆಸರುವಿಕೆ, ನೈ ಅಶಕ್ತಿಹೊಂದಿ ಬೆಳ್ಳಗಾಗಿರುವಿಕೆ, ಮರೋಗರೋಗ, ತೊನ್ನು ಪಪೆಯೆದ್ದಿರುವುದು, ಕುಷ್ಠರೋಗ, ಪಡ, ಕಂಕಳು ಮತ್ತು ಪೈಪೆಲ್ಲಾದ ವಾರಸನಿಯಾಗಿರುವಿಕೆ, ವೀರ್ಯಗುಂದಿರೋಣ, ಉತ್ಸಾಹವಿಲ್ಲದಿರೋಣ ಹಗಲು ರಾತ್ರಿ ತೆರೆಸುಕೊಳ್ಳದಂತೆ ನಪುಂಸಕತ್ವಿರೋಣ ಇತ್ಯಾದಿ ನಾನಾವಿಧ ಬಾಧೆಗಳ ನಿವಾರಕವಾಗಿ ಈ ಔಷಧವು ಕೆಟ್ಟುವಿಷವನ್ನು ರಕ್ತದೊಳಗಿನಿಂದ ನಿವಾರಿಸುವುದಕ್ಕೆ ಬಲವತ್ತರವಾಗಿ ಉಪಯುಕ್ತವಾಗಿರುವುದು ನಮ್ಮ ರಕ್ತಶುದ್ಧಿಯೆ ಸರಿಯೆಂದು ಹೇಳುವುದರಲ್ಲಿ ಯಾವ ಸಂದೇಹವೂ ಇಲ್ಲ 21 ದಿವಸಗಳ ಉಪಯೋಗಕ್ಕೆ ಸಾಕಾಗುವಂತಹ ಪೆಟ್ಟಿಗೆ 1ಕ್ಕೆ 2 ರೂಪಾಯಿ 1 ರಿಂದ 9 ಪೆಟ್ಟಿಗೆಗಳವರೆಗೂ ವಿ. ಪಿ. ಚಾರ್ಜು 5 ಆಣೆ

ಸಿದ್ಧ ಮಕರಧ್ವಜ:— ಇದು ಹಿಂದು ವೈದ್ಯಶಾಸ್ತ್ರದಲ್ಲೆಲ್ಲಾ ಅತಿ ಬಲವತ್ತರವಾದದ್ದು ನಮ್ಮ ಸಿದ್ಧಮಕರಧ್ವಜವು ಎಲ್ಲಾವಿಧ ಜ್ವರಗಳನ್ನು, ಅಗ್ನಿಮಾಂದ್ಯ ದಿಂದುಂಟಾಗತಕ್ಕ ಅಜೀರ್ಣ ಮುಂತಾದ ರೋಗಗಳನ್ನು, ನರಗಳ ದುರ್ಬಲತೆಗೆ ಸಂಬಂಧಪಟ್ಟ ಹರಿವಾತಗಳನ್ನು ಗುಣಪಡಿಸುತ್ತದೆ ಇಷ್ಟಲ್ಲದೆ ಶ್ವಾಸಕೋಶಗಳಲ್ಲುಂಟಾಗತಕ್ಕ ಬಾಧೆಗಳನ್ನು ನಿವೃತ್ತಿಮಾಡಿ, ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ವಿಶೇಷ ಹೇಳಿಕೆಪ್ರಯೋಜನವೇನು? ಪುತ್ರಕ್ಕೆ ನಮ್ಮ ಮಕರಧ್ವಜವೆಂಬ ವಜ್ರಾಯುಧಕ್ಕೆ ಬಗ್ಗದ ವ್ಯಾಧಿಯು ಪ್ರಪಂಚದಲ್ಲಿಯೇ ಇಲ್ಲ ನೋಡಿರಿ, ಎಣೆಯಿಲ್ಲದ ಈ ಸಿದ್ಧ ಮಕರಧ್ವಜವನ್ನು ಉಪಯೋಗಿಸಿದುದೇ ಆದರೆ ನಿಮ್ಮ ಶತಮಾನಪೂರ್ತಿ ಶಾಂತಿಸೇಚನವಹೋಪ್ಪವರ್ಲ್ಲಿ (ನೂರ ವರ್ಷಕ್ಕೆ ಮಾತಿಕೊಳ್ಳುವ ಶಾಂತಿಯಲ್ಲಿ) ಕೂಡ ನಿಮ್ಮ ಪುರುಷಶಕ್ತಿಯೂ, ಪ್ರಾಯವೂ ಉತ್ಸಾಹವೂ ಕೆಗುವುದಿಲ್ಲ ಇದರ ಬೆಲೆ ತೊಲೆ 1ಕ್ಕೆ 80 ರೂಪಾಯಿ ಒಂದು ವಾರಕ್ಕೆ ಸಾಕಾಗುವ ಔಷಧಕ್ಕೆ 3 ರೂಪಾಯಿ. ವಿ. ಪಿ. ಚಾರ್ಜು ಪ್ರತ್ಯೇಕವು

ವಾಯುಸಂಹಾರಿ:— ಈ ಔಷಧದಿಂದ ದೇಹದಲ್ಲಿ ಉಂಟಾಗತಕ್ಕ ಕಾಲುಕೈ ಕೀಲುಹಿಡಿತ, ಪಕ್ಷವಾತ, ಶೂಲ, ತಲೆ ರಿವಾತ, ತಲೆನೋವು, ಪಾರ್ಶ್ವವಾತವು, ನೆಕಲವಿಧ ವಾತಗಳು ಮಲಜಲಕಟ್ಟಿರುವಿಕೆ ಗುಣವಾಗುವದು ಡಬ್ಬಿ 1ಕ್ಕೆ 1 ರೂಪಾಯಿ 1 ರಿಂದ 3 ಡಬ್ಬಿಗಳವರಿಗೂ ವಿ ಪಿ ಚಾರ್ಜು 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲ. ವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರೆಯಬೇಕು

MY ADDRESS.

P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿಧಿ, ತಂಜಾವೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಸಿಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಆಲಾಯಿದ.

ಶತಧೌತ ಘೃತ

ಗಳೆಂಬ ಈ ಘೃತವು ಪೈಲ್ಸ್ ಒಯ್ಡೊ ಎಂಬ ಗುಹ್ಯರೋಗವನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಮಿ ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎಂ ಎಸ್ ಎ. ಎಮ್ ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
೧೨೨ ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್.

ತಂತೀ ವಿಳಾಸ —"ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಒಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಜಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಟರು:—ದಿ. ಊಲನ್ ಮಾರ್ಟ್,
ಗ್ರಾಥವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

B. Narasimha Prabhu,

Bantval, (SOUTH CANARA).

AGENT FOR

Malabar and South Canara.

ಕನ್ನಡ ಪದ್ಯ ವ. ಗದ್ಯ ಗ್ರಂಥಗಳು.

ಶ್ರೀಮದ್ಭಿಷ್ಣು ಭಾಗವತ ದ್ವಾದಶಸ್ಕಂಧ ಅವ್ವಲ್	5	0	0
ಡಿ. ದುಯ್ಯಂ ಪ್ರತಿ.	3	8	0
ಮಹಾಭಾರತ 18 ಪರ್ವಗಳು	4	8	0
ಡಿ. 10 ಡಿ.	2	0	0
ಡಿ. 8 ಡಿ. ಅವ್ವಲ್ ಪ್ರತಿ	1	8	0
ಡಿ. ದುಯ್ಯಂ	1	0	0
ಜೈಮಿನಿಭಾರತ ಪ್ರತಿಪದ ಶ್ಲೋಕಾತಾತ್ಪರ್ಯ ಅವ್ವಲ್	5	0	0
ಡಿ. ದುಯ್ಯಂ	3	8	0
ಜೈಮಿನಿ ಭಾರತ ಮೂಲ ಅವ್ವಲ್	1	8	0
ಡಿ. ದುಯ್ಯಂ ಡಿ.	0	12	0
ತೊರವೆ ರಾಮಾಯಣ ಅವ್ವಲ್	2	4	0
ಡಿ. ದುಯ್ಯಂ	1	0	0
ರಾಜಶೇಖರ ವಿಲಾಸ ಕನ್ನಡ ಚಂಪು ಗ್ರಂಥ	1	8	0
ವೆಂಕಟಗಿರಿ ಮಹಾತ್ಮೆ ಮತ್ತು ಪದ್ಮಾವತಿ ಕಲ್ಯಾಣ	1	8	0
ಅಧ್ಯಾತ್ಮವಿಚಾರ ವೇದಾಂತ ಗ್ರಂಥ	2	4	0
ಮನುವಂಶಾವಳಿ	1	0	0
ಚೆನ್ನಬಸವ ಪುರಾಣ	0	12	0
ಸಟೀಕ ವಿಷ್ಣುಕರ್ಮ ಪುರಾಣ ಅವ್ವಲ್	1	0	0
ಡಿ. ದುಯ್ಯಂ	0	12	0
ದೊಡ್ಡ ಪುಸ್ತಕಪ್ರತಿ ಇದರಲ್ಲಿ ೧೦ ಶಾಸ್ತ್ರೋಕ್ತ ಮತ್ತು ನೀತಿಮಾರ್ಗ ಕಥೆಗಳು. ಅಡಗಿದೆ ಅವ್ವಲ್ ಪ್ರತಿ	1	8	0
ಬ್ರಹತ್ಕಥಾ ಮಂಜರಿ.	0	12	0
ಕಾಂತಿಮತಿ ಸುಬೋಧಾಮೃತ ಕಥೆ	0	14	0
ವಿಷ್ಣುಶರ್ಮ ವಂಚತಂತ್ರ	0	8	0
ಭಾಗವತ ಕಥಾ ಸಂಗ್ರಹ	1	8	0
ಭಾರತ ಕಥಾಸಂಗ್ರಹ	0	6	0
ಜೈಮಿನಿ ಭಾರತ ಕಥಾಸಂಗ್ರಹ	0	12	0
ರಾಮಾಯಣ ಕಥಾಸಂಗ್ರಹ	0	12	0
ಸೇವಾಮಾಯಣ	1	8	0
ಸೀತಾ ಚರಿತ್ರೆ.	1	2	0
ದೇವಿಮಹಾತ್ಮೆ ಪದ್ಯ	0	8	0
ದೇವಿಮಹಾತ್ಮೆ ಗದ್ಯ	0	6	0
ನಳದವಯಂತಿ ಚರಿತ್ರೆ.	0	4	0

ವಿ ಪಿ ದ್ವಾರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಪ್ರತ್ಯೇಕ ಇರುವುದು

ಈ ಮೇಲಿನ ಗ್ರಂಥಗಳ ವಿನಹ ನಾನಾ ತರಹದ ಕನ್ನಡ, ಸಂಸ್ಕೃತ ಮರಾಠಿ, ಇಂಗ್ಲಿಷ, ಹಿಕ್ಷನರಿ ಮುಂತಾದ ಪುಸ್ತಕಗಳೂ, ಬರವಣಿಗೆ ಸಾಮಾನುಗಳು ವಗೈರೆ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.

ಕೆ. ಎಮ್. ದಾನಪ್ರಭು,
ರಥಬೀದಿ, ಮಂಗಳೂರು.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ರ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿಯ ಮೊಬಲಗು ನಮಗೆ ತಲ್ಪಿದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆ.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು.

ಮೋಸಹೋಗಬೇಡಿ! ಮೋಸಹೋಗಬೇಡಿ!!

ಕೆಲವರು ನಮ್ಮ ಕಂಪೆನಿಯ ಹಸರನ್ನು ಹೇಳಿ ಜನಗಳಿಗ ಮೋಸಮಾಡುತ್ತಿರುವರು. ಆದ್ದರಿಂದ ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ ಎಂದು ಮುದ್ರಿಸಿರುವ [illegible] ನೋಡಿ ತೆಗೆದುಕೊಳ್ಳಿರಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟಿದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ

೧೦೦೦ ರೂಪಾಯಿಗಳ ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರಿಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎದಿಗೂ ಸಮಾನವಾಗಲಾರರು. ಅನೇಕರು ಉತುಳುಗತ್ತೆ, ಶಾವುಗತ್ತೆ ಇವುಗಳನ್ನು ಸಕ್ಕರೆಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಆಥವಾ ಬೇರೆ ತರಹಾ ದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕೆಲಿಂದ ಸುಪ್ತವಿದ ತರಾಲು ಮಾಡಿಸಲ್ಪಟ್ಟಿರುವದು

ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು
ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವುಹೋಗುವುದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು
ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕ್ಕಿಂತಲು ಉತ್ತಮವಾದದ್ದು.
ಸಾಲಾಮಿಸ್ರಿ ಮುರಬ್ಬಾವು — ಸ್ತ್ರೀಸಂಗಕ್ಕೆ ಮೊದಲು ಸ್ಖಲನವಾಗುವುದನ್ನು ನಿಲ್ಲಿಸುವದು.

ಒಂದು ಡಬ್ಬಿ ಮುರಬ್ಬವನ್ನು 15 ದಿವಸಗಳು ಉಪಯೋಗಿಸುವದರಿಂದ ಫೂರ ಗುಣಕೊಡುತ್ತೆ 2—3 ಡಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತ ರದವರಿಗೂ ಗುಣಕೊಡುತ್ತೆ.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಹಮಡಿ ಅವೆನ್ಯುರೋಡ್, ಬೆಂಗಳೂರು ಸಿಟಿ.

FREE! FREE!!
S.T A Perpetual Calendar
Beautiful and Artistic
As 10 each Postage Extra
How to get it Free
Apply with Postage

Eucalyptus Oil
(Pure & best
As 4 per 1 oz bottle
Packing & postage Extra
M. S. RAO & Co.,
Bangalore City

ಕನ್ನಡ ಹೊಸ ಪುಸ್ತಕಗಳು ಕಾದಂಬರಿಗಳು

ಸಂಗೀತಸಮಯ ಸಾರ, ಹೊಸ ಪುಸ್ತಕ 1—4
ಪ್ರಬಂಧ ಮಾಲಾವಳಿ ಕನ್ನಡ ವಾಕ್ಯರಚನೆಯ ವಿಧಾನವನ್ನು ಹೊಸ ಮತ್ತು ಸುಲಭವಾದ ರೀತಿಯಲ್ಲಿ ವಿವರಿಸಿದೆ 0 12
ಅರೇಬಿಯನ್ ನೈಟ್, ಹೊಸ ಮುದ್ರಣ 2—2
ಮುದ್ರಾರಾಕ್ಷಸ ಡಿ 1 10
ಭಕ್ತವಿಜಯ, (ವಿಷ್ಣು ಭಕ್ತರ ಕಥೆಗಳ) ಹೊಸ ಮುದ್ರಣ 3—2
ವೈತ್ರೇಯ, (ಅನೇಕ ರಹಸ್ಯಗಳು ವಿವರಿಸಲ್ಪಟ್ಟಿವೆ) 0—5
ವಾಲ್ಮೀಕಿಯುದ್ಧಯ, ಹೊಸ ಮುದ್ರಣ 0—6
ಸ್ವಪ್ನವಾಸವದತ್ತ, (ಸ್ತ್ರೀಯರಿಗೆ ಅತ್ಯಾವಶ್ಯಕವಾದದ್ದು) 0—9
ದುರ್ಗಾದಾಸ (ಬಂಗಾಳಿ ನಾವೆಲ್) 0-12
ಪ್ರಭುಲ್ಲ, ಡಿ (ಪಕ್ಕೆದಾರಿ ಕಥೆ) 0 12
ವಿಷವಿವಾಹ, ಹೊಸ ಮುದ್ರಣ 0—4
ಶೋಭನೆ, ಡಿ 0 12
ಚಂದ್ರಪ್ರಭಾ, ಹೊಸ ಕಾದಂಬರಿ 0-12
ಚಿಂಪಕ 0—4
ಪ್ರಿಂರೋಜ ವಿಜಯಂ, ಗೋಲ್ಡ್‌ಸ್ಮಿತ್ ಕವಿಯ ವಿಕಾರ್ ಆಫ್ ವೇಕ್ ಫೀಲ್ಡ್‌ನ ಬಾಷಾಂತರ 1—9

ಯಂ. ಯಸ್. ರಾವ್ ಕಂಪೆನಿ.,
ಬುಕ್‌ಸೆಲರ್ಸ್, ಅವಿನ್ಯೂರೋಡ್, ಬೆಂಗಳೂರು ಸಿಟಿ.

ಯಂ ಸುಬ್ಬರಾವ್, ಶಂಕರಪುರಂ, ಬೆಂಗಳೂರು ಸಿಟಿ—ಈ ವಿಳಾಸವನ್ನು ಮೇಲ್ಕಡಂತೆ ಬದಲಾಯಿಸಿದೆ.

ನಮ್ಮಲ್ಲಿ ಎಲ್ಲಾ ವಿಧವಾದ ಕನ್ನಡ ಕಗಳೂ, ಬಿ. ವೆಂಕಟಾಚಾರ್ಯರ ನಾವೀಗಳೂ, ಗವರ್ನಮೆಂಟ್ ಸ್ಕೂಲು ಪುಸ್ತಗಳೂ ದೊರೆಯುತ್ತವೆ. ಪುಸ್ತಕದ ಪ್ರಿಂಟಾಗುತ್ತಿದೆ.

ಯಂ. ಯೆಸ್. ರಾವ್ ಎಂಡ್ ಕೊ
ಬೆಂಗಳೂರು ಸಿಟಿ.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೬೯೬ ಪುಟಗಳುಳ್ಳದ್ದು

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗ ಕಲ ಜಾರಿಯಲ್ಲಿರುವ ಹೊಸದಾಗಿ ವ ದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ ಈ ಸೌಲಭ್ಯ ಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿ ಗಳು ಭಾಷಾಂತರ ಮಾಡಲ್ಪಟ್ಟಿವೆ

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾಗ ಪ್ರಸ್ತುತ ಈ ಪುಸ್ತಕವನ್ನು ಒಂದು ಸೆಲ ಓದುವುದರಿಂದಲೇ ಕಠಿಣವಾಗ ಮೊಕ್ದದವೆಗಳನ್ನೂ ಲಾಯ ರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗ ವುದು

ಕ್ರಯ ರೂಪಾಯಿ ೩—೦ ೦ ಅಂಚೆ ಹಾಸಲು ೫ ಆಣೆ

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯ ವಿಚಾರದಲ್ಲಿ ಅನೇಕ ದೊಡ್ಡ ವ ನಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುವವೆ ಅವುಗಳಲ್ಲಿ ಬಂದೆರಡನ್ನು ಇದರಡಿ ತಿಳಿಸಿರುತ್ತೇವೆ:—

ಮೈಸೂರು ದೇಶದ ವಿದ್ಯಾವ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ ಜನರಲರ ವರು—"ನಿಮ್ಮ ಸುಬದ್ರೆ ಎಂಬ ಪುಸ್ತಕದ ೫೦ ಪ್ರತಿಗಳನ್ನು ಈ ಇಲಾಖೆಯ ಉಪ ಯೋಗಕ್ಕಾಗಿ ಕಳುಹಿಸಿಕೊಡಿ"

ಮ। ರಾ। ಬಿ ರಾಮರಾವ್ ಎಂ ಎ ಎಲ್ ಎಲ್ ಬಿ ಗವರ್ನಮೆಂಟ್ ಟ್ರಾನ್ಸ್‌ಲೇಟರ್ ಮದ್ರಾಸ್, ಇವರ —"ಕಥೆಯು ಬಹಳ ಸಾರಸ್ಯವಾಗಿದೆ ...." ಇದರಂತೆಯೇ ನಮ್ಮ ಸಮಾಜದಲ್ಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರ ತ್ತೇನೆ

ವಿಳಾಸ:— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೊಜಿಟರಿ
ಮೆಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಲೋಕವ್ಯವಹಾರ ಬೋಧಿನಿ	೧	೦	೦
ನಾನಾರ್ಥ ಶಬ್ದಾವಳಿ	೦	೧೦	೦
ಗದ್ಯ ಸಂಗ್ರಹ	೦	೬	೦
ಪದ್ಯ ಳ	೦	೧	೬
ಪದಾರ್ಥ ವಿಜ್ಞಾನ ಶಾಸ್ತ್ರ	೦	೧೫	೬
ಕನ್ನಡ ನುಡಿಹಿಡಿ (ಸಂಕ್ಷಿಪ್ತ ಲಿಪಿ)	೧	೦	೦
ಕನ್ನಡ ಮತ್ತು ಇಂಗ್ಲಿಷ್ ಗಾದೆಗಳು	೦	೪	೦
ಇಂಗ್ಲಿಷು ಭಾಷಾಮಂಜರಿ	೧	೦	೦
ಇಂಗ್ಲಿಷು ಕನ್ನಡ ಸಂಭಾಷಣ ವಾಕ್ಯಗಳು	೦	೧೦	೦
ಕನ್ನಡ ಇಂಗ್ಲಿಷು ನಿಘಂಟು (ದೊಡ್ಡದು)	೩	೦	೦
ಇಂಗ್ಲಿಷ್ ಕನ್ನಡ ,, (ದೊಡ್ಡದು)	೩	೦	೦
,, ,, ,, (ಸಣ್ಣದು)	೧	೮	೦
ಸಂಸ್ಕೃತ ಬಾಲವ್ಯಾಕರಣ	೧	೦	೦
ತಿದ್ದುವಿಕೆಯೂ ಶಿಕ್ಷಣವೂ, ಫೌಲರ್ ದೊರೆಗಳು ಮಾಡಿದ್ದು	೦	೧೪	೦
ಹಿಂದು ದೇಶದ ಚರಿತ್ರೆ ಸಂಪೂರ್ಣ	೧	೦	೦
ಕೃಷಿ ಶಾಸ್ತ್ರದ ಮೊದಲನೇ ಪುಸ್ತಕ	೦	೬	೦
ಮೊದಲನೇ ಪದ್ಯ ಪುಸ್ತಕ ...	೦	೧	೬
ವಿಕೀರ್ಣ ಸುಭಾಷಿತ ಪ್ರಸಂಗ ಶತಕ	೦	೧	೦
ರಾಜರ ಗೀತ (ಚಿತ್ರ ಸಹಿತ)	೦	೦	೬
ಕನ್ನಡ ಹಿಂದುಸ್ತಾನಿ ಭಾಷಾಮಂಜರಿ	೦	೪	೬
ಇಸೋಪನ ನೀತಿಕಥೆಗಳು (ಚಿತ್ರ ಸಹಿತ)	೦	೮	೦
ಆರೋಗ್ಯ ಭಾಗ್ಯ ...	೦	೪	೦
ನೈಸರ್ಗಿಕ ವೈದ್ಯನಿ	೦	೪	೦
ರೋಗ ಚಿಕಿತ್ಸೆ	೧	೮	೦
ಜೀವರಕ್ಷಾಮಣಿ ವೈದ್ಯಸಾರ	೧	೮	೦
ಮಸ್ಸೀಹ ವಿಜಯ ...	೦	೪	೦
ಅಲಿಬಾಬನ ಕಥೆ ...	೦	೩	೦

ಇನಾಂ ಸಾಮಾನು 60! ಇನಾಂ ಸಾಮಾನು 60

ಯೋಗ್ಯತಾ ಪತ್ರಿಕೆಗಳನ್ನು ಪಡದಿರುವ,

ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ ೫೧ ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ ಯಾವ ಸ್ತ್ರೀಗಳಿಗೆ ತಲೆ ಕೂದಲು ಸಂದರ್ಭಾಗಿ ಇರಬೇಕೆಂಬ ಉದ್ದೇಶವ ಗಿಯೂ ಕೂದಲ ಉದುರುವದನ್ನು ತಡೆದು ಕೋವ ಲವಾಗಿ ಬೆಳೆಯಬೆ ಕೆಂಬ ಉದ್ದೇಶವಾಗಿರುವವರ ಬಜಾರಿನಲ್ಲಿ ದೊರೆಯುವ ಕೆಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿ ಈ ಲೋಕಪ್ರಖ್ಯಾತ ವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯ ಲ್ಲಿ ಹಾಕಿಕೊಂಡ ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡ ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳ ಪರಿಮಳ ವಾಸನೆ ಹೊಂದದ ಇದರ ಪರಿಮಳ ವಾಸನೆ ಕೆಳ ತಪಕ್ಕೆ ಬಿಡಿಯದಕ್ಕೆ ಆಗುವದಿಲ್ಲ ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಮೆದುಳನ್ನು ಸುವಾಸನೆಯು ಮಾಡಿ ಕಾಂತಿಯನ್ನೂ ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನೂ, ಕೊಡುವ ಲಿಗೆ ಆರೋಗ್ಯವನ್ನೂ ಕೊಡುವ ಶೈಲ ಇದು ಒಂದೇ ಬೇರೆಯಿಲ್ಲ ಬರೀ ವಾಕ್ಯಗಳಿಂದ ವರ್ಣಿಸುವದ ರಲ್ಲಿ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ ಇನಾಂ ಸಾಮಾನುಗಳ ತಪಸೀಲು — ಸ್ತ್ರೀಯರು ಧರಿಸಿಕೊಳ್ಳುವ ಕೊಡಿಗೆ | ಪೌಡರ್ | ಕಾಡಿಗೆ ಪೂಜೆ, 40, ದಂತದ ಸಾಚಿಗೆ | ಹೊಗಸಂದ ಗಾಜಿನ ಕಾಡಿಸೀಸದ ಪೆಟ್ಟಿಗೆ | ಆವರ್ತ ಪೋಸ್ಟು ಕಾರ್ಡು 6 ಸುವಾಸನೆ ಅತ್ತರು ಬಿಲ್ಲೆ | ಗಂಧದ ಬಿಲ್ಲೆ | ಸ್ಪ್ರಿಂಜ್ ಧರಿಸಿಕೊಳ್ಳುವ ಬ್ರೋಚ್ | ಮೊತ್ತ ೧ | ನಮ್ಮ ಕಂಪನಿ ಪ್ರಯುಕ್ತಿ ಹೊಸವರ್ಷಕ್ಕಾಗಿ ಇದೆ ತರಹ ಒಳಗಾಗಿ ತರಿಸಿ ಕೊಳ್ಳುವವರಿಗೆ ವಾತ್ರ ಈ ಕ್ರಯಕ್ಕೆ ದೊರೆಯುತ್ತದೆ ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ — ವಿ ಎ ಎಸ್, ಪಾರ್ಸಿ ಕಂಪೌಂಡ್,
3 ಇರ್ವಿಷ್ಟನ್ ರೋಡ್, ಮದರಾಸು

ಜಯವಿಜಯ

ಅಥವಾ

ತೂಗಾಡುವ ಅಸಿಪಂಜರ.

ಇದರಲ್ಲಿ "ದಿಲೀಪಸಿಂಹ ಲುರಾರ್" ಎಂಬವನು ತನ್ನ ಹಿಗೆ ತೀರಿಸುವುದಕ್ಕೋಸ್ಕರ ಸ್ಥೈರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಷ್ಟಿಣ ಕಾರ್ಯ ಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡಗ ತನ್ನ ಮೂರು ವರ್ಷದ ಪುತ್ರ ನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಷ್ಟಿ ಕರಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆತೂಗಾಡಿಸಿಟ್ಟ ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನ ಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿ ವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾನನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರ ವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಸೌರುವವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ 0-12-0 ಪೋಸ್ಟುಖರ್ಚು ಪ್ರತ್ಯೇಕ ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ —ಈ ನನ್ನ ಕಾರ್ಯಕ್ಕೆ ಸ್ವಜಾತಿ ಗ್ರಹಸ್ಥರು ಜಾತಿಯಾಭಿಮಾನ ದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. G. Amin**
C/o E A. Goll Esq
Sirdar Palace, Apollo Street, **BOMBAY**

ಜುಳುಕಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಅಧ್ಯಕ್ಷರು: — ಬಹುಮಾನಪಟ್ಟ ಶೆ। ಲಲ್ಲುಬಾಯಿ ಸಾಮಲ್ ದಾನರವರು, ಸಿ. ಐ. ಇ. ಜೆ. ಪಿ.

ಮೆನೇಜಿಂಗ್ ಡಿರೆಕ್ಟರರು: — ಫ್ರೈವರ್‌ಜೋಜ್ ಅಂಡ್ ಜೋಶಿದವರು, ಜೆ. ಪಿ. ಒನರರಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರು.

ಎಕ್ಚುವೆರಿ: — ಪೀ। ಜೋರ್ಜ್‌ಕಿಂಗ್ ಎಫ್. ಎಫ್. ಎ. ಎಫ್. ಐ. ಎ.

ಮೆಡಿಕಲ್ ರಿಫರಿಗಳು: — ಡಾಕ್ಟಾರ್ ಆರ್. ರಾವ್, ಎಮ್. ಡಿ. ಡಿ. ಎಸ್. ಸಿ (ಲಂಡನ್)

ಗೌರವಾರ್ಥಕ ಮ್ಯಾನೇಜರ್: — ರಾ। ಕೆ. ಸುಬ್ರಮಣ್ಯಾಯ್ಯರ್, ಬಿ. ಎ. ಜೆ. ಪಿ. ಎಫ್. ಎಸ್. ಎ. ಎ. (ಲಂಡನ್)

ವಿವೇದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಬಹಳ ಭದ್ರವಾಗಿರುವದೆಂತ ಲೆಕ್ಕ ವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು.

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಬಹಳ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊನ್ಸ್" ಎಂಬ ಪತ್ರಿಕೆಯು ಅಭಿಪ್ರಾಯವಾಗಿರುವುದು.

ಇಂಡಿಯಾ ಸರಕಾರದ ಭದ್ರತೆಯಲ್ಲಿ ರೂ. 1,55,000ವನ್ನು ಠೇವಣಾತಿಯಾಗಿಟ್ಟಿರುವದು.

ಹಣ ಕಳಹಿಸಿಕೊಡುವ ವಿಜಸ್ಸಿ ಬಗ್ಗೆ ಪತ್ರ ಇತ್ಯಾದಿಗಳನ್ನು ಬರೆಯುವ ವಿಳಾಸ:—

ಕೆನೆಟ್ ಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲೆಬಾರ, ತಿರುವಾಂಕೋಡು, ಮತ್ತು ಕೊಚ್ಚಿ ಪ್ರಾಂತ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ:—ಮಂಗಳೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಪತ್ರಲಗುಗಳನ್ನು ಮಂಗಳೂರಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಸೀದಿಯನ್ನು ಕೊಚ್ಚಿ, ಕಾರ್ ಬ್ರದರ್ಸ್ ಇವರಿಗೆ ಕಳುಹಿಸಿಕೊಡಬಹುದು.

ಉಡ್ಪಿ, 3—7—1914.

ಮಹಾಶಯರ!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ ಎಂಬ ವಿಶ್ವಾಸನೀಯ ಉತ್ತರಾಯಿರುವ ಸಂಘದ ಬಗ್ಗೆ ಕಾವ್ತ ವಿಶೇಷವೂ ವಿಚಾರಿಸಿಲ್ಲದೆ, ರೂ. 5000—10—0ನ್ನು ನನಗೆ ಪಾವತಿಮಾಡಿದುದ ಕ್ಕಾಗಿ ಅತೀ ಉದಕಾರವಾಯಿತು. ಸದರಿ ಪೊಲಿಸಿಯನ್ನು ಕುರಿತಾದ ಅತ್ಯವಾದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ತಪಕ್ಷೆ ವಿಶೇಷಲಿಳಗಾಗಿ ನನಗೆ ಸಲ್ಲತಕ್ಕ ವಿಚಾರ ಐವರಣ್ಣು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪ್ರಾತಿನಿಧಿಸಿದ್ದಕ್ಕೋಸ್ಕರ ನನ್ನ ಧನ್ಯವಾದಗಳನ್ನು ಅವರಿಗೆ ದಯೆಯಿಟ್ಟು ತಿಳಿಸಿ ಈ ತರದಲ್ಲಿ ಪೊಲಿಸಿದಾರರೊಡನೆ ಯಾತಾರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ತಮ್ಮ ವಿಶೇ ಕಂಪೆನಿಯಿಂದ ಪ್ರತಿಯೊಬ್ಬನೂ ಒಂದೊಂದು ಪೊಲಿಸಿಯನ್ನಾದರೂ ಪಡಕೊಳ್ಳುವದು ಉಚಿತವೆಂದು ನನ್ನ ಅಪೇಕ್ಷೆ.

(ದಸ್ಕತ.) ಹಾರಾಡಿ ಆನಂದರಾಯ ಭಡಿಯಾರನ ರುಜು.

(ಮೇಲಿನ ಪೊಲಿಸಿಯ ವಿಷಯ ಹೊರನನ್ನು ಪರಿಶೀಲಿಸಲು ಅಧಿಕಾರವಿಲ್ಲವೆನ್ನು.)

ಉಡ್ಪಿ, ತಾ. 20—8—1914.

ನನ್ನ ಎಳೇ ಪ್ರಾಯದಲ್ಲಿ ನೃತಕಾಲ ನನ್ನ ಗೆಂಡ ಕೆ. ಎಸ್. ಶ್ರೀಧರಗೆ ವಿಶೇ ಪತ್ರಗಳನ್ನು ನಾನು ಕಳುಹಿಸಿಕೊಟ್ಟು ಕೆಲವೇ ದಿವಸಗಳಿಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತಕ್ಕಲಂಭನವಾದ ಹಣವನ್ನು ವಿಂತಿವಿಂತಿಸಿದ್ದಕ್ಕೆ ನಾನು ಕೃತಜ್ಞಳಾಗಿರುವೆನು. ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ಮೊತ್ತ ಲಕ್ಷಾಧಿಕವಾದ ಧನವಾಗಿದೆ. ಅಂತಹ ಬಡ ಹುಡುಗನಿಗೆ ಇದೊಂದ ಅಘೋರವಾದ ಸಂಸಾರವನ್ನ ನಡಿಸಿಕೊಟ್ಟುದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯವಲ್ಲಿರಲಿ!

ಭವಾನೀಬಾಯಿ, Pol. No. 1738.

ಸಾಕ್ಷಿ—ಭವಾನೀಬಾಯಿಯವರ ಸೋದರ ರಾ। ಕೆ. ರಂಗಪ್ಪ ನಾಗಪ್ಪ.

ಮಂಗಳೂರು, ತಾ. 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗಬೇಕಾದ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿ ಪೂರ್ವಕವಾಗಿ ಮುಟ್ಟಿಸಿರಿ! 'ಕ್ಷೇಮು' ಪ್ರಕಾರ ಎಲ್ಲ ಹಣವನ್ನು ಪಡಕೊಳ್ಳುವ ಹಾಗೆ ಕಂಪೆನಿಯ ವಿಜಸ್ಸಿರೇ ತಮ್ಮಿಂದಾಗುವಷ್ಟರ ಸಹಾಯವನ್ನ ಮಾಡುತ್ತಿರುವದಾದುದರಿಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ. ಹಣವನ್ನು ನಾವಿದ್ದ ಸ್ಥಳಕ್ಕೆ ಬಂದು ತಕ್ಕರು.—ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಿಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅಳಕಳ್ಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ವಾರಿಸು ಹಕ್ಕಿನ ಅಸಾಮಿ.)

ಒಂದು ಸಾರಿ ಕೊಂಡು ನೋಡಿರಿ!!

ಓಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮುಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲ ಕ್ಕನುಸಾರವಾದ ಸದಾ ಸುವಾಸನೆಯುಳ್ಳ ಗುಸಂಧವು. ಒಂದೆರಡು ತಟಕು ಕೈ ವಸ್ತದಲ್ಲಿ ತಾಗಿಸಿದ್ದೇ ಆದರೆ 8 ದಿವಸ ಗಳ ವರೆಗೂ ಪರಿಮಳವಿರುವದು.

	ರೂ.	ಆ.	ಕೈ.
ಕ್ರಯ ¼ ಡ್ರಾಮ್ ಟ್ಯೂಬ್ .	0	8	0
1 ,, .	0	12	0
¼ ಔನ್ಸ್ ಟ್ಯೂಬ್ . .	2	0	0
ಒಪ್ಪೊ ದಿಲ್-ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ . .	0	12	0

ವಿ. ಪಿ. ಚಾರ್ಜು 0—4—0 ಬೇರೆ.

ಪ್ರಾಮುಖ್ಯ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H. R. MODY & Co.,
10 Princes Street, BOMBAY.

ವೈಶೇಷ್ಯವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿ ರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ ಬಾಟ್ಲಿಗೆ ರೂ. 1—4—0 ಮತ್ತು ರೂ. 2—0—0.

ಪಿಯರ್ಸ್ ನರ್ವೈನ್ ಟೊನಿಕ್ ಪಲ್ಸ್ನ್

(ಆದರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕರಿಗೂ ಬಾಲಕಿಯರಿಗೂ ಬಹಳ ಪ್ರಯೋಜನಕಾರಿ.

ಕ್ರಯ 30 ಮಾತ್ರೆಗಳ ಕೀಸಿಗೆ 1ಕ್ಕೆ ರೂ. 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ. ಡಬ್ಬಿ 1ಕ್ಕೆ 4

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಕೀಸೆ 1ಕ್ಕೆ 0—12—0. ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೊ,
Chemist, ಕೆಮಿಸ್ಟ್,
10PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ನಂಬಿ ಮೋಸಹೋಗಬೇಡಿರಿ! ನಂಬಿ ಮೋಸಹೋಗಬೇಡಿರಿ!!

ಅಸಲ್ ಪಂಜಾಬಿ ಮುರಬ್ಬಾ

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿಸಿ ನಮ್ಮ ಹೆಸರು ಇಟ್ಟು ಜನಗಳಿಗೆ ಮೋಸಮಾಡುತ್ತಾರೆ ಅದನ್ನು ಕಂಡು ಮೋಸಹೋಗಬೇಡಿರಿ ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆಯುವಾಗ ಧೈರ್ಯಲಕ್ಷ್ಮಿ ಅಂಡು ಕಂಪೆನಿ, 3 ಇರುಳಪ್ಪನ ಬೀದಿ, ಮದರಾಸು ಎಂತ ಮುದ್ರಿಸುವ ಲೇಬಲ್ ನೋಡಿ ತೆಗೆಯಿರಿ

500 ರೂಪಾಯಿಗಳ ಬಹುಮಾನ!

ಲೋಕಪ್ರಸಿದ್ಧವಾದ "ಪಂಜಾಬಿ ಸಕಲರೋಗ ಸಂಜೀವಿ"ಯನ್ನೆ ಸೇವಿಸಿ ಜೀವವಿಮೆಯನ್ನೂ ಮಾಡಿಕೊಳ್ಳಿರಿ ದುರದೃಷ್ಟವಶಗಳಿಂದ ಧನವನ್ನೂ ನಷ್ಟಪಡಿಸಿಕೊಂಡು ದುಃಖಿಸುವದನ್ನೂ ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರಿಸಲ್ಪಟ್ಟ "ಪಂಜಾಬಿ ಸಕಲರೋಗ ಸಂಜೀವಿ"ಯನ್ನು ಸೇವಿಸಿರಿ. ಇದನ್ನು ಪಂಜಾಬು, ಕಾಶ್ಮೀರ ದೇಶದ ಜನಗಳು ಒಕ್ಕವಾಗಿ ಸೇವಿಸುವರು. ತಾವು ಪಂಜಾಬಿ ದೇಶದ ಜನಗಳನ್ನು ನೋಡಿ ಇರುವಿರಿ ಅವರು ದಿನದಿನವೂ ಪಂಜಾಬಿ ಸಕಲರೋಗ ಸಂಜೀವಿ ಸೇವಿಸಿ ಒಳ್ಳೆ ಬಲವೂ ದೃಢವಾಗಿಯೂ ಇರುವರು. ತಾವು ಯಾಕೆ ಹಾಗೆ ಇರಬಾರದು ಪಂಜಾಬಿ ಸಕಲರೋಗ ಸಂಜೀವಿಯನ್ನು ಸೇವಿಸಿ ದೇಹವನ್ನು ಕಾಪಾಡಿಕೊಳ್ಳಿರಿ. ಇದು ಸಮಸ್ತ ಜನಗಳಿಗೂ ಪ್ರಸಾದವೆಂದು ಸಕಲರು ಒಪ್ಪಿದ್ದಾರೆ. ಇದು ರಕ್ತವನ್ನೂ ವೃದ್ಧಿಪಡಿಸಿ ಪೌಷ್ಟಿಕತೆಗೆ ಬಲವನ್ನೂ ಕೊಡುವದು. ಕೈಕಾಲು ಸೊಂಟದ ನೋವುಗಳನ್ನೂ ಹೋಗಲಾಡಿಸುವುದು. ಇದರಲ್ಲಿ ಅವರಂಜಿ ಬೆಳ್ಳಿ, ಅಲುವಂಗಭಸ್ಮ, ನವೇದಮಿಸ್ರಿ, ಶಾಲಮಿಸ್ರಿ, ಮೊದಲಾದವನ್ನೂ ಮೂಳಕೆ 15ನ್ನೂ, ಜಬಾರ್ ಸರಕ 100 ಸೇರಿಸಿ ಬಹಳ ಶುದ್ಧವಾಗಿ ಕೈಯಿಂದ ಮುಟ್ಟದೇ ತಯಾರು ಮಾಡಲ್ಪಟ್ಟಿರುವದು. ಇದು ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟದಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಯ ಬಹುಮಾನ.

20 ತೊಲೆ ಡಬ್ಬಿ 1ಕ್ಕೆ ರೂ 3—0—0 ಒಂದೇ ಸಾರಿಗೆ ಡಬ್ಬಿ ತರಿಸಿಕೊಳ್ಳುವವರಿಗೆ ರೂ. 5 ಅನುಮಾನಪತ್ರಿಕೆ ಟಪಾಲ ಸಂಗಡ ಇರುತ್ತೆ

ಮದರಾಸ್ ಏಜನ್ಸಿ— ಧೈರ್ಯಲಕ್ಷ್ಮಿ ಅಂಡು ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸ್

ಮೂರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನವೀನ ಗ್ರಂಥದಲ್ಲಿ ಪರಶುರಾಮಸೃಷ್ಟಿ ಲಾಗಾಯತು ಬ್ರಿಟಿಷ್ ಮಹಾರಾಜರ ಆಳಿಕೆ ವರೆಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿರಾಜರ ಹೆಸರುಗಳೂ, ಕಾಲಗಳೂ ಸರಿಯಾಗಿ ಬರದಲ್ಲದೆ, ಮಯೂರವರ್ಮನೆ ಮೊದಲಾದ ಮಹಾ ಪುರುಷರ ಚರಿತ್ರೆಗಳೂ, ಅಹಿಚ್ಛತ್ರದಿಂದ ಬ್ರಾಹ್ಮಣರನ್ನು ಕರಿಸಿ ಅವರಿಗೆ ಸೇಮಿಸಿದ 326 ಬಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ಶಾಸ್ತ್ರಾಸನಗಳ ತಪ್ಪುತಿಗಳೂ ಕೂಡಾ ಧಾರಿಕವಾಗಿ ಸಂಶೋಧಿಸಿ ಗ್ರಾಮಪದ್ಧತಿ, ರಾಜವ್ಯಾವಳಿ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಹೊಂಬಳಿ, ಮಾಗಣಿ, ಮನೆತನ, ಅರಸು, ಒಳ್ಳಿಲರು, ಗ್ರಾಮಗಣಕರು, ಪಂಚಾಯಿತಿದಾರರು ನ್ಯಾಯಕಾಲಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವರ್ಷಕ್ಕೆ ಓದುಬರಹ ಬಲ್ಲ ಮಹನೀಯರಿಗೆ ತಿಳಿಯ ಬನುಕೂಲವಾದ 280 ಪುಟಗಳ ಭೂತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1 — 4 — 0 ಟಪ್ಪಾಲ್ ಖರ್ಚು ಬೇರೆ

ಸಮಯಾನುಸಾರ ಕ್ರಯವು 0 — 4 — 0 ಏರಿಸಲಾದೀತು

ಹೆಚ್ಚಿಗೆ ಪ್ರತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು — ಎನ್. ಎ ಶೀನಪ್ಪ ಹೆಗ್ಗಡೆ, ಅಮುಂಜೆಗುತ್ತು,
ಎಸ್. ಪಿ. ರಾಜ ಎಂಡ್ ಕೊ. ಪೋಸ್ಟು ಪೊಳಲಿ, ದ ಕ ಗುರುಪುರ ಪೋಸ್ಟು, ದ ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1. ಕಾರ್ಡಾ ಪ್ರೆಸ್, ಮಂಗಳೂರು.
2. ಶ್ರೀ ರಾಧಾಕೃಷ್ಣ ವಿಲಾಸ, ಮಂಗಳೂರು
3. ಒಂಟರ ವಿದ್ಯಾರ್ಥಿಭವನ, ಮಂಗಳೂರು.
4. ಲೂಲನ್ ಮಾರ್ಟ್, ಮಂಗಳೂರು
5. ಕಾರಂಜರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
6. ಪ್ರಭಾಕರ ಮುದ್ರಾಯಂತ್ರ, ಉಡುಪಿ.
7. ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿಗೆ ಕೊಡಲ್ಪಡುವುದು.

ಉಚಿತ! ಉಚಿತ! ಟ್ಯಾಲಿ ಹಾಸಲು ಇಲ್ಲ!

ಮಾನವ ಜೀವನ ಮಿತ್ರ.

ಎಂಬೀ ಪುಸ್ತಕವು ಧನ್ವಂತರಿಯಿಂದ ರಚಿಸಲ್ಪಟ್ಟು ಆರೋಗ್ಯಭಾಗ್ಯದ ಸೂತ್ರಗಳಿಂದ ಕೂಡಿರುವದು. ಆರೋಗ್ಯವನ್ನು ಕಾಪಾಡಿಕೊಂಡು ಸರ್ವ ಕೆಲಸಗಳಲ್ಲೂ ಉನ್ನತಿಯುಕ್ತವಾದ ಶರೀರಪುಷ್ಟಿಯನ್ನು ಕಾಪಾಡಿಕೊಳ್ಳಲು ಯತ್ನಿಸುವವರು ಈ ಸೂತ್ರಗಳನ್ನು ಚೆನ್ನಾಗಿ ತಿಳಿಕೊಳ್ಳಬೇಕಾಗಿರುವುದು. ಸೂತ್ರಗಳನ್ನು ಸರ್ವರೂ ತಿಳಿಕೊಳ್ಳುವಂತೆ ಬಹಳ ಸುಲಭವಾದ ಭಾಷೆಯಲ್ಲಿ ಇವೆಗಳ. ಭಾಷಾಂತರಿಸಲ್ಪಟ್ಟಿವೆ. ಸಾಮಾನ್ಯವಾದರೂ ಫಲಿಯಕರವಾದ ಪರಿಣಾಮವುಳ್ಳ ಬೇರೆಗಳಿಗೆ ಶಕ್ಕ ಔಷಧಿಯು ಯಾವದೆಂಬುದು ಈ ಗ್ರಂಥದಲ್ಲಿದೆ. ನಿಮ್ಮ ವಿಳಾಸವನ್ನು ನಮಗೆ ತಿಳಿದಿದ್ದಲ್ಲಿ ಈ ಪುಸ್ತಕದ ಪ್ರತಿಯೊಂದನ್ನು ಉಚಿತವಾಗಿ ಕಳುಹಿಸಿಕೊಡುವೆವು ಖರ್ಚು ಒಂದಿಪ್ಪಾದರೂ ಕೊಡಬೇಕೆಂತಿಲ್ಲ.

ರಾಜವೈದ್ಯ ನಾರಾಯಣಜಿ ಕೇಶವಜಿ
ಮೂಲಕ
ಆಯುರ್ವೇದೋದಯ ಔಷಧಾಲಯ,
ಜಾಮನಗರ್ (ಕಾಥ್ಯಾವರ್)

ಶಾಖೆ:— ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ, ಮದರಾಸು.

ಸಫಲ ಆಧವಾ ನಿಷ್ಫಲ ಜೀವನವು ಎಂದೂ ಹಾಳಾಗದಿರುವ
ಆರೋಗ್ಯ ದೃಢಕಾಯವನ್ನು ಆದರಿಸಿರುವದು.

ಮದನಮಂಜರಿ ಪಿಲ್ಸ್.

ಈ ಮಾತ್ರೆಗಳನ್ನು ಉಪಯೋಗಿಸುವದರಿಂದ ಇಂಥಾ ಆರೋಗ್ಯವನ್ನು ಸಂದೇಹವಿಲ್ಲದೆ ಫಲಿಸಿಕೊಳ್ಳಬಹುದು ಮಲಬದ್ಧತೆ, ಅಜೀರ್ಣ, ಇಂದ್ರಿಯಗಳ ನಿಶ್ಶಕ್ತಿಗಳು ಈ ರೋಗಗಳೆ ಬಾಧೆಯು ಬಹಳ ಸಮಯದಿಂದಿದ್ದರೂ ಈ ಮಾತ್ರೆಗಳ ಸೇವನೆಯಿಂದ ಇದು ಗುಣಹೊಂದುವದು, ಶರೀರದಲ್ಲಿ ಚೈತನ್ಯವು ಉಂಟಾಗುವದು, ರಕ್ತವು ಶುದ್ಧಿಗೊಳ್ಳುವದು, ಪ್ರಾಯವು ಸಂದು ಹೋದಂಥವರಲ್ಲಿ ಸಹ ಯೌವನದ ಶಕ್ತಿಯನ್ನುಂಟುಮಾಡುತ್ತದೆ

40 ಮಾತ್ರೆಗಳಿರುವ ಒಂದು ಡಬ್ಬಿಗೆ ರೂ. 1—0—0 ಮಾತ್ರ. ಔಷಧಗಳ ಪಟ್ಟಿ ಮತ್ತು ಚಿಕಿತ್ಸೆಯ ಮಾಹಿತಿಯನ್ನು ಉಚಿತವಾಗಿ ಕಳುಹಿಸಿಕೊಡುವೆವು.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಜಾಮನಗರ (ಕಾಥ್ಯಾವರ್).

ಶಾಖೆ:— ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾ ಬಜಾರ್ ರಸ್ತೆ ಮದರಾಸು.

ನೀವು ಹೊಗೆಸೊಪ್ಪನ್ನು ಅಗಿಯುತ್ತೀರೋ?

ಹೊಗೆಸೊಪ್ಪನ್ನು ಅಗಿಯುವ ಅಭ್ಯಾಸವು ಬಹಳ ಹಾನಿಕರವಾಗಿದೆ.

ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹೊಗೆಸೊಪ್ಪನ್ನು ಸೇವಿಸುತಿರುವವರು ಬಹಳ ಜನರಿರುವರು ಹೊಗೆಸೊಪ್ಪಿನಲ್ಲಿ "ನಿಕೊಟಿನ್" ಎಂತ ಕರೆಯಲ್ಪಡುವ ವಿಷಪದಾರ್ಥವಿದೆ ಇತರ ಮಾದಕ ಪದಾರ್ಥಗಳು ನಮ್ಮ ನರಗಳನ್ನು ಪ್ರಚೋದನ ಪಡಿಸುವಂತೆ "ನಿಕೊಟಿನ್" ಸಹ ನರಗಳಲ್ಲಿ ತತ್ಕಾಲದ ಮಟ್ಟಿಗೆ ಉದ್ದೀಪನೆಯನ್ನುಂಟುಮಾಡುವುದು ನರಗಳು ಹೀಗೆ ನಿರರ್ಥಕವಾಗಿ ಅಯಾಸಗೊಳ್ಳುವುದರಿಂದ ನರ ಸಂಸ್ಥಾಯವು ಹಾಳಾಗಿ ದೇಹಪ್ರಕೃತಿಯು ಕೆಡುವುದು ಇಷ್ಟೇ ಅಲ ಭಯಂಕರವಾದ "ಕನ್ಸರ್" ಎಂಬ ವ್ರಣಗಳು ನಾಲಿಗೆಯಲ್ಲಿಯೂ ತುಟಿಗಳಲ್ಲಿಯೂ ಹೊಗೆಸೊಪ್ಪಿನ ಸೇವನೆಯಿಂದ ಉಂಟಾಗುವವು ಇದರ ಚರ್ವಣದಿಂದ ಬಾಯಿಯು ಹೊಲಸಾಗುವುದಲ್ಲದೆ ಈ ಅಭ್ಯಾಸ ಹಿಡಿದವರಿಂದ ಹಲ್ಲುಗಳನ್ನು ಸ್ವಚ್ಛವಾಗಿಡುವುದು ತುಂಬಾ ಅಸಾಧ್ಯವಾಗಿದೆ ಅಲ್ಲಾಡುತ್ತಿರುವ ಹಲ್ಲುಗಳು ಗಟ್ಟಿಯಾಗುತ್ತವೆ ರಕ್ತವನ್ನು ಸೋರಿಸುತ್ತಿರುವ ದಂತ ಮೂಲಗಳು ಸರಿಯಾಗುತ್ತವೆ ಹಲ್ಲುನೋವು ವಾಸಿಯಾಗುತ್ತದೆ ಎಂಬೀ ಭ್ರಾಂತಿಯಿಂದ ಹಲವರು ಹೊಗೆಸೊಪ್ಪನ್ನು ಉಪಯೋಗಿಸುವರು ಆದರೆ ಇದರ ಉಪಯೋಗದಿಂದ ಈ ಪ್ರಯೋಜನಗಳಲ್ಲಿ ಒಂದಾದರೂ ಎಂದೂ ಲಬಿಸುವದಿಲ್ಲ

ಪ್ರತಿನಿತ್ಯವಲ್ಲಿಯೂ ನೀವು ನಾವು ತಯ್ಯಾರಿಸುವ
ಪೊರೆನಾಶಕರ ಮತ್ತು ಚೊಗರು ಚೆನ್ನಾಗುಳ್ಳ,

"ದಂತಮಂಜನ"

ವನ್ನು ಉಪಯೋಗಿಸಿದರೆ ಹೊಗೆಸೊಪ್ಪನ್ನು ಜಗಿಯುವ ಅಭ್ಯಾಸವನ್ನು ಮಾಡಿಕೊಳ್ಳಬೇಕೆಂಬುದೇ ಇಲ್ಲ. ಅಂಥಾ ಅಭ್ಯಾಸವಿದ್ದರೂ ಅದನ್ನು ಇದರ ಉಪಯೋಗದಿಂದ ಬಿಡಲು ಸಾಧ್ಯವಾಗುವುದು

ಈ ದಂತಮಂಜನವು ಪ್ರಾಂಥಿಕ ವೈದ್ಯರ ಅಂತರಂಗದ ಕುಂಬಿ ಔಷಧವಲ್ಲ ಕಳೆದ ೧೫ ವರ್ಷಗಳಿಂದ ಸರ್ವಸಾಮಾನ್ಯವಾಗಿ ಇದು ಎಲ್ಲರಿಂದಲೂ ಉಪಯೋಗಿಸಲ್ಪಟ್ಟಿರುತ್ತದೆ ದಂತಮೂಲಗಳಲ್ಲಿಯೂ ಹಲ್ಲುಗಳಲ್ಲಿಯೂ ಉಂಟಾಗುವ ಅನಾರೋಗ್ಯಕರ ಕ್ರಿಮಿಗಳನ್ನು ನಾಶಪಡಿಸುವ ವನಸ್ಪತಿಗಳಿಂದ ಇದು ಕೂಡಿರುವುದ ಇದರ ಉಪಯೋಗದಿಂದ, ದಂತಮೂಲಗಳು ಗಟ್ಟಿಯಾಗುವವು, ದಂತ ಮೂಲಗಳಲ್ಲಿ ಆಗಿಂದಾಗ್ಗೆ ತಲೆದೋರವ ಹುಣ್ಣುಗಳು, ಹಲ್ಲುನೋವು ಗುಣ ಹೊಂದುವವು ಬಾಯಿಯಿಂದ ಹೊರಡುವ ದುರ್ವಾಸನೆಯು ಹೋಗಿ ಸುವಾಸನೆಯು ಉಂಟಾಗುವದು ಹೊಲಸಾದ ಹಲ್ಲುಗಳಲ್ಲಿ ಉಂಟಾಗುವ ಕ್ರಿಮಿಗಳು ಅನ್ನಕೋಶದೊಳಗೆ ಸೇರಿಕೊಂಡು ಡಿಸ್ಪೆಪ್ಸಿಯಾ ಎಂಬ ಅಮಾಲಜ್ಜೀರ್ಣ ರೋಗವನ್ನುಂಟುಮಾಡುವವು ಎಂತ ವೈದ್ಯರ ಅನುಭವಕ್ಕೆ ಬಂದಿರುವುದು ಆದ್ದರಿಂದ ಹಲ್ಲುಗಳನ್ನು ಸ್ವಚ್ಛವಾಗಿಡುವುದು ಒಗತ್ಯವಾಗಿರುವುದು ಸಭ್ಯತೆಗೆ ಶುಚಿಭೂತರಾಗಿರುವುದು ಅಗತ್ಯ. ಹೊಲಸಾದ ಹಲ್ಲುಗಳುಳ್ಳವರು ಶುಚಿರ್ಭೂತರಾಗಿರುವದು ಸಾಧ್ಯವಲ್ಲ. ಸುಸ್ವರದಿಂದ ಮಾತುಗಳನ್ನಾಡಲಿಕ್ಕೂ, ಆನಂದಚಂದಕ್ಕೂ, ಆರೋಗ್ಯಕ್ಕೂ, ಸ್ವಚ್ಛವಾದ ಹಲ್ಲುಗಳು ಬೇಕಾಗಿವೆ ನಮ್ಮ ಆಹಾರವನ್ನು ಚನ್ನಾಗಿ ಜಗಿಯಲು ಗಟ್ಟಿಯಾದ ಹಲ್ಲುಗಳು ಇರಬೇಕು ಆಹಾರವನ್ನು ಹಲ್ಲುಗಳಿಂದ ಚನ್ನಾಗಿ ಜಗಿಯದಿದ್ದರೆ ಅವುಗಳು ಸರಿಯಾಗಿ ಜೀರ್ಣವಾಗದೆ ಶರೀರಕ್ಕೆ ಬೇಕಾದ ಪುಷ್ಟಿಯು ದೊರಕದು ಆದ್ದರಿಂದ ನಮ್ಮ ದಂತಮಂಜನವನ್ನು ಉಪಯೋಗಿಸಿಕೊಂಡು ಹೊಗೆಸೊಪ್ಪನ್ನು ಸೇವಿಸುವುದನ್ನು ಬಿಟ್ಟುಬಿಡಿ ಈ ದಂತಮಂಜನವನ್ನು ಉಪಯೋಗಿಸಿಕೊಳ್ಳುವ ಸಾವಿರಾರು ಜನರು ಇದರ ಪ್ರಯೋಜನವನ್ನು ನೋಡಿಕೊಂಡು ಒಂದು ದಿನವಾದರೂ ಇದರ ಉಪಯೋಗವನ್ನು ಬಿಡದೆ ಮಾಡುತ್ತಿದ್ದಾರೆ

ಕ್ರಯ ಡಬ್ಬಿ ೧ಕ್ಕೆ ಆಣೆ ೬. ೧ ಡಜನು ಡಬ್ಬಿಗಳಿಗೆ ರೂ. ೪.

ಒಮ್ಮೆ ಹಲ್ಲುಗಳನ್ನುಜ್ಜಲು ಈ ಹುಡಿಯು ಸ್ವಲ್ಪವಾತ್ರವೇ ಇದ್ದರೆ ಸಾಕಾಗುವದರಿಂದ ಒಂದು ತಿಂಗಳಿಗೆ ಒಬ್ಬನಿಗೆ ಬಂದು ಡಬ್ಬಿಯಕ್ಕಿಂತ ಹೆಚ್ಚಿಗೆ ಬೇಡ ಈ ಕಾರಣದಿಂದ ಇದು ಅಗ್ಗವಾಗಿದೆ. ಬ್ರಶ್ಶಿನಿಂದ ಇದನ್ನು ಉಪಯೋಗಿಸಿದರೆ ಮತ್ತಷ್ಟು ದೀರ್ಘಕಾಲಕ್ಕೆ ಒಂದು ಡಬ್ಬಿ ದಂತಮಂಜನವು ಸಾಕಾಗುತ್ತದೆ.

ಅತ್ಯುತ್ಕೃಷ್ಟವಾದ ಬ್ರುಶ್ ಒಂದಕ್ಕೆ ಆಣೆ ೧೦.

ಮೇಲಿನ ಕ್ರಯದಲ್ಲಿ ಟಪ್ಪಾಲು ಮೂಲಕ ಕಳುಹಿಸಿಕೊಡುವ ಖರ್ಚು ಕೂಡಿರದು. ಆದ್ದರಿಂದ ಟಪ್ಪಾಲು ಹಾಸಲು ಪ್ರತ್ಯೇಕವಿರುವುದು.

ವಿಳಾಸ:— ಶ್ರೀ ಕೃಷ್ಣನ್ ಬ್ರದರ್ಸ್, ಔಷಧವ್ಯಾಪಾರಸ್ಥರು, ಪೋಸ್ಟ್ ಬೋಕ್ಸ್ ನಂಬ್ರ 166,. ಮದ್ರಾಸು.

Sri Krishnan Brothers,

CHEMISTS & OPTICIANS, POST BOX NO. 166, MADRAS

ನಮ್ಮಲ್ಲಿಯ ಸಾಮಾನುಗಳು ಈ ಕೆಳಗಿನ ವಿಳಾಸದವರಲ್ಲಿಯೂ ದೊರಿಯುತ್ತವೆ.

ಕುಬೇರ ಸುಬ್ಬರಾವ್,
ಜನರಲ್ ಮರ್ಚೆಂಟ್ಸ್,
ರಥಬೀದಿ, ಮಂಗಳೂರು.

ಅನುಭವಸಿದ್ಧವಾದ ವನೌಷಧಗಳು

೧. ತುಂತಕಾವಂಜ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಕವೂ ಆಗಿದ್ದು ಪ್ರದರ್ಶನಗಳಲ್ಲಿ ಪಾಲ್ಗು ದಿರುವಿದ ದಿಲ್ಲಿಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ರೂ. ೧೦ ಆಣೆ.

೨. ಪ್ರಮೇಹರಿಪು ದಿಂದು. ಉರಿಯುವ ಶೀತವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೩-೮-೦.

೩. ಪಂಡಜೀರಕ ಪಾಕ. ಎಲ್ಲ ಪ್ರಮೇಹಗಳನ್ನೂ ಮುಟ್ಟು ಕಟ್ಟಲೆಯ ದೋಷಗಳನ್ನು ಖಂಡಿತವನ್ನೂ ಕಪ್ಪದೆ ಗುಣಪಡಿಸುವದು. ರಾತಲಿಗೆ ೨ರೂ.

೪. ಸೂರಣಾವ ಲೇಹ. ರಕ್ತ ಅಥವಾ ಪೊಳಿಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣ ಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಲ್ಲೇ ಸೊಗಸಾದ ಹಲ್ಲು ಪುಡಿ. ಅನೇಕ ಮಹೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೩ರೂ.

ತಮ್ಮ ವಿಶ್ವಾಸ:—ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಜಳಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ಕಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಾಜಸ, ಕಫ, ಕ್ಷಯಗಳ ಮೇಲೆ ರಾಮಬಾಣವು, ರಾತಲಿಗೆ ೨ರೂ.

೧೦. ಕಾಲ್ಮಲೀ ಪಾಕ. ಸ್ನಾನವಸ್ತಿ, ಮೂತ್ರದಲ್ಲಿ ಧಾತುಪಥನ, ಮೂತ್ರಸ್ಥಳಗಳ ನುಣುಲತವಾಗಿ ಶಾಸ್ತ್ರವಾಡ ನಿರ್ಜಲತೆ ಮುಂತಾದವುಗಳನ್ನು ಹೋಗಲೋಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ರೂ.

೧೧. ವಾತಮುರಾರಿ ಜಾಮ್. ತಲೆನೋವು, ಎದೆನೋವು, ಸೊಂಟ ನೋವು, ಉಳುಕು, ಬೀಗು, ನಾನಾ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮ ವ್ಯಾಧಿಗಳನ್ನು ಒಂದೆರಡು ಲೇಪಗಳೊಳಗಾಗಿ ಗೆಲ್ಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸರ್ವೀರಾಂಜವ (ಸುರುಮಾ).. ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧೦ರೂ.

೧೪. ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ವೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೩ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ಇನ್ನೊಮ್ಮೆ ಕನ್ನಡದಿಂದ ಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurredic Chemists*,

Vepery Post, MADRAS.

ಗ ಮನ ಕೊಡಿರಿ! ತ್ವರೆ ಮಾಡಿರಿ!

ಶ್ರೀ ಮಾಂಗಿರೀಷ ಬಾವು

ತಲೆನೋವು, ಒಕ್ಕೆನ್ನೆ ನೋವು, ಹಲ್ಲು ನೋವು, ಸೊಂಟನೋವು, ಎಲ್ಲಾ ಪುಪ್ಪುಸ ರೋಗಗಳು, ಉಳುಕು, ವಾಯುವಿನಿಂದ ಹೊಟ್ಟೆ ಉಬ್ಬರಿಸುವದು, ಇವುಗಳನ್ನು ಶೀಘ್ರವಾಗಿ ಗುಣಪಡಿಸುವದು. ಸ್ತ್ರೀ ಪಾಯಿಯ ಲೋಕದ ಸುಂದರನ ನಳಿಗೆಗಳಲ್ಲಿರುವದರಿಂದ ಬಾಟ್ಲಿಗಳಲ್ಲಿರುವ ಬಾಮ್‌ಗಳೋಪಾದಿ ಸೂರ್ಯನ ಬೆಳಕಿಗೂ, ಗಾಳಿಗೂ, ಕಾಗದದ ಎಪ್ಪುಕಾಲಕ್ಕೂ ಹಾಳಾಗುವದಿಲ್ಲ. ನಳಿಗೆಯ ಅಡಿಯನ್ನು ಮಾತ್ರ ಒತ್ತಿ ಗಲ್ಲಿ ಬೇಕಾದಷ್ಟು ಪ್ರಮಾಣ ಬಾಮ್ ಹೊರಗೆ ಬರುವದು. ಇದಲ್ಲದೆ ಪ್ರತಿ ನಳಿಗೆಯಲ್ಲಿ ಬಾಟ್ಲಿಗಳಲ್ಲಿರುವದರ 1½ ಪಾಲು ಬಾಮು ಇರುವದು. ನಳಿಗೆ ಕ್ರಯ ರೂ. 0-8-0.

ವಿಸ್ಫೋಟಿಕ ಮುಟ್ಟಿರಿ, ಸಿಡುಬು, ಕೋರಿ, ಕೊಪ್ಪೆ ಸುಕ್ಕುಳಜೇಪ್ಪೆ, ಮುಂತಾದ ಚರ್ಮರೋಗಗಳಿಗೆ ಅತ್ಯುತ್ತಮವಾದ್ದು. ಸಿಡುಬು ಮುಂತಾದ ಅಂಟುರೋಗಗಳಲ್ಲಿ ಜ್ವರ ಕಾಣಿಸಿಕೊಳ್ಳುವಾಗ ಒಂದು, ಯಾ ಎರಡು ಮಾತ್ರೆಯನ್ನು ಏಸು ನೀರಿನಲ್ಲಿ ತೇದು ಕೊಟ್ಟರೆ ಕೂಡಲೇ ಜ್ವರ ಗುಣವಾಗುವದು. ಮಕ್ಕಳ ಚೇಷ್ಟೆಗೆ ಒಂದು ಮಾತ್ರೆಯಂತೆ ಪ್ರತಿದಿವೂ ಹೋಕಾಲನಲ್ಲಿ ತೇರು ದಿನಕ್ಕೆ 2 ಸಾರಿ ಕೊಟ್ಟರೆ ಪೀಡೆಯು ಪರಿಹಾರವಾಗಿ ಧೃಡಕಾಯವಾಗಿ ಬೆಳೆಯುವರು. ಎಲ್ಲಾ ತರದ ಜ್ವರಗಳಿಗೂ ಉತ್ತಮವಾದ್ದು. 12 ಮಾತ್ರೆಗ ಪೆಟ್ಟಿ 1ಕ್ಕೆ 0—6—0.

ಸ್ವರಸಂಜೀವಿ. ಕಮ್ಮಿ, ಗಟ್ಟಿಲೋಪ, ಧ್ವನಿ ಬದಲಾಗುವದು, ಅಗ್ಗು ಮುಂತಾದವುಗಳಿಗೆ ಅತ್ಯುತ್ತಮ. ಎಲೆ ಅಡಿಕೆಯ ಸಂಗಡ ತಿನ್ನುವದರಿಂದ ಹಲ್ಲುಗಳಿಗೂ, ಜೀರ್ಣಕ್ರಿಯಾಸಹಕಾರಿ. ದೊಡ್ಡಪೆಟ್ಟಿ 1ಕ್ಕೆ 0-1-6. ಸ್ಯಾಂಪಲ್ ಪೆಟ್ಟಿ ಪೈ 6.

ಕಾರ್ಬೋಲಿಕ್ ಟೂತ್ ಪೌಡರ್. ಈ ದಂತಮಂಜನದ ಹುಡಿಯಿಂದ ಹಲ್ಲುಗಳನ್ನು ಪ್ರತಿದಿನವೂ ತಿಕ್ಕುವುದರಿಂದ, ಹಲ್ಲುಹುಳಕ, ಹಲ್ಲುನೋವು, ಪ್ಲವಡುಹುಣ್ಣು, ಮುಂತಾದವುಗಳು ಗುಣವಾಗಿ ಹಲ್ಲುಗಳು ಬಲವಾಗುವವು. ದೊಡ್ಡ ಡಬ್ಬಿ 1ರ ಕ್ರಯ 0—2—0. ಸ್ವಶ್ಲಾಘನೆಯು ಯೋಗ್ಯವಲ್ಲ. ಒಮ್ಮೆ ತರಿಸಿ ಪರೀಕ್ಷಿಸಿದರೆ ತಿಳಿದೀತು.

ಇವುಗಳ ವಿನಹಾ ಆಯುರ್ವೇದವನ್ನು ಅನುಸರಿಸಿ ತಯ್ಯಾರಿಸಿದ ಅನೇಕ ಔಷಧಗಳು ನಮ್ಮಲ್ಲಿ ತಯ್ಯಾರಿರುತ್ತವೆ. ರೋಗ ಪ್ರಕೃತಿಯನ್ನು ಈ ಕೆಳಗಿನ ವಿಳಾಸಕ್ಕೆ ಅರ್ಧ ಆಣೆ ಪೋಸ್ಟಲ್‌ಚೀಟು ಸಮೇತ ಬರಕೊಂಡಲ್ಲಿ ತಕ್ಕ ಔಷಧದ ದರವನ್ನು ತಿಳಿಸಲಾದೀತು. 1 ಡಜನ್ ಬಾಮ್ ತರಿಸಿಕೊಳ್ಳುವವರಿಗೆ ಒಂದು ಟ್ಯೂಬ್ ಪಟ್ಟಿಗೆ ಕೊಡಲಾದೀತು. ಪೋಸ್ಟಲ್ ಹಾಸಲು ಮಾಫಿ. ಏಜಂಟರಾಗುವವರಿಗೆ ಭಂಪರ ಕಮ್ಮಿಶನ್ ಕೊಡಲಾದೀತು. **M. D. R. & SONS**

Srimangireesh Aushadhalaya, UDIPI. S. C.

ಡೋಂಗರೆ ಇವರ ಬಾಲಾಮೃತ.

ಮಕ್ಕಳಿಗೆ ಅತ್ಯುತ್ತಮವಾದ ಟಾನಿಕ್ !!

ಈ ಬಾಲಾಮೃತವನ್ನು ಕುಪಯೋಗಿಸಿದ ವ್ಯಾರಿಂದ ಮಕ್ಕಳು ಶಕ್ತಿವಂತರಾಗಿ ಆರೋಗ್ಯವಂತರಾಗುವವು. ಇದು ಮಧುರ ಇರುವುದರಿಂದ ಮಕ್ಕಳು ಬಹಳ ಲವಲವಿಕೆಯಿಂದ ತಕ್ಕೊಳ್ಳುತ್ತಾರೆ.

ಡೋಂಗರೆ ಇವರ ಬಾಲಾಮೃತವನ್ನು ಕೊಂಡುಕೊಳ್ಳುವಾಗ "ಡೋಂಗರೆ" ಇವರ ಹೆಸರಿರುವದನ್ನೇ ನೋಡಿ ಪಡಕೊಳ್ಳಿರಿ.

ಬಾಟ್ಲಿ ಒಂದಕ್ಕೆ ಕ್ರಯ ೧೫ ಆಣೆ ಟ್ಪಾಲು ಖರ್ಚು ೪ ಆಣೆ.

ಶ್ರೀ. Dongre & Co., ಕೆ. ಟಿ. ಡೋಂಗರೆ ಎಂಡ್ ಕೊ.

Girgaum. Bombay.

150 ಪುಟಗಳ ಪುಸ್ತಕವು ಉಚಿತವು.

ಆರೋಗ್ಯವನ್ನು ಶಾಶ್ವತ ಸುಖವನ್ನು ಹೊಂದುವವರು. ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸದಿರುವದರಿಂದಲೇ ಅನೇಕರು ಅನಾರೋಗ್ಯವನ್ನು ಅನುಭವಿಸುತ್ತಿರುವರು. ಈ ಉತ್ತಮವಾದ ಪುಸ್ತಕವು ಆರೋಗ್ಯವರ್ಧನವನ್ನುಂಟುಮಾಡಿ ಶರೀರ ಸೌಖ್ಯವನ್ನು ದೃಢಗಾತ್ರವನ್ನು ಆಯುರ್ವೃದ್ಧಿಯನ್ನು ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು. ಇದಕ್ಕೆ ಅಂಚೆ ಕಾಸಲು ಕೂಡಾ ತಾವು ಕೊಡಬೇಕಿಲ್ಲ, ಬೇಕಾದವರು ತಿಳಿಸುವಾಗಿಯೆ ಬರೆಯಬೇಕು. (8).

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆರೋಗ್ಯನಿಗ್ರಹ ಔಷಧಾಲಯ,
157 ಬ್ರಾಡ್ವೆ ಮದ್ರಾಸ್.

S. U. N. & CO.,
BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮಾಲುಗಳನ್ನು
ಅಸಲ್ ಕ್ರಯಕ್ಕೆ ಕೊಡುತ್ತೇವೆ.
ಈ ತಿಂಗಳು ಮಾತ್ರ.

ಈ ವರುಷ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರಸ್ ಜರಿ ಸಾದಾ ಶೀರೆ, ಬೂಟಾ ಶೀರೆ, ಪೆಂಟನ ಗುಟ್ಟು, ರುಮಾಲು, ಕಣಗಳ, ಕೋಟು ಸಿಲ್ಕುಥಾನುಗಳು ಪಟ್ಟು ಚಿದರ್, ಕಾಶ್ಮೀರ್ ಸಾದಾ ಜರಿ ತಾಲುಗಳು, ಕೊರ್ಸಾಡ ಶೀರೆ, ರಡ್ಯಾಕ್ಟಿ ಮೊದಲಾದ ಎಲ್ಲಾ ತರದ ಸುಮಾರು ೩, 00 ರೂಪಾಯಿನ ಮಾಲುಗಳು ಉಳಿದಿರುವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡುತ್ತೇವೆ ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು.

ಈ ತಿಂಗಳು ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ.

ವಿಳಾಸ — ಯು.ಎಸ್.ಯು.ಎನ್. ಮತ್ತು ಕಂಪೆನಿ, ಕಾಶಿ

THE GREATEST TREASURE OF TRUE VEDIC PRINCIPLES.

ಸತ್ಯಾರ್ಥ ಪ್ರಕಾಶ

ಮೊದಲನೇ 10 ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ಪ್ರಾಣಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಉಂಟಾಯಿತೆಂಬುವದೂ ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ಆಶ್ರಮಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರುಗಳಿಗೆ ಮತ್ತು ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನೆಯೂ, ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನೆಯೂ, ವೇದಾದಿ ಸಚ್ಛಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಜನ್ಮಾಗಿ ಮಾಡಿದ್ದಾರೆ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರ ವಿಶೇಷ ಮತ್ತು ಮೊಲ್ಲಿಗಳೊಡನೆ ಮಾಡಿದ ತರ್ಕಗಳೂ ವ ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ತೋರಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ ಕಿನ್ಮತ್ತು ರೂ. ೧—೮—೦. ವಿದ್ಯಾರ್ಥಿಯವರಿಗೆ ರೂ ೧—೪—೦. ಟಪ್ಪಾಲು ಖರ್ಚು ಬೇರೆ ಪುಟ 560.

ಸತ್ಯಾರ್ಥ ಪ್ರಕಾಶ.

(೧೧ನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದ ಇತರ ದೇಶಗಳು ವಿದ್ಯೆಯನ್ನು ಪ್ರಾಚೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯು ಕಾರಣಗಳೂ ಅನ್ಯೋನ್ಯತೆ, ಮೂಢ ನಂಬಿಕೆ, ತಪ್ಪು ಸಮಜಾಯಿಷಿಗಳಿಂದಾಗಿರುವ ಹಾನಿ, ಗಯಾತೀರ್ಥ, ಪುರಾಣ ಕಥೆ, ಜ್ಯೋತಿಷ್ಯ, ಬ್ರಾಹ್ಮಣರಲ್ಲಿ ಸಂಸ್ಕೃತ ಜ್ಞಾನವಿಲ್ಲದಿರುವಿಕೆ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿದೆ ಕಿನ್ಮತ್ತು ಆಣೆ ೪ ವಿದ್ಯಾರ್ಥಿಯವರಿಗೆ ಆಣೆ ೩ ಪ್ರಾಣು ಡಿವಿ ಅಷ್ಟಪತ್ರದ ಪುಟ ೧೧೦, ಟಪ್ಪಾಲು ಖರ್ಚು ಬೇರೆ.

ಈ ಗ್ರಂಥವನ್ನು ಹಿಂದೀ ಭಾಷೆಯಿಂದಾಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ., ಎಲ್ ಎಲ್ ಬಿ, ಹೈಕೋರ್ಟ್ ವಕೀಲರ್, ರಂಗೂನ್, ಇವರು ವ್ಯಾಖ್ಯಾನಿಸುತ್ತಾರೆ ಹಿಂದೂ (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ — ಎಸ್. ಎಲ್. ಕಾಮತ್ ಧಾಕಪ್ಪನವರ
ಪೋಸ್ಟು ಶಿರ್ಸಿ, ಜಿಲ್ಲಾ ಉತ್ತರ ಕನ್ನಡ.

Estd. 1888. ಸ್ಥಾಪನೆ 1888.

K. B. RELE & Cos.,—BOMBAY
ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಚಕ್ರವರ್ತಿಗಳವರು ಫ್ರಾನ್ಸಿನಿಂದ ಹೊರಡುವ ಕಾಲದಲ್ಲಿ ಸೇನಾ ಸಂದರ್ಶನೆಯಿಂದ ತನಗೆ ಉಂಟಾದ ಕೃಪ್ತಿಯನ್ನೂ ಸಂತೋಷವನ್ನೂ ವ್ಯಕ್ತಗೊಳಿಸಿ ಒಂದು ನಿರೂಪನೆಯನ್ನು ದಯಪಾಲಿಸಿರುವರು

ನವಂಬರ ತಾ. ೫-೪.

೩೦ ಅಡಿ ಉದ್ದವಾದ ಜರ್ಮನರ 'ಸುಪರ್ ಸಬ್' ಮೆರ್ಸಾನ್ ಎಂಬ ನವೀನ ನಮೂನೆಯ ಜಲಂತರ್ಗಾಮಿ ನಾವೆಯನ್ನು ಬಹಳ ಚಾತುರ್ಯದಿಂದ ಹಿಡಿದಿಟ್ಟುಕೊಂಡಿರುವರು ಈ ಜಲಂತರ್ಗಾಮಿ ನಾವೆಯನ್ನು ನೀರಿಗೆ ಇಳಿಸಿ ಎರಡು ಘಂಟೆಗಳ ಕಾಲದಲ್ಲಿ ಇದನ್ನು ಬ್ರಿಟಿಷ ನೌಕಾಘಡೆಯವರು ಹಿಡಿದಿರುತ್ತಾರೆ.

ಫ್ರೆಂಚರು ಇತ್ತಲಾಗೆ ಕಳೆದುಕೊಂಡ ಸೇನಾನೆಲೆಯನ್ನು ಪುನಹ ಫ್ರೆಂಚರು ಶತ್ರುಗಳೊಡನೆ ಕಾದಾಡಿಕೊಂಡು ಸ್ವಾಧೀನ ಮಾಡಿಕೊಂಡಿದ್ದಾರೆ

ಫ್ರೆಂಚರು ಎರಡು ಜನ ದಾದಿಯರ ಜೀವವನ್ನು ಜರ್ಮನರ ಕೈಯಿಂದ ಉಳಿಸಿದುದಕ್ಕಾಗಿ ಅಮೇರಿಕದ ಪ್ರೆಸಿಡೆಂಟ್ ವಿಲ್ಸನರಿಗೆ ಫ್ರೆಂಚ್ ರಾಯಭಾರಿಯು ಫ್ರೆಂಚ್ ಜನಾಂಗದವರ ಕೃತಜ್ಞತೆಯನ್ನು ಸೂಚಿಸಿರುವರು.

ಜರ್ಮನರು ಬೆಲ್ಜಿಯಮ್‌ನಲ್ಲಿ ನವೀನವಾಗಿ ಸೈನಾವ್ಯೂಹವನ್ನು ಕೋಟೆ ಇತ್ಯಾದಿಗಳನ್ನು ಏರ್ಪಡಿಸಿ ಅಸುಗೊಳಿಸುತ್ತಿದ್ದಾರೆಂತ ವಾರ್ತೆ ಇರುವದು ಈ ಕೆಲಸವನ್ನು ಬೆಲ್ಜಿಯನರನ್ನು ವಕ್ತಾಯವಡಿಸಿ ಮಾಡಿಸುತ್ತಿರುವರೆಂತ ತಿಳಿದುಬರುತ್ತದೆ

ಚಕ್ರವರ್ತಿಗಳಿಗೆ ಅತ್ಯಿತ್ತ ಚಲಿಸುವಾಗ ಇದ್ದ ಬೇನೆಯು ಕಡಿಮೆಯಾಗಿದೆಂತ ತಿಳಿದುಬರುತ್ತದೆ

ಪೂರ್ವ ರಣರಂಗದಲ್ಲಿ ಸ್ವೀಲಾ ಬಳಿ ನಡೆದ ಯುದ್ಧದಲ್ಲಿ ರುಶ್ಯನರು ಒಸ್ಟ್ರಿಯನ್ ಮತ್ತು ಜರ್ಮನರ ೬೦ ಆಫೀಸರರನ್ನೂ ೩೫೦೦ ಸೈನಿಕರನ್ನೂ ಸೆರೆ ಹಿಡಿದಿರುವರ ಡ್ವಿಂಸ್ಕ್ ಬಳಿ ಶತ್ರುಗಳ ಛಿದ್ರಪಡಿಸಿದ ಎರಡು ಎತ್ತರವಾದ ಪ್ರದೇಶಗಳನ್ನು ರುಶ್ಯನರು ಸ್ವಾಧೀನ ಮಾಡಿಕೊಂಡು ಅಲ್ಲಿರುವ ಶತ್ರುಗಳ ಸೈನಿಕರನ್ನು ಸೆರೆಹಿಡಿದಿರುತ್ತಾರೆ

ಸರ್ವಿಯನರ ಸಹಾಯಾರ್ಥವಾಗಿ ಫ್ರೆಂಚರ ದಂಡು ಸೆಲೊನಿಕಾದಲ್ಲಿ ಇಳಿಯುತ್ತಿರುವುದೆಂತ ಫ್ರೆಂಚರ ಯುದ್ಧ ಸಮಾಚಾರದಲ್ಲಿರುವದು ಮೊರಾವಾ ನದಿಯ ಎರಡು ದಡಗಳಲ್ಲಿಯೂ ಸರ್ವಿಯನರು ಶತ್ರುಗಳೊಡನೆ ಬಹಳ ಕರಿಣವಾಗಿ ಕಾದಾಡುತ್ತಿದ್ದಾರೆಂತಲೂ ಇನಾವಾ ಬೈಲು ಪ್ರದೇಶದಲ್ಲಿ ಬಲ್ಗೇರಿಯದವರು ಹಿಂದಕ್ಕೆ ಸೇರಿರುವರೆಂತಲೂ ಜರ್ಮನರ ಯುದ್ಧ ಸಮಾಚಾರದಲ್ಲಿದೆ

ಇಟಲಿಯು ಕಾರ್ಸೊ ಎತ್ತರ ತಗ್ಗುಗಳಲ್ಲಿರುವ ಕಂದಕಗಳನ್ನು ಶತ್ರುಗಳಿಂದ ಪಡದಿರುತ್ತಾರೆ

ಮೊರ್ವೊಗ್ನಾಸಿ ಎಂಬ ತರ್ಕಿಯ ಉಪಸಾಗರದಲ್ಲಿ ಫ್ರೆಂಚರ ಒಂದು ಸಬ್ ಮೆರ್ರೈನ್ ನಾವೆಯು ಶತ್ರುಗಳಿಂದ ನಾಶವಡಿಸಲ್ಪಟ್ಟಿತು ಗೆಲಿಪೊಲಿದಲ್ಲಿ ಕಳದ ಎರಡು ವಾರಗಳಿಂದ ಶಾಂತತೆಯು ಇದೆ ಮರ್ಮೊರಾ ಉಪಸಾಗರದಲ್ಲಿ ಮದ್ದಿನ ಗನಿ ಇತ್ಯಾದಿಗಳನ್ನು ಶತ್ರುಗಳು ಹಾಕಿಟ್ಟರೂ ಬ್ರಿಟಿಷ ಮತ್ತು ಫ್ರೆಂಚರ ಜಲಂತರ್ಗಾಮಿ ನಾವೆಗಳು ಈ ಉಪಸಾಗರವನ್ನು ಪ್ರವೇಶಿಸಿ ತರ್ಕರ ಸೇನೆ ಇತ್ಯಾದಿಗಳನ್ನು ಈ ಸಮುದ್ರ ಮಾರ್ಗವಾಗಿ ಅತ್ಯಿತ್ತ ವಯ್ಯದಂತೆ ಮಾಡಿರುತ್ತಾರೆ

ಎವ್ಸ್‌ಟ್ರಾಡೆವ ದಲ್ಲಿ ಸಂಧಾನದ ವಿಷಯ ಚರ್ಚೆಯು ರಿಚ್ಸ್‌ಟೇಗ್ ಎಂಬ ಜರ್ಮನರ ಸರಕಾರದ ಶಭೆಯಲ್ಲಿ ಕೆಲವು ಮೆಂಬರರಲ್ಲಿ ನಡಿತ್ತಿರುವಂತ ತಿಳಿದುಬರುತ್ತದೆ ಜರ್ಮನರ ಸಂಧಾನ ಶರ್ತಗಳನ್ನು ಸರ್ ಎಡ್ವರ್ಡ್‌ಗ್ರೇಯವರು ತುಚ್ಛೀಕಾರದಿಂದ ತಿರಸ್ಕರಿಸಿದರೆಂತ ಹೆಲ್ಪ್‌ವೆಕ್ ಎಂಬ ಪತ್ರದಲ್ಲಿ ಇರುವದು.

ಕೆಚ್ನೆನರ್ ಪ್ರಭುಗಳು ಸರಕಾರದ ಇತರ ಕಾರ್ಯಗಳ ಬಗ್ಗೆ ಅಂಗ್ಲಾಳದಲ್ಲಿದ್ದ ಸಮಯದಲ್ಲಿ ಮೇ॥ ಎಸ್ಕಿತರವರು ಯುದ್ಧ ಆಫೀಸಿನ ಕೆಲಸವನ್ನು ವಹಿಸಿಕೊಳ್ಳುವರು

ಕೆಚ್ನೆನರ್ ಪ್ರಭುಗಳು ತಮ್ಮ ಕೆಲಸಕ್ಕೆ ರಾಜಿನಾಮೆಯನ್ನಿಟ್ಟಿರುವರೆಂಬ ವರ್ತಮಾನವು ಬಿಟುವಲ್ಲವೆಂತ ಅಧಿಕಾರಿಗಳಿಂದ ತಿಳಿಸೋಣಾಗಿದೆ

ಸೇನಿಕರ ಆಹಾರಾರ್ಥವಾಗಿ ನ್ಯೂಜಿಲೆಂಡಿನವರು ಒಂದು ಮಿಲಿಯ ಪವನುಗಳ ಮೌಲ್ಯದ ಗಿಜ್ಜನ್ನು ಬ್ರಿಟಿಷ ಸೇನೆಗೆ ಉಚಿತವಾಗಿ ಕೊಡುವರು ಇತ್ತಲಾಗೆ ಚಕ್ರವರ್ತಿಗಳವರು ದಯಪಾಲಿಸಿದ ನಿರೂಪನೆ ಪ್ರಕಾರ ಕೆನಡಾ ದೇಶದಲ್ಲಿ ಕಾಲು ಮಿಲಿಯ ಸೇನೆಯನ್ನು ಸಿದ್ಧಗೊಳಿಸ ತ್ತಿರುವರೆಂತ ತಿಳಿದುಬರುತ್ತದೆ.

ಬಲ್ಕಾನ್ ಯುದ್ಧರಂಗಕ್ಕೆ ಬ್ರಿಟಿಷರ ಸೇನೆಗಳೂ, ಯುದ್ಧ ಸಾಮಾಗ್ರಿಗಳೂ ಬಂದು ತಲ್ಪುತ್ತಲಿವೆ. ಬ್ರಿಟಿಷ ಸೇನೆಯು ಬಂದು ಫ್ರೆಂಚರೊಡನೆ ಸೇರಿಕೊಂಡು ಯುದ್ಧ ಕ್ಷೇತ್ರವನ್ನು ಉತ್ತರಕ್ಕೆ ವಿಸ್ತರಿಸುತ್ತಿರುವರು ಫ್ರೆಂಚರ ಫ್ರೇನಾನಿಲೆಗಳ ಮೇಲೆ ಬಲ್ಗೇರಿಯದವರು ಪದೇ ಪದೇ ಏನೂ ಫಲವಿಲ್ಲದೆ ದಾಳಿ ಇಡುತ್ತಿರುವರು. ಫ್ರೆಂಚರು ಸರ್ವಿಯದ ರೆಪಬ್ಲಿಕ್ಕಿನ ಪ್ರಾಂತ್ಯಗಳಲ್ಲಿ ಮುಂದರಿಯುತ್ತಿದ್ದಾರೆ. ಹಳೆ ಸರ್ವಿಯಕ್ಕೆ ಇಳಿದುಬರುತ್ತಿದ್ದ ಬಲ್ಗೇರಿಯನ್ನರ

ಆಯಿತು. ಇಟ್ಟೋರ್ ಸಮೀಪ ಹಲವು ದಿನ ತಾದಾಡಿ ಸರ್ವಿಯೋರು ಸದೆಬಡಿದಿಯೆಂದರು. ಈ ಕಾಳಗದಲ್ಲಿ ಫ್ರೆಂಚರ ಮತ್ತು ಬ್ರಿಟಿಶರ ಸಹಾಯವು ತಕ್ಕಕಾಲದಲ್ಲಿ ಸಿಕ್ಕಿದ್ದರಿಂದ ಸರ್ವಿಯನರು ಇಟ್ಟೋರ್ ಮತ್ತು ಗ್ರೇಡ್ಕೋವನ್ನು ಹಿಡಿದಿರುತ್ತಾರೆ. ಸರ್ವಿಯಕ್ಕೆ ಫ್ರೆಂಚು ದೇಶದಿಂದ ಆಹಾರ ಸಾಮಾಗ್ರಿಗಳು ಧಾರಾಳವಾಗಿ ಬರುತ್ತಿವೆ

ಗ್ರೀಕ್‌ದೇಶದ ಅಧಿಕಾರಿಗಳಲ್ಲಿ ಯುದ್ಧ ಪರವಾಗಿ ಅಭಿಪ್ರಾಯ ಭೇದಗಳಿಂದ ಕಲಹಗಳ ಪ್ರಸ್ತಾವನೆ ಕೇಳಿಸುತ್ತಿರುವದು ತನ್ನ ಮಂತ್ರಿಪದವಿಗೆ ರಾಜಿನಾಮೆಕೊಟ್ಟು ವೆನಿಜಿಲೊಸ್ ರವರನ್ನು ಗ್ರೀಕ್ ಅರಸರು ಪುನಃ ಮಂತ್ರಿಪದವನ್ನು ವಹಿಸಿಕೊಳ್ಳಲು ಆಜ್ಞಾಪಿಸಿರುವರೆಂಬ ವರ್ತಮಾನವಿರುವದು

ಉತ್ತರ ಹಿಂದೂಸ್ಥಾನ.

ಯುದ್ಧದ ನಂತರ ಹಿಂದೂಸ್ಥಾನದ ರಾಜ್ಯದಾಡಳಿತೆಯ ವಿಷಯದಲ್ಲಿ ಪ್ರಜಾಜನರಿಗೆ ಹೆಚ್ಚಿನ ಹಕ್ಕು ಸ್ವಾತಂತ್ರ್ಯಗಳು ಕೊಡೋಣವಾಗುವಂತೆ ಬೇಕಾದ ಪ್ರಯತ್ನಗಳನ್ನು ನಡಿಸುವಂತೆ ಹಿಂದೂ ಮಹಮ್ಮದೀಯರ ಕೆಲವು ಪ್ರತಿನಿಧಿಗಳು ಅಂಗ್ಲಾಳಕ್ಕೆ ಹೋಗಲು ಸಿದ್ಧರಾಗಿರಬೇಕೆಂದು ಬಂಗಾಳಿ ಪತ್ರಿಕೆಯು ಸೂಚಿಸಿರುವುದು

ಈ ವರುಷ ಮುಂಬಾಯಿಯಲ್ಲಿ ಕೂಡುವ ಕೊಂಗ್ರೆಸು ಸಭೆಗೆ ಪ್ರತಿನಿಧಿಗಳು ಬಹಳವಾಗಿ ಬರುವರೆಂತ ನಿರೀಕ್ಷೆಸಲ್ಪಟ್ಟಿರುವದು ಇಷ್ಟರ ತನಕ ರಾಷ್ಟ್ರೀಯ ಸಭೆಯು ಜಳ ವಳದಲ್ಲಿ ಕೈಹಾಕದೆ ಸುಮ್ಮನೆ ಇರುವ ಬಂಗಾಳದ ಬ್ಯಾರಿಷ್ಟರರು ಹಲವು ಜನ ಮಹಮ್ಮದೀಯರ ಈ ವರುಷ ಕೊಂಗ್ರೆಸು ಸಭೆಯನ್ನು ಸೇರುವರಾಗಿ ತಿಳಿದುಬರುತ್ತದೆ

ಸರ್ ಟೀಮ್ಸ್ ಮೊರ್ಟನ್‌ರವರು ಗೋಖಲೆಯವರ ಸ್ಮಾರಕ ಫಂಡಿಗೆ ರೂ ೂಗಾನ್ನು ಕೊಟ್ಟಿರುತ್ತಾರೆ

ಬಹುಮಾನಪಟ್ಟ ಪಂಡಿತ ಮದನಮೋಹನ ಮಲವಿಯಾರವರು ಹಿಂದೂ ವಿಶ್ವವಿದ್ಯಾಲಯಕ್ಕೆ ಒಳ್ಳೆ ದ್ರವ್ಯೆ ಸಂಗ್ರಹವನ್ನು ಮಾಡಲು ರಾಜಪ್ರತಾನಕ್ಕೆ ಹೋಗಿರುತ್ತಾರೆ

ಬನಾರಿಸಿನ ಜೊಯಿಂಟ್ ಮೆಜಿಸ್ಟ್ರೇಟರಾದ ಮಿ ಹೆಮಿಲ್ಟನ್‌ರ ಮುಂದೆ ಕಳವಿನ ಚಾರ್ಜಿನ ಮೇಲ ಒಬ್ಬ ಹತ್ತು ವರುಷಪ್ರಾಯದ ಇನ್ನೊಬ್ಬ ಹದಿನಾಲ್ಕು ವರಷ ಪ್ರಾಯದ ಹುಡುಗರನ್ನು ತಂದಿದ್ದರು ಮೊದಲನೆಯವನು ತಾನು ಕಳವು ಮಾಡಿದ್ದಿಲ್ಲವೆಂತಲೂ ಪೋಲೀಸಿನವರು ಗದರಿಸಿದ್ದರಿಂದ ತಾನು ಕಳವು ಮಾಡಿದ್ದು ಹೌದೆಂತ ಹೇಳಿದೆನೆಂತಲೂ ಕೋರ್ಟಿನಲ್ಲಿ ವಿಜ್ಞಾಪಿಸಿಕೊಂಡನು ಈ ಮೊಕದ್ದಮೆಯಲ್ಲಿ ೫ ಮತ್ತು ೬ ವರುಷಗಳ ಪ್ರಾಯದ ಇಬ್ಬರು ಮಕ್ಕಳು ಸಾಕ್ಷಿಗಾರರಾಗಿದ್ದರು. ಇವರ ಸಾಕ್ಷಿಗಳ ಆಧಾರದ ಮೇಲೆ ಮೇಜಿಸ್ಟ್ರೇಟರು ೧೦ ವರುಷ ಪ್ರಾಯದ ಚಿಕ್ಕ ಹುಡುಗನಿಗೆ ೭ ಕೊರಡೆಯ ಪೆಟ್ಟುಗಳನ್ನು ಕೊಡಬೇಕೆಂತ ತೀರ್ಮಾನಿಸಿದರು ೧೪ ವರುಷ ಪ್ರಾಯದ ಹುಡುಗನಿಗೆ ೮ ಚಡಿಗಳು ಹೊಡಿಯೋಣವಾಗಬೇಕೆಂದು ಅಪ್ಪಣೆಯಾಯಿತು. ತೀರ್ಮಾನದ ಪ್ರಕಾರ ಮೇಜಿಸ್ಟ್ರೇಟರೇ ಧರ್ಮಾಸನದಿಂದ ಕೆಳಗೆ ಬಂದು ತಮ್ಮ ಸ್ವಹಸ್ತಗಳಿಂದಲೇ ಈ ಮಕ್ಕಳನ್ನು ಶಿಕ್ಷಿಸಿದರೆಂಬದಾಗಿ ತಿಳಿದುಬರುತ್ತದೆ.

ಕೋಟಾ ಸಂಸ್ಥಾನದ ದರ್ಬಾರಿನವರು ಬಂದು ಗಾಜಿನ ಕಾರ್ಖಾನೆಯನ್ನು ಸ್ಥಾಪಿಸುವರೆಂತ ತಿಳಿದುಬರುತ್ತದೆ.

ಮೆ| ಗಂಧಿಯವರು ದಕ್ಷಿಣ ಆಫ್ರಿಕದಲ್ಲಿ ಶಸ್ತ್ರ ಸನ್ಯಾಸದಿಂದ ನಡಿಸಿದ ಸಾಧು ಯುದ್ಧದ ಖರ್ಚಿನ ವೃತ್ತಾಂತವನ್ನು ಇತ್ತಲಾಗೆ ಪ್ರಕಟಿಸಿರುತ್ತಾರೆ ದಕ್ಷಿಣ ಆಫ್ರಿಕದ ಭಾರತೀಯರ ಬಗ್ಗೆ ವರ್ಷದಿಸಿದ ಫಂಡಿನಲ್ಲಿ ಜನಿಯಾದ ಪೊಬಲಗು ಒಟ್ಟಿಗೆ ೬೬೫೫೪೪ ಪವನು ಗಳಾಗಿರುತ್ತದೆ ಇದರಲ್ಲಿ ಮುಂಬಯಿಯವರು ೧೮೯೧೧, ಮದ್ರಾಸಿನವರು ೪೦೫೫, ರಂಗೂನಿನವರು ೨೧೫೫, ಸ್ಟೈರೋಂಬಿಯವರು ೧೫೦, ಜಂಜಿಬಾರಿನವರು ೨೫೫ ಲಂಡನಿನವರು ೫೫೫, ಇಂಡಿಯನ್ ಒಪಿನಿಯನ್ ಎಂಬ ಪತ್ರಿಕೆಯ ಮೂಲಕ ೧೦೫೫೫ ಪವನುಗಳು ಸಂಗ್ರಹಿಸಲ್ಪಟ್ಟಿವೆಂತ ತೋರಿಬರುತ್ತದೆ ಒಟ್ಟಿಗೆ ೧೫,೬೦೦ ಪವನುಗಳ ಖರ್ಚು ತಗಲಿರುವದು ಫಂಡಿನಲ್ಲಿ ೧೫೬೫೫ ಪವನುಗಳ ಸಿಲ್ಕು ಉಳಿದಿರುವುದೆಂತ ತಿಳಿಯುತ್ತೇನೆ

ಸರ್ ಫೆರೋಜಷಹಾ ಮೇಥಾರವರ ಮರಣವು ಹಿಂದೂಸ್ಥಾನದ ಆಪ್ತರಾದ ಸರ್ ಹೆನ್ರಿ ಕೊಟನ್‌ರವರು ಗತಿಸಿದ ವಾರ್ತೆಯು ಜನಸಾಮಾನ್ಯರಲ್ಲಿ ಸರಿಯಾಗಿ ಪ್ರಸರಿಸಿವಷ್ಟರಲ್ಲಿ ಭರತಮಾತೆಯು ತನ್ನ ಇನ್ನೊಂದು ಪುತ್ರರತ್ನವನ್ನು ಸರ್ ಫೆರೋಜಷಹಾ ಮೇಥಾರವರ ಮರಣದಿಂದ ಕಳಕೊಂಡಳೆಂಬುದನ್ನು ಸೂಚಿಸಲು ಅತ್ಯಂತ ವಿಷಾದವಪಡುತ್ತೇವೆ ಹಿಂದೂಸ್ಥಾನದ ವೃತ್ತಪತ್ರಿಕೆಗಳೂ ದೇಶದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಸೇರಿದ ಪ್ರಜಾಜನರ ಸಭೆಗಳೂ ಈ ಮಹನೀಯರ ಗುಣಕಥನವನ್ನು ಮಾಡುತ್ತ ಭಾರತೀಯ ವಂದಾಳುಗಳ ಸಾಲಿನಲ್ಲಿ ಹೀಗೆ ಬರಿದಾಗಿರುತ್ತಿರುವ ಸ್ಥಾನಗಳನ್ನು ತತ್ಕಾಲದಲ್ಲಿ ಮಹಿಸಿಕೊಳ್ಳುವ ತಕ್ಕವರು ಎಷ್ಟು ಜನರು ಇರಬಹುದೆಂಬುದನ್ನು ಸೂಚಿಸಿ ದೇಶದುರ್ಭಾಗ್ಯದ ಸಲುವಾಗಿ ಪೆಬಪಡುತ್ತಿರುವವು ದೇಶದಲ್ಲಿ ವ್ಯಾಪಿಸಿರುವ ಶಿಕ್ಷಣ ಒಲದಿಂದ ಹೇಳುವದಾದರೆ ಗೋಖಲೆ, ರಾನಡೆ, ಮೇಥಾರವರಂಥಾ ಮಹಾ ಪುರುಷರ ಉದ್ಭವವು ಕೆಲವು ದಶವರುಷಗಳಲ್ಲಿ ತೋರಿಬರುವುದು ಕಷ್ಟಸಾಧ್ಯವೆಂತ ಹೇಳಬಹುದು ಯುದ್ಧವು ಮುಗಿದ ಬಳಿಕ ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿರುವ ಹಲವು ರಾಷ್ಟ್ರಗಳ ಪದವಿಗಳ ಗಣನೆಯು ಮಾರ್ಪುಗೊಳ್ಳುವ ಸಂಭವ್ಯದಲ್ಲಿ ಗೋಖಲ ಮೇಥಾರವರಂಥವರ ಮುಂದಾಳುಗಳ ನಾಯಕತ್ವವನ್ನು ಕಳಕೊಂಡ ಭಾರತೀಯರ ದುರ್ದೈವ್ಯವು ಒಲು ಕಾರಣವೇ ಸರಿ

ಮೇಥಾರವರು ಈ ತಿಂಗಳ ತಾ ೫ರಲ್ಲಿ ಪೂರ್ವಾಹ್ನ ೧೦ ಗಂಟೆ ೧೫ ನಿಮಿಷಕ್ಕೆ ಮುಂಬಯಿಯಲ್ಲಿ ಮೃತಪಟ್ಟರು ಕಳದ ಕೆಲವು ತಿಂಗಳುಗಳಿಂದ ಇವರಿಗೆ ಅನಾರೋಗ್ಯವು ಪ್ರಾಪ್ತವಾಗಿತ್ತು ಇದರಿಂದ ಹೃದ್ಬಾಧೆಯು ಇವರಲ್ಲಿ ಉಂಟಾಗಿ ಈ ಹೃದ್ಬಾಧೆಯಿಂದ ಮೇಥಾರವರು ಕಾಲವಾದರು ಮರಣವಾರ್ತೆಯು ಮುಂಬಯಿಯಲ್ಲಿ ಹಬ್ಬಿದೊಡನೆ ವೃತರ ಕಳೇಬರವನ್ನು ನೋಡ ಹೋಗಲು ಜನರು ರಾಶಿರಾಶಿಯಾಗಿ ಬಂದಿದ್ದರು ಮೇಥಾರವರ ಕುಟುಂಬಿಕರನ್ನು ಸಂತೈಸಲು ಶುಮಾರು ೫೦೦ ಜನ ಸ್ತ್ರೀಯರ ಸ್ತೋವವು ನೆರೆದಿತ್ತು ಮೆ| ಡಿ ಇ. ವಾಚಾ ಬಹುಮಾನಪಟ್ಟ ಜಿ. ಎಚ್ ವೆಟಲ್‌ವಾಡ್, ಸರ್ ಇಬ್ರಾಹಿಮ್ ರಹಿಮತುಲ್ಲಾ, ಸರ್ ಬಾಲಚಂದ್ರ ಕೃಷ್ಣ, ಬಹುಮಾನಪಟ್ಟ ಎನ್. ಎಮ್ ಸಮರ್ಥ, ಸರ್ ವಿಠಲದಾಸ ಥೆಕರ್ಸೆ, ಬಹುಮಾನಪಟ್ಟ ಅಲ್ಲುಧಾಯಿ ಸಾಮಲದಾಸ ಮೊದಲಾದ ಸಹೃದಯಸ್ಥರೂ ಮೇಥಾರವರನ್ನು ಕಡೇ ಸರ್ತಿ ನೋಡಿ ಹೋಗಲು ಬಂದಿದ್ದರು. ವೃದ್ಧ ಮೇಥಾರವರು ದಾದಾಭಾಯಿ ನವರೋಜಿಯವರ ತನ್ನ ಇಬ್ಬರು ಮೊಮ್ಮಗಂದಿಯರನ್ನು ಕಳುಹಿಸಿಕೊಟ್ಟಿದ್ದರು ದೇಶದ ಎಲ್ಲಾ ಕಡೆಗಳಿಂದ ಲೇಡಿ ಮೇಥಾರವರಿಗೆ ಸಹಸಂತಾಪವನ್ನು ಸೂಚಿಸಿ ಅನೇಕ ಪತ್ರಗಳು ತಂತಿಗಳ ಮೂಲಕ ಒಂದಿದ್ದವು ಮುಂಬಯಿಯ ಗವರ್ನರ್‌ರ ದೊರೆಗಳವರು ತಂತೀ ಮೂಲಕ ತಮ್ಮ ದುಃಖಾತಿಶಯವನ್ನು ತಿಳಿಸಿದ್ದಲ್ಲದೆ ಶವಸಂಸ್ಕಾರದ ಕಾಲದಲ್ಲಿ ಪೊಲಿಸ್ ಕೆಸ್ ಎಂಬವರನ್ನು ತನ್ನ ಪ್ರತಿನಿಧಿಗಳಾಗಿ ಕಳುಹಿಸಿಕೊಟ್ಟಿದ್ದರು ಪಾರ್ಸಿಗಳವರ ವಿಧಿ ಪ್ರಕಾರ ದಫನ ಕ್ರಿಯೆಯ ನಂತರ ಸರ್ ಚಂದಾವರಕರರವರು ಒಂದು ಚಿಕ್ಕ ಭಾಷಣದಿಂದ ಫೆರೋಜಷಹಾರವರ ಗುಣಾತಿಶಯಗಳನ್ನು ಹೃದಯಂಗಮವಾದ ರೀತಿಯಲ್ಲಿ ವರ್ಣಿಸಿದರು. ವೃತರ ದುಃಖಸೂಚನಾರ್ಥವಾಗಿ ಮುಂಬಯಿ ಮುನ್ಸಿಪಲ್ ಆಫೀಸೂ ಇತರ ಕೆಲವು ಆಫೀಸುಗಳೂ ಇವರು ಮರಣಪಟ್ಟ ದಿನ ಮುಚ್ಚಲ್ಪಟ್ಟಿದ್ದವು

ಮುಂಬಯಿಯ ಖಾರಾ ಬಂದರದಲ್ಲಿ ಒಂದು ವಿಶೇಷವಾದ ದರೋಡೆ ಕಳವು ನಡೆಯಿತು ೫ ಜನ ಪಠಾಣರು ಶಸ್ತ್ರಗಳನ್ನು ಹಿಡಕೊಂಡು ಬೆಳಿಗ್ಯೆ ೪ ಘಂಟೆಯ ಕಾಲದಲ್ಲಿ ಒಬ್ಬ ಮಾರವಾರಿಯ ಅಂಗಡಿಯನ್ನು ಪ್ರವೇಶಿಸಿ ಮಾರ್ವಾರಿಯನ್ನು ಹೆದರಿಸಿ ಅತನಿಂದ ಪೆಟ್ಟಿಗೆ ಬೀಗದ ಕೈಗಳನ್ನು ಪಡದರು ಅಂಗಡಿಗೆ ತಾಗಿರುವ ಹಿಂದು ಕೋಣೆಯಲ್ಲಿದ್ದ ಮಾರವಾರಿಯ ಮಗನು ಈ ಗದ್ದಲವನ್ನು ಕೇಳಿ ನಿದ್ದೆಯಿಂದ ಎಚ್ಚತ್ತು ಸಮೀಪವಿರುವ ಪೊಲೀಸು ಠಾಣ್ಯಕ್ಕೆ ಹೋಗಿ ಐದು ಜನ ಪೊಲೀಸು ಪ್ಯಾದೆಗಳನ್ನು ಕರಕೊಂಡು ಒಂದನು ಪೊಲೀಸಿನವರು ಬರುವಷ್ಟರಲ್ಲಿ ತಪ್ಪಿಸಿಕೊಂಡು ಓಡಿ ಹೋಗುವದು ಪಠಾನರಿಗೆ ಅಸಾಧ್ಯವಾಗಿ ಕಂಡುಬಂದದ್ದರಿಂದ ಬೇರೇನು ಉಪಾಯ ಕಾಣದೆ ಪೊಲೀಸಿನವರನ್ನು ಪಠಾನರವರ ಬಲಕಾಯಿಸಿದರು ಪೊಲೀಸು ಜವಾನರು ಕಳ್ಳರೊಡನೆ ಅಂಜದೆ ಸೆಣಡಾಡಿದರು ಭಗವಾನ್ ಎಂಬ ಪೊಲೀಸು ನವನ ಭುಜವನ್ನು ಕಳ್ಳರು ಕತ್ತಿಯಿಂದ ಕಡಿದುಬಿಟ್ಟು ಅತನು ನೆಲಕ್ಕೆ ಬಿದ್ದು ಮೃತಪಟ್ಟರೂ ಮಿಕ್ಕವರು ಕಳ್ಳರ ಅತ್ತಿತ್ತ ಹೋಗದಂತೆ ಅವರೊಡನೆ ಕಾದಾಡಿದರು. ಇಷ್ಟರಲ್ಲಿ ಇನ್ನೂ ಕೆಲವು ಜನ ಪೊಲೀಸಿನವರೂ ಪೊಲೀಸು ಇನ್ಸ್‌ಪೆಕ್ಟರರೂ ಬಂದು ಪೆಟ್ಟುಬಿದ್ದವರನ್ನು ಆಸ್ಪತ್ರೆಗೆ ಕಳುಹಿಸಿ ಕಳ್ಳರನ್ನು ಕೈದುಮಾಡಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ತಲಚೇರಿಯಲ್ಲಿ ಜನರಲ್ ಡ್ಯೂಟಿ ಡಿಪ್ಯುಟಿ ಕಲೇಕ್ಟರರಾಗಿರುವ ಮಿ| ರಾ| ರಾ| ರಾಮವರ್ಮರಾಜಭವರು ಬಳ್ಳಾರಿಯ ಜನರಲ್ ಡ್ಯೂಟಿ ಡಿಪ್ಯುಟಿ ಕಲೆಕ್ಟರರಾಗಿ ವರ್ಗಾಯಿಸಲ್ಪಟ್ಟಿರುವರು

ಪೂನೆಯ ಶಿಕ್ಷಣ ಪ್ರಸಾರಕ ಮಂಡಳಿಯವರು ಪೂನೆಯಲ್ಲಿ ಬರುವ ೧೯೧೬ನೇ ಜೂನ್ ತಿಂಗಳಂದಿನಿಂದ ಒಂದು ಸೆಕೆಂಡ್‌ಗ್ರೇಡ್ ಕಾಲೇಜನ್ನು ತೆರೆಯಲ್ಪಡುವಂತಾದ ತರ್ಯಾರಿಯನ್ನು ಮಾಡುತ್ತಿದ್ದಾರೆ. ಕಾಲೇಜಿನ ಮಂಜೂರಾತಿ ಬಗ್ಗೆ ಮುಂಬಯಿ ಯುನಿವರ್ಸಿಟಿಯವರಿಗೆ ಬಂದ ಮನವಿಯನ್ನು ಈ ಮಂಡಳಿಯವರು ಮಾಡಿತ್ತಾರೆ.

ಮೆಲೆಬಾರಿನಲ್ಲಿ ಎರ್ನಾಡ ತಾಲೂಕಿನ ಪಂಡಲೂರಿ ನಲ್ಲಿ ನಡದ ದ್ರಾಂದಲೆಯ ವೃತ್ತಾಂತವು ಅಧಿಕಾರಿಗಳ ಕಡೆಯಿಂದ ಈ ರೀತಿ ಪ್ರಕಟಿಸಲ್ಪಟ್ಟಿರುವದು. ಈ ತಿಂಗಳ ತಾ. ೧೧ನೇ ದಿನ ಬೆಳಿಗ್ಗೆ ಮೂರು ಜನ ತುಂಟ ಮಾಪಿಳ್ಳೆ ಯುವಕರಿಗೂ ಒಬ್ಬ ವಿಶ್ವರ್ಯವಂತ ಮಾಪಿಳ್ಳೆಗೂ ಮಾ ಪಿಳ್ಳೆಯ ಮನೆಯಲ್ಲಿ ಕೆಲವು ಖಾಸಗಿ ಸಂಗತಿಗಳ ಮೇಲೆ ಜಗಳ ಉಂಟಾಯಿತು. ಈ ಜಗಳಕಾರಣದಿಂದ ಇವರು ಳಿಗೆ ಬೆಂಕಿಕೊಟ್ಟರು. ಇವ್ವರಲ್ಲಿ ಈ ಮೂವರು ಯುವಕರಲ್ಲಿ ಒಬ್ಬನು ಓಡಿಹೋದನು ಅವನು ಎಲ್ಲಿರುವನೆಂಬುದು ಈ ತನಕ ಗೊತ್ತಾಗಲಿಲ್ಲ. ನಂತರ ನಡೆದ ದ್ರಾಂದಲೆಗಳಲ್ಲಿ ಈತನು ಸೇರಿದವನಲ್ಲವೆಂತ ತೋರಿಬರುತ್ತದೆ. ಮಾಪಿಳ್ಳೆಯ ಮನೆಯಲ್ಲಿ ದೊರಕಿದ ಕೆಲವು ಚೂರಿಗಳನ್ನು ಈ ಇಬ್ಬರು ಹಿಡಕೊಂಡು ಮೂರು ಜನ ನಾಯರರ ಮನೆಗಳನ್ನು ಪ್ರವೇಶಿಸಿ ಆ ಮನೆಗಳಲ್ಲಿದ್ದ ಚಿನ್ನಾಭರಣಗಳನ್ನೂ ನಗನಾಣ್ಯಗಳನ್ನೂ ಚೂರಿ ಮೊದ ಲಾದ ಶಸ್ತ್ರಗಳನ್ನು ಎತ್ತಿಕೊಂಡು ಮುತ್ತಿಕೊಂಡ ಪೇಟೆಯ ಮಾರ್ಗವಾಗಿ ಮುಂದರಿಸಿದರು. ಈ ಮಾರ್ಗದಲ್ಲಿ ಒಬ್ಬ ತೀಯಾ ಜಾತಿಯವನ ಮನೆಗೆ ಬೆಂಕಿ ಕೊಟ್ಟು ಮನೆಯಿಂದ ಹೊರಗೆ ಬರುವಾಗ ಮನೆಯ ಯಜಮಾನನಾದ ತೀಯಾನನ್ನು ಕಂಡು ಅತನನ್ನು ಬಂದು ಬರ್ಜಿಯಿಂದ ತಿವಿದು ಕೊಂದರು. ಈ ತೀಯನು ಒಂದು ಸರ್ತಿ ಮಹಮ್ಮದೀಯ ಮತವನ್ನು ಸೇರಿದ ನಂತರ ಆ ಮತವನ್ನು ಬಿಟ್ಟು ಬಂದವನೆಂತ ಹೇಳುತ್ತಾರೆ. ಆದರೆ ವಿಚಾರಿಸಿ ನೋಡಿದ್ದಲ್ಲಿ ಈ ಸಂಗತಿಯು ನಿಜವೆಂತ ತೋರಿ ಬರುವದಿಲ್ಲ ತಾ. ೧೧ನೇ ದಿನ ಮಧ್ಯಾಹ್ನದಲ್ಲಿ ಈ ಯುವಕರು ಒಬ್ಬ ಮಾಪಿಳ್ಳೆಯಿಂದ ಒಂದು ಕೋವಿಯನ್ನು ಪಡಕೊಂಡಿದ್ದರೆಂಬುದಾಗಿ ಕಾಣುತ್ತದೆ. ಇವರು ನೆನ್ನಿನ ಗ್ರಾಮದ ಕಡೆಗೆ ಹೋದ ನಂತರ ಇವರು ನಡಸಿದ ದಾಂದಲೆಯು ಖಂಡಿತವಾಗಿ ಏನಾಗಿರುವದೆಂತ ತಿಳಿದು ಬರುವದಿಲ್ಲ. ಈ ದ್ರಾಂದಲೆಯು ಖಾಸಗಿ ವಿವಾದಗಳಿಂದ ಉಂಟಾಯಿತಲ್ಲದೆ ಮತಸಂಬಂಧವಾಗಿ ಅಲ್ಲವೆಂತ ಗೊತ್ತಾಗುತ್ತದೆ.

ಬಾಸೆಲ್ ಮಿಶನಿನ ಕೈಕೆಳಗಿರುವ ವಿದ್ಯಾಸಂಸ್ಥೆಗಳಿಗೆ ಸರಕಾರದಿಂದ ಅಥವಾ ಮುನ್ಸಿಪಲ್ ಮತ್ತು ಲೋಕಲ್ ಬೋರ್ಡುಗಳಿಂದ ಗ್ರೇಂಟು ಕೊಡೋಣಾಗುವ ವಿಷಯವು ಸರಕಾರದವರಿಂದ ಪರ್ಯಾಲೋಚಿಸಲ್ಪಟ್ಟು ಇದೇ ಕಳೆದ ಅಕ್ಟೋಬರ ತಿಂಗಳ ತಾ ೩೧ರಿಂದ ಬಾಸೆಲ್ ಮಿಶನಿನ ಕೈಕೆಳಗಿರುವ ಎಲ್ಲಾ ವಿದ್ಯಾಸಂಸ್ಥೆಗಳಿಗೆ ಗ್ರೇಂಟು ಕೊಡೋಣಾಗಲಿಕ್ಕಿಲ್ಲವೆಂಬುದನ್ನು ಮದ್ರಾಸು ವಿದ್ಯಾವ್ಯಾತೆಯ ಡಿರೆಕ್ಟರರು ನೋಟೀಸು ಮೂಲಕ ಈ ಶಾಲೆಗಳಿಗೆ ತಿಳಿಯಪಡಿಸಬೇಕೆಂದು ಮದ್ರಾಸ ಸರಕಾರದವರು ಆಜ್ಞಾಪಿಸಿರುವರು.

ದಕ್ಷಿಣ ಕನ್ನಡ.

ಪುತ್ತೂರು. ಇಲ್ಲಿಯ ಸಾವಕಾರ ರಾ। ಕೆ. ಶ್ರೀನಿವಾಸ ನ್ಯಾಕರಿಗೆ ಇದೇ ಕಳದ ೧೯ನೇ ಅಕ್ಟೋಬರ ವರುಷಕ್ಕೆ ಇಲ್ಲಿಯ ತಾಲೂಕು ಖಾವಂದರವರು ರೂ. ೫೦ ಆದಾಯ ತೆರಿಗೆ ಹೊರಿಸಿದ ಕುರಿತು ಮಾಡಿದ ಆಕ್ಷೇಪಣೆ ತನಪಿಯಲ್ಲಿ ರೂ. ೪೦ ಜಾಸ್ತಿ ತೆರಿಗೆ ಹೊರಿಸಿದ್ದರು. ಮೇಲಾಧಿಕಾರಿಗಳಿಗೆ ಅಪ್ಪೀಲು ಮಾಡಿದಾಗ್ಯೂ ತೆರಿಗೆ ಸ್ಥಿರಪಡಿಸಿದ ಕುರಿತು ಗವರ್ನಮೆಂಟಿಗೆ ಮಾಡಿದ ಅಪೀಲು ವ್ಯನೆಹರಣೆಯಲ್ಲಿ ತಹಸೀಲದಾರರು ವಸೂಲುಮಾಡಿದ ತೆರಿಗೆಯನ್ನು ರಿಫಂಡ ಮಾಡಬೇಕೆಂತ ಗವರ್ನಮೆಂಟಿನವರ ಹುಕುಂ ಮೇಲೆ ಜಿಲ್ಲಾ ಕಲೆಕ್ಟರ ಧೊರೆಗಳವರ ಹುಕುಂ ತಲಪಿರುವದು. ಕಕ್ಷೆಗಾರರಿಗೆ ಇದು ವೃಥಾ ಖರ್ಚಿಗೆ ಕಾರಣವಲ್ಲವೆ?

ಇಲ್ಲಿಯ ಅಸಿಸ್ಟಾಂಟ್ ಸರ್ಜನರಿಗೆ ಚೊಲಾರಪೇಟೆಗೆ ವರ್ಗವಾದುದರಿಂದ ಇವರ ಚಾರ್ಜನ್ನು ಮಾ। ರಾ। ರಾ। ಈ. ವೆಂಕಟ್ರಾಯರವರು ತಾ. ೧೭ರಲ್ಲು ವಹಿಸಿಕೊಂಡರು.

ಇಲ್ಲಿಯ ಅಬ್ಕಾರಿ ಸಬ್ ಇನ್ಸ್‌ಪೆಕ್ಟರ ರಾ। ರಾಮಕೃಷ್ಣ ಕ್ವಿತ್ತಿಯವರು ಉಡ್ಪಿ ತಾಲೂಕು ಹೆಬ್ರಿ ರೇಂಜಿಗೆ ವರ್ಗಾಯಿಸಲ್ಪಟ್ಟಿದ್ದರಿಂದ ಇವರ ಚಾರ್ಜನ್ನು ಕಾಸರಗೋಡ ಸರ್ಕಲ್ ಅಬ್ಕಾರಿ ಇನ್ಸ್‌ಪೆಕ್ಟರರ ಆಫೀಸ್ ಹೆಡ್ ಕ್ಲಾರ್ಕರಾಗಿದ್ದ ರಾ। ಅಪ್ಪಕಟ್ಟಿ ಪಣಿಯಾಟ್ಟರವರು ತಾ ೧೭ರಲ್ಲು ವಹಿಸಿಕೊಂಡಿರುವರು.

ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫ್‌ಕೋರ್ಟ ಹೆಡ್ ಕ್ಲಾರ್ಕರಾಗಿದ್ದ ರಾ ಲಂಗರಾಯರು ಮೂರು ತಿಂಗಳವರೆಗೆ ಡಿಸ್ಟ್ರಿಕ್ಟ್ ಕೋರ್ಟಿನ ಪ್ರೆನ್ಸಿಪಲ್ ಕೆಲಸಕ್ಕೆ ನೇಮಕಪಟ್ಟರಿರುವದರಿಂದ ಅವರ ಒದಲಿಗೆ ಉಡ್ಪಿ ಮುನ್ಸಿಫ್ ಕೋರ್ಟ್ ಎರಡನೆ ಕ್ಲಾರ್ಕರಾ ಯು ರಂಗರಾಯರು ತಾ ೧೭ರಲ್ಲು ಕೆಲಸದ ಮೇಲೆ ಹಾಜರಾಗಿ ಚಾರ್ಜು ವಹಿಸಿಕೊಂಡರು.

ರಜೆ ಮೇಲೆ ಹೋದ ಇಲ್ಲಿಯ ಶಿರಸ್ತೆದಾರ ರಾ। ಯು. ವೆಂಕಟಪ್ಪನವರು ತಾ ೪ರಲ್ಲು ಹಾಜರಾಗಿ ಆ ಶಿರಸ್ತೆದಾರರಾಗಿದ್ದ ರಾ। ಯು. ಅನಂತಯ್ಯನವರಿಂದ ಚಾರ್ಜು ವಹಿಸಿಕೊಂಡಿರುವರು.

ಪುತ್ತೂರು ಪರಸ್ಪರ ಸಹಾಯಕ ಸಂಘದ ಸರ್ವಾಸಮಿತಿ ಮಹೋತ್ಸವವು ಡಿಸ್ಟ್ರಿಕ್ಟ್ ಕಲೆಕ್ಟರ್‌ರವರಾದ ಮಾ। ರಾ। ರಾ। ಪಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಒಳ್ಳೆ ಸರ್ವಾರಂಭದಿಂದ ನಡೆಯಿತು. ಸಂಘದ ಆಫೀಸನ್ನೂ ಭಾಷ್ಯಮಯ್ಯಂಗಾರ್ ಟ್ರೆನ್‌ಹೋಲ್ ವಂದಿರವನ್ನೂ ವಿದವಿದದ ತೋರಣಗಳು, ಪತಾಕೆಗಳು, ನಕ್ಷೆಗಳು, ಹೂವಿನ ಮಾಲೆಗಳು, ಇತ್ಯಾದಿಗಳಿಂದ ಒಕ್ಕು ಚೆಲುವಾಗಿ ಅಲಂಕರಿಸಿದ್ದರು ಸಭೆಯಲ್ಲಿ ಎಲ್ಲಾ ಸರಕಾರಿ ಉದ್ಯೋಗಸ್ಥರು, ವಕೀಲರು, ವ್ಯಾಪಾರಸ್ಥರು, ಮೊದಲಾದ ಊರಿನ ಸರ್ವ ಮಂಡಿ ನಿವಾಸಿಕರೂ ಹಾಜರಿದ್ದರು ಪರಸ್ಪರ ಸಹಾಯಕ ಸಂಘಗಳ ಇನಸ್ಪೆಕ್ಟರರಾದ ರಾ। ಗಿರಿಯಪ್ಪನವರು ತನಗೆ ಉತ್ಸವಕಾಲದಲ್ಲಿ ಹಾಜರಿರುವರೆ ಬೇರೆ ತಾಪತ್ರಯಗಳಿಂದ ಉಪಾಯವಿಲ್ಲವೆಂದೂ, ಸಂಘದ ಈ ಕಾರ್ಯಕ್ಕೆ ಶುಭವನ್ನು ಒಯಸಿಯೂ ತಂತಿ ದ್ವಾರಾ ತಿಳಿಸಿದ್ದರು. ಅಧ್ಯಕ್ಷರ ಸ್ವಾಗತವಾದನಂತರ, ರಾ। ಬೈಂದೂರ ಆನಂದರಾಯರು "ಪುತ್ತೂರಿನಲ್ಲಿ ಪರಸ್ಪರ ಸಹಾಯ" ಎಂಬುದರ ಕುರಿತು ಒಂದು ಉಪನ್ಯಾಸ ಮಾಡಿದರು. ಕಡೆಗೆ ಅಧ್ಯಕ್ಷರು ಪುತ್ತೂರು ಸಂಘದಲ್ಲಿ ಜ್ಯಾರಿಗೆ ತಂದಿರುವ ಅನೇಕ ವಿಪಾಡುಗಳನ್ನು ಕ್ಲಾಘನೆ ಮಾಡಿದರಲ್ಲದೆ ಸಹಕಾರದ ವಿಷಯವಾಗಿ ವಿಧವಿಧವಾಗಿ ಬೋಧಿಸಿ ಭಾಷಣಮಾಡಿದರು ಅನಂತರ, ಶಾಲಾ ಹುಡುಗರು "ಸಹಕಾರಾಭ್ಯುದಯ" ವೆಂಬ ಸಣ್ಣ ನಾಟಕವನ್ನಾಡಿದರು ನಾಟಕದಲ್ಲಿ ಅಭಿನಯಿಸಿದ ಹುಡುಗರಿಗೆ ಯೋಗ್ಯವಾದ ಇನಾಮುಗಳನ್ನು ಕೊಟ್ಟಮೇಲೆ, ಅಖೈರಿಗೆ ರಾಜಗೀತವನ್ನು ಹಾಡಿದೊಡನೆ ಸಭೆಯು ಮುಕ್ತಾಯವಾಯಿತು. ಸಾಯಂಕಾಲವಾದ ಮೇಲೆ ದೀಪೋತ್ಸವವೂ ಇತ್ತು

ದಬ್ಬಾರು ಇನಾಮು ಪರೀಕ್ಷೆ ಪುತ್ತೂರು.

ಈ ಪರೀಕ್ಷೆಯಲ್ಲಿ ಈ ವರ್ಷ ಕೆಳಗೆ ಕಾಣಿಸಿದ ಇಬ್ಬರು ವಿದ್ಯಾರ್ಥಿಗಳು ಇನಾಮಿಗೆ ಅರ್ಹರಾಗಿರುತ್ತಾರೆ.

೪ನೇ ದರ್ಜೆ ಬೆಳ್ಳಾರೆ ರಾಮದಾಸ; ಪಂಜಾ ಬೋರ್ಡು ಶಾಲೆ ಇವನಿಗೆ ಒಂದು ಬೆಳ್ಳಿಯ ಬಹುಮಾನ ಪದಕವು ಕೊಡಲಾದೀತು. ೩ನೇ ದರ್ಜೆ ಸೂಣಂಗೇರಿ ಚಿನ್ನಪ್ಪಾ ಸುಳ್ಯ ಬೋರ್ಡಶಾಲೆ; ಇವನಿಗೆ ಯೋಗ್ಯವಾದ ಇನಾಮು (ಪುಸ್ತಕಗಳು) ಕೊಡಲಾದೀತು. ಇವರಿಗೆ ಮೇಲ್ಕಂಡ ಇನಾಮುಗಳನ್ನು ಬರುವ ದಶಂಬರ ತಾ. ೧೫ರಲ್ಲು ಪುತ್ತೂರು ಬೋರ್ಡು ಕಾಲೆಯಲ್ಲಿ ಕೊಡೋಣಾಗುವದು.

ಬಂಟ್ವಾಳ:— ಈ ಜಿಲ್ಲೆಯು ತೊಡಗಿದಂದಿನಿಂದ ಒಂದು ಒಗೆಯ ಜ್ವರವು ವಿಶೇಷವಾಗಿ ಜನರನ್ನು ಪೀಡಿಸುತ್ತಿದೆ ಅದು ಪ್ರಖ್ಯಾತವಾದ ನಮ್ಮೂರಿನ ಜ್ವರವೂ ಅಲ್ಲ; ಬೇರೇ ಊರಿನ ಜ್ವರವೂ ಅಲ್ಲ. ಪ್ರಾರಂಭವಾದೊಡನೆ ತಾಪವೇರಿ ೧೦೫ ಡಿಗ್ರಿಗಳವರೆಗೆ ಹೋಗುವದು, ನಂತರ, ಫಕ್ಕನೆ ಇಳಿಯುವುದು, ಹೀಗೆ ಒಂದು ಒಂದೂವರೆ ತಿಂಗಳುಗಳವರೆಗೆ ಪೀಡಿಸಿ, ರೋಗಿಗಳ ಸಂಬಂಧದವರನ್ನು ಬೆದರಿಸುವುದು. ನಮ್ಮ ಡಾಕ್ಟಾರರ ಕೈಕೆಳಗೆ ಇಂತಹ ೧೦೦ಗಟ್ಟಲೆ ರೋಗಿಗಳಿದ್ದರು. ಹೇಗೂ ಅವರೆಲ್ಲರು ಕ್ಷೇಮ ಪಡದಿರುವರು ಇನ್ನು ಈ ಜ್ವರಕ್ಕೆ ಬೆದರಬೇಕಾಗಿಲ್ಲ; ಆಸ್ಪತ್ರೆಯ ಮದ್ದಿನಿಂದ ಸುಲಭವಾಗಿ, ಒಳ್ಳೆಯ ಪಥ್ಯದೊಡನೆ, ಈ ಜ್ವರವನ್ನು ಕಿತ್ತುಹಾಕಬಹುದಾಗಿ ಧೈರ್ಯದಿಂದ ಹೇಳುವೆವು.

ಜಾನುವಾರುಗಳಿಗೆ ರೋಗ ಚಿಕಿತ್ಸೆ ಒಲ್ಲ ವೆಟರಿನರಿ ಸರ್ಜನರು ಈ ಪಿಲ್ಲೆಯಲ್ಲಿ ಇದ್ದಾರೊ, ಇಲ್ಲವೊ, ಇದ್ದವರು ಹೋದರೊ, ಇರಲೇ ಇಲ್ಲವೊ, ಅಥವಾ ಅವರು ಅಗತ್ಯವಿಲ್ಲವೊ? ಎಂಬುವ ಪ್ರಶ್ನೆಗಳನ್ನು ನಮ್ಮ ಪೇಜೆಯಲ್ಲಿ ಆಗಾಗ್ಗೆ ಕೇಳಬಹುದು ಅಲ್ಲದೆ ಜನಕರುಗಳು ನರಳಿ ನರಳಿ ಸಾಯತೊಡಗಿವೆ ಆಪಿಸಿಯಲ್ ರಿಪೋರ್ಟ್ ಹೋಗಿರಬಹುದು ಸೆಂಪಿವ್ ಮದ್ದಿಗೆ ಬೆಲೆ ಇಲ್ಲ.

ಸುಳ್ಯ:— ಇಲ್ಲಿಯ ಕೆಲಸಿಕಪ್ಪೆಯ ಪೆಂಜೆ ನಿವಾಸಿಕರು ತಮ್ಮ ತಮ್ಮ ಜಾನುವಾರುಗಳನ್ನು ರಾತ್ರೆಕಾಲ ಕಟ್ಟದೆ ಇರುವ ದೆಶೆಯಿಂದ ಮಡಿಕೇರಿ ರಸ್ತೆ ಮೇಲೆ ಮಲಗಿಕೊಂಡಿರುವದರಿಂದ ರಾತ್ರೆಕಾಲ ಹೋಗುವ ಜನರಿಗೂ, ಗಾಡಿ ವಗ್ಗೆರೆ ವಾಹನಗಳನ್ನು ಆಮದು ರಫ್ತು ಮಾಡಿಕೊಂಡು ಹೋಗುವರೆ ಬಹಳ ತೊಂದರೆಯಾಗುವದರಿಂದ ದಯಾಳಾದ ಸರಕಾರದವರು ವಾಡಿಕೆ ಮೇರೆಗೆ ನಾಡುಮ್ಯುಗಗಳನ್ನು ಕಟ್ಟಿ ಹಾಕಿಸುವರೆ ಹುಕುಂ ದಯಪಾಲಿಸುತ್ತಿದ್ದರೆ ಬಹು ಉಪಕಾರವಾಗುವದೇ ಸರಿ.

ಇದ್ದ ಒಂದು ಛತ್ರವನ್ನು ಆಸ್ಪತ್ರೆಯಾಗಿ ಉಪಯೋಗಿಸಿಕೊಂಡು ಒರುವದರಿಂದ ಪ್ರಯಾಣಿಕರ ಬಿಡಾರದ ಸ್ಥೆ ಬಹಳ ತೊಂದರೆಯಾಗಿದೆ. ಆದ್ದರಿಂದ ಹೊಸ್ತಾಗಿ ಕಟ್ಟಿದ ಆಸ್ಪತ್ರೆ ಕಟ್ಟೋಣದ ಕೆಲಸಗಳು ಬೇಗನೆ ತೀರಿಸಿ ಆಸ್ಪತ್ರೆಯನ್ನು ಹೊಸ ಕಟ್ಟೋಣಕ್ಕೆ ವೈಯ್ಯುತ್ತಿದ್ದರೆ ಪ್ರಯಾಣಿಕರಿಗೆ ಬಹು ಉಪಕಾರವಾಗುತ್ತಿತ್ತು

ಮಂಗಳೂರು. ಜಿಲ್ಲಾ ಕಲೆಕ್ಟರ ದೊರೆಗಳವರು ತಾ ೧೭ರಲ್ಲಿ ಇಲ್ಲಿಂದ ಬಂಟ್ವಾಳಕ್ಕೆ ಸರ್ಕೀಟಿನ ಮೇಲೆ ಹೋಗಿರುವರು. ತಾರೀಕು ೧೭ರಿಂದ ಬಂಟ್ವಾಳದಿಂದ ಪುತ್ತೂರಿಗೆ ಹೋಗಿ ತಾರೀಕು ೨೪ರ ವರೆಗೆ ಪುತ್ತೂರಿನಲ್ಲಿರುವರು. ತಾ ೨೪ರಲ್ಲಿ ಪುತ್ತೂರಿನಿಂದ ತೆರಳಿ ತಾ ೨೫ಕ್ಕೆ ವಿಟ್ಲದಲ್ಲಿರುವರು ವಿಟ್ಲದಿಂದ ಕಾಸರಗೋಡಿಗೆ ಹೋಗಿ ತಾ ೨೬, ೨೭, ೨೮ ಮತ್ತು ೨೯ ಕಾಸರಗೋಡಿನಲ್ಲಿಯೂ, ೩೦ ಮತ್ತು ೩೧ ಮಂಜೇಶ್ವರದಲ್ಲಿಯೂ ಸರ್ಕೀಟು ಬೆಳಿಸಿ ತಾ. ೩೨ಕ್ಕೆ ಮಂಗಳೂರಿಗೆ ಬರುವರು

ಈ ತಿಂಗಳ ತಾ. ೩೨ರಲ್ಲಿ ಡಿಸ್ತ್ರಿಕ್ಟ್ ಬೋರ್ಡಿನವರ ಸಭೆ ಕೂಡುವದು.

ಮೂಯೆ ವಾರಗಳ ಹಿಂದೆ ಕಡ್ರೆ ಕೆರೆಗಳ ಬಳಿ ಒಬ್ಬ ಕ್ರೈಸ್ತನಿಗೂ ಮಹಮ್ಮದೀಯನಿಗೂ ಜಟಾಪಟಿ ನಡೆದ ಮಹಮ್ಮದೀಯನು ಕ್ರೈಸ್ತನಿಗೆ ಹೊಡೆದದ್ದರಿಂದ ಈ ಮಹಮ್ಮದೀಯನ ಮೇಲೆ ತಪ್ಪು ಸಾಬೀತಾಗಿ ರೂ. ೧೦೦ ರ

ಗುರುಮಾನೆಯ ಶಿಕ್ಷೆಗೆ ಗುರಿಯಾದನು. ಈ ಜಟಾಪಟಿಯ ಕಾರಣವೇನೆಂದರೆ—ಮಹಮ್ಮದೀಯನು ಕೈಯಲ್ಲಿ ಮಾಂಸವನ್ನು ಹಿಡಕೊಂಡು ಕದ್ರಿ ಕೆರೆಗಳ ಮೇಲಿರುವ ಮಸೀದಿಗೆ ಹೋಗಿ ಅಲ್ಲಿರಿದ ಪುನಃ ಕೆರೆಗಳ ಸವಿಾಪ ಬಂದು ಮಾಂಸವನ್ನು ಕೆರೆಗಳಲ್ಲೊಂದರಲ್ಲಿ ತೊಳಿಯಲು ಪ್ರಾರಂಭಿಸಿದನು. ಈ ವೇಳೆ ಕೆರೆಗಳಲ್ಲಿ ಸ್ನಾನವನ್ನು ಮಾಡುತ್ತಿದ್ದ ಕೆಲವು ಹಿಂದೂಗಳೂ ಈ ಕೈೃತ್ಯನೂ ಮಹಮ್ಮದೀಯನು ಈ ರೀತಿ ಮಾಂಸ ತೊಳಿಯುವದನ್ನು ನೋಡುತ್ತಿದ್ದರು. ಜನರು ಸ್ನಾನದ ಒಗ್ಗೆ ಉಪಯೋಗಿಸುತ್ತಿದ್ದ ಕದ್ರಿ ಮಂಜುನಾಥ ದೇವರ ಕೆರೆಯ ನೀರಿನಲ್ಲಿ ಮಾಂಸವನ್ನು ತೊಳಿಯುವುದು ಅಕ್ಷೇಪಕರವೆಂತ ಆ ಕೈೃತ್ಯನಿಗೆ ಮಾತ್ರ ತೋರಿತು. ಮಹಮ್ಮದೀಯನ ವಿಚಾರಹೀನ ವರ್ತನೆಯನ್ನು ನೋಡಿ ಸುವ್ಮನಿರಲಾರದೆ ಮಾಂಸವನ್ನು ತೊಳಿಯಬಾರದೆಂತ ಕೈೃತ್ಯನು ಹೇಳಿದನು. ಇಬ್ಬರಿಗೂ ವಿವಾದವು ನಡೆದು ವಿವಾದವು ಕೋರ್ಟಿನಲ್ಲಿ ಮೇಲ ಸೂಚಿಸಿದ ರೀತಿಯಲ್ಲಿ ಇತ್ಯರ್ಥವಾಯಿತ ಪರಿಶುದ್ಧ ಸ್ಥಳವನ್ನು ಭ್ರಷ್ಟಗೊಳಿಸಿದ ತಪ್ಪಿನ ಮೇಲ ಫಿರ್ಯಾದು ದಾಖಲು ಮಾಡಲೂ ಕೈೃತ್ಯನಿಗೆ ಸಾಧ್ಯವಾಗಲಿಲ್ಲ. ಅಲ್ಲಿ ಸ್ನಾನ ಮಾಡುತ್ತಿದ್ದ ಹಿಂದೂಗಳು ಅಥವಾ ಈ ದೇವಸ್ಥಾನದ ತಸದೀಕಿನಿಂದ ಉದರಪೋಷಣೆಯನ್ನು ಮಾಡುತ್ತಿರುವ ಹಿಂದೂಗಳು ಕೆರೆಗಳ ನೀರಿನ ಪರಿಶುದ್ಧತೆಯನ್ನು ಭ್ರಷ್ಟ ಗೊಳಿಸಿದ ಸಬಬಿನ ಮೇಲೆ ಫಿರ್ಯಾದು ದಾಖಲು ಮಾಡತ್ತಿದ್ದರೆ ಈ ಮಹಮ್ಮದೀಯನು ವಿಶೇಷ ಶಿಕ್ಷೆಗೆ ಗುರಿಯಾಗುತ್ತಿದ್ದನು.

ಈ ತಿಂಗಳ ತಾ ೧೩ನೇ ಶನಿವಾರ ಬಾಬು ಹೆಂವ ಚಂದ್ರ ಸರಕಾರ ಎಮ್ ಎ.ರವರು ಇಲ್ಲಿಯ ಗಣಪತಿ ಸೆಕೆಂಡರಿ ಶಾಲೆಯಲ್ಲಿ 'ದೇಶಸೇವೆ'ಯ ವಿಷಯ ಬಂದು ಉಪನ್ಯಾಸವನ್ನು ಮಾಡುವರು.

ಮುನ್ಸಿಪಲ್ ಚೇಯರ್‌ಮೆನ್‌ರಾದ ಮಾ| ರಾ| ರಾ ದಿವಾನ್ ಸಹದ್ದೂರ ಎಮ್. ವೆಂಕಂಡಪ್ಪ ಒಂಗೇರರವರು ಎರಡು ತಿಂಗಳ ರಜೆಯನ್ನು ಪಡಕೊಳ್ಳುವದರಿಂದ ಮುನ್ಸಿಪಲ್ ವೈಸ್ ಚೇಯರ್‌ಮೆನ್‌ರಾದ ಡಾಕ್ಟರ್ ಎಲ್ ಪಿ ಫರ್ನಾಂಡೀಸರವರು ಚೇಯರ್‌ಮೇನರ ಚಾರ್ಜನ್ನು ವಹಿಸಿಕೊಳ್ಳುವರು.

ಇಲ್ಲಿಯ ಆಸ್ಪತ್ರೆಗಳ ಸಂಶೋಧನೆಗಳ ಒಗ್ಗೆ ಒಬ್ಬ ಮಾನವಪಟೆ ಸರ್ಜನ್ ಜನರಲ್‌ರವರು ಇಲ್ಲಿಗೆ ಬಂದಿದ್ದರು. ಆಸ್ಪತ್ರೆಗಳನ್ನೂ ವೆಂಟ್‌ಲೆಂಡ್ ವೇಜ್ ಇತ್ಯಾದಿಗಳನ್ನೂ ನೋಡಿಕೊಂಡು ನಿನ್ನೆಯ ಬೆಳಗ್ಗಿನ ಸೈಲ್ ಬಂಡಿಯಲ್ಲಿ ಇಲ್ಲಿಂದ ತೆರಳಿರುತ್ತಾರೆ

ಮುಂದಿನ ಜೂನ್ ತಿಂಗಳಲ್ಲಿ ನಡೆಯುವ ಮದ್ರಾಸು ನ್ಯಾಯವಿಧಾಯಕ ಸಭೆಯ ಮೆಂಬರರ ಚುನಾವಣೆ ಕಾಲದಲ್ಲಿ ಮಲೆಬಾರ ಮತ್ತು ಕನ್ನಡ ಜಿಲ್ಲಗಳ ಮುನ್ಸಿಪಲ್ ಕೌನ್ಸಿಲುಗಳ ಮತ್ತ ಲೋಕಲ್ ಬೋರ್ಡ್‌ಗಳ ಪರವಾಗಿ ಕಲ್ಲಿಕೋಟೆಯ ವಕೀಲರೂ ಡಿಸ್ಟ್ರಿಕ್ಟ್‌ಬೋರ್ಡ್ ಮೆಂಬರರೂ ಆದ ರಾ| ಸಿ ಕರುಣಾಕರ ಮೇನನರವರು ಉಮೇದ್ವಾರರಾಗಿ ನಿಲ್ಲುವರೆಂತ ತಿಳಿಯಪಡಿಸಿರುವರು

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೩ ಪ್ಲೇಗು ಮರಣಗಳಿದ್ದವು.

ಯುದ್ಧದ ಫಂಡಿನ ಸಹಾಯಾರ್ಥವಾಗಿ ನಮ್ಮ ಡಿಸ್ಟ್ರಿಕ್ಟ್ ಜಡ್ಜ ಮಿ| ಎ. ಜಿ. ಕರ್ಗೆನವೆನ್ ಧೊರೆಗಳವರ ಉದಾರ ಆಶ್ರಯದಮೇಲೆ ಮಂಗಳೂರು ಎಮೆಚುರ ಡ್ರೆಮೆಟಿಕ್ ಕಂಪೆನಿಯವರು ಸಂಗೀತ ದಾಮಾಜಿ ಎಂಬ ಮರಾಠಿ ನಾಟಕವನ್ನು ಗಣಪತಿ ಸೆಕೆಂಡರಿಶಾಲೆಯ ಜೊಸಳೆಟ್ಟೆಯಲ್ಲಿ ಇದೇ ನವೆಂಬರ ತಿಂಗಳ ತಾ. ೧೩ನೇ ಶನಿವಾರ ರಾತ್ರಿಯಲ್ಲಿ ಆಡಿತೋರಿಸುವರು

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಸ್ಮಾಲನಂಬ್ರ (ಗಿ) 736

ಇಬ್ರಾಮತಂಡೇಲ, ಇಬಿಜಿ ಇಸಾಕನ ಮಗ ಕುಂದಾಪುರ ತಾಲೂಕು ಶಿರೂರು ಗ್ರಾಮ — ವಾದಿ

ಸೈಯ್ಯದ್ ಮೊದಿನ ಸೈಯ್ಯದ್ ಹವ್ವದ ಬಾಪುಸಾಹೇಬ ಸೈಯ್ಯದ್ ಅಲ್ಲೆಸಾಹೇಬರ ಮಗ ಬಟ್ಟಳಪೇಟಾ. — ಪ್ರತಿವಾದಿ

ಸದರಿ ವಾದಿಯು ಪ್ರತಿವಾದಿಯ ಮೇಲೆ ಮೇಲ್ ಕಾಣಿಸಿದ ಕೋರ್ಟಿನಲ್ಲಿ ರೂ. ೧೧—೪—೪ಕ್ಕೆ ಮಾಡಿದ ದಾವೆಯು ತಾ ೩೫—೧೦—೧೯೧೫ಕ್ಕೆ ತನಕೆಗೆ ಇಟ್ಟದೆಯೆಂಬ ಸಂಗತಿ ಈ ಮೂಲಕ ತಿಳಿಸಿರುತ್ತದೆ

ಕುಂದಾಪುರ ತಾ ೪—೧೧—೧೫) K Narasimha Kamath
ವಾದಿ ವಕೀಲ

ಇಸ್ತಿಹಾರು.

ಶ್ರೀಮಜ್ಜಗದ್ಗುರು ಸಂನ್ಯಾಸದ ಶ್ರೀಂಗೇರಿ ಶ್ರೀಮಠದ ಆಚಾರವಿಚಾರಾಧಿಕಾರಸ್ಥಾನದಿಂದ

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿರುವ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ—

ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿರುವ ಶ್ರೀಮಠದ ಶಿಷ್ಯ ಜನರುಗಳ ಆಚಾರವಿಚಾರ ನಡಿಸತಕ್ಕ ಒಗ್ಗೆ ತಾಲೂಕು ವಾರು ನೌಕರರು ಬೇಕಾಗಿರುತ್ತದೆ ಪ್ರತಿ ಒಂದು ತಾಲೂಕು ಗುತ್ತಿಗೆಗೆ ಕೊಡಲ್ಪಡುತ್ತೆ ಗುತ್ತಿಗೆರರಾವಾಗಿ ಮಂಜೂರಾದ ಮೊಬಲಗಿನಲ್ಲಿ ರೂಪಾಯಿ ಒಂದರ ನಾಲ್ಕಾಣೆಗಳು ಮುಂಗಡವಾಗಿ ಪಾವತಿಸಬೇಕು. ಬಾಕೀ ಮೊಬಲಗಿಗೆ ಇತರರಿಗೆ ಯಾವ ವಿಧದಿಂದಲೂ ವರಾದೀನವಾಗದೆ, ಸ್ವಂತಖಾತೆಯಲ್ಲಿರುವ ಜಮಿನು ಸೆಕ್ಯೂರಿಟಿ ಕೊಡಬೇಕು. ಈ ಪತ್ರಿಕೆಗೆ ಒಳಪಟ್ಟ ಅಪೇಕ್ಷಿಸತಕ್ಕವರು ಬ್ರಾಹ್ಮಣರಾಗಿರಬೇಕು ಯಾವ ತಾಲೂಕು ಯಾರು ಅಪೇಕ್ಷಿಸುತ್ತಾರೊ ಅವರು ತಮ್ಮ ಅಪೈರು ಸವಾಲು ಎಷ್ಟು ರೂಪಾಯಿಗಳಿಗೆ ಎಂಬದು ಸ್ಪಷ್ಟ ನಮೂದಿಸಿ ಇದೇ ಇಸವಿ ದಶಂಬರ್ ತಿಂಗಳು ಅಪೈರು ಒಳಗಾಗಿ ಶ್ರೀಂಗೇರಿ ಶ್ರೀಮಠದ ಆಚಾರವಿಚಾರಾಧಿಕಾರಸ್ಥಾನಕ್ಕೆ ದರಖಾಸ್ತು ಅರ್ಜಿ ಒರೆದುಕೊಳ್ಳಬೇಕು ಮತ್ತೂ ಹಾಗೆ ಗುತ್ತಿಗೆಗೆ ಪಡದುಕೊಳ್ಳತಕ್ಕವರು ಸಂನ್ಯಾಸನರವರು ಅಪ್ಪಣೆಕೊಡಿಸುವ ಮಿಮೊರ್ರಕಾರಾ ನಡಕೊಳ್ಳಲು ಬದ್ಧರಾಗಿರಬೇಕು. ಯಾವ ಗುತ್ತಿಗೆಗೂ ಎರಡು ವರ್ಷಕ್ಕೆ ಮೇಲ್ಪಟ್ಟು ವಾಯಿದೆ ದೊರೆಯಲಾರದು. ಮತ್ತೂ ಯಾವ ತಾಲೂಕನ್ನು ಯಾರು ಗುತ್ತಿಗೆಗೆ ಅಪೇಕ್ಷಿಸುತ್ತಾರೊ ಅಂಥವರು ಕಾವು ಇಷ್ಟು ಬೇರೇಜಿನ ಜಮಿನುದಾರರೆಂಬುವದಕ್ಕೂ ಒಳ್ಳೇಯೋಗ್ಯತೆ ಉಳ್ಳವರೆಂಬುವದಕ್ಕೂ ಪರೀಕ್ಷೆಯಾದ ಏದು ಜನರ ಸರ್ಟಿಫಿಕೇಟ್ ಸಹಾ ಅವರ ದರಖಾಸ್ತಿನ ಸಂಗಡ ಕಳುಹಿಸತಕ್ಕದ್ದು. ಹೆಚ್ಚು ತಪ್ಪಿಲ್ಲದೆ ತಿಳಿಯಲಪೇಕ್ಷಿಸತಕ್ಕವರು ಖುದ್ದು ಹಾಜರಾಗಿ ತಿಳಿದುಕೊಳ್ಳಬಹುದು.

ತಾ 10—10—15) ಐ. ರಾಮೇಶ್ವರ ಶಾಸ್ತ್ರಿ.
ಮೊಕ್ಕಾಂ ಶ್ರಿಂಗೇರಿ.) ಶ್ರಿಂಗೇರಿ ಆ ಏ. ಅಧಿಕಾರಿ.

ಡಾಕ್ಟರ್ ಪಿ. ಡಿ'ಲಿಮಾ.

ಎಂಬ

ದಂತ ವೈದ್ಯರು

ಇನ್ನು ಇಲ್ಲಿ ಸ್ವಲ್ಪ ಸಮಯದವರೆಗಿರುವರು. ಬಿದ್ದು ಹೋದ ಅಥವಾ ಹುಳು ಹಿಡಿದು ಹಾಳಾದ ಹಲ್ಲುಗಳ ಸ್ಥಳಗಳಲ್ಲಿ ಏನೂ ಕುಂದು ಕೊರತೆಗಳಿಲ್ಲದಂತೆ ಕೃತಕ ದಂತಗಳನ್ನು ತಯ್ಯಾರಿಸಿಡುವರು.

ದರಗಳು ಸುಲಭ.

ವೈದ್ಯಾನಿನ ಇದಿರುಗಡೆಯಲ್ಲಿರುವ ಮೆ| ಪರ್ಫೆಕ್ಟ್ ಶೋಪಿನ ಮಾಳಿಗೆಯಲ್ಲಿ ದಂತ ಚಿಕಿತ್ಸೆಯು ಮಾಡೋಣವಾಗುವದು.

ವಿಳಾಸ —

ಡಾಕ್ಟರ್ ಪಿ. ಡಿ'ಲಿಮಾ,
ದಂತ ವೈದ್ಯ,
ಪರ್ಫೆಕ್ಟ್ ಶೋಪು, ಮಂಗಳೂರು.

ಜೀನಸು ಧಾರಣೆ.

ಮಸ್ಕತಿ ಅಕ್ಕಿ	6—10—0	6—8—0
ಗಾಡಿ ರಾಶಿ ,,	5—1—0	5—4—0
ಗುಡ್ಡು ,,	5—4—0	5—12—0
ಅವ್ಲಲ್ ಬೆಲ್ಲಿಗೆ ,,	6—8—0	7—0—0
ಗುಡ್ಡು ಬೆಲ್ಲಿಗೆ ,,	5—14—0	6—2—0
ರಂಗೂನು ಬೆಲ್ಲಿಗೆ ಗೋಣಿ ೧ಕ	10—8—0	10—12—0
ಗೋದಿ ಗೋಣಿ ೧ಕ	13—0—0	13—8—0
ಹುರುಳಿ ಗೋಣಿ ೧ಕ	6—6—0	7—12—0
ಕಡಲೆ ಗೋಣಿ ೧ಕ ಟೊಂಕೆ	9—4—0	9—12—0
ತೊಗರಿ ಗೋಣಿ ೧ಕ	12—0—0	13—12—0
ತೊಗರಿ ಬೇಳೆ ಗೋಣಿ ೧ಕ	12—8—0	15—8—0
ಉದ್ದು ಗೋಣಿ ೧ಕ	11—8—0	12—0—0
ಊರುಬೆಲ್ಲ ಖಂಡಿ ೧ಕ	... ...	70—0—0
ಉಪ್ಪು ಗೋಣಿ ೧ಕ	3—3—0	3—6—0
ಪೊಪ್ಪ ಖಂಡಿ ೧ಕ	75—0—0	82—8—0
ಪೊಪ್ಪಹಿಂಡಿ ಖಂಡಿ ೧ಕ	20—0—0	21—0—0
ಎಳ್ಳಿಂಡಿ ಖಂಡಿ ೧ಕ ಟೊಂಕೆ	20—0—0	31—4—0
ಪೊಪ್ಪ ಎಣ್ಣೆ ಮಣ ೧ಕ.	6—10—0	8—12—0
ಎಳ್ಳೆಣ್ಣೆ ಮಣ ೧ಕ(ಕುರಾಸನ)	4—5—0	4—12—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ಕ	4—9—0	5—0—0
ಸೋಪು ಸಕ್ಕರೆ ಮಣ ೧ಕ	4—0—0	4—6—0
ಕಾಫಿ ಖಂಡಿ ೧ಕ	240—0—0	252—0—0
ಹೊಸಬಿಳಿಗೋಟು ಖಂಡಿ೧ಕ.	94—0—0	98—0—0
ಹೊಸ ಗೇರುಬೀಜ ಮುಡಿ ೧ಕ	...	3—0—0
ಕಳ್ಳಿಣ ಖಂಡಿ ೧ಕ.	...	50—0—0
ಕಾಂಬ್ರ ತಗಡು ಮಣ ೧ಕ.	...	20—0—0
ಕಾಂಬ್ರ ಪಾತ್ರೆಗಳು ಮಣ ೧ಕ	...	22—0—0
ಈಚಿ ಬೆಲ್ಲ ತೀರು ೧ಕ.	...	18—12—0
ಪಚ್ಚೆ ಹೆಸರು ಮಡಿ ೧ಕ	5—10—0	5—12—0

ದಿನವಹಿ ಲೆಕ್ಕಪತ್ರಗಳ ಇತ್ಯಾದಿಗಳನ್ನು ಬರೆಯಲು ಅಗತ್ಯವುಳ್ಳ

1916ನೇ ವರುಷದ

ಪೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಿಂದ ಹೊರಡಿಸೋಣಾಗುವ ಪ್ರೊಸೆಸ್ ಫೀಸು, ಭತ್ತ ದರಗಳು, ಸ್ಮಾಲ್ ಕಾಸ್ ಕೋರ್ಟುಗಳ ಭತ್ತ ದರಗಳು, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋ ಣಾಗುವ ದರಗಳ ಪಟ್ಟಿ, ವಕೀಲರ ಫುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ಟ್ರಿ ಮಾಡಿ ಸಿಲು ಬೇಕಾದ ಮಾಹಿತಿ, ಸ್ಟಾಂಪ್ ಡ್ಯೂಟಿ, ನೋಟು, ವಿಲ್ಲುಮ್ಮು, ಬಾಡಿಗೆ ಚೀಟು, ರಿಜಿಸ್ಟ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು, ಶಕಗಳ ತೊಕಾಬಲಿ ಪಟ್ಟಿ ಟಪ್ಪಾಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ತಮಾನದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೇಟು ಬುಕ್

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8

ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4.

ವ್ಯಾಪಾರಸ್ಥರಿಗೂ ರಫಿಂ ತಕ್ಕೊಳ್ಳುವವರಿಗೂ ರಿಯಾಯಿತಿ ಪ್ರತ್ಯೇಕ ದರಗಳಿವೆ.

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ಡೈರಿಗಳು ಸಿಕ್ಕುವ ವಿಳಾಸ — ಶಾರದಾ ಭಾಷಾಖಾನೆ,
ರಥಬೀದಿ, ಮಂಗಳೂರು

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಆಲ್ಲಿರ್ದ ನವ ತ್ಮಾರಿನ ಸೋಮೇಶ್ವರ ನರಶಿಂಗರಾಯರು ಮುಂಚಿಗಿಂತ ದೈಲ್ಪೆ ಸ್ಟೇಶನಿಗೆ ಇನ್ನೂ ಹತ್ತಿರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸೆಪ್ಪೆಚೆಟ್ಟಿ ಬೀದಿ, ಮದರಾಸು.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿನಿಂದ ಪಕ್ವಗೈದುದು ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಪಷ್ಟಸೆಯ ಅಂಶವು ಶಾರೀರಕ ಕ್ರಿಯಾದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಿಲಂಬಿಸಿರುತ್ತದೆ. ಅಚ್ಛ ಕೊಡಲೀವರ್ ಎಣ್ಣೆಯೂ ಆದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ ಆದರೆ ಅಂತಹ ಅಪಾಯಗಳಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವಿ ವೋಟರ್ ಬ್ರಾಂಡಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಅತ್ಯುತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸ ಕೋಶ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕೋಶ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬ್ರಾಂಡಿ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ ಇಂಡಿಯನ್ ಮಾರ್ಟ್,
ಮಂಗಳೂರು, ದ. ಕ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲಿ

ಕ್ರಮ ನಂಬ್ರ $\frac{545}{15}$ I. A. No. $\frac{670}{15}$

ಗಣಪತಿ ಭಟ್ಟ . ...ವಾದಿ. (ಅರ್ಜಿದಾರ.)

ಮತ್ತು

ಬಾಡೂರು ತಿಮ್ಮಣ್ಣ ಬಂಟ .. ಪ್ರತಿವಾದಿ (ರೆಸ್ಪೊಂಡಂಟ್.)

ಇವರೊಳಗೆ

ವಾದಿಯು ಪ್ರತಿವಾದಿ ಮೇಲೆ ಮೂಡು ಖಂಡಿಗೆ ಹೊಳ, ತೆಂಕು ಮೇಮೋಡ ಹಳ್ಳ, ಪಡು ಗುಡ್ಡೆಓಡ ವರ್ಡ್ಡಾಲ ಮರ ವ ಕೊಪ್ಪೆಕಣ್ಣ ಎಂಬ ಮರ ಸಹಾ ಒಡಗು ಬಾಲಡ್ಕ ಎಂಬ ಗುಡ್ಡೆ ಒಳಿಯ ಇರುವ ನೀರ ಖಣಿ ಈ ಮಧ್ಯ ಇರುವ ಬಾಡೂರು ಗ್ರಾಮದ ವೂಲಿ ನಂಬ್ರ 61ನೇ ಮೇಮೋಡ ಎಂಬ ಸರ್ವಾದಿ ಆಸ್ತಿ ಮೇಲೆ ತನ್ನ ಹಕ್ಕು ಸ್ಥಾಪಿಸಿ ತನ್ನ ಅನುಭೋಗಕ್ಕೆ ಆತಂಕಪಡಿಸದಂತೆ ಶಾಶ್ವತ ಇಂಜಂಕ್ಷನ್ ಕೊಡಿಸಬೇಕೆಂತ ತಂದ ಸದರಿ ವ್ಯಾಜ್ಯದಲ್ಲಿ ಪ್ರತಿವಾದಿಯು ಆ ಆಸ್ತಿ ಬಾಡೂರು ಗ್ರಾಮದ ಜಾದಾದಾರಿ ದೈವದ ಒಂಡಾರದ ಹಕ್ಕಿನದೆಂತಲೂ ಆ ದೈವದ ಒಂಡಾರದ ಪೊಕ್ಕೇಸರನ ನೆ ಯಲ್ಲಿ ಸಾಧಿಸುತ್ತಾನೆ ಸದರಿ ದೈವದ ಬೆಂಡಾರವು ಬಾಡೂರು ವ ಕೂಡಾಲಮೇರ್ಕಳ ಈ ಎರಡು ಗ್ರಾಮಗಳ ನಿವಾಸಿಕ ಹತ್ತು ಸಮಸ್ತರ ಹಕ್ಕಿನದ್ದಾದ್ದರಿಂದ ಸದರಿ ವ್ಯಾಜದಲ್ಲಿ ಆ ಎರಡು ಗ್ರಾಮಗಳ ನಿವಾಸಿಕರು ಏನಾದರೂ ಆಕ್ಷೇಪ ಇದ್ದರೆ ಬರುವ ಇದೇ ದಶಂಬರ ತಿಂಗಳ ತಾರೀಕು 2ನೇ ಹಗಲು 10 ಗಂಟೆ ಒಳಗೆ ಕೋರ್ಟ ಮುಂದೆ ಹಾಜರಾಗಿ ಒರಹ ಮೂಲಿಕ ಜಾಹೀರ ಮಾಡದೆ ಇದ್ದರೆ ಅವರ ಶಿವ್ಯಾ ಮಾಡಿ ಮುಂದಿನ ತನಕೆಯೂ ಪ್ರತಿವಾದಿ ಮೇಲೆ ಮಾತ್ರ ನಡಿಸಿ ತೀರ್ಪು ಮಾಡಲಾದೀತು ಎಂಬ ಸಂಗತಿ ಗ್ರಾಮಸ್ಥರು ತಿಳಿದಿರತಕ್ಕದ್ದು.

V Kunhiraman Nair,
District Munsif.

ಕಾ 30ನೇ ಅಕ್ಟೋಬರ 1915.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಏಜಂಟರು ಬೇಕ! ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಭರವಸ್ ಕಮಿಷನ್!!

ಶತಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಸಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ಮರೆಯಬೇಡಿರಿ

೧. ಕೆಂರೀರವ ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠರೋಗ, ವಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ 16 ಮಾತ್ರೆ ರೂ 1

೨ ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಪ್ಪುಂಸಕತ್ವವನ್ನು ಘಟ್ಟನೆ ಶಮನಮಾಡುತ್ತದೆ. ತೊಲೆ 1ಕ್ಕೆ ರೂ 1

೩ ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—4—0

೪ ಗರ್ಭ ಪುಷ್ಟಿಕರಣ. ಇದು ಸ್ತ್ರೀಯರ ಎಲ್ಲಾ ಚಿವಿ ರೋಗಗಳನ್ನು ಗುಣಪಡಿಸಿ ಸುಖಪ್ರಸವವನ್ನೂ ಸುಪುತ್ರಸನ್ನೂ ಕೊಡುತ್ತದೆ ತೊಲೆ 6ಕ್ಕೆ ರೂ 1

೫ ಮಧುಮಾಧವಿ ಪಿಲ್ಸ ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕೆ ಸಿದ್ಧೌಷಧವಾಗಿರುತ್ತದೆ ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಕ್ಷುರಗಜ್ಜಿ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1—8—0.

೭ ದರ್ಬಾರ್ ಬ್ಯೂಟಿ ವೆನ್ಸಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ಣಮಾ ಚಂದ್ರನಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ 0—8—0.

೮. ಅಮೃತಸಾರ್. ಇದು ವಾಯು ಮುಮ್ಮಾನ್ ಎಂಬ ಬದಿ ಶೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ 1.

N. B. — ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸಾವಿರಾರು ಔಷಧಗಳಿರುತ್ತವೆ. ನಮ್ಮ ಕಛೇರಿಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಉಗ್ರಾಣಿಕಾರ್, ಮ್ಯಾನೇಜರ್.

ಕನ್ನಡ ಕಥ ಪುಸ್ತಕಗಳು.

ಶುಕಸಪ್ತತಿ ೭೦ ಕಥೆಗಳು ಸಚಿತ್ರ	೨	೦	೦
ಸಚಿತ್ರ ವಿದ್ಯಾವಂಜರಿ ಕಥೆಗಳು	೧	೮	೦
,, ಭಟ್ಟಾಕಲಂಕನಾದಿಕೃರಾಯನ ಕಥೆ	೧	೮	೦
ಸಚಿತ್ರ ರಾಮಾಯಣ ಕಥಾಸಂಗ್ರಹ ಗ್ಲೇಜ್ ಆವೃಲ್	೧	೪	೦
ಡಿ ರಫ್ ದುಯ್ಯಂ	೦	೧೩	೦
ಜೈಮಿನಿ ಭಾರತ ಕಥಾಸಂಗ್ರಹ	೦	೧೩	೦
ಕೃಷ್ಣಚೋಧಾಮೃತ	೦	೧೦	೦
ಭಾರತ ಕಥಾಸಂಗ್ರಹ	೦	೬	೦
ಪ್ರಭಾವತಿ ಶುಕಮಂಜರಿ ಕಥೆ		೫	೦
ಬಕಾವಲಿ ಕಥೆ	೦	೬	೦
ಮದನಮೋಹನರಾಜ ಚರಿತ್ರೆ	೦	೬	೦
ಚಂಬೆಲಕುಮಾರಿ ಕಥೆ	೦	೪	೦
ಸಾಧ್ವಿ ಗುಣವಂಜರಿ ಕಥೆ	೦	೫	೦
ಪತಿವ್ರತಾಮಹತ್ಮೆ ಕಥೆ	೦	೬	೦
ಹರಿಶ್ಚಂದ್ರನ ಕಥೆ	೦	೪	೦
ನಳದಮಯಂತಿಯರ ಕಥೆ		೬	
ಬತ್ತೀಸವುತ್ತಳಿ ಕಥೆ		೫	೦
ಹುಟ್ಟುಮುಂಡಿಗರ ಕಥೆ	೦	೬	೦
ಹಾಸ್ಯಸುಧಾವರಿ ಶುಕವಾಣಿ ಕಥೆ	೦	೪	೦
ಮಂಜ ಪೊಸಾಶ್ಯಂಗಾರಾಮ್ಮ ತಕಥೆ	೦	೧೩	೦
ಹಾತಿಮುತಾಯಿ ಕಥೆ	೦	೧೦	೦

ಪುರಾಣಗಳು.

ತೊರವೆರಾಮಾಯಣ ಗ್ಲೇಜಆವ್ಸಲ್	೨	೦	೦
ಡಯ್ಯಂ	೧	೪	೦
ತೊರವೆ ರಾಮಾಯಣ ಸೀಯಂ	೧	೦	೦
ಜೈಮಿನಿ ಭಾರತ ಗ್ಲೇಜಆವ್ಸಲ್	೧	೪	೦
ದುಯ್ಯಂ	೦	೧೦	೦
ಸೀಯಂ	೦	೬	೦
೧೫ ಪರ್ವ ಭಾರತ	೨	೪	೦
೧೮ ಸ್ಕಂಧ ಭಾಗವತ ಗ್ಲೇಜಆ	೫	೯	೦
ಡಯ್ಯಂ	೪	೦	೦

ಪದಗಳು.

ಪದರತ್ನಾಕರ ೧ನೇ ಭಾಗ	೧	೦	೦
ಪುರಂದರದಾಸರ ಕೀರ್ತನೆ ಆ	೦	೬	೦
ಬೆಂಗಳೂರು	೦	೬	೦
ಕನಕದಾಸಕಬೀರದಾಸಕೀರ್ತನೆ	೦	೩	೦
ಗಿತರತ್ನವಂಜರಿ	೦	೪	೦
ಗೀತಕಲ್ಪಾಳಿಕ	೦	೫	೦
ಗಿತಕಾವಂದಾರಮಾಲಿಕಾ	೦	೩	೦
ಗಿತಕಾ ತರಂಗಿಣಿ	೦	೪	೦
ಬಾಗಲ ತಡಿಯುವ ಪದ	೦	೦	೬
ಹಲ್ಲುನಡಿಸಿದ ಹಾಡು	೦	೦	೬
ಕೃಷ್ಣ ವಿಸಾರ್ಪಣೆ	೦	೬	೦
ದ್ರೌಣಪರ್ವ	೦	೫	೦
ಲಕ್ಷ್ಮೀಶೋಧಾನಿ	೦	೧	೬
ಪಾಂಡವಗೀತೆ	೦	೧	೬
ವಿಷ್ಣುಸಹಸ್ರನಾಮ (ಶ್ಲೋಕ)	೦	೨	೦
ಶಾಮೋನಿಯಂಸ್ಯಯೋಧಿನಿ	೦	೪	೦

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ವಡಾರಿ, ಸಂಸ್ಕೃತ ಪುಸ್ತಕಗಳೂ, ಹೇರಾಮಿಲ್ ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಫಿತ್ತ ರೀಂಗ್, ಗಂದದಪಿಲ್ಲ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯ ಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ ವ್ಯಾಪಾರಸ್ಥರಿಗೆ ಹಚ್ಚೀ ಕಮಿಷನ್ ದೊರೆಯುವುದು ಒಧಾರಣೆ ಸಾಂಪ್ರ ಕಳಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ ಜೀಕಾರವೂ ಈ ಕೆಲಸಗಳ ವಿಳಾಸಕ್ಕೆ ರಕೊಳ್ಳುವಂತೆ

ಶ್ರೀ ರಾಧಾಕೃಷ್ಣ ವಿಲಾಸ,
ರಥಬೀದಿ ಮಂಗಳೂರು

ಔಷಧಗಳು.

ಮಹಾಮಯನ ಕಾಮೋಶ್ವರೀ ಲೇಹ್ಯ :—ಬಹಳ ಶ್ರಮಪಟ್ಟು ಕೆಲಸ ಮಾಡಿ ಸನೂ ಂಕರೂ ಮತ್ತ ಇಂದ್ರಿಯ ದೌರ್ಬಲ್ಯ ಅಜೀರ್ಣ, ಎದೆನೋವು, ಶರೀರಾಲ್ ತರಿ ದಾ ಸ್ಯಾಸಿ ಮೊಲಾದ ವ್ಯಕೃತಿಯ ವರೂ ಇದನ್ನು ಸೇವಿಸಿದ್ದಲ್ಲಿ ಪಂತಪಟಿ ಗಾಗಿ ವ ವು ಕೊಂತಿ ಹೀನವದ ಸೇವನಾ ಕ್ರಮ— ಅಭ್ಯಾಸವಳ್ಳವರು 1 ಾವರಿ ತೂಕ ರಾ ಗೂಲಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರಿ ಊಟಾ ವೆ ಸೇವಿಸಿ ಹಾಲು ಕುಡಿಯತಕ್ಕದ್ದು

1 ಶೀಸಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ :—ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳಿದ ದುರ್ಮಾಂಸ, ತಿಮಿರ, ೩ ವರ್ಷದ ಹೂವು, ಇರಳುಕಣ್ಣು, ತಾಡಬಿಂದು ಗುಣ

ಕ್ರಯ ರೂ 0—12—0

ಮಹಾಜ್ವರಾಂಕುರ :—ದಿವಸಕ್ಕೊಮ್ಮೆ ಮೂರಿತಿಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ 0—8—0

ಮೇಹಮುದ್ಗರವಟಿ :—2) ನವೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾವಿಲೆ, ಕಾಂಡ ಗುಣ ಡಜನ್ 1ರ ಕ್ರಯ 1—2—0

ಕಾಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ ಡಜನ್ ಗುಟಿಕೆಯ ಕ್ರಯ 0—12—0

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ 1

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅವೇಕ್ಷೆಯು ಳ್ಳವರು ಕೆಟಲಾಗು ತರಿಸಿಕೊಳ್ಳಬಹುದು ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ.ನಂಬ್ರ 2884ನೇ, ಮಂಗಳೂರು.

ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಕಲರಾ ವಿಧ್ವಂಸಿನಿ.—ಈ ಭಯಂಕರವಾದ ಕಾಲರಾ ರೋಗವನ್ನು ಖಂಡಿತವಾಗಿಯೂ ಸಂಪೂರ್ಣ ಗುಣಪಡಿಸುವ ಖಾತ್ರಿಯಾದ ಮದ್ದು ಡಬ್ಬಿ 1ಕ್ಕೆ 1 ರೂಪಾಯಿ ವಿ ಪಿ ಚಾರ್ಜು 1ರಿಂದ 6 ಡಬ್ಬಿಗಳವರೆಗೂ 5 ಆಣೆ.

ಮಲಬಂಧ ಬಂಜನಿ.—ಆಗಿಂದಾಗ್ಗೆ ಉಂಟಾಗತಕ್ಕ ಮತ್ತು ಬಹಳ ದಿವಸಗಳಿಂದ ವಾಡಿಕೆಯಲ್ಲಿರುವ ಮಲಬದ್ಧತೆಯನ್ನು ಸಂಪೂರ್ಣ ಗುಣಪಡಿಸುವುದರಲ್ಲಿ ಇದು ಸರ್ವೋತ್ಕೃಷ್ಟವಾದ ಔಷಧವು ಅಜೀರ್ತನವಾದ ಕಾಳಜಿವನ್ನು (ಲಿವರ್) ಬಲಪಡಿಸಿ, ಸ್ವಭಾವವಾಗಿ ಎಷ್ಟಾಗಬೇಕೋ ಅಷ್ಟು ಸ್ವಚ್ಛ ಪಿತ್ತನೀರನ್ನು ವಿಸರ್ಜನೆ ಮಾಡಿಸಿ, ಹೊಟ್ಟೆಯ ಭಾರವನ್ನು ನೀಗಿ ಹಗುರ ಮಾಡುತ್ತದೆ ಮತ್ತು ಅಗ್ನಿ ಮಂದ್ಯ ದಿಂದುಂಟಾಗತಕ್ಕ ಎಲ್ಲಾ ರೋಗಗಳನ್ನು ನಾಶಮಾಡಿ ಕರುಳುಗಳನ್ನು ಸಹಜ ಸ್ಥಿತಿಗೆ ತಂದು, ದೇಹವು ಒಹ ಆರೋಗ್ಯ ಸ್ಥಿತಿಯಲ್ಲಿರುವಂತೆ ಮಾಡುತ್ತದೆ ಕ್ರಯ ಡಬ್ಬಿ 1ಕ್ಕೆ 10 ಆಣೆ ವಿ ಪಿ ಚಾರ್ಜು 1ರಿಂದ 2 ಡಬ್ಬಿಗಳವರೆಗೂ 5 ಆಣೆ

ಚಂದ್ರಾಮೃತರಸ.—ಎಷ್ಟೇ ಕಠಿಣತರವಾದ ನೆಗಡಿ, ಕೆಮ್ಮು, ಶ್ಲೇಷ್ಮ ಕ್ಷಯವಾಗಲೂ ಸರಿ ಈ ನನ್ನ ಚಂದ್ರಾಮೃತರಸವು ಬಹು ತೀವ್ರದಲ್ಲಿ ಗುಣಪಡಿಸುತ್ತದೆ ಸಾಧಾರಣವಾದ ಕಮ್ಮು ನೆಗಡಿ ಒಂದೇ ಹೊತ್ತಿಗೆ ಗುಣಕಂಡುಬರುವುದು ಅದು ಜೀರ್ಣಶಕ್ತಿಯನ್ನು ಹೆಚ್ಚಿಸುವುದು. ಶಕ್ತಿವರ್ಧಕವಾದ ಸೊಗಸಾದ ಟಾನಿಕ್ ಆಗಿರುತ್ತದೆ ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ ವಿ ಪಿ ಚಾರ್ಜು 1ರಿಂದ 3 ಡಬ್ಬಿಗಳವರೆಗೂ 5 ಆಣೆ

ಶೀತಭೇದಿ ಅನುಶಂಕೆ ನಿವಾರಣೆ.—ಎಂಥ ಘೋರವಾದ ಶೀತಭೇದಿ ಯಾದರೂ ಸರ್ವೋತ್ಕೃಷ್ಟವಾದ ಈ ಶೀತಭೇದಿ ನಿವಾರಣೆಯಿಂದ ಗುಣವಾಗುವದು. ಇದು ಅಮಶಂಕೆಗೆ ಸೊಗಸಾದ ಮದ್ದು ರಕ್ತಾತಿಸಾರದವರಿಗೆ ಸಮಯದಲ್ಲಿ ಬಹು ಸಹಕಾರಿ ಇದು ಹಸಾಯಿಸ್ಟ್ಸ ಹೊಟ್ಟೆ ಜಾಡಿಸುವುದು, ಮಲಕೋಶದಿಂದ ರಕ್ತ ಸೋರವುದು, ಇವುಗಳೆಲ್ಲವನ್ನು ಖಂಡಿತವಾಗಿ ಗುಣಪಡಿಸಿ ಆರೋಗ್ಯಸ್ಥಿತಿಗೆ ತರುವದರಲ್ಲಿ ಸಂಶಯವೇ ಇಲ್ಲ ಕ್ರಯ ಡಬ್ಬಿ 1ಕ್ಕೆ 1 ರೂಪಾಯಿ. ವಿ. ಪಿ. ಚಾರ್ಜು 1ರಿಂದ 2 ಡಬ್ಬಿಗಳವರೆಗೆ 5 ಆಣೆ

ವಿಷ್ಣು ತೈಲಾ.—ತಲೆ ನೋವನ್ನು ಕ್ಷಣದಲ್ಲಿ ಗುಣಮಾಡುವ ತೈಲ್ಯವು. ದೇಹದ ಯಾವ ಭಾಗದಲ್ಲಿಯಾದರೂ ತಲೆದೋರುವ ವಾತದ ನೋವುಗಳಿಗೆ ರಾಜ ಔಷಧ ಈ ತೈಲ್ಯವ ಎರಡು ತೊಟ್ಟುಗಳನ್ನು ಕಣತಿಗಳಲ್ಲಿ ಉಜ್ಜಿದರೆ ತಕ್ಷಣ ಗುಣವಾಗುವದು ಸೀಸೆ 1ಕ್ಕೆ 8 ಆಣೆ 1ರಿಂದ 6 ಸೀಸೆಗಳವರೆಗೆ ವಿ ಪಿ ಚಾರ್ಜು 5 ಆಣೆ

ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಪಷ್ಟವಾಗಿ ತಿಳಿಯುವಂತೆ ಬರೆಯಬೇಕು

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ್ಯ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ್ವರ ಪೆರುಮಾಳ್ ದೇವಸ್ಥಾನ,
ಸನ್ನಧಿ, ತಂಜಾವೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ
ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ್ಷ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ

ಗಳೆಂಬ ಈ ಘೃತವು ಪೇಗ್ ಒಯ್ಟೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹಳೇ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ಯಾಜು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ ವಿ ಎಸ್ ಎ ಎಮ್ ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್
ಆಯುರ್ವೇದಾಶ್ರಮ,
೨೯ ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್

ತಂತಿ ವಿಳಾಸ —"ಪಂಡಿಟ್" ಮದರಾಸ್

ಡಾಕ್ಟರ್ ನವರತ್ನರ /

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಒಳ್ಳೆ ಅಗ್ಗ. ಕಪ್ ಮತ್ತು ಬ್ರುಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY

ವಿಜಂಟರು:—ದಿ. ಊಲನ್ ಮಾರ್ಕ್,
ಮಾಧವ ಬಿಲ್ಡಿಂಗ್ಸ್, ಹಂಪನಕಟ್ಟೆ, ಮಂಗಳೂರು.

B. Narasimha Prabhu,

Bantval, (SOUTH CANARA).

AGENT FOR

Malabar and South Canara.

ಕನ್ನಡ ಪದ್ಯ ಮತ್ತು ಗದ್ಯ ಗ್ರಂಥಗಳು

ಶ್ರೀಮದ್ಭಾಗವತ ದ್ವಾದಶಸ್ಕಂಧ ಅವ್ವಲ್	5	0	0
ಡಿ. ದುಯ್ಯಂ ಪ್ರತಿ.	3	8	0
ಮಹಾಭಾರತ 18 ಪರ್ವಗಳು	4	8	0
ಡಿ 10 ಡಿ.	2	0	0
ಡಿ 8 ಡಿ. ಅವ್ವಲ್ ಪ್ರತಿ	1	8	0
ಡಿ ದುಯ್ಯಂ	1	0	0
ಕೈಮಿನಿಭಾರತ ಪ್ರತಿಪದ ಏಕಾಶ್ವಮೇಧ ಅವ್ವಲ್	5	0	0
ಡಿ. ದುಯ್ಯಂ	3	8	0
ಜೈಮಿನಿ ಭಾರತ ಮೂಲ ಅವ್ವಲ್	1	8	0
ಡಿ. ದುಯ್ಯಂ ಡಿ	0	12	0
ತೊರವೆ ರಾಮಾಯಣ ಅವ್ವಲ್	2	4	0
ಡಿ ದುಯ್ಯಂ	1	0	0
ರಾಜಶೇಖರ ವಿಲಾಸ ಕನ್ನಡ ಚಂಪು ಗ್ರಂಥ	1	8	0
ವೆಂಕಟಗಿರಿ ಮಹಾತ್ಮೆ ಮತ್ತು ಪದ್ಮಾವತಿ ಕಲ್ಯಾಣ	1	8	0
ಅಧ್ಯಾತ್ಮವಿಚಾರ ವೇದಾಂತ ಗ್ರಂಥ	2	4	0
ಮನುವಂಶಾವಳಿ	1	0	0
ಚೆನ್ನಬಸವ ಪುರಾಣ	0	12	0
ಸಟ್ಟಿಳ ವಿಶ್ವಕರ್ಮ ಪುರಾಣ ಅವ್ವಲ್	1	0	0
ಡಿ ದುಯ್ಯಂ	0	12	0
ದೊಡ್ಡ ಶುಕಸಪ್ರತಿ ಇದರಲ್ಲಿ 70 ಶಾಸ್ತ್ರೋಕ್ತ ಮತ್ತು ನೀತಿಮಾರ್ಗ ಕಥೆಗಳು ಅಡಗಿದೆ ಅವ್ವಲ್ ಪ್ರತಿ	1	8	0
ಬ್ರಹತ್ಕಥಾ ಮಂಜರಿ	0	12	0
ಕಾಂತಿಮತಿ ಸಚಿತ್ರ ಧಾರ್ಮಿಕ ಕಥೆ	0	14	0
ವಿಷ್ಣುಶರ್ಮ ಪಂಚತಂತ್ರ	0	8	0
ಭಾಗವತ ಕಥಾ ಸಂಗ್ರಹ	1	8	0
ಭಾರತ ಕಥಾಸಂಗ್ರಹ	0	6	0
ಕೈಮಿನಿ ಭಾರತ ಕಥಾಸಂಗ್ರಹ	0	12	0
ರಾಮಾಯಣ ಕಥಾಸಂಗ್ರಹ	0	12	0
ಸೇತುರಾಮಾಯಣ	1	8	0
ಸೀತಾ ಚರಿತ್ರ	1	2	0
ದೇವಿಮಹಾತ್ಮೆ ಪದ್ಯ	0	8	0
ದೇವೀಮಹಾತ್ಮೆ ಗದ್ಯ	0	6	0
ನಳದಮಯಂತಿ ಚರಿತ್ರ	0	4	0

ವಿ ಪಿ ದ್ವಾರಾ ತರಿಸಿಕೊಳ್ಳುವವರಿಗೆ ಅಂಚೆ ಹಾಸಲು ಪ್ರತ್ಯೇಕ ಇರುವುದು

ಈ ಮೇಲಿನ ಗ್ರಂಥಗಳ ವಿನಹ ನಾನಾ ತರಹದ ಕನ್ನಡ, ಸಂಸ್ಕೃತ ಮರಾಠಿ, ಇಂಗ್ಲೀಷ, ಹಿಂದಿನ ಮುಂತಾದ ವಸ್ತುಗಳೂ, ಬರವಣಿಗೆ ಸಾಮಾನುಗಳು ಇಗ್ಗೆರೆ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ

ಕೆ. ಎಮ್. ದಾಸಪ್ರಭು,
ರಥಬೀದಿ, ಮಂಗಳೂರು.

ಸ್ವದೇಶಾಭಿಮಾನಿಯ ನೋಟೀಸು.

ಚಂದಾದಾರರು ನಮಗೆ ಬರೆಯುವ ಎಲ್ಲಾ ಪತ್ರವ್ಯವಹಾರಗಳಲ್ಲಿ ತಮ್ಮ ತಮ್ಮ ವಿಳಾಸದೊಂದಿಗೆ ಇರುವ ರಿಜಿಸ್ಟರ ನಂಬರನ್ನು ತಪ್ಪದೆ ಬರಿಯತಕ್ಕದ್ದು. ರಿಜಿಸ್ಟರು ನಂಬರು ಇಲ್ಲದ ಪತ್ರಗಳಿಗೆ ನಿಗಾ ಕೊಡಲಾರೆವು.

ಪತ್ರಿಕೆಗೆ ಚಂದಾದಾರರಾಗಿ ಸೇರಲಪೇಕ್ಷೆಯುಳ್ಳವರು ವರ್ಷ 1ಕ ಚಂದಾ ಹಣ ರೂ. 2—1—0ನ್ನು ಮನಿಯಾರ್ಡರು ಮೂಲಕ ರವಾನಿಸುವದುತ್ತಮ. ವಿ. ಪಿ. ಮೂಲಕ ಕಳುಹಿಸಬೇಕೆಂದು ಬರಿಯುವಂಥವರಿಗೆ ಪತ್ರಿಕೆಯ ಹಿಂದಿನ ಸಂಚಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವದು. ವಿ. ಪಿಯ ಮೊಬಲಗು ನಮಗೆ ತಲ್ಪದ ನಂತರವೇ ಪತ್ರಿಕೆಯನ್ನು ಕಳುಹಿಸಲು ಪ್ರಾರಂಭಿಸುವೆವು.

ಮ್ಯಾನೇಜರ್,
ಸ್ವದೇಶಾಭಿಮಾನಿ ಆಫೀಸು,
ಮಂಗಳೂರು, ದ. ಕ.

ಮೋಸಹೋಗಬೇಡಿ! ಮೋಸಹೋಗಬೇಡಿ!!

ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನಗಳಿಗೆ ಮೋಸಮಾಡುತ್ತಿರುವರು. ಆದ್ದರಿಂದ ನಮ್ಮಿಂದ ಕಳುಹಿಸುವ ಖಾಂಗಿಯನ್ನು ಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, ೫ ಅವೆನ್ಯು ರೋಡ್, ಬೆಂಗಳೂರು ಸಿಟಿ ಎಂದು ಮುದ್ರಿಸಿರುವ ಲೇಬಲು ಇರುವದನ್ನು ಚೆನ್ನಾಗಿ ತೆಗೆದುಕೊಳ್ಳಿರಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟಿಲ್ಲವೆಂದು ವ್ಯಕ್ತಪಡಿಸುವವರಿಗೆ

೧೦೦೦ ರೂಪಾಯಿಗಳು ಬಹುಮಾನ ಕೊಡುವವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹೆಸ್ಸಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರಿಯ ಹೆಸ್ಸನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎದಿಗೂ ಸಮಾನವಾಗಲಾರರು. ಅನೇಕರು ಉರುಳುಗತ್ತೆ, ಶಾವುಗತ್ತೆ ಇವುಗಳನ್ನು ಪಕ್ಕವಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿದಿನ ಸೇವಿಸುವ ಹಾಗೆ ಕೈಯಿಂದ ಸುಪ್ಪತ್ತಿಗೆ ತರುವಾಯ ಸಾಲ್ಲಿಪ್ಪೆಲ್ಲಿರುವದು

ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
ಸಾಲಾಮಿಸ್ರಿ ಮುರಬ್ಬಾವು — ನಿದ್ರೆಯಲ್ಲಿ ಧಾತುಪು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ನೃವಿರಡಿಸಿ ಧಾತುವನು ಶೇಖರಿಸುವದು.
ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು
ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕ್ಕಿಂತಲು ಉತ್ತಮವಾದದ್ದು.

ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋಗಿಸುವದರಿಂದ ಫೂರ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತರದವರಿಗೂ ಗುಣಕೊಡುತ್ತೆ.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ 6.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಹಮಡಿ ಅವೆನ್ಯುರೋಡ್, ಬೆಂಗಳೂರು ಸಿಟಿ.

Vikata Vinodini.

An illustrated Kannada monthly journal full of humorous stories witty sayings comic ketches moral truths etc

Annual subscription (including postage) Re 1—0—0 only

Address — **Vikata Vinodini Office,**
Cottonpet, Bangalore City

ಕನ್ನಡ ಮಾಸಪತ್ರಿಕೆ

ವಿಕಟ ವಿನೋದಿನಿ.

ಹಾಸ್ಯರಸ ಪ್ರಧಾನವಾದ ಮತ್ತು ನೀತಿಪ್ರದವಾದ ಹಾಸ್ಯೋಲ್ಲೇಖನಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ.

ನಮ್ಮ ವಿಳಾಸ:— "ವಿಕಟ ವಿನೋದಿನಿ" ಆಫೀಸು,
ಅರಳೆಪೇಟೆ, ಬೆಂಗಳೂರು ಸಿಟಿ.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಧಾರಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚಲೋ ಸ್ಪುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ದೊಡ್ಡ ರೊಯಲ್ ಸ್ಯಾಟಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಯಂ. ಯಸ್. ರಾವ್ ಕಂಪೆನಿ.,

ಬುಕ್‌ಸೆಲರ್ಸ್ ಆವಿನ್ಯೂರೋಡ್, ಬೆಂಗಳೂರು ಸಿಟಿ.

Perpetual Calendar.



ಪ್ರತಿ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ವ ಕ್ಕಾಗಿ ದೊರೆಯಬೇಕಾದರೆ ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿ—ಇದರ ಬೆಲೆ 10 ಆಣೆ ಪ್ಯಾಕಿಂಗ್ ಪೋಸ್ಟೇಜು ಉಚಿತವಾಗಿ

ವಾಲ್ಮೀಕಿಯ ಜಯ ಆಣೆ 1, ದ್ರೌಪದಿಯ ಆಣೆ 2, ಸುಧರ್ಮ ಪ್ರಭುವಿನ ಆಣೆ 4 ಸಾಕ್ರಟೀಸ್, 1—2 ಧರ್ಮರಾಯ ಆಣೆ 6, ಭಕ್ತ ಪ್ರಹ್ಲಾದ 1—4 ಬೆಸ್ಟ್ ಮತಸಾರ ಆಣೆ 5, ಭರತ ಭೂಪಾಲ ವಿಕ್ರಮಾರ್ಕ ಆಣೆ 1—4, ರಾಜಭಕ್ತ ಆಣೆ 1, ದೇಶಭಕ್ತ ಆಣೆ 10

[ಈ ಸೈಕಿ ರೂ 2—8—0 ಬೆಲೆಯ ಪುಸ್ತಕಗಳಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ]

ಕನ್ನಡ ಹೊಸ ಪುಸ್ತಕಗಳು.

ಸಂಗೀತ ಸಮಯಸಾರ	1—4	ಪ್ರಬಂಧ ವಿಚಾರಾವಳಿ	0—12
ಜಾರ್ಮೋವಿಯಂ ಸ್ವಯಂ ಬೋಧಿನಿ	0—4	ಕನ್ನಡ ಅಲೆಬಿಜ ನ ಸೆಟ್ಸ್	2—2
ಬಾಲಿಕಾಗೀತ ಮುಕ್ತಾಕಲಾಪ ಸ್ವರಯುಕ್ತ	0—9	ಮುದ್ರಾರಾಜ-ಜ	1—10
ಕಲ್ಯಾಣ ಗೀತಾವಳಿ	0—6	ಭಕ್ತವಿಜಯ (ವಿಮರ್ಶಕ ಸಹಿತ)	0—2
ಅಭಿನವ ಸಂಗೀತ ಪಾರಿಜಾತ	0—4	ಅಧ್ಯಾತ್ಮವಿಚಾರ	2—0
ರಸಿಕ ಜನಸಾರಸಂಗ್ರಹ ಭರತ ಶಾಸ್ತ್ರ	1—8	ಪ್ರಿ ರೋಜವಿಜಯ	1—9
ಸ್ವಧರ್ಮನೀತಿ	0—9		

ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವಲ್)	0—12	ಮೊಘಲ್ ಕನ್ಯಾ (ಬಂಗಾಳಿ ನಾವಲ್)	1—0
ಪ್ರಫುಲ್ಲ ,,	0—12	ಶಕ್ತಿ ,,	0—12
ಉಸ್ಮತ್ತೆ ,,	0—3	ಕೋಪನೆ ,,	0—12
ವಿಷ್ಣು ವಿವಾಹ ,,	0—4	ಚಂದ್ರಪ್ರಭಾ ಕಾದಂಬರಿ	0—14
ಸೌದಾಮಿನಿ ,,	0—8	ಸುಭದ್ರೆ ,,	0—5
ಸರಳಾ ,,	0—2	ಕಲಿಯುಗ	0—8
ಸುಪ್ರಮಾ ,,	0—2	ಅಲಾನಾಥ ,,	0—8
ಅನಾಥ ಪ್ರೇತ ,,	0—1	ನನ್ನ ಆಚಾರ್ಯ (My Master)	0—4

ಈ ಸೈಕಿ 5 ರೂಪಾಯಿ ಬೆಲೆಯ ಪುಸ್ತಕಗಳನ್ನು ಒಂದಾವರ್ತಿ ತರಿಸುವವರಿಗೆ ಈ ಒಂದು ಕ್ಯಾಲೆಂಡರ್ ಬಹುಮಾನ

ಕಾದಂಬರಿಗಳು.

ಸುಶೀಲೆ ಶ್ರೀ ತಿರುಮಲಮ್ಮನವರಿಂದ	0—6	ವೆಂಕಟಾಚಾರ್ ಬೆಂಕಟಾಚಾರ್	1—4
ಸತೀತ್ವ ರಕ್ಷಣೆ (ನಥಾ ಭಾಗ 1)	,, 0—8	ಮನೋರಮ ,,	1—0
ವಿರಾಗಿಣಿ (ಪಿಟೂ 2)	,, 1—0	ಪರಿಮಳ ,	0—10
ಎದ್ಯುಲ್ಲಾಹ (ಹಂಣಿ)	,, 0—14	ಕೊಹಿನೂರು ,,	0—12
ಬಿಳ್ಳಿ ಕನ್ಯಾ ,	1—8	ಸಾಧನೆ ,	0—8

(ಇನ್ನೂ ಇದರ ಎಲ್ಲಾ ಕಾದಂಬರಿಗಳು)

ಹೊಸ ಪುಸ್ತಕಗಳು.

ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತ ವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಶುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದದ್ದು ಬೇರೆ ಇಲ್ಲ. ಬೆಲೆ 10 ಆಣೆ ಮಾತ್ರ.

ದ್ವಾದಶ ದ್ವಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0-1-6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದೊಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ. ಪ್ರತಿಸಾದವರಿಗೆ ಕಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,

ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,

ಉಡುಪಿ.

ಇನಾಂ ಸಾಮಾನು 60! ಇನಾಂ ಸಾಮಾನು 60

ಯೋಗ್ಯತಾ ಪತ್ರಿಕೆಗಳನ್ನು ಪಡದಿರುವ ಸಾವಿತ್ರೀ ಹೇರ್ ಆಯಿಲ್

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ. ಯಾವ ಸ್ತ್ರೀಯರಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಾಗಿಯೂ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಾಗಿರುವವರು ಬಜಾರಿನಲ್ಲಿ ದೊರಿಯುವ ಕೆಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳ ಮಾಡುವದಕ್ಕಿ ತ ನಿಮ್ಮ ಪರಿಮಳ ತೈಲವನ್ನ ಉಪಯೋಗಿಸಿ ಈ ಲೋಕಪ್ರಖ್ಯಾತವಾದ ಎಣ್ಣೆಯನ್ನ ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಬೆಕು ನಿಮಾನಸೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೊಗದವರ ಇದರ ಪರಿಮಳ ವಾಸನೆ ಹೋಗುವದಕ್ಕೆ, ಬರಿಯುವದಕ್ಕೆ ಆಗುವದಿಲ್ಲ ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತೆಗೆದು ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಮಿದುಳನ್ನು ಸರಿಮಾಡುವದು ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ಶೈಲ ಇದು ಒಂದೇ, ಬೇರೊಂದಿಲ್ಲ ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿದರೆ ತಿಳಿಯುತ್ತೆ ಇನಾಂ ಸಾಮಾನುಗಳ ತಪಸೀಲು — ಸ್ತ್ರೀಯರು ಧರಿಸಿಕೊಳ್ಳುವ ಕೊಡಿ ಗಿ 1, ಮೈಕ್ಕವರ್ 1, ಕಾಂಬೂಲ ಮೂಕ್ಕ 40, ದಂತದ ಬಾಚಣಿಗೆ 1, ಸೊಗಸಾದ ರಾಜಾಣಿ ಕಾರೊಸೆಂಸ್ ಪೆಟ್ಟಿಗೆ 1 ರವಿವರ್ಮ ಪೋಸ್ಟು ಕಾರ್ಡು 6 ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1, ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ್ 1, ಮೊತ್ತ 60 ನಮ್ಮ ಕಂಪೆನಿ ಪ್ರಖ್ಯಾತಿ ಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತವೆ ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ — ವಿ. ಎ. ಎಸ್. ಪೌಡರ್ ಕಂಪೆನಿ,

3 ಇರುಳಪ್ಪನ್ ಬೀದಿ, ಮದರಾಸು.

ಜಯವಿಜಯ
ಅಥವಾ
ತೂಗಾಡುವ ಅಸಿಪಂಜರ.

ಇದರಲ್ಲಿ "ದಿಲೀಪಸಿಂಹ ಲುದಾರ್" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಠಿಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕರಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಆತೂಗಾಡಿಸಿಟ್ಟ, ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹೊಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು?

ದಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಗೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಧರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯ: 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗ್ರಹಸ್ಥರು ಜಾತಿಯಾಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— V. O. Amin

C/o E. A. Coll Esq.

Sirdar Palace, Apollo Street, BOMBAY

ಲಕ್ಷಾದ ಏಜಂಟರು ಬೇಕಾಗಿರುವರು! ಧಾರಾಳವಾದ ಕಮಿಶನ್!!
ಮುಂದಿನ ಅಭಿವೃದ್ಧಿಗೆ ತುಂಬಾ ಅವಕಾಶವುಳ್ಳ ವೃತ್ತಿ!!!

ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿ,

(ಲಿಮಿಟೆಡ್).

(1906ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು ಮುಂಬಯಿ.

ಅಧ್ಯಕ್ಷರು:—ಬಹುಮಾನಪಟ್ಟ ಮೆ। ಲಲ್ಲುಭಾಯಿ ಸಾಮಲ್ ದಾಮರವರು, ಸಿ ಐ ಇ ಜೆ ಪಿ

ಮೆನೇಜಿಂಗ್ ಡಿರೆಕ್ಟರರು:—ಫ್ರೆನ್ಸ್‌ರೋಜ್ ಅವ್ ಜೋಸೀರವರು, ಜೆ. ಪಿ ಬನರಿ ಪ್ರೆಸಿಡೆನ್ಸಿ ಪಿ ಸ್ಟೇಟ್.

ಎಕ್ಸುಟೀರಿ:—ಮೆ। ಜೋರ್ಜ್‌ಕಿಂಗ್ ಎಫ್ ಎವ್ ಎ ಎಫ್ ಐ ಎ

ಮೆಡಿಕಲ್ ರಿಫರಿಗಳು.—ಡಾಕ್ಟಾರ್ ಆರ್ ರಾವ್, ಎಮ್ ಡಿ ಡಿ ಎಸ್ ಸಿ (ಲಂಡನ್)

ಗೌರವಾರ್ಧಕ ಮ್ಯಾನೇಜರ್:—ರಾ ಕೆ ಸುಬ್ರಮಣ್ಯಯ್ಯರ್, ಬಿ. ಎ ಜಿ ಪಿ ಒಫ್ ಎಸ್ ಎ ಎ (ಲಂಡನ್)

ವಿಮೆದಾರರ ವಿಮೆ ಪತ್ರಗಳ ಶರ್ತಗಳ ಪ್ರಕಾರ ಸಿಕ್ಕುವ ಹಣವು ಈ ಕಂಪೆನಿಯಲ್ಲಿ ಒಳ್ಳೆ ಬದ್ಧವಾಗಿರುವದೆಂತ ಲಕ್ಷ್ಯವ್ಯವಸ್ಥಾಪಕರು ಅಭಿಪ್ರಾಯಪಟ್ಟಿರುವರು

ತರುಣಾವಸ್ಥೆಯಲ್ಲಿರುವ ಈ ಕಂಪೆನಿಯು ಮುಂದಕ್ಕೆ ಇನ್ನೂ ಒಳ್ಳೆ ಅಭಿವೃದ್ಧಿಯನ್ನು ಹೊಂದುವ ವಿಶೇಷ ಸಂಭವಗಳಿಂದ ಕೂಡಿರುವುದೆಂದು "ಕೊವರ್ನ್" ಎಂಬ ಪತ್ರಿಕೆಯ ಅಭಿಪ್ರಾಯವಾಗಿರುವುದ

ಇಂಡಿಯಾ ಸರಕಾರದ ಬೆದ್ರತೆಯಲ್ಲಿ ರೂ 1,75,000ವನ್ನು ಠೇವಣಾತಿಯಾಗಿಟ್ಟಿರವದು

ಹಣ ಕಳುಹಿಸಿಕೊಡುವ ಮತ್ತು ಏಜೆಂಟ್ಸಿಗೆ ಪತ್ರ ಬರ್ತಾವಿಗಳನ್ನು ಬರೆಯ ವವಿಳಾಸ —

ಕೋಟೆ ಕಾರ್ ಬ್ರದರ್ಸ್, ಉಡುಪಿ,
ಕನ್ನಡಾ, ಮಲಬಾರ, ತಿರುವಾಂಕೋಡು, ಮತ್ತು ಕೊಚ್ಚಿ ರಾಜ್ಯಗಳ ಪ್ರಾಮುಖ್ಯ ಏಜಂಟರು.

ಸೂಚನೆ — ನಾಗಲೂರಲ್ಲಿರುವ ಈ ಕಂಪೆನಿಯ ವಿಮೆದಾರರು ತಮ್ಮ ವಿಮೆ ಪೊಲಿಸಿಗಳನ್ನು ನಮ್ಮ ಆಫೀಸಿನ ಕೆನರಾ ಬ್ಯಾಂಕಿನಲ್ಲಿ ವಸೂಲು ಕೊಟ್ಟು ಆ ಬಗ್ಗೆ ರಸೀದಿಯನ್ನು ಕೊಚ್ಚಿ. ಕಾರ್ ಬದರ್ಸ್ ಇವರಿಗೆ ಕಳುಹಿಸಿಕೊಡಬಹುದು

ಉಡುಪಿ, 3—7—1914.

ಮಹಾಶಯರೆ

ನಮ್ಮಾಯಿ ಲ್ಯಾಫ್ ಎಸ್ಯೂರೆನ್ಸ್ ಕಂಪೆ ಎಂಬ ವಿಮಾಸಂಸ್ಥೆಯಿಂದ ಉತ್ತರಾಯಿಸಿದ ಸಂಘದ ಬಗ್ಗೆ ಕಾವ್ ವಿನೊ ರೂ ವಿಳ ಗಾಡಿದೆ, ರೂ 1000—10—0ನ್ನು ನನಗೆ ಪಾವತಿಮಾಡಿದುದ ಕ್ಕಾಗಿ ಅತೀ ಉಪಕಾರವಂದಿತ ಸದರಿ ಪೊಲಿಸಿಯನ್ನು ಕ್ಷರಿಕಾದ ಅತಿವಂದ ಪತ್ರಗಳನ್ನು ಅವರಿಗೆ ಮುಟ್ಟಿಸಿದ ತರುವೇ ವಿನಯೊಳಗಾಗಿ ನನಗೆ ಸಲ್ಲತಕ್ಕ ವಿಮೆಯ ಏವಜನ್ನು ತಮ್ಮ ಕಂಪೆನಿಯ ಡೈರೆಕ್ಟರರುಗಳು ನನಗೆ ಪಾವತಿಮಾಡಿಸಿದ ದಕ್ಕೋಸ್ಕರ ನನ್ನ ಧನ್ಯವಾದಗಳನ್ನ ಅವರಿಗೆ ದಯಮಾಟು ತಿಳಿಸಿ ಈ ತೆರದಲ್ಲಿ ಪೊಲಿಸಿದ ರವಿಷತೆಗೆ ಯ ಕಂರ್ಥವಾದ ರೀತಿಯಲ್ಲೂ ನಂಬುಗೆಯುಂಟಾಗುವಂತೆಯೂ ವರ್ತಿಸುವ ಕನ್ನು ವಿನೀ ಕ್ಷನೆಯಿ ದ ಪ್ರತಿಬೊಬ್ಬರೂ ಒಂದೊಂದು ಪೊಲಿಸಿಯ ನ್ಮಾದರರಾ ಪಡಕೊಳ್ಳುವಿದ ಅವಕಾಶವ ದ ನ್ನ ಅಪೇಕ್ಷ

(ಪಸ್ಕತ) ಹಾರಾಡಿ ಆನಂದರಾಮ ಪುಡಿಯಾರನ ರುಜು.

(ಈ ಪೊಲಿಸಿಯ ವಿವರ ಹೇಳಿಕೆಯನ್ನು ಪಡೆಯಲು ಅಧಿಕಾರವಿಳ್ಳವನು)

ಉಡುಪಿ, ತಾ 20—9—1914

ನನ್ನ ಎಳೇ ಪ್ರಾಯದಲ್ಲಿ ವೈತರಾದ ನನ್ನ ಗಂಡ ಕೆ ಎಲ್ ಪ್ರಭುಗಳ ವಿಮೆ ಪತ್ರಗಳನ್ನು ನಾನು ಕಳುಹಿಸಿಕೊಟ್ಟು ಕೆಲವೇ ದಿನಗಳೊಳಗಾಗಿ ಮುಂಬಾಯಿ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರು ನನಗೆ ತಕ್ಕ-ಬಂಧವಾದ ಹಣವನ್ನ ಪ ವತಿವಾಡಿಸಿದ ದಕ್ಕೆ ನಾನು ಕೃತಜ್ಞಳಾಗಿರುವೆನು ನನ್ನ ಒಬ್ಬನೇ ಬಾಲಕನಿಗೆ ಇದೊಂದೇ ವಾತ್ರ ಪಿತ್ರಾರ್ಜಿತವಂದ ಧನವಾಗಿದೆ ಅಂತಹ ಬಡ ಹುಡುಗನಿಗೆ ಇದೊಂದು ಅಪೂರ್ವವಾದ ನೆರವಾದಾನವನ್ನ ನೀಡಿಕೊಟ್ಟದಕ್ಕೆ ಪ್ರತಿಯಾಗಿ ನಿಮ್ಮ ಕಂಪೆನಿಯು ಚಿರಕಾಲವೂ ಸೌಭಾಗ್ಯದಲ್ಲಿರಲಿ'

ಭವಾನೀಬಾಯಿ, Pol No 1738.

ಸಾಕ್ಷಿ—ಭವಾನೀಬಾಯಿಯ ಸೋದರ ರಾ ಕೆ ರಂಗಪ್ಪ ನಾಗಪ್ಪ.

ಮಂಗಳೂರು, ತಾ 30—10—1914.

ಸಾಧ್ಯವಾದಷ್ಟು ಕಡಿಮೆ ಸಮಯದೊಳಗಾಗಿ ನನಗೆ ಪಾವತಿಯಾಗತಕ್ಕ ಹಣವನ್ನು ಸಲಾಯಿಸಿದುದಕ್ಕೋಸ್ಕರ ಬೊಂಬೇ ಲ್ಯಾಫ್ ಎಸ್ಯುರೆನ್ಸ್ ಕಂಪೆನಿಯವರಿಗೆ ನನ್ನ ಧನ್ಯವಾದಗಳನ್ನು ಪ್ರೀತಿ ಪೂರ್ವಕವಾಗಿ ಮುಟ್ಟಿಸಿರಿ! ಕ್ಲೈಮು ಪ್ರಕಾರ ಎಲ್ಲಿ ಹಣವನ್ನು ಪಡಕೊಳ್ಳುವದ ಹಾಗೆ ಕಂಪೆನಿಯ ಏಜಂಟರೇ ತಮ್ಮಿಂದಾಗುವಷ್ಟರ ಸಹಾಯವನ್ನ ನೂಡುತ್ತಿರುವಾದುದಂದ ನನಗೆ ಯಾವ ತೊಂದರೆಗಳೂ ಉಂಟಾಗಲಿಲ್ಲ ಹಣವನ್ನು ನಾವಿಪ್ಪ ಸ್ಥಳಕ್ಕೆ ಬಂದು ತೆಕ್ಕರು — ಇದೊಂದು ತಮ್ಮ ಕಂಪೆನಿಯ ವಿಶೇಷ ಗುಣ. ನಮ್ಮ ಸಂಘಕ್ಕೆ ಸದಾ ವಿಜಯವು ಆಗಲಿ.

ಅರ್ಕಳ ರಾಮಚಂದ್ರ ಶ್ಯಾನಭಾಗನ ರುಜು.

(Pol. No. 2319ನೆಯ ವಾರಸಿ ಹಕ್ಕಿನ ಆಸಾಮಿ.)

ಒಂದು ಸಾರಿ ಕೊಂಡು ನೋಡಿರಿ!!

ಓಟ್ಟೊ ದಿಲ್-ಚಮಾನ್

(ರಿಜಿಸ್ಟರ್ಡ್.)

ಸುರಭಿಗಳಲ್ಲಿ ಮಕುಟವರ್ಧನ!

ಬಹಳ ಸುವಾಸನೆಯುಳ್ಳ ಲೋಕ ಪ್ರಖ್ಯಾತವಾದ ಮತ್ತು ಈಗಿನ ಕಾಲಕ್ಕನುಸಾರವಾದ ಸದಾ ಸುವಾಸನೆಯುಳಿವಂಥ ಗುಸಂಧವು. ಒಂದೆರಡು ತಟಕು ಕೈವಸ್ತದಲ್ಲಿ ತಾಗಿಸಿದ್ದೇ ಆದರೆ 8 ದಿವಸಗಳ ವರೆಗೂ ಪರಿಮಳವಿರುವದು.

	ರೂ.	ಅ.	ಸೈ.
ಕ್ರಯ ಟ್ರಾಮ್ ಟ್ಯೂಬ್	0	8	0
1 ,	0	12	0
ಔನ್ಸ್ ಟ್ಯೂಬ್	2	0	0
ಓಟ್ಟೊ ದಿಲ್ ಚಮಾನ್ ಪರಿಮಳದ ಕಾರ್ಡುಗಳು ಡಜನಿಗೆ	0	12	0

ವಿ ಪಿ ಚಾರ್ಜು 0—4—0 ಬೇರೆ.

ಪ್ರಾವಿನ್ಸಿಯಲ್ ಏಜಂಟರು—:

ಎಚ್. ಆರ್. ಮೋಡಿ ಎಂಡ್ ಕೋ,
10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

H R MODY & Co,
10 Princes Street, BOMBAY.

ವೈಶೇಷ್ಯವು.

ನಾವು ಲೋಕ ಪ್ರಖ್ಯಾತ ಪೇಟೆಂಟ್ ಔಷಧಿಗಳಿಗೂ ಅತ್ತರು ಮೊದಲಾದ ಪರಿಮಳ ದ್ರವ್ಯಗಳಿಗೂ ಪ್ರಾಮುಖ್ಯ ಏಜಂಟರಾಗಿರುತ್ತೇವೆ.

ಎಕ್ಸೆಲ್ಸಿಯರ್ ಸಾರ್ಸಪರಿಲ್ಲಾ.

(ಐಯೋಡೈಸ್ಡ್)

ಎಂಬ

ರಕ್ತಶುದ್ಧಿಯ ದೀಪಕ.

ಕ್ರಯ- ಬಾಟ್ಲಿಗೆ ರೂ 1—4—0 ಮತ್ತು ರೂ 2—0—0.

ಪಿಯರ್ಸ್ ನರ್ವೈನ್ ಟೋನಿಕ್ ಪಲ್ಸ್

(ಆವರ್ಶದೀಪಕ.)

ಆರೋಗ್ಯವನ್ನು ಉಂಟುಮಾಡುವದು, ಅಶಕ್ತಿಯನ್ನು ಹೋಗಗೊಳಿಸುವದು, ಅಶಕ್ತರಾದ ಬಾಲಕಿಯರಿಗೂ ಬಾಲಕಿಯರಿಗೂ ಒಳ್ಳೆ ಪ್ರಯೋಜನಕಾರಿ!

ಕ್ರಯ ೨೦ ಮಾತ್ರೆಗಳ ಶೀಸೆ 1ಕ್ಕೆ ರೂ 1—8—0.

ರಾಮಬಾಣ ಗಜಕರ್ಣ ಮುಲಾಂ.

ಗಜಕರ್ಣಕ್ಕೆ ಅತ್ಯುತ್ಕೃಷ್ಟವಾದ ಮುಲಾಂ ಡಬ್ಬಿ 1ಕ್ಕೆ 4 ಆಣೆ.

ಮೋಡಿಯವರ

ತಲೆಶಿಡಿತ ಬಿಲ್ಲೆಗಳು

ಒಂದೇ ನಿಮಿಷದಲ್ಲಿ ಗುಣ.

ಒಂದು ಬಿಲ್ಲೆಯನ್ನು ನೀರಿನಲ್ಲಿ ಹಾಕಿ ಸೇವಿಸಬೇಕು. 25 ಬಿಲ್ಲೆಗಳ ಶೀಸೆ 1ಕ್ಕೆ 0—12—0 ಇತರ ವಿಶೇಷ ಔಷಧಗಳ ಪಟ್ಟಿಗೆ ಬರಕೊಳ್ಳಿರಿ.

H. R. Mody & Co., ಎಚ್. ಆರ್. ಮೋಡಿ ಎಂಡ್ ಕೊ,
Chemist, ಕೆಮಿಸ್ಟ್,
10PRINCES ST., BOMBAY. 10 ಪ್ರಿನ್ಸೆಸ್ ಸ್ಟ್ರೀಟ್, ಬೊಂಬೇ.

ನಂಬಿ ಮೋಸಹೋಗಬೇಡಿರಿ! ನಂಬಿ ಮೋಸಹೋಗಬೇಡಿರಿ!!

ಅಸಲ್ ಪಂಜಾಬಿ ಮುರಬ್ಬಾ

ಕೆಲವರು ನಮ್ಮನ್ನು ನೋಡಿ ನಕ್ಕಲ್ ಮುರಬ್ಬಾವನ್ನು ತಯಾರಿಸಿ ನಮ್ಮ ಹೆಸರು ಇಟ್ಟು ಜನಗಳಿಗೆ ಮೋಸಮಾಡುತ್ತಾರೆ ಅದನ್ನು ಕಂಡು ಮೋಸಹೋಗಬೇಡಿರಿ ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆಯುವಾಗ ಫೈರ್ಯಲಸ್ಸ್ ಅಂಡು ಕಂಪೆನಿ 3 ಇರುಳಪ್ಪನ ಬೀದಿ, ಮದರಾಸು ಎಂತ ಮುದ್ರಿಸಿರುವ ಲೇಬಲ್ ನೋಡಿ ತೆಗೆಯರಿ

500 ರೂಪಾಯಿಗಳ ಒಹುಮಾನ!

ಲೋಕಪ್ರಸಿದ್ಧವಾದ "ಪಂಜಾಬಿ ಸಕಲರೋಗ ಸಂಜೀವಿ"ಯನ್ನು ಸೇವಿಸಿ ಜೀವನವಿಮೆಯನ್ನೂ ಮಾಡಿಕೊಳ್ಳಿರಿ ದುರಭ್ಯಾಸಗಳಿಂದ ಧಾತುವನ್ನೂ ನಷ್ಟಪಡಿಸಿಕೊಂಡು ದುಃಖಿಸುವದನ್ನೂ ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರಿಸಲ್ಪಟ್ಟ "ಪಂಜಾಬಿ ಸಕಲರೋಗ ಸಂಜೀವಿ"ಯನ್ನು ಸೇವಿಸಿರಿ. ಇದನ್ನು ಪಂಜಾಬು, ಕಾಬುಲ್ ದೇಶದ ಜನಗಳು ಒಹಳವಾಗಿ ಸೇವಿಸುವರು. ತಾವು ಪಂಜಾಬಿ ದೇಶದ ಜನಗಳನ್ನು ನೋಡಿ ಇರುವಿರಿ ಅವರು ದಿನದಿನವೂ ಪಂಜಾಬಿ ಸಕಲರೋಗ ಸಂಜೀವಿ ಸೇವಿಸಿ ಒಹಳ ಬಲವೂ ದೃಢವಾಗಿಯೂ ಇರುವರು. ತಾವು ಯಾಕೆ ಹಾಗೆ ಇರಬಾರದು ಪಂಜಾಬಿ ಸಕಲರೋಗ ಸಂಜೀವಿಯನ್ನು ಸೇವಿಸಿ ದೇಹವನ್ನು ಕಾಪಾಡಿಕೊಳ್ಳಿರಿ. ಇದು ಸಮಸ್ತ ಜನಗಳಿಗೂ ವರಪ್ರಸಾದವೆಂದು ಸಕಲರು ಒಪ್ಪಿದ್ದಾರೆ. ಇದು ರಕ್ತವನ್ನೂ ವೃದ್ಧಿಪಡಿಸಿ ಪೆದೆಗಳಿಗೆ ಒಲವನ್ನೂ ಕೊಡುವದು. ಕೈಕಾಲು ಸೊಂಟದ ನೋವುಗಳನ್ನು ಹೋಗಲಾಡಿಸುವುದು. ಇದರಲ್ಲಿ ಅವರಂಡಿ ಬೆಳ್ಳಿಗೆ ಅಲುವಂಗಬಸ್ಮ, ಸಬೆದ್ಮಿಸ್ರಿ, ಶಾಲಮಿಸ್ರಿ, ಮೊದಲಾದವನ್ನೂ ಮೂಳಿಕೆ 15ನ್ನೂ, ಒಹಾರ್ ಸರಕ 100 ಸೇರಿಸಿ ಒಹಳ ಶುದ್ಧವಾಗಿ ಕೈಯಿಂದ ಮುಟ್ಟದೇ ತಯಾರು ಮಾಡಲ್ಪಟ್ಟಿರುವ ಇದು ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟದಲ್ಲವೆಂದು ವ್ಯಕ್ತಪಡಿಸುವವರಿಗೆ 500 ರೂಪಾಯಿಯ ಒಹುಮಾನ.

20 ತೊಲೆ ಡಬ್ಬಿ 1ಕ್ಕೆ ರೂ. 3—0—0 ಒಂದೇ ಸಾರಿ 6 ಡಬ್ಬಿ ಕರಿಸಿಕೊಳ್ಳುವವರಿಗೆ ರೂ. 16. ಅನುಪಾನಪತ್ರಿಕೆ ಔಷಧ ಸಂಗಡ ಇರುತ್ತೆ

ಮದರಾಸ್ ಏಜನ್ಸಿ— ಫೈರ್ಯಲಸ್ಸ್ಟ್ರ ಅಂಡು ಕಂಪೆನಿ,
3 ಇರುಳಪ್ಪನ ಬೀದಿ, ಮದರಾಸ್

ಮೂರಾಟಕ್ಕೆ ಸಿದ್ಧವಿದೆ! ಪುರಾತನ ಸಂಗ್ರಹ! ನೂತನಗ್ರಂಥ

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ

ಮತ್ತು

ಭೂತಾಳಪಾಂಡ್ಯರಾಯನ ಅಳಿಯ ಕಟ್ಟು

ಈ ನೂತನ ಗ್ರಂಥದಲ್ಲಿ ಪರಶುರಾಮಸೃಷ್ಟಿ ಲಾಗಾಯತು ಬ್ರಿಟಿಷ್ ಮಹಾರಾಜರ ಆಳಿಕೆ ವರೇಗಿನ ಕನ್ನಡಜಿಲ್ಲೆಯ ಪೂರ್ವದ ಎಲ್ಲಾ ರಾಜರ ಚರಿತ್ರೆಗಳೂ, ಹೆಸರುಗಳೂ ಧರ್ಮರಾಯನ ನಂತರ ಕಲಿಯುಗದಲ್ಲಿ ರಾಜ್ಯವಾಳಿದ ಕ್ಷತ್ರಿಯರಾಜರ ಹೆಸರುಗಳೂ, ಕಾಲಗಳೂ ಸರಿಯಾಗಿರ ವದಲ್ಲದೆ, ಮಯೂರವರ್ಮನೇ ಮೊದಲಾದ ವಹಾ ಪುರುಷರ ಚರಿತ್ರೆಗಳೂ, ಅಹಿಚ್ಛೇತ್ರದಿಂದ ಬ್ರಾಹ್ಮಣರನ್ನು ಕರಿಸಿ ಅವರಿಗೆ ಕೊಟ್ಟಿರುವ 326 ಒಹುಮಾನದ ಹೆಸರುಗಳೂ, ಅವರ ಸ್ಥಾನಮಾನಗಳೂ, ಅಳಿಯಸಂತಾನದ ಸಂಪೂರ್ಣ ಅಭಿಪ್ರಾಯಗಳಿರುವ ಭೂತಾಳಪಾಂಡ್ಯನ ಪೂರ್ಣ ಚರಿತ್ರೆಯೂ, ಕಟ್ಟು, ಕಟ್ಟಳೆ, ಮಾನ, ಮರ್ಯಾದೆ, ಜಾತಿ ನೀತಿ ವಿಚಾರಗಳೂ ಅನೇಕ ಕಡೆಗಳಲ್ಲಿದ್ದ ಪೂರ್ವ ಶಿಲಾಶಾಸನಗಳ ಯಥಾ ನಕಲುಗಳೂ ಶಾಸ್ತ್ರಾಸನಗಳ ತಪ್ಪುತಿಗಳೂ ಕೂಡಾ ಭರಿತವಾಗಿ ಸರ್ಕಾರಿ ಗ್ರಾಮಪದ್ಧತಿ ರಾಜವ್ಯವಹಾರ ಮೊದಲಾದ ಅಪೂರ್ವ ಗ್ರಂಥಗಳ ಸಹಾಯದಿಂದ ಕೆಲವು ವರ್ಷಗಳಿಂದ ಸಂಗ್ರಹಿಸಿದ ನೂತನ ಸಂಗ್ರಹವು ಹೊಂಬಳ, ಮಾಗಣಿ, ಮನೆತನ, ಅರಸು, ಬಳ್ಳಾಲರು, ಗ್ರಾಮಗುರಿಕಾರರು, ಪಂಚಾಯತಿದಾರರು ನ್ಯಾಯಶಾಲೆಗಳು, ಉಪಾಧ್ಯಾಯರೂ ವಿದ್ಯಾರ್ಥಿಗಳೂ ಗ್ರಾಮಾಧಿಕಾರಿಗಳೂ ವರ್ಗದವರೆಲ್ಲರೂ ಓದಿ ಬಲ್ಲ ಮಹನೀಯರಿಗೆ ತಿಳಿಯಲನುಕೂಲವಾದ 296 ಪುಟಗಳು ಭರಿತವಾಗಿ ಸದಾ ಕೈಯಲ್ಲಿರುವದಕ್ಕೆ ಯೋಗ್ಯವಾದ ಈ ಪುಸ್ತಕವು ಈಗಲೇ ತಯಾರಾಗಿ ಸಿದ್ಧವಿದೆ ಅನೇಕ ಮಹನೀಯರ ಉತ್ತಮ ಅಭಿಪ್ರಾಯಗಳೂ ಬಂದಿರುತ್ತವೆ

ಪುಸ್ತಕದ ಬೆಲೆಯು ಈಗ ತರಿಸುವವರಿಗೆ 1—4—0 ಟಪ್ಪಾಲ್ ಖರ್ಚು ಬೇರೆ

ಸಮಯಾನುಸಾರ ಕ್ರಯವು 0—4—0 ವರೆಸಲಾಗಿತ್ತು

ಹೆಚ್ಚಿಗೆ ಪತಿಗಳನ್ನು ಕೊಂಡುಕೊಳ್ಳುವವರಿಗೂ ವ್ಯಾಪಾರಸ್ಥರಿಗೂ ಒಳ್ಳೇ ಕಮಿಷನ್ ಕೊಡಲಾಗುವದು

ಪ್ರಾಮುಖ್ಯ ಏಜಂಟರು — ಎನ್. ಎ. ಶೀನಪ್ಪ ಹೆಗ್ಡೆ, ಅಮುಂಜೆಗುತ್ತು,
ಎಸ್. ಪಿ. ರಾಜ ಎಂಡ್ ಕೊ. ಪೋಸ್ಟ್ ಪೊಳಲಿ, ದ ಕ ಗುರುಪುರ ಪೋಸ್ಟ್, ದ ಕ.

ಈ ಗ್ರಂಥವು ಈ ಕೆಳಗಿನ ವಿಳಾಸದವರಲ್ಲಿಯೂ ದೊರಕುವದು.

1 ಕಾರಂತ ಪ್ರೆಸ್, ಮಂಗಳೂರು.
2 ಶ್ರೀ ಕಾಧಾಕೃಷ್ಣ ವಿಲಾಸ, ಮಂಗಳೂರು.
3 ಒಂಟಿರ ವಿದ್ಯಾರ್ಥಿಭವನ, ಮಂಗಳೂರು.
4 ಊಲನ್ ಮಾರ್ಟ್, ಮಂಗಳೂರು.
5 ಕಾರಂಜಿರಿ ಸಂಗ್ರಹ ಆಫೀಸು, ಚಾಮರಾಜನಗರ ಮೈಸೂರು.
6 ಪ್ರಭಾಕರ ಮುದ್ರಾಯಂತ್ರ, ಉಡುಪಿ.
7 ಹಿರಿಯಡ್ಕ ಕೃಷ್ಣ ರಘುನಾಥ ಕಾಮತ್, ಮರ್ಚಂಟ್ ಕಾರ್ಕಳ.

☞ ಸ್ವದೇಶಾಭಿಮಾನಿಯ ಹೊಸ ಚಂದಾದಾರರಿಗೆ ಈ ಪುಸ್ತಕ ಒಂದು ರೂಪಾಯಿಗೆ ಕೊಡಲ್ಪಡುವುದು.

ಉಚಿತ! ಉಚಿತ! ಟ್ರಾಯಲ್ ಸಾನೆಲು ಇಲ್ಲ!

ಮಾನವ ಜೀವನ ಮಿತ್ರ.

ಎಂಬೀ ಪುಸ್ತಕವು ಧನ್ವಂತರಿಯಿಂದ ರಚಿಸಲ್ಪಟ್ಟು ಆರೋಗ್ಯಭಾಗ್ಯದ ಸೂತ್ರಗಳಿಂದ ಕೂಡಿರುವುದು. ಆರೋಗ್ಯವನ್ನು ಕಾಪಾಡಿಕೊಂಡು ಸರ್ವ ಕೆಲಸಗಳಿಗೂ ಉಪಯುಕ್ತವಾದ ಶರೀರಪುಷ್ಟಿಯನ್ನು ಕಾಪಾಡಿಕೊಳ್ಳಲು ಯತ್ನಿಸುವವರು ಈ ಸೂತ್ರಗಳನ್ನ ಚೆನ್ನಾಗಿ ತಿಳಕೊಳ್ಳಬೇಕಾಗಿರುವುದು. ಸೂತ್ರಗಳನ್ನು ಸರ್ವರೂ ತಿಳಕೊಳ್ಳುವಂತೆ ಬಹಳ ಸುಲಭವಾದ ಭಾಷೆಯಲ್ಲಿ ಇವುಗಳು ಭಾಷಾಂತರಿಸಲ್ಪಟ್ಟಿವೆ. ಸಾಮಾನ್ಯವಾದರೂ ಭಯಂಕರವಾದ ಪರಿಣಾಮವುಳ್ಳ ಬೇನೆಗಳಿಗೆ ತಕ್ಕ ಔಷಧಿಯು ಯಾವದೆಂಬದು ಈ ಗ್ರಂಥದಲ್ಲಿದೆ. ನಿಮ್ಮ ವಿಳಾಸವನ್ನು ನಮಗೆ ತಿಳಿಸಿದಲ್ಲಿ ಈ ಪುಸ್ತಕದ ಪ್ರತಿಯೊಂದನ್ನು ಉಚಿತವಾಗಿ ಕಳುಹಿಸಿಕೊಡುವೆವು ಖರ್ಚು ಒಂದಿವ್ವಾದರೂ ಕೊಡಬೇಕೆಂತಿಲ್ಲ.

ರಾಜವೈದ್ಯ ನಾರಾಯಣಜಿ ಕೇಶವಜಿ
ಮೂಲಕ
ಆಯುರ್ವೇದೋದಯ ಔಷಧಾಲಯ,
ಜಾಮನಗರ (ಕಾಥ್ಯಾವರ್).
ಶಾಖೆ:—ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾಬಜಾರ್ ರಸ್ತೆ, ಮದರಾಸು.

ಸದಲ ಅಥವಾ ನಿಷ್ಫಲ ಜೀವನವು ಎಂದೂ ಹಾಳಾಗದಿರುವ
ಆರೋಗ್ಯ ದೃಢಕಾಯವನ್ನು ಆದರಿಸಿರುವದು.

ಮದನಮಂಜರಿ ಪಿಲ್ಸ್.

ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಇಂಥಾ ಆರೋಗ್ಯವನ್ನು ಸಂದೇಹವಿಲ್ಲದೆ ಪಳಸಿಕೊಳ್ಳಬಹುದು ಮಲಬದ್ಧತೆ, ಅಜೀರ್ಣ, ಇಂದ್ರಿಯಗಳ ನಿಶ್ರಾಣಗಳು ಈ ರೋಗಗಳ ಬಾಧೆಯು ಬಹಳ ಸಮಯದಿಂದಿದ್ದರೂ ಈ ಮಾತ್ರೆಗಳ ಸೇವನೆಯಿಂದ ಇದು ಗುಣಹೊಂದುವದು, ಶರೀರದಲ್ಲಿ ಚೈತನ್ಯವು ಉಂಟಾಗುವದು, ರಕ್ತವು ಶುದ್ಧಿಗೊಳ್ಳುವದು, ಪ್ರಾಯವು ಸಂದು ಹೋದಂಥವರಲ್ಲಿ ಸಹ ಯೌವನದ ಶಕ್ತಿಯನ್ನುಂಟುಮಾಡುತ್ತದೆ.

40 ಮಾತ್ರೆಗಳುವ ಒಂದು ಡಬ್ಬಿಗೆ ರೂ. 1—0—0 ಮಾತ್ರ. ವಿವಧಗಳ ಪಟ್ಟಿ ಮತ್ತು ವೈಕಿತ್ಸೆಯ ಮಾಹಿತಿಯನ್ನು ಉಚಿತವಾಗಿ ಕಳುಹಿಸಿಕೊಡುವೆವು.

ರಾಜವೈದ್ಯ ನಾರಾಯಣಜಿ ಕೇಶವಜಿ.
ಆಯುರ್ವೇದೋದಯ ಔಷಧಾಲಯ,
ಜಾಮನಗರ (ಕಾಥ್ಯಾವರ್).
ಶಾಖೆ:—ಮದನಮಂಜರಿ ಪಿಲ್ಸ್ ಆಫೀಸು,
20 ಚೈನಾ ಬಜಾರ್ ರಸ್ತೆ ಮದರಾಸು.

ಮಾನ್ಯ ಸ್ತ್ರೀಪುರುಷರುಗಳೇ

ನೀವು ಉಪಯೋಗಿಸುತ್ತಿರುವ ಪರಿಮಳ ದ್ರವ್ಯಗಳ ವಾಸನೆಯ ಮೂಲಕ ಅನೇಕ ಸಂದರ್ಭಗಳಲ್ಲಿ ನೀವು ಎಂಥವರು ಮತ್ತು ನಿಮ್ಮ ಅಭಿರುಚಿಯೇನೆಂಬುದನ್ನು ಜನರು ನಿರ್ಧರಿಸಿಕೊಳ್ಳುವರು.

ಸಭ್ಯರಾದ ಸ್ತ್ರೀಪುರುಷರುಗಳು ಯಾವಾಗಲೂ ಉಪಯುಕ್ತವಾದ ಪರಿಮಳ ದ್ರವ್ಯಗಳನ್ನೇ ಉಪಯೋಗಿಸುತ್ತಿರುವರು.

ನಮ್ಮ ಸ್ವಂತದ ಗಂಗೂ

ಎಂಬ ಬರ್ಮಾ ದೇಶದ ಗಂಗೊಪಾನ್ ಎಂಬ ನೂತನ ಹೂವಿನ ಸುವಾಸನೆಯುಳ್ಳಂಥ ಪರಿಮಳ ದ್ರವವು ಕರವಸ್ತ್ರಗಳ ಉಪಯೋಗದ ಭಗ್ಯೆ ದಿವ್ಯವಾಗಿದೆ. ಇದರ ಸುವಾಸನೆಯು ಮನೋಹರವೂ, ಮಧುರವೂ, ಸುಖಪ್ರದವೂ ಆಗಿದೆ. ಪರಿಮಳದ ಸಾರವು ಇದರಲ್ಲಿ ವಿಶೇಷವಾಗಿದ್ದರೂ ಅತಿ ವಿಶೇಷವಾಗಿ ಸಹಿಸಲಶಕ್ಯವಾದ ವಾಸನೆಯನ್ನು ಕೊಡದೆ ಬಹಳ ಕಾಲದ ವರೆಗೂ ಬಾಳುವ ರಮಣೀಯವಾದ ಸುವಾಸನೆಯನ್ನು ಗಂಗೊ ದ್ರವವು ಕೊಡುವಂಥಾಗಿದ್ದು ಸುಗಂಧಗಳಲ್ಲಿ ರತ್ನ ಪ್ರಾಯವಾಗಿರುವದು. ಹಿಂದೂಸ್ಥಾನ, ಬರ್ಮಾ, ಸಿಂಹಳದ್ವೀಪ ಮೊದಲಾದ ಪ್ರಾಂತ್ಯಗಳಲ್ಲಿರುವ ರಾಜರುಗಳೂ ಇತರ ಸಾಮಾನ್ಯರೂ ಇದನ್ನು ಉಪಯೋಗಿಸುತ್ತಿದ್ದಾರೆ. ಇದನ್ನು ಉಪಯೋಗಿಸುತ್ತಿರುವವರು ಡಜನ್ ಕಟ್ಟಳೆಯಲ್ಲಿ ಇದನ್ನು ಕ್ರಯಕ್ಕೆ ಪಡಕೊಳ್ಳುವರು. ಕಳದ ೧೦ ವರುಷಗಳಿಂದಲೂ ಇದನ್ನು ಬಿಕರಿ ಮಾಡುತ್ತಿರುವೆವು. ಈ ಕಾಲದಲ್ಲೆಲ್ಲಾ ಜನರಿಗೆ ಬಹಳ ಪ್ರಿಯಕರವಾಗಿ ಬಂದಿರುವದು. ಇಪ್ಪತ್ತರತನಕ ಅನೇಕ ಸಾವಿರ 'ಗಂಗೊ'ವಿನ ಸೀಸೆಗಳನ್ನು ಮಾರಿರುವೆವು.

ನಿಮ್ಮಲ್ಲಿಯ ಮದುವೆ ಕಾಲಗಳಲ್ಲಿಯೂ ಮತ್ತು ಇತರ ಉತ್ಸವಗಳಲ್ಲಿಯೂ ಗಂಗೊ ಪರಿಮಳ ದ್ರವವನ್ನು ಉಪಯೋಗಿಸಿನೋಡಿರಿ. ಎಂಥಾ ಸಭೆಗಳಲ್ಲಿಯೂ ಇದು 'ಗಂಧರಾಜ'ನೆಂದು ಪ್ರಖ್ಯಾತಿಗೊಳ್ಳುವದು.

ಸರ್ವರಿಂದಲೂ ಇದು ಉಪಯೋಗಿಸಲ್ಪಡುವಂತೆ ಇದರ ಕ್ರಯವು ಅನುಕೂಲವಾಗಿರುವದು.

ಒಂದು ಔನ್ಸಿನ ಸೀಸೆ ಒಂದಕ್ಕೆ ರೂಪಾಯಿ ೧—೪—೦.

ಮೂರು ಸೀಸೆಗಳಿರುವ ಪೆಟ್ಟಿಗೆಯೊಂದಕ್ಕೆ ,, ೩—೮—೦,

ಮಲ್ಲಿಗೆ ಸುವಾಸನೆ ತೈಲ, ಕೆಂಪು ಗುಲಾಬಿನ ಪರಿಮಳದ ಎಣ್ಣೆ, ಬಿಳಿಯ ಗುಲಾಬಿನ ಎಣ್ಣೆ ಇತ್ಯಾದಿಗಳು ನಮ್ಮಲ್ಲಿ ಸಿಕ್ಕುತ್ತವೆ. ಪರಿಮಳದಲ್ಲಿಯೂ ಗುಣದಲ್ಲಿಯೂ ಇವುಗಳು ಮಿಗಿಲಾಗಿವೆ. ಪುಷ್ಪಗಳ ಪ್ರಫುಲ್ಲ ಸುವಾಸನೆಯು ಇವುಗಳಲ್ಲಿ ತುಂಬಾ ಇರುವದು. ಈ ಎಣ್ಣೆಗಳು ಕವಟು ಆಗುವದಿಲ್ಲ, ಇವುಗಳ ಉಪಯೋಗದಿಂದ ಕೂದಲುಗಳು ಜಡ್ಡು ಕಟ್ಟುವದೂ ಇಲ್ಲ, ಉದುರಿ ಹೋಗುವದೂ ಇಲ್ಲ. ಗಂಗೊ ಪುತ್ತು ತೈಲದ ಸೀಸೆಗಳು ಸ್ತ್ರೀಯರಿಗೆ ಕೈಕಾಣಿಕೆಗಳಾಗಿ ಕೊಡಲು ಬಹಳ ಸೊಗಸಾಗಿವೆ.

ಸೀಸೆಯೊಂದಕ್ಕೆ ರೂಪಾಯಿ ೦-೧೪-೦. ಮೂರು ಸೀಸೆಗಳಿಗೆ ರೂಪಾಯಿ ೨—೮—೦.

ಪೆಕಿಂಗ್ ಮತ್ತು ಟಪ್ಪಾಲು ಖರ್ಚು ಪ್ರತ್ಯೇಕವಿರುವದು.

ವಿಳಾಸ:— ಶ್ರೀ ಕೃಷ್ಣ ಬ್ರದರ್ಸ್

ಕೆಮಿಸ್ಟ್ ಎಂಡ್ ಒಪ್ಟಿಸಿಯನ್ಸ್,

ಪೋಸ್ಟ್ ಬೋಕ್ಸ ನಂಬ್ರ 166, ಮದ್ರಾಸು.

ಮತ್ತು

ಕುಬೇರ್ ಸುಬ್ರಾವ್ ಆರೂರು ನಾರಾಯಣ ಕಲ್ಲುರ್

ಮರ್ಚಂಟ್, ತೆಂಕವೇಟಿ,

ರಥಬೀದಿ ಮಂಗಳೂರು. ಉಡುಪಿ-

ಈ ಎರಡು ಕಡೆಗಳಲ್ಲಿಯೂ ಈ ಪರಿಮಳ ದ್ರವಗಳು ಕ್ರಯಕ್ಕೆ ದೊರಕುತ್ತವೆ.

ಅನುಭವಸಿದ್ಧವಾದ ಔಷಧಗಳು.

೧. ಕುಂತೆಕಾವಂಜ ತೈಲವು. ಕೇಶವರ್ಧಕವೂ ತಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಪಾಲ್ಗು ದಿರುವಿನ ದಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ ೩ ಬಾಟ್ಲಿಗೆ ೨ರೂ ೧೦ ಆಣೆ

೨ ಪ್ರಮೇಹರಿಪು ದಿಂದು ಸುರಿಯು, ನ್ನೂ ಕೇವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೩ ಲಂ

೩. ಪಂಚಪೀರಳ ಪಾಕ. ಎಲ್ಲ ಪದರಗಳನ್ನೂ ಮುಟು ಕಟ್ಟಳೆಯ ದೋಷ ಳನ್ನೂ ಖಂಜಿತವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ರೂ

೪ ಸೂರಣಾವ ಲೇಹ. ರಕ್ತ ಅಥವಾ ಮೊಳಿಕೆಯ ಮೂಲವ್ಯಾಧಿಯ ನಿಂಲಿ ಭಯ್ಯತ್ಕಮವು. ಶಾಸ್ತ್ರಿಕವಾಗಿದೆ ರಾತಲಿಗೆ ೨ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ಯಾವುದಾನವಾದ ಜ್ವರಪ ಗಡ್ಡೆಯನ್ನೂ ಕಕ್ಷಸಂಬಂಧವಾದ ಇತರ ವಿಕಾರಗಳನ್ನೂ ಗುಣ ಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ರೂ ೮ ಆಣೆ

೬. ಜಗನ್ಮೋಹವ ದಂತನಿಂಜವ. ದಂತ ಸಂಬಂಧವಾದ ಸರ್ವ ಬಾಧೆ ಗಳನ್ನು ಪರಿಹರಿಸಶಕ್ಕ ವಿಕಾಯತೀ ಮಂಜನದಪ್ಪೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಆಣೆ

೭. ಸರಳಭೇದಿ ಮಾತ್ರ ಅಗುಣಾಸನವನ್ನುಂಟುಮಾಡದ ಸುಖ ವಿರೇಚಕವು ತೊಲೆಗೆ ೨ರೂ

ಇಷ್ಟು ವಿಳಾಸ:—ಬಿ ಎಮ್ ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸಿಯು ಜ್ವರ ಮುಂತಾದ ಎಲ್ಲ ಜ್ವರಗಳನ್ನು ಕಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ರೂ.

೯. ವಾಸಾವ ಲೇಹ. ಕೆಮ್ಮು ಗುಲ್ಮಾಶ್ಮರಿ, ಕಫ, ಕ್ಷಯಗಳ ಮೇಲೆ ತಮಬಾಣವು ರಾತಲಿಗೆ ೨ರೂ

೧೦ ಶಾಲ್ಮಲೀ ಪಾಕ ಸ್ಪಷ್ಟಾವಸ್ಥೆ, ಮೂತ್ರದಲಿ ಧಾತುಪತನ, ಹು ಮೈರ್ಮಸಥಗಳ ಮುಖಲಕವಾಗಿ ಶಾಶ್ವತವಾದ ನಿರ್ಬಲತೆ ಮುಂತಾದವುಗಳನ್ನು ಬೇಗ ಗೊಳಿಸಿ ಶಕ್ತಿ, ಕಾಂತಿ ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ರೂ.

೧೧ ವಂತಮುರಾರಿ ಬಾಮ್ ಕಲೆ ನೋವು, ಎದೆನೋವು, ಸೊಂಟ ನೋವು, ಉಳುಕು ಬೀಗು, ವಾತಬಾಧೆಗಳನ್ನು ಕೂಡಲೆ ಗೆಲ್ಲುವದು ಬಾಟ್ಲಿಗೆ ೮ ಆಣೆ ೧ ಬಾಟ್ಲಿಗೆ ೧ರೂ ೮ ಆಣೆ

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ಕುರಿಗಜ್ಜಿ ಮುಂ ತಾದ ಜಿಡ್ಡು ವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲ್ಲುವದು ಉರಿಯಿಲ್ಲ ವದಿಲ್ಲ ಸುವಾಸಿಕವಾಗಿದೆ ಕರಡಿಗೆ ೪ ಆಣೆ.

೧೩ ಸರ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ರೂ.

೧೪ ಪ್ರಥಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗು ಮಾ ತ್ರು, ಬುದ್ಧಿನಾಶ್ಯಗಳನ್ನು ಪರಿಹರಿಸುವದು ಸ್ಮರಣಶಕ್ತಿಯನ್ನು ದೆಳೆಯಿಸುವದು. ತಾಲಿಗೆಗೆ ಪಟುತ್ವವನ್ನು ಕೊಡುವದು ಕಂಠಸ್ವರವನ್ನು ಮಧುರವಾಗಿರಿಸುವದು ವಿದ್ಯಾರ್ಥಿ ಗಳಿಗೆ ಅತ್ಯುತ್ತಮವು ೧ ತೊಲೆಗೆ ೨ರೂ ೮ ಆಣೆ

☞ ನೋಡಿದ ದೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ದೆಲೆಗೆ ದೊರೆಯುವವು ನಮ್ಮ ಮೊತ್ತ ಕಕ್ಷರ ತೆಟಲಾಗ ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಕಳುಹಿಸುವೆವು ಪೋಸ್ಟಿನ ಕಕ್ಷರದಿ ದ ಲೂ ಇಂಗ್ಲಿಷಿನಲ್ಲಿಯೂ ಪತ್ರವ್ಯವಹಾರ ನಡೆಯಿಸಬಹುದು

B M Nath & Co, *Ayurvedic Chemists.*

Vepery Post MADRAS.

ಬಾಸೆಲ್ ಮಿಶನ್ ಬುಕ್ ಎಂಡ್ ಟ್ರೇಕ್ಟ್ ಡಿಪೋಜಿಟರಿ
ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ.

ಲೋಕವ್ಯವಹಾರ ಬೋಧಿನಿ ..	೧	೦	೦
ನಾನಾರ್ಥ ಶಬ್ದಾವಳಿ	೦	೧೦	೦
ಗದ್ಯ ಸಂಗ್ರಹ	೦	೬	೦
ಪದ್ಯ ,,	೦	೧	೬
ಪದಾರ್ಥ ವಿಜ್ಞಾನ ಶಾಸ್ತ್ರ	೦	೧೫	೬
ಕನ್ನಡ ನುಡಿಹಿಡಿ (ಸಂಕ್ಷಿಪ್ತ ಲಿಪಿ)	೧	೦	೦
ಕನ್ನಡ ಮತ್ತು ಇಂಗ್ಲಿಷ್ ಗಾದೆಗಳು	೦	೪	೦
ಇಂಗ್ಲಿಷು ಭಾಷಾಮಂಜರಿ	೧	೦	೦
ಇಂಗ್ಲಿಷು ಕನ್ನಡ ಸಂಧಾಷಣ ವಾಕ್ಯಗಳು	೦	೧೦	೦
ಕನ್ನಡ ಇಂಗ್ಲಿಷು ನಿಘಂಟು (ದೊಡ್ಡದು)	೫	೦	೦
ಇಂಗ್ಲಿಷ್ ಕನ್ನಡ ,, (ದೊಡ್ಡದು)	೫	೦	೦
,, ,, ,, (ಸಣ್ಣದು)	೧	೮	೦
ಸಂಸ್ಕೃತ ಬಾಲವ್ಯಾಕರಣ	೧	೦	೦
ತಿದ್ದುವಿಕೆಯೂ ಶಿಕ್ಷಣವೂ, ಫೌಲರ್ ದೊರೆಗಳು ಮಾಡಿದ್ದು	೦	೧೪	೦
ಹಿಂದು ದೇಶದ ಚರಿತ್ರೆ ಸಂಪೂರ್ಣ	೧	೮	೦
ಕೃಷಿ ಶಾಸ್ತ್ರದ ಮೊದಲನೇ ಪುಸ್ತಕ	೦	೬	೦
ಮೊದಲನೇ ಪದ್ಯ ಪುಸ್ತಕ ...	೦	೧	೬
ವಿಕೀರ್ಣ ಸುಭಾಷಿತ ಪ್ರಸಂಗ ಶತಕ	೦	೧	೦
ರಾಜರ ಗೀತೆ (ಚಿತ್ರ ಸಹಿತ)	೦	೦	೬
ಕನ್ನಡ ಹಿಂದುಸ್ತಾನಿ ಭಾಷಾಮಂಜರಿ ..	೦	೪	೬
ಇಸೋಪನ ನೀತಿಕಥೆಗಳು (ಚಿತ್ರ ಸಹಿತ)	೦	೮	೦
ಆರೋಗ್ಯ ಭಾಗ್ಯ	೦	೪	೦
ವ್ಯಾಯಾಮ ಬೋಧಿನಿ	೦	೪	೦
ರೋಗ ಚಿಕಿತ್ಸೆ	೧	೮	೦
ಜೀವರಕ್ಷಾಯನಿ ವೈದ್ಯಸಾರ	೧	೦	೦
ಮುಸ್ಲೀಕ ವಿಜಯ ...			
ಅಲಿಬಾಬನ ಕಥೆ			

ಡೋಂಗರೆ ಇವರ ಬಾಲಾಮೃತ.

ಮಕ್ಕಳಿಗೆ ಅತ್ಯುತ್ತಮವಾದ ಟಾನಿಕ್!!

ಈ ಬಾಲಾಮೃತವನ್ನು ಉಪಯೋಗಿಸಿದ ಮಕ್ಕಳು ಶಕ್ತಿವಂತರಾಗಿ ಆರೋಗ್ಯವಂತರಾಗುವವು. ಇದು ಮದ್ದಿರದ ಇರುವದರಿಂದ ಮಕ್ಕಳು ಒಹಳ ಆವಲವಿಕೆಯಿಂದ ತಕ್ಕೊಳ್ಳುತ್ತಾರೆ

ಡೋಂಗರೆ ಇವರ ಬಾಲಾಮೃತವನ್ನು ಕೊಂಡುಕೊಳ್ಳುವಾಗ "ಡೋಂಗರೆ" ಇವರ ಹೆಸರಿದ್ದದ್ದನ್ನೇ ನೋಡಿ ಪಡಕೊಳ್ಳಿರಿ.

ಬಾಟ್ಲಿ ಒಂದಕ್ಕೆ ಕ್ರಯ ೧೫ ಆಣೆ. ಟಪ್ಪಾಲು ಖರ್ಚು ೪ ಆಣೆ.

K. T. Dongre & Co., ಕೆ. ಟಿ. ಡೋಂಗರೆ ಎಂಡ್ ಕೊ.
Girgaum, Bombay. ಗಿರಗಾಂ ಬೊಂಬಾಯಿ

150 ಪುಟಗಳ ಪುಸ್ತಕವು ಉಚಿತವು.

ಆರೋಗ್ಯವನ್ನು ಶಾಶ್ವತ ಸುಖವನ್ನು ಹೊಂದುವರು ಸ್ತ್ರೀಧರ್ಮಿಕವಾದ ಕೆಲವು ವಿಧಿಗಳನ್ನು ಅನುಸರಿಸಬೇಕಾಗಿರುವುದು ಉಚಿತವಲ್ಲ. ಈ ಉತ್ತಮವಾದ ಪುಸ್ತಕವು ಪ್ರತಿಯೊಬ್ಬ ಸ್ತ್ರೀಯರಿಗೆ ಅವಶ್ಯವಾಗಿದ್ದು ಅವರ ಸೌಖ್ಯವನ್ನು ದೃಢಗೊಳಿಸುವುದು. ತಪ್ಪು ಕಲ್ಪನೆಗಳನ್ನು ತೆಗೆದುಹಾಕುವುದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವುದು. ಇದಕ್ಕೆ ಅಂಚೆ ಹಾಕಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ತಿಂಗಳವರು ಬರೆಯಬೇಕು. (೪)

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ.
ಆತಂಕನಿಗ್ರಹ ಔಷಧಾಲಯ,
157 ಬ್ರಾಡ್ವೇ ಮದ್ರಾಸ್.

S. U. N. & CO.,
BENARES CITY, U. P.

ಇಪ್ಪತ್ತೈದು ಸಾವಿರ ರೂಪಾಯಿನ ಮೂಲುಗಳನ್ನು
ಅಸಲ್ ಕ್ರಯಕ್ಕೆ ಕೊಡುತ್ತೇವೆ.
ಈ ತಿಂಗಳು ಮಾತ್ರ.

ಈ ಮತಿಹ ಲಗ್ನಕಾರ್ಯಗಳಿಗೆ ತಯಾರಿಸಿದ ಬನಾರ್ಸ್ ಜರಿ ಸಾದಾ ಶಿರೆ, ಬೂಟಾ ಶಿರೆ, ಪೇಟಿ ಪಗುಟಿ, ರುಮಾಲು, ಕರಗಳ, ಕೋಟ ಸಿಲ್ಕುಥಾನುಗಳು. ಸಮೀರ ಟಿವನ್, ಕಾಶ್ಮೀರ್ ಸಾದಾ ಜರಿ ಶಾಲುಗಳು, ಕೊರ್ಸಾಡ ಶಿರೆ, ರಡ್ರಾಕ್ಷಿ ಮೊದಲಾದ ಎಲ್ಲಾ ತರದ ಸುಮಾರು ೭೫೦೦ ರೂಪಾಯಿನ ಮಾಲುಗಳ ಅಟ್ಟಿಯಿವುದರಿಂದ ನಾವು ಅದನ್ನು ಅಸಲ್ ಕ್ರಯಕ್ಕೆ ಕೊಡಲ್ಪೇವೆ ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಬಹುದು

ಈ ತಿಂಗಳ ಕಳೆದ ಮೇಲೆ ಇಂಥಾ ಸಮಯ ಸಿಕ್ಕುವುದಿಲ್ಲ. ಬೇಗ ಬರೆದು ತರಿಸಿಕೊಳ್ಳಿ.

ವಿಳಾಸ — ಯಸ್.ಯು.ಯನ್. ಮತ್ತು ಕಂಪೆನಿ, ಕಾಶಿ

THE GREATEST TREASURE OF TRUE VEDIC PRINCIPLES.

ಸತ್ಯಾರ್ಥ ಪ್ರಕಾಶ.

ಮೊದಲನೇ ೧೦ ಅಧ್ಯಾಯಗಳ ಕನ್ನಡ ಭಾಷಾಂತರ.

ಇದರಲ್ಲಿ ವ್ಯಾಪಾರಿಗಳಿಗೆ ಪರಸ್ಪರ ಸಂಬಂಧವು ಹ್ಯಾಗೆ ಇರಬೇಕೆಂಬುವದೂ ಜೀವದ ಮತ್ತು ಪರಮೇಶ್ವರನ ಸಂಬಂಧವೂ, ಪರಮೇಶ್ವರನ ಓಂಕಾರಾದಿ ಹೆಸರುಗಳ ವ್ಯಾಖ್ಯೆಯೂ, ಮಕ್ಕಳ ಶಿಕ್ಷಣ ಪದ್ಧತಿಯೂ, ಬ್ರಹ್ಮಚರ್ಯಾದಿ ಆಶ್ರಮಗಳ ವರ್ಣನವೂ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶೂದ್ರರಿಗೆ ಮತ್ತು ಅಂತ್ಯಜರಿಗೆ ಹಾಗೂ ಸ್ತ್ರೀಯರಿಗೆ ವೇದಾಧ್ಯಯನದ ಅಧಿಕಾರವು ಇದ್ದ ಬಗ್ಗೆ ಸಪ್ರಮಾಣ ವಿವೇಚನವೂ, ಜಗತ್ತಿನ ಉತ್ಪತ್ತಿ ಸ್ಥಿತಿ ಪ್ರಳಯಗಳ ವಿಚಾರವೂ, ಬಂಧ ಮೋಕ್ಷಗಳ ವಿಷಯವೂ, ಭಕ್ಷ್ಯಾಭಕ್ಷ್ಯಗಳ ವಿವೇಚನವೂ, ವೇದಾದಿ ಸತ್ಶಾಸ್ತ್ರಗಳ ಆಧಾರದಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳವರು ಜ್ಞಾನಿಗಳಾದ್ದರಿಂದ ಶ್ರೀ ಸ್ವಾಮಿ ದಯಾನಂದ ಸರಸ್ವತಿಯವರ ಚರಿತ್ರವೂ, ಅವರು ವಿಶೇಷವಾಗಿ ಮತ್ತು ಹೊಸ್ತಿಗೆಯೊಡನೆ ಮಾಡಿದ ತರ್ಕಗಳೂ ಮತ್ತು ಸನಾತನ ವೈದಿಕಧರ್ಮದ ಸತ್ಯಾರ್ಥವನ್ನು ಬೋಧಿಸುವ ಗಹನ ವಿಷಯಗಳೂ ಇದರಲ್ಲಿ ಕೊಟ್ಟಿವೆ ಕಿಮ್ಮತ್ತು ರೂ. ೧—೮—೦. ವಿದ್ಯಾರ್ಥಿಯವರಿಗೆ ರೂ ೧—೪—೦ ಟಪ್ಪಾಲು ಖರ್ಚು ಬೇರೆ. ಪುಟ 560.

ಸತ್ಯಾರ್ಥ ಪ್ರಕಾಶ.

(ಗಾನೇ ಅಧ್ಯಾಯದ ಕನ್ನಡ ಭಾಷಾಂತರ)

ಇದರಲ್ಲಿ ಆರ್ಯಾವರ್ತ ದೇಶದಿಂದಲೇ ಇತರ ದೇಶಗಳು ವಿದ್ಯೆಯನ್ನು ಪಾಜೀನ ಕಾಲದಲ್ಲಿ ಕಲಿಯುತ್ತಿದ್ದರೆಂತಲೂ ಆರ್ಯಾವರ್ತ ದೇಶದ ಅವನತಿಯ ಕಾರಣಗಳೂ ಅನ್ಯೈಕ್ಯತೆಯೂ, ಮೂರ್ತಿಪೂಜೆ, ತಪ್ಪುಮಾರ್ಗಾಧಾರಣೆ, ಗಯಾಶ್ರಾದ್ಧ, ಪುರಾಣಗಳು, ಜ್ಯೋತಿಷ, ಬ್ರಹ್ಮಸಮಾಜ ಪ್ರಾರ್ಥನಾಸಮಾಜ ಮುಂತಾದ ಬಹಳೇ ಪಂಥಗಳ ಪರೀಕ್ಷಣವು ಮಾಡಿವೆ. ಕಿಮ್ಮತ್ತು ಆಣೆ ೩ ವಿದ್ಯಾರ್ಥಿಯವರಿಗೆ ಆಣೆ ೩. ಪಾನ. ಡಿವಿ ಅನ್ಪಪತ್ರದ ಪುಟ ೧೯೦, ಟಪ್ಪಾಲು ಖರ್ಚು ಬೇರೆ.

ಈ ಗ್ರಂಥವನ್ನು ಹಿಂದಿ ಭಾಷೆಯೊಳಗಿನಿಂದ ಕನ್ನಡದಲ್ಲಿ ಸುಬ್ರಾವ್ ಶೇಷಗಿರಿ ಹಾಳಕರ, ಬಿ. ಎ, ಎಲ್ ಎಲ್ ಬಿ, ಹೈಕೋರ್ಟ್ ವಕೀಲ್, ರಂಗೂನ್, ಇವರು ಮಾಡಿರುತ್ತಾರೆ ಹಿಂದೂ (ಆರ್ಯ) ಧರ್ಮಾಭಿಮಾನಿಯಾದ ಪ್ರತಿಯೊಬ್ಬನು ಸಂಗ್ರಹಿಸಲಿಕ್ಕೆ ದುರ್ಲಭವಾದ ಅತ್ಯಾವಶ್ಯಕ ಗ್ರಂಥವು ಇದರ ಬೆಲೆಯಾದರೂ ಸರ್ವರೂ ಕೊಂಡುಕೊಳ್ಳುವಂತೆ ತೀರ ಕಮ್ಮಿ ಬೆಲೆಯನ್ನು ಇಟ್ಟಿರುತ್ತದೆ.

ಸಿಗುವ ವಿಳಾಸ ಎಸ್. ಎಲ್. ಕಾಮತ್ ಧಾರವಾಡ
ಪೋಸ್ಟು ತಿರ್ತಿ, ಜಿಲ್ಲಾ ಉತ್ತರ ಕನ್ನಡ.

Estd 1888 ಸ್ಥಾಪನೆ 1888.

K. B. RELE & Cos.,—BOMBAY
ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ಕದ್ದು, ಇಪ್ಪತ್ತು ಇವುಗಳ ಮೇಲೆ ಮಲಮು.

ಎಷ್ಟೇ ಹಳತ, ಕರೆ ಮತ್ತು ಕಟುಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೨೦—೩೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡ ಸಂಕ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ದೊಡ್ಡ ಬಾಟ್ಲಿ ಗಿಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ಇನ್ನಾಲ್ಕೇ ಆಣೆ

ವಿಶೇಷ ಸೂಚನೆ—ದೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರಲ್ಲಾ ದೋಷಗಳೆಲ್ಲಾ ನಷ್ಟವಾಗುತ್ತವೆ ಬಹಳ ದಿವಸದಿಂದ ಮೈಯಲ್ಲಿ ಶೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಜಟ್ಟಿಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ಕೂತು ದೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಜಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ದೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಔಷಧವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಿಕ್ಕೆ ರೂ. ೧—೪—೦. ಅಂಚೆ ನಿಷ್ಣ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಧರಪುರ ಕಮಿಷನ್

ಕೆ. ಬಿ. ರೇಳೆ ಸನ್ಸ ಕಂಪೆನಿ ಗಿರಗಾಂವ ನಂ. ೪ ಮುಂಬಯಿ.

ಸಾಳ್ವದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಶೀಕಾಮಯಹರ ಕಸ್ತೂರಿಮಾತ್ರೆಗಳನ್ನು ಈಗಲಾದರೂ ಪರೀಕ್ಷಿಸಿ ನೋಡಿರಿ

ಪ್ರತಿ ವರ್ಷವೂ ಲಕ್ಷಾಂತರ ಸೀಸೆಗಳು ವಿಕ್ರಯವಾಗುತ್ತಿವೆ.



ಇಂಡಿಯಾದವರು ಮಾತ್ರವಲ್ಲ, ಬರ್ಮಾ, ಸಿಲೋನ್, ಮಲೆಯ ಸ್ಟೇಟ್ಸ್, ಗೋವಾ, ಫೀಜಿಐಲೆಂಡ್, ಈಸ್ಟಾಫ್ರಿಕಾ ಮೊದಲಾದ ಕಡೆಯವರು ಕೂಡ ಈ ಸಿದ್ಧೌಷಧಿಯನ್ನು ಉಪಯೋಗಿಸುತ್ತಿರುತ್ತಾರೆ.

ಮಹಾಭಾಗ ಒಂದೇ ಒಂದು ಶೀಕಾಮಯಹರ ಕಸ್ತೂರಿ ಮಾತ್ರೆಯ ಸೀಸೆಯು ನಿಮ್ಮ ಮನೆಯಲ್ಲಿದ್ದರೆ ಮಾತುಮಾತಿಗೂ ವೈದ್ಯರ ಸಮಯವನ್ನೂ ಕಾದು ಮೊರೆಯಿಡುವುದು ನಿಜವಾಗಿಯೂ ತಪ್ಪುವುದು.

ಶೀತ, ಶೀತವಾಯು, ಅಜೀರ್ಣ, ವಾಕ್ಪ್ರವಾಯು, ಜ್ವರ, ಮಂದ, ಮಲಬದ್ಧ, ಕೆಮ್ಮು, ಗಸೆಬೇನೆ, ಬಲಹೀನತೆ, ಕೆಟ್ಟಹವಾ, ವಕ್ಕ ಕೆಡುಕಾದ ನೀರು ನಿಂದುಂಟಾಗುವ ವಿಕಾರ, ಮಕ್ಕಳ ಎಳವು, ಜ್ವರ, ಕೆಮ್ಮು, ವಾಯು, ಇನ್ನೂ ಅನೇಕ ರೋಗಗಳನ್ನು ಈ ಸಿದ್ಧಾಮೃತ ಆಶ್ಚರ್ಯವಾಗುವಂತೆ ಗಇಪಡಿಸುತ್ತದೆ

ರಿಜಿಸ್ಟರಾದ ಈ ವ್ಯಾಪಾರದ ಗರ್ತು ಪ್ರತಿ ಸೀಸೆಯ ಮೇಲೂ ಇರುವುದನ್ನೇ ನೋಡಿ ತೆಗೆದುಕೊಳ್ಳಬೇಕಾಗಿದೆ.

ಅನುಪಾನ ಪತ್ರವು ಪ್ರತಿ ಸೀಸೆಯೊಡನೆಯೂ ಇರುವುದು. 260 ಮಾತ್ರೆಗಳುಳ್ಳ ಕುಪ್ಪಿಗೆ ೪ ಆಣೆ ವಮಾತ್ರ.

ಪ್ರತಿ 6 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 1—8—0

ಪ್ರತಿ 12 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 2—12—0

ಪ್ರತಿ 25 ಸೀಸೆಗಳನ್ನು ಒಟ್ಟಿಗೆ ತರಿಸಿದರೆ ಟಪಾಲು ಖರ್ಚು ಸೇರಿ 5—0—0

ಯೋಗ್ಯತಾ ಪತ್ರಗಳು.

ಮಿ ರಾ ಡಾಕ್ಟರ್ ಪ್ರಭಾಕರ್ ಫೆಲೊ ಆಯುರ್ವೇದಿಕ್ ಯೂನಿವರ್ಸಿಟಿ, ಗ್ರಾಜುಯೇಟ್ ಎನ್. ವೈ. ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾ, ಐ ಎಸ್. ಆಫ್ ದಿ ಸ್ಯಾನಿಟರಿ ಇನ್‌ಸ್ಟಿಟ್ಯೂಟ್, ಲಂಡನ್ ಕನ್ಸಲ್ಟಿಂಗ್ ಕಮಿಸ್ಟ್ರಿ, ಎಗಿಯರಿವಿಂಗ್ ನಂ. 2. ಬೊಂಬೈ ಇವರು ಬರೆದಿರುವುದು. ತಮ್ಮ ಶೀಕಾಮಯಹರ ಕಸ್ತೂರಿ ಮಾತ್ರೆಗಳನ್ನು ಉಪಯೋಗಿಸಿ ಮುದರಲ್ಲಿ ಶ್ವಾಸೋಚ್ಛ್ವಾಸಗಳ ವ್ಯತ್ಯಾಸ, ಅಜೀರ್ಣ, ಮಲಬದ್ಧತೆ, ಪಕ್ಕೆಯ ನೋವು, ಹೊಟ್ಟೇನೋವು, ದಿನಕಟ್ಟಲೆಯ ಜ್ವರ, ಪಿತ್ತಸಂಬಂಧವಾದ ರೋಗ, ಮಕ್ಕಳ ಎಳವು ವಾಯುಗಳೆಲ್ಲವೂ ಗುಣವಾಗಿರುತ್ತವೆ. ತಮ್ಮಲ್ಲಿಗೆ ಪ್ರತಿನಿತ್ಯವೂ ಬರುವ ರೋಗಿಗಳಿಗೆ ಈ ಕಸ್ತೂರಿ ಮಾತ್ರೆಗಳನ್ನೇ, ಸ್ವದೇಶಿ ನೆಮ್ಮದಿ ಮುಖ್ಯವಾಗಿ ಕೊಡಬೇಕೆಂದು ಶಿಫಾರಸ್ ಮಾಡುತ್ತೇನೆ

ಮಿ ರಾ ಪಿ ಎಸ್. ಅಚ್ಯುತರಾವ್ ಸೀನಿಯರ್ ಸರ್ಜನ್, ಮತ್ತು ಸ್ಯಾನಿಟರಿ ಕಮಿಷನರ್, ಮೈಸೂರು ಗವರ್ನ್‌ಮೆಂಟ್ ಇವರು ಬರೆದಿರುವುದು ಶೀಕಾಮಯಹರ ಕಸ್ತೂರಿ ಮಾತ್ರೆಗಳನ್ನು ನಾನು ಉಪಯೋಗಿಸಿದ್ದೇನೆ. ಪಂಡಿತರವರಿಂದ ಪತ್ರಿಕೆಯಲ್ಲಿ ಪ್ರಸಿದ್ಧ ಪಡಿಸಿರುವಂತೆ ಅನೇಕ ಉಚ್ಚೈಶ್ವವಾದ ಗುಣಗಳನ್ನು ಈ ಗುಳಿಗೆಗಳು ಹೊಂದಿವೆ ಎಂಬುದಾಗಿ ತಿಳಿಸಲು ನಾನ ತುಂಬಾ ಆನಂದಭರಿತನಾಗಿದ್ದೇನೆ. ವೈದ್ಯಶಾಲೆಯಲ್ಲಿ "ಅನೇಕ ತರದ ಉಪಯುಕ್ತವಾದ ಕರ್ನಾಟಕ ಮೂಲಿಕೆಗಳಿಂದಲೇ ಔಷಧವನ್ನು ತಯಾರು ಮಾಡುತ್ತಿರುತ್ತಾರೆ

ಸಮಸ್ತ ರೋಗಗಳಿಗೂ ನಮ್ಮಲ್ಲಿ ಆಯುರ್ವೇದೀಯ ಸಿದ್ಧೌಷಧಿಗಳು ದೊರೆಯುತ್ತವೆ. ಕ್ಯಾಟಲಾಗು ಉಚಿತ.

ವಿಳಾಸ— ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

ಹೊಸ ಪತ್ರಿಕೆ! **ಭಾರತಿ.** ಹೊಸ ಸಮಾಚಾರ!!

ಬಳ್ಳಾರಿಯಲ್ಲಿ ಹೊರಡುವ ಶ್ರೇಷ್ಠವಾದ ವಾರಪತ್ರಿಕೆ.

ಬಳ್ಳಿಗರಿಗೂ, ವರ್ತಕರಿಗೂ, ಉಪಾಧ್ಯಾಯರಿಗೂ, ಸಂಘಗಳಿಗೂ, ವಿದ್ಯಾಸಿಲಯಗಳಿಗೂ, ಅವಶ್ಯಕವಾದ ಸ್ಥಿತಿ, ಧಾರ್ಮಿಕ, ರಾಜಕೀಯ ವಿಷಯಗಳು, ಸದ್ಯದ ಯುದ್ಧ ಸಮಾಚಾರಗಳು, ವಿದೇಶ ವೃತ್ತಾಂತಗಳು, ಪಂಡಿತರಿಂದ ಬರೆಯಲ್ಪಡುವ ವಿಮರ್ಶಾತ್ಮಕ ಲೇಖಗಳು, ಕನ್ನಡಿಗರಿಗೆ ಸುಲಭವಾಗಿ ತಿಳಿಯುವಂತೆ ಪ್ರಕಟಿಸಲ್ಪಡುವವು. ಸುಂದರವಾದ ಟೈಪು, ಉತ್ತಮವಾದ ಗ್ಲೇಜು ಕಾಗದ, ದಮ್ಮಿ ಎಂಟು ಪುಟಗಳ ಪತ್ರಿಕೆ. ವಾರ್ಷಿಕ ವರ್ಗಣಿ. ಅಂಚೆ ವೆಚ್ಚ ಸೇರಿ ರೂ 2—4

1915ನೇ ಅಕ್ಟೋಬರು 30ನೇ ತಾರೀಕಿನೊಳಗೆ

100 ಚಂದಾದಾರರನ್ನು ಕೂಡಿಸಿ ಕೊಟ್ಟ ಏಜಂಟರಿಗೆ ರೂ. . 25.
50 „ „ „ „ .. 10.
25 „ „ „ „ ... 5.

ಹಾಫ್ಟೋನ್ ಎಸಯ ಬರೆದು ತಿಳಿಕೊಳ್ಳಬಹುದು.

ನಮ್ಮ ಎಡ್ರೆಸ್:— ಮ್ಯಾನೇಜರ್, ಭಾರತಿ,
ಬಳ್ಳಾರಿ

ಮೈಸೂರು ಊದಬತ್ತಿಗಳು

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರ 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇವೆ

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ 12—0—0, 5—0—0, 3—0—0. 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0. 0—12—0, 0—6—0.

ಸುಗಂಧಿ ಕಾಡ್ಡು 1ಕ್ಕೆ 0—1—0. ಬಾಲಗ್ರಹ ದೂಪ ಟಿನ್ 1ಕ್ಕೆ 0—8—0. ಸುವಾಸನೇ ಸುಣ್ಣ ಶೀಸೆ 1ಕ್ಕೆ 0—2—0, ಇದಲ್ಲದೆ ಇನ್ನು ಅನೇಕ ತರಹ ಸೆಂಟ್ಸುಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸೆಣ್ಣ ಸೆಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾ ವರ್ತಿಗೆ ಕಡಿಮೆಯಿಲ್ಲದೆ

ವಿಶ್ವಾಸ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ ಎಂಡ್ ಸನ್ಸ್

ಸುಗಂಧಕಾರಿ, ಮೈಸೂರು.

ಬಹು ಮನೋಹರ! ಅದ್ಭುತ!

ವಸಂತ ಕೋಕಿಲೆ

ಎಂಬ

ನೂತನವಾದ ಹೊಸ ಕಾದಂಬರೀ ಕಥೆ.

ರಸಿಕ ಶಿರೋಮಣಿಗಳೇ,

"ವಸಂತ ಕೋಕಿಲೆ" ಎಂಬ ಇಂದ್ರಜಾಲ ಮಹೇಂದ್ರಜಾಲಗಳನ್ನು ಸ್ವಪ್ನವಾಗಿ ತೋರಿಸುವ ಅತ್ಯದ್ಭುತ ಚಮತ್ಕಾರವಾದ ಹೊಸ ಕಾದಂಬರೀ ಕಥೆಯು ಅಚ್ಚಾಗಿ ಈಗ ತಾನೇ ಬಿಕರಿಗೆ ಸಿದ್ಧವಾಗಿದೆ. ಈ ಗ್ರಂಥದಲ್ಲಿ ಶೃಂಗಾರಾದಿ ನವರಸಗಳು ತುಂದಿತುಳುಕುತ್ತಿವೆ ಈವರೆಗೆ ಪ್ರಚುರವಾಗಿರುವ ಎಲ್ಲಾ ಕಥೆಗಳಿಗಿಂತಲೂ ವಿಶೇಷವಾದ ರಸ್ಯವೈಚಿತ್ರ್ಯವುಳ್ಳದ್ದಾಗಿದೆ. ವರ್ಣನಾಭಾಗಗಳು ಎಲ್ಲರಿಗೂ ತಿಳಿಯುವ ಹಾಗೆಯೂ ಸ್ವಾಭಾವಿಕವಾಗಿಯೂ ಇವೆ. ಭಾಷಾಶೈಲಿಯು ಅತ್ಯುತ್ತಮವಾಗಿದೆ. ಓದುವದಕ್ಕಾರಂಭಿಸಿದ ವಾಚಕರ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿ ಮುಗಿಯುವವರೆಗೂ ಅವೇಶವನ್ನುಂಟುಮಾಡಿ ಉಲ್ಲಾಸಗೊಳಿಸುವ ಹಾಗಿದೆ ತಮ್ಮ ಜ್ಞಾನ, ಭಕ್ತಿ, ವೈರಾಗ್ಯ ಮೊದಲಾದ ವೇದಾಂತ ವಿಷಯಗಳನ್ನೂ ಚೆನ್ನಾಗಿ ತಿಳಿಸುತ್ತದೆ. ಕಥಾ ಸಂವಿಧಾನವು ಹೊಸ ಮಾದರಿಯಾಗಿ ಅಶ್ಚರ್ಯಕರವಾಗಿದೆ. ಪ್ರಕಟವಾಗಿ ಶೃಂಗಾರ ರಸವನ್ನು ವರ್ಣಿಸದೆ ಇರುವುದರಿಂದ ಎಲ್ಲಾ ಸ್ತ್ರೀಜನರಿಗೆ ಓದುವುದಕ್ಕೆ ಅರ್ಹವಾಗಿದೆ. ಇದರಲ್ಲಿ ೯ ಪ್ರಕರಣಗಳೂ ೨೫೬ ಪುಟಗಳೂ ಇವೆ. ಉತ್ಕೃಷ್ಟವಾದ ಕಾಗದ, ಸುಂದರವಾದ ಅಕ್ಷರ, ತಪ್ಪಿಲ್ಲದೆ ಸುಂದರವಾಗಿ ಮುದ್ರಿಸಿದೆ. ಬೇಕಾದವರೆಲ್ಲರೂ ಕೆಳಗಣ ವಿಳಾಸಕ್ಕೆ ಬರದು ತರಿಸಿಕೊಳ್ಳಬಹುದು. ಕ್ರಯ ರೂ. ೧—೦—೦ ಮಾತ್ರ.

ವಿಳಾಸ:— ಟಿ. ಎ. ಮಾಣಿಕ್ಯಂ ಶೆಟ್ಟಿ,
ಮಾಣಿಕ್ಯಮಂದಿರ ಬುಕ್ ಡಿಪೋ,
ಬಳ್ಳಾರಿ.

ಪ್ರೊಫೆಸರ್ ಜೇಮ್ಸ್‌ರವರ ಎಲೆಕ್ಟ್ರೊ ಟಾನಿಕ್ ಪೆಲ್ಸ್ ಎಂಬುವ

ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳು.

ಇದು ಮುಖ್ಯವಾಗಿ, ಹೆಚ್ಚಾಗಿ ವ್ಯಾಯಾಮವನ್ನು ತೆಗೆದುಕೊಳ್ಳಲಾರದ ಮನುಷ್ಯರಿಗೂ ಮೆದುಳಿನಲ್ಲಿಯೇ ಕೆಲಸ ಮಾಡುವಂತಹ ವಿದ್ವಾಂಸರಿಗೂ, ಬೋಧಕರಿಗೂ, ಗುಮಾಸ್ತೆಯರಿಗೂ, ವಿದ್ಯಾರ್ಥಿಗಳಿಗೂ ಮತ್ತು ವ್ಯಾಪಾರಿಗಳಿಗೂ ಅತ್ಯುತ್ತಮವಾದ ಮುತ್ತಿನೋಪಾದಿಯ ಔಷಧ.

ಈ ಮಾತ್ರೆಗಳು ಕೆಳಗಿನ ವ್ಯಾಧಿಗಳನ್ನು ನಿರ್ಮೂಲ ಮಾಡುತ್ತದೆಂಬುದು ಎಲ್ಲರ ಅನುಭವಸಿದ್ಧಾಂತವು. ಕ್ಷಯರೋಗ, ಎಳಪು (ಹಿಸ್ಟೀರಿಯಾ) ವೀರ್ಯದೌರ್ಬಲ್ಯವು, ಮಂದಾಗ್ನಿ, ಕೆಟ್ಟರಕ್ತ, ತಲೆತಿರುಗುವಿಕೆ, ಶಕ್ತಿಹೀನತೆ, ಧಾತುಕ್ಷೀಣತೆ, ಧಾತು ಸಂಬಂಧವಾದ ವಿಕಾರತೆ, ಸ್ತ್ರೀಗರ್ಭವಿಕಾರಗಳು, ಅಕಾಲದ ಮುಟ್ಟಿನ ನೋವು, ಬಿಳುಪು, ವಂದನಾದಿ ದೃಷ್ಟಿ, ಕೀಲುಗಳ ನೋವು ಈ ಮೇಲೆ ಹೇಳಿರುವ ಎಲ್ಲಾ ವ್ಯಾಧಿಗಳಲ್ಲಿ ನಿಮಗೆ ಯಾವುದಾದರೂ ಉಂಟಾದರೆ, ಆ ವ್ಯಾಧಿಯು ಆರಂಭಿಸುತ್ತಲೇ, ಬೇರೆ ಚಿಕಿತ್ಸೆಗಳನ್ನು ಮಾತ್ರ, ಉಪಯೋಗವಿಲ್ಲದ ಕಷ್ಟಗಳನ್ನು ತಂದುಕೊಳ್ಳದೆ, ತಕ್ಷಣವೇ ಪೈ ಮೇಲೆ ಹೇಳಿರುವ ಪ್ರೊಫೆಸರ್ ಜೇಮ್ಸ್‌ರವರ ವಿದ್ಯುತ್‌ಶಕ್ತಿಯ ವಾಜೀಕರಣ ಮಾತ್ರೆಗಳನ್ನು ತರಿಸಿ ಉಪಯೋಗಿಸಿಕೊಳ್ಳಿರಿ ಈ ಮಾತ್ರೆಗಳನ್ನು ಉಪಯೋಗಿಸುವುದರಿಂದ ಮೇಲೆ ಹೇಳಿರುವ ವ್ಯಾಧಿಗಳೆಲ್ಲವೂ ನಿರ್ಮೂಲವಾಗಿ ಮನಸಿಗೆ ಆನಂದವಾಗುವುದು ಅಲ್ಲದೆ, ನಿಮ್ಮ ಶರೀರಗಳನ್ನು ದೃಢವಾಗಿಯೂ, ಆನಂದವಾಗಿಯೂ, ಕಷ್ಟಪಟ್ಟು ಕೆಲಸಗಳನ್ನು ಮಾಡಲು ಸಮರ್ಥವಾಗಿಯೂ ಈ ಮಾತ್ರೆಗಳು ನಿಮಗೆ ಮನೋಲ್ಲಾಸವನ್ನೂ ಕೊಡುತ್ತವೆ ನೀವು ಈ ಮಾತ್ರೆಗಳನ್ನು ಇನ್ನೂ ತರಿಸಿ ಉಪಯೋಗಿಸದಿದ್ದರೆ, ಈಗಲಾದರೂ ಒಮ್ಮೆ ಬಾಡ್ಡಿ ತರಿಸಿಕೊಂಡು ಉಪಯೋಗಿಸಿ ನೋಡಬಹುದು ನಿಮಗೆಷ್ಟೋ ಸಂತೋಷವುಂಟಾಗುವುದು

20 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ 1—4—0. 40 ಮಾತ್ರೆಗಳುಳ್ಳ ಸೀಸೆ 1ಕ್ಕೆ ರೂ. 2—0—0 ಟಪ್ಪಾಲು ಖರ್ಚು ಅಲಾಯಿದ.

ಆಂದವಾಗಿ ದಳದಳಿಸುವ ಕೂದಲನ್ನು ಕೊಡುವ

ಕಾಮಿನಿಯಾ ಆಯಿಲ್ (ರಿಜಿಸ್ಟರ್ಡ್)

ಈ ಎಣ್ಣೆಯು ಸುಪ್ರಸಿದ್ಧವಾದ ವನಸ್ಪತಿಗಳು ಮತ್ತು ಸುಗಂಧ ದ್ರವ್ಯಗಳ ವಿಶ್ರಣದಿಂದ ತಯಾರು ಮಾಡಲ್ಪಟ್ಟಿರುವುದು ಈ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸುವುದರಿಂದ ಇದು ಮೆದುಳನ್ನು ತಣ್ಣಗೆ ಗೈಮ ಜ್ಞಾಪಕಶಕ್ತಿಯನ್ನು ಅಭಿವೃದ್ಧಿ ಮಾಡುತ್ತದೆ ಇದರ ಘನತೆಯಿಂದ ಅನೇಕ ದೊಡ್ಡ ಮನುಷ್ಯರೂ, ಹೆಂಗಸರೂ, ಯೌವನಸ್ಥರೂ ಯಾವಾಗಲೂ ಉಪಯೋಗಿಸುತ್ತಿರುತ್ತಾರೆ. ಕಾಮಿನಿಯಾ ಎಣ್ಣೆಯನ್ನು ಉಪಯೋಗಿಸುವುದರಿಂದ ತಲೆಕೂದಲು ನಿಜವಾಗಿಯೂ ಒಲವಳ್ಳ ದ್ದಾಗಿಯೂ, ಸೊಂಪಲು ಲೆಂಪೈಯಂತೆ ಹೊಳಪುಳ್ಳ ದ್ದಾಗಿಯೂ ಆಗುವುದರಿಂದ ಈಗ ಅಂಗಡಿಗಳಲ್ಲಿ ದೊರಕುವ ಅನೇಕ ಕೀಳು ತರದ ಎಣ್ಣೆಗಳನ್ನು ಕನ್ನಡಿ ಬೆಲೆ ತೆರಬೇಕೂಡು ಅನ್ಯಾಯವಾಗಿ ತಲೆಯ ಕೂಲನ್ನು ಹಾಳು ಮಾಡಿಕೊಳ್ಳಬೇಡಿರಿ

ಕ್ರಯ ಸೀಸೆ 1ಕ್ಕೆ ರೂ 1—0—0

" " ಒಕ್ಕೆ 2—10—0

ಪೋಸ್ಟೇಜ್ ಖರ್ಚು ಅಲಾಯಿ

N B — ಕಾಮಿನಿಯಾ ಎಣ್ಣೆಯನ್ನು ಕಾಪಿ ಕೊಳ್ಳುವಾಗ ಕಾಮಿನಿಯಾ ರಿಜಿಸ್ಟರ್ಡ್ ನವದನ್ನೇ ತೆಗೆದುಕೊಳ್ಳಿ

ಯಾವಾಗಲೂ ಕುಟುಂಬದಲ್ಲಿ ಅವಶ್ಯವಾಗಿರತಕ್ಕ ಔಷಧವು

ಆಡಮನ್ಸ್ ಸ್ಪೈಸನ್ ಸಾಲ್ವ್.

ವಾಯುವಿನಿಂದ ಶರೀರದ ಯಾವ ಭಾಗಕ್ಕೆ ಉಂಟಾಗುವ ನೋವು ನಾವು ಕ್ವಾಸೆ ಬಿಡುವಾಗಲೂ ವತ್ತು ತೆಗೆದು ಕೊಳ್ಳುವಾಗಲೂ ಉಂಟಾಗುವ ಎದೆನೋವು, ವಾಯುವಿನಿಂದ ಕೀಲುಗಳಲ್ಲಿ ಉಂಟಾಗುವ ನಡುವಿನ ನೋವು, ತಲೆಶೂಲೆ ವತ್ತು ಕೈ ಕಾಲು ನೋವು, ಇವುಗಳೆಲ್ಲವೂ ಈ ಮುಲಾವನ್ನು ಪಹ್ಚುವುದರಿಂದ ಶಮನವಾಗಿ ನಿವೃತ್ತಿಯಾಗುತ್ತದೆ ಒಂದು ಸಲ ಉಪಯೋಗಿಸಿ ನೋಡಿರಿ ಇತರ ಮುಲಾಮುಗಳನ್ನು ಉಪಯೋಗಿಸದೆ ಇದನ್ನೆ ಉಪಯೋಗಿಸುವುದರಿಂದ ನಿಮಗೆ ಹೆಚ್ಚಾದ ಲಾಭ ಉಂಟು. ಕ್ರಯ ಬಾಟ್ಲಿ ಒಂದರ ರೂ 1—0—0 ಟಪ್ಪಾಲು ಖರ್ಚು 4 ಆಣೆ.

ವಸಂತ, ಗ್ರೀಷ್ಮ, ವರ್ಷ, ಶರತ್ ಈ ನಾಲ್ಕು ಋತುಗಳಲ್ಲಿ ಯಾವಾಗಲೂ ನಿಮ್ಮ ಅಂತಃಕರಣಕ್ಕೆ ಆನಂದವನ್ನು ಕೊಟ್ಟು ಸುಪ್ರಸಿದ್ಧವಾದ ಸುವಾಸನೆಯಿಂದೊಡಗೂಡಿದ ಅನೇಕ ಪುಷ್ಪಗಳಿರುವ ತೋಟದಿಂದ ಈಗಲೇ ಹೊಸದಾಗಿ ತಂದ ಪುಷ್ಪಗಳ ಆನಂದವನ್ನು ಕೊಡುವ

ಆಟೋ ದಿಲ್ಬಹಾರ್.

ಇದು ಲೋಕದಲ್ಲಿ ಅದ್ವಿತೀಯವಾದ ಸುಗಂಧಗಳಲ್ಲಿ ಮೇಲಾದ ಸ್ಥಾನವನ್ನು ಹೊಂದಿರುತ್ತದೆ ಎಂದು ಎಲ್ಲರೂ ಉಪಯೋಗಿಸಿ ನೋಡಿ ಕಾಪ್ಲೆಫನೆ ಮಾಡಿರುತ್ತಾರೆ. ಇದನ್ನು ಉಡುಪುಗಳ ಮೇಲೆ ಚಿಮುಕಿಸಿಕೊಂಡರೆ ಯಾವ ವಿಧವಾದ ಚುಕ್ಕೆಯೂ ಕಾಣದೆ, ಸದಾ ಇರತಕ್ಕ ಪರಿಮಳ ಸುಗಂಧವನ್ನು ಕೊಡುತ್ತದೆ ಒಂದು ಸಾರಿ ಉಪಯೋಗಿಸುವುದರಿಂದ ಇದರಲ್ಲಿ ನಂಬಿಕೆ ಹುಟ್ಟುತ್ತದೆ ಇದನ್ನು ಕೊಂಡುಕೊಳ್ಳುವಾಗ ರಿಜಿಸ್ಟರಾಗಿರುವ "ಆಟೋ ದಿಲ್ಬಹಾರ್" ಡಬ್ಬಿಯನ್ನು ಪೇಕಿಂಗ್ ಒಡೆಯದಿರುವುದನ್ನೇ ನೋಡಿ ತೆಗೆದುಕೊಳ್ಳಿರಿ

ಕ್ರಯ ಸಣ್ಣ ಸೀಸೆ 1ಕ್ಕೆ 0—8—0.

" ಮಿಡಿಯಂ " " 0—12—0.

" ½ ಔನ್ಸಿನ " " 2—0—0.

ಆಟೋ ದಿಲ್ಬಹಾರ್ ಕಾರ್ಡು 1ರ ಬೆಲೆ 0—1—0.

ಪೋಸ್ಟೇಜು ಅಲಾಯಿದ

ಆಡಮನ್ಸ್ ಮಲೇರಿಯಸ್ ಪಿಲ್ಸ್.

ಶೀತಜ್ವರ, ಚಳಿಜ್ವರ, ವಿಷಮಜ್ವರ ವತ್ತು ಸಾಧಾರಣ ಜ್ವರ ಇವುಗಳಿಗೆ ಆಡಮನ್ಸ್ ಮಲೇರಿಯಸ್ ಮಾತ್ರೆಗಳು ಬಹು ಆಶ್ಚರ್ಯಕರವಾದ ಗುಣಗಳನ್ನು ಕೊಡುತ್ತವೆ. 30 ಮಾತ್ರೆಗಳ ಡಬ್ಬಿ 1ರ ಬೆಲೆ ರೂ. 1—0—0 ಟಪ್ಪಾಲು ಖರ್ಚು ಅಲಾಯಿದ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಮುಖ್ಯ ಪ್ರಧಾನ ಏಜಂಟರು: ದಿ ಆಂಗ್ಲೊ ಇಂಡಿಯನ್ ಮಾರ್ಟ್, ಮಂಗಳೂರು ದ. ಕನರಾ

Printed & Published by V. S. Kamath at the Mangalore Trading Association's Shared Press, Mangalore

Registered No. M. 604

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ — ವರ್ಷಕ್ಕೆ ರೂ 1—4—0. ಟಪ್ಪಾಲು ಹಾಸಲು ಬೇರೆ ರೂ. 0—1—0.

ಪುಸ್ತಕ IX | ಮಂಗಳೂರು ತಾ 19ನೇ ನವಂಬರ ಶುಕ್ರವಾರ 1915 | ಸಂಚಿಕೆ 47

ಆತ್ಯಾವಶ್ಯಕವಾಗಿ ಜೇಬಿನಲ್ಲಿಡತಕ್ಕ ಔಷಧವು.

ಸೆಂತಾನ.

(ರಿಜಿಸ್ಟರ್ಡ್)

ಇದನ್ನು ಸರ್ವದಾ ಉಪಯೋಗಿಸಿ ಪರೀಕ್ಷಿಸಿದುದಾದರೆ ಇದರ ಗುಣವು ತಾನಾಗಿ ವ್ಯಕ್ತವಾಗುವುದು ಈ ಸೆಂತಾನದ ಸೇವನೆಯಿಂದುಂಟಾಗತಕ್ಕ ಗುಣಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಕೊಟ್ಟಿದೆ.

1. ಇದ್ದೊಡನೆಯೆಂದು ವೃದ್ಧಿಪಡಿಸಿ ಪ್ರಾಣಿಗಳ ಕಲಯನ್ನೊಪ್ಪೆ ತೆಗೆದಿರುವುದು, ವಾಕರಿಕೆ ಮೊದಲಾದ ರೋಗಗಳನ್ನು ಶೀಘ್ರದಲ್ಲಿಪರಿಹರಿಸುವುದು.

2 ದುರ್ಬಲದಿಂದ ಕೂಡಿದ ಮನುಷ್ಯನಿಗೆ ಉಲ್ಲಾಸವನ್ನುಂಟುಮಾಡುವುದು. ಮತ್ತು ಮೆದುಳಿನ ಕೆಲಸವನ್ನು ಕೂತಕ್ಕವರಿಗೆ ಮಹಾಪ್ರಸಾದವಾಗಿರುವುದು.

3 ಊಟವಾದನಂತರ ಜಠರಾಗ್ನಿಕಾರ್ಯವನ್ನಪೇಕ್ಷಿಸಿದ ಮಾತ್ರಗಳನ್ನುಪಯೋಗಿಸಿದ ತರುವಾಯ ಹಿಂದಿನವು ಜೀರ್ಣವಾಗುವದಲ್ಲದೆ, ಕಾಲಪ್ರವೃತ್ತಿಯು ಕ್ರಮವಾಗಿ ಅಗತ್ತಿದ ಔಷಧಗಳಿಗೂ ಅನ್ವಯವುಂಟಾಗುವದಿಲ್ಲ

4 ಬಾಯಿಯ ದುರ್ವಾಸನೆಯನ್ನು ಹೋಗಲಾಡಿಸಿ ಯಾವಾಗಲೂ ಸುವಾಸನೆಯನ್ನು ಕೊಡುತ್ತಿರುವುದಲ್ಲದೆ, ಕೆಮ್ಮಲನ್ನು ಹೋಗಲಾಡಿಸಿ ಕಂಠಧ್ವನಿಯನ್ನು ಸ್ವಚ್ಛಗೊಳಿಸುವುದು.

5. ಹಾಡತಕ್ಕವರಿಗೂ, ವಿದ್ಯಾರ್ಥಿಗಳಿಗೂ, ಸ್ತ್ರೀಯರಿಗೂ ಎಲ್ಲ ಉದ್ಯೋಗದ ದೊಡ್ಡ ಮನುಷ್ಯರುಗಳಿಗೂ ಈ ಮಾತ್ರೆಗಳು ಅತ್ಯಾವಶ್ಯಕವಾಗಿರುವವು

6. ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಎಲ್ಲ ತರದ ರೋಗವನ್ನೂ ಒಹು ಜಮಕ್ಕೃತಿಯಿಂದ ನಿವಾರಣೆಯನ್ನು ಮಾಡುವುದು

7. ಪ್ರಯಾಣಿಕರಿಗೆ ಅವರ ದೇಹಾರೋಗ್ಯವನ್ನು ಕಾಪಾಡಿಕೊಂಡಿರಲು ಪರಮಮಿತ್ರನಾಗಿರುವುದು.

ಅದುಕಾರಣ ಇಂತಹ ಗುಣಕಾರಿಯಾದ ಔಷಧಿತಾನದ ಒಂದು ಪೊಟ್ಟಣವನ್ನು ಯಾವಾಗಲೂ ನಿಮ್ಮ ಸಂಗಡ ಇಟ್ಟಿರಲು ಮರೆಯಬೇಡಿ

45 ಮಾತ್ರೆಗಳ ಪೊಟ್ಟಣಕ್ಕೆ 0—2—0 200 ಮಾತ್ರೆಗಳ ಪೊಟ್ಟಣಕ್ಕೆ 0—7—0 80 ಮಾತ್ರೆಗಳ ಟಿನ್‌ಗೆ 0—4—0 550 ಮಾತ್ರೆಗಳ ದೊಡ್ಡಪೆಟ್ಟಿಗೆಗೆ 1—0—0
95 " " " 0—4—0 200 " ಟಿನ್ " 0—9—0 100 " ಸೀಸೆ " 0—4—6 1200 " " " 2—0—0

1 ರೂಪಾಯಿಗೆ ಕಡಿಮೆಯಾಗಿ ವಿ. ಪಿ ಮೂಲಕ ಕಳುಹಿಸಲ್ಪಡುವುದಿಲ್ಲವು. ಮತ್ತು ಪೋಸ್ಟೇಜು ಮೊದಲಾದ ಖರ್ಚು ಪ್ರತ್ಯೇಕ ಬೀಳುವುದು.

☞ ಭರತಖಂಡ, ಬರ್ಮ, ಮತ್ತು ಸಿಲೋನ್ ಈ ಪ್ರಾಂತ್ಯಗಳ ಎಲ್ಲಾ ಭಾಗದಲ್ಲೂ ಏಜಂಟರು ಬೇಕಾಗಿದೆ

ದಕ್ಷಿಣ ಕನ್ನಡ ಜಿಲ್ಲೆಯ ಏಜಂಟರು— ದಿ. ಊಲನ್‌ಮಾರ್ಟ್, ಮಂಗಳೂರು

ಸೋಲ್ ಏಜಂಟ್ಸ್.—ಸೆಂತಾನ್ ಡಿಪೋ,
ಪ್ರಿನ್ಸೆಸ್ ಸ್ಟ್ರೀಟ್ ಬೊಂಬಾಯಿ ನಂ. 2.

TOM VICTOR & CO.S
BUSINESS
Shorthand and Typewriting Institution.

Instruction given in Commercial Subjects, French, Shorthand and Typewriting from 'Oct. 10th to Jan. 19th; Jan. 15th to April 15; 'June 15th to Sept. 15th'

N. B. JOB WORK and Typewriter Repairs undertaken at very cheap rates.

MILAGRES, Mangalore.

ವಿನಾಮೂಲ್ಯ' ವಿನಾಮೂಲ್ಯ" ವಿನಾಮೂಲ್ಯ!!!

ಆರ್ಷಚಿಕಿತ್ಸಾರಹಸ್ಯ

ದೇಶೀಯ ಚಿಕಿತ್ಸೆಯನ್ನು ನಮ್ಮ ಜನಸಮುದಾಯದಲ್ಲಿ ಹ್ಯಾಗೆ ರೂಢಿಗೆ ತರಬೇಕೆಂಬುವದು ಈ ಗ್ರಂಥದಿಂದ ಸಮ ವ್ಯಕ್ತವಾಗುವದು. ಕನ್ನಡ ನುಡಿಯ ಒಡನಾಟವಿರುವವರೆಲ್ಲರಿಗೂ ತಿಳಿಯುವಂತೆ ಈ ಗ್ರಂಥವು ಬರೆಯಲ್ಪಟ್ಟಿದೆ.

ಆರ್ಯಮಹಾಶಯರೇ, ಆರ್ಷಚಿಕಿತ್ಸೆಯಲ್ಲಿ ಪೂರ್ಣ ಗೌರವ ಮತ್ತು ಅಭಿಮಾನವನ್ನು ತೋರಿಸಿ ತಮ್ಮ ಆಯುಃಪ್ರಮಾಣದಲ್ಲಿ ಕಾಲುಘಂಟೆ ಸಮಯವನ್ನು ದೇಶಸೇವೆಗೋಸ್ಕರ ಕಳೆಯಿರಿ.

ಈ ಪುಸ್ತಕ ಬೇಕೆಂದಿರುವವರು ತಮ್ಮ ಪೂರ್ಣ ವಿಳಾಸವನ್ನು ಅರ್ಧಾಣೆ ಸ್ಟಾಂಪಿನೊಂದಿಗೆ ಈ ಕೆಳಗಣ ವಿಳಾಸಕ್ಕೆ ಕಳುಹಿಸಿಕೊಟ್ಟರೆ ಈ ಪುಸ್ತಕವು ದೊರೆಯುವದು.

ಎಂ. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು.

ರಮಾಮಾಧವ.

ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್
ಮ ರಾ. ವಿ. ರಾಮರಾವ್ ಎಂ.ಎ,ಎಲ್.ಎಲ್.ಬಿ.
ಇವರಿಂದ

ಈ ಕಾದಂಬರಿಯ ಕಥಾನಕವು ಬಹು ಹೃದಯಂಗಮವಾದದ್ದಾಗಿಯೂ, ಸ್ತ್ರೀವರುಷದ ಬಾಲ್ಯ ವಯಸ್ಸಿನವರೂ ಓದುವದಕ್ಕೆ ತಕ್ಕುದಾಗಿಯೂ ಇದ್ದು, ಸಂಸಾರಿಕರು ಸುಖಿಗಳಾಗಿ ಬಾಳುವ ಮಾರ್ಗವನ್ನು ಅತ್ಯುತ್ತಮವಾಗಿ ತಿಳಿಸುತ್ತಲಿದೆ.

ಬೆಲೆ ಪ್ರತಿಯೊಂದಕ್ಕೆ 6 ಆಣೆ. ಅಂಚೆಯ ಹಾಸಲು ಬೇರೆ.

ವಿಳಾಸ:— ಮ್ಯಾನೇಜರ್,
ಶಾರದಾ ಪ್ರೆಸ್, ಮಂಗಳೂರು, ದ. ಕ.

ಹುಳಬಿದ್ದ ಹುಣ್ಣುಗಳು.

ಪಡುಬಿದ್ರೆ ಕಾಡಿಪಟ್ಣ ಮೊಗೇರ ತೀವು ಹೆಂಗಸು ಬರಿಯುವದು:—ನನಗೆ ಸುಮಾರು ಆರು ವರ್ಷಗಳಿಂದ ಎರಡು ಕಾಲುಗಳಲ್ಲಿ ಬೊಕ್ಕೆಗಳು ಹುಟ್ಟಿ ಅದರಲ್ಲಿ ಕೀವು ಸುರಿಯುತ್ತ ಕೆಲವು ಸಣ್ಣ ಛಿದ್ರಗಳುಂಟಾಗಿ ಆ ಛಿದ್ರದಲ್ಲಿ ಹುಳಗಳು ತುಳುಕು ತಿತ್ತಲ್ಲದೆ ಸವರಿ ವ್ರಣಗಳು ಕರಗಿ ಅರ್ಧಾಣೆ ಗಾತ್ರವಾಗಿತ್ತು. ಇದರಿಂದ ನಡಿಯಲಾರದೆ ಕಾಲಿಗೆ ವಸ್ತ್ರ ಕಟ್ಟಿ ಮಲಗಿದ್ದಲ್ಲಿಯೇ ಇದ್ದೆನು. ದೈವವಶಾತ್ ತಮ್ಮ ಸಬ್ ಏಜಂಟರ ಭೇಟಿಯಾಗಿ ಪರೀಕ್ಷಾರ್ಥವಾಗಿ ಎರಡು ಸೀಸೆ ತಮ್ಮ ಯುಕಲಿಪ್ಟಸ್ ತೈಲವನ್ನು ಕೊಂತುಕೊಂಡು ಹೊಟ್ಟೆಗೂ ತಕ್ಕೊಂಡು ಹುಣ್ಣಿಗೂ ಹಚ್ಚಿದೆ. ಎರಡು ಸೀಸೆ ಮುಗಿಯುವಷ್ಟರಲ್ಲಿ ನನ್ನ ಹುಣ್ಣುಗಳು ಜಣಗಿ ನಡಿಯಲು ಅನುಕೂಲವಾಗಿಯದೆ ಎಂಬದನ್ನು ತಿಳಿಸಲು ಸಂತೋಷಪಡುತ್ತೇನೆ.

ಒಂದೇ ಸಲ ಕೊಡುವದರಲ್ಲಿ ಗುಣ!

ರಾ। ವೆಂಕಟಕೃಷ್ಣ ಆಚಾರಿ, ಶಂಕರನಾರಾಯಣ:—ನಿಮ್ಮಲ್ಲಿಂದ ತರಿಸಿದ ಯುಕಲಿಪ್ಟಸ್ ತೈಲವನ್ನು ಕೆಲವು ಕಾಲದಿಂದ ಕಡಿಣ ಹೊಟ್ಟೆನೋವಿನಿಂದ ನರಳುತ್ತಿದ್ದ ನನ್ನ ತಾಯಿಗೆ ಒಂದು ಸಲ ಕೊಡುವದರಲ್ಲಿ ಗುಣ ಉಂಟಾದಕಾರಣ ಮನಸ್ಸಿಗೆ ಭಾರಿ ಖುಸಿಯಾಗಿದೆ ಅರ್ಧ ಡಜನ್ ಸೀಸೆ ವಿ. ಪಿ ಮಾಡಿ ಕಳುಹಿಸಿರಿ.

ಇದು ಸಂಜೀವಿನಿಯೋ ಸರಿ!!

ಮ। ಶಾ। ತುಕ್ರಪ್ಪ, ಪಿ ಎಮ್ಮಾರ್ಯಳಕಾರ, ಮುಂಬೈ:—ಕೆಲವು ಸಮಯದಿಂದ ಕೆಮ್ಮು ಉಬ್ಬಸದಿಂದ ಪೀಡಾತ್ತಿದ್ದ ಹುಡುಗಿಯೊಬ್ಬಳಿಗೂ ಹಲವು ಕಾಲದಿಂದ ಹೊಟ್ಟೆನೋವಿನಿಂದ ನರಳುತ್ತಿದ್ದ ಮುದುಕಿಯೊಬ್ಬಳಿಗೂ ನಿಮ್ಮಲ್ಲಿ ದೊರೆಯತಕ್ಕ ಯುಕಲಿಪ್ಟಸ್ ತೈಲವನ್ನು ನನ್ನ ಸ್ನೇಹಿತರಾದ ವೈ ಕೊರಗಪ್ಪನವರಿಂದ ಪಡಕೊಂಡು ಕೊಟ್ಟಲ್ಲಿ ಇಬ್ಬರೂ ಗುಣಹೊಂದಿರುತ್ತಾರೆ ಕೆಮ್ಮು, ಉಬ್ಬಸ, ಹೊಟ್ಟೆನೋವು, ಸರ್ವ ತರದ ವಾಯುರೋಗಗಳಿಗೆ ಇದು ಸಂಜೀವಿನಿಯಂತೆ ಇದೆ. ಆದುದರಿಂದ 2 ಡಜನ್ ವಿ ಪಿ ಮಾಡಿ ಕಳುಹಿಸಿರಿ. ಔನ್ಸ್ ಸೀಸೆ 1ಕ್ಕೆ 0—5—0. ಡಜನ್ ಸೀಸೆಗಳಿಗೆ ವಿ. ಪಿ. ಸಹಿತ ರೂ. 3—12—). ಅನುಪಾನ ಪತ್ರಿಕೆ ಸೀಸೆಯೊಂದಿಗೆ.

☞ ನನ್ನಲ್ಲಿ ಹೊಮಿಯೋಪತಿ ಮತ್ತು ಟಿಸ್ಯೂ ತಿಪ್ ಔಷಧಗಳೆಂಬ ದಿವ್ಯೌಷಧಗಳು ದೊರೆಯುತ್ತವೆ.

ವಿಳಾಸ:— ಏಜಂಟರು:—

ಇಕ್ಲಿಪ್ಸ್ ಏಜನ್ಸಿ, ಸುಗಂಧವಿಲಾಸ,
ಮಂಗಳೂರು. ರಥಬೀದಿ, ಮಂಗಳೂರು.

• GRAND CLEARANCE SALE RS 1—15—0.

ಯೋಗ್ಯತಾ ಪತ್ರಿಕೆ —ನಾನು ಬಾತ್ಮಿಯಿಂದ ಎಲ್ಲರಿಗೂ ತಿಳಿಸುವದೇನೆಂದರೆ, ನಿಮ್ಮಿಂದ ನಾನು ತಂಕೊಂಡ ಲೇಡಿಸ್ ಗಡಿಯಾರ ಉಪಯೋಗಕ್ಕೆ ಬಹಳ ಶ್ರೇಷ್ಠವಾಗಿದೆ. ಗಂಟೆ ತೋರಿಸುವದರಲ್ಲಿ ಒಂದು ನಿಮಿಷವೂ ವ್ಯತ್ಯಾಸವೂ ಇಲ್ಲ ಇತರ ಕಂಪನಿಯವರು ಇಂಥಾ ಗಡಿಯಾರವನ್ನು ಕಳುಹಿಸುವದಿಲ್ಲ. ನಮ್ಮ 3 ಗಡಿಯಾರಗಳನ್ನು ವಿ. ಪಿ ಮೂಲಕ ಕಳುಹಿಸಿಕೊಡಿ.

ವ್ಯಾಟ್ಸನ್, ಇಂಪಾಯಿದೂತನ ಆಫೀಸು. ತಿರುಚಿನಾಪಳ್ಳಿ

ಸುಂದರವಾದ ಲೇಡಿಸ್ ಸ್ಪ್ರಿಂಗ್ ಪಾಕೆಟ್ ವಾಚ್.

ಅಸಲು ಕ್ರಯ ರೂ 3—14—0, ಈಗ ರೂ 1—15—0.

ಈ ನಕ್ಷೆಯಲ್ಲಿ ತೋರಿಸಿರುವ ಗಡಿಯಾರ ವಕಂಪನಿಸೆವನ್ ಚ್ಯಾಲೆಂಜ್ ಬಹು ಸೊಗಸಾದ ಗಡಿಯಾರ. ಇದು ನೋಡುವದಕ್ಕೆ ಮುತ್ತಿನಂತಾಗಿ ಇರುತ್ತೆ ಇತರ ಚಿಲ್ಲರೆ ಎರಡು ಮೂರು ರೂಪಾಯಿ ಕ್ರಯದ ಬೊಂಬಾಯಿ ಗಡಿಯಾರಗಳನ್ನು ಕೊಂಡು ಹಣ ಕಳಕೊಂಡು ನಂಬಿ ಮೋಸಹೋಗಬೇಡಿರಿ. ೨ ವರ್ಷಗಳ ಗ್ಯಾರಂಟಿ. ಇದೇ ಅಕ್ಕೋಬರ ತಿಂಗಳ ಒಳಗಾಗಿ ತರಿಸಿಕೊಳ್ಳುವರಿಗೆ ಮಾತ್ರ ರೂಪಾಯಿ 1—15—0 ಕೊಡಬೇಕೆಂದು ನಮ್ಮ ಏರ್ಪಾಡು ಆಗಿದೆ.

ನಮ್ಮ ವಿಳಾಸ:—

ರಾಸ್ ವಾಚ್ ಎಂಡ್ ಕಂಪನಿ,
3. ಇರುಳಪ್ಪನ ಬೀದಿ, ಮದರಾಸು.

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಲ್ಲಗಳಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟೀಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ.

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ಜಿ ಆಣೆ.

ಸುಭದ್ರೆ.

ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯು ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ ಅವುಗಳಲ್ಲಿ ಎಂದೆರಡನ್ನು ಇದರಡಿ ತಿಳಿಸಿರುತ್ತೇವೆ:—

ಮೈಸೂರು ದೇಶದ ವಿದ್ಯಾಬ್ಯಾಸದ ಇಲಾಖೆಯ ಇನ್ಸ್‌ಪೆಕ್ಟರ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ."

ಮ। ರಾ। ಬಿ. ರಾಮರಾವ್ ಎಂ ಎ., ಎಲ್. ಎಲ್. ಬಿ., ಗವರ್ನಮೆಂಟ ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ. • • • • ಇದರಂತೆಯೇ ನಮ್ಮ ಸಮಾಜದಲ್ಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ."

ವಿಳಾಸ — ಎಚ್. ಎನ್. ರಾವ್ ಆಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಷನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೀಕ ಮುಂತಾದ ವಸ್ತ್ರಗಳೂ, ಸಾಡಿಳೂ, ಮಿಶ್ಷನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಬ್ಲ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಕಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ವಗದಿ.

ವಿಳಾಸ:— ಜಿ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಧಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಪೂಲವ್ಯಾಧಿ, ಬೇಳು ಕಡಿತ, ಆನೆಗಾಲು, ಸುಟ್ಟ ಹಾಯ್, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 20,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟಿ ಒಂದರ ಕಿಮ್ಮತ್ತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಥಾನೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ವರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇಪ್ಪರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತವೆ. ಇದರಲಿ ಹಲವು ನಮೂನೆಯ ಔಷಧಗಳಿವೆ ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ ಪಿ ಪ್ರತ್ಯೇಕ

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕಗಳಿಂದಲೂ ಬದಾಮಿನ ಒಣ್ಣೆಯಿಂದಲೂ ತಯಾರಿಸಲ್ಪಟ್ಟಿದ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗಳ ಡಬ್ಬಿ ಒಂದರ ರೂ 1—0—0

ಕೆ ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫೊರ್ಮರ್.—ಅಮೃತಾಂಜನ ಎಲ್ಲಾ ಔಷದಗಳಿಗಿಂತಲೂ ಒಹಳ ಉತ್ತಮವಾದ ಔಷದ .

ಡಬ್ಲ್ಯೂ ಮೆಕ್ಕ್ವೆಲ್, ಮೈನಾಡ.—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲುತ್ತದೆ

ಆರ್ ಆರ್ ಗಂಗೋಲಿ:—ಅಮೃತಾಂಜನ ವಾತ, ತಲೆನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖುಮಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು ಮದ್ರಾಸು ಆಫೀಸಿನವರು ರಖುಮಾಗಿ ಅಮೃತಾಂಜನ ರವಾನಿಸಿ ಕೊಡುವ ವಿಚಾರಣೆ ಮಾಡಲಿಲ್ಲ

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಶಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಣ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ್,
ಮುಂಬಯಿ.

STABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital	Rs	300,000—0—0	ನಿಯಮಿತ ಮೂಲ ಧನವು ರೂಪಾಯಿ	... 300,000—0—0
Issued Capital		225,000—0—0	ಹುಟ್ಟಿಬಂದ ಮೂಲ ಧನವು ,,	... 225,000—0—0
Subscribed Capital		219,100—0—0	ಪ್ರತಿಜ್ಞಾತ ಮೂಲ ಧನವು ,,	... 219,100—0—0
Paid up Capital		194 100—0—0	ಆಗತ ಮೂಲ ಧನವು ,,	... 194,100—0—0
Deposits		86,774—8—4	ಠೇವಣಾತಿಯಾಗಿ ಕೊಡೋಣಾದ ಸೊಬಲಗುಗಳು	... 386,774—8—4
Reserve Fund		3 500—0—0	ರಕ್ಷಿತ ಧನವು	.. 33,500—0—0

Besides the uncalled capital of Rs 25,000/ 25% of the net profits are added annually to the Reserve Fund Rs 28,485/ have been invested in Government Paper of the face value of Rs 29,300/-

Dividends of not less than 6 /. paid during the past years and a bonus of 1 / to 2%. paid in addition during the last three years

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short notice Deposits requiring one weeks notice of withdrawal after one month received @ 2½%. per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%

Loans granted on proper securities and pledges

Sealed Parcels for safe custody received on a moderate charge

Canara Bank Ltd,
Mangalore 1st November 1915

ನಿಯಮಿತ ಮೂಲ ಧನವು ರೂಪಾಯಿ ... 300,000—0—0
ಹುಟ್ಟಿಬಂದ ಮೂಲ ಧನವು ,, ... 225,000—0—0
ಪ್ರತಿಜ್ಞಾತ ಮೂಲ ಧನವು ,, ... 219,100—0—0
ಆಗತ ಮೂಲ ಧನವು ,, ... 194,100—0—0
ಠೇವಣಾತಿಯಾಗಿ ಕೊಡೋಣಾದ ಸೊಬಲಗುಗಳು ... 386,774—8—4
ರಕ್ಷಿತ ಧನವು .. 33,500—0—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಸೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,100 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ 29,300ರಡ ಭದ್ರಕಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಜಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಒಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕವಿ ಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾಡ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ತಲ್ಪಿ ಠೇವಣಾತಿಗಳು ಠೇವಣಿದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿಇಡೋಣಾವೀತು ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ. ಎಲವಸ್ಸದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0 1 ಡ್ರಾಮ್ ಸೀಸೆಗೆ 0—12—0 ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಷ್ಟವಾಗಿ ಬಂದಿವೆ!

Proprietors:—The Oriental Drug & Chemical Co.
Sole Agents.—MOHINI AGENCY,
3 Fida Building, Jumma Musjid, BOMBAY.

ಪ್ರೊಪ್ರೈಟರರು:—ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೋ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದ್, ಬೊಂಬಾಯಿ

Agents:—Bhagavandas Choonilal & Co.,
177 China Bazar Road, MADRAS.

ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕಂ
177, ಚೀನಾ ಬಜಾರ್ ರಸ್ತೆ, ಮದ್ರಾಸು.

ಸ್ವದೇಶಾಭಿಮಾನಿ

ಮಂಗಳೂರು, ಶುಕ್ರವಾರ ತಾರೀಕು 19ನೇ ನವಂಬರ 1915

ವುತ್ತೂರು ವಿದ್ಯಾವರ್ಧಕ ಸಂಘ.

ಉಪ್ಪಿನಂಗಡಿ ತಾಲೂಕಿನ ಸಕೆಂಡರಿ ವಿದ್ಯಾಭ್ಯಾಸದ ಪ್ರಕೃತದ ದುರವಸ್ಥೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ಕೂಡಲೆಸಿದ ಮಹಾಸಭೆಯ ಕುರಿತು ಕಳೆದ ಸಂಚಿಕೆಯಲ್ಲಿ ನಾವು ಕೆಲವು ಮಾತುಗಳನ್ನು ಹೇಳಿದ್ದೆವಷ್ಟೇ ಆ ಸಭೆಯು ಕಳೆದ ಆದಿತ್ಯವಾರ ದಿನ ಸಾಂಗವಾಗಿ ನೆರೆದ ಸತ್ಕಾರ್ಯವು ನಿರ್ವಿಘ್ನವಾಗಿ ಪ್ರಾರಂಭಿಸಿದ ವಿಷಯವು ಇನ್ನೊಂದು ಪುಟದಲ್ಲಿ ಪ್ರಕಟಿತವಾದ ವೃತ್ತಾಂತದಿಂದ ವಿಶದವಾಗುವುದು. ಸಭೆ ಕೂಡಿಸುವುದಕ್ಕೆ ಕಳುಹಿಸಿದ ಆಮಂತ್ರಣಪತ್ರಕ್ಕೆ ಸಹಿ ಮಾಡಿದವರ ಪೈಕಿ ಒಬ್ಬಿಬ್ಬರು ಕೆಲವು ಅನಸುಕೂಲತೆಗಳಿಂದ ಬಾರದೆ ಇದ್ದರೂ, ಸಭೆಯು ಅತ್ಯಂತವಾಗಿ ಅತ್ಯಂತ ಉತ್ಸಾಹದಿಂದ ನಡೆಯಿತೆಂದು ಕೇಳಿ ಎಲ್ಲರೂ ಬಹಳ ಸಂತೋಷಪಡಲೇಬೇಕು ಆದರೂ ಉಪ್ಪಿನಂಗಡಿ ತಾಲೂಕಿನ ಕುರಿತು ಹೇಳ್ತಾಗಿ ಆಲೋಚಿಸಿದರೆ, ಇದೊಂದು ವಿಶೇಷವಾದ ಆಶ್ಚರ್ಯವಾರ್ತೆಯಲ್ಲ, ಏಕೆಂದರೆ, ಆ ತಾಲೂಕಿನವರು ಯಾವ ಕಾರ್ಯವನ್ನಾದರೂ ಕೈಕೊಳ್ಳುವುದಕ್ಕೆ ಅಂಜಿದವರಲ್ಲ ಸ್ವಲ್ಪ ಅಧೈರ್ಯಪಟ್ಟರೂ, ಕೈಕೊಂಡಮೇಲೆ ಅದನ್ನು ಜಯಶೀಲರಾಗಿಯೇ ಕೊನೆಮುಟ್ಟಿಸುವರೆಂಬುದು ನಮಗೆ ದೃಢವಾಗಿ ಗೊತ್ತಿದೆ ಇಂತಹ ಕಾರ್ಯಸಾಧನೆಯಿಂದ ನಮ್ಮ ಜಿಲ್ಲೆಯ ಇತರ ತಾಲೂಕಿನವರು ಕಲಿತುಕೊಳ್ಳಬೇಕಾದ ಅನೇಕ ಸಂಗತಿಗಳಿರುತ್ತವೆ ಅವುಗಳನ್ನೆಲ್ಲಾ ಸೂಚಿಸುವುದಕ್ಕೆ ಇದು ತಕ್ಕ ನಂದರ್ಭವಲ್ಲವಾದ್ದರಿಂದ, ಬೇರೆ ಎಲ್ಲವನ್ನೂ ಅವುಗಳನ್ನು ಚೆನ್ನಾಗಿ ಗ್ರಹಿಸಿಕೊಳ್ಳುವರೆಂದು ನಾವು ನಂಬುತ್ತೇವೆ

ಸಭೆಯ ಅಧ್ಯಕ್ಷಸ್ಥಾನವನ್ನು ಡಿವಿಜನಲ್ ಆಫೀಸರ್ ಮಹಾರಾಜಶ್ರೀ ಪಿ ಸೀತಾರಾಮಯ್ಯನವರಿಗೆ ವಹಿಸಿಕೊಟ್ಟದ್ದು ಮತ್ತು ಬೆಲ್ಲಾ ಕಲಕ್ಟರ್‌ರವರನ್ನೇ ಸಭೆಯನ್ನಲಂಕರಿಸುವುದಕ್ಕೆ ಕರೆತಂದುದು ಅತ್ಯುಕ್ತವಾಯಿತು ನಮ್ಮ ಜನಗಳಲ್ಲಾ ಯಾವ ಕಾರ್ಯವಿಶೇಷಗಳಲ್ಲಾದರೂ ಸರಕಾರ ನೌಕರರು ಉತ್ತೇಜನ ಕೊಡುತ್ತಾರೆಂದು ಸಮಾಧಾನವಾದರೆ ಆ ಕಾರ್ಯಗಳಿಗೆ ಸಹಾಯ ಮಾಡುವುದಕ್ಕೆ ಯಾವ ತರದ ಅಧೈರ್ಯ ಸಂದೇಹಗಳನ್ನೂ ಪಡದೆ ಎಲ್ಲರೂ ಮುಂದೆ ಬರುತ್ತಾರೆ ಮೇ. ಲೋಯ್ಡ್ ದೊರೆಗಳಾಗಲಿ ಸೀತಾರಾಮಯ್ಯನವರಾಗಲಿ ಉಚ್ಚರಿಸಿದ ಉತ್ತೇಜನದ ನುಡಿಗಳು ನೆರೆದವರ ಮನಸ್ಸಿಗೆ ಚೆನ್ನಾಗಿ ನಾಟಿದುವೆಂಬ ಔದಾರ್ಯಪೂರ್ವಕವಾದ ವಂಶಿಗಳಿಂದಲೇ ಸ್ಪಷ್ಟವಾಗುವುದು.

ಸಭೆಗೂಡಿಸಿದ ಅವಶ್ಯಕತೆಯು ಮೊದಲನೆ ನಿರ್ಣಯದಲ್ಲಿಯೇ ಸ್ಪಷ್ಟ ಸಿದ್ಧವಾಗುವಂತೆ ಅತಿಸೊಗಸಾಗಿ ವಿವರಿತವಾಗಿಯದೆ ಅದಕ್ಕೆ ತಕ್ಕ ಏರ್ಪಾಡು ಮಾಡುವರೆ ಒಂದು ಸಂಘವನ್ನು ಸ್ಥಾಪಿಸಬೇಕೆಂದು ಎರಡನೇ ನಿರ್ಣಯದಲ್ಲಿ ನಿರ್ಧರಿಸಿದುದು ಅತ್ಯುತ್ತಮವಾಗಿರುತ್ತದೆ "ಪೂನೆಯಲ್ಲಿನ ಡೆಕ್ಕನ್ ಎಜ್ಯುಕೇಶನ್ ಸೊಸೈಟಿ" ಎಂಬ ಸಂಘದ ಚಟುವಟಿಕೆಯು ಎಲ್ಲರಿಗೂ ಗೊತ್ತಿದೆ ಅದರ ರೀತಿಯಲ್ಲಿಯೇ ಇನ್ನೊಂದು ಸಂಸ್ಥೆಯನ್ನು ಏರ್ಪಡಿಸಿದರೆ ವಿದ್ಯಾಭಿವೃದ್ಧಿಗೆ ಸರ್ವಾನುಕೂಲ ಉಂಟಾಗುವುದೆಂಬುವುದರಲ್ಲಿ ಸಂದೇಹವಿಲ್ಲ.

ಸಭೆಯು ಮುಗಿಯುವುದರೊಳಗಾಗಿಯೇ ರೂ 10,000ಕ್ಕೆ ವೇಲ್ಪಟ್ಟು ವಂತಿಗೆ ಹಾಕಲ್ಪಟ್ಟಿತಂತೆ. ಇದು ಅತ್ಯಂತ ಶ್ಲಾಘ್ಯವಾಗಿರುತ್ತದೆ ರೂ 250ಕ್ಕೆ ಮಿಕ್ಕಿ ವಂತಿಗೆ ಹಾಕಿದವರ ಹೆಸರುಗಳನ್ನು ಪ್ರಕಟಿಸಿಯದೆ ಅದರಿಂದ ತಾಲೂಕಿನ ಪ್ರಭೃತಿಗಳೆಲ್ಲರೂ ವಿದ್ಯೆಯ ಅವಶ್ಯಕತೆಯನ್ನು ಚೆನ್ನಾಗಿ ಗ್ರಹಿಸಿದ್ದಾರೆಂಬುದು ನಿಶ್ಚಯವಾಗುತ್ತದೆ. ನಮ್ಮ ನಾಡಿಗರಿಗೆ ಇಂಗ್ಲೀಷು ಶಿಕ್ಷಣದ ಆಗತ್ಯವನ್ನು ಬೋಧಿಸುವುದು ಯಾವಾಗಲೂ ಕಷ್ಟಸಾಧ್ಯವಾದುದರಿಂದ, ಪುತ್ತೂರಲ್ಲಿ ನೆರೆದ ಮಹಾಸಭೆಯವರು ತೋರಿಸಿದ ಕುಡುಗ್ಗೈಯು ಆಶ್ಚರ್ಯಕರವೆಂದೇ ಭಾವಿಸಬೇಕಾಗುತ್ತದೆ ಇಂತಹ ಶುಭಶಕುನಗಳಿಂದ ಪ್ರಾರಂಭವಾದ ಈ ಮಹತ್ಕಾರ್ಯದಲ್ಲಿ ಯಾರೊಬ್ಬರೂ ಹಿಂಜರಿಯದೆ ಶಕ್ತಿವಿಭಾರಿಯೇ ತನುಮನಧನ ಸಹಾಯವನ್ನು ಮಾಡದೆ ಇರಲಿಕ್ಕಿಲ್ಲವೆಂದು ನಾವು ನಂಬುತ್ತೇವೆ

ಸಾರ್ವಜನಿಕ ಕರ್ತವ್ಯಗಳು.

ಲೇಖಾಂಕ ೪

ದಧೀಚಿಯ ವೃತ್ತಾಂತ ಮತ್ತು ಉಪಸಂಹಾರ.

ಸಾರ್ವಜನಿಕ ಹಿತದ, ಸಲುವಾಗಿ ತನ್ನ ಜೀವಿತವನ್ನು ಅರ್ಪಿಸುವ ಗುಣವು ಸ್ತ್ರೀಡಾವಸ್ಥೆಯನ್ನು ಹೊಂದಿದ ಸಮಾಜದಲ್ಲಿ ಕಂಡುಬರುತ್ತದೆ ದಿವ್ಯಯೋನಿಗಳಾದ ದೇವತೆಗಳೂ ಕೂಡ ಈ ಮನುಷ್ಯಲೋಕದ ಸ್ವಾಸ್ಥ್ಯಕ್ಕಾಗಿ ರಾಮಕೃಷ್ಣ ಮುಂತಾದ ಅವತಾರಗಳನ್ನು ಧರಿಸಿ ಲೋಕಕ್ಕೆಲ್ಲ ಕ್ಷೇಮ ಪೆನ್ಷಂಟು ಮಾಡುವಾಗ ತಾವಾದರೂ ಇದೇ ಮಾರ್ಗವನ್ನನುಸರಿಸಬೇಕು. ಕಾರಣವೇನೆಂದರೆ ದೇಶಹಿತವನ್ನು ಸಾಧಿಸುವುದಕ್ಕಿಂತ ಮನುಷ್ಯನಿಗೆ ಇನ್ನೊಂದು ಕರ್ತವ್ಯವು ಯಾವುದೂ ಇಲ್ಲವು, ಎಂಬೀ ಭಾವನೆಯು ಮಾನವ ಮಹಾತ್ಮರಲ್ಲಿ ಆಗಾಗ್ಗೆ ಉದಯಿಸಿದ್ದು ಕಂಡುಬರುತ್ತದೆ ಮತ್ತು ಈ ವಿಧವಾದ ಉದಾತ್ತ ಭಾವನೆಯು ಯಾವ ಮಾನವರಲ್ಲಿ ಉದಯಿಸುವುದೋ ಅವರು "ವಸುಧೈವಕುಟುಂಬಕಮ್" ಈ ನ್ಯಾಯದಂತೆ ದೂಮಿಯೇ ತನ್ನ ಕುಟುಂಬವೆಂದು ನೆನೆದು ಆ ಬೃಮಾತೆಯ ಸ್ವಾಸ್ಥ್ಯಕ್ಕಾಗಿ ಆತ್ಮಯಜ್ಞವನ್ನು ಮಾಡುವರು. ಈ ವಿಷಯದಲ್ಲಿ ಪುರಾಣದೊಳಗಣ ಉತ್ತಮವಾದ ಒಂದು ದೃಷ್ಟಾಂತವನ್ನು ಹೇಳಬೇಕಾದರೆ ದಧೀಚಿ ಮಹರ್ಷಿಯ ಚರಿತ್ರೆಯನ್ನು ನಿರೀಕ್ಷಿಸಬಹುದು ಹಿಂದಲು ಕೃತಯುಗದಲ್ಲಿ ಕಾಲೇಯರೆಂಬ ದೈತ್ಯರು ಪ್ರಸಿದ್ಧರಾಗಿದ್ದರು. ಇವರು ವೃತ್ರನೆಂಬ ಜಾರನ ಸಹಾಯದಿಂದ ಭೂಲೋಕವನ್ನೂ ಸ್ವರ್ಗಲೋಕವನ್ನೂ ಬಹಳ ವಿಧವಾಗಿ ಪೀಡಿಸಹತ್ತಿದರು. ಭೂಲೋಕದಲ್ಲಿ ಬ್ರಾಹ್ಮಣರು ನಡಿಸುವ ಯಜ್ಞಗಳಿಗೆ ವಿಘ್ನ ಮಾಡಿದರು, ಧರ್ಮಕ್ರಿಯೆಗಳನ್ನು ಪ್ರತಿಬಂಧಿಸಿದರು, ನಾಸ್ತಿಕ್ಯವನ್ನು ಹೆಚ್ಚಿಸಿದರು, ದುರಾಚಾರಗಳನ್ನು ನೆಲೆಗೊಳಿಸಿದರು, ಸಾಧುಗಳನ್ನು ಧ್ವಂಸಿಸಿದರು, ಸಜ್ಜನರನ್ನು ಜರ್ಜರಿಸಿದರು ಇವೇ ಮೊದಲಾದ ಅನೇಕ ವಿಧಗಳಿಂದ ಭೂಲೋಕವನ್ನು ಪೀಡಿಸಿ, ವೃತ್ರನ ನಾಯಕತ್ವದ ನೆರಳಿನಲ್ಲಿದ್ದ ಈ ಕಾಲೇಯರು ಸ್ವರ್ಗಲೋಕದಲ್ಲಿಯೂ ತಮ್ಮ ದುಷ್ಟ ಚೇಷ್ಟೆಗಳನ್ನು ನಡಿಸಲು ಹಿಂಜರಿಯಲಿಲ್ಲ ದೇವತೆಗಳು ಯಜ್ಞ ಜೀವಿಗಳಾದುದರಿಂದ ಭೂಲೋಕದಿಂದ ಬರುವ ಇವರ ಜೀವನವು ಇವರ ಕಾಟದಿಂದ ಮೊದಲೇ ನಿಂತುಹೋಗಿದೆ, ಮತ್ತು ಇಲ್ಲಿಯೂ ಸಾಕ್ಷಾತ್ ಸ್ವರ್ಗದಲ್ಲಿಯೇ ಇವರ ಅಸಹ್ಯ ವಾದ ಉಪದ್ರವಗಳು ಪ್ರಾರಂಭಿಸಲು ದೇವತೆಗಳಿಗೆ ಸಂವತ್ಸರಕ್ಕಲ್ಲ ಹಾಕಿದಂತೆಯೇ ಆಯಿತು! ಹೋರಾಟವಾರಂಭಿಸಿತು ಕಾಲೇಯರ ನಾಯಕನಾದ ವೃತ್ರನನ್ನು ಜಯಿಸುವುದು ಇಂದ್ರ ಮೊದಲಾದ ದೇವತೆಗಳಿಂದ ಸಾಧ್ಯವಾಗಲಿಲ್ಲ ಆಗಲವರು ಬ್ರಹ್ಮನನ್ನು ಶರಣು ಹೊಕ್ಕರು, ದೀನವಾಣಿಯಿಂದ ಸ್ತುತಿಸಿದರು ತಮ್ಮ ಕಷ್ಟಗಳನ್ನೂ ಆಪತ್ತುಗಳನ್ನೂ ಅರಿಕೆ ಮಾಡಿಕೊಂಡರು. 'ವೃತ್ರನ ವತ್ತು ಕಾಲೇಯರ ಎದುರಿನಲ್ಲಿ ನಿಂತುಕೊಳ್ಳುವುದು ನಮಗೆ ಅಸಾಧ್ಯವಾಗಿದೆ ನಮ್ಮ ಧೈರ್ಯ, ನಮ್ಮ ಸಾಹಸ, ನಮ್ಮ ಪರಾಕ್ರಮ ಇವು ನಿಷ್ಫಲವಾಗಿ ಹೋಗಿವೆ ನಾವು ಈ ಸಂಕಟದ ಪ್ರತಿಕಾರವನ್ನು ಪಿತಾಮಹನೇ! ಹೇಗೆ ಮಾಡತಕ್ಕದ್ದು? ನಮ್ಮ ಮರ್ಯಾದೆಯೂ, ನಮ್ಮ ಸ್ವತ್ತೂ ನಷ್ಟವಾಗದ ಹಾಗೆ ನಾವು ಯಾವುದನ್ನು ಮಾಡಬೇಕು? 'ಧರ್ಮಗ್ಲಾನಿಯು' 'ಅಧರ್ಮದ ಅಭ್ಯುತ್ಥಾನವು' ಇವು ಅವಳಿ ಜವಳಿ ಮಕ್ಕಳಂತೆ ವಿಕಕಾಲದಲ್ಲಿಯೇ ಜನಿಸಿ ಅಭಿವೃದ್ಧಿಯನ್ನು ಹೊಂದಿದ್ದಾವೆ ಈ ಎಲ್ಲ ಸಂಗತಿಯೂ ಪಿತಾಮಹನೇ! ನಿನಗೆ ಅಪರಿಚಿತವಾದುದ್ದಲ್ಲ, ಕಾರಣವೇನೆಂದರೆ ಸರ್ವಜ್ಞರಾದವರಿಗೆ ಪರೋಕ್ಷವಾದುದಾವುದು? ಆದುದರಿಂದ ನಾವು ವಿಶೇಷನಾಗಿ ಹೇಳಬೇಕಾದುದಿಲ್ಲ. ಈ ಸಂಕಟವನ್ನು ನಿವಾರಿಸಿ ನಮ್ಮನ್ನು ಕಾಪಾಡಬೇಕೆಂಬ ಕಾಂಕ್ಷೆಯಿಂದ ನಿನ್ನ ಬಳಿಗೆ ಬಂದಿರುವೆವು ಕನಿಕರವನ್ನು ಹುಟ್ಟಿಸುವ ದೇವತೆಗಳ ಈ ಮಾತುಗಳನ್ನು ಕೇಳಿ ಬ್ರಹ್ಮನು ಅವರನ್ನುದ್ದೇಶಿಸಿ "ನೀವು ದಧೀಚಿ ಋಷಿಯ ಬಳಿಗೆ ಹೋಗಿ ಅವನ ಅಸ್ಥಿಗಳನ್ನು ಬೇಡಿಕೊಳ್ಳಿರಿ ಆ ಅಸ್ಥಿಗಳಿಂದ ಆಯುಧವನ್ನು ಮಾಡಿ ಅದರಿಂದ ಇಂದ್ರನು ವೃತ್ರನನ್ನು ಸಂಹರಿಸಬಹುದು" ಎಂದು ಹೇಳಿದನು. ಬ್ರಹ್ಮನ ಈ ಹಿತೋಕ್ತಿಯನ್ನು ಸ್ವೀಕರಿಸಿ ದೇವತೆಗಳು ಋಷಿಯ ಆಶ್ರಮಕ್ಕೆ ಬಂದರು. ಆಶ್ರಮವನ್ನು ಹೊಕ್ಕು ದಧೀಚಿಯನ್ನು ಕುರಿತು ಪ್ರಾರ್ಥಿಸಿದ್ದೇನೆಂದರೆ "ಮಹಾತ್ಮನೇ, ನಾವು ಕಾರ್ಯಾರ್ಥಿಗಳಾಗಿ ಇಲ್ಲಿಗೆ ಬಂದಿರುವೆವು. ಇದೀ ತ್ರೈಲೋಕ್ಯವು ವೃತ್ರ ಮುಂತಾದವರಿಂದ ಪೀಡಿಸಲ್ಪಡುತ್ತಿದೆ" ಎಂದು ದೇವತೆಗಳು ಹೇಳುವಷ್ಟರೊಳಗಾಗಿಯೇ "ನಿನ್ನಿಂದ ಯಾವ ಸಹಾಯವು ಬೇಕಾಗಿದೆ?" ಎಂದು ದಧೀಚಿಯು ನುಡಿದನು." ಅದಕ್ಕವರು "ಮಹಾತ್ಮನೇ, ನೀನು ದಯೆಯಿಂದ ನಿನ್ನ ಎಲುಬುಗಳನ್ನು ಕೊಟ್ಟರೆ ಅವುಗಳ ಆಯುಧ ಮಾಡಿ ದುಷ್ಟರನ್ನು ಸಂಹರಿಸಬಹುದಾಗಿದೆ" ಎಂದು ಉತ್ತರ ಕೊಟ್ಟರು. ಆಗ

ನೀಚ ಮಹರ್ಷಿಯು ತುಂಬಾ ಸಂತೋಷಪಟ್ಟು ಹೇಳಿದನು—ಏನೆಂದರೆ. "ದೇವತೆಗಳೇ, ನಿಮ್ಮ ಈ ಯಾಜನೆಯಿಂದ ನಾನು ಧನ್ಯನಾಗಿದ್ದೇನೆ ನಮ್ಮ ಈ ವಿದ್ಯೆಯೂ, ಜ್ಞಾನವೂ, ತಪಸ್ಸೂ ತ್ರೈಲೋಕ್ಯದ ಹಿತಕ್ಕಾಗಿರುತ್ತವೆ ಅಂತಹ ತ್ರೈಲೋಕ್ಯದ ಹಿತವನ್ನು ಸಾಧಿಸುವ ಯೋಗವು ಆನಾಯಾಸದಿಂದ ಒಂದಿರುವಾಗ ಅದನ್ನು ಅಲ್ಲಗಳೆಯುವವರು ಎಷ್ಟು ದೈವಹೀನರಾಗಿರಬೇಕು? ಗಂಗೆ ಇದ್ದಲ್ಲಿ ಹೋಗಿ ಸ್ನಾನಮಾಡುವದು ಕರ್ತವ್ಯವು, ಆದರೆ ಆ ಗಂಗೆಯೇ ತಾನಾಗಿ ಮನೆಯ ಅಂಗಣದಲ್ಲಿ ಒಂದಿರುವಾಗ ಅದರಲ್ಲಿ ಅವಗಾಹನೆದೆ ಇರುವವನು ಎಷ್ಟು ಪಾಪಿಯಾಗಿರಬೇಕು? ಹಾಗೆಯೇ ಲೋಕಹಿತ ಕರ್ತವ್ಯವು ತಾನಾಗಿಯೇ ಒಂದು ಕರೆಯುವಾಗ ಆ ಆಹ್ವಾನವನ್ನು ಅಂಗೀಕರಿಸದವನು ಶುದ್ಧ ಮೂಢನಲ್ಲವೇ? ಆದುದರಿಂದ ದೇವತೆಗಳೇ, ತ್ರೈಲೋಕ್ಯದ ತೃಪ್ತಿಗಾಗಿ ನಾನು ನನ್ನ ಎಲುಬುಗಳನ್ನು ಆನಂದದಿಂದ ಕೊಟ್ಟು ಕೃತಾರ್ಥತೆಯನ್ನು ಪಡೆಯುವೆನು". ಹೀಗೆಂದು ಹೇಳುವಾಗಲೇ ಮಹರ್ಷಿಯು ಯೋಗಬಲದಿಂದ ಪ್ರಾಣಗಳನ್ನು ತ್ಯಜಿಸಿದನು! ತರುವಾಯ ವಿಶ್ವಕರ್ಮನಿಂದ ಅವನ ಎಲುಬುಗಳ ವಜ್ರವನ್ನು ತಯಾರಿಸಿ ಅದರಲ್ಲಿ ವಿಷ್ಣು ಮತ್ತು ಬೇರೆ ದೇವತೆಗಳೂ ಕೂಡ ತಮ್ಮ ತೇಜಸ್ಸನ್ನಿಡಲು ದೇವೇಂದ್ರನು ಆ ವಜ್ರದಿಂದ ವೃತ್ರನನ್ನು ಸಂಹರಿಸಿದನು ಆಸ್ತು, ನಮ್ಮ ಪ್ರಕೃತ ವಿಷಯಕ್ಕೆ ಮಂದಿನ ಕಥಾಸಂಗರ್ಭವು ಅಗತ್ಯವಿಲ್ಲ ದಧೀಚಿ ಮಹರ್ಷಿಯ ಈ ವೃತ್ತಾಂತವು ಕಾರ್ಯಾರ್ಥಿ ವಾಚಕರಿಗೆ ಅಥವಾ ಕಥಾಗೋಷ್ಠಿಪ್ರಿಯರಿಗೆ ಅಷ್ಟೊಂದು ಪ ನೋರಂಜಕವಾಗಲಾರದು ಕಾರಣವೇನೆಂದರೆ ಇದರಲ್ಲಿ ಸಂವಿಧಾನಕ ಚಾತುರ್ಯ ಮಂತಾದ್ದೇನೂ ಇಲ್ಲ ಕಥಾದೃಷ್ಟಿಯಿಂದ ಸಂತೋಷ ಪಡುವುದಕ್ಕಾಗಿ ಈ ವೃತ್ತಾಂತವನ್ನು ಕೊಟ್ಟದ್ದಲ್ಲ ಆದರೆ ಸ್ವದೇಶಕ್ಕಾಗಿ ಸಾರ್ವಜನಿಕ ಹಿತದಲ್ಲಿ ಆತ್ಮಯಜ್ಞ ಮಾಡುವ ಗುಣವು ನಮ್ಮಲ್ಲಿ ಪ್ರಾಚೀನ ಕಾಲದಿಂದ ಕಂಡುಬರುತ್ತದೆಂಬ ಸಂಗತಿಯನ್ನು ದೃಷ್ಟಾಂತಮೂಲಕದಿಂದ ದೃಢಪಡಿಸುವುದಕ್ಕಾಗಿಯೇ ಈ ಮಹಾತ್ಮನ ವೃತ್ತಾಂತವನ್ನು ಹೇಳಿದ್ದೇವೆ ಈ ವೃತ್ತಾಂತದಿಂದ ನಾವು ಯಾವ ಬೋಧೆಗಳನ್ನು ತಕ್ಕೊಳ್ಳಬಹುದೆಂಬುದನ್ನು ಕೆಳಗೆ ಸಂಕ್ಷೇಪವಾಗಿ ವಿವರಿಸಿ ಈ ಲೇಖಮಾಲೆಯನ್ನು ಅಂತ್ಯಪಡಿಸುತ್ತೇವೆ

ಮಹಾತ್ಮನಾದ ದಧೀಚಿಯ ವೃತ್ತಾಂತದಿಂದ ದೇಶಕ್ಕಾಗಿ ಪ್ರಾಚೀನಕಾಲದಲ್ಲಿ ಆರ್ಯವ ಋಷಿಗಳು ತಮ್ಮ ಪ್ರಾಣಗಳನ್ನು ಸಹಾ ಹೇಗೆ ಅರ್ಪಿಸುತ್ತಿದ್ದರು, ಅವರ ಹೇತುವು ಎಷ್ಟು ಶ ಪ್ಥವಾಗಿತ್ತು ದೃಷ್ಟಿಯು ಎಷ್ಟು ವ್ಯಾಪಕವಾಗಿತ್ತು ಮತ್ತು ಕೃತಿಯು ಎಷ್ಟು ಉದಾರವಾಗಿತ್ತು ಮುಂತಾದಂ ಅನೇಕ ಸಂಗತಿಗಳು ನಮ್ಮ ವಾಚಕರಿಗೆ ತಿಳಿಯದೆ ಇರವು ಸಮಾಜಸೇವೆ, ದೇಶಾಭಿಮಾನದಂತಹ ಸದ್ಗುಣಗಳು, ಮಾನವ ಜಾತಿಯಲ್ಲಿ ಸಮಷ್ಟಿಯು ಇವು ಪಾಶ್ಚಾತ್ಯದೇಶದಿಂದಲೂ, ಕ್ರಿಸ್ತಮತದ ಪ್ರಸಾರಣೆಯಿಂದಲೂ ಲೋಕಕ್ಕೆ ತಿಳಿದಿನೆಂದು ಕೆಲವರು ವಾದಿಸುವರು ಆದರೆ ಈ ವಿಧವಾಗಿ ವಾದಿಸುವಂತಹ ಪಾಶ್ಚಾತ್ಯ ಸಿದ್ಧಾಂತಕ್ಕೆ ಅಂಧ ಹಕ್ಕರಿಗೆ ಯಾವ ಹೆಸರನ್ನು ಕೊಡಬೇಕೆಂಬುವುದೇ ನಮಗೆ ಗೊತ್ತಾಗದು ಯಾವುದೇ ಒಳ್ಳೆ ಸಂಗತಿಯಾಗಲಿ ಇದು ನಮ್ಮಲ್ಲಿ ಇದ್ದಿಲ್ಲ, ಪೇಶ ಜನಾಂಗದಿಂದ ಬಂದಿವೆ, ಹೀಗೆ ನೆನೆಸುವ ನಮ್ಮ ಅಧುನಿಕ ವಿದ್ವಾಂಸರು ತಮ್ಮ ಪ್ರಾಚೀನ ಪೂರ್ವಜರ ಚರಿತ್ರೆಗಳನ್ನು ಮನಸ್ಸಿನ ಮೀಲ ದೋಷದ ಯಾವ ಪದವಿಯನ್ನೂ ತಂದುಕೊಳ್ಳದೆ ಪರಿಶೀಲಿಸಬೇಕು ಲೋಕಹಿತಕ್ಕಾಗಿ ಪ್ರಾಣಗಳನ್ನು ತ್ಯಜಿಸಿದ ಈ ಒಡಪುಸಿಯ ಸಂಗತಿಯಂತು ಇರಲಿ ಒಬ್ಬಿಬ್ಬರ ಸಮಾಧಾನಕ್ಕಾಗಿ ತನ್ನ ದರ್ಮಪತ್ನಿಯನ್ನು ತ್ಯಜಿಸಿದ ಅರಸನಾದ ರಾಮನ ಚರಿತ್ರೆಯು ನಮಗೇನು ಹೇಳುವುದು! ಈ ರೀತಿಯಿಂದ ಲೋಕಾರಾಧನೆ ಮಾಡುವ ಉದಾರ ಮಹಾತ್ಮರು ಈಗ ನಾವು ಎಷ್ಟು ಆಶೆಯಿಂದ ನೋಡಿದರೂ ನಮ್ಮ ಸತ್ತಲು ಕಾಣುವರೋ? ಈ ಸಂಗತಿಗಳೆಲ್ಲ ಪೌರಾಣಿಕ ಕಾಲದ ಕಲ್ಪನಾಲಹರಿಗಳು ಅವುಗಳಲ್ಲಿ ಸಂತ್ಯಾಂಶವೇನೂ ಇರದು ಹೀಗೆ ಬಂದು ವೇಳೆ ತಮ್ಮನ್ನು ಬಹುವಿಚಕ್ಷಣರೆಂದು ತಿಳಿದುಕೊಳ್ಳುವ ವಿಚಿಕಿತ್ಸಕರು ಹೇಳಬಹುದು ಆವರಿಗೆ ಇಲ್ಲಿ ಬಂದು ಪ್ರಶ್ನೆ ಮಾಡಬೇಕಾಗುತ್ತದೆ, ಈ ಸಂಗತಿಗಳು ಸತ್ಯವಾಗಲಿ, ಇಲ್ಲವೆ ಕೇವಲ ಕಾವ್ಯಮಯವಾಗಲಿ, ಇಂತಹ ಕಾವ್ಯಗಳನ್ನು ಬರೆಯುವಾಗಾದರೂ ಆ ಕಾಲದ ಸಮಾಜದ ಸಾರ್ವಜನಿಕ ಹಿತದ ಧ್ಯೇಯವು (Ideal) ಎಷ್ಟು ಉದಾತ್ತವಾಗಿತ್ತೆಂಬುವುದು ಸ್ಪಷ್ಟವಾಗುತ್ತದಲ್ಲವೇ? ಇದನ್ನು ಅಲ್ಲಗಳೆಯುವುದು ಕೇವಲ ದೋಷೈಕದೃಷ್ಟಿಗಳಿಗಲ್ಲದೆ ಅನ್ಯರಿಗೆ ಸಾಧ್ಯವಿಲ್ಲವು

ಇಂತಹ ಸಾರ್ವಜನಿಕ ಕರ್ತವ್ಯಗಳನ್ನು ಕ್ಷುಲ್ಲಕ ಮಟ್ಟಿಗೆ ಆಸ್ಥೆಯಿಂದಲೂ, ತತ್ಪರತೆಯಿಂದಲೂ, ಲೋಕಕಲ್ಯಾಣದ ಬುದ್ಧಿಯಿಂದಲೂ ಮಾಡುವ ಮಹನೀಯರು ಆ ಸಮಾಜಕ್ಕೂ, ದೇಶಕ್ಕೂ, ವಂದ್ಯರಾಗಿರುವರಲ್ಲದೆ ಅವರ ಯಶಃಸೂರ್ಯನು ಇತಿಹಾಸಕ್ಷಿತಿಜದ ಮೇಲೆ ದೇದೀಪ್ಯಮಾನನಾಗಿ ಯಾವಾಗಲೂ ಹೊಳೆಯುತ್ತಿರವನು. ಪರಾಪೇಕ್ಷೆಯಿಲ್ಲದೆ ಸಮಾಜೋದ್ಧಾರವನ್ನೂ, ದೇಶಹಿತವನ್ನೂ, ಲೋಕ ಕಲ್ಯಾಣವನ್ನೂ, ಮಾಡುತ್ತಿರುವ ಮಹಾತ್ಮರ ಯಾವ ಪ್ರತಿಫಲವನ್ನೂ ಬಯಸುವುದಿಲ್ಲ, ಯಶೋಧಿಲಾಷೆಯೂ ಕೂಡ ಅವರಲ್ಲಿರುವುದಿಲ್ಲ. ಲೋಕಹಿತ ಸಾಧಿಸುವುದಕ್ಕಾಗಿಯೇ ಮಾನವ ಶರೀರದಲ್ಲಿ ಚೈತನ್ಯವು ಪ್ರವೇಶಿಸಿದೆ. ಅಂತಹ ಕರ್ತವ್ಯವನ್ನು ಮಾಡದೆ ಇರುವವನು ಮಾನವ ಜನ್ಮವನ್ನು ಮಣ್ಣುಪಾಲಾಗಿ ಮಾಡುವನು. ಈ ತಿಳಿವು ಯಾರಲ್ಲಿ ಮೂಡುವುದೋ ಆ ಮಹಾತ್ಮರ ಪ್ರತಿ ಒಂದು ಕಾರ್ಯವು ದೇಶ ಹಿತಪರವಾಗಿಯೇ ಇರುವುದು ಈ ವಿಷಯದಲ್ಲಿ ಪೌರಾಣಿಕ ಮಾತ್ರವಲ್ಲ ಐತಿಹಾಸಿಕ ದೃಷ್ಟಾಂತಗಳು ಸಹಾ ಬೇಕಷ್ಟಿರುವವು ಆದರೆ ಅವುಗಳನ್ನೆಲ್ಲ ಕೊಟ್ಟು ನಮ್ಮ ಪತ್ರದ ಸ್ಥಲವನ್ನು ತುಂಬಿಸಲಿಚ್ಛಿಸುವುದಿಲ್ಲ

ಇಂತಹ ಸಾರ್ವಜನಿಕ ಕರ್ತವ್ಯರಲ್ಲಿ ಆತ್ಮಯಜ್ಞಮಾಡುವ ಪವಿತ್ರಗುಣವು ಒಹು ಪ್ರಾಚೀನಕಾಲದಿಂದ ನಮ್ಮಲ್ಲಿ ಕಂಡುಬರುತ್ತದೆಂಬದೆನ್ನು ನಾವು ತೋರಿಸಿದ್ದೇವೆ. ಈಗಲೂ ನಮ್ಮ ಹಿಂದೂಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಆರ್ಯಾ ದೇಶಭಕ್ತರು, ಸಮಾಜೋದ್ಧಾರಕರು ಮತ್ತು ಧರ್ಮಾಭಿಮಾನಿಗಳು ತಮ್ಮ ಉನ್ನತಿಗಾಗಿ ಹೇಗೆ ಹೇಗೆ ಪ್ರಯತ್ನಿಸುತ್ತಿದ್ದಾರೆಂಬದನ್ನು ಸ್ವಲ್ಪ ಕಣ್ಣುತೆರೆದು ನೋಡಿದರೆ ನಮಗೆ ಗೊತ್ತಾಗುವದು. ಆದರೆ ನಾವು ಕನ್ನಡಿಗರು ಮಾತ್ರ ಕೇವಲ ಸ್ವಾರ್ಥಪರರಾಗಿದ್ದು ಸಾರ್ವಜನಿಕ ಕರ್ತವ್ಯಗಳಲ್ಲಿ ಪ ನಸ್ಸನ್ನು ಇಷ್ಟರ ವರೆಗೆ ಹಾಕದೆ ಇರುವುದು ಬಹು ಶೋಚನೀಯವು. ಶರೀರದ ಕೆಲವು ಅವಯವಗಳು ಚಲಿಸ ತ್ತಿರುವಾಗ ಒಂದು ಭಾಗವು ನಿಶ್ಚಲವಾಗಿದ್ದು ದಾದರೆ ಅದಕ್ಕೆ ಪಕ್ಷವಾತದ ವಿಕಾರವುಂಟಾಗಿದೆಂತ ಹೇಳಬೇಕಾಗುತ್ತದೆ ಹಾಗೆಯೇ ಈ ದೇಶ ಕರ್ನಾಟಕ ಭಾಗವು ಪಕ್ಷವಾತದಿಂದ ವ್ಯಾಪ್ತ ಲವಾಗಿತ್ತೆಂದು ತಿಳಿಯಬೇಕಾಗುತ್ತದೆ ಈ ದೃಷ್ಟಾಂತವು ಕೆಲವರಿಗೆ ಅಪ್ರಿಯವಾಗಬಹುದು ಆದರೆ ನಿಜಸ್ಥಿತಿಯನ್ನು ತಿಳಿಯುವಾಗ ಸ್ವಲ್ಪವಷ್ಟಿಗೆ ಅಪ್ರಿಯವಾದರೂ ಅದನ್ನು ಹಿತಬೋಧನೆಯೆಂದು ಸ್ವೀಕರಿಸುವುದು ಉದಯೋನ್ಮುಖ ಮತ್ತು ಪ್ರಗತಿಪರವಾದ ರಾಷ್ಟ್ರದ ಕರ್ತವ್ಯವಾಗಿರುತ್ತದೆ ಆದುದರಿಂದ ನಮ್ಮ ಕನ್ನಡಿಗರು ತಮ್ಮ ವೈಯಲ್ಲಿದ್ದ ಆಲಸ್ಯವನ್ನೂ, ಮನಸ್ಸಿನಲ್ಲಿದ್ದ ಸ್ವಾರ್ಥಭಾವನೆಯನ್ನೂ, ಔದಾಸೀನ್ಯವನ್ನೂ ತೊರೆದು ಸಾರ್ವಜನಿಕ ಕರ್ತವ್ಯಗಳ ತಂತಮ್ಮ ಶಾಲೆ ಒಂದ ಕಾರ್ಯಧಾರಗಳನ್ನು ಮಾಡುವುದರಲ್ಲಿ ಮುಂದಾಳುಗಳಾಗಿ ಒಂದು 'ಹಿಂದೂಸ್ಥಾನದ ವಿಶಾಪ್' ಶರೀರದ ಕರ್ನಾಟಕ ಭಾಗವು ಪಕ್ಷವಾತದಿಂದ ದೂಷಿತವಾಗಿದೆಂಬ ವಿದದಿಂದ ಬರುವ ಕಲಂಕವನ್ನು ಉಜ್ಜಿಡ್ಡಲ್ಲಿ ಈ "ಸಾರ್ವಜನಿಕ ಕರ್ತವ್ಯಗಳ ಲೇಖಮಾಲೆಯಿಂದ ಸ್ವಲ್ಪ ಮಟ್ಟಿಗೆ ಪ್ರಯೋಜನವಾಯಿತೆಂದು ನಾವು ನೆನಸುವೆವು

ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾಸಂಘವು

(ಒಬ್ಬ ಉಪಾಧ್ಯಾಯರಿಂದ)

ಇಂತಹ ಸಂಘವನ್ನು ಮಾಡುವುದಕ್ಕೆ ಎರಡು ಕ್ರಮಗಳು ನನಗೆ ಗೋಚರವಾಗುತ್ತಿವೆ ಹಳ್ಳಿ ಸಾಲೆಗಳ ಉಪಾಧ್ಯಾಯರೇ ಒಂದಾಗಿ ಪ್ರತಿ ಸಾಲೆಯು ಮೆನೇ ಜರನು ವರ್ಷಕ್ಕೆ ನಿರ್ಣಯಿಸಿದ ಚಂದಾ ತೆತ್ತು ಒಂದು ಸಭೆಯನ್ನು ನಿರ್ಮಿಸುವುದು. ವಿಲಾಯತಿಯಲ್ಲಿ ಈ ಒಗೆಯ ಯೂನಿಯನ್‌ಗಳು ಆಗಿವೆಂತಲೂ, ಅವುಗಳ ಮಾತಿಗೆ ಸರಕಾರದವರು ತಕ್ಕಮಟ್ಟಿಗೆ ಭಾರವಿಡುತ್ತಾರೆಂತಲೂ ನಾನು ವರ್ತಮಾನ ಪತ್ರಿಕೆಗಳಲ್ಲಿ ಓದಿ ಕೇಳಿದ್ದೇನೆ ಆದರೆ ಅಂಧಾ ಸಂಘಗಳನ್ನು ನೆಡಿಸುವುದಕ್ಕೆ ಬೇಕಾದ ಸಾಮರ್ಥ್ಯವೂ, ವಿದ್ಯಾಬಲವೂ ಇದ್ದ ಉಪಾಧ್ಯಾಯರು ಈ ದೇಶದಲ್ಲಿ ವಿರಳ. ಮದ್ರಾಸಿನ 'ಟೀಚರ್ಸ್ ಗಿಲ್ಡ್' ಎಂಬದು ಹಲವು ವಿದ್ಯಾವಂತರಿಂದ ನಿರ್ಮಿಸಲ್ಪಟ್ಟಿದ್ದರೂ ಅದರ ಪ್ರಯತ್ನಗಳು ಹೆಚ್ಚಾಗಿ ಸಫಲವಾದಂತೆಯೂ ಅದಕ್ಕೆ ಸರಕಾರದ ಸಹಕಾರವಿದ್ದಂತೆಯೂ ನನಗೆ ತೋರಲಿಲ್ಲ ಆದ್ದರಿಂದ ಈ ಸಮಯದಲ್ಲಿ ಅಂಧಾ ಸಂಘಗಳು ಕೆಲಸಕ್ಕೆ ಬರಲಾರವು ಇದಲ್ಲದೆ ಮಂಗಳೂರಿನಲ್ಲಿ ಈ ಮುಂಚೆ ಇಂಧಾದ್ದೊಂದು ಸಂಘವು ಮೆ! ಮಾರ್ಸೆಲ್ ಸೋಜರ ಪ್ರಯತ್ನದಿಂದ ಆಗಿತ್ತು ಎಂಬುದಾಗಿಯೂ ಅದಕ್ಕೆ ಸೇರಿದ ಹಲವು ಉಪಾಧ್ಯಾಯರು ಕೈಸುಟ್ಟುಕೊಂಡು ಸುಮ್ಮನಾದರು ಎಂತಲೂ ಕೇಳಿದ್ದೇನೆ.

ಇದಕ್ಕೆ ಬದಲಾಗಿ ನಿಜವಾಗಿಯೂ ವಿದ್ಯಾಪ್ರಸರಣೆಗೋಸ್ಕರ ತಮ್ಮ ಜ್ಞಾನಶಾಲವನ್ನು ಕಳೆಯಲಿಕ್ಕೆ ಸಾಧ್ಯವಿರುವ ಧನಾಢ್ಯರೂ, ಬುದ್ಧಿವಂತರೂ ಆದ ೫ ಯಾ ೬ ಮಂದಿ ಮೆಂಬರರಾಗಿರುವ ಮತ್ತು ಇದಕ್ಕೆ ಸಹಾಯಕರಾಗಿಯೂ, ಪೋಷಕರಾಗಿಯೂ ಕೆಲವು 'ನಾಮದಾರ' ಗೃಹಸ್ಥರು ಇರುವ ಒಂದು ಸಂಘವು ಸ್ಥಾಪನೆಯಾಗಿ ಇಂಥ

ಸಂಘದ ಕೆಲವು ಮೇಲೆ ಹೇಳಿದ ಮೆಂಬರರು ವರ್ತಮಾನ ಪತ್ರಿಕೆಗಳ ಮೂಲಕವಾಗಿಯೂ, ಸ್ವಯಂ ಸಂಚಾರದ ಮೂಲಕವಾಗಿಯೂ ಹಳ್ಳಿಯ ಜನರಲ್ಲಿ ವಿದ್ಯೆಯ ವಿಷಯವಾಗಿ ಪ್ರೇಮವನ್ನು ಹುಟ್ಟಿಸಿ ಆಯಾಯ ಗ್ರಾಮದ ಸಾಲೆಯನ್ನು ಆಯಾಯ ಗ್ರಾಮದ ಪ್ರಮುಖ ಗೃಹಸ್ಥರು ಕೂಡಿದ ಪಂಚಾಯತ ಸಭೆಯ ಕಡೆಯಿಂದ ನಡಿಸುವಂತೆ ಪ್ರಯತ್ನಿಸಿ ಇಂಥಾ ಪಂಚಾಯತಗಳು ಈ ಜಿಲ್ಲಾ ಸಂಘಕ್ಕೆ ಅಲ್ಪ ಸ್ವಲ್ಪ ಚಂದಾ ಕೊಟ್ಟು ಸಂಘದ ಅಗತ್ಯವಿರುವ ಕೆಲಸಗಳ ಖರ್ಚು ನೋಡುವಂತೆ ಪ್ರಯತ್ನಿಸುವುದು ಒಳ್ಳೇದು. ಈಚೆಗೆ ಸರಕಾರದವರು ಮಾಡಿದ ಗ್ರಾಮ ಪಂಚಾಯತರ ಹೊಸ ಕಾನೂನು ಇದಕ್ಕೆ ಅನುಕೂಲವಾಗಿಯೇ ಇದೆ ೩೦೦೦ಕ್ಕೆ ಎಂಟ್ಕಿ ಜನಸಂಖ್ಯೆ ಇರುವಲ್ಲಿ ಕಾಯಿದೆಗೆ ಒಳಗಾದ ಯೂನಿಯನ್ ಪಂಚಾಯತಗಳನ್ನು ಮಾಡುವುದು ಸರಕಾರದವರಿಗೆ ಸಮ್ಮತಿಯಿದೆ. ಇದರಲ್ಲಿ ಸರಕಾರಿ ಮಂಜೂರಾತಿಯಿಂದಲೇ ಮನೆ ತೆರಿಗೆಯನ್ನು ವಸೂಲು ಮಾಡಿ ಹುಟ್ಟಿದ ಹಣದಿಂದ ಇಂಥ ಶಾಲೆಗಳ ಕೆಲಸ ಕೈಕೊಳ್ಳಲಿಕ್ಕೆ ಸಾಧ್ಯವಿದೆ. ಇತರ ಗ್ರಾಮಗಳಲ್ಲಿಯೂ ಇದೇ ಒಗೆಯ ಪಂಚಾಯತಗಳನ್ನು ಏರ್ಪಡಿಸಲಿಕ್ಕೆ ಸರಕಾರಿ ಸಮ್ಮತವಿದ್ದರೂ ಕಾಯಿದೆಗೆ ಒಳಗಾಗಿ ಅಲ್ಲಿ ಕಂದಾಯ ಹೊರಿಸಲಿಕ್ಕೆ ಸಾಧ್ಯವಿಲ್ಲ. ಆದರೆ ಜನಸಮ್ಮತಿಯಿಂದ ಜನರೇ ಅಂಥಾ ಕಂದಾಯವನ್ನು ತೆತ್ತು ತಮ್ಮ ಶಾಲೆಯ ಖರ್ಚಿಗೆ ಬೇಕಾದಷ್ಟೆ ಹಣವನ್ನು ಸಂಗ್ರಹಿಸಿ ಆ ಸಾಲೆಯನ್ನು ಬಲವಡಿಸಿಬಹುದು ಈ ರೀತಿಯ ಕಂದಾಯಕ್ಕೆ ಜನರು ಒಪ್ಪದಿದ್ದ ಗ್ರಾಮಗಳಲ್ಲಿ ಪರಸ್ಪರ ಸಹಾಯ ಸಂಘಗಳನ್ನು ಸ್ಥಾಪಿಸಿ ಅವುಗಳ ರಿಜರ್ವ್ ಫಂಡಿನಿಂದ ಕೆಲವಂಶವನ್ನು ಈ ಸಾಲೆಗಳ ಉಪಯೋಗಕ್ಕೆ ತೆಗೆಯಲೂ ಪ್ರಯತ್ನಿಸಬಹುದು

ಎರಡು ಉಪಾಧ್ಯಾಯರಿರುವ ಒಂದು ಹಳ್ಳಿ ಸಾಲೆಗೆ ಸಾಧಾರಣವಾಗಿ ೧೫೦ ರೂಪಾಯಿ ಗ್ರೆಂಟು ಸಿಕ್ಕುವುದಕ್ಕೆ ಪ್ರಯತ್ನಿಸಲು ಸಾಧ್ಯವಿದೆ ಅಷ್ಟೆ ರೂಪಾಯಿ ಯಾವುದೊಂದು ಫಂಡಿನವರು (ಅಂದರೆ ಯೂನಿಯನ್ ಆಗಲೀ ಪರಸ್ಪರ ಸಹಾಯ ಸಂಘವಾಗಲೀ) ಕೊಟ್ಟರೆ ಒಂದು ಹಳ್ಳಿ ಸಾಲೆಯನ್ನು ಬೋರ್ಡ ಸಾಲೆಯ ಸ್ಥಿತಿಗೆ ಒಳ್ಳೇದಾಗಿ ನಡೆಸಲು ಸಾಧ್ಯವಿದೆ. ಇದಲ್ಲದೆ ಗ್ರಾಮದ ಪಂಚಾಯತರೇ ಇಂಥ ಶಾಲೆಗೆ ಮೇಲ್ವಿಚಾರಕರಾಗುವುದರಿಂದ ಹಳ್ಳಿ ಮೂಲೆಗಳಲ್ಲಿರುವ ಬೋರ್ಡ ಸಾಲೆಗಳಿಗಿ ತಲೂ ಇಂಥ ಸಾಲೆಗಳು ಕ್ರಮವಾಗಿ ನಡೆಯಬಹುದು

ಈ ವಿಷಯವಾಗಿ ಬೋಧನೆಯನ್ನು ಹಳ್ಳಿಯಲ್ಲಿ ಕೊಡುವುದೇ ಈ ಜಿಲ್ಲಾ ಸಂಘದ ಪ್ರಥಮ ಕುದ್ದೀಶವಾಗಬೇಕು ಹೆಚ್ಚಿನ ದ್ರವ್ಯಸಹಾಯವನ್ನು ಸಂಗ್ರಹಿಸಿ ಹಳ್ಳಿ ಸಾಲೆಗಳ ಮೆನೇಜಮೆಂಟ ತೆಗದುಕೊಳ್ಳುವುದೆಂದರೆ ಬೇಕಾ ದ್ರವ್ಯಾನುಕೂಲವು ಹಳ್ಳಿಯಿಂದ ದೊರಕುವುದು ದುರ್ಲಭ ಮತ್ತು ಪೇಟೆಗಳಲ್ಲಿ ಚಂದಾ ಎತ್ತಿ ಅದರಿಂದ ಹಳ್ಳಿ ಸಾಲೆಗಳನ್ನು ಪೋಷಿಸುವುದಕ್ಕೆ ಪೇಟೆಯಲ್ಲಿದ್ದವರು ಸಹಜವಾಗಿಯೇ ಒಪ್ಪ ರಾರರು. ಏತಕ್ಕೆಂದರೆ ಅವರಿಗೆ ಕಾಯಿದೆಯಿಂದ ವಿರಹಿತವಾದ ಹಲವು ಒಗೆಯ ಕಂದಾಯದ ತಗಾದೆ ಇದ್ದೇ ಇದೆ. ಮತ್ತು ಹಾಗೆ ಒಂದು ಮೆನೇಜಮೆಂಟಿನೊಳಗೆ ಸಾಲೆಗಳನ್ನು ತರುವ ಪ್ರಯತ್ನವಿಟ್ಟರೆ ಅದರ ಮೇಲ್ವಿಚಾರದ ಕೆಲವು ಘೋರವಾಗಿ ಅನೇಕ ಅನರ್ಥಗಳು ತಲೆದೋರಬಹುದು ಆದ್ದರಿಂದ ಈ ಜಿಲ್ಲಾ ಸಭೆಯು ಒರೆ ಆಲೋಚನಾ ಸಭೆಯಾಗಿದ್ದು ಅದರ ಮೆಂಬರುಗಳು ಅಲ್ಲಲ್ಲಿ ಹಳ್ಳಿಗಳಲ್ಲಿ ಹಣವಂತರೂ, ಧಾರಾಳಿಗಳೂ ಆದವರನ್ನು ಮೆಲ್ಲಮೆಲ್ಲಗೆ ವಿದ್ಯಾಭಿವೃದ್ಧಿಯ ಕಡೆಗೆ ಎಚ್ಚರಗೊಳಿಸುವುದು ಅತಿ ಅಗತ್ಯವೆಂದು ನನ್ನ ಅಭಿಪ್ರಾಯ.

ಉಪ್ಪಿನಂಗಡಿ ತಾಲೂಕಿನ ವಿದ್ಯಾಭಿವೃದ್ಧಿ.
ಪುತ್ತೂರಲ್ಲಿ ನೆರೆದ ಮಹಾಸಭೆಯ ವೃತ್ತಾಂತ.

ಉಪ್ಪಿನಂಗಡಿ ತಾಲೂಕಿನಲ್ಲಿ ಒಂದು ಸೆಕೆಂಡರಿ ಶಾಲೆಯಾದರೂ ಇಲ್ಲದೆ, ಮಕ್ಕಳಿಗೆ ಇಂಗ್ಲೀಷು ವಿದ್ಯಾಭ್ಯಾಸ ಮಾಡಿಸಬೇಕೆಂದಿದ್ದವರು ಈಗ ಪಡುತ್ತಿರುವ ಕಷ್ಟಗಳನ್ನು ನಿವಾರಣೆಮಾಡುವುದಕ್ಕೋಸ್ಕರ ಏರ್ಪಡಿಸಿದ ಸಭೆಯು ಮೊನ್ನೆ ತಾರೀಖು 14ನೇ ಆದಿತ್ಯವಾರ ದಿವಸ ಸಾಯಂಕಾಲದಲ್ಲಿ ಪುತ್ತೂರು ಟೌನ್ ಹೋಲಿನಲ್ಲಿ ಕೂಡಿತು ತಾಲೂಕಿನ ಮುಖಂಡರೆಲ್ಲರೂ ಹಾಜರಿದ್ದರು. ಸಭಾಧ್ಯಕ್ಷಸ್ಥಾನವನ್ನು ಯಥೋಚಿತವಾಗಿ ದಿವ್ಯಭೂ ಕಲೆಕ್ಟರರಾದ ಮ. ರಾರಾ. ಪಿ ಸೀತಾರಾಮಯ್ಯನವರೇ ವಹಿಸಿದ್ದರು ಅದಲ್ಲದೆ ಪುತ್ತೂರಿಗೆ ಸರ್ಕೀಟಿಗೆ ಬಂದಿದ್ದ ಜಿಲ್ಲಾ ಕಲೆಕ್ಟರರಾದ ಮೈ ಲೋಯ್ಡ್ ದೊರೆಗಳು ಸಹಾ ಊರಿನವರು ಹೇಳಿಕೊಂಡ ಪ್ರಕಾರ ದಯಮಾಡಿಸಿದ್ದರು.

ಅಧ್ಯಕ್ಷರು ಸೆಕೆಂಡರಿ ವಿದ್ಯಾಭ್ಯಾಸದ ಅವಶ್ಯಕತೆಯನ್ನೂ, ಆ ಕುರಿತು ಸರಕಾರದವರಾಗಲಿ ಲೋಕಲ್ ಬೋರ್ಡಿನವರಾಗಲಿ ತತ್ಕಾಲಕ್ಕೆ ಹೆಚ್ಚಿನ ಸಹಾಯ ಮಾಡಲಾರದ ಸಂಗತಿಯನ್ನೂ, ಆ ಕಾರಣ ಜನರೇ ತಾವಾಗಿ ಪ್ರಯತ್ನಗಳನ್ನು ಹೆಚ್ಚಿಸುವುದರ ಅಗತ್ಯವನ್ನೂ ಸವಿಸ್ತಾರವಾಗಿ ವಿವರಿಸಿ ಭಾಷಣ ಮಾಡಿದರು. ಈ ಭಾಷಣವು ಮುಗಿಯುತ್ತಲೇ, ಈ ಕೆಳಗಣ ನಿರ್ಣಯಗಳು ಸಭೆಯ ಮುಂದಿಡೋಣಕ್ಕಾಗಿ ಮಂಜೂರಾದವು.

"ಉಪ್ಪಿನಂಗಡಿ ತಾಲೂಕಿನ ಈ ಮಹಾಸಭೆಯವರು ಈ ತಾಲೂಕಿನಲ್ಲಿ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಇದುವರೆಗೆ ಏನೂ ಅವಕಾಶವಿಲ್ಲದ ಶೋಚನೀಯವಾದ ಸ್ಥಿತಿಯ ಕುರಿತು ಒಹಳ ಯೋಚನೆಗೊಳ್ಳುತ್ತಾರೆ, ಮತ್ತು ಈ ದುರವಸ್ಥೆಯನ್ನು ಹೋಗಲಾಡಿಸುವುದಕ್ಕೋಸ್ಕರ ಸರಕಾರದವರಾಗಲಿ, ಲೋಕಲ್ ಬೋರ್ಡಿನವರಾಗಲಿ ಯಾ ಇತರ ಯಾವುದೊಂದೂ ಸಾರ್ವಜನಿಕ ಸಂಸ್ಥೆಯವರಾಗಲಿ ಸಧ್ಯದಲ್ಲಿ ತಕ್ಕ ಏರ್ಪಾಡು ಮಾಡುವ ಸಂಭವವು ಕಾಣದೆ ಇರುವುದರಿಂದ, ಯೋಗ್ಯವಾದ ವಿಲೇವಾರಿಯನ್ನು ನಡೆಯಿಸುವ ಕರ್ತವ್ಯವನ್ನು ಈ ತಾಲೂಕಿನ ಜನರೇ ತಾವಾಗಿ ವಹಿಸಿಕೊಳ್ಳುವ ಅಗತ್ಯವು ಒಂದಿರುತ್ತದೆಂದು ಅಭಿಪ್ರಾಯ ಪಡುತ್ತಾರೆ ಆದುದರಿಂದ ಕ್ರಮೇಣವಾಗಿ ಹೈಸ್ಕೂಲು ಮಾಡುವ ಆಲೋಚನೆಯಿಂದ ತತ್ಕಾಲಕ್ಕೆ ಒಂದು ಸೆಕೆಂಡರಿ ಶಾಲೆಯನ್ನಾದರೂ ಪುತ್ತೂರಲ್ಲಿ ಸ್ಥಾಪಿಸುವುದು ಅಗತ್ಯವೆಂಬುದಾಗಿಯೂ ಆ ವಿಷಯದಲ್ಲಿ ಅವಶ್ಯವಿರುವ ಪ್ರಯತ್ನಗಳನ್ನು ವಿಳಂಬಮಾಡದೆ ಆದಷ್ಟು ತ್ವರ್ಯದಲ್ಲಿಯೇ ನಡೆಯಿಸುವುದಕ್ಕೆ ಪ್ರಾರಂಭಿಸಬೇಕಾಗಿಯೂ ಈ ಸಭೆಯಲ್ಲಿ ನಿರ್ಣಯಿಸೋಣಾಗುತ್ತದೆ"

ಎರಡನೇ ನಿರ್ಣಯವು ಮೇಲಣ ನಿರ್ಣಯದ ಜ್ಯಾರಿಯನ್ನು ನಡೆಯಿಸುವುದ ಕ್ಕೋಸ್ಕರವೂ ವತ್ತು ಈ ತಾಲೂಕಿನ ವಿದ್ಯಾಭಿವೃದ್ಧಿಯನ್ನು ಸರ್ವಸಾಧಾರಣವಾಗಿ ಪ್ರೋತ್ಸಾಹಿಸುವುದಕ್ಕೋಸ್ಕರವೂ ಪುತ್ತೂರು ವಿದ್ಯಾವರ್ಧಕಸಂಘ"(Puttur Education Society) ಎಂಬ ಒಂದು ಸಂಘವನ್ನ ಸ್ಥಾಪಿಸುವರೆ ಅಗತ್ಯವಿರುವ ನಿಬಂಧನೆಗಳ ಮೆಸೂದೆ ಮಾಡಿ ಆ ಸಂಘವನ್ನು 1860ನೇ ಇಸವಿಯ 21ನೇ ಆಕ್ಟಿಗನುಸಾರವಾಗಿ ರಿಜಿಸ್ಟ್ರಿಂ ಮಾಡಿಸುವುದಕ್ಕೆ ಸಹ ಈ ಕೆಳಗೆ ಹೆಸರು ಕಾಣಿಸಿದವರ ಒಂದು ಮಂಡಳಿಯನ್ನು ನೇಮಿಸಿ ಮ. ರಾ ರಾ ಸವೂರು ಶಿವರಾಯರನ್ನು ಅದಕ್ಕೆ ಕಾರ್ಯದರ್ಶಿಯ ಖಜಾನೆದಿಯಾಗಿರಿಸಿಬೇಕಾಗಿಯೂ, ಆ ಮಂಡಳಿಯವರಿಗೆ ಬೇಕಾದಂತೆ ಇತರರನ್ನೂ ಕೂಡಿಸಿಕೊಳ್ಳುವ ಅಧಿಕಾರವನ್ನು ಕೊಡಬೇಕಾಗಿಯೂ ನಿರ್ಣಯಿಸೋಣಾಗುತ್ತದೆ ಇಲ್ಲಿ 53 ಜನರ ಹೆಸರುಗಳಿರುವವು)

ಈ ಸತ್ಕಾರ್ಯದ ಒಜ್ಜೆ ಹಣವನ್ನು ಜಮಾಯಿಸುವ ಅಧಿಕಾರವನ್ನು ಆ ಮಂಡಳಿಯವರಿಗೆ ವಹಿಸಿಕೊಡಬೇಕಾಗಿ ಇನ್ನೊಂದು ನಿರ್ಣಯವು ಮಂಜೂರು ಮಾಡೋಣಾಯಿತು. ವಂತಿಗೆ ಪಟ್ಟಿಯನ್ನು ಶುರು ಮಾಡಿದೊಡನೆ, ನಬಕರಲ್ಲಿ ಹಲವರು ತಾನು ಮಂದೆ ನಾನು ಮುಂದೆಂಬಂತೆ ಉದಾರಶೀಲರಾಗಿ ಈ ಕೆಳಗೆ ಕಾಣಿಸಿದಂತೆ ವಂತಿಗೆ ಹಾಕಿದರು. —

೧ ಮಹಾರಾಜಶ್ರೀ ರವಿವರ್ಮ ನರಸಿಂಹರಾಜರು ರೂ 1,001 ೨ ಎಡ್ಯತೋಡಿ ಸುಬ್ಬಯ್ಯ ಒಂಟರು ರೂ 1,001 ಕಲ್ಯದ ಪೂವಣಿ ಹೆಗ್ಗಡೆರು ರೂ 1,001. ೪ ಸವೂರು ನಾರಾಯಣರಾಯರು ರೂ 1,001 ೫ ಬೈಂದೂರು ರಾಮರಾಯರು ರೂ 1,001 ೬ ಕುದ್ಮಾರು ಕುಮಾರಶೈಗಳು ರೂ 555. ೭ ಪಟ್ಟೆ ದೇಜಪ್ಪ ಕೊಂಡೆರು ರೂ 501 ೮ ಮಂಜೇಶ್ವರ ಲಕ್ಷ್ಮಣರಾಯರು ರೂ 501. ೯ ಬೆಳ್ಳೆ ವೆಂಕಟಕೃಷ್ಣರಾಯರು ರೂ. 301 ೧೦ ಎಲಿಮಲೆ ಹೆಮ್ಮದೆ ಬ್ಯಾರಿಗಳು ರೂ 255 ೧೧ ಮಂಜೇಶ್ವರ ಜನಾರ್ಧನ ಭಟ್ಟರು ರೂ 255. ೧೨ ಎಡ್ಯತೋಡಿ ವೀರು ಭಂಡಾರಿಗಳು ರೂ 255. ೧೩. ಸವಣೂರು ಕರಿಯಪ್ಪ ಒಂಟರು ರೂ. 255 ೧೪ ಹೊಸ್ಮದುರ್ಗ ಗಣವತಿರಾಯರು ರೂ. 255. ೧೫. ಕೈಯ್ಯೂರು ಸುಬ್ಬರಾಯರು ರೂ 255 ೧೬. ಮೊಳಹಳ್ಳಿ ಶಿವರಾಯರು ರೂ. 255 ೧೭ ಎಲಿಯಣ್ಣ ಪೂಜಾರಿಗಳು ವಗೈರೆರ ರೂ 111 ರ ಇಸಮುಗಳು 2 ರೂ 222. ೧೯ ರೂ 125ರ ಇಸಮು 1, ರೂ 125 ೧೯ ರೂ. 105ರ ಇಸಮು 1, ರೂ 105 ೨೦ ರೆವರೆಂಡ್ ಫಾದರ್ ಡಿ'ಸೋಜರು ವಗೈರೆರ ರೂ 101ರ ಇಸಮುಗಳು 11, ರೂ. 1,111. ೨೧ ಇತರ ಇಸಮುಗಳು ರೂ. 1,829 ಜುಮಲಾ ರೂ 10,540.

ಅನಂತರ ಸಭಿಕರ ಕಡೆಯಿಂದ ಅಧ್ಯಕ್ಷರು ವಿಜ್ಞಾಪಿಸಿಕೊಂಡ ಮೇರೆಗೆ ಮೆ. ಕಲೆಕ್ಟರ ದೊರೆಗಳವರು ಎದ್ದು ನಿಂತು, ತಂತಮ್ಮ ವಿದ್ಯಾಭಿವೃದ್ಧಿಯನ್ನು ಪ್ರೋತ್ಸಾಹಿಸುವುದಕ್ಕೆ ಈ ತಾಲೂಕಿನವರು ತಾವಾಗಿ ಕಟ್ಟು ಪ್ರಯತ್ನಗಳನ್ನೂ ಕಾರ್ಯಾರಂಭದಲ್ಲಿಯೇ ಯಾವ ತರದ ಅಂಜಿಕೆಯನ್ನೂ ಪಡದೆ ದ್ರವ್ಯಸಹಾಯ ಮಾಡಲು ಮುಂದಿರುವುದನ್ನು ನೋಡಿ ಅತ್ಯಂತ ಸಂತೋಷವಾಯಿತೆಂದು ವಗೈರೆ ಕೆಲವು ಪ್ರೀತಿಪೂರ್ವಕವಾದ ಮಾತುಗಳನ್ನಾಡಿದರು. ಹಾಗೆ ಅವರು ಪ್ರಸ್ತೋನ್ನತಿಯಲ್ಲಿ ತೋರಿಸಿದ

ಪ್ರೇಮಕ್ಯೋಕ್ತೆರ ಅವರಿಗೂ, ಆಗಲೇ ಬಂದು ಸಭೆಯನ್ನಲಂಕರಿಸಿದುದಕ್ಕೆ ಅವರ ಧರ್ಮಪತ್ನಿಗೂ, ಅಗ್ರಾಸನವನ್ನು ಸ್ವೀಕರಿಸಿ ಸಭೆಯ ಕಾರ್ಯವನ್ನೆಲ್ಲಾ ನಿರ್ವಿಘ್ನವಾಗಿ ನೆರವೇರುವಂತೆ ಅನುಕೂಲಿಸಿ ಕೊಟ್ಟ ಬಸ್ಯೆ ಮ. ರಾ. ರಾ ಪಿ. ಸೀತಾರಾಮಯ್ಯನವರಿಗೂ ಧನ್ಯವಾದಗಳನ್ನಿತ್ತು ರಾಜಗೀತವನ್ನು ಹಾಡಿ ಸಭೆಯು ಮಂಗಳವಾಯಿತು ಸಭೆಯಲ್ಲಿ ಬಯಲಾದ ಉತ್ಸಾಹವನ್ನು ಕಂಡು, ಕೇಳಿ ಎಲ್ಲವರಿಗೂ ಅತ್ಯಾನಂದ ಉಂಟಾಗಿಯದೆ; ಮತ್ತು ಇನ್ನೂ ಹೆಚ್ಚಿನ ಜನರು ಪ್ರೀತಿಪೂರ್ಣರಾಗಿ ವಂತಿಗೆಯನ್ನು ಹಾಕುವುದಕ್ಕೆ ಮುಂದೆ ಬರುತ್ತಿರುವರು. ಶಾಲೆಗೆ ಕಬ್ಬೋಣವನ್ನು ಕಟ್ಟಿಸುವುದಕ್ಕೆ ಮತ್ತು ಇತರ ಖರ್ಚಿಗೆ ಕೂಡಾ ಒಟ್ಟಿಗೆ ಶುಮಾರು ರೂ 52,000ದ ವರೆಗೆ ಬೇಕೆಂತ ಅಂದಾಜು ಮಾಡಿಯದೆ ಆದರೆ ಸಭೆಯ ದಿವಸದ ಉತ್ಸಾಹವನ್ನು ನೋಡಿದರೆ ರೂ 52,000 ಕ್ಕಿಂತ ಹೆಚ್ಚಿನ ಹಣವನ್ನು ಸಹಾ ಕೂಡಿಸಿವುದು ಕಷ್ಟಸಾಧ್ಯವಾಗಲಾರದೆಂದು ಕಾಣುತ್ತದೆ

ಪತ್ರವ್ಯವಹಾರ.

ಧನಲಕ್ಷ್ಮೀ ಪೂಜೆ.

ಅಯ್ಯಾ, ಪ್ರಿಯ ಪತ್ರಿಕಾಕರ್ತರೇ!

ತಮ್ಮ ಅಮೂಲ್ಯವಾದ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ 'ತಮ್ಮ ಪತ್ರದ ವಾಚಕರಲ್ಲೊಬ್ಬರು ಮಂಗಳೂರು ಧನಲಕ್ಷ್ಮೀ ಪೂಜೆಯನ್ನು ವಿವರಿಸಿದ್ದನ್ನು ಎರಡು ಮೂರು ಸಾರಿ ಓದಿ ತುಂಬಾ ಆನಂದಚಿತನಾದೆನು. ಆದರೆ ಮಂಗಳೂರು ಧನಲಕ್ಷ್ಮೀ ಪೂಜೆಯನ್ನು ಜೊಂಜಾಟ ಧನಲಕ್ಷ್ಮೀ ಪೂಜೆಗೆ ಸರಿಹೋಲಿಸಿ ಸಾವಕಾರರ ಹತ್ತಿರ ಸಾಲ ತಕ್ಕೊಂಡವರಿಗೆ ಸರಿಯಿಯವರಿಗೆ ಸಲತಕ್ಕ ಏವೇಜುಗಳನ್ನು ಕೋರ್ಟಿಗೆ ಕಟ್ಟಿ ವರೆ ಉಪದೇಶಮಾಡಿದ್ದ ಒಹಳ ಆಶ್ಚರ್ಯಕರವೇ ಸರಿ

ಮುಂಬಯಿಯಲ್ಲಿ ಸಾವಕಾರರು ನಡಿಸುವ ಧನಲಕ್ಷ್ಮೀ ಪೂಜೆಯ ವಿಜ್ರಂಭಣೆಯ ರೀತಿಯ "ವಾಚಕ ಮಹಾಶಯರು ವಿವರಿಸಿರುವರು ಆದರೆ ಅಲ್ಲಿಯ ಲೇವಾದೇವಿ ಸ್ಥಿತಿಯನ್ನು ಇವರು ಲೋಪಪಡಿಸಿರುವರು. ಒಬ್ಬ ಮನುಷ್ಯನು ಒಂದು ಅಂಗಡಿಯಲ್ಲಿ ಯಾ ಒಬ್ಬ ಸಾವಕಾರರಲ್ಲಿ ಲೇವಾದೇವಿಯನ್ನು ನಡಿಸಿದ ಪಕ್ಷದಲ್ಲಿ ಆ ಅಂಗಡಿಯ ಯಾ ಆ ಸಾವಕಾರರ ಕ್ರಮಗಳಿಗೆ ಅನುಸಾರವಾಗಿ ಆ ವರ್ಷದ ಲೇವಾದೇವಿಯನ್ನು ಆ ವರ್ಷದ ಅಂತ್ಯದೊಳಗಾಗಿಯೇ ಮೊಕ್ತ ಯಾ ಕಾಗದ ಪತ್ರಗಳ ಮುಖಾಂತರ ಲೆಕ್ಕಾಚಾರಗಳ ಮೊಕಾಬಿಲೆಯನ್ನು ತನಪಿ ಮಾಡಿ ಪೂರಾ ಹಣವನ್ನು ಚುಕ್ತಾ ಸಿಸಿ ಕೊಟ್ಟ ಕೆಲವು ಸಮಯಗಳಲ್ಲಿ ಆಯಾಯ ಸಾಮಿಲೆಗಳ ನಂತರ ಏವೇಜು ಜಾಕಿ ಸಂತರ್ಲ್ಲಿ ಅದಕ್ಕೆ ಒಡ್ಡಿ ಕೂಡ ಕೊಟ್ಟ ಚುಕ್ತಾ ರಶೀದಿ ಪಡಕೊಳ್ಳುವ ಕ್ರಮದ ಕುರಿತು ವಾಚಕಮಹಾಶಯರು ಪ್ರಸ್ತಾಪಿಸಲೇ ಇಲ್ಲ ಒಂದು ವೇಳೆ ಈ ಲೇವಾದೇವಿ ಕ್ರಮವು ಅಲ್ಲಿ ಇರಲಿಕ್ಕೆಲ್ಲವೆಂತ "ತಮ್ಮ ಪತ್ರದ ವಾಚಕರಲ್ಲೊಬ್ಬ" ಸಂಶಯಪಡುವದಾದರೆ ಶುರು ಮುಳುಮಿನಲ್ಲಿ ಮುಂಬಾಯಿ, ಖಾತೇವಾಡು ಮೊದಲಾದ ವ್ಯಾಪ್ತ್ಯೆಗಳಿಂದ ಲಕ್ಷಾಂತರ ರೂಪಾಯಿಯ ಸಾವಕಾರರ ಕಚ್ಚೇಮನವರು ಶ್ರೀಮಂತ ಶೇಟ್ ಗಳು, ಮುಲಾಸಿಗಳು ಇವರಿಗೆ ಒಂದೆರಡು ತಿಂಗಳಲ್ಲಿ ನಮ್ಮ ಮಂಗಳೂರು ಒಡ ಸಾವಕಾರರು ನಡಿಸುವ ವ್ಯವಹಾರವೆಂತಹ ಇಮ್ಮಡಿ ವ್ಯವಹಾರವಾಗಿ ಬಳಸೀರು ಬೇಕಬೇಕಾದರೆ ಪೂರಾ ಲೆಕ್ಕಾಚಾರಗಳನ್ನು ಚುಕ್ತಾಮಾಡಿ ಪರತು ಹೋಗುವ ಕ್ರಮವು ವಿಚಾರಿಸಿ ತಿಳಕೊಂಡರೆ ಸಮಾಧಾನವಾದೀತು ಯಾವ ಸಂಗತಿಯನ್ನೂ ಕಣ್ಣಾರೆ ಕಂಡೂ ಕಿವಿಯಾರೆ ಕೇಳಿದರೂ ಪರಾಂಬರಿಸಿ ನೋಡಬೇಕು ಅದಲದೆ ಮಂಗಳೂರು ಒಡ ಸಾವಕಾರರ ಪತ್ತರ ಗಿರಾಕಿಗಳು ಒಂದು ದಿವಸಗಳ ಮಾತಿಗೆ ಸಾವಾನುಗಳನ್ನು ಕಡತಕ್ಕೊಂಡು ಹೋದರ್ಲ್ಲಿ ಲಕ್ಷ ಲಕ್ಷ ಮಾಸಲ ಋತುಗಳು ಕೂಡ ಕಳೆದರೂ ಒಂದು ಅಯನಗಳು ಕಳೆಯಿವ ಮುಂದೆ ಏವೇಜು ವಸೂಲು ಒರುವದು ಕೂಡ ಒಹಳ ದುರ್ಲಭವಾಗುತ್ತದೆ ಆದರೆ ಒಂದು ಅಯನಗಳವರೇಗೆ ಕಾಯುವರೆ, "ಲಿವಿಟೇಷನ್ ಬಾರ್" ಆಗುವದೋ ಎಂತ ಹೆದರಿ ಆಗಾಗೆ ವಸೂಲಿಗೆ ಜನ ಕಳುಹಿಸಿ ಒರತಕ್ಕ ಏವೇಜನ್ನು ಕೇಳಿದರೆ "ರಾಜಮಾನ್ಯ ರಾಜೇಶ್ರಿ ಶ್ರೀಮಂತ ಗಿರಾಕಿಗಳು ಕಡ ತಕ್ಕೊಂಡು ಹೋಗಿ ಹೇಳಿದ ವಾಯಿದೆಗೆ ವಸೂಲು ಕೊಡುವ ಬದಲಿಗೆ ಆಡುವ ಮಾತುಗಳನ್ನಾದರೂ ವಾಚಕ ಮಹಾಶಯರೇ ದಯ ಮಾಡಿ ಕಿವಿಕೊಟ್ಟು ಕೇಳಿರಿ!

ಕಾವೇರಿಗೆ ಮದುವೆಯಾಗಿ ಎರಡು ವರ್ಷ ಏಳು ತಿಂಗಳಾಯಿತು. ಜವಳಿ ಅಂಗಡಿಯಿಂದ ತರಿಸಿದ ಜವಳಿ ಬಾಬತು ವಸೂಲಿಯವನ್ನು ಹತ್ತು ಹೆದಿನೈದು ದಿವಸ ಬಂದಲ್ಲಿ ನವೆಂಬರ ೧೫ಕ್ಕೆ ಬೆಳಿಗ್ಗೆ ೬ಗಂಟೆಗೆ ಬರಬೇಕೆಂತ ನಮ್ಮ ಶ್ರೀಮಂತ ಗಿರಾಕಿಗಳ ಅಪ್ಪಣೆಯಾದ ಪ್ರಕಾರ ವಸೂಲಿಯ ಬಸಪ್ಪನು ಬೀಲು ತಕ್ಕೊಂಡು ಹೋದಲ್ಲಿ ಆಗುವ ಸಂಧಾಷಣೆಯನ್ನು ವಾಚಕ ಮಹಾಶಯರೇ ಲಾಲಿಸಿ ಕೇಳಿರಿ! ಏನೋ! ಬಸಪ್ಪ— ಬುದ್ಧಿ ನಮಸ್ಕಾರ. ಎಂಥಾದ್ದೊ ಅದು? ತಮ್ಮ ಬೀಲು ಸ್ವಾಮಿ ಮೆಲ್ಲಗೆ ಹೇಳೊ ಜನರನ್ನು ನೋಡುವದಿಲ್ಲವೊ ನೀನು? ಅದೀತು ಸ್ವಾಮಿ. ಎಲ್ಲಿ ನಿನ್ನ ಬೀಲು? ಬೀಲನ್ನು ನೋಡಿ ರೂಪಾಯಿ ೨೫—೧೫—೯ ಎಂತ ಓದಲಾಗಿ. ಮುಖದಲ್ಲಿ ಕೆಂಪು ಆಡರಿತು. ಹೌದೊ! ಇದು ಇಷ್ಟು ಸಮಯ ಯಾಕೆ ಬಾಕಿ ಇಟ್ಟಿಯೊ? ನೀನು—ಸ್ವಾಮಿ, ನಾನು ಸುಮಾರು ಸಾರಿ ಬಂದೆ ಪ್ರತಿಸಾರಿ ವಾಪಾಸು ಕಳಿಸಿದಿರಿ ಈಗ ಜವಳಿ ತಕ್ಕೊಂಡು ಒಹಳ ಸಮಯವಾಯಿತು.—ಹೌದು ಹೌದು ಒಳ್ಳೇ ಜವಳಿ ಕೊಟ್ಟಿದ್ದೀರಿ! ನೀವು ಕೊಟ್ಟ ಜವಳಿ ಈಗ ಎಲ್ಲಾ ರಂಗು ಹೋಯಿತು. ಇಡೀ ಎರಡು ವರ್ಷ ಏಳು ತಿಂಗಳು ಉಟ್ಟದ್ದು ಮಾತ್ರ ಅದಂತಿರಲಿ ನಿಮಗೆ ಕೊಡಬೇಕೆಂತ ಏವೇಜು ಕೂಡ ಇಟ್ಟಿದ್ದೆ. ಆದರೆ ನಮ್ಮ ಕಾವೇರಿಯು ಆ ಸಮಯದಲ್ಲಿ ವೈನಿಸಿದಳು. ಶೋಬನಕ್ಕೆ ಒಂದಕ್ಕೆ ಎರಡು ಖರ್ಚು ಆಯಿತು ನಿನ್ನ ಏವೇಜು ಕೊಡಲಿಕ್ಕೇ ಆಗಲಿಲ್ಲ ಇಕೋ ಈಗ ಅವಳು ಬಾಣಂತಿಯಾಗಿದ್ದಾಳೆ ಹೆಚ್ಚಿನ ಗಲಾಟೆ ಹಣದ ಬಹಳ ಅಡಚಣೆ. ಪೇಟೆಯಲ್ಲಿ ಒಳ್ಳೇ ಹಾಲು ಶಿಕ್ಕುವದಿಲ್ಲವೆಂತ ನಮ್ಮೆ ತಕ್ಕೊಂಡೆ ನಿನ್ನೆ ರಾತ್ರೆ ಎಮ್ಮೆ ಕರು ಸಹಾ ಸತ್ತು ಹೋಯಿತು ಇರಲಿ ಈಗ ನಿಮ್ಮತ್ತಿ ಹೊಸ ಜವಳಿಯು ಬಂದದೆಯೊ? ಹೌದು ಸ್ವಾಮಿ ನಮ್ಮ ಕಾವೇರಿಯ ಅತ್ತೆಗೆ ಕೊಡಲಿಕ್ಕೆ ಜರಿ ಪೀತಾಂಬರದ ಸೀರೆ ಬೇಕು. ಈ ಸೀರೆಯ ರೂಪಾಯಿಯೂ ಮತ್ತೆ ಮುಂಜಿನ ರೂಪಾಯಿಯೂ ಇನ್ನು ಐದು ತಿಂಗಳ ಕ್ಲಿಯೇ ಧನಲಕ್ಷ್ಮಿ ಪೂಜೆಯ ಸಮಯದಲ್ಲಿ ಚುಕ್ತಾಮಾಡಿ ಕೊಡುತ್ತೇನೆಂತ ನಮ್ಮ ಗಿರಾಕಿಯ, "ಒಸವ್ವಾ, ಒಂದಹಾಗೆ ಹೋಗವ್ವಾ" ಎಂತ ಕಳಿಸಿಕೊಟ್ಟರು.

ಇದೇ ರೀತಿ 'ಸಾವಕಾರರಿಗೆ ಗಿರಾಕಿಗಳ ಉತ್ತರವು ದೊರಕುವ ನೂತಾರು ದೃಷ್ಟಾಂತಗಳನ್ನು ಹೇಳಬಹುದು

ಈ ವಿದ್ಯಮಾನಗಳಲ್ಲಿ ಮಂಗಳೂರು ಒಡ ಸಾವಕಾರರನ್ನು ಮುಂಬಾಯಿ ಲಕ್ಷಾಧಿಪತಿ ಸಾವಕಾರರಿಗೆ ಸರಿಹೋಲಿಸಿರುವ ಸರಿಯೆ? ಮಂಗಳೂರು ಒಡ ಸಾವಕಾರರು ಧನಲಕ್ಷ್ಮೀ ಪೂಜೆಗೆ ಒಂದವಧಿಗೆ ಪುಷ್ಪ ತಾಂಬೂಲಾದಿಗಳನ್ನೂ ಮಿರಾಯಿಯನ್ನೂ ಕೊಟ್ಟು ಶ್ರೀಮಂತ ಗಿರಾಕಿಗಳ ಪ್ರತಾಪಕ್ಕೆ ಹೆದರಿ ಅತಿಥಿ ಸತ್ಕಾರ ಮಾಡಿದ್ದಕ್ಕೆ ಇದು ಧನಲಕ್ಷ್ಮೀ ಪೂಜೆಯಲ್ಲ ಮಿರಾಯಿ ಉಂಡೆ ತಿನ್ನಿಸುವ ಪೂಜೆ ಎಂತ ವಾಚಕರೊಬ್ಬರು ವರ್ಣಿಸಿದರು ಜೊಂಬಾಯಿ ಲಕ್ಷಗಟ್ಟಲೆಯ ಸಾವಕಾರರು ಗಿರಾಕಿಗಳು ಏವೇಜು ಕೊಡಲಿಕ್ಕೆ ತಪ್ಪಿದ್ದಲ್ಲಿ "ರಖೊ ಅಬಿ ಅಮಾರಾ ಪೈಸಾ. ತೇರೇ ಬಾವ್‌ಕಾ ಪೈಸಾಕೇ. ಮ್ಯಾಲ್ ಲೇಬಾರ್ ಜಾಕರ್ ವಂದ್ರಾರೋಜ್ ಹೂವಾ ಆ ದೊಮರ್ತಿ ವಸೂಲಿಕೂ ಅಯಾ ಅಬ್ಬಿ ಆವ್ ಬಾದ್ ಆವ್ ಬೋಲ್ತಾಹೇ. ಕಾಆನ, ತೇರೆ ಘರ್ಕು ಆನ" ಎಂತ ನುಡಿಯುವ ಮಂಗಲಾರತಿಯ ಪೂಜೆಗೆ 'ವಾಚಕರು' ಏನು ಹೇಳುವರು? ಗಿರಾಕಿಗಳಿಗೆ ಸಿವಿಲ್ ಕೋರ್ಟುಗಳ ದಾರಿ ತೋರಿಸಿಕೊಟ್ಟ "ವಾಚಕ"ರು ಮುಂಬಯಿ ಸಾವಕಾರರ ಈ ಮಾತುಗಳನ್ನು ಕೇಳಿ ಕ್ರಿಮಿನಲ್ ಕೋರ್ಟುಗಳಿಗೆ ಗಿರಾಕಿಗಳು ಹೋಗಬೇಕೆಂತ ಹೇಳದೆ ಇರಲಾರರು. ಆದ್ದರಿಂದ 'ವಾಚಕರಲ್ಲೊಬ್ಬರ ಉಪದೇಶದ ಪ್ರಯೋಜನವನ್ನು ಪಡದರೆ ಪೂಜಾಫಲ ಪ್ರಾಪ್ತಿಯು ವಕೀಲರ್ತಿಗೆ ದೊರಿಯುವದು

ಇಂತಿ

ಧನಲಕ್ಷ್ಮಿಪೂಜೆ ನಡಿಸಿದ ಒಡ ಸಾವಕಾರ

ವಿದ್ಯಾವರ್ಧಕ ಸಭಾ.

೨. ಸಾರಾಸೀನಿಯಾ ಎಂಬ ಹೆಸರಿನ ವನಸ್ಪತಿಯು ಇದೇ ರೀತಿಯಲ್ಲಿ ಪ್ರಾಣಿ ಘಾತಕವಾಗಿದೆ. ಇದರ ಎಲೆಗಳು ಉದ್ದವಾದ ಬಟ್ಟಲಿನ ಆಕಾರದಲ್ಲಿ ಕೂಡಿದ್ದು ಅದರೊಳಗೆ ಆವ್ಯ ರಸವಿರುವದು. ಈ ರಸದ ಮೋಹದಿಂದ ಹುಳುಗಳು ಒಳಹೊಕ್ಕುವವು. ಆದರೆ ಆ ಬಟ್ಟಲಿನ ಬಾಯಲ್ಲಿ ಕೂದಲುಗಳಂತೆ ಮೊನೆ ತಿರುವ ತಂತುಗಳಿರುವವು. ಅವು ಬಟ್ಟಲಿನ ಕಡೆಗೆ ಜಗ್ಗಿರುವದರಿಂದ ಒಳಹೊಕ್ಕ ಕೀಟಗಳಿಗೆ ಹೊರಗೆ ಬರಲು ಬಿಡುವದಿಲ್ಲ. ನಂತರ ಆ ಆವ್ಯ ರಸದ ಕಾರ್ಯವು ಕೀಟಗಳ ಮೇಲೆ ಪರಿಣಮಿಸಿ ಅವು ಸತ್ತು ಹೋಗುವವು!

೩. ಹ್ವೀನಸ್ ಫ್ಲಾಯಟ್ರಿಪ್-ಹ್ವೀನಸ್-ಇದು ರೋಮನ ಜನರ ಕಾಮದೇವತೆಯು ಎಂದರೆ ರತಿಯ ಹೆಸರು. ಹ್ವೀನಸ್ ಫ್ಲಾಯಟ್ರಿಪ್ಸ ಎಂದರೆ ರತಿಯ ಬಲೆಯು. ಈ ಹೆಸರು ಒಂದು ವನಸ್ಪತಿಗೆ ಕೊಟ್ಟಿದೆ. ಇದರ ಎಲೆಗಳು ಒಂದಕ್ಕೊಂದು ಬಟ್ಟಿ ಕೊಂಡಿರುವವು. ಆ ಎಲೆಯ ಮೇಲೆ ಮೂರು ಗಳು ಇರುತ್ತವೆ. ಈ ಗಂಟಿನಿಂದ ಬಂದು ತರದ ವಸೆಯ ಪದಾರ್ಥವು ಜೊರಿಯುತ್ತದೆ. ಒಂದು ನೊಣವು ಆ ಎಲೆಯ ಮೇಲೆ ಬಂದು ಕೂತರೆ ಅದು ಅಲ್ಲಿಯೇ ಅಂಟಿಕೊಳ್ಳುತ್ತದೆ. ಆ ಮೇಲೆ ಆ ಎಲೆಯು ಭಾಗವು ಮೆಲ್ಲಮೆಲ್ಲನೆ ಆ ನೊಣಕ್ಕೆ ಹೊದ್ದಿಕೊಂಡು ಕೊಡುತ್ತದೆ. ಮತ್ತೆ ಅದು ಒಂದು ಬಗೆಯ ಬಲೆಯಂತೆಯಾಗುತ್ತದೆ. ಆಗ ಆ ನೊಣದ ಹೊರಟಾಟ

ಸೊಣಕ್ಕೆ ಅಸಾಧ್ಯವಾಗುತ್ತದೆ. ಮತ್ತು ಆ ಬಲೆಯಲ್ಲಿ ಬಿದ್ದು ಸಾಯುತ್ತದೆ. ಎಲೆಗಳ ಮೇಲಿನ ಗಂಟುಗಳಿಂದ ಹೊರಡುವ ರಸದಲ್ಲಿ ಸಿಟ್ರಿಕ್ ಎಸಿಡ್ (ನಿಂಬೆ ಹಣ್ಣಿನ ರಸದೊಳಗಿನ ಆಮ್ಲವು) ಇರುವದು. ಈ ಎಲೆಯು ಮೇಲೆ ಮಣ್ಣು, ಕಲ್ಲು ಮುಂತಾದ ನಿರಿಂದ್ರಿಯ ಪದಾರ್ಥಗಳು ಬಿದ್ದಲ್ಲಿ ಅದು ಒಂದಕ್ಕೊಂದು ಸೇರುವದಿಲ್ಲ. ಆದರೆ ಮಾಂಸ, ಚರ್ಮ ಮುಂತಾದ ಸೇಂದ್ರಿಯ ಪದಾರ್ಥ ಬಿದ್ದ ಕೂಡಲೆ ಆ ಎಲೆಗಳು ಸೇರಿ ಹೋಗುವವು! ಇದು ಆಶ್ಚರ್ಯವಲ್ಲವೇನೇ? ಇದಲ್ಲದೆ (೪) ಜೀಅವರ್, (೫) ಮ್ಯಾರ್ಟಿನಿಯಾ, (೬) ವಿಸಾ. ಅಲಮಾಮಾ ಮುಂತಾದ ಇನ್ನು ಕೆಲವು ವನಸ್ಪತಿಗಳು ಬೇರೆ ಬೇರೆ ವಿಧದಿಂದ ಪ್ರಾಣಿಗಳನ್ನು ಕೊಲ್ಲುತ್ತವೆ. ಇವೇ ವನಸ್ಪತಿ ರಾಕ್ಷಸರು!

ಪತ್ರವ್ಯವಹಾರ.

ಒಬ್ಬ ವಿದ್ಯಾರ್ಥಿಯ ಪ್ರಲಾಪ.

(ಉಡ್ಡಿಯಂದ).

ಪತ್ರಿಕಾಕರ್ತರೇ,

ನನ್ನ ಈ ಚಿಕ್ಕ ಲೇಖನಕ್ಕೆ ತಮ್ಮ ಅಮೋಘವಾದ ಪತ್ರಿಕೆಯಲ್ಲಿ ಒಂದಿಷ್ಟು ಎಡೆ ಕೊಟ್ಟರೆ ಮಹದುಪಕಾರವಾಗುವುದು. ನಾನು ಸಂಸ್ಕೃತ ವಿದ್ಯಾಭ್ಯಾಸಮಾಡಬೇಕೆಂಬ ಕುತೂಹಲದಿಂದ ಈ ಕುಡುಪಿ ಕ್ಷೇತ್ರಕ್ಕೆ ಬಂದು ಇಲ್ಲಿ ಅಷ್ಟಮಠದ ಸ್ವಾಮಿಗಳವರಿಂದ ಸ್ಥಾಪಿಸಲ್ಪಟ್ಟ ಸಂಸ್ಕೃತ ಪಾಠಶಾಲೆಗೆ ಸೇರಿ ಕೆಲವು ವರ್ಷಗಳಾದವು. ಈ ಶಾಲೆಯ ವಿದ್ಯಾರ್ಥಿಗಳ ಅಭ್ಯುಜನ ಭೋಜನಾದಿ ಸೌಕರ್ಯಗಳನ್ನು ಆಯಾ ಕಾಲದ ಪರ್ಯಾಯ ಶ್ರೀಪಾದಂಗಳವರೇ ನಡಿಸುತ್ತಿರುವ ಶ್ರೀಪ್ರತಿಗೆ ಶ್ರೀಪಾದಂಗಳವರು ಪ್ರತಿ ವರ್ಷ ವರ್ಧಂತಿ ದಿವಸಗಳಲ್ಲಿ ನಮಗೆ ವಸ್ತ್ರಗಳನ್ನು ಕೊಡಿಸಿ ಸಹಾಯ ಮಾಡುತ್ತಿರುವರು. ಶ್ರೀಕೃಷ್ಣಾಪುರ ಶ್ರೀಪಾದಂಗಳವರು ವಿಶೇಷ ದಿವಸಗಳಲ್ಲಿ ನಮಗೆ ದಕ್ಷಿಣೆಗಳನ್ನು ಕೊಡಿಸುತ್ತಿರುವುದರಿಂದ ಬಹಳ ಅನುಕೂಲವಾಗುವುದು. ಶ್ರೀಅದಮಾರು ಶ್ರೀಪಾದಂಗಳವರು ಮ. ಮಿ ಸಂವರ್ಧನೀ ಎಂಬ ಒಂದು ಸಭೆಯನ್ನು ಏರ್ಪಡಿಸಿ ಅಲ್ಲಿ ಪ್ರತಿ ವಾಸು ವಾಸನದಲ್ಲಿ ಆಯಾ ತರಗತಿ ಕ್ರಮದಲ್ಲಿ ನಮ್ಮನ್ನೂ, ಇತರ ಬಹುಮಂದಿ ವಿದ್ಯಾರ್ಥಿಗಳನ್ನೂ ಪರೀಕ್ಷೆ ವಾಡಿ ಎರಡು ರೂಪಾಯಿಗಳ ಬಾಗಾಯಿತು ಹದಿನೈದು ರೂಪಾಯಿಗಳವರಿಗೂ ವಿಶೇಷ ಸಂಗತಿಗಳಲ್ಲಿ ೫೦-೬೦ ರೂಪಾಯಿಗಳವರಿಗೂ ಸಂಭಾವನೆಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿರುವರು. ಹೆಚ್ಚಾಗಿ ಒರಿಯುವದೇನು? ನಮಗೆ ನಮ್ಮ ತಂದೆತಾಯಿಗಳು ಜನ್ಮವನ್ನು ಕೊಡುವದಕ್ಕೆ ಮಾತ್ರ ಕಾರಣಭೂತರಲ್ಲದೆ ವಿದ್ಯಾದಾನ, ಸಂರಕ್ಷಣೆ, ಪೋಷಣೆ ಮೊದಲಾದ ಹೆತ್ತವರ ಕರ್ತವ್ಯಗಳನ್ನೆಲ್ಲ ಇಲ್ಲಿಯ ಶ್ರೀಪಾದಂಗಳವರೇ ಕೈಕೊಂಡಿರುವರು. ಈ ಉಪಕಾರಗಳಿಗೆ ನಾವು ಎಷ್ಟು ಕೃತಜ್ಞತೆಯುಳ್ಳವರಾಗಿದ್ದಾಗ್ಯೂ ಸ್ವಲ್ಪವೇ. ಆದರೆ ಈಗ ಮೂರು ವರ್ಷಗಳಿಂದ ನಮ್ಮನ್ನು ಮ. ಮಿ ಸಂವರ್ಧನೀ ಸಭೆಗೆ ಸೇರಿಸಿಕೊಳ್ಳುವದಿಲ್ಲ. ಇದರಿಂದ ನಾವು ಬಹಳ ಅನ್ಯಾಯಕ್ಕೆ ಗುರಿಯಾಗಿದ್ದೇವೆ. ಇದಕ್ಕೆ ಕಾರಣವೇನೆಂದರೆ, ಈ ಪರೀಕ್ಷಾ ಸಭೆಯ ಸಾರ ನಿಬಂಧನೆಗಳಿಗೂ, ನಮ್ಮ ಶಾಲೆಯಲ್ಲಿ ನಡಿಯುತ್ತಿರುವ ಪಾಠ ಕ್ರಮಕ್ಕೂ ವ್ಯತ್ಯಾಸವಿರುವದರಿಂದ ನಮಗೆ ಸೇರುವದಕ್ಕೆ ಅನುಕೂಲವಿಲ್ಲ. ಇಲ್ಲಿ ಸಭಾನಿಬಂಧನೆಗಳಂತೆ ಮಧ್ವಶಾಸ್ತ್ರವೇ ಪ್ರಾಮುಖ್ಯವಾಗಿಯೂ, ಇತರ ಕಾವ್ಯಗಳು ವಿಚ್ಛಿಕವಾಗಿಯೂ ಇರಬೇಕಾಗಿ ಶಾಲಾಸ್ಥಾಪಕರ ಆಶಯವಾಗಿರುವುದು. ಇದು ನ್ಯಾಯವಾದದ್ದೆ. ಈ ಶಾಲೆಗೆ ಸರಕಾರಿ ಗ್ರಾಂಟು ಸಿಗುವುದರಿಂದ ಈ ಸಂಸ್ಥಾನದ ಇತರ ಸಂಸ್ಕೃತ ಪಾಠಶಾಲೆಗಳಂತೆಯೇ ಇಲ್ಲಿಯೂ ಪಾಠಕ್ರಮವು ಸರಕಾರದವರ ನಿರ್ಬಂಧವಿರುವುದು. ಇದಕ್ಕಾಗಿ ಈ ಮೊದಲಿನ ಆಡಳತೆದಾರರು ಶಾಲಾ ಸ್ಥಾಪಕರ ಮತ್ತು ಶಾಲಾ ಇನ್ಸ್‌ಪೆಕ್ಟರವರ ಅನುಮತಿಯಿಂದ ಕೆಲವು ಆ ಪಾಠಗಳನ್ನೂ ಕೆಲವು ಈ ಪಾಠಗಳನ್ನೂ ವಾಡುವಂತೆ ವ್ಯವಸ್ಥೆ ವಾಡಿ ಪ್ರತಿ ವರ್ಷ ಪ್ರತ್ಯೇಕ ಪರೀಕ್ಷಕರನ್ನು ನೇವಿಸಿ ಪ್ರಶ್ನೆ ಪತ್ರಗಳನ್ನು ವಾಡಿಸಿ ಪರೀಕ್ಷೆವಾಡಿಸುತ್ತಾ ಇದ್ದರು. ನಮಗೆ ಸಭೆಯಲ್ಲಿ ಪ್ರವೇಶವು ಇದ್ದಿತು. ಆದರೆ ಈಗಿನ ಆಡಳತೆದಾರರು ಈ ಕ್ರಮವನ್ನು ನಿಲ್ಲಿಸಿರುವುದಲ್ಲದೆ ನಮಗೆ ಕ್ರಮವಾದ ವಾಸಿಕ, ತ್ರೈವಾಸಿಕ, ವಾರ್ಷಿಕ ಪರೀಕ್ಷೆಗಳನ್ನು ಕೂಡ ವಾಡಿಸುವುದಿಲ್ಲ. ಸರಕಾರದವರ ಮಂಜೂರಾತಿಯಿಂದ ನಡದ ವಾರ್ಷಿಕ ಪರೀಕ್ಷೆಯ ಫಲದ ಮೇಲೆ ಸಂಭಾವನೆಗಳನ್ನು ಕೊಡಬಹುದೆಂಬುದಾಗಿ ಮೇಲಿನ ಸಭೆಯವರು ಅವಕಾಶ ಕೊಡಿಸಿದ್ದರೂ ಈಗ ನಮಗೆ ಯಾವ ಪರೀಕ್ಷೆಗಳೂ ಇಲ್ಲದಿರುವದರಿಂದ ನಮಗೆ ದುಡ್ಡಿಗೆ ವಿಕಾಣಿ ಇಲ್ಲ. ಪುಸ್ತಕಗಳು ಮೊದಲಾದವನ್ನು ಕೊಂಡುಕೊಳ್ಳುವದು ಅತಿ ಪ್ರಯಾಸವಾಗಿಯದೆ. "ಅಂತು ಇಂತು ಕುಂತಿ ಮಕ್ಕಳಿಗೆ ವನವಾಸ"ವೆಂಬ ಗಾದೆಯಂತೆ ಆಗಿದ್ದೇವೆ. ನಮ್ಮಿಂದ ಯೋಗ್ಯತೆಯಲ್ಲಿ ಎಷ್ಟೋ ಕಡಿಮೆಯವರು ಸಭೆಗೆ ಬಂದು ಪರೀಕ್ಷೆಸಲ್ಪಟ್ಟು ೧೦-೨೦ ರೂಪಾಯಿ ದಕ್ಷಿಣೆಗಳನ್ನು ಕೊಂಡುಹೋಗುವದನ್ನು ನಾವು ಕಣ್ಣುಬಿಟ್ಟು ನೋಡಿಕೊಂಡು ಇರಬೇಕಾಗಿದೆ. ಸ್ವಭಾ ಕಾಲದಲ್ಲಿ ವಾಚಾ ಪರೀಕ್ಷೆಗಳು, ಲೇಖನ ಪರೀಕ್ಷೆಗಳು, ವಾಕ್ಯಾರ್ಥಗಳು, ಉಪನ್ಯಾಸಗಳು ನಡಿಯುತ್ತಿರುವಾಗ ನಮಗೆ ಪ್ರವೇಶವಿಲ್ಲದಿರುವದನ್ನು ನೋಡುವಾಗ ನಮ್ಮ ಜನ್ಮವೇ ವ್ಯರ್ಥವೆಂತ ತೋರುತ್ತದೆ. ಈ ಸಭೆಯಲ್ಲಿ ಮಾತ್ರವಲ್ಲ; ಇನ್ನು ತಿರುಪತಿ ಮಂತ್ರಾಲಯ ಮುಲಖೇಡ ಮೊದಲಾದ ಸಭೆಗಳಿಗೆ ಬೇರೆ ವಿದ್ಯಾರ್ಥಿಗರು ಹೋಗಿ ಪರೀಕ್ಷೆ ಕೊಟ್ಟು ಬಹಳ ದ್ರವ್ಯ ಸಂಪಾದಿಸಿಕೊಂಡು ಬರುತ್ತಾರೆ. ನಮ್ಮ ಈ ಶಾಲೆಯಲ್ಲಿ ಆ ಸಭಾ ನಿಬಂಧನ ಪ್ರಕಾರ ಪಾಠಗಳಿಲ್ಲದಿರುವುದರಿಂದ ನಮಗೆ ಆವುಗಳಿಗೆ ಹೋಗುವದಕ್ಕೂ ಸಾಧ್ಯವಿಲ್ಲ: "ಇತೋಭ್ರಷ್ಟ ಸ್ತತೋಭ್ರಷ್ಟ"ನೆಂತ ಆಗಿದ್ದೇವೆ "ಕರಿಯಲಿಕ್ಕೆ ಹೋಗುವಾಗ ಕೋಣ, ಹೂಡಲಿಕ್ಕೆ ಹೋಗುವಾಗ ಎಮ್ಮೆ" ಎಂಬ ಗಾದೆಯಂತೆ ನಮ್ಮ ಅವಸ್ಥೆಯಾಯಿತು. ಈ ಶಾಲೆ ಬಿಟ್ಟುಬಿಡುವದೆಂತ ಹೇಳಿದರೆ ಇಲ್ಲಿಯ ಊಟ ಬಿಟ್ಟು ಹೋಗಲಿಕ್ಕೆ ಮನಸ್ಸು ಬರುವುದಿಲ್ಲ. ಬೇರೆ ಶಾಲೆಗಳಿಗೆ ಹೋಗಿ ಸೇರಬಹುದೆಂದರೆ ಆ ಪಾಠಗಳು ನಮಗೆ ಆಗಿಲ್ಲ. ಇದನ್ನೆಲ್ಲ ಯೋಚಿಸಿ ಆಯಾ ಕಾಲಗಳಲ್ಲಿ ಪರೀಕ್ಷೆ ವಾಡಿಸುವುದಕ್ಕೆ ಈಗಿನ ಆಡಳತೆದಾರರಿಗೆ ಬೇಕಾದಷ್ಟು ಸಮಯವಿಲ್ಲದಿರುವದರಿಂದಲೇ ಎಂತ ತೋರುತ್ತದೆ. ಇದು ಅವರ ಕಾರ್ಯ ಗೌರವದಿಂದಲೋ ಅಥವಾ ಉಪಾಧ್ಯಾಯರು ತಕ್ಕ ಸೂಚನೆ ಕೊಡದಿರುವುದರಿಂದಲೋ, ಅಥವಾ ಆಡಳತೆಯ ಮರ್ಮವು ಅವರಿಗೆ ಇನ್ನೂ ಮನಸ್ಸಿಗೆ ಹೋಗದಿರುವುದರಿಂದಲೋ, ಅಥವಾ ಕೇವಲ ನಮ್ಮ ದೌರ್ಭಾಗ್ಯದಿಂದಲೇಯೊ ಗೊತ್ತಾಗುವುದಿಲ್ಲ. ಆದುದರಿಂದ ಈ ವಿಷಯಗಳನ್ನೆಲ್ಲ ಈ ಶಾಲೆಯ ಆಡಳತೆ ಕಮಿಟಿಯವರು ತಮ್ಮ ದಿವ್ಯ ಚಿತ್ತಕ್ಕೆ ತಂದು ನಮಗೆ ಇನ್ನು ಮುಂದೆಯಾದರೂ ಆಯಾ ಕಾಲಗಳಲ್ಲಿ ಪರೀಕ್ಷೆಗಳಾಗಾಗುವಂತೆ ಮಾಡಿ, ಸಭೆಗಳಿಗೂ ಪ್ರವೇಶ ಮಾಡಿಸಿ "ದೇವರು ಕೊಟ್ಟರೂ ಪೂಜಾರಿ ಬಿಡ" ಎಂಬಂತೆ ಮಾಡದೆ ನಮಗೆ ಸಭೆಯ ಕಡೆಯ ಸಂಭಾವನೆಗಳನ್ನು ಶಿಕ್ಷವಂತೆ ಮಾಡಿಸಿ ತಾವು ಕೀರ್ತಿಭಾಜನರೂ ಸ್ಥಾಪಕರ ಅನುಗ್ರಹವನ್ನೂ ಪಡೆಯಲಿ ಎಂತ ಪ್ರಾರ್ಥಿಸುವೆನು.

ಬಡ ವಿದ್ಯಾರ್ಥಿ.

ಸ್ವಾಮಿ ಸ್ವದೇಶಾಭಿಮಾನಿ ಪತ್ರಾಧಿಪರೇ!

ನನ್ನ ಕೆಲವು ಪಂಕ್ತಿಗಳಿಗೆ ತಮ್ಮ ಪತ್ರದ ಒಂದು ಮೂಲೆಯಲ್ಲಿ ಸ್ವಲ್ಪ ಸ್ಥಳ ಕೊಡುವಿರಾ? ಕಳದ ತಿಂಗಳಲ್ಲಿ ಅಮೇರಿಕದಲ್ಲಿ ನೆರೆದ ಕ್ರೈಸ್ತ ದೇವಾಲಯಗಳ ಪ್ರತಿನಿಧಿಗಳ ಮಹಾ ಸಭೆಯಲ್ಲಿ ಮಹಾಶಯ ರೆವರೆಂಡ್ ಚಾಲ್ಸ್, ಡಬ್ಲ್ಯು. ವೆಂಟ್ ಪಾದ್ರಿಸಾಹೇಬರು ಮಾಡಿದ ಭಾಷಣದಿಂದ ಎತ್ತಿ ತೆಗೆದದ್ದು.

ಎಷ್ಟರ ವರೆಗೆ ಕ್ರೈಸ್ತ ಜನರು ಪರಲೋಕನಿವಾಸದ ಹಕ್ಕು ತಮಗೆ ಮಾತ್ರವೆಂತ ಹೇಳುತ್ತಾರೊ ಮತ್ತು ಕ್ರೈಸ್ತ ಧರ್ಮವು ಮಾತ್ರ ಒಂದೇ ಮುಕ್ತಿಮಾರ್ಗವೆಂತ ಹೇಳುತ್ತಾರೊ, ಭೂಲೋಕದಲ್ಲಿರುವ ಇತರ ಮತಗಳ ಅನುಯಾಯಿಗಳನ್ನು ಅಪ್ರೀತಿಯಿಂದಲೂ, ತುಚ್ಛೀಕಾರದಿಂದಲೂ, ನಡಿಸುತ್ತಾರೋ, ಅಷ್ಟರ ವರೆಗೆ ಭೂಲೋಕದ ಜನಾಂಗಗಳಲ್ಲಿ ಶಾಂತಿಯೂ, ಪರಸ್ಪರ ಪ್ರೀತಿಭಾವವೂ ಇರದು.

ಜಪಾನಿನಲ್ಲಿ, ಚೀನಾದೇಶದಲ್ಲಿ ಮತ್ತು ಇಂಡ್ಯದಲ್ಲಿ ಬಹು ಕಾಲದಿಂದ ನಡೆದು ಬಂದ ಧರ್ಮಗಳನ್ನು ಕ್ರೈಸ್ತ ಮಿಶನೆರಿಗಳು ಸುಳ್ಳೆಂತ ಹೇಳಿ ಆ ಜನರ ಅಂತಃಕರಣಕ್ಕೆ ವೇಧನೆ ಕುಂಟುಮಾಡುತ್ತಾರೆ. ಜನರ ಮಧ್ಯೆ ಅಪ್ರೀತಿಯೂ ಕಲಹಗಳೂ ಬೆಳೆಸುತ್ತಾರೆ.

ಮಿಶನೆರಿಗಳು ಪ್ರಥಮತಾ ಒಂದು ದೇಶಕ್ಕೆ ಧರ್ಮದ ಹೆಸರಿನಲ್ಲಿ ಹೋಗಿ ಕಾಲಕ್ರಮದಲ್ಲಿ ತನ್ನ ದೇಶದ ಸರಕಾರದಿಂದ ಯುದ್ಧವೂ ಸುಲಿಗೆಯೂ ಬರಮಾಡಿದ್ದು ಲೋಕಚರಿತ್ರದಲ್ಲಿ ತೋರುವುದರಿಂದ ಪೂರ್ವ ದೇಶಗಳ ಜನಾಂಗಗಳಲ್ಲಿ "ಪ್ರಥಮಾ ಮಿಶನೆರಿ, ನಂತರ ವ್ಯಾಪಾರ, ನಂತರ ಯುದ್ಧನಾವೆಗಳು" ಎಂಬದು ಗಾದೆಮಾತಾಗಿದೆ

ಮಿಶನೆರಿಗಳು ತಮ್ಮ ಸ್ವದೇಶಕ್ಕೆ ವಾಪಾಸು ಹೋಗುತ್ತಲೇ ಕ್ರೈಸ್ತ ಮತಕ್ಕೆ ಸೇರಿದ ಜನರೆಲ್ಲರೂ ಕಾಡುಜನರೆಂತಲೂ, ನೈತಿಕ ಮತ್ತು ಸಾರಮಾರ್ಥಿಕ ವಿಷಯಗಳಲ್ಲಿ ಬಹಳ ಅಭೋಗತಿ ಹೊಂದಿದವರೆಂತಲೂ, ಅಬದ್ಧ ಹೇಳಿ ಆ ಜನಾಂಗಗಳಿಗೆ ಮಾನಹಾನಿ ಮಾಡುತ್ತಾರಾದುದರಿಂದ ಮಿಶನೆರಿಗಳು ಭೂಲೋಕದಲ್ಲಿ ಶಾಂತಿವೃದ್ಧಿಸುವದರಲ್ಲ, ಕ್ಷಾಂತಿಯನ್ನು ನಾಶಪಡಿಸುವಂಥವರಾಗಿರುತ್ತಾರೆ. ಮತ್ತು ಅಕ್ರೈಸ್ತ ಜನಾಂಗಗಳ ಮಧ್ಯೆ ಒಬ್ಬರಿಗೊಬ್ಬರು ಧರ್ಮದ ಹೆಸರಿನಲ್ಲಿ ತುಚ್ಛೀಕರಿಸುವುದನ್ನು ಬಿಟ್ಟು ವಿನಃ ಭೋಕದಲ್ಲಿ ಶಾಂತಿ ಇರದು.

ಈ ಅಭಿಪ್ರಾಯವು ಸಾಶ್ಚಾತ್ಯ ಜನಾಂಗಗಳ ಮಧ್ಯೆ ಹೇಗೆ ಬೆಳೆಯುತ್ತಾ ಬರುತ್ತದೋ ಹಾಗೆ ಇಪ್ಪರವರೇಗೆ ಕ್ರೂರತ್ವ ಅನುಭವಿಸಿದ ಪೂರ್ವದೇಶಗಳ ಜನರಿಗೆ ಶಾಂತಿ ಕುಂಟಾಗುವುದು.

ದಾ ಸು ಭಟ್ಟ.

ಯುದ್ಧ ಸಮಾಚಾರ.

ತಾ 16ನೇ ನವಂಬರ.

ಕ್ರೈತದ್ವೀಪದ ಕರಾವಳಿಯಲ್ಲಿ ಜರ್ಮನರು ಬಲಂತರ್ಗಾಮಿ ನಾವೆಗಳನ್ನು ಇಡಲು ಅಡೆಗೊಳಿಸಿದ್ದ ತಳಗ್ಗಳು ಬ್ರಿಟಿಷರಿಗೆ ದೊರೆಕರುತ್ತವೆ.

ಪಶ್ಚಿಮರಣರಂಗದಲ್ಲಿ ಈ ದಿನ ವಿಶೇಷ ಘಟನೆಗಳೇನೂ ನಡೆಯಲಿಲ್ಲ. ಡೆನ್‌ಕರ್ಕ್‌ನ ಆಜುಬಾಜಿನಲ್ಲಿ ಜರ್ಮನರ ಬಾಯು ನಾವೆಗಳು ಸಿಡಿಮದ್ದುಗಳ ಕೋಟೆಗಳನ್ನು ಏರಾಡಿರುತ್ತನೆ. ಅಲ್ಲಿ ಪ್ರಜಾಜನರಲ್ಲಿ ಕೆಲವರು ಈ ಸಿಡಿಮದ್ದುಗಳಿಗೆ ತುತ್ತಾಗಿರುತ್ತಾರೆ

ಬಾಲ್ಕಾನ್ ಪ್ರಾಂತ್ಯದಲ್ಲಿ ಸೆರ್ನ ನದಿಯ ಸಮೀಪ ಫ್ರೆಂಚರಿಗೂ ಬಲ್ಗೇರಿಯನ್ನರಿಗೂ ಕಾಸುಗಳ ವರೆಗೆ ಘೋರ ಯುದ್ಧವು ನಡೆದಿರುತ್ತದೆ. ಬಲ್ಗೇರಿಯನರ ಮೂರು ಡಿವಿಜನ್ ಸೈನಿಗಳು ಫ್ರೆಂಚರ ನೆಲೆಗಳ ಕೇಂದ್ರಸ್ಥಾನವನ್ನು ಛಿದ್ರಿಸಿ ಬಿಡಲು ವಿಶೇಷ ಪ್ರಯತ್ನಪಟ್ಟು ಪ್ರಯೋಜನ ಹೊಂದದೆ ಬಹಳ ನಷ್ಟಪಟ್ಟು ಹಿಮ್ಮೆಟ್ಟಿದವು. ಇಲ್ಲಿ ಫ್ರೆಂಚರಿಗಾದ ಜಯವು ಏನೆಂದೂ ಸಂದೇಹ ವಿಲ್ಲದ್ದಾಗಿದೆ

ನವಂಬರ ಹತ್ತೀಳು ೧೩ರ ವರೆಗೆ ಫ್ರೆಂಚರ ಮತ್ತು ಬ್ರಿಟಿಷರ ೧೩೦,೦೦೦ ಸೈನಿಕರು ಸಲೋನಿಕದಲ್ಲಿ ಬಂದಿಳಿದಿರುತ್ತಾ ರೆಂತ ಸಲೋನಿಕದಲ್ಲಿರುವ ಅಸ್ಕ್ವಿಯಾನನು ವಾರ್ತೆ ಕಳುಹಿಸಿರು ತ್ತಾರೆ ಈ ಪ್ರೆಕಿ ೮೦ ಸಾವಿರ ಸರ್ಬಿಯಕ್ಕೆ ಹೋಗಿರುವದ

ಕೆಚಿನರ್ ಪ್ರಭುಗಳವರು ಈಜಿಪ್ತ್‌ದೇಶದ ಕೈ ಕವಿಸಲ ರೊಡನೆ ಮಧ್ಯಂಸಿನಲ್ಲಿರುವರೆಂತ ಇಟಲಿಯನರಿಂದ ಬಂದ ವಾರ್ತೆ ಯಿಂದ ತಿಳಿಯುಬರುವದು. ಅಫೆಸ್ಸಿನಲ್ಲಿಯೂ ಈ ವಾರ್ತೆಯ ಪ್ರಕಟವಾಗಿರುವದು.

ಅಸ್ಟ್ರಿಯನರ ವಾಯುನಾವೆಗಳು ಇಟಲಿಗೆ ಸೇರಿದ ಬ್ರಿಸಿ ಸಿಯ ಪಟ್ಟಣದ ಮೇಲೆ ಬೊಂಬನ್ನು ಎಸೆದಿರುತ್ತದೆ. ಇದರಿಂದ ಏಳು ಮಂದಿ ಹತರಾಗಿರುತ್ತಾರೆ ೧೦ ಮಂದಿ ಗಾಯಪೊಡೆ ದಿರುತ್ತಾರೆ.

ತಾ. ೧೭ನೇ ನವಂಬರ.

ಅಮೇರಿಕದ ವೈಹೆಕನ್ ಮತ್ತು ನ್ಯೂಬೆರ್ನ್‌ಯ ಮೂರು ಸ್ಥಳಗಳಲ್ಲಿ ಪುನಃ ಬೆಂಕಿಯ ಅನಾಹುತಗಳು ಸಂಭವಿಸಿರುವವು. ಒಂದು ಕಡೆಯಲ್ಲಿ ವಿತ್ತರ ಬ್ಯಾಕ್ಟಿ ತಯಾರಿಸಿದ್ದ ೫೦೦ ಕುಮುರೆಗಳು ಸುಟ್ಟು ಹೋಗಿರುವವು. ಇದಕ್ಕೆ ಜರ್ಮನರು ಕಾರಣರೆಂತ ಊಹಿಸಲ್ಪಟ್ಟಿದೆ. ಈ ಸ್ಥಳಗಳಿಂದ್ದ ಓಡಿಹೋಗುತ್ತಿದ್ದ ಕೆಲವರ ಮೇಲೆ ಕಾವಲುಗಾರನು ರಿವೊಲ್ವರ್ ಹಾರಿಸಿದನು ಆದರೆ ಯಾರಿಗೂ ತಗಲಲಿಲ್ಲ. ಇಂಥಾ ಕುಹಕೋತ್ಪಾಗಳನ್ನು ನಡಿಸ ಬೇಕೆಂದು ಪ್ರಯತ್ನ ನಡಿಸಿದ ಜರ್ಮನರು ಮತ್ತು ಟೊಂಬುಗಳ ಅವಗಡಗಳನ್ನುಂಟು ಮಾಡಲು ಸಹಾಯ ಮಾಡುತ್ತಿರುವ ಅಮೆ ರಿಕಾದಲ್ಲಿರುವರ ಹೆಸರುಗಳನ್ನು ಫೇ ಎಂಬವನು ಹೇಳಲು ಒಪ್ಪಿ ಕೊಂಡಿರುತ್ತಾನೆ. ಜರ್ಮನಿಯಲ್ಲಿರುವ ದೊಡ್ಡ ದೊಡ್ಡ ಹುದ್ದೆ ದಾರರು ಫೇ ಎಂಬವನಿಗೆ ಮಸಲತ್ತು ಕೊಟ್ಟು ಆಯಾ ಪ್ರೊವಿನ್ಸು ಗಳಲ್ಲಿರುವ ಜರ್ಮನರ ಕೂಡೆ ಈ ವಿಷಯ ಆಲೋಚನೆ ನಡಿಸ ಬೇಕೆಂದು ಹೇಳಿದ್ದರಂತೆ.

ರುಶ್ಯನರಿಗೂ ಜರ್ಮನರಿಗೂ ಬೋಜಸ್ ಎಂಬ ಸ್ಥಳದಲ್ಲಿ ರಾತ್ರಿ ಹಗಲು, ಕಾಳಗವು ನಡಿಯುತ್ತಿದೆ. ಜರ್ಮನರು ಪ್ರೊಸ್ ನದಿಯ ಆಚೆ ದಡದಲ್ಲಿರುವರು. ಬೋಜಸ್ ಎಂಬ ಸ್ಥಳವು ಚ್ಯೆಸ್ಟೋ ವಿಕ್ಸ್‌ಗೆ ೧೦ ಮೈಲು ಪಶ್ಚಿಮದಲ್ಲಿದೆಂತ "ಮೊರ್ನಿಂಗ್ ಪೋಸ್ಟು" ಎಂಬ ಪತ್ರಿಕೆಯ ಬಾತ್ಮೀದಾರರು ತಿಳಿಸಿರುತ್ತಾರೆ.

ಡ್ವಿನ್‌ಸಿಕ್ ಎಂಬಲ್ಲಿ ಶತ್ರುಗಳು ಡ್ವಿನಾನದಿಯನ್ನು ದೋಣಿ ಗಳ ಮೂಲಕ ದಾಟಲು ಪ್ರಯತ್ನಿಸಿದರು ಆದರೆ ಸಾಧ್ಯವಾಗದೆ ಏಮ್ಮೆಟ್ಟಿರುತ್ತಾರೆ. ಡ್ವಿನ್‌ಸಿಕಿನ ಪೂರ್ವದಲ್ಲಿರುವ ಸ್ಟೇಟನ್ ಸಿಷ್ಟಿಕ್ಟೈನಲ್ಲಿ ರುಶ್ಯನರು ಕೆಲವು ಕಂದಕಗಳನ್ನು ಜರ್ಮನರಿಂದ ಎಲತ್ಕಾರದಿಂದಿಂದಂತೆ ಕಸಕೊಂಡರು.

ಒಂದು-ಫ್ಲಫಲೆನ್ ನಾವೆಯು ಡಿನ್‌ಸಿಕಿನ ಮೇಲೆ ಹಾರಿ ಕೆಲವು ಟೊಂಬುಗಳನ್ನು ಎಸೆದಿರುತ್ತದೆ. ಈ ಟೊಂಬುಗಳಲ್ಲಿ ಒಂದಂಶವು ಜರ್ಮನ್ ಕಂದಕಗಳ ಮೇಲೆ ಬಿದ್ದ ಜರ್ಮನ್ ಸೈನಿಕರಲ್ಲಿ ಭೀತಿಯನ್ನೂ ವಿಶೇಷ ನಷ್ಟವನ್ನೂ ನೂಡಿರುತ್ತದ್ದು ಪಾರ್ಸ್ಬರ್ಗಿಸ್ಕ್ ಪ್ರಾಂತ್ಯದಲ್ಲಿ ಶತ್ರುಗಳು ಭೀವವ ಮರವಿ ಇಲ್ಲದೆ ಮೇಲ್ಕಾಯು ತ್ತಿರುವರು.

ಬಲ್ಗೇರಿಯನ್ನರ ಸೇನೆಗೆ ಬೆಂಬಲ ಸೇನೆಯು ಬಂದು ಕೂಡಿರು ವದರಿಂದ ಅವರು ಡೆಡೊಪೋ ಪ್ರಾಂತ್ಯದಲ್ಲಿ ಬಾಬುನ ಕಣಿವೆಯ ಪೂರ್ವದಲ್ಲಿ ಮುಂದರಿಯಲು ಪ್ರಾರಂಭಿಸಿದ್ದಾರೆ. ಇದರಿಂದ ಪ್ರಿಲಪ್ ಮತ್ತು ಮೊನಸ್ಟಿರಿನಲ್ಲಿ ಭಯಕ್ಕಾಸ್ಪದ ಉಂಟಾಗಿರುವದು ಎಂತ ಜರ್ಮನ್ ಸೇನೆಯಿಂದ ವಾರ್ತೆ ಬಂದಿರುತ್ತದೆ ಫ್ರೆಂಚರು ಗ್ರೆಡ್‌ಸ್ಕೊ ಪ್ರಾಂತ್ಯದಲ್ಲಿ ಎರಡು ಸ್ಥಳಗಳಲ್ಲಿ ಹಿಂದಿರಿದಿರುತ್ತಾರೆಂತ ಜರ್ಮನರ ವಾರ್ತೆಯಿಂದ ತಿಳಿದುಬರುವದು.

ತಾ ೧೫ರಲ್ಲಿ ಪೂರ್ವದಲ್ಲಿರುವ ಬಲ್ಗೇರಿಯನರ ಸೇನಿಕರು ಸೆರ್ನನದಿಯ ಎಡದಡದಲ್ಲಿ ಮಿತ್ರ ಸೈನಿಕರನ್ನು ಕರಿಜವಾಗಿ ಎದು ರಿಸಿರುತ್ತಾರೆ ಆದರೆ ಪ್ರತಿ ಒಂದು ಕಡೆಯಲ್ಲಿಯೂ ಬಲ್ಗೇರಿಯ ನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ. ವಾರ್ದರ್ ನದಿಯ ಎಡದಡದಲ್ಲಿ ಶಾಂತತೆಯು ನೆಲೆಯಾಗಿರುತ್ತದೆ ಬ್ರಿಟಿಷ ಮತ್ತು ಫ್ರೆಂಚ್‌ಸೈನ್ಯವು ಸಲೋನಿಕದಲ್ಲಿ ಏನೆಂದೂ ತೆದೆಯಲ್ಲದೆ ಇಳಿಯು ತ್ತಿರೆಂತ ಪಾರಿಸ್ ನಗರದಲ್ಲಿ ಪ್ರಕಟವಾಗಿದೆ.

ಫ್ರೆಂಚ್ ಸರಕಾರದೊಂದಿಗೆ ಆಲೋಚನೆ ನಡಿಸುವರೆ ಮಿ ಅಸ್ಕ್ವಿತ್, ಸರ್ ಎಡ್ವರ್ಡ್‌ಗ್ರೇ, ಮಿ ಬಾಲ್ಫೋರ್, ಮಿ ಲೈಯ್ಡ್ ಜಾರ್ಜರವರು ಪರಿವಾರ ಸಹಿತ ಪಾರಿಸ್ ನಗರಕ್ಕೆ ಹೋಗಿರು ವರು

ತಾ. ೧೮ನೇ ನವಂಬರ

ಇಂಗ್ಲಿಷ್ ಕಾಲಿವೆಯಲ್ಲಿ "ಎಂಜಲಿಯ" ಎಂಬ ಆಸ್ಪತ್ರೆ ಹಡಗವು ಸಿಡಿಮದ್ದಿನ ಗಣಿಗೆ ತಾಗಿ ಸಿಡಿದಿರುತ್ತದೆ. ಹಡಗದಲ್ಲಿದ್ದ ೪೭೫ ಮಂದಿಯ ನೈಕಿ ಸುಮಾರು ೫೦೦ ಮಂದಿ ರಕ್ಷಿಸಲ್ಪಟ್ಟಿರು ತ್ತಾರೆ ಈ ಹಡಗದಲ್ಲಿದ್ದವರನ್ನು ರಕ್ಷಿಸಲಿಕ್ಕೆ ಹೋದ "ಲುಸಿ ತಾನಿಯ" ಎಂಬ ನಾವೆಯು ಮತ್ತೊಂದು ಸಿಡಿಮದ್ದಿನ ಗಣಿಗೆ ತಾಗಿ ಮುಣಿಗಿರುತ್ತದೆ. ತೊಪೆಡೊ ದೋಣಿಗಳು ಸಹಾ ಸಹಾ ಯಕ್ಕೆ ಹೋಗಿ ಕೆಲವರನ್ನು ಬದ್ರುತಿಸಿರುತ್ತದೆ ಈ ವಾರ್ತೆಯನ್ನು ಕೇಳಿದ ಚಕ್ರವರ್ತಿಯವರು ಈ ರೀತಿ ಹೇಳಿರುವರಂ— ಈಟಿಗೆ ನನ್ನನ್ನು ಕಾಲಿವೆಯಿಂದ ದಾಟಿಸಿದ "ಎಂಜಲಿಯ" ಹಡಗವು ಮುಣುಗಿಹೋಯಿತೆಂಬ ವಾರ್ತೆ ಕೇಳಿ ಬಹಳವಾಗಿ ವಿಷಾದಪಡು ತ್ತೇನೆ ಕತಕೇನರು ಈ ಭಯ ಕರವಾದ ಆವಘಡದಲ್ಲಿ ವೀರವಿಾರಿ ಕಪ್ಪಕೊಳ್ಳಿಗರಾಗಲೆಂತ ಕಾನು ನಂಬುತ್ತೇನೆ

ಯುದ್ಧದಲ್ಲಿ ಕಾರ್ಯಕಾರ್ಯಗಳನ್ನು ನಡಿಸಿದವರಲ್ಲಿ ೧೮ ಮಂದಿಗೆ ವಿಕ್ಟೋರಿಯಾ ಕ್ರೊಸ್ ಎಂಬ ಬಿರುದು ಕೊಡೋಣಾಗಿ ಯದೆ

ಮಂತ್ಯಾರ್ಟ್ಯಾರ್ಟ್ ಎಂಬ ಸ್ಥಳಗಳಲ್ಲಿ ನಡೆದ ಕದನದಲ್ಲಿ ರೈಫಲ್‌ಮೇನ್ ಕಲ್ಲೆರ್ ತಿವ್ಪಾ ಎಂಬ ಗುರ್ಕಾಸಿಪಾಯಿಯು ಹೆಚ್ಚಿನ ಧೈರ್ಯಸಾಹಸಗಳನ್ನು ತೋರಿಸಿ ಕಾನಾಗಿ ಗಾಯ ಒಡೆ ದಿದ್ದರೂ ಎದೆಗುಂದದೆ ಕರಿಗಾಯ ಒಡೆದ ಒಬ್ಬ ಸಿಪಾಯಿ ಯನ್ನು ರಕ್ಷಿಸಿ ಆವಸೊಡನೆ ಜರ್ಮನ್ ಕಂದಕಗಳ ಹಿಂದೆ ರಾತ್ರಿ ಹಗಲು ನಿಂತು ಕಡೆಗೆ ಒಂದು ದಿನ ಬೆಳಿಗ್ಗೆ ಅವನನ್ನು ಜರ್ಮನರ ಸುಗಿಗೆಗಳಿಂದ ಸುರಕ್ಷಿತವಾಗಿ ದಾಟಿಸಿಕೊಂಡು ಬಂದನು. ಆನಂ ತರ ಹಿಂತಿರುಗಿ ಫೈಯ್ ಒಡೆದ ಇಬ್ಬರು ತುರ್ಕಿಸಿಪಾಯಿಯರನ್ನು ತಂದನು ಕಡೆಗೆ ಹಗಲು ಹೊತ್ತಿಗೆನೇ ಹೊಗಿ ಶತ್ರುಗಳ ಗುಂಡಿ ನ ಏಟಿಗೆ ಒಳಬದ್ದ ಒಬ್ಬ ಬ್ರಿಟಿಷ ಸೈನಿಕನನ್ನು ಸುರಕ್ಷಿತವಾದ ಸ್ಥಳಕ್ಕೆ ನೈದನು ಈ ಶೌರ್ಯಕಾರ್ಯಗಳ ಸನ್ಮಾನಾರ್ಥವಾಗಿ ತಿವ್ಪಾ ಎಂಬ ಈ ಗುರ್ಕಾಸಿಪಾಯಿಗೆ ವಿಕ್ಟೋರಿಯಾ ಕ್ರೊಸ್ ಎಂಬ ಬಿರುದು ಕೊಡೋಣಾಗಿಯದೆ.

ಪಾರಿಸಿಗೆ ಹೋದ-ಬ್ರಿಟಿಷ ಮಂತ್ರಿಗಳು ಫ್ರೆಂಚ ಮಂತ್ರಿಗ ಕೊಡನೆ ಕೂಡಿ ಆಲೋಚನೆ ನಡಿಸಿ ಲಂಡನಿಗೆ ಹಿಂದಿರುಗಿರುತ್ತಾರೆ

ತಾ. ೧೯ನೇ ನವಂಬರ.

ಫ್ರೆಂಚರು ಜರ್ಮನರ ಕಂದಕಗಳ ಮೇಲೆ ತೋವು ಹಾರಿಸಿ ಜರ್ಮನರು ನಿರ್ಮಿಸಿರುವ ಆಶ್ರಯ ಸ್ಥಳಗಳನ್ನು ಹಾಳುಮಾಡು ತ್ತಿದ್ದಾರೆಂಬದೇ ಈ ದಿನದ ಪಶ್ಚಿಮ ರಣರಂಗದ ವಾರ್ತೆಯಾಗಿದೆ.

ಜರ್ಮನರು ಒಂದು ವೇಳೆ ಯುನೈಟೆಡ್ ಸ್ಟೇಟನ ಪ್ರೆಸಿ ಡೆಂಟ್ ವಿಲ್ಸನರ ಮೂಲಕ ಮಿತ್ರರಾಜ್ಯಗಳೊಡನೆ ಸಂಧಾನವನ್ನು ಮಾಡಲಿಕ್ಕಿದ್ದಾರೆಂತ "ನ್ಯೂಯೋರ್ಕ ಟೈಮ್ಸ್" ಪತ್ರಿಕೆಯಲ್ಲಿ ಪ್ರಕ ಟವಾಗಿರುವದು. ಯುನೈಟೆಡ್ ಸ್ಟೇಟ್ ಸರಕಾರದ ಕಡೆಯಿಂದ ಈ ವಿಷಯದಲ್ಲಿ ಯಾವ ವಾರ್ತೆಯೂ ಇಲ್ಲ; ಆದರೆ ಪ್ರೆಸಿಡೆಂಟ್ ವಿಲ್ಸನರು ಸಂಧಾನ ಮಾಡಲು ಮನಸ್ಸುಳ್ಳವರಾಗಿದ್ದಾರೆಂತ "ಮೋ ರ್ನಿಂಗ್ ಪೋಸ್ಟು" ಪತ್ರಿಕೆಯ ವಿಶಿಂಗ್ಟನ್ ಬಾತ್ಮೀದಾರರು ತಿಳಿಸು ವರು.

ಒಲಾಯ ಎಂಬಲ್ಲಿ ಜರ್ಮನರನ್ನು ರುಶ್ಯನರು ಹಿಂದಕ್ಕಟ್ಟಿ ರುತ್ತಾರೆ ಜರ್ಮನರು ಅನೇಕ ಶವಗಳನ್ನು ಹೂಣಿಡದೆ ಸ್ಪೆಂಟನ್ ಸರೋವರದ ಬಳಿ ಬಿಟ್ಟುಹೋಗಿರುತ್ತಾರೆ.

ಬ್ರಿಟಿಷರು ಡರ್ದನೆಲ್ಲಿನ ಕ್ರಿತಿಯ ಪ್ರಾಂತ್ಯದಲ್ಲಿ ಶತ್ರುಗಳ ಮೇಲೆ ಬಿದ್ದು ಜಯಪ್ರದರಾಗಿರುತ್ತಾರೆ. ಬ್ರಿಟಿಷರು ಬಹಳ ಚಾಣ್ಯ ತೆಯಿಂದ ತಕ್ಕ ಸಿದ್ಧತೆಯನ್ನು ಮಾಡಿದ್ದರು ಸಿಡಿಮದ್ದಿನ ಮೂರು ಗಣಿಗಳು ಹಾರಿದವು ಕೂಡಲೇ ಕಾಲಾಳು ಸೈನಿಕರು ಮುಂದೆ ರಿದು ಕ್ರಿತಿಯ ದ ಪೂರ್ವ ಮತ್ತು ಪಶ್ಚಿಮದಲ್ಲಿರುವ ತುರ್ಕರ ಕಂ ದಕಗಳನ್ನು ಹಿಡಿದುಕೊಂಡರು. ಇವುಗಳನ್ನು ಪುನಃ ಪಡೆಯಲು ಯತ್ನಿಸಿದ ಶತ್ರುಗಳು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿದರು.

ತಾ. ೨೦ನೇ ನವಂಬರ.

ಅಲ್ಟಿಸಿನಲ್ಲಿ ಕೋಪು ಕಾಳಗವು ನಡೆಯುತ್ತಿದೆ ಜರ್ಮ ನರ ಎಂಟು ವಾಯುನಾವೆಗಳು ಲುನವಿಲ್ಲಿಯ ಮೇಲೆ ಕಾರಲು ಪ್ರಯತ್ನಿಸಿದವು. ಆದರೆ ಫ್ರೆಂಚರ ವಾಯುನಾವೆಗಳು ಅವನ್ನು ಓಡಿಸಿರುತ್ತವೆ ಫ್ರೆಂಚರ ತೋಪುಗಳಿಂದ ಜರ್ಮನರು ಮಾಡಿ ಕೊಂಡ ಅನೇಕ ಆಶ್ರಯ ಸ್ಥಳಗಳು ಪಾಳಾಗಿಹೋಗಿರುತ್ತವೆ.

ಜರ್ಮನರ ಒಂದು ದೊಡ್ಡ ಜಿಪಲಿನ ನಾವೆಯು ಬೆಂಕಿ ತಗಲಿ ನಾಶವಾಯಿತು ಎಂತ ಕೊಪೆನ್‌ಹೆಗೆನ್‌ನಿಂದ ವಾರ್ತೆ ಬಂದಿದೆ.

ಬ್ರಿಟಿಷ ಮತ್ತು ಫ್ರೆಂಚ್ ಸೈನಿಕರು ಕೆಮರೂನಿನಲ್ಲಿ ಟಿಟಾಟಿ ಎಂಬ ಸ್ಥಳವನ್ನು ಹಿಡಿದಿರುತ್ತಾರೆ ಬ್ರಿಟಿಷರು ಬಸಿಯೋ ಪರ್ವ ತದ ಶಿಖರವನ್ನು ಹಿಡಿದ ಕೊಂಡದ್ದರಿಂದ ಅಲ್ಲಿದ್ದ ಜರ್ಮನರು ಓಡಿಹೋಗಿರುತ್ತಾರೆ. ಶತ್ರುಗಳು ಇಲ್ಲಿ ಪರ್ವತದ ತಿಕಾರದಿಂದ ಡೈನಾಮೆಟ್ ಬೊಂಬುಗಳನ್ನು ಬಿಸಾಡಿದರು ಇಲ್ಲಿ ಶತ್ರು ಸೇನೆ ಯಲ್ಲಿ ೨೩ ಬಿಳಿ ಜನರು, ೨೦೦ ಮಂದಿ ಅಲ್ಲಿಯ ದೇಶ್ಯ ಸಿಪಾಯರು ಇದ್ದರು ಈ ಸೈಕಿ ಒಬ್ಬ ಯುರೋಪಿಯನನು ಹತನಾ ವನ ಒಬ್ಬನು ಗಾಯ ಒಡೆದನು. ೯ ಮಂದಿ ಕೆರೆ ಬಿದ್ದರು. ೪ ಮಂದಿ ಸಿಪಾಯಿರೂ ಒಂದು ಯಂತ್ರಮೂಲಕ ನಡಿ ಯುವ ಫಿರಂಗಿಯೂ ಬಹಳ ಸಾಮಾನುಗಳೂ ಬ್ರಿಟಿಷರಿಗೆ ಸಿಕ್ಕಿ ದವು ಬ್ರಿಟಿಷರಲ್ಲಿ ಇಬ್ಬರು ಆಫೀಸರರು ಹತರಾದರು. ಇಬ್ಬರು ಗಾಯ ಒಡೆದರು ಒಬ ಸಾರ್ಜೆಂಟನು ಹತನಾದನು. ೫೦ ಸೈನಿಕರು ಗಾಯ ಒಡೆದರು.

ಬಾಲ್ಕನ್ ಪ್ರೊವಿನಲ್ಲಿ ಜರ್ಮನರು ಪುನಃ ನಷ್ಟಪಟ್ಟಿರುತ್ತಾ ರೆ ರಿಗ್ ಪ್ರಾಂತ್ಯದಲ್ಲಿ ರುಶ್ಯನರ ತೋಪುಗಳ ಹೊಡತವನ್ನು ತಡೆಯಲಾರದೆ ಜರ್ಮನರು ಅಯುಧಸಾಮಾಗ್ರಿಗಳನ್ನು ಬಿಟ್ಟು ಪಶ್ಚಿಮ. ನಿಸಿಕಿನ ಕಡೆಗೆ ಹಿಂದರಿದಿರುತ್ತಾರೆ. ಸ್ವೈರ್ ಎಂಬ ಲ್ಲಿಯ ಜರ್ಮನರುಸೋತುಹೋಗಿರುತ್ತಾರೆ ಯಿಷ್ಯನರು ಚಾಟೇ ರಿಸ್ಕ್ ಎಂಬ ಸ್ಥಳವನ್ನು ಪುನಃ ಸ್ವಾಧೀನವಾಡಿಕೊಂಡು ಒಂದ ಪ್ರಾಮುಖ್ಯ ಗ್ರಾಮವನ್ನು ಹಿಡಿದಿರುತ್ತಾರೆ.

ಸರ್ವಿಯರು ಬಹಳ ಅಪಾಯಕರವಾದ ಸ್ಥಿತಿಯಲ್ಲಿರುವರೆಂತ ಅಥೆನ್ಸಿನ ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಬಲ್ಗೇರಿಯನರ ಸೇನೆಯನ್ನು ತಡೆದು ಮೊನಸ್ಟಿರನ್ನು ಕಾಪಾಡುವದ ಸರ್ವಿಯನರಿಗೆ ಅಸಾಧ್ಯವಾಗಿದ್ದೆಂತ ಈ ಪತ್ರಿಕೆಗಳ ಅಭಿಪ್ರಾಯ ಸರ್ವಿಯನರ ಮುಖ್ಯ ಸೇನೆಯು ಕಾಚಿನಿಕ್ ಕಣಿವೆಯಲ್ಲಿ ಇನ್ನೂ ಬಲ್ಗೇರಿಯನರೊಡನೆ ಕಾದಾಡುತ್ತಿದೆ ಫ್ರೆಂಚಸೇನೆಗಳ ಸ್ಥಿತಿಯ ಅನುಕೂಲವಾಗಿದೆ ಇದಕ್ಕೆ ಬೆಂಬಲ ಸೇನೆಯು ಬೇಗನೆ ಬಂದೆ ಕೂಡಿದರೆ ಬಲ್ಗೇರಿಯನರು ತಮ್ಮ ಸೇನೆಯನ್ನು ಇತರ ಸ್ಥಳಗಳ ವೈಯ್ಯಬೇಕಾಗಿರುವದು. ಇದರಿಂದ ಮೊನಸ್ಟಿರ್ ಉಳಿದಂತಾಗ ವದು. ಸ್ಟ್ರುಮಿನ್ನ ಡಿಸ್ಟ್ರಿಕ್ಟಿನಲ್ಲಿ ಬಲ್ಗೇರಿಯನರು ಫ್ರೆಂಚರ ಮೇಲೆ ಬಿದ್ದು ಬಹಳ ನಷ್ಟಪಟ್ಟು ಹಿಮ್ಮೆಟ್ಟಿರುತ್ತಾರೆ.

ಫ್ರೆಂಚ್ ಕೆಬಿನೆಟ್ ಮಂತ್ರಿಯಾದ ಎಮ್. ಡೆನಸ್ ಕೊಚಿನ ವರು ಅಥೆನ್ಸಿಗೆ ಹೋಗಿ ಗ್ರೀಕ ಅರಸರಾದ ಕನ್‌ಸ್ಟಂಟಿನರವರಿಗೆ ಅಲ್ಲಿಯ ಪ್ರಧಾನ ಮಂತ್ರಿಯವರಿಗೂ ಭೇಟಿಕೊಟ್ಟಿರುತ್ತಾರೆ.

ಕಿಚನರ್ ಪ್ರಭುಗಳವರು ತಾ. ೨೧ರಲ್ಲು ಅಥೆನ್ಸಿನ ಕನ್‌ಸ್ಟಂಟಿನ್ ಅರಸರಿಗೆ. ಭೇಟಿಕೊಟ್ಟಿರುತ್ತಾರೆ. ಆನಂತ ಅಲ್ಲಿಯ ಪ್ರಧಾನ ಮಂತ್ರಿಗಳವರೊಡನೆ ಮಾತನ್ನಾಡಿ ಎಲ್ಲಿಗೆ ಹೊರಟುಹೋಗಿರುವರು.

ಇಟಲಿಯನರಿಗೆ ಕಾರ್ಸೊ ಪ್ರಾಂತ್ಯದಲ್ಲಿ ಜಯ ಉಂಟಾಗಿರುವದು. ಸಾನ್‌ಮಿಟ್ಟಿಲ್ಲಿಯ ತಿಖುರದಿಂದ ಇಸೊನ್ಜೊದ ತರಿಗಿನ ಪರ್ವತ ಪ್ರಾಂತ್ಯವನ್ನು ಇಟಲಿಯನರು ಸ್ವಾಧೀನಮಾಡಿಕೊಂಡಿರುತ್ತಾರೆ. ಶತ್ರುಗಳು ಈ ಪ್ರಾಂತ್ಯವನ್ನು ಪುನಃ ಹಿಡಿಯಲು ಪ್ರಯತ್ನಿಸಿ ಬಲು ಸಾವುಮೇಲ್ಪಾಯಿದುಬಂದರು. ಪ್ರತಿ ಸಾರಿಯೂ ಬಹಳ ಸಪ್ಪೆಬಟ್ಟು ಕಕ್ಕಾಬಿಕ್ಕಿಯಿಂದ ಓಡಿಹೋದರು. ಕಡಿಗೆ ಇಟಲಿಯನರು ರಾತ್ರಿಕಾಲ ಕಂದಕಗಳಿಂದ ಮೇಲಕ್ಕೆ ಬಂದು ಶತ್ರುಗಳನ್ನು ಚದರಿಸಿದರು. ಆಸ್ಟ್ರಿಯನರ ವಾಯು ನಾವೆಗಳು ವೆರೋನ್ಸ್, ಗ್ರೇಡೋ ಮತ್ತು ಉಡೈನಿನ ಮೇಲೆ ಬೊಂಬುಗಳನ್ನು ಎಸೆದಿರುತ್ತವೆ ವೆರೊನ್ಸ್‌ದಲ್ಲಿ ಸಾಲ್ಮಂದಿಗೆ ಜಕಂ ಆಗಿದೆ ಉಳಿದವರಲ್ಲಿ ೧೩ ಮಂದಿ ಹತರಾಗಿರುವರು, ೨೭ ಮಂದಿ ಗಾಯಪೊಂದಿದವರು ಈ ಪೈಕಿ ೮ ಮಂದಿ ಮಾತ್ರ ಸೈನಿಕರು.

ಇಟಲಿಯನರು ಶತ್ರುಗಳೊಡನೆ ಪ್ರತ್ಯೇಕವಾಗಿ ಸಂಧಾನವಾತಿ ಕೊಳ್ಳುವದಿಲ್ಲವೆಂತ ಮಿತ್ರರೊಡನೆ ಕರಾರು ಮಾಡಿಕೊಂಡಿರುತ್ತಾರೆ

ಉತ್ತರ ಹಿಂದೂಸ್ಥಾನ.

ಅಲಹೋದಿನ ರಾಜಧಾನಿಯಲ್ಲಿರುವ ಮೊಕದ್ದಮೆಯಲ್ಲಿ ಸಾಕ್ಷಿ ಹೇಳ್ಕೊಂಡಿದ್ದ ೨೦ ಮಂದಿಯಲ್ಲಿ ೧೬ ಮಂದಿಯ ಶಿಕ್ಷೆಯನ್ನು ವೈಸರಾಯ್ ಪ್ರಭುಗಳವರು ಕಡಮೆ ಮಾಡಿ ೬ ಮಂದಿಯ ಶಿಕ್ಷೆಯನ್ನು ಇದ್ದಹಾಗೆ ಇರಗೊಡಿಸಿರೆಂದು ಕಾಯಂ ಕಂಚಿಕೆಯಲ್ಲಿ ತಿಳಿಸಿತ್ತಷ್ಟೆ ಈ ೬ ಮಂದಿಯನ್ನು ಇವೇ ತಾ ೧೬ರಲ್ಲಿ ಲಾಹೋರ್ ಸೆಂಟ್ರಲ್ ಜೈಲಿನಲ್ಲಿ ನಾಶಿಗೆ ಹಾಕಿದರು.

ಹಿಂದೂಸ್ಥಾನದಲ್ಲಿ ಒಂದನೆಯಲ್ಲಿರುವ ಜರ್ಮನರಲ್ಲಿ ಸ್ತ್ರಾಯಸಂದ ಸುಮಾರು ೬೦೦ ಮಂದಿ ಗಂಡಸರೂ ಹೆಂಗಸರೂ ಮಕ್ಕಳೂ 'ಗೊಲ್ಕುಂಡ' ಹಡಗದಲ್ಲಿ ಹಿಂದೂಸ್ಥಾನದಿಂದ ಕಳುಹಿಸಲ್ಪಡುವರೆಂದು ತಿಳಿಸಿತ್ತಷ್ಟೆ ಈ ಪೈಕಿ ಸುಮಾರು ೨೦೦ ಮಂದಿ ದಿನಾವರದಿಂದ ಸ್ಪೆಶ್ಯಲ್ ಟ್ರೇನಿನಲ್ಲಿ ಹೌರಕ್ಕೆ ಹೊರಟಿದ್ದಾರೆ ಇವರನ್ನು ಹೊಲ್ಲಾಂಡಿನ ಮಾರ್ಗವಾಗಿ ಅವರವರ ಸ್ವದೇಶಕ್ಕೆ ಕಳುಹಿಸಿಕೊಡುವ ಏರ್ಪಾಡು ಮಾಡಲ್ಪಟ್ಟಿರುತ್ತದೆ

ಮೈಸೂರು ಕಾನ್ಸಲರ ಜೆನರಲ್ ಸರ್ ಅಲಿ ಇಮಾಮ್‌ರವರ ಕೆಲಸದ ಅವಧಿಯು ತೀರಿದ್ದರಿಂದ ಅವರಿಗೆ ಸ್ವಸ್ತಿಷ್ಟಚನವನ್ನು ಕೊಡುವ ಬಗ್ಗೆ ಮೈಸೂರು ಪ್ರಜೆಗಳವರು ತಾ ೧೬ರಲ್ಲಿ ಒಂದು ಔತಣವನ್ನು ಏರ್ಪಾಡಿಸಿರುತ್ತಾರೆ ಈ ಔತಣಕ್ಕೆ ಸರ್ ವಿಠಲಂ ಪೇಂಟರ್, ಸರ್ ಶಂಕರನ್ ನಾಯರ್ ಮತ್ತು ಪಿ. ಶಿವಸ್ವಾಮಿ ಅಯ್ಯರ್ ಮೊದಲಾದ ಪ್ರಸಿದ್ಧರೂ ಅವಮಂತ್ರಿಸಲ್ಪಟ್ಟು ಹಾಜರಿದ್ದರು. ಮೈಸೂರು ಪ್ರಜೆಗಳನ್ನು ಬಿಟ್ಟರೆ ಮೊದಲು ಸರ್ ಶಿವಸ್ವಾಮಿ ಅಯ್ಯರವರಿಗೆ ಪದ್ಮತಿ ಪ್ರಕಾರ ಕೆ ಸಿ ಎಸ್ ಐ ಎಂಬ ಬಿರುದನ್ನು ಇತ್ತೀಚೆಗೆ ಪ್ರದಾನಮಾಡಿದರು ಅನಂತರ ಸರ್ ಅಲಿ ಇಮಾಮ್‌ರವರು ಸಂಜ್ಞಾಘನೆಯನ್ನು ಮಾಡಿ ಕಾಲೋಚಿತ ಭಾಷಣವನ್ನು ಕೊಟ್ಟರು ಕಡೆಗೆ ಸರ್ ಅಲಿ ಇಮಾಮ್‌ರವರು ವೈಸರಾಯ ಹಾರ್ಡಿಂಜ ಪ್ರಭುಗಳವರ ಕಾಲದಲ್ಲಿ ಹಿಂದೂಸ್ಥಾನಕ್ಕುಂಟಾದ ಮಹದುಪಕಾರಗಳನ್ನು ಕುರಿತು ಮಾತನಾಡಿ, ವೈಸರಾಯ ಪ್ರಭುಗಳವರಿಗೆ ಉಪಕಾರಸ್ಮರಣೆಯನ್ನು ಮಾಡಿ ಭಾಷಣವನ್ನು ಮುಗಿಸಿದರು.

ಇದೇ ಬರುವ ದಶಂಬರ ತಾ. ೨೬-೨೭ರಲ್ಲು ಮುಂಬಾಯಿಯಲ್ಲಿ ಇಂಡಿಯನ್ ಕಮ್ಮರ್ಶಿಯಲ್ ಕಾಂಗ್ರೆಸ್ ಎಂಬ ವ್ಯಾಪಾರ ಸಂಬಂಧವಾದ ರಾಷ್ಟ್ರೀಯ ಸಭೆಯು ಕೂಡುವದು. ಇಂಥಾ ಸಭೆಯು ಹಿಂದೂಸ್ಥಾನದಲ್ಲಿ ಕೂಡಿಬರುವದು ಇದೇ ಪ್ರಥಮಸಾರಿ ಬಹುಮಾನಪಟ್ಟ ಲಲ್ಲು ಭಾಯಿ ಸಾಮಲ್ದಾಸರವರು ಸ್ವಾಗತ ಕಮಿಟಿಯ ವೈಸ್ ಚೇಯರ್‌ಮೇನರಾಗಿ ನೇಮಿಸಲ್ಪಟ್ಟಿರುತ್ತಾರೆ

ಕಳೆದವಾರ ಡೇರಡೂನಿನಲ್ಲಿ ವೈಶ್ಯ ಮಹಾ ಸಭೆಯು ಕೂಡಿ ಒಂದಿರುವದು ಈ ಸಭೆಗೆ ಅಧ್ಯಕ್ಷರಾಗಿದ್ದ ರಾಯ ಬಹದ್ದೂರ್ ಬಾಬು ವಿಶ್ವೇಶ್ವರನಾಥ ಬಹದ್ದೂರವರು ಭಾಷಣದಲ್ಲಿ ಮೇಲುತರಗತಿಯ ಹಿಂದುಗಳು ಕೀಳುತರಗತಿಯ ಹಿಂದೂಗಳೊತಿನೆ ಭ್ರಾತೃಭಾವದಲ್ಲಿ ವರ್ತಿಸುವ ಅವಶ್ಯಕತೆ, ವೈಶ್ಯವ ತರವರೊಗೆ ಸಹಪಂಕ್ತಿಭೋಜನ, ನೆಂಟಸ್ತಿಕೆ, ಬಾಲವಿವಾಹ ಕೆಡಕು ಮೊದಲಾದ ಪ್ರಸ್ತಾಪವೇ ವಿಶೇಷವಾಗಿದ್ದಾಗಿತ್ತು

ಕಲ್ಕತ್ತೆಯ ಕೊರ್ನ್‌ವಾಲಿಸ್ ಸ್ಕ್ವೆಯ ಒಂದು ಮನೆಯಲ್ಲಿ ತಾ ೧೭ನೇ ರಾತ್ರಿ ಆಯುಧಪಾಣಿಗಳಾದ ಒಂಗಾಳಿ ಯುವಕರಿಂದ ಒಂದು ದಕಾಯತಿಯು ನಡೆದಿರುವದು ಬೆಲೆಯುಳ್ಳ ಅಬರಣಗಳೂ ನಗದಿ ಹಣವೂ ಅಪಹರಿಸಲ್ಪಟ್ಟಿರುತ್ತದೆ ದಕಾಯತರಲ್ಲಿ ಯಾರನ್ನಾದರೂ ಹಿಡಿಯಲಿಕ್ಕಾಗುವ ವರ್ತಮಾನಗಳನ್ನು ಕೊಡುವವರಿಗೆ ೫೦೦ ರೂಕಾಯಿ ಇನಾಂ ಕೊಡಲಾಗುವದೆಂದು ಪೋಲೀಸಿನವರು ಪ್ರಕಟಿಸಿರುತ್ತಾರೆ

ಇದೇ ನವೆಂಬರ ತಾ. ೧೯ರಿಂದ ಬ್ರಿಟಿಷ್ ಇಂಡಿಯಾ ದ್ವೀಪ ವಜ್ರಗಳನ್ನು ಗ್ರೇಟ್‌ಬ್ರಿಟನಿನ ಹೊರತು ಇತರ ಪರದೇಶಗಳಿಗೆ ಕಳುಹಿಸಿಕೊಡಕೂಡದೆಂದು ಪ್ರಕಟವಾಗಿದೆ

ಈಗಿನ ಯುದ್ಧವು ರಗಳೆಯು ತೀರಿದನಂತರ ಹಿಂದೂಸ್ಥಾನದ ವೈಸರಾಯರಾಗಿ ಯುದ್ಧಮಂತ್ರಿಯಾಗಿರುವ ಕಚನರ್ ಪ್ರಭುಗಳು ನೇಮಿಸಲ್ಪಡುವರೆಂಬ ನಂಬಿಕೆ ತನಗೆ ಇದೆ ಎಂತಲೂ ಈಗಿನ ವೈಸರಾಯರಾಗಿರುವ ಹಾರ್ಡಿಂಜ ಪ್ರಭುಗಳ ಕೆಲಸದವಧಿಯನ್ನು ಇನ್ನೊಮ್ಮೆ ಹೆಚ್ಚಿಸುವದು ಅಸಾಧ್ಯವಲ್ಲವೆಂತಲೂ "ಪೊಯಾನಿಯರ್" ಪತ್ರಿಕೆಯ ಬಾತ್ಮಿದಾರರು ಒರೆಯುವರು

ರಾಜದ್ರೋಹಕರವಾದ ಮಾತುಗಳು ತುಂಬಿದ "ಕಲಿಬರ್ಟಿ" ಪತ್ರಿಕೆಯ ಪ್ರತಿಗಳು ಶಾಂತಿಪುರದ ಅಯಾಶ್ರಮವೊಂದರಲ್ಲಿ ಹಚ್ಚಲ್ಪಟ್ಟಿರುವವೆ ಕೆಲವನ್ನು ಪೋಲೀಸಿನ ಗೋಡೆಗಳ ಮೇಲೆ ಹಚ್ಚಿದ್ದರು ಒಂದು ಸಹಿಯನ ಶಾಂತಿಪುರ ಸಬ್ ಇನ್ಸ್‌ಪೆಕ್ಟರಿಗೆ ವತ್ತೊಂದನ್ನು ಸ್ಥಳಿಕ ಸಬ್ ರಿಜಿಸ್ಟ್ರಾರರಿಗೆ ಕಳುಹಿಸಿದ್ದರು.

ಲಯೋನೈ ಮತ್ತು ಪೋಲೊಎಂಡ ರೈಲ್ವೆಯ ಲಕ್ಕಾರ್ಟ್ ಮತ್ತು ಹರೋಡಿ ಸ್ಟೇಶನುಗಳ ಮಧ್ಯೆ ಹೋಗುತ್ತಿದ್ದ ಆಗ್ಗಾಡಿಯಲ್ಲಿ ಒಂದು ಕಳವು ನಡೆದಿರುವದು. ಕಲ್ಕತ್ತೆಯ ವಕೀಲರಾದ ಮೆ ಲೆಕರ್ಟೀನರವರು ಡ್ಹೇರಡೂನಿನಿಂದ ಕಲ್ಕತ್ತೆಗೆ ಹಿಂದಿರಳುವಾಗ ಬಕ್ಸರಿನಲ್ಲಿ ಟ್ರೇನಿನಿಂದ ಇಳಿದು ಮಲಗುವ ಕಂಪಾರ್ಟುಮೆಂಟಿಗೆ ಹೋಗಿ ತನ್ನ ಜೀಲವನ್ನು ಕೆಳಗಿಟ್ಟು ಮಲಗಿಕೊಂಡರು. ಈ ಜೀಲದಲ್ಲಿ "ಸ್ಪೇನ್ಸ್" ಎಂಬ ಹೆಸರು ಕೆತ್ತಿದ ಹಿಂದು ರಿವೋಲ್ವರ್, ಒಂದು ವೆಟ್ಟಿಗೆ ತೋಟಗಳು, ೨೦೦ ರೂಪಾಯಿ ಗಟ್ಟುಬಾಗಿರುವದು. ಈ ಯಂತ್ರದಿ ವಿದಾರು ರೂಪಾ

ಗಳನ್ನು ಇಟ್ಟಿದ್ದ ಒಂದು ಸಣ್ಣ ವೆಟ್ಟಿಗೆ ಸಮ್ಮ ಎಲ್ಲಾ ಯನ್ಸ್ ಬೇಂಕಿನೆ ಒಂದು ಚಕ್ ಬುಕ್, ಜಿನ್ನದ ಚೈ ಟ್ಟಿನ ಒಂದು ದೃಷ್ಟಿಚಕ್ರ ಮೊದಲಾದ ಸಾಮಾನುಗಳಿದ್ದವು. ಆಗ್ಗಾಡಿಯು ರಾತ್ರಿ ೧೩-೧೫ ಗಂಟೆಯ ಹೊತ್ತಿಗೆ ಬಕ್ಸರ್ ಸ್ಟೇಶನನ್ನು ಬಿಟ್ಟು ಮುಂದರಿಸಿತು. ಲೆಕರ್ಟೀನರು ಮಲಗಿಕೊಳ್ಳುವ ಮೊದಲು ಸುಮಾರು ರಾತ್ರಿ ೧-೩೦ ಗಂಟೆಗೆ ಜೀಲವನ್ನು ಕಂಡಿದ್ದರು ಮರುದಿನ ಬೆಳಿಗ್ಗೆ ೬ ಗಂಟೆಗೆ ನಿದ್ದೆಯಿಂದ ಎದ್ದು ನೋಡಲು ಜೀಲವಿರಲಿಲ್ಲ

ಕಲ್ಕತ್ತೆಯ ಬೆಲಿಯಗಟ್ಟಿದ ಒಬ್ಬ ಅಕ್ಕಿ ಸಾಹುಕಾರನ ಅಂಗಡಿಯು ಕಳೆದ ವರ್ಷ ಸೂರೆಸುಳಿಗೆಯಾಗಿತ್ತು ಈಗ ಪುನಃ ಅಂಗಡಿಯು ಸುಲಿಗೆಯಾಗುವದೆಂತ ಅವರನ್ನು ಹೆದರಿಸುವ ಪತ್ರವೊಂದು ಆ ಸಾಹುಕಾರರಿಗೆ ಬಂದಿರುತ್ತದೆ.

ಪೂನೆಯಲ್ಲಿ ೧೩ ವರ್ಷ ವಯಸ್ಸಿನ ಖಾಂಡು ಮತ್ತು ೧೦ ವರ್ಷ ವಯಸ್ಸಿನ ಪಾಂಡುಗಣಪತಿ ಎಂಬ ಹುಡುಗರು ೩ ವರ್ಷ ವಯಸ್ಸಿನ ಲಕ್ಷ್ಮಣ ಎಂಬ ಹುಡುಗನನ್ನು ಕೊಂದಿದ್ದರೆಂದು ಆಪಾದಿಸಲ್ಪಟ್ಟಿದ್ದರು. ಈ ಹುಡುಗರ ತನಿಕೆ ನಡೆದು ಜೂರಿಯರು ಹುಡುಗರ ಮೇಲೆ ತಪ್ಪು ಸಾಬೀತಾಗುವದಿಲ್ಲವೆಂತ ಅಭಿಪ್ರಾಯವಚ್ಚಿದ್ದರಿಂದ ಜಡ್ಜರು ಹುಡುಗರನ್ನು ಬಿಟ್ಟುಬಿಟ್ಟರು.

ದಕ್ಷಿಣ ಹಿಂದೂಸ್ಥಾನ.

ಗತವಾದ ಬೆಂಗಳೂರಿನ ಸರ್. ಪಿ. ಎನ್. ಕೃಷ್ಣಮೂರ್ತಿಯವರ ಪತ್ನಿಯವರಾದ ಕಾವೇರಿಬಾಯ್ಗಿ ಕೃಷ್ಣಮೂರ್ತಿಯವರು ಧರ್ಮಕಾರ್ಯಗಳ ಬಗ್ಗೆ ೫೫ ಸಾವಿರ ರೂಪಾಯಿಗಳನ್ನು ವೈಸೂರು ಸರಕಾರದವರ ವಶೆ ಕೊಟ್ಟಿರುತ್ತಾರೆ. ಈ ಪೈಕಿ ೧೦ ಸಾವಿರ ರೂಪಾಯ್ಗಿಗಳ ಬಡ್ಡಿಯನ್ನು ವೈಸೂರಲ್ಲಿ ಸ್ಥಾಪಿಸಲಿಕ್ಕಿರುವ ವೈಸೂರು ಯುನಿವರ್ಸಿಟಿಯಲ್ಲಿ ಸರ್ ಮೂರ್ತಿಯವರ ಹೆಸರಿನಲ್ಲಿ ಒಂದು ಸಂಸ್ಕೃತ ವಿದ್ಯಾಪೀಠವನ್ನು ತೆರೆಯಬೇಕಾಗಿರುವದು ಬೆಂಗಳೂರಿನ ವಿಕ್ಟೋರಿಯ ಅಸ್ಪತ್ರೆಯಲ್ಲಿ ಪಕ್ಷವಾತರೋಗಿಗಳ ಬಗ್ಗೆ ಸರ್ ಕೃಷ್ಣಮೂರ್ತಿಯವರ ಹೆಸರಲ್ಲಿ ಒಂದು ಮೆಡಿಕಲ್ ವಾರ್ಡನ್ನು ಕಟ್ಟಿಸುವರೆಗೂ ೦೦ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿರುವದು. ಉಳಿದ ೧೫ ಸಾವಿರ ರೂಪಾಯಿಗಳ ಬಡ್ಡಿಯಲ್ಲಿ ವರ್ಷಂಪ್ರತಿ ರೂ ೧೯೦ ನೈಜಾಮ್ ಸಂಸ್ಥಾನದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿ ವರಕ್ಕೆ ಕೊಡಬೇಕಾಗಿರುವದು. ಸಿಲುಕು ಉಳಿದಿರುವ ಯನ್ನು ವೈಸೂರು ಸಂಸ್ಥಾನದಲ್ಲಿ ಹುಟ್ಟಿ ಬೆಳದ ಯುವಕರ ನ್ಯಾಧ್ಯವಿದ್ಯಾಭ್ಯಾಸದ ಬಗ್ಗೆ ವೇತನವಾಗಿ ಉಪಯೋಗಿಸಬೇಕಾಗಿದೆ.

ವೈಸೂರು ಕೈಗಾರಿಕೆಗಳ ಡಿರೆಕ್ಟರರಾದ ಮೆ| ಅಲ್ಫ್ರೆಡ್ ಚೆಟರ್ಟನರವರು ಬಾಳೇ ಗಿಡದ ನಾರನ್ನು ತೆಗೆಯುವ ಬಗ್ಗೆ ಒಂದು ಸುಲಭ ಖರ್ಚಿನ-ಹೊಸ ಯಂತ್ರವನ್ನು ನಿರ್ಮಿಸಿರುತ್ತಾರೆ. ಬೆಂಗಳೂರು ಪ್ಯಾಲೆಸ್ ದೊಡ್ಡಣ್ಣರವರ ಹೋಲಿನಲ್ಲಿ ಈ ಯಂತ್ರದಿಂದ ನಾರನ್ನು ತೆಗೆದು ತೋರಿಸುವ ಸಮಾರಂಭವು ಇದ್ದೇ ತಾ ೧೯ರಲ್ಲಿ ತೋರಿಸಲ್ಪಟ್ಟಿತ್ತು. ಈ ಯಂತ್ರದ ಮೂಲಕ ತೆಗೆದ ಬಾಳೆನಾರು ಬಿಳೀ ಬಣ್ಣದಾಗಿದ್ದು ಬೇರೆ ಎಲ್ಲಾ ನಾರುಗಳಂತೆಯೆ ಗಟ್ಟಿಯಾಗಿರುವದು. ಈ ಯಂತ್ರಕ್ಕೆ ವಿದಾರು ರೂಪಾ

ಯಿಗಳಷ್ಟು ಮಿತ್ರ ಬೆಲೆಯುಗುವದು. ಗಂಡಸರಾಗಲೀ ಹೆಂಗಸರಾಗಲೀ ಈ ಯಂತ್ರದಿಂದ ಮನೆಯಲ್ಲಿಯೇ ಇದ್ದು ಕೊಂಡು ಸುಲಭವಾಗಿ ನಾರ್ನನ್ನು ತೆಗೆದು ಸಂಪಾದನೆ ಮಾಡಬಹುದು.

ಮದ್ರಾಸು ಎಕ್ಸ್‌ಚೇಂಜ್ ಜನರಲರಾದ ಮೆ|| ಕೆ. ಎಲ್. ದತ್ತರ್‌ವರು ಕೆಲಸದಿಂದ ನಿವೃತ್ತರಾಗಿ ಇದೇ ತಾ. ೧೭ರಲ್ಲು ಕುಟುಂಬ ಸಹಿತ ಕಲ್ಕತ್ತೆಗೆ ಹೊರಟು ಹೋದರು.

ಹೆಂಗಸರ ವಿದ್ಯಾಭ್ಯಾಸ ಒಗ್ಗೆ ಮದ್ರಾಸಿನಲ್ಲಿ ಕಟ್ಟಿ ಸೋಣಾದ ಹೊಸ ಗವರ್ನಮೆಂಟು ಕಾಲೇಜನ್ನು ಇದೇ ತಾ ೧೭ರಲ್ಲು ಮದ್ರಾಸ್ ಗವರ್ನರ ಪ್ರಭುಗಳವರು ಪ್ರತಿಷ್ಠೆ ಮಾಡಿದರು. ವಿದ್ಯಾಖಾತೆಯ ಡಿರೆಕ್ಟರರಾದ ಮೆ|| ಸ್ಟೋನ್ ದೊರೆಗಳವರು ಪ್ರಧಾನತಾ ಈ ಕಾಲೇಜು ಕಟ್ಟಲಿಕ್ಕೆ ತಗಲಿದ ಖರ್ಚು ಇತ್ಯಾದಿಗಳ ವಿವರವನ್ನು ಸಭಿಕರಿಗೆ ತಿಳಿಯ ಹೇಳಿದರು. ಕಾಲೇಜು ಕಟ್ಟೋಣವನ್ನು ತೆರೆಯುವ ಮೊದಲು ಗವರ್ನರ ಪ್ರಭುಗಳವರು ಕೊಟ್ಟ ಭಾಷಣದಲ್ಲಿ ಈ ಕಾಲೇಜನ್ನು ಸ್ಥಾಪಿಸುವದರ ಅವಶ್ಯಕತೆ, ಈ ಕಾಲೇಜಿನಲ್ಲಿರುವ ವಿದ್ಯಾರ್ಥಿನಿಯರ ಸಂಖ್ಯೆ, ಕಾಲೇಜಿನ ಈಗಿನ ಸ್ಥಿತಿ ಮೊದಲಾದ ವಿಷಯಗಳು ಸೇರಿದ್ದವು. ಈ ಕಾಲೇಜಿಗೆ ಆಂಗ್ಲೇಯ ಮತ್ತು ಭಾರತೀಯ ಹೆಂಗಸರು ಮತ್ತು ಗಂಡಸರು ಸೇರಿರುವ ಸಲಹೆ ಕೊಡುವ ಒಂದು ಕೌನ್ಸಿಲನ್ನು ಸ್ಥಾಪಿಸಬೇಕಾಗಿದೆಂತಲೂ ಈ ಕಾಲೇಜಿನಲ್ಲಿ ಆಯಾ ಮತಗಳ ವಿದ್ಯಾರ್ಥಿನಿಯರಿಗೆ ಅವರವರ ಮತಬೋಧೆಯನ್ನು ಕೊಡುವ ಏರ್ಪಾಡು ಮಾಡುವ ವಿಷಯವು ಈ ಕೌನ್ಸಿಲನಲ್ಲಿ ಪ್ರಥಮತಾ ಆಲೋಚಿಸೋಹಾಗುವದೆಂತಲೂ ಪ್ರಭುಗಳವರು ಅಪ್ಪಣೆಕೊಡಿಸಿರುವರು. ಈ ಕಾಲೇಜ್ ವಿದ್ಯಾರ್ಥಿನಿಯರ ಬಗ್ಗೆ ರಾವ್ ಸಾಹೇಬ್ ಸಿ. ರಾಮಾನುಜಮ್ ಚೆಟ್ಟಿಯವರು ಎರಡು ವೇತನಗಳನ್ನು ಕೊಟ್ಟಿರುತ್ತಾರೆ.

ಶ್ರೀ ಸೌ. ತ್ರಾಹಾರಾಜೆ ರಾಣಿ ಸಾಹೇಬರವರ ಹುಲಿಯ ಬೇಟೆ

ಶ್ರೀಮತಿ ಸೌ|| ತ್ರಾರಾರಾಜೆ ರಾಣಿ ಸಾಹೇಬರವರು ತಾ. ೪ ಆಗೊಸ್ತು ಗೋಕಾಕರಲ್ಲಿ ತಮ್ಮ ಸಂಸ್ಥಾನವಾದ ಸೊಂಡೂರು (ಡಿ. ಬಳ್ಳಾರಿ) ಶ್ರೀ ಕಾರ್ತಿಕ ಸ್ವಾಮಿ ಬೆಟ್ಟದಲ್ಲಿ ಸಾಯಂಕಾಲ ೫|| ಘಂಟೆ ಸಮಯ ಬಹಳ ಸಮಯದಿಂದ ಉಪದ್ರ ಕೊಡುತ್ತಿದ್ದ ಒಂದು ಘೋರವಾದ ಹೆಬ್ಬುಲಿಯನ್ನು ಒಂದೇ ಗುಂಡಿನಿಂದ ಹೊಡೆದಿರುವರು. ಹುಲಿಯು ಇವರಿಂದ ೩೦ ಯಾರ್ಡು ದೂರವಲ್ಲಿರುವಾಗಲೆ ಬೇರೆಯವರ ಸಹಾಯವಿಲ್ಲದೆ ಇವರು ಕಲ್ಲೆದೆಯಿಂದ ಅದನ್ನು ಹೊಡೆದು ತಾವು ಸ್ತ್ರೀಜಾತರಾದರೂ ತಮ್ಮ ಅಪೂರ್ವವಾದ ಸೌರುಷವನ್ನು ವ್ಯಕ್ತ ಪಡಿಸಿದರು!

ದಕ್ಷಿಣ ಕನ್ನಡ.

ಪುತ್ತೂರು.

ಇಲ್ಲಿಯ ತಾಲೂಕು ತಹಶೀಲದಾರವರು ಕಚೇರಿ ತಿಬಂದಿ ಸಮೇತ ತಾ. ೧೫ರಲ್ಲು ಕುಲಗುಂದಕ್ಕೆ (ಸುಬ್ರಮಣ್ಯ) ಹೋಗಿರುವರು.

ಇತ್ತಕಡೆ ಆಗ್ನಾಗ್ಯೆ ಮಳೆ ಬರುತ್ತಲೆ ಇರುವದರಿಂದ ಅಲ್ಲಿಂದಾಗಲೆ ಒನ್ನು ಇಳಿತರವಾಗಿ ಬಂದು ತಗ್ಗುತಾ ಏರುತ್ತಾ ಇದ್ದು ಮುಡಿ ೧೫೦ ಕ್ಕೆ ರೂಪಾಯಿಗೆ ಶಿಕ್ಕುತ್ತಲಿದ್ದ ಹೊಸ ಅಕ್ಕಿಗೆ ರೂಪಾಯಿ ೪|| ಆಗಿರುವದು.

ಕುಲಗುಂದದಲ್ಲಿ ಈ ವರೆಗೆ ೧೫೦ ಸಾವಿರ ಜಾನುವಾರುಗಳು ಬಂದದ್ದಾಗಿ ವರ್ತಮಾನವಿರುವದು. ಈ ವರುಷ ಜಾನುವಾರುಗಳ ಬೆಲೆ ಅಲ್ಪ ಸ್ವಲ್ಪ ತಗ್ಗಿಯೆ ಇರುವದಾಗಿ ತಿಳಿಯುತ್ತೇವೆ

ಕೊಕ್ಕಡದಿಂದ ಧರ್ಮಸ್ಥಳಕ್ಕೆ ಹೋಗುವ ರಸ್ತೆಯ ಕಾಲುಗಾರಿಯು ಎರಡು ಮಳೆಗಾಲ ತೀರಿದರೂ ಅಂತ್ಯವಾಗದಿಲ್ಲವಷ್ಟೆ ಇದೇ ದಶಂಬರ ತಿಂಗಳಲ್ಲಿ ಆಗುವ ದೀಪೋತ್ಸವದ ಸಮಯಕ್ಕಾದರೂ ಸಾವಿರಾರು ಜನರಿಗೆ ಅಮಮ ರವಾಗಲಿಕ್ಕೆ ಅಭ್ಯಂತರ ಉಂಟಾಗುವ ಜಾಡಿದೆ ಪಿಡ್ಡ ಪ್ಲೂರಿಗೆ ನ್ಯಾಯವಾದರೂ ದೂರ ಸ್ಥಿಯಲ್ಲಿಡುವ ಹಾಗೆ ಪೋಲಾ ಧಿಕಾರಿಗಳು ಗಮನಕೊಡುವದುತ್ತಮ.

ನಮ್ಮ ಇಲ್ಲಿಯ ಎಳಮಂತಿ ಎಂಬಲ್ಲಿಂದ ಬರ್ಬೆ ಪೋಲೇಟ್ ವರೆಗೆ ಮಿಷನ್ ಬೈಲ್ ಇಲ್ಲದೆ ಪ್ರಯಾಣಿಕರಿಗೆ ಗಾಡಿಗಳ ಜಾನುವಾರುಗಳ ದೆಸೆಯಿಂದ ಹೆಚ್ಚಿನ ಅಭ್ಯಂತರ ಉಂಟಾಗುತ್ತದೆ

ರಿಜರ್ವ್ ಕಾಡುಗಳಿಂದ ಎಂತೂ ಕಟ್ಟಿಗೆ ಕಡಿಯುವದಕ್ಕೆ ಪರ್ಮಿಟು ಶಿಕ್ಕುವದಿಲ್ಲವಷ್ಟೆ ಇಲ್ಲಿಯ ನಿವಾಸಿಕರು ತಮ್ಮ ತಮ್ಮ ಗೃಹಕೃತ್ಯದ ಉಪಯೋಗಕ್ಕೆ ಕೆಲವು ಕಾಡು ಗಳಿಂದ ಕಟ್ಟಿಗೆ ಕಡಿಯಲು ತಾಲೂಕು ಪರ್ಮಿಟು ಕೊಡಿಸಿ ತಾಲೂಕು ಖಾವಂದರಿಗೆ ಸುನವಿಮಾಡಿ ಎಂದರೂ ವಾರಗಳ ಸಮಯ ದಾಟಿದರೂ ಹುಕುಂ ಶಿಕ್ಕದ್ದರಿಂದ ಅನೇಕರಿಗೆ ಕಟ್ಟಿಗೆ ಇಲ್ಲದೆ ಉಪವಾಸಗಿರುತ್ತದೆಂತ ತಿಳಿದು ಬರುತ್ತದೆ.

ಬಂಟ್ವಾಳ:- ಕಳೆದೊಂದು ಸಂಚಿಕೆಯಲ್ಲಿ ಪ್ರಸ್ತಾಪಿಸಿದಂತೆ,— ಇಲ್ಲಿಗೆ ಪೆಟೆರಿನರಿ ಅಸಿಸ್ಟಂಟರವರು ಬಂದು ಜನಗಳನ್ನು ಕೂಡಿಸಿ, ಬಾಷಣ ಮಾಡಿಸಿ, ತೆರಳಿದರು. ಅವರಿಂದ ನಾವಾರಿಕೆ, ನಮ್ಮಿಂದ ಅವಶ್ಯಕತೆ ಕೃತಾರ್ಥರಾಗಲಾರದೆ ಹೋದರೆಂದು ತಿಳಿಸಲು ದುಃಖವಾಗುತ್ತದೆ. ಜಾನುವಾರುಗಳಿಗೆ ದಾಳು ಹಾಕುವುದೆಂದರೆ ನಿಶ್ಚಯವಾಗಿ, ಪ್ರತಿ ಒಂದು ಜಾನುವಾರನ್ನು ಬಯ್ದು ಕೂಡಿಸಿ ಒನ್ಮೆಗೇ ದಾಳು ಹಾಕಿಸಬೇಕಂತೆ! ಎಂದೇ ಒಂದು ದಾಳು ಹಾಕಿದ ದರ್ಬೀಜವು ಉಳಿದರೆ ಎಲ ವಕ್ಕೂ ಪುನಃ ಗಂಡಾಂತರ ಉಂಟಾಗಬಹುದಂತೆ! ಹೋಗವು ಸಂಪೂರ್ಣವಾಗಿ ಗುಣವಾಗಬೇಕಾದರೆ, ಪ್ರತಿಯೊಂದೂ ತಿಂಗಳು ದಾಳು ಹಾಕಿಸಬೇಕಾಗುವುದಂತೆ! ದಾಳು ಹಾಕಿದ ಸಮಯದಲ್ಲಿ ಜಾನುವಾರುಗಳ ಹಾಲು ಕುರೆದರೆ ಅಪಾಯ ಉಂಟಾಗದೆ ಇರಬಹುದಂತೆ,— ಎಂಬಿತ್ಯಾದಿ ವಿನಿಧಾಲೋಚನೆಗಳಿಂದ ಸಾರ್ಥಕವಾಗದೆ ಹೋಯಿತು. ಪತ್ರಕರ್ತರೇ, ನಿಮ್ಮ ವಾಚಕರಲ್ಲಾದರೂ ಜಾನುವಾರುಗಳ ಬಗ್ಗೆ ಔಷಧಿಗಳನ್ನು ಬಲ್ಲವರಿದ್ದರೆ, ಈ ಪತ್ರದ್ವಾರಾ ಅವರು ತಿಳಿಸಿದರೆ ಉಪಕಾರವಾಗುವುದು.

ನಮ್ಮ ಕಲೆಕ್ಟರವರ ದರ್ಮಪತ್ನಿಯವರು ಇಲ್ಲಿಗೆ ಚಿತ್ಕೈಸಿಗನೇ ತಾರೀಕಿನಲ್ಲಿ ಕುಲಸ್ತ್ರೀಯರ ಸಭೆ ಸೇರಿಸಿ, ಯುದ್ಧದಲ್ಲಿ ಗಾಯಪಡೆದವರ ಸುಖಸಾಧಕವಾಗಿ, ಧನ ಶೇಖರಿಸಲು ಸೂಚಿಸಿಕೊಂಡ ಮೇರೆಗೆ, ಇಲ್ಲಿ ಸುಮಾರು ೫೦ ರೂಪಾಯಿಗಳಷ್ಟು ಹಣಕೂಡಿದೆ.

ಕೈಲಾಸನಿವಾಸಿಯಾದ ಶ್ರೀಮದ್ ಸಾಂಡುರಂಗ ಶ್ರೀಮದ ಭಾವಜೀತವನ್ನು ನಮ್ಮೂರಿನ ರಾ|| ಎಮ್. ರಾಮು ಕೃಷ್ಣರಾಯರು ತಯಾರಿಸಿ, ಇಲ್ಲಿಯ ಸಾರಸ್ವತ ದೇವಸ್ಥಾನಕ್ಕೆ ಕಡಿಮೆ ಬೆಲೆಗೆ ಸಮರ್ಪಿಸಿರುವರು. ಚಿತ್ರವು ಅತಿ ಸುಂದರವಾದುದಾಗಿ, ಶ್ರೀಯವರ್ ವಿಗ್ರಹವನ್ನು ನೆಟ್ಟಗೆ ಮನಸ್ಸಿನಲ್ಲಿ ಹೊಳೆವಂತೆ ಮಾಡುತ್ತಿದೆ. ಸದರಿ ಚಿತ್ರವನ್ನು ಮೊನ್ನೆ ಉತ್ಥಾನ ದ್ವಾದಶಿಯ ರಾತ್ರಿಯಲ್ಲಿ ಊರಲ್ಲೆಲ್ಲ ಮೆರವಣಿಗೆ ಮಾಡಿಸಿದುದಾಯಿತು. ಇದು ದೇವಸ್ಥಾನದಲ್ಲಿ ನಡಗಲಾಗುವುದು.

ಒಂಟ್ವಾಳವನ್ನು ಯೂನಿಯನ್‌ಆಗಿ ಮಾಡುವರೆ ಇದೇ ತಾ ೨೦ರಲ್ಲಿ ಬೋರ್ಡು ಪ್ರೆಸಿಡೆಂಟರವರ ಅಧ್ಯಕ್ಷತೆಯಲ್ಲಿ ಇಲ್ಲಿಯೊಂದು ಸಭೆ ಸೇರಲಿಕ್ಕಿದೆ.

ಕಾರ್ಕಳ.

ಕಾರ್ಕಳದಿಂದ ಉಪ್ಪಿಗೆ ಹೋಗುವ ವ ಅಲ್ಲಿಂದ ಬರುವ ಟಪ್ಪಾಲು ಕಾರ್ಯಗಳು ಜನರಿಗೆ ಬಟ್ವಾಡೆ ಆಗುವಂತ್ತಾದ್ದು ನೇ ದಿವಸ ಅಂದರೆ ತಾ ೧೫ಕ್ಕೆ ಅಲ್ಲಿಂದ ಹಾಕಿದ ಕಾಗದ ನೇ ತಾರೀಕಿಗೆ ಇಲ್ಲಿಗೆ ಬಟ್ವಾಡೆ ಆಗತ್ತೆ ಉಪ್ಪಿಯಿಂದ ಕಾರ್ಕಳಕ್ಕೆ ಮಾಸಿಲೆಯು ತಿಳಿ ನೈಲು ಮಾತ್ರ ಈ ಮಾಸಿಲೆಯು ಬಿಟ್ಟ ಮನುಷ್ಯಗೆ ೬ ಗಂಟೆ ಸಮಯದಲ್ಲಿ ಸುಲಭವಾಗಿ ಪ್ರಯಾಣ ಮಾಡಬಹುದು ಈ ಉಪಯುಕ್ತ ಸ್ಥಳಗಳು ತಾಲೂಕು ಹೆಡ್‌ಕ್ವಾರ್ಟರ್‌ಗಳಾಗಿದ್ದ ಅನೇಕ ವ್ಯಾಪಾರಸ್ಥರು, ಸಾಹುಕಾರರು ಮೈಸೂರಿನ ಇವಲ ಸ್ಥಳಗಳಾಗಿದ್ದು ಟಪ್ಪಾಲು ಕಾರ್ಯಗಳು ಈ ರೀತಿ ವ್ಯವಸ್ಥೆಯಾಗಿ ಶಿಕ್ಕುವ ದೆಸೆಯಿಂದ ಜನರಿಗೆ ಹೆಚ್ಚಿನ ಪ್ರಯೋಜನ ಶಿಕ್ಕುವದಿಲ್ಲ ಮಂಗಳೂರು ಕಾರ್ಕಳಕ್ಕೆ ೩೬ ಮೈಲು ದೂರ, ಅಲ್ಲಿಂದ ಬೆಳಿಗ್ಗೆ ಬಿಡುವ ಟಪ್ಪಾಲು ಅದೇ ದಿವಸ ಮಧ್ಯಾಹ್ನ ೨ ಗಂಟೆಗೆ ಇಲ್ಲಿಗೆ ತಲ್ಪಿ ೪ ಗಂಟೆಗೆ ಟಪ್ಪಾಲು ಕಾಗದಗಳು ಬಟ್ವಾಡೆ ಆಗುತ್ತೆ. ಅಲ್ಲಿಂದ ಉಪ್ಪಿಗೆ ಕೂಡಾ ಪ್ರೈವೆಸ್ಟಿಟ ಮೂಲಕ ಬೆಳಿಗ್ಗೆ ಟಪ್ಪಾಲು ರವಾನಿಸುವದರಿಂದ ಅದೇ ದಿವಸ ಮಧ್ಯಾಹ್ನ ೧ ಗಂಟೆಗೆ ಟಪ್ಪಾಲು ಅಲ್ಲಿ ಶಿಕ್ಕುತ್ತೆ ಈ ಟಪ್ಪಾಲುಗಳ ಜೊತೆಯಲ್ಲಿ ಉಪ್ಪಿಯಿಂದ ಕಾರ್ಕಳಕ್ಕೆ ಬೆಳಿಗ್ಗೆ ೮ ಗಂಟೆಗೂ ಕಾರ್ಕಳದಿಂದ ಉಪ್ಪಿಗೆ ಬೆಳಿಗ್ಗೆ ೮ ಗಂಟೆಗೂ ಮಧ್ಯದಲ್ಲಿ ನಿಲ್ಲದೆ ಟಪ್ಪಾಲು ಪಿಡುವ ಸಂದರ್ಭದಲ್ಲಿ ಮಂಗಳೂರು ಟಪ್ಪಾಲು ಇಲ್ಲಿ ಶಿಕ್ಕುವ ರೀತಿಯಲ್ಲೇ ಉಪ್ಪಿ ಟಪ್ಪಾಲು ಇಲ್ಲಿಗೂ ಇಲ್ಲಿಯ ಟಪ್ಪಾಲು ಉಪ್ಪಿಯಲ್ಲೂ ಅದೇ ದಿವಸ ಸಿಕ್ಕೆ ಜನರಿಗೆ ಹೆಚ್ಚಿಗೆ ಪ್ರಯೋಜನ ಶಿಕ್ಕುತ್ತೆ. ಈ ವಿಷಯ ಈ ಇಲಾಖೆಯ ಪೋಲ್ಯೋದ್ಯೋಸ್ಥರು ನಿಗಾವಿಟ್ಟು ತಕ್ಕ ಏರ್ಪಾಟು ಬೇಗನೆ ಮಾಡಿಸುವರಾಗುವಂತೆ ಕಾರ್ಕಳ ನಿವಾಸಿಕರ ಪ್ರಾರ್ಥನೆ.

ಮಂಗಳೂರು.

ಇದೇ ಕಳೆದ ತಿಂಗಳ ತಾರೀಕಿನಲ್ಲಿ ಮ. ರಾ. ರಾ ಯನ್. ಯನ್ ಸುವರ್ಣ ಬಿ. ಎ. ಬಿ. ಎಲ್. ಇವರು ಅವರ ಮಿತ್ರಮಂಡಳಿಯವರೂ, ಹಿತೈಷಿಗಳೂ ಕೂಡಿ ಅವರು ಈ ವರ್ಷದ 'ಕ್ರಿಕೆಟ್' ಪಂದ್ಯಾಟಗಳಲ್ಲಿ ತೋರಿಸಿದ ಪ್ರವೀಣತೆ ಬಗ್ಗೆ ೬೦ ರೂಪಾಯಿ ಕ್ರಯದ ಬಾಳುವಂಥ ಒಳ್ಳೆ ಸೊಗಸಾದ ಚಿನ್ನದ ಪದಕವನ್ನು ಬಹುಮಾನಾರ್ಥವಾಗಿ ಕೊಟ್ಟಿರುವರೆಂಬದನ್ನು ತಿಳಿಸಲು ತುಂಬ ಸಂತೋಷಪಡುತ್ತೇವೆ. ಇವರು ಈ ವರ್ಷದಲ್ಲಿ ಜುಮ್ಮಾ ಗಳಲ್ಲಿ 'ಸ್ಕೋರು'ಗಳನ್ನು ತೆಗೆದಿರುವರು. ಇವರ ಈ ವರ್ಷದ ಸರಾಸರಿ 'ಸ್ಕೋರು' ೬೬. ಇದು 'ರಿಕೋರ್ಡ್ ಸೀಜನ್ ಸ್ಕೋರು' ಆಗಿ ಇಪ್ಪರ ವರೆಗೆ ಇಲ್ಲಿ ಯಾರಿಬ್ಬರಿಗೂ ಸಿಗಲಿಲ್ಲವೆಂಬದಾಗಿ ತಿಳಿಯುತ್ತೇವೆ. ಇವರು ಖುತ್ತುವಿನಲ್ಲಿ 'ಬಟ್ಟಿಗೆ ೫೦' ಸೆಂಚುರಿಗಳನ್ನು ತೆಗೆದಿರುವರು ಇವರು 'ಬೇಟ್ಸಮನ್'ನಲ್ಲಿ ಮತ್ತು 'ವಿಕೆಟ್ ಕೀಪ್'ನಲ್ಲಿ ತೋರಿಸುವ ಹಸ್ತಲಾಘವವೂ ಚುರುಕುತನವೂ

ಎಷ್ಟೆಂಬದು ಜನಜನಿತವಾಗಿ ಗೊತ್ತಿರುವದು ಕಳದ ವರ್ಷ ಮದ್ರಾಸಿನಲ್ಲಿ ಕೂಡ ಅಲ್ಲಿಯ 'ಕ್ರಿಕೆಟ್' ಸಂಘದವರಿಂದ ಸದರಿ ಆಟದಲ್ಲಿ ತೋರಿಸಿದ ಪಾಂಡಿತ್ಯದ ಬಗ್ಗೆ ಒಂದು ಚಿನ್ನದ ಪದಕವನ್ನು ಈ ಸುವರ್ಣನವರು ಪಡೆದಿರುವರು

ಯುರೋಪದಲ್ಲಿ ನಡೆಯುವ ಯುದ್ಧದ ನಿಮಿತ್ತ ಇಲ್ಲಿಯ ದೇಶೀಯ ಪರೋಪಕಾರದ ಸಂಸ್ಥೆಗಳಿಗೆ ಹಣ ಸಹಾಯ ಸಿಕ್ಕುವುದು ಕಡಿಮೆಯಾಗುತ್ತಾ ಬರುವುದರಿಂದ ಮಂಗಳೂರ ನಿರಾಶ್ರಿತ ಜನ ಸಹಾಯಕ ಸಂಘಕ್ಕೆ ಹಣದ ಅಡಚಣೆ ಆಗದಂತೆ ಇಂಡ್ಯ ಡಿಪ್ರೆಸ್ಡ್ ಕ್ಲಾಸಸ್ ಮಿಶ್ಶನ್ ಕಮಿಟಿಯವರು ರೂಪಾಯಿ ೫೦೦ ನಿಧಿಯಿಂದ ಸಾಲವಾಗಿ ಕೊಡಬೇಕಾಗಿ ಕಳದ ಹಪ್ತೆಯ ಸಭೆಯಲ್ಲಿ ನಿರ್ಣಯಿಸಿದರು

ಇಂದೂರಿನ ಮಹಾರಾಣಿ ಇಂದಿರಾಬ್ಬಾ ಹೊಲ್ಕರ್ ಬಹದ್ದೂರ್‌ರವರು ಮಂಗಳೂರು ನಿರಾಶ್ರಿತ ಜನ ಸಹಾಯಕ ಸಂಘದ ಶಾಲಾ ಮಕ್ಕಳಿಗೋಸ್ಕರ ರೂ ೫೦ ದಾನವಾಗಿ ಕಳುಹಿಸಿದ್ದಾರೆ

ಇಂಡ್ಯದ ಎಲ್ಲಾ ನಿರಾಶ್ರಿತ ಜನ ಸಹಾಯಕ ಸಂಘಗಳಲ್ಲಿ ಮಂಗಳೂರಿನ ಸಂಘವು ವಿಶೇಷ ಸಹಾಯಕ್ಕೆ ಅರ್ಹವಾದದ್ದಾಗಿ ತನಗೆ ತೋರುವುದರಿಂದ ವರುಷಕ್ಕೆ ರೂ ೫೦೦೦ ತಾನು ವಂತಿಗೆ ಕೊಡುತ್ತೇನೆಂತ ಮುಂಬಯಿಯಲ್ಲಿದ್ದ ಮಾನ್ ಸಿವಿಲಿಯನ್ ಜೆ ಸಿ ವಿಟ್‌ವರ್ತ ದೊರೆಗಳು ಲಂಡನ್ನಿನಿಂದ ಇಲ್ಲಿಯ ಸಂಘದ ಸೆಕ್ರಟರಿ ಮಕುದ್ಮುಲ ರಂಗರಾಯರಿಗೆ ಕಾಗದ ಬರೆದು ರೂ ೫೦೦ನ್ನು ಚಾಲ್ತಿ ವರುಷದ ವಂತಿಗೆಯಾಗಿ ಕಳುಹಿಸಿದ್ದಾರೆ

ಇದೇ ತಾ ೨೭ರಲ್ಲು ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್ ಜರಗಿರುವದು ಮಂಡೂಡಿದ್ದೆಯಲ್ಲಿ ಸಬ್ ಅಸಿಸ್ಟಾಂಟರ ಸೆರ್ಜನರ ಬಗ್ಗೆ ಮನೆಯನ್ನು ಕಟ್ಟಿಸುವರೆ ಸಂಕಾರದವರ ಸ್ತೋಂಟನ್ನು ಕೇಳಿಕೊಳ್ಳಬೇಕೆಂತ ಕುಂದಾಪ್ರ ತಾಲೂಕು ಬೋರ್ಡ್ ಪ್ರೆಸಿಡೆಂಟರಿಂದ ಒಂದ ಪತ್ರವೂ ಈ ಕಟ್ಟೋಣಕ್ಕೆ ೬೫೦೦ ರೂಪಾಯಿ ಖರ್ಚು ತಗಲುವದಾಗಿ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರಿಂದ ತಯಾರಿಸಲ್ಪಟ್ಟ ಅಂದಾಜು ಪಟ್ಟಿಯೂ ಸಭೆಯ ಮುಂದಿಡೋಣಾಗಿತ್ತು. ಈ ಕಟ್ಟೋಣ ಕಟ್ಟಿಸುವರೆ ಯಾವ ಸ್ಥಳ ಬಳ್ಳೇದೆಂಬ ವಿಚಾರಣೆ ಮಿ. ಬೋರ್ಡ್ ಇಂಜಿನಿಯರರಿಂದ ಕೇಳಿಕೊಳ್ಳಬೇಕೆಂಬ ನಿರ್ಣಯವಾಗಿದೆ

ಕಾಸರಗೋಡ ಆಸ್ಪತ್ರೆಯ ಬೋರ್ಡಿಗೆ ಬಗ್ಗೆ ವಾರ್ತೆನ್ನ ಕಟ್ಟಿಸುವರೆ ರೂ ೬೫೦, ಒದೇ ಆಸ್ಪತ್ರೆಯಲ್ಲಿ ಒಂದು 'ಡೆತ್‌ಹೌಸ್' ಕಟ್ಟಿಸುವರೆ ೮೫೦ ರೂಪಾಯಿ ಆರು ಸೀಟುಗಳುಳ್ಳ ಕಟ್ಟಿಣದ ಪಾಯಿಖಾನೆಯನ್ನು ಕಟ್ಟಿಸುವರೆ ರೂ ೪೫೦ ಸಂಕ್ಷನ್‌ಮಾಡಬೇಕಾಗಿ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರರಿಂದ ಒಂದ ಪತ್ರವು ಸದಯ ಮುಂದಿಡಲ್ಪಟ್ಟಿತ್ತು. ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರು ಈ ಆಸ್ಪತ್ರೆಯ ವರ್ಷಾಂತ್ಯದ ಪರೀಕ್ಷಣೆ ನಡೆಸಿದ ವರೆಗೆ ಈ ಆಲೋಚನೆಯನ್ನು ಬಾಕಿ ಇಡಬೇಕಾಗಿ ಸಭೆಯಲ್ಲಿ ನಿರ್ಣಯವಾಗಿದೆ

ಮಂಜೇಶ್ವರದಲ್ಲಿ ಸಬ್ ಇನ್ಸ್‌ಪೆಕ್ಟರ್‌ರಾಗಿದ್ದ ಮಾ. ರಾ ಯು ವೀರಪ್ಪನವರಿಗೆ ಉಪ್ಪಿನಂಗಡಿಗೆ ವರ್ಗವಾಗಿದೆ

ಮಂಗಳೂರು ಮುನಿಸಿಪಾಲಿಟಿಯ ಚೇಯರ್‌ಮೇನ್ ರಾಗಿರುವ ಮಾ ರಾ ರಾ ದಿವಾನ್ ಬಹದ್ದೂರ್ ಎಮ್ ಮುಂಡಪ್ಪ ಬಂಗೇರರು ಮಂಗಳೂರು ಬ್ರಹ್ಮಸಮಾಜದ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿರುವರು

ಕೆನರಾ ಪಬ್ಲಿಕ್ ಕಸ್ಟೆಯನ್ಸ್ ಕಂಪೆನಿಯವರಿಗೆ ಉಪ್ಪಿ ಅತ್ತಕಡೆ ಮೋಟಾರ ಗಾಡಿಗಳ ಚಲಾವಣೆ ಬಗ್ಗೆ ಅಧಿಕಾರಿಗಳಿಂದ ಪರವಾನಿಗೆಯನ್ನು ದೊರಕಿ ಗಾಡಿಗಳ ಚಲಾವಣೆಯು ಇದೇ ದಶಂಬರ ತಿಂಗಳ ತಾ. ೩೦ರ ಬಳಿಕ ಪ್ರಾರಂಭವಾಗುವದೆಂಬದಾಗಿ ತಿಳಿಯುತ್ತೇವೆ

ನೋಟೀಸು.

ಮಂಗಳೂರಿನ ರಥಬೀದಿ ಶ್ರೀ ವೆಂಕಟರಮಣ ದೇವಸ್ಥಾನದ ಬದಿಯಲ್ಲಿ ಮೆಸರ್ಸ್ ಪಿ. ಎಮ್ ಕಾಮತ್ ಮತ್ತು ಕಂಪೆನಿ ಎಂಬ ಹೆಸರಿನಲ್ಲಿ ನಡಿಯುತ್ತಿದ್ದ ವಲಾಯತಿ ಔಷಧಿ ವ್ಯಾಪಾರದ ಕ್ಂಪೆನಿಯಲ್ಲಿ ಮಾಲೀಕರಾಗಿದ್ದ ಪಿ. ಎಮ್ ಕಾಮತ್ ಮತ್ತು ಮಿಜಾರ ಗೋಪಾಲ ಪೈಯವರು ಇವರ ಪೈಕಿ ಈ ಕಂಪೆನಿಯ ಮೂಲ ಕರ್ತವನ್ನು ಮಿಜಾರ ಗೋಪಾಲ ಪೈಗಳು ಬಿಟ್ಟಿರುವರು. ಸದ್ರಿ ಕಂಪೆನಿಯ ವ್ಯೆವಾಟುಗಳಿಗೂ, ಲೇವಾದೇವಿಗೂ, ಲಾಭನಷ್ಟಕ್ಕೂ ಸದ್ರಿ ಗೋಪಾಳ ಪೈಗಳವರು ಜವಾಬ್ದಾರರಲ್ಲವೆಂಬದನ್ನು ಈ ಮೂಲಕ ಸರ್ವರಿಗೂ ತಿಳಿಸೋಣಾಗಿದೆ.

ತಾ ೨೦-೧೧-೧೫ M Gopal Pai

ನೋಟೀಸು.

ಡಿಸ್ತ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ $\frac{9}{1915}$

ಜುವಾಂ ಕೋಸ್ತ್ರ-ಸಾಲ್ಡಾದರ ಕೋದ್ರುನ ಮಗ-ಉಡುಪಿ ತಾಲೂಕು ತೊನ್ಸೆ ಮಾಗಣೆ ಪಡುತೊನ್ಸೆ ಗ್ರಾಮದಲ್ಲಿರುವವನು } ಅರ್ಜಿದಾರ

ಎದ್ರಿರು

ಕಿದಿಯೂರು ಬಾವ ಸಾಹೇಬ ಕೂಡ 6 ಜನರು ... ಕ್ರೆಡಿಟರರು

1907ನೇ ಇಸವಿ ನಂಬ್ರ III‌ನೇ ಆಕ್ಟಿನ ಸೆಕ್ಷನ್ 12 ಕ್ಲೋಜ್ 2ರ ಪ್ರಕಾರ ಮೇಲ್ಕುಂಡ ಅರ್ಜಿದಾರನು ತನ್ನನ್ನು ದಿವಾಳಿ ಎಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ತಾರೀಕು 15ನೇ ದಶಂಬರ 1915ಕ್ಕೆ ತನಿಕೆಗೆ ಇಟ್ಟದೆ

C N Kuppuswami Aiyyer.
District Munsif

District Munsif's Court Udy 22nd Nov 15

ನೋಟೀಸು

ದಕ್ಷಿಣ ಕನ್ನಡ ಜಿಲ್ಲೆಯ ಉಡ್ಪಿ ತಾಲೂಕಿಗೆ ಸೇರಿದ ಪೆರ್ಡೂರಲ್ಲಿ ಒರುವ ರಥೋತ್ಸವದಕಾಲ ಗ್ಯಾಂಟೇ ಇಸವಿ ಮಾರ್ಚಿ ತಾ ೧೭ರಿಂದ ಗ್ಯಾಂಟೇ ಇಸವಿ ಎಪ್ರೀಲ್ ತಾ ೧೭ರ ವರೆಗೆ ಜಾನ ವಾರಗಳ ಸಂತೆಯು ನಡಯುವದೆಂದು ಈ ಮೂಲಕ ಸರ್ವಜನರಿಗೂ ಜಾನುವಾರಗಳ ವ್ಯಾಪಾರಸ್ಥರಿಗೂ ತಿಳಿಸೋಣಾಗುತ್ತದೆ.

ಸಂತೆಗೆ ಮಾರಾಟಕ್ಕೆ ತರುವ ಜಾನುವಾರುಗಳಿಂದ ಫೀಸು ವಸೂಲು ಮಾಡುವದಿಲ್ಲವೆಂದೂ ನೊದಲಾಗಿ ಸಂತೆಗೆ ತರಲ್ಪಡುವ ೧೦೦೦ ದನಗಳಿಗೆ ಪ್ರಥಮದ ೩ ದಿವಸಗಳ ವರೆಗೆ ಪ್ರಕ್ಟಾಪೆಯಾಗಿ ನೀವು ಒದಗಿಸಿಕೊಡೋಣಾಗುವದೆಂತಲೂ ರಥೋತ್ಸವಕ್ಕೆ ಹಾಜರಾಗುವದಕ್ಕೆ ಅಡ್ಡಿ ಇರದೆಂತಲೂ ಜಾನುವಾರುಗಳ ವ್ಯಾಪಾರಸ್ಥರಿಗೆ ತಿಳಿಸೋಣಾಗುತ್ತದೆ.

Camp Kasargode, 9—11—15. } N. Subba Rao, *For District Collector and President District Board.*

NOTICE.

The Canara High School Day will be celebrated this year on the 26th December 1915. All 'OLD BOYS' of the School are requested to be present on the occasion and to make the Celebration a success.

Canara High School, Mangalroe, 24-11-15 } A Padmanabhaiya, B A. L. T. President, School Day Committee

ಡಾಕ್ಟಾರ್ ಸಿ. ಡಿ'ಲಿಮಾ.
ಎಂಬ
ದಂತ ವೈದ್ಯರು

ಇನ್ನು ಇಲ್ಲಿ ಸ್ವಲ್ಪ ಸಮಯದವರೆಗಿರುವರು. ಬಿದ್ದು ಹೋದ ಅಥವಾ ಹುಳು ಹಿಡಿದು ಹಾಳಾದ ಹಲ್ಲುಗಳ ಸ್ಥಳಗಳಲ್ಲಿ ಏನೂ ಕುಂದು ಕೊರತೆಗಳಿಲ್ಲದಂತೆ ಕೃತಕ ದಂತಗಳನ್ನು ತಯ್ಯಾರಿಸಿಡುವರು.

ದರಗಳು ಸುಲಭ.

ವೈದ್ಯಾನಿನ ಇದಿರುಗಡೆಯಲ್ಲಿರುವ ಮೆ! ಪರ್ಲ್‌ರ ಶೋಪಿನ ಮಾಳಿಗೆಯಲ್ಲಿ ದಂತ ಚಿಕಿತ್ಸೆಯು ಮಾಡೋಣಾಗುವದು.

ವಿಳಾಸ —
ಡಾಕ್ಟಾರ್ ಸಿ. ಡಿ'ಲಿಮಾ,
ದಂತ ವೈದ್ಯ,
ಪರ್ಲ್‌ರ ಶೋಪು, ಮಂಗಳೂರು.

ಜೀನಸು ಧಾರಣೆ.

ಮಸ್ಕತಿ ಅಕ್ಕಿ	6—4—0	6—10—0
ಗಾಡಿ ರಾಶಿ ಹೊಸ ,,	4—10—0	5— 3—0
ಗುಡ್ಡು ,, ,,	5— 4—0	5—15—0
ಅವ್ವಲ್ ಬೆಲ್ಲಗೆ ,,	6— 8—0	6—10—0
ಗುಡ್ಡು ಬೆಲ್ಲಗೆ ,,	5—10—0	6—12—0
ರಂಗೂನು ಬೆಲ್ಲಗೆ ಗೋಣಿ ಗರ	11— 4—0	10—12—0
ಗೋದಿ ಗೋಣಿ ಗರ	13— 0—0	13— 8—0
ಹುರುಳಿ ಗೋಣಿ ಗರ ...	6— 6—0	7—10—0
ಕಡಲೆ ಗೋಣಿ ಗರ ಬೊಂಬೈ	9— 4—0	9—12—0
ತೊಗರಿ ಗೋಣಿ ಗರ ...	12— 0—0	13—12—0
ತೊಗರಿ ಬೇಳೆ ಗೋಣಿ ಗರ.	13— 8—0	16— 0—0
ಉದ್ದು ಗೋಣಿ ಗರ	11— 0—0	12— 0—0
ಊರುಬೆಲ್ಲ ಖಂಡಿ ಗರ		70— 0—0
ಉಪ್ಪು ಗೋಣಿ ಗರ	3— 3—0	3— 6—0
ಹೊಸ್ತಿ ಖಂಡಿ ಗರ	75— 0—0	82— 8—0
ಪೆಂಪ್ರಿಕೊಂಡಿ ಖಂಡಿ ಗರ	20—0—0	22— 0—0
ಎಳ್ಳಂಡಿ ಖಂಡಿ ಗರ ಬೊಂಬೈ	20— 0—0	30— 4—0
ಹೊಸ್ತಿ ಎಣ್ಣೆ ಮಣ ಗರ.	46—10—0	6—12—0
ಎಳ್ಳೆಣ್ಣೆ ಮಣ ಗರ(ಕುಡಾಸನ)	4— 6—0	4—12—0
ಚಿಮಣಿ ಎಣ್ಣೆ ಪೆಟ್ಟಿಗೆ ಗರ	4— 9—0	5— 0—0
ಮೋಂಬತ್ತಿ ಸಕ್ಕರೆ ಮಣ ಗರ	4— 0—0	4— 8—0
ಕಾಫಿ ಖಂಡಿ ಗರ.	240— 0—0	252— 0—0
ಹೊಸಬಳಿಗೋಟು ಖಂಡಿಗರ.	94— 0—0	98— 0—0
ಹೊಸ ಗೇರುಬೀಜ ಮುಡಿ ಗರ		2—13—0
ಕಳ್ಳಿಚ ಖಂಡಿ ಗರ.		50— 0—0
ಕಾಂಬ್ರ ತಗಡು ಮಣ ಗರ.		20— 0—0
ಕಾಂಬ್ರ ಪಾತ್ರೆಗಳು ಮಣ ಗರ.		22— 0—0
ಜೀನ ಪೆಕ್ಕೆ ತೀರು ಗರ.		18—12—0
ಪಚ್ಚೆ ತೆಸರು ಮುಡಿ ಗರ	5—10—0	5—12—0

ದಿನವಹಿ ಲೆಖ್ಖಾಚಾರ ಇತ್ಯಾದಿಗಳನ್ನು ಬರೆಯಲು ಅಗತ್ಯವುಳ್ಳ

1916ನೇ ವರುಷದ

ಪೊಕೆಟ್ ಡೈರಿಗಳು.

ಸಿವಿಲ್ ಮತ್ತು ರವಿನ್ಯೂ ಕೋರ್ಟುಗಳಲ್ಲಿ ಕೊಡಿಸೋಣಾಗುವ ಪ್ರೊಸೆಸ್ ಫೀಸು, ಭತ್ತೆ ಶೀರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳ, ಸಾಕ್ಷಿಗಾರರ ಪ್ರಯಾಣದ ಖರ್ಚು ಕೊಡೋಣಾಗುವ ದರಗಳ ಪಟ್ಟಿ, ವಕೀಲರ ಫೀಸು, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ಟ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟ್ಯಾಂಪ್ ಡ್ಯೂಟಿ, ಸೋಟ, ವಿಲ್ಲಾನು, ಬಾಡಿಗೆ ಚೀಟು, ರಿಜಿಸ್ಟ್ರಿ ನೋಟೀಸು. ಇತ್ಯಾದಿಗಳ ಮಾದರಿ ಫೋರ್ಮು, ಶರಕಳ ಮೊಕಾಬಲೆ ಪಟ್ಟಿ, ಟಪ್ಪಾಲಾಫೀಸಿನ ಕೆಲಸ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಲಷ್ಕರ್ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀಯ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ತಮಾನದಾರರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೆಟ್ ಬುಕು

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8
ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4

ವ್ಯಾಪಾರಸ್ಥರಿಗೂ ರವಿಂ ತಕ್ಕೊಳ್ಳುವವರಿಗೂ ರಿಯಾಯಿತಿಯ ಪ್ರತ್ಯೇಕ ದರಗಳಿವೆ

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಲು

ಡೈರಿಗಳು ಸಿಕ್ಕುವ ವಿಳಾಸ — ವಾರವಾ ಛಾಪಖಾನೆ,
ರಥಬೀದಿ, ಮಂಗಳೂರು

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿರ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಜಿಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯೆಷ್ಟೇ ಸೌಕರ್ಯ. ಖರ್ಚೇನೂ ವಿಶೇಷವಿಲ್ಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಯಲ್ಲಿ ವಶ್ಯಗೈದುದು ಇದರಿಂದ ದೊರೆಕಶಕ್ಕೆ ಲಾಭವಾದರೋ ಇದರಲ್ಲಿಯ ಎಣ್ಣೆಸೆಯು ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಆದನ್ನು ತಾನೇ ಅವಲಂಬಿಸುತ್ತದೆ ಆಳ್ಟ್ ಕೊಡಲೀವರ್ ಎಣ್ಣೆಯೂ ಅದರಿಂದ ವಶ್ಯಗೈದ ಬೇರೆ ವಿಷಧಗಳು ಹೊಲಸಾಗಿಯೂ ಕುಸ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತ ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಆಗಸರಿಸ ತ್ತದೆ ಆದರೆ ಅಂತಹ ಅಪಾಯಗಳಾದರು ಹೇವ್ವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರು ಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸ ಕೋಶ, ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕೋಶ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿನಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಔಷಧಿಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ 8—4—0. ಅರ್ಧ ಬಾಟ್ಲಿಗೆ 1—12—0.

ದಿ ಹೂಲನ್ ಮಾರ್ಟ್,
ಮಂಗಳೂರು, ದ.ಕ.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

1915ನೇ ಇಸವಿ ಕ್ರಮ ವ್ಯಾಜ್ಯದ ನಂಬ್ರ 382.

ಕುಬೆವೂರು ನಾರಾಯಪ್ಪಯ್ಯ — ವಾದಿ.

ಮತ್ತು

ತಂಗಿ ಹೆಂಗಸು ಸಹಾ — 1 ಪ್ರತಿವಾದಿರು.

೧ನೇ ಪ್ರತಿವಾದಿ ಶೀತು ಹೆಂಗಸು, ೧ನೇ ಪ್ರತಿವಾದಿ ಶೀತು ಹೆಂಗಸಿನ ಮಗಳು ೨ನೇ ಪ್ರತಿವಾದಿ ವೆಂಕತ್ತಪ್ಪ ಪೈಲಿ, ೧ನೇ ಪ್ರತಿವಾದಿಯ ಹೆಂಗಸಿನ ಮಗ

ಮಂಗಳೂರು ತಾಲೂಕು ವಳಲಂಕೆ ಮಾಗಣೆ ಪಡುಪಣಂಬೂರು ಗ್ರಾಮದ ಪಟೇಲ ದುಗ್ಗಪ್ಪಯ್ಯನ ಜಾಗದಲ್ಲಿರುವವರು

ಸದರಿ ಪ್ರತಿವಾದಿರಿಗೆ ತಿಳಿಯಪಡಿಸುವದೇನಂದರೆ:—

ಸದರಿ ಪ್ರತಿವಾದಿರು ಮೇಲ್ಕಂಡ ನಂಬ್ರಕ್ಕೆ ರೂ ೩೨೨—೦—೦ಕ್ಕೋಸ್ಕರ ವ್ಯಾಜ್ಯ ದಾಖಲು ಮಾಡಿರುವದರಿಂದ ಸದರಿ ಪ್ರತಿವಾದಿರು ಸ್ವತಹಾ ಆಗಲಿ ಅವರಿಂದ ಅಧಿಕಾರಹೊಂದಿದ ವಕೀಲರ ಮುಖಾಂತರವಾಗಲಿ ಸದರಿ ವ್ಯಾಜ್ಯವನ್ನು ತನಕಸಿಟ್ಟು ತಾರೀಖು ೨೫—೧೧—೧೯೧೫ನೇ ದಿವಸಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಉದಾಸರಣೆ ಕೊಡತಕ್ಕದ್ದೆಂತಲೂ ವ ಅಗತ್ಯವುಳ್ಳ ದಾಖಲೆಗಳನ್ನು ಹಾಜರು ಮಾಡತಕ್ಕದ್ದೆಂತಲೂ ಆ ಪ್ರಕಾರ ಹಾಜರಾಗದಿದ್ದರೆ ಸದರಿ ಯವರನ್ನು ಶಿಕ್ಷಾಮಾಡಿ ವೈಸಲು ಮಾಡಲಾಗುತ್ತದೆ.

ತಾ. 13—11—1915

(By order)
U Shiva Rao,
Head Clerk

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ವಿಜಂಟರು ಬೇಕಾ! ಪ್ರಹ್ಮಾನರ, ದಕ್ಷಿಣಕನ್ನಡ ಜಿಲ್ಲಾ, ಭರಪುರ್ ಕಮಿಷನ್!!

ಶತಮೂಲಿಕಾ ಅವಲೇಹ ಸಂಜೀವನಿ ಟೋನಿಕ್, ಬಾಲಸಂಜೀವನಿ ಟೋನಿಕ್, ವಸಂತ ಕುಸುಮಾಕರ ತೈಲ್ಯ, ಸುದರ್ಶನ ಮಾಲಸಿ, ಗರುಡಧ್ವಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ವಾರೆಯಬೇಡಿರಿ

೧. ಕಂಠೀರವ ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ ಮಾತರೋಗಗಳು ನಿಸ್ಸಂಶಯವಾಗಿ ಗುಣವಾಗುತ್ತವೆ. 16 ಮಾತ್ರೆ ರೂ 1

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ನಪ್ಪೇಂದ್ರಿಯವನ್ನು ಘಟ್ಟನೆ ಶಮನು ತ್ತದೆ ಕೊಲೆ 1ಕ್ಕೆ ರೂ 1

೩. ಅರೋಕಾರಿಷ್ಟ ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುತ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—4—0

೪ ಗರ್ಭ ಪುಷ್ಟಿಕರಣ ಇದು ಸ್ತ್ರೀಯರ ಎಲ್ಲಾ ಚಿವ ರೋಗಗಳನ್ನು ಗುಣವಡಿಸಿ ಸುಖಪ್ರಸವವನ್ನೂ ಸುಪುತ್ರಸನ್ನು ಕೊಡುತ್ತದೆ ಕೊಲೆ 6ಕ್ಕೆ ರೂ. 1.

೫ ಮಧುಮಾಧವಿ ಪಿಲ್ಸ ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಡತಕ್ಕ ಸಿದ್ಧೌಷಧವಾಗಿರುತ್ತದೆ ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹುಟ್ಟಿಯಲ್ಲಿ ಹುಟ್ಟುವ ಕೂರ್ಮ ವ್ಯಾಧಿ, ಜ್ವರದಜ್ಜೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1—8—0.

೭ ದರ್ಬಾರ್ ಬ್ಯೂಟಿ ವೆನ್ಸಿನ್. ಇದರ ಮುಖಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಾಶವಾಗಿ ಮುಖವು ಪೂರ್ವದಂತೆ ಹೊಳೆಯುತ್ತದೆ. ಬಾಟ್ಲಿ 1ಕ್ಕೆ 0—8—0.

೮. ಅಮೃತಸಾರ. ಇದು ವಾಯು ಮುಮ್ಮಾನ್ ಎಂಬ ಖಡಿ ತೂಲಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ 1.

N. B. — ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗಿಯೂ ಸಾನಿಧಾರು ಔಷಧಗಳಿರುತ್ತವೆ: ನಮ್ಮ ಕಟಲಾಗನ್ನು ತರಿಸಿಕೊಳ್ಳಿರಿ.

ಎಮ್. ವಿ. ಶಂಕರ್, ಆಯುರ್ವೇದಿಕಾರ್, ಮೆನೇಜರ್.

ಕನ್ನಡ ಕಥಾ ಪುಸ್ತಕಗಳು.

ಶುಕಸಪ್ತತಿ ೭೦ ಕಥೆಗಳು ಸಚಿತ್ರ	೨	೦	೦
ಸಚಿತ್ರ ವಿದ್ಯಾಮಂಜರಿ ಕಥೆಗಳು	೧	೮	೦
,, ಭಟ್ಟಿವಿಕ್ರಮಾದಿತ್ಯರಾಯನ ಕಥೆ	೧	೮	೦
ಸಚಿತ್ರ ರಾಮಾಯಣ ಕಥಾಸಂಗ್ರಹ ಗ್ಲೇಜ್ ಅವ್ವಲ್	೧	೪	೦
ಡಿ ರಫ್ ಪಯ್ಯಂ	೦	೧೨	೦
ಜೈಮಿನಿ ಭಾರತ ಕಥಾಸಂಗ್ರಹ	೦	೧೨	೦
ಕೃಷ್ಣಚೂಡಾಮೃತ	೦	೧೨	೦
ಭಾರತ ಕಥಾಸಂಗ್ರಹ	೪	೬	೦
ಪ್ರಭಾವತಿ ಶುಕಮಹಾರಾಜ ಕಥೆ	೦	೫	೦
ಬಳಕಾವಳಿ ಕಥೆ	೦	೬	೦
ಮದನಮೋಹನರಾಜಚರಿತ್ರೆ	೦	೬	೦
ಚಂಚಲಕುಮಾರಿ ಕಥೆ	೦	೪	೦
ಸಾಧ್ವಿ ಗುಣವಂತಿ ಕಥೆ	೦	೫	೦
ಪತಿವ್ರತಾಮಾಹಾತ್ಮ್ಯ ಕಥೆ	೦	೬	೦
ಹರಿಶ್ಚಂದ್ರನ ಕಥೆ	೦	೪	೦
ನಳದಮಯಂತಿಯರ ಕಥೆ	೦	೬	೦
ಬತ್ತೀಸಪುತ್ತಳಿ ಕಥೆ	೦	೫	೦
ಹುಚ್ಚುಮುಂಡೆಗಳ ಕಥೆ	೦	೬	೦
ಹಾಸ್ಯಕುಂಜರಿ ಶುಕವಾಣಿ ಕಥೆ	೦	೪	೦
ಮಂಜಪೋತಾಶ್ವಂಗಾರಾಯ ತಕಥೆ	೦	೧೨	೦
ಹಾತೀಮತಾಯಿ ಕಥೆ	೦	೧೨	೦

ಪುರಾಣಗಳು.

ಕೊರವಿರಾಮಾಯಣ ಗ್ಲೇಜಅವ್ವಲ್	೨	೦	೦
,, ಪಯ್ಯಂ	೧	೪	೦
ತೊರವೆ ರಾಮಾಯಣ ಪೀಯಂ	೧	೦	೦
ಜೈಮಿನಿ ಭಾರತ ಗ್ಲೇಜಅವ್ವಲ್	೧	೪	೦
,, ಪಯ್ಯಂ	೦	೧೪	೦
,, ಪೀಯಂ	೨	೬	೦
ಗದಾ ಪರ್ವ ಭಾರತ	೨	೪	೦
ಗದಾ ಸ್ಕಂಧ ಭಾಗವತ ಗ್ಲೇಜಅವ್ವಲ್	೫	೦	೦
,, ಪಯ್ಯಂ	೧	೦	೦

ಪದಗಳು.

ಪದಗಳ ಪುಸ್ತಕ ಬಾಗ	೧	೦	೦
ಪುರಂದರದಾಸರ ಕೀರ್ತನೆಗಳು ಭಾಗವಹಿರು	೦	೬	೦
ಕನಕದಾಸಕೀರ್ತನೆಗಳು	೦	೪	೦
ಗಿಳಿವಿಂಡು	೦	೪	೦
ಗಿಳಿಶಾಸ್ತ್ರ ಕಥೆ	೦	೫	೦
ಗಿಳಿಶಾಸ್ತ್ರ ಪದಾವಳಿ	೦	೪	೦
ಗಿಣಿಕಾ ತರಂಗಿಣಿ	೦	೪	೦
ಬಾಗಲ ತಡಿಯುವ ಪದ	೦	೦	೬
ಪಲ್ಲವಿಯಸಹಿತ ಹಾಡು	೦	೦	೬
ಕಗ್ಗ ವಿವಾಹ ಪದ	೦	೬	೦
ದೊಣಪರ್ವ	೦	೫	೦
ಲಕ್ಷ್ಮೀಶೋಭಾನೆ	೦	೧	೬
ಪಾಂಡವಗೀತೆ	೦	೧	೬
ವಿಷ ಸಹಸ್ರನಾಮ (ಶ್ಲೋಕ)	೦	೨	೦
ಹಾರ್ಮೋನಿಯಂಸ್ಕೂಲ್ ಬೋಧಿನಿ	೦	೪	೦

ಇವುಗಳಲ್ಲದೆ ಇನ್ನೂ ಅನೇಕ ತರಹ ಕನ್ನಡ, ಮರಾಠಿ, ಸಂಸ್ಕೃತ ಪುಸ್ತಕಗಳೂ, ಹೇರಾಫಿಲ್, ಸೆಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಫಿಟ್ಸ್, ಗಶಾಂಗ, ಗಂಡಭೇರುಂಡ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ ವ್ಯಾಪಾರಸ್ಥರಿಗೆ ಒಳ್ಳೇ ಕಮಿಷನ್ ದೊರಿಯುವದು ಆರ್ಡಾಣೆ ಸಾಲಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ ಬೇಕಾದವರು ಈ ಕೆಳಗಣ ವಿಳಾಸಕ್ಕೆ ಕಾಗದ ಬರೆಯಿರಿ.

ಶ್ರೀ ರಾಘವೇಂದ್ರ ವಿಲಾಸ,
ರಥಬೀದಿ ಮಂಗಳೂರು

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:— ಒಳಕ್ಕೆ ಶ್ರಮಪಟ್ಟು ಕೆಲಸ ಮಾಡಬೇಕಾದವರೂ, ಬಲಹೀನರೂ, ಮತ್ತು ಇಂದ್ರಿಯ ದೌರ್ಬಲ್ಯ, ಅಜೀರ್ಣ, ಎದೆನೋವು, ಶರೀರದಲ್ಲಿ ಘಳಿತದಿಂದಾದ ನಿಶ್ಯಕ್ತಿ ಮೊದಲಾದ ಪ್ರಕೃತಿಯುಳ್ಳವರೂ ಇದನ್ನು ಸೇವಿಸಿದ್ದಲ್ಲಿ ಧಾತುಪುಷ್ಟಿಯಾಗಿ ಬಹಳ ಬಲವು ಕಾಂತಿಯೊಳಗೊಳ್ಳುವದು ಸೇವನಾ ಕ್ರಮ— ಅದ್ಯಾಸವುಳ್ಳವರು 1 ತೊವಲಿ ತೂಕ ಯಾ ಗೋಲಾತ್ರ ಅಭ್ಯಾಸಿಸುವವರು 2 ಆಣೆ ತೂಕ ರಾತ್ರೆ ಊಟಾದ ಮೇಲೆ ಸೇವಿಸಿ ಹಾಲು ಕುಡಿಯಬೇಕಷ್ಟೆ

1 ಶೇರಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:— ಕಣ್ಣಿಗೆ ಅಂಜನ ಮಾಡಿದ್ದಲ್ಲಿ ಬೆಳಕ ದುರ್ಮಾರ್ಗ, ತಿಮಿರ, ೧೫ ವರ್ಷದ ಹೂವು, ಇರಳುಕಣ್ಣು, ತಾಪಹಿಂದು ಗುಣ

ಕ್ರಯ. ರೂ 0—12—0

ಮಹಾಜ್ವರಾಂಕುಶ:— ವಿಷಮಜ್ವರಕ್ಕೆ ದ್ವಿತೀಯ, ತೃತೀಯ, ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ. ಡಜನ್ ಕ್ರಯ. 0—8—0,

ಮೇಹಮುದ್ಗರವಟಿ:— ೨೦ ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ ಡಜನ್ 1೮ ಕ್ರಯ. 1—2—0.

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:— ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ: 0—12—0

ಚಂದನಾಸವ:— ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ. 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯು ಳ್ಳವರು ಕೆಟಲಾಗು ತರಿಸಿಕೊಳ್ಳಬಹುದು. ಪೇಟೆನ್-ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗೆಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ. 2೧8ನೇ. ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ತಾಂಬೂಲವಿಹಾರವು— ತಾಂಬೂಲವು ಉಪಯೋಗಿಸುವವರಿಗೆ ಅದು ಮುಖ್ಯವಾಗಿ ಮನಸ್ಸಿಗೆ ಸಂತೋಷವನ್ನುಂಟುಮಾಡುವ ಸುವಾಸನೆ ಅಡಿಕೆ ಹುಡಿ ಡಬ್ಬಾ 1ಕ್ಕೆ 4 ಆಣೆ ವಿ ಪಿ 10ರಿಂದ 12 ಡಬ್ಬಿಗಳವರಿಗೂ 5 ಆಣೆ ಪ್ರತ್ಯೇಕವು.

ಸೋದಾವಾಟರ್ ಪೌಡರ್— ಈ ಚೂರ್ಣದಲ್ಲಿ ಸ್ವಲ್ಪ ತೆಗೆದು ತಣ್ಣೀರಿನಲ್ಲಿ ವಿಶ್ರಯಮಾಡಿದರೆ ಅದು ಸ್ವಯಂವಾದ ಸೋಡಾವಾಟರ್ ಆಗುತ್ತದೆ. ಒಂದು ಸೀಸೆ ಚೂರ್ಣವು 6 ಸೀಸೆ ಸೋಡಾವಾಟರ್ ಮಾಡಬಹುದು. ಕ್ರಯ ಸೀಸೆ 1ಕ್ಕೆ 6 ಆಣೆಗಳು ವಿ ಪಿ 10ರಿಂದ 4 ಸೀಸೆಗಳವರಿಗೂ 5 ಆಣೆ ಪ್ರತ್ಯೇಕವು.

ಲಿಮೆನೆಡ್ ಪೌಡರ್— ಈ ಚೂರ್ಣದಲ್ಲಿ ಸ್ವಲ್ಪ ತೆಗದು ತಣ್ಣೀರಿನಲ್ಲಿ ವಿಶ್ರಯಮಾಡಿದರೆ ಶ್ರೀಮಂತರುಚಿಕರವಾದ ಲಮನೆಡ್ ಆಗುತ್ತದೆ. ಒಂದು ಸೀಸೆಯಲ್ಲಿರುವ ಚೂರ್ಣವು ಸುಮಾರು ೪ ದೊಡ್ಡ ಸೀಸೆಗಳ ಲಿಮನೆಡ್ ಮಾಡಬಹುದು. ಕ್ರಯ ಸೀಸೆ 1ಕ್ಕೆ 6 ಆಣೆ ವಿ ಪಿ 10ರಿಂದ 4 ಸೀಸೆಗಳವರಿಗೂ 5 ಆಣೆ ಪ್ರತ್ಯೇಕ.

ಪನ್ನೀರು ಗುಲಾಬಿ— ಅದು ಅರ್ಧ ಔನ್ಸ್ ಚಿಕ್ಕ ಸೀಸೆಯಲ್ಲಿ ಇದೆ. ಅದ ರಲ್ಲಿರುವ (ಗುಲಾಬಿ) ಪನ್ನೀರನ್ನು 3 ದೊಡ್ಡ ಸೀಸೆ ನೀರಿನಲ್ಲಿ ಶೇಖರಿಸಿದರೆ ಅವ್ವಲ್ ರಮಣೀಯ ಗುಲಾಬಿ ಆಗುತ್ತದೆ ಸೀಸೆ 1ಕ್ಕೆ 8 ಆಣೆ. ವಿ ಪಿ. 1 ಸೀಸೆಯಿಂದ 3 ಸೀಸೆ ವರಿಗೂ 5 ಆಣೆಗಳು

ಕಸ್ತೂರಿ ಮಿಶ್ರವಾದ ಲವಂಡರ್ ವಾಟರ್— ಇದು ನಮ್ಮ ಔಷಧ ಶಾಲೆಯಲ್ಲಿ ತಯಾರಿಸುವ ಅತಿ ಸುವಾಸನೆಯಾದ ವಸ್ತುವು. ವಿಲಾಯತಿಯಿಂದ ತರಿಸಿ ಮಾರ ವದಲ್ಲ ವಸ್ತ್ರಗಳಿಗೆ ಇದನ್ನು ಉಪಯೋಗಿಸಿದರೆ ಅತಿ ಸುಖವನ್ನು ಕೊಡುವದು ಇದನ್ನು 4 ತೊಟ್ಟಗಳು ವಸ್ತ್ರಗಳಿಗೆ ಹಾಕಿದರೆ ಅಂಗಡಿಗಳಲ್ಲಿ ಮಾರುವ ಲವಂಡರ್ ವಾಟರನ್ನು 20 ತೊಟ್ಟು ಬಿಟ್ಟರೆ ಎಷ್ಟು ವಾಸನೆಯಾಗಿರುವದೋ ಅದಕ್ಕಿಂತಲೂ ಹೆಚ್ಚು ಸುವಾಸನೆಯನ್ನು ನಮ್ಮ ಕಸ್ತೂರಿ ಲವಂಡರ್ ವಾಟರ್ ಮನೋರವ್ಯವಾಗಿ ವಾಸನೆಯನ್ನು ಕೊಡುವದು ಉಪಯೋಗಿಸಿದವರ ಸುತ್ತಲು ಬಹಳ ಹೊತ್ತು ರಮ್ಯವಾದ ವಾಸನೆಯನ್ನು ಬೀಸುವಂತೆ ಮಾಡುವದು. ಅರ್ಧ ಔನ್ಸ್ ಬುಡ್ಡಿಗಳಲ್ಲಿ ಮಾರಲ್ಪಡುವದು ಕ್ರಯ ಬುಡ್ಡಿ 1ಕ್ಕೆ 8 ಆಣೆ. 10ರಿಂದ 6 ಬುಡ್ಡಿಗಳಿಗೆ ವಿ ಪಿ ಖರ್ಚು 5 ಆಣೆ ಬೀಳುವದು

ವಾಸನೆ ಬಿಲ್ಲೆಗಳು— ಅನೇಕ ಗುಲಾಬಿ, ಮೋತಿಯಾ, ಲಾವಂಡರ್ ಇಂಥಾ ವಾಸನೆ ದ್ರವ್ಯಗಳಿಂದ ಮಾಡಲ್ಪಟ್ಟಿದೆ. ಬಟ್ಟೆಗಳ ಸಂಗಡ ಇಟ್ಟಿದ್ದರೆ ಸುವಾಸನೆಯಾಗಿ ಇರುವುದು ಡಬ್ಬಿ 1ಕ್ಕೆ 8 ಆಣೆ. ವಿ. ಪಿ. 1 ಡಬ್ಬಾ ಮೊದಲು 6 ಡಬ್ಬಾಗಳವರೆಗೆ 5 ಆಣೆ.

☞ ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲ ವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲೆ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಿದಿ, ತಂಜಾವೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವುದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ

ಗಳಂಬ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡ್ಡತಗಳನ್ನೂ ಹಳೇ ವ್ರಣ ಮತ್ತು ನಾರು ಪ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ.

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12. ಚಿಕ್ಕ ಸ್ಯಾಜು ಆಣೆ 8. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ. ವಿ. ಎಸ್. ಎ. ಎಮ್. ಬಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
೫೫ ಅಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್.

ತಂತೀ ವಿಳಾಸ:—"ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ವೃದ್ಧಿಯಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆದರ ಬಣ್ಣ ಬಹಳ ಆಗ್ಗ. ಕಪ್ ಮತ್ತು ಬ್ರಸ್ ಕೂಡಿದ ಬೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಹಾಜುಲ 0—4—0.

Dr. Navaratna & Sons,
Kalbadevi Road, BOMBAY.

ವಿಜಯರು:—ದಿ. ಕೂಲನ್ ಮಾರ್ಟ್,
ಸ್ಟೋರ್, ಹಂಪನಕಟ್ಟೆ, ಮಂಗಳೂರು.



B. Narasimha Prabhu,
Bantval, (SOUTH CANARA).
AGENT FOR
Malabar and South Canara.

ಮಿಜಾಬೆ ಮಶ್ಹಾ ಎಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ನರೆತ ಬೀಳೆ ಕೂದಲಿಗೆ ಲೇಪಿಸುವುದರಿಂದ ಬೀಳೆ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವುವು. ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ. ಬಣ್ಣವು ನೈಸರ್ಗಿಕ ಬಣ್ಣದಂತೆ ಕಪ್ಪಾಗುವುದು. ದೀರ್ಘಕಾಲ ಬಣ್ಣ ಉಳಿಯುವುದು. ಅನಂತರ ಕೂದಲು ಕೆಂಪು ಯಾ ತವುಡು ಬಣ್ಣಕ್ಕೆ ಮಾರ್ಪಡದು. ಒಂದು ಸಲ ಪರೀಕ್ಷಿಸಿ ನೋಡಿರಿ.

ಪೆಟ್ಟಿಗೆ ಒಂದರ ಕ್ರಯ ರೂ. 1—0—0. ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0. ವಿ. ಪಿ. ಚಾರ್ಜು ಬೇರೆ. ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address:—

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಟವಿನ (ಒಲೆಯ) ಉಪಯೋಗಗಳು.



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಮತ್ತು ಶಾಖವುಂಟಾಗುತ್ತದೆಯೋ ಅಷ್ಟು ಬೆಳಕನ್ನೂ ಮತ್ತು ಶಾಖವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು. ಮತ್ತು ನೀರನ್ನೂ ಕಾಯಿಸಬಹುದು. ಇದನ್ನು ಶುಲಭವಾಗಿ ಶುದ್ಧಮಾಡಬಹುದು. ಮತ್ತು ಸಾನೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧೦೦ನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ. 7 8 0
ಬರೀ ಒಲೆಗೆ ಮಾತ್ರ . . ಕ್ರಯ ರೂ. 5 12 0
೫೦೦ ಮತ್ತು ೧೦೦೦ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ 2 4 0

ಟಪ್ಪಾಲು ಹಾಕಲು ಪ್ರತ್ಯೇಕ.

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯದ ವಿಕ್ರಯಿಸಲ್ಪಡುತ್ತವೆ. ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಪಾವ್ ಡಿಪೊ,
೬೩೭ ಗಿರಗಾಂ ಬೊಂಬಾಯಿ.

ಪಂಡಿತ್ ಟಿ. ಬಾಬುರಾಯರ

ಪರಿಮಳಾಂಜನ

ಎಂಬ

(ವಿದ್ಯುಚ್ಛಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಧಾರ, ಒಕ್ಕಣ್ಣು, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೆಮ್ಮು, ಗಂಟ್ಲುನೋವು, ಜ್ವರ, ಉಳುಕು, ಘಾಯಗಳು, ಪಕ್ಷವಾತ, ದಿಮ್ಮನೆನೋವು, ಆನೆಕಾಲು, ಪಜ್ಜೆ, ಸುಟ್ಟ ಘಾಯ, ಕೈಕಾಲು ಮತ್ತು ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ಸಂಶಯವಿಲ್ಲದೆ ನಿಲ್ಲುವವು. ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಿಬಹುದು. ಡಬ್ಬಿ ೧ಕ್ಕೆ 0—8—೧. ಆರು ಡಬ್ಬಿಗಳಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

"ನಮ್ಮಲ್ಲಿ ಇನ್ನೂ ಅನೇಕ ಔಷಧಗಳಿವೆ, ಹಾಯಿಗಳೂ ಇರುವುದರಿಂದ ನಮ್ಮ ಕೆಲಸಗಾರರಿಗೆ ಬರೆಯಿರಿ.

ವಿಳಾಸ:— ಪರಿಮಳಾಂಜನ ಡಿಪೊ,
ಮಂಗಳೂರು.

ಮೋಸಹೋಗಬೇಡಿ! ಮೋಸಹೋಗಬೇಡಿ!

ಕೆಲವರು ನಮ್ಮ ಕಂಪೆನಿಯ ಹೆಸರನ್ನು ಹೇಳಿ ಜನಗಳಿಗೆ ಮೋಸಮಾಡುತ್ತಿರುವರು. ಆದ್ದರಿಂದ ನಮ್ಮಿಂದ ಕಳುಹಿಸುವ ಬಾಂಗಿಯನ್ನು ತೆಗೆದುಕೊಳ್ಳುವಾಗ ಡಿ. ಮನ್ನಾಲಾಲ್, ಡಿಲ್ಲಿ ವೈದ್ಯರು, 5 ಅವೆನ್ಯು ರೋಡ್, ಬೆಂಗಳೂರು ಸಿಟಿ ಎಂದು ಮುದ್ರಿಸಿರುವ ಲೇಬಲು ಇರುವುದನ್ನು ನೋಡಿ ತೆಗೆದುಕೊಳ್ಳಿರಿ.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ಈ ಮುರಬ್ಬಾವು "ಸಾಲಾಮಿಸ್ರಿ"ಯಲ್ಲಿ ತಯಾರಿಸಲ್ಪಟ್ಟಿದ್ದು ಅಲ್ಲವೆಂದು ವ್ಯಕ್ತಪಡಿಸುವವರಿಗೆ ಗವರ್ನಮೆಂಟಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

೧೦೦೦ ರೂಪಾಯಿಗಳ ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುವಾದ ಹಣವನ್ನು ನಾವು ಕೊಡದೆ ನಿರಾಕರಿಸುವುವಾದರೆ ಸರಕಾರದ ಮೂಲಕ ನಮ್ಮಿಂದ ಪಡೆಯಬಹುದು.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ಮೋಸಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಬಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗತ್ತೆ, ಶಾಮುಗತ್ತೆ ಇವುಗಳನ್ನು ಪಕ್ಕನಾಮಿಸ್ರಿಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಸಾಲಾಮಿಸ್ರಿಯೇ ಅಥವಾ ಬೇರೆ ತರಹಾ ದ್ದೇ ಎಂಬುವುದು ತಿಳಿದು ಬರುತ್ತೆ.

ರಿಜಿಸ್ಟರ್ಡ್ (ಟ್ರೇಡ್ ಮಾರ್ಕ್)

ಸಾಲಾಮಿಸ್ರಿ	ಮುರಬ್ಬಾವು —	ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಸಾಲಾಮಿಸ್ರಿ	ಮುರಬ್ಬಾವು —	ಮೂತ್ರದೊಂದಿಗೆ ಧಾತುವುಹೋಗುವುದನ್ನು ನಿಲ್ಲಿಸುವದು.
ಸಾಲಾಮಿಸ್ರಿ	ಮುರಬ್ಬಾವು —	ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಸಾಲಾಮಿಸ್ರಿ	ಮುರಬ್ಬಾವು —	ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ	ಮುರಬ್ಬಾವು —	ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಸಾಲಾಮಿಸ್ರಿ	ಮುರಬ್ಬಾವು —	ಮೆದುಳಿಗೆ ಬಲವನ್ನು ಕೊಡುವದು.
ಸಾಲಾಮಿಸ್ರಿ	ಮುರಬ್ಬಾವು —	ರಕ್ತವನ್ನು ವೃದ್ಧಿಪಡಿಸಿ ಧಾತುವನು ಶೇಖರಿಸುವದು.
ಸಾಲಾಮಿಸ್ರಿ	ಮುರಬ್ಬಾವು —	ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಸಾಲಾಮಿಸ್ರಿ	ಮುರಬ್ಬಾವು —	ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಸಾಲಾಮಿಸ್ರಿ	ಮುರಬ್ಬಾವು —	ಮೂಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಸಾಲಾಮಿಸ್ರಿ	ಮುರಬ್ಬಾವು —	ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಸಾಲಾಮಿಸ್ರಿ	ಮುರಬ್ಬಾವು —	ತಾಂಬ್ರ ಮತ್ತು ಭುಂಗಾರ ಭಸ್ಮಕ್ಕಿಂತಲು ಉತ್ತಮವಾದದ್ದು.

ಈ ಮುರಬ್ಬವನ್ನು ಪುರುಷರಿಗೂ ಸ್ತ್ರೀಯರಿಗೂ ಸೇವಿಸುವ ಹಾಗೆ ಕ್ಷಯದಿಂದ ನಷ್ಟವಾದ ತಯಾರು ನೋಡಲ್ಪಟ್ಟಿರುವದು.

ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋಗಿಸುವದರಿಂದ ಫೂರ ಗುಣಕೊಡುತ್ತೆ. 2—3 ಡಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತರದವರೆಗೂ ಗುಣಕೊಡುತ್ತೆ.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ 2. ಚನುಪಾನ ಪತ್ರಿಕೆ ಔಷಧದ ಸಂಗಡೆ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿವರೆಗೆ ಆಣೆ

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಹಮದಿ ಅವೆನ್ಯುರೋಡ್, ಬೆಂಗಳೂರು ಸಿಟಿ.

Vikata Vinodini.

An illustrated Kannada monthly journal full of humourous stories, witty sayings & comic sketches, moral truths, Etc.

Annual subscription (including postage)
Re. 1—0—0 only

Address:— **Vikata Vinodini Office,**
Cottonpet, Bangalore City.

ಕನ್ನಡ ಮಾಸಪತ್ರಿಕೆ.

ವಿಕಟ ವಿನೋದಿನಿ.

ಹಾಸ್ಯರಸ ಪ್ರಧಾನವಾದ ಪತ್ತು. ನೀತಿಪರವಾದ ಹಾಸ್ಯೋಲ್ಲೇಖನಗಳಿಂದ ಕೂಡಿರುವ ಸಚಿತ್ರವೂ ವಿಚಿತ್ರವೂ ಆದ ಮಾಸಪತ್ರಿಕೆಗೆ ಒಂದು ವರುಷದ ಚಂದಾ ಅಂಚೆ ಹಾಸಲು ಸೇರಿ ರೂ. 1 ಮಾತ್ರ.

ನಮ್ಮ ವಿಳಾಸ:— "ವಿಕಟ ವಿನೋದಿನಿ" ಆಫೀಸು,
ಅರಳೇಪೇಟೆ, ಬೆಂಗಳೂರು ಸಿಟಿ.

ಕರ್ಣಾಟಕ ವೃತ್ತ ಮತ್ತು ಧನಂಜಯ.

ಕಳೆದ 25 ವರ್ಷಗಳಿಂದ ಧಾರಾ ಸೇವೆಯನ್ನೂ ದೇಶ ಸೇವೆಯನ್ನೂ ಮಾಡುತಿರುವ ಈ ವಾರಪತ್ರಿಕೆಯು ಧಾರವಾಡದಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವದು.

ಲೋಕವ್ಯವಹಾರದ ಉಪಯುಕ್ತ ವಿಷಯಗಳ ಸದಭಿಪ್ರಾಯವನ್ನು ಜನರಲ್ಲಿ ಉಂಟುಮಾಡುವಂಥ ಚೆಲೋ ಸ್ಫುಟ ಲೇಖಗಳುಳ್ಳ ಮುಂಬಯಿ ಕರ್ಣಾಟಕದ ಉತ್ತಮ ತರಗತಿಯ ಈ ಪತ್ರವನ್ನು ದಕ್ಷಿಣಕನ್ನಡದವರೂ ಓದುವದು ಅಗತ್ಯ.

ಡೊಡ್ಡ ರೊಯಲ್ ಸ್ಯಾಜಿನ ಈ ಪತ್ರಿಕೆಗೆ ವಾರ್ಷಿಕ ಚಂದಾ ಮೊಬಲಗು ಟಪ್ಪಾಲು ಹಾಸಲು ಸೇರಿ ರೂ. ೨—೪—೦ ಆಗಿರುತ್ತದೆ; ಚಂದಾದಾರರಾಗಿ ಸೇರಲಪೇಕ್ಷಿಸುವವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವದು.

ಮ್ಯಾನೇಜರ್, ಕರ್ಣಾಟಕ ವೃತ್ತ ಮತ್ತು ಧನಂಜಯ,
ಮಂಗಳವಾರಪೇಟೆ, ಧಾರವಾಡ.

ಯು. ಯಸ್. ರಾವ್ ಕಂಪೆನಿ,

ಬುಕ್‌ಸೆಲರ್ಸ್, ಅವಿನ್ಯೂಯೋಡ್, ಬೆಂಗಳೂರು ಸಿಟಿ.

Perpetual Calendar.



ಸ್ಥಿತ ವರುಷವೂ ಉಪಯೋಗಿಸಬಹುದಾದ ಈ ಸೊಗಸಾದ ಕ್ಯಾಲೆಂಡರ್ ವನ್ನು ಕೂಡಲೇ ಕಳುಹಿಸಿಕೊಡಲಾಗುವುದು. ಈ ಕೆಳಗೆ ಕಂಡ ಪುಸ್ತಕಗಳಿಗೆ ಆರ್ಡರ್ ಕೊಡಿ—ಇದು ಬೆಲೆ 10 ಆಣೆ ಪೋಸ್ಟೇಜು ಪ್ಯಾಕಿಂಗ್ ಫ್ರೀ.

ವಾರ್ಷಿಕಫಲ ಜಾತಕ ಆಣೆ 6, ಮೈತ್ರೇಯಿ ಆಣೆ 2, ಸುಧರ್ಮ ಪ್ರಭಾವ ಸಂಚಿಕೆ ಆಣೆ 1, ಸೂಕ್ತಿಮಾಲೆ, 1—2 ಧಾರಾವಳಿ ಆಣೆ 6, ಭಕ್ತಿರತ್ನಾವಳಿ ಆಣೆ 8, ಗಾರ್ಹಸ್ಥ್ಯ ಮಕರಂದ ಆಣೆ 7, ಭರತ ಭೂಮಿಯ ಸುಪರ್ವಗಳು ಆಣೆ 4, ರಂಜಿಪತ್ತಿ ಆಣೆ 6, ದೇಶ ಭಕ್ತಿ ಆಣೆ 10

[ಈ ಸೈಕಿ ರೂ. 2—8—0 ಬೆಲೆಯ ಪುಸ್ತಕಗಳಿಗೆ ಈ ಬಹುಮಾನ]

ಕನ್ನಡ ಹೊಸ ಪುಸ್ತಕಗಳು.

ಸಂಗೀತ ಸಮಯಸಾರ	1—4	ಪ್ರಬಂಧ ಮುಕ್ತಾವಳಿ	0—12
ಹಾರ್ಮೋನಿಯಂ ಸ್ವಯಂ ಬೋಧಿನಿ	0—4	ಕನ್ನಡ ಆರೇಬಿಯನ್ ನೈಟ್ಸ್	2—2
ಬಾಲಿಕಾಗೀತ ಮುಕ್ತಾಕಲಾಪ ಸ್ವರಮುಕ್ತ	0—9	ಮುದ್ರಾಮಂ ರಾಕ್ಷಸ	1—10
ಕಲ್ಯಾಣ ಗೀತಾವಳಿ	0—6	ಭಕ್ತನಿಜಯ (ವಿಷ್ಣುಭಕ್ತರ ಕಥೆ)	1—2
ಅಭಿನವ ಸಂಗೀತ ಸಾರಿಜಾತ	0—4	ಅಧ್ಯಾತ್ಮಿಕ್ಷಾರ್	2—0
ರಸಿಕ ಜನಸಾರಸಂಗ್ರಹ ಭರತ ಶಾಸ್ತ್ರ	1—8	ಸ್ತ್ರೀ ರೋಚಿಷಿಜಯ	1—9
ಸ್ತ್ರೀಧರ್ಮಪದೀತಿ	0—9		

ಹೊಸ ಕಾದಂಬರಿಗಳು.

ದುರ್ಗಾದಾಸ (ಬಂಗಾಳಿ ನಾವೆಲ್)	0—12	ಪ್ರಥಮ ಪ್ರೇಮ ಬಿಜಾರ ನಾವೆಲ್	1—0
ಪ್ರಫುಲ್ಲ ,,	0—12	ಶಕ್ತಿ ,,	0—12
ಉಸ್ಮತ್ತೆ ,,	0—3	ಶೋಧನೆ ,,	0—12
ವಿಮ್ಮ ವಿವಾಹ ,,	0—4	ಜಡಪ್ರಭಾ ಕಾದಂಬರಿ	0—14
ಸೌದಾಮಿನಿ ,,	0—8	ಸುಭದ್ರೆ	0—5
ಸರಳಾ ,,	0—2	ಕಲಿಯುಗ	0—5
ಸುಪರ್ಣಾ ,,	0—2	ಕೃಷ್ಣಾನಾಥ ,,	0—8
ಅನಾಥ ಪ್ರೇತ ,,	0—1	ನನ್ನ ಆಚಾರ್ಯ (My Master)	0—4

ಈ ಸೈಕಿ 5 ರೂಪಾಯಿ ಬೆಲೆಯ ಪುಸ್ತಕಗಳನ್ನು ಒಡನೆವರಿ ತರಿಸುವವರಿಗೆ ಈ ಬಹುಮಾನ.

ಕಾದಂಬರಿಗಳು

ಸುಶೀಲೆ ಶ್ರೀ ತಿರುಮಲಮ್ಮನವರಿಂದ	0—6	ದೇವಿ ಚಾಧುರಾಣಿ ಬ ವೆಂಕಟಾಚಾರ್	1—4
ಸತೀತ್ವರಕ್ಷಾಪಹೆ (ನಳಾ ಭಾಗ 1)	,, 0—8	ಮಸೋಮ ,,	1—0
ಎರಾಗಿಜೆ (ಡಿಟೊ 2)	,, 1—0	ಪರಿಮಳ ,,	0—10
ವಿದ್ಯುಲ್ಲತಾ (ಪರಿಂಪೆ)	,, 0—14	ಕೊಹಿನೂರು ,,	0—12
ದಕ್ಷ ಕನ್ಯಾ ,,	1—8	ಸಾಧನೆ ,,	0—8

(ಇತ್ಯಾದಿ ಇವರ ಎಲ್ಲಾ ಕಾದಂಬರಿಗಳು)

ಹೊಸ ಪುಸ್ತಕಗಳು.

ಹರಿಕಥಾಮೃತಸಾರ.

ಮೂಲ ಮಾತ್ರ.

ದ್ವೈತ ವೇದಾಂತ ವಿಷಯವನ್ನು ಕನ್ನಡದಲ್ಲಿ ಇಷ್ಟು ಶುಲಭವಾಗಿ ತಿಳಿಸುವ ಗ್ರಂಥವು ಇದಕ್ಕೆ ಸರಿಯಾದದ್ದು ಬೇರೆ ಇಲ್ಲ ಬೆಲೆ 10 ಆಣೆ ಮಾತ್ರ.

ದ್ವಾದಶ ದ್ವಾದಶನಾಮಸ್ತೋತ್ರ ಮತ್ತು ಋಣಮೋಚನ ಸ್ತೋತ್ರ ಸಹ 0-1-6. ಇವುಗಳಲ್ಲದೆ ನಿತ್ಯಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯುಕ್ತವಾದ ಅನೇಕ ಪುಸ್ತಕಗಳೂ ದಾಸರ ಪದಗಳೂ ಮತ್ತು ಮುದ್ರೆಗಳು, ಪ್ರತಿಮೆಗಳು ಮೊದಲಾದ ಪೂಜಾ ಸಾಮಗ್ರಿಗಳೂ ದೊರಕುತ್ತವೆ. ಬೇಕಾದವರಿಗೆ ಕೆಟಲಾಗು ಕಳುಹಿಸಬಹುದು.

ವಿಳಾಸ:— ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ.

ಇನಾಂ ಸಾಮಾನು 60! ಇನಾಂ ಸಾಮಾನು 60

ಯೋಗ್ಯತಾ ಪತ್ರಿಕೆಗಳನ್ನು ಪಡದಿರುವ ಸಾವಿತ್ರೀ ಹೇರ್ ಆಯಿಲ್.

ಇದರ ಬೆಲೆ 60 ಇನಾಂ ಸಾಮಾನುಗಳೊಡನೆ ಡಬ್ಬಿ 1ಕ್ಕೆ 12 ಆಣೆ. ಯಾವ ಸ್ತ್ರೀಗಳಿಗೆ ತಲೆ ಕೂದಲು ಸುಂದರವಾಗಿ ಇರಬೇಕೆಂಬ ಉದ್ದೇಶವಿರುವುದೋ, ಕೂದಲು ಉದುರುವದನ್ನು ತಡೆದು ಕೋಮಲವಾಗಿ ಬೆಳೆಯಬೇಕೆಂಬ ಉದ್ದೇಶವಿರುವವರು ಬಜಾರಿನಲ್ಲಿ ದೊರೆಯುವ ಕೀಳು ತರದ ಎಣ್ಣೆಗಳನ್ನು ಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳುಮಾಡುವದಕ್ಕಿಂತ ನಮ್ಮ ಪರಿಮಳ ತೈಲವನ್ನು ಉಪಯೋಗಿಸಿರಿ ಈ ಪ್ರೋಕಪ್ರಖ್ಯಾತವಾದ ಎಣ್ಣೆಯನ್ನು ಸ್ವಲ್ಪವಾಗಿ ಕೈಯಲ್ಲಿ ಹಾಕಿಕೊಂಡು ಚೆನ್ನಾಗಿ ಉಜ್ಜಿ ತಲೆಯ ಕೂದಲಿಗೆ ಹಚ್ಚಿಕೊಂಡು ಬಾಚಿದರೆ ಸುವಾಸನೆ ಸುತ್ತಲೂ ಇರುವ ಮನೆಗಳಿಗೆ ಪರಿಮಳ ವಾಸನೆ ಹೊಗುವದು ಇದರ ಪರಿಮಳ ವಾಸನೆ ಕೇಳುವದಕ್ಕೆ ಬರೆಯುವದಕ್ಕೆ ಆಗುವದಿಲ್ಲ ಇದಲ್ಲದೆ ದೇಹದಲ್ಲಿನ ಉಷ್ಣವನ್ನು ತಗೆದು, ಕಣ್ಣಿಗೆ ತಂಪು ಕೊಡುವದು ತಲೆಯಲ್ಲಿರುವ ಮದುಳನ್ನು ಸರಿಮಾಡುವದು ಮುಖಕ್ಕೆ ಕಾಂತಿಯನ್ನೂ, ದೇಹಕ್ಕೆ ಆರೋಗ್ಯವನ್ನೂ, ಮನಸ್ಸಿಗೆ ಸಂತೋಷವನ್ನೂ, ಕೂದಲಿಗೆ ಆರೋಗ್ಯವನ್ನೂ ಕೊಡುವ ತೈಲ ಇದು ಒಂದೇ ಬೇರೊಂದಿಲ್ಲ ಬರೇ ಮಾತುಗಳಿಂದ ವರ್ಣಿಸುವದರಲ್ಲಿ ಪ್ರಯೋಜನವಿಲ್ಲ ಒಂದನ್ನು ತರಿಸಿ ನೋಡಿದರೆ ತಿಳಿಯುತ್ತ ಇನಾಂ ಸಾಮಾನುಗಳ ವಿವರ:— ಸ್ತ್ರೀಯರು ಧರಿಸಿಕೊಳ್ಳುವ ಕೊಂಡಿ ಗಿಡ್ಡ 6, ಮೈಧರನ 1 ಕಾಂಬೂಲ ಮಾತ್ರೆ 40 ದಂತದ ಬಾಚಣಿಗೆ 1, ಸೊಗಸಾದ ರಾಜರಾಣಿ ಕಾರೊಸೇಷನ್ ಪೆಟ್ಟಿಗೆ 1 ರವಿವರ್ಮ ಪೋಸ್ಟು ಕಾರ್ಡು 6, ಸುವಾಸನೆ ಅತ್ತರು ಬಿಲ್ಲೆ 1, ಗಂಧದ ಬಿಲ್ಲೆ 1 ಸ್ತ್ರೀಯರು ಧರಿಸಿಕೊಳ್ಳುವ ಬ್ರೋಚ 1, ಮೊತ್ತ 60 ನನ್ನ ಕಂಪನಿ ಪ್ರಖ್ಯಾತಿ ಹೊಂದುವುದಕ್ಕಾಗಿ ಇದೇ ತಿಂಗಳ ಒಳಗಾಗಿ ತರಿಸಿಕೊಳ್ಳುವವರಿಗೆ ಮಾತ್ರ ಈ ಕ್ರಮವನ್ನು ದೊರೆಯುತ್ತದೆ ಕೂಡಲೆ ಬರೆದು ತರಿಸಿಕೊಳ್ಳಿ

ನಮ್ಮ ವಿಳಾಸ — ವಿ. ಎ. ಎಸ್. ಪಾರ್ಫಾಮಿ ಕಂಪೆನಿ,
3 ಇರುಳಪ್ಪನ್ ಬೀದಿ, ಮದರಾಸು.

ಜಯವಿಜಯ
ಅಥವಾ
ತೂಗಾಡುವ ಅಸಿಪಂಜರ.

ಇದರಲ್ಲಿ "ದಿಲೀಸಸಿಂಹ ಲುರಾರ್" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು?

ಮತದ್ವೇಷವನ್ನು ನಿರ್ಮೂಲಿಸಬೇಕಾದರೆ ಎಲ್ಲ ಮತಗಳ ಸಾರಸಂಗ್ರಹಮಾಡಿ ಒಂದು ಹೊಸ ಮತವನ್ನು ಪ್ರಚಾರದಲ್ಲಿ ತರಬೇಕು. ಎಲ್ಲ ಮತಗಳೊಳಗಿನ ಸತ್ಯಾಂಶ ವನ ಸಂಗ್ರಹಿಸುವುದರಿಂದ ಮತದ್ವೇಷಕ್ಕೆ ಎಡೆಯಿರಲಿಕ್ಕಿಲ್ಲ. ಸನಾತನ ಧರ್ಮ ವಿಂದಿರೆ ಇದೇ ಈ ಸನಾತನ ಧರ್ಮವನ್ನು ಅವಲಂಬಿಸಿ ಧರ್ಮದ್ವೇಷವನ್ನು ನಿರ್ಮೂ ಲಿಸಿರಿ ಈ ರೀತಿಯಲ್ಲಿ ಧಾರೋಪಿಸಿದ್ದರು ಮತದ್ವೇಷವನ್ನು ಮುರಿಯಲು ತಮ್ಮ ಕುದುರೆಯನ್ನು ಮುಂದರಿಸುತ್ತಾರೆ

ಜಾತಿಭೇದ, ಮತಪಾಕ್ಷಿಕ್ಯ ಇವುಗಳಿಂದ ತೊಡಕುಂಟಾಗದ ಹಾಗೆ ಮೇಲೆ ಹೇಳಿದ್ದಂತೆ ಕೆಲವರು ಯತ್ನಿಸುತ್ತಿರುವಾಗ ಭಾಷೆಗಳ ವಿವಿಧತ್ವದ ಪ್ರಶ್ನೆಯನ್ನು ಕೈಕೊಂಡು ಹಿಂದೂದೇಶದಲ್ಲಿ ಸರ್ವತ್ರ ಒಂದೇ ಲಿಪಿ ಮತ್ತು ಒಂದೇ ಭಾಷೆಯನ್ನು ಪ್ರಚಾರಗೊಳಿಸುವುದಕ್ಕಾಗಿ ಕೆಲವರು ಸಾಹಸ ಪಡುತ್ತಿದ್ದಾರೆ. ಸಾರಾಂಶವೇನೆಂದರೆ ಅನೇಕರು ಈ ವಿಧವಾಗಿ ತಂತಮ್ಮ ಅಭಿಪ್ರಾಯಕ್ಕೆ ಅನುಗುಣವಾಗುವಂತೆ ಏಕರಾಷ್ಟ್ರೀ ಯತೆಯ ಭಾವನೆಗೆ ಬೇಕಾದ ಪೂರ್ವಸಿದ್ಧತೆಯನ್ನು ಮಾಡುತ್ತಿದ್ದಾರೆ. ಈ ಎಲ್ಲ ಮತಗಳನ್ನು ಸಂಕ್ಷೇಪವಾಗಿ ಒಂದೇ ವಾಕ್ಯದಲ್ಲಿ ಹೇಳುವದಾದರೆ ಹಿಂದೂದೇಶದೊಳ ಗಣ ಜಾತಿಭೇದ, ಮತದ್ವೇಷ ಮತ್ತು ಲಿಪಿ–ಭಾಷಾವೈಚಿತ್ರ್ಯ ಇವುಗಳನ್ನು ನಿವಾರಿಸದ ಹೊರತು ಏಕ ರಾಷ್ಟ್ರೀಯತ್ವದ ಭಾವನೆಯಾಗಲಿ ಅಥವಾ ಎಲ್ಲರಲ್ಲಿ ಒಂದೇ ಧ್ಯೇಯ ವಾಗಲಿ ಉದಯಿಸುವುದು ಸಾಧ್ಯವೆಂದು ನೆನೆಸುವುದು ಆಕಾಶೋದಕಗಳನ್ನು ಜಗಿಯುವುದೇ ಸರಿ!

ಪರಸ್ಪರ ಸಹಾಯಕ ಲೇವಾದೇವಿ ಸಂಘ, ಪುತ್ತೂರು.

ಈ ಸಂಘದ ೧೯೧೫ನೇ ಜೂನ್ ಅಂತ್ಯಕ್ಕೆ ಆಗುವ ಹಿಂದು ವರ್ಷದ ವಹಿವಾಟಿನ ವರದಿಯು ಹನ್ನಗತವಾಗಿದೆ ಅದರಲ್ಲಿ ಹಲವು ವಿಷಯಗಳು ಸಹಕಾರ ಸಮಾಜ ದವರು ಗಮನಕೊಡುವವುಗಳಾದ ಕಾರಣ ಅವುಗಳನ್ನು ವಿಮರ್ಶಿಸಲು ಉಪಕ್ರಮಿ ಸಿರುವೆವು.

ಸಂಘದ ಮೆಂಬರ ಸಂಖ್ಯೆಯನ್ನು ಪರಿಶೀಲಿಸಿದರೆ ಸಂಘವು ಜನಸಾಮಾನ್ಯರಲ್ಲಿ ವಿಶ್ವಾಸಕ್ಕೆ ಪಾತ್ರವಾಗಿದೆಯೆಂತಲೇ ನಿರ್ಣಯಿಸಬೇಕು. ಇದಲ್ಲದೆ ೧೯೧೫ನೇ ಜೂನ ತಿಂಗಳಾರಿ ಲೆಕ್ಕದ ಮೇರೆಗೆ ಪುತ್ತೂರಲ್ಲಿ ಒಟ್ಟು ಮನೆಗಳಿದ್ದುವು. ಅವುಗಳಿಂದ ಳಲಂ ಮೆಂಬರುಗಳು ಸಂಘಕ್ಕೆ ಸೇರಿದ್ದಾರೆಂದರೆ ಸೇಕಡಾ ೫೦ಕ್ಕೆ ಮಿಕ್ಕೆ ಮನೆಗಳು ಈ ಸಂಘದ ಆಶ್ರಯವನ್ನು ಹೊಂದುತ್ತಾರೆಂದು ಹೇಳಬಹುದು. ಮೆಂಬರುಗಳ ವೃತ್ತಿ ಯನ್ನು ಪರಿಶೀಲಿಸಿದರೆ ವ್ಯಾವಹಾರಸ್ಥರು ಹೆಚ್ಚಿನ ಸಂಖ್ಯೆ (೧೩೬ ಮಂದಿ), ವೃವಸಾಯ ವೃತ್ತಿಯವರು ೮೧, ಚಿತ್ತೆ ಪೇದೆ ಮತ್ತು ಇತರ ಜಿಲ್ಲರೆ ನವಕರರು ೪೯, ಸರಕಾರಿ ನವಕರರು ೩೫, ವರ್ಗದಾರರು ೨೦, ದರ್ಜಿಗಳು ೧೭, ವಕೀಲರು ೧೫, ಹೊಟೇಲು ಗಳ ಮ್ಯಾಲಿಕರು ೧೫, ವಕೀಲರ ಗುಮಾಸ್ತರು ೯, ಬಡಗಿಯವರು ೮, ಉಪಾಧ್ಯಾ ಯರು ೭, ಇತರ ಜಿಲ್ಲರೆ ವೃತ್ತಿಯವರು ೭ ಮಂದಿ ಎಂದು ತೋರುವುದು. ಈ ಪೈಕಿ ವರ್ಗದಾರರೂ ವಕೀಲರೂ ಸಂಘಕ್ಕೆ ತಮ್ಮ 'ಡಿಪಾಜಿಟ್'ಗಳಿಂದ ಸಹಾಯಮಾಡುವ ಆಶ್ರಯದಾತರೇ ಆಗಿರಬಹುದಲ್ಲದೆ ಸಾಲ ಪಡಕೊಳ್ಳುವವರಲ್ಲ.

ಹೆಚ್ಚಿನ ಮಂದಿಯಾದ ವರ್ತಕರು ಸಂಘವು ಹೊರಕ್ಕೆ ಎರವಾಗಿ ಕೊಟ್ಟ ೪೬,೫೦೦ ರೂಪಾಯಿಗಳಲ್ಲಿ ೧೪,೫೦೦ ರೂಪಾಯಿಗಳನ್ನು ವ್ಯಾಪಾರಕ್ಕೆ ಉಪಯೋಗ

ಗಿನಿದಂತೆ ಕಾಣುವುದು. ಇದರಿಂದ ವ್ಯಾಪಾರಕ್ಕೆ ಹೆಚ್ಚಿನ ಸೌಕರ್ಯವನ್ನು ಒದಗಿಸಿದಂತೆ ಸ್ಪಷ್ಟವಾಗುವುದು. ಇತರ ಮೆಂಬರುಗಳ ಸಂಖ್ಯೆಯನ್ನು ನೋಡಿದಾಗ ತಳ್ಳು ಮಟ್ಟಿಗೆ ಎಲ್ಲರೂ ಈ ಸಂಘದ ಪ್ರಯೋಜನವನ್ನು ಹೊಂದಲು ಉದ್ಯುಕ್ತರಾಗಿರುವರೆಂದು ತಿಳಿದುಬರುತ್ತದೆ. ಪಂಚಮರಲ್ಲದೆ ಇತರ ಎಲ್ಲಾ ಜಾತಿಯ ಮೆಂಬರುಗಳು ಇದರಲ್ಲಿ ಸೇರಿರುವರೆಂದು ಗೊತ್ತಾಗುತ್ತದೆ ಇವರೂ ಸಹಾ ಈ ಸಂಘಕ್ಕೆ ಸೇರಿ ಹೊಸ ದರ್ಕಾಸ್ತುಗಳ ಕ್ರಮದಲ್ಲಿ ಪಡಕೊಳ್ಳುವ ಸ್ಥಳಗಳನ್ನು ಈ ಸಂಘದ ಸಹಾಯದಿಂದ ಆಗಮೆಗೆ ತರುವಂತೆ ಸಂಘದವರು ಪ್ರಯತ್ನಿಸಿದರೆ ಶ್ಲಾಘ್ಯವಾಗುವುದೆಂದು ನಾವು ನಂಬುತ್ತೇವೆ.

ಮೆಂಬರರು ಪಡದ ಸಾಲಗಳ ತರವಾರ್ ನೋಡಿದರೆ, ೪೬,೫೮೯ ರೂಪಾಯಿ ಸಾಲದಲ್ಲಿ ೧೪,೫೦೧ ರೂಪಾಯಿ ವ್ಯಾಪಾರಕ್ಕೆ ವಿನಿಯೋಗಿಸಲ್ಪಟ್ಟಿತೆಂದು ಈ ಮೊದಲೇ ಸೂಚಿಸಿದೆವು ಹೆಚ್ಚಿನ ಮೊಬಲಗು ಇದೇ ಹಳೇ ಸಾಲಗಳ ಪರಿಹಾರಕ್ಕಾಗಿ ೧೩,೧೧೫ ರೂಪಾಯಿ ವೆಚ್ಚವಾದ ಕಾರಣದಿಂದಲೂ ಈ ಸಾಲ ಪರಿಹಾರದ ಅರ್ಜಿಗಳು ಎಲ್ಲಾ ಬಗೆಯ ಒಳ್ಳೆ ಅರ್ಜಿಗಳಲ್ಲಿ ಒಗ್ಗೆ ಆಗಿದ್ದುದರಿಂದಲೂ ಹಳೆ ಸಾಲಗಳ ತಗಾದೆ ಹೆಚ್ಚಿದೆ ಎಂದೂ ಗೊತ್ತಾಗುತ್ತದೆ ಇವೇ ಹೆಚ್ಚಿನ ಅರ್ಜಿಗಳು. ಜಾನುವಾರುಗಳನ್ನು ಕೊಂಡುಕೊಳ್ಳುವ ಒಗ್ಗೆ ೬೦ ಅರ್ಜಿಗಳಿದ್ದವು ಇವುಗಳಿಂದ ೨,೪೬೮ ರೂಪಾಯಿ ಬಟ್ಟಾಡೆಯಾಯಿತು. ಗೃಹಕೃತ್ಯದ ಬರ್ಜಿನ ಒಗ್ಗೆ ೭೪ ಅರ್ಜಿಗಳಲ್ಲಿ ೨,೬೦೦ ರೂಪಾಯಿ ವ್ಯಯವಾಯಿತು ನೆಲವನ್ನು ಆಗಮೆಗೆ ತರುವುದಕ್ಕೆ, ಕಬ್ಬೋಣಗಳ ಕಟ್ಟುಸುವಿಕೆ ಅಥವಾ ದುರುಸ್ತಿಗೆ, ವ್ಯವಸಾಯದ ಖರ್ಚಿಗೆ, ಸರಕಾರ ಕಿಸ್ತು ತೆರುವುದಕ್ಕೆ ಮುಂತಾಗಿ ಹಲವು ಅರ್ಜಿಗಳಿದ್ದುವು ವಿದ್ಯಾಭ್ಯಾಸದ ಖರ್ಚಿಗೆ ಎರಡೇ ಅರ್ಜಿಗಳು. ಇದರಲ್ಲಿಯೂ ೪೩ ರೂಪಾಯಿ ಮಾತ್ರ ಸಾಲ ಪಡಕೊಂಡಿರುವುದರಿಂದ ವಿದ್ಯಾಭ್ಯಾಸದ ನೇರಣ ಪ್ರೇಮವು ಇನ್ನೂ ಬಡಜನರಲ್ಲಿ ಅಂಟಿಕೊಳ್ಳದಿಲ್ಲವೆಂದು ಕಾಣುವುದು.

ಇದಲ್ಲದೆ ಒಟ್ಟಿಗೆ ಇತ್ಯರ್ಥವಲ್ಪಟ್ಟ ೭೪೬ ಅರ್ಜಿಗಳಲ್ಲಿ ೨೭೩ ಅರ್ಜಿಗಳು ಜಾಮೀನಿಂದ ೫೦೦ ರ ಒಳಗಣ ಮೊಬಲಗಿನ ಸಾಲಗಳ ಒಗ್ಗೆ ಒಂದಿರುವುದಾಗಿ ಗೊತ್ತಾಗುವುದು. ೨೫೦ಕ್ಕೆ ಮಿಕ್ಕಿ ೫೦೦ ರ ಒಳಗಣ ಸಾಲಗಳು ೨೫ ಇದರಿಂದ ಬಡಜನರಿಗೆ ಇದು ಬಹಳಮಟ್ಟಿಗೆ ಸಹಕಾರಿಯಾಗುತ್ತದೆಂದು ನಿರ್ಧರಿಸಬೇಕು. ಪರಸ್ಪರ ಸಹಾಯಕ ಸಂಘಗಳು ತಮ್ಮ ಪ್ರಾಮಾಣಿಕತನವೇ ಒಂದವಾಳವಾಗಿರುವ ಜನರ ಪ್ರಯೋಜನಕ್ಕಾಗಿ ಏರ್ಪಟ್ಟಿರುವುವು, ಅಲ್ಲದೆ ದೊಡ್ಡ ಸಾಹುಕಾರರ ಅಥವಾ ವರ್ಗದಾರರ ಪ್ರಯೋಜನಕ್ಕಲ್ಲ. ಇದಲ್ಲದೆ ಕಡಿಮೆ ಮೊಬಲಗಿನ ಸಾಲಗಳ ಸಂಖ್ಯೆಯು ಹೆಚ್ಚಾದರೆ ಸಂಘದಿಂದ ಅನೇಕ ಬಡ ಜನರು ಪ್ರಯೋಜನ ಹೊಂದುತ್ತಲಿರುವರೆಂದೂ, ಸಾಲಗಳನ್ನು ಕೊಡುವಾಗ ಅಗತ್ಯ ಅನಗತ್ಯಗಳನ್ನು ಪಂಚಾಯತರು ಕೂಲಂಕುಶ ತನಿಖೆ ನಡಿಸುವರೆಂದೂ ಸ್ಪಷ್ಟವಾಗುವುದು

'ಡಿಪಾಜಿಟು'ಗಳ ತನಿಖೆ ನೋಡಿದರೂ ಸಮಾಧಾನಕರವಾಗಿ ಕಂಡುಬರುತ್ತದೆ. 'ಪ್ರೊವಿಡೆಂಟ್ ಡಿಪಾಜಿಟ್' ಗಳಿಂದಲೇ ೧೫೫೩ ರೂಪಾಯಿ ಜಮೆಯಿದ್ದಂತೆ ಕಾಣುತ್ತದೆ 'ಸೇವಿಂಗ್ಸ್ ಡಿಪಾಜಿಟ್'ಗಳಲ್ಲಿ ವರ್ಷದ ಅಂತ್ಯದಲ್ಲಿ ೫೬೭೫ ರೂಪಾಯಿ (ಅಂದರೆ ವರ್ಷದ ಆದಿಯಲ್ಲಿರುವುದಕ್ಕಿಂತ ೧೭೦೦ ರೂಪಾಯಿಗೆ ಮಿಕ್ಕಿ) ಜಮೆಯಿತ್ತು ನಿರಪೇಕ್ಷವಾಣಿತಿಗಳನ್ನು ಮೆಂಬರರು ೫೬೬ರಿಂದ ೬೧ಕ್ಕೆ ತಗ್ಗಿಸಿಬಿಟ್ಟಿರುವುದು ಯೋಗ್ಯವಲ್ಲ. ಆದರೆ ಮೆಂಬರರಲ್ಲದವರ ಹಣವು ವರ್ಷದ ಆದಿಯಲ್ಲಿ ೧೪೫೫ ರೂಪಾಯಿ ಇದ್ದು ಅಂತ್ಯಕ್ಕೆ ೫೦,೦೦೦ಕ್ಕೆ ಮಿಕ್ಕಿತ್ತು. ಇದು ವಿಶೇಷ ಅಭಿವೃದ್ಧಿಯನ್ನು ತೋರಿಸಿದ್ದರೂ ಜನರಿಗೆ ಈ ಸಂಘದ ಮೇಲೆ ನಿಶ್ಚಲವಾದ ವಿಶ್ವಾಸವಿದೆಯೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಆದರೆ ಮೆಂಬರುಗಳ ಡಿಪಾಜಿಟುಗಳಿಗೂ ಮೆಂಬರುಗಳಲ್ಲದವರ ಡಿಪಾಜಿಟುಗಳಿಗೂ ಅಜಗಜಾಂತರವಿರುವುದರಿಂದ ಮೆಂಬರರು ಒತ್ತಾಯದಿಂದ ಕಟ್ಟುವ 'ಪ್ರೊವಿಡೆಂಟ್ ಡಿಪಾಜಿಟು'ಗಳನ್ನು ಮಾತ್ರ ತರುತ್ತಾರಲ್ಲದೆ ಮಿತವ್ಯಯದ ಮತ್ತು ದ್ರವ್ಯಸಂಗ್ರಹದ ಕಡೆಗೆ ಇನ್ನೂ ಲಕ್ಷ್ಯನಿಟ್ಟಿಲ್ಲವೆಂದು ಹೇಳಬೇಕು.

ಹಳೇ ಸಾಲಗಳ ಪರಿಹಾರಕ್ಕೆ ಹಣ ಹೊಂದುವವರು ತಮಗಿರುವ ಯಾವತ್ತೂ ಸಾಲಗಳ ಒಂದು ಪಟ್ಟಿಯನ್ನು ಕೊಡಬೇಕೆಂದು ಈ ಸಂಘದವರು ನಿಯಮವಿಟ್ಟಿರುವುದು ಬಲು ಚೆಲ್ಲೋದ್ದು. ಈ ಪಟ್ಟಿಯನ್ನು ಪಂಚಾಯತರಲ್ಲದವರು ನೋಡಲಿಕ್ಕೆ ಸಾಧ್ಯವಿಲ್ಲದ್ದು ಗುಪ್ತವಾಗಿ ಇಡುವುದರಿಂದ ಲೇಕೆದಾರರ ಗೌರವಕ್ಕೆ ಹಾನಿಬಾರದು. ಮತ್ತು ತಾಯಿಯೊಡನೆ ಆಕವಾಲಿಗಳನ್ನು ಹೇಳಿಕೊಂಡಂತೆ ಸಾಲಗಾರರು ತಮ್ಮ ನಿಜಸ್ಥಿತಿಯನ್ನು ಮರೆಮಾಚದೆ ಈ ರೀತಿಯಾಗಿ ಹೇಳಿಕೊಳ್ಳುವುದು ಸಂಘದ ಮೇಲಣ ವಿಶ್ವಾಸವನ್ನು [illegible]

ಕಳದ ವರ್ಷ ೬೦ ಸಾಲಗಳಲ್ಲಿ ಕಂತುಗಳ ವಾಯಿದೆ ತಪ್ಪಿದಕಾರಣ ವಾಯಿದೆ ಗುಜಾರಾಗ್ವವ ಮುಂಚೆಯೇ ಹಣಕ್ಕೆ ತಗಾದೆ ಮಾಡಿತ್ತು. ಈ ವರ್ಷದಲ್ಲಿ ೯೯ರಲ್ಲಿ ಈ ರೀತಿಯಲ್ಲಿ ತಗಾದೆ ಮಾಡಿರುವರು. ಇದರಿಂದ ಕ್ಷಪ್ರಕಾಲಕ್ಕೆ ಕಂತುಗಳನ್ನು ಸಲ್ಲಿಸುವ ಅಭ್ಯಾಸವು ಇನ್ನೂ ಕೆಲವರಲ್ಲಿ ಪ್ರಚಾರಕ್ಕೆ ಬಂದಿಲ್ಲವೆಂದು ಸೂತ್ರಾಗುತ್ತದೆ. ಈ ಕಾಲವಿಳಂಬದ ಚಾಳಿಯನ್ನು ಹುಟ್ಟುಹಾಕಿಸುವುದಕ್ಕೆ ಅಂಥವರಿಗೆ ಸೇಕಡಾ ೧೫॥೨ ದರದಲ್ಲಿ ಬಂಡವನ್ನು ಬಡ್ಡಿಯನ್ನು ವಿಧಿಸಿ ಹೆಚ್ಚಿಗೆ ವಿಧಿಸಿದ ಬಡ್ಡಿಯನ್ನು ಕ್ಷಪ್ರಕಾಲಕ್ಕೆ ಎಡೆಬಿಡದೆ-ತೆತ್ತು ಒಂದವರಿಗೆ ಹಂಚಬೇಕೆಂದು ಅವರು ನಿರ್ಣಯಿಸಿದರಿಂದ ಈಗ ಆ ಚಾಳಿಯು ತಗ್ಗಿಯದೆ ಎಂದು ತಿಳಿದುಬರುತ್ತದೆ. ಇತರ ಸಂಘದವರು ಈ ರೀತಿಯ ವಿಪರ್ಯಾಸವನ್ನು ಜಾರಿಗೆ ತಂದರೆ ಕಾಲಕಪ್ಪಿ ಹೋಗುವ ದುರ್ನಡತೆಯು ಮೆಲ್ಲಮೆಲ್ಲನೆ ಮಾಯವಾಗುವದು.

ಮಹಾಜನರ ಪ್ರಯೋಜನಾರ್ಥವಾಗಿ ಈ ಸಂಘವು ಆಗಾಗಲೇ ಆರಂಭಿಸಿಯದೆ ಊರಿಗೆ ಬೇಕಾದ ಒಂದು ದೀಪವನ್ನು ಅವರು ಕೊಟ್ಟಂತೆ ಇತರ ಊರ ಗೃಹಸ್ಥರು ೫೦ಂದೆ ಒಂದು ಹುಟ್ಟಿಗೆ ೫೦ ದೀಪಗಳನ್ನು ರಸ್ತೆಗಳಲ್ಲಿ ಉರಿಸುವುದಕ್ಕೆ ವಿಲೆವಾರಿ ಆಯಿತು. ಅವುಗಳನ್ನು ಉರಿಸುವ ಖರ್ಚನ್ನು ಪುತ್ತೂರ ತಾಲೂಕು ಬೋರ್ಡಿನವರು ವಹಿಸಿಕೊಂಡರು. ಸಂಘಕ್ಕೆ ಸಂಬಂಧಪಟ್ಟ ಸರ್ವಜನೋಪಕಾರಿ ಫಂಡಿನಿಂದ ಒಂದು ಪುಸ್ತಕಾಲಯವನ್ನು ಆರಂಭಿಸಿರುವರು. ಇದರಲ್ಲಿ ಇಂಗ್ಲಿಷು ವತ್ತು ದೇಶಭಾಷೆಯ ವರ್ತಮಾನ ಪತ್ರಿಕೆಗಳನ್ನೂ ಸಹಕಾರ ಬೋಧೆಗೆ ಅಗತ್ಯವಾದ ಗ್ರಂಥಗಳನ್ನೂ ತರಿಸಲು ಪ್ರಯತ್ನಿಸಿರುವರು.

ವರ್ಷದ ಅಂತ್ಯಕ್ಕೆ ೬೫,೦೦೦ ರೂಪಾಯಿಗಳ ವಹಿವಾಟು ನಡೆದು ಈ ವರ್ಷದಲ್ಲಿ ರೂ ೬೦೮—೫೫—೧೧ ಪೈಗಳ ಮುನಾಫೆ ಉಳಿದಿರುವುದು ಇದರಲ್ಲಿ ಸೇಕಡಾ ೬॥೫ ಅಂಶವನ್ನು ಜನೋಪಕಾರಿ ಫಂಡಿಗೆ ವಿಂಗಡಿಸಿಟ್ಟು ಉಳಿದ ೫೬೫-೫-೬ನ್ನು ಗತವರ್ಷದ ಆದಿಯಲ್ಲಿದ್ದ ರಿಜರ್ವ ಫಂಡಿಗೆ ಕೂಡಿಸಿ ರೂ. ೫೬೧೫ ೧೫-೬ ಸಂಘದಲ್ಲಿ ಉಳಿದಿದೆ

ಇದನ್ನೆಲ್ಲ ನೋಡುವಾಗ ಸಂಘವು ಉಚ್ಛ್ರಾಯ ಸ್ಥಿತಿಯಲ್ಲಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಪರಸ್ಪರ ಸಹಾಯ ಸಂಘಗಳ ವಿಷಯವಾಗಿ ಹೊಸ ಕ್ರಮಗಳನ್ನು ಜಾರಿಗೆ ತರುವುದಕ್ಕಾಗಿ ನೇಮಿಸಿದ ಕಮಿಟಿಯವರ ರಿಪೋರ್ಟನ್ನು ಆದರಿಸಿ ಮದ್ರಾಸ ಗವರ್ನಮೆಂಟಿನವರು ಈಚೆಗೆ ಮಾಡಿದ ಕ್ರಮವನ್ನು ಅನುಸರಿಸುವ ತವಕದಿಂದ ಸಂಘದವರು ಸೇಕಡಾ ೫೦ಕ್ಕೆ ಮಿಕ್ಕಾದ ಮುನಾಫೆಯನ್ನು ಮಾತ್ರ ರಿಜರ್ವ ಫಂಡಿಗೆ ಸೇರಿಸಿ ಉಳಿದ ಹಣವನ್ನು ಹಂಚಿಕೊಳ್ಳುವುದಕ್ಕೆ ಪ್ರಯತ್ನಿಸುವುದು ಪುತ್ತೂರಿಗೆ ತತ್ಕಾಲಕ್ಕೆ ಪ್ರಶಸ್ತವಲ್ಲ ಸಂಗ್ರಹಿಸಿಟ್ಟ ಹಣ ಹಂಚಿಕೊಂಡು ಹನಿಹನಿಯಾಗಿ ಹಾರಿಸಿ ಬಿಡುವುದಕ್ಕಿಂತ ಅದನ್ನು ಇನ್ನಷ್ಟು ವೃದ್ಧಿಗೊಳಿಸುವುದು ಅಗತ್ಯ. ಆರೋಗ್ಯ ಸಂಬಂಧವಾದ ಸಂಸ್ಥೆಯನ್ನು ಏರ್ಪಡಿಸಲು ಈಗೀಗಲೇ ಸಂಘದವರು ದುಡುಕುವುದು ಅವಶ್ಯವಿಲ್ಲ. ಸಹಜವಾಗಿಯೇ ಪುತ್ತೂರಿಗೆ ಯೂನಿಯನ್ನ್ ವಂಚಾಯತರ ವಿಪರ್ಯಾಸ ಆಗಬಹುದು, ಮತ್ತು ಈ ವಿಚಾರವನ್ನು ಆ ಯೂನಿಯನ್ನ್ ಪಂಚಾಯತವು ಕಟ್ಟಿಕೊಳ್ಳಬೇಕಾಗುವುದು ಆದರೆ ಪುತ್ತೂರಿಗೆ ಹ್ಯಾಸ್ಕೂಲು ಅಥವಾ IIIನೆ ಪಾರ್ಮ ವರೆಗೆ ಇರುವ ಒಂದು ಸೆಕೆಂಡರಿ ಸಾಲೆಯನ್ನು ವಿಪರ್ಯಾಸುವ ಪ್ರಯತ್ನಗಳು ನಡೆಯುತ್ತಲಿವೆ ಇಂಥ ಸಂಸ್ಥೆಯನ್ನು ನಡಿಸುವಷ್ಟು ಹಣ ಸಹಾಯವು ಯೂನಿಯನ್ ಪಂಚಾಯತದವರಿಗೆ ಇರದು. ಆದಕಾರಣ ಈ ಸಂಘದವರೇ ಆ ಕೆಲಸಕ್ಕೆ ಮುಂಬರಿಯುವುದು ಅತ್ಯಗತ್ಯ ಈಗಿರುವ ಹಣ ಎಲ್ಲಿ ಸಾಕಾಗುವುದು ಎಂದು ವಾಚಕರೂ ಪುತ್ತೂರು ಸಂಘದವರೂ ಒಂದುವೇಳೆ ಗ್ರಹಿಸಬಹುದು. ಆದರೆ ಒಂದು ಕಾಲದಲ್ಲಿ ಅವ್ಯು ಹಣ ಸಹಾಯ ಸಹಾ ಇಲ್ಲದೆ ಗಣಪತಿ ಸೆಕೆಂಡರಿ ಕಾಲೆಯ ಕಮ್ಮಿಟಿಯವರು ಅಗಾಧವಾದ ಕೆಲಸವನ್ನು ಕೈಕೊಂಡು ಪ್ರಯತ್ನದಿಂದಲೂ ಸ್ಥಿರ ಮನಸ್ಸಿನಿಂದಲೂ ಎಲ್ಲರೂ ಮೆಚ್ಚುವಂತೆ ಕೈಗೂಡಿಸಿದುದು ವಾಚಕರಲ್ಲಿ ಅನೇಕರಿಗೆ ಗೊತ್ತಿರಬಹುದು. ಆದುದರಿಂದ ರಿಜರ್ವ ಫಂಡು ಬೇಗನೇ ವೃದ್ಧಿಗೊಳಿಸಿ ಅದರಲ್ಲಿ ಒಲವಾದ ಒಂದು ಅಂಶವನ್ನು ವಿದ್ಯಾಭಿವೃದ್ಧಿಯ ಕಡೆಗೆ ವ್ಯಯಮಾಡುವುದು ಯೋಗ್ಯ.

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ.

(Progress of Literature Science, and Art.)

ಹಿಬ್ಬರ್ಟ್ಸ್ ಜರ್ನಲ್ (Hibbert's Journal) ಎಂಬ ಪ್ರಸಿದ್ಧವಾದ ಮಾಸಪತ್ರಿಕೆಯ ಸಂಪಾದಕರಾದ ಮಿ। ಜಾಕ್ಸ್ (Mr. Jacks) ಎಂಬವರು ಆ ಪತ್ರಿಕೆಯಲ್ಲಿ 'ಜಡವಸ್ತುಗಳ ದುರ್ಭುತ್ವ' (The tyranny of mere things) ಎಂಬ ವಿಷಯವಾಗಿ ಚಿತ್ತಾರ್ಹವಾದ ಒಂದು ಉಪನ್ಯಾಸವನ್ನು ಪ್ರಕಟಗೊಳಿಸಿದ್ದರು. ಯಂತ್ರನಿರ್ಮಾಣದ ಪ್ರಾಣಿಯು ಜಗತ್ತಿನ [illegible]

ಹೇಗೆ ಹಿಸುಕುತ್ತಿದೆ ಎಂಬುದು ಅವರಲ್ಲಿ ಸೂಚಿಸಲಾಗಿದೆ. ಮೊದಲಲ್ಲಿ ಸಮಾಜದ ಸಹಾಯಕ್ಕಾಗಿ ಉಂಟಾದ ಸಮಸ್ತ ಯಂತ್ರಗಳು, ಅವುಗಳಲ್ಲಿ ನೆಲಸಿರುವ ಅಸಾರವಾದ ಶಕ್ತಿಯು ದಿನೆಯಿಂದ, ಕೆಲಕೆಲವು ವಿಷಯಗಳಲ್ಲಿ ಮನುಷ್ಯಜಾತಿಯ ಮೇಲೆ ಅಧಿಕಾರವನ್ನೇ ನಡೆಯಿಸತೊಡಗಿವೆ. ಕೊಟ್ಯಾನುಕೋಟಿ ರೂಪಾಯಿಗಳನ್ನು ಹಾಕಿ ಯಂತ್ರಗಳನ್ನಿಟ್ಟು ಕಾರ್ಖಾನೆಗಳನ್ನು ಸ್ಥಾಪಿಸಲಾಗಿ ಅವು ಸರ್ವದಾ ನಿರಾತಂಕವಾಗಿ ನಡೆಯುವಂತೆ ನೋಡುವ ಭಾರವು ಆಯಾ ಜನಪದದ ಮೇಲೆ ಬೀಳುವುದು. ಅವು ನಿಂತುಹೋದರೆ ಆಯಾ ಜನಾಂಗಗಳು ಅಪಾರವಾದ ದಿನನಷ್ಟಕ್ಕೆ ಗುರಿಪಡುತ್ತವೆ. ಹತ್ತಿಯ ಗಿರಣಿಯಂಥ ಯಾವದೊಂದು ಉದ್ಯೋಗವು ಮುಳುಗುವ ಸಂಜ್ಞೆಯವು ಪ್ರಾಪ್ತವಾದರೆ, ತನ್ನೂಲಕವಾಗಿ ಜನರು ಒಪ್ಪಿಗೆ ಗತಿಯಿಲ್ಲದೆ ಒತ್ತಲೆ ತಿರುಗಬೇಕಾಗಬಹುದೆಂಬ ಭಯವು ಜನರನ್ನು ಬಾಧಿಸುವುದಕ್ಕೆ ಒದಲಾಗಿ, ಆ ಉದ್ಯಮದ ಅಂಗಗಳಿಂದ ವರ್ತಕರ ಮತ್ತು ಕೆಲಸಗಾರರ ಮೇಲೆ ಯಾವ ದುಷ್ಪರಿಣಾಮ ಉಂಟಾಗುವುದೋ ಎಂಬ ಭಯವೇ ಅಧಿಕವಾಗಿ ಬಾಧಿಸುವುದು. ಹೀಗೆ ಯಾವ ಉದ್ದೇಶ ಸಾಧಿಸುವುದಕ್ಕಾಗಿ ಆ ಯಂತ್ರಸಾಮಗ್ರಿಯು ನಿರ್ಮಾಣವಾಗಿದ್ದಿತೋ ಆ ಉದ್ದೇಶದ ಮಟ್ಟಿಗಾದರೂ ಅವು ಕಣ್ಣಿದಿರಿಗೆ ನಿಲ್ಲುವುದಕ್ಕೆ ಒದಲಾಗಿ, ಅವು ನಿರಾತಂಕವಾಗಿ ನಡೆಯುವಂತೆ ಯಾವ ಉಪಾಯ ಮಾಡಬೇಕೆಂಬ ಯೋಚನೆಯೇ ಹೊರಲು ಪ್ರಬಲವಾಗಿ ಗೋಚರಕ್ಕೆ ಬರುವುದು. ಹೀಗೆ ಪ್ರಧಾನತಃ ಜನಸಮಾಜದ ಪ್ರಯೋಜನಕ್ಕಾಗಿ ಸಂಪತ್ತು ಉಂಟಾಗಿಸ್ಥರೆ ಈಗ ಸಂಪತ್ತು ಕೆಡದಂತೆ ಕಾಪಾಡ ವುದಕ್ಕಾಗಿ ಸಮಾಜವು ಅಗಾಧ ದಾಸ್ಯವನ್ನು ವಹಿಸಿ ವರ್ತಿಸಬೇಕಾದ ದುರವಸ್ಥೆ ಪ್ರಾಪ್ತವಾಗಿದೆ

•

ಸಿಲೋನಿನ ಮಹಿಂದ ಕಾಲೇಜು ಮ್ಯಾಗೆಜಿನ್ ಎಂಬ ಪತ್ರಿಕೆಯಲ್ಲಿ ಒಂದು ಕಾಡುಕೋತಿಯ ವಿಷಯವಾಗಿ ವಿಚಿತ್ರವಾದ ಸಮಾಚಾರವು ತಿಳಿಯಪಡಿಸಲಾಗಿದೆ. ದೊಡುಡುವಾವಿನ (Dodanduwa) ಬಳಿಯ ತಿರನಗಾಮ (Thanagama) ಎಂಬ ಗ್ರಾಮದಲ್ಲಿ ಮನುಷ್ಯರು ಸಾಕಿ ಪಳಗಿದುದಲ್ಲವಾದ ಒಂದು ಕೋತಿಯು, ಅಲ್ಲಿಯ ಒಂದು ಕೂಸು ಅತ್ಯಾಗಲೆಲ್ಲ ಓಡಿ ಒಂದು ನಂತವಿನ ವುದೆಂದು, ಆ ಗ್ರಾಮಶಾಲಾಧ್ಯಕ್ಷನು ಹೇಳಿದುದನ್ನು ಕೆಂಳಿ ವಿ ಎಸ್ ಇ. ಪಿಯರ್ಸ್ (M. E. Pearce) ಎಂಬವರು ತಮ್ಮ ಮಿತ್ರರೊಂದಿಗೆ ಆ ಚಮತ್ಕಾರವನ್ನು ನೋಡುವುದಕ್ಕೆ ಹೋದರು. ಆ ಹುಡುಗಿಯು ಇರುವ ಮನೆಯು ಒಂದು ಸೀದಿ ಸಿಸಿ ಬಳಿಯಲ್ಲಿದ್ದಿತು. ಆಗಂತಕರು ಕುಳಿತುಕೊಂಡರು ಮಾರ್ಗದರ್ಶಕನು ಕೋತಿ ಎಲ್ಲಿರುವುದೆಂದು ಮೇಲೆ ನೋಡತ್ತ ಅದೊಂದು ತೆಂಗಿನ ಮರಗಳ ಮೊಪಿನಲ್ಲಿರುವುದೆಂದು ಗೊತ್ತುಮಾಡಿಕೊಂಡನು. ಬತನೆಯೇ ಮನೆಯ ಯಜಮಾನನು ಸಂಗೀತ ಕೂಡಲಿನ ತನ್ನ ಹೆಣ್ಣು ಕೂಸನ್ನು ತೊಳ್ಳಲ್ಲಿ ಹಿಡಿದುಕೊಂಡು ಆಗಂತುಕರ ಬಳಿಗೆ ಬಂದನು. ಮತ್ತು ಆ ಕೂಸು ದೀರ್ಘವಾದ ಒಂದು ಕೋದನ ಸ್ವರವನ್ನು ತೆಗೆಯ ತೊಡಗಿತು. ತಂದೆಯು ತಿಪಳೆ ಹೊಟ್ಟೆಯನ್ನು ಪುನಃ ಪುನಃ ಒತ್ತತ್ತ ಆ ಸ್ವರವು ತುಂಡು ತುಂಡಾಗಿ ಹೊರಡ ವಂತೆ ಮಾಡಿದನು. ಕೋತಿಯು ವಿಲಾಪವನ್ನು ಕೆಂಳಿ ಮರದಿಂದ ಮರಕ್ಕೆ ಹಾರಿ ಕಿವಾಪಿಸಿ ಒಂದು ಮಗುವಿನ ವೇಲೆ ವೆಲ್ಲನೆ ಹಾರಿ ಕುಳಿತು ಅದರ ತಂದೆಯು ತಲೆಯನ್ನು ಒಂದು ಕೈಯಿಂದ ಗಾಬರಿಕ್ಕೆ ತಳ್ಳಿ ಎಸ್ಟೊಂದು ಕೈಯಿಂದ ಮಗುವನ್ನು ಸಂತೈಸತೊಡಗಿತು. ಮತ್ತು ತನ್ನ ಮೋರೆಯನ್ನು ಕೂಸಿನ ಮೋರೆಯ ಒಳಿಗೆ ತಂದು ತಾನೂ ಸೊದನ ಸ್ವರ ತೆಗೆದು ಮಾತ್ತಿಟ್ಟಂತೆ ಮಾಡಿ ಸಂತವಿಸ ತೊಡಗಿತು. ಕೂಸು ಅಳುವುದನ್ನು ನಿಲ್ಲಿಸಿದಂತೆ ನಟಿಸಿದೊಡನೆ ಕೋತಿಯು ಪುನಃ ಹಾರಿ ಮರಗಳ ತೋಪನ್ನು ಸೇರಿತ. ಮತ್ತು ಒತ್ತಹಾಗೆ ಪುನಃ ಪುನಃ ಬಂದು ಎಂದಿನಂತೆಯೇ ಸಂತವಿಸುತ್ತಿದ್ದಿತು. ಕೂಸು ಅಳುತ್ತಿರುವಾಗ ಕೋತಿಗೆ ತುಂಬಾ ಬುಂಟಾಗುತ್ತಿದ್ದಿತೆಂಬುದು ಅದರ ಮೋರೆಯ ಮೇಲಿಂದಲೇ ತಿಳಿಯಬರುತ್ತಿದ್ದಿತ. ಈಗ ಮೂರು ತಿಂಗಳಿಂದ ಹೀಗೆ ನಡೆಯುತ್ತಿದ್ದುದಂತೆಯೂ ಬೇರೆ ಯಾವ ಮಗುವಿನ ವಿಷಯದಲ್ಲಿಯೂ ಕೋತಿಯು ಹಾಗೆ ವರ್ತಿಸುತ್ತಿರಲಿಲ್ಲವೆಂದೂ, ಈ ಕೇವಲ ಕಾಡಿನಲ್ಲಿದ್ದೇ ಜೀವಿಸಿಕೊಂಡಿರುವ ಕೋತಿಯೆಂದೂ ಆ ಹುಡುಗಿಯ ತಂದೆಯಿಂದ ತಿಳಿಯಬಂದಿತು. ಇದನ್ನು ನೋಡಿ ಆಶ್ಚರ್ಯಭರಿತರಾದ ಆ ಪಾಶ್ಚಿಮಾತ್ಯ ಗೃಹಸ್ಥರು ಈ ಸಂಗತಿಯನ್ನು ಪೂರ್ವೋಕ್ತ ಪತ್ರಿಕೆಯಲ್ಲಿ ಪ್ರಚುರಗೊಳಿಸಿರುವರು.

•

ಪತ್ರವ್ಯವಹಾರ.

ಮುಲ್ಕಿ ಯೂನಿಯನ್ ಕ್ಲಬ್ ಎಂಬ ವಾಚನಮಂದಿರದ ಮುಹೂರ್ತ ಸಮಾರಂಭವು.

ಈ ಊರಿಗೆ ಇತ್ತಲಾಗೆ ವರ್ಗವಾಗಿ ಬಂದ ಸಬ್ ರಿಜಿಸ್ಟ್ರಾರ ರಾ|| ವೈ. ಮಂಗೇಶರಾಯರವರ ಪ್ರೇರಣೆಯಿಂದ ಈ ಊರಲ್ಲಿ ಒಂದು ಕ್ಲಬ್ಬನ್ನು ಸ್ಥಾಪಿಸುವ ಆಲೋಚನೆ ಹುಟ್ಟಿತು. ನಮ್ಮ ಜನಪ್ರೀತರಾದ ಡಾಕ್ಟರ್ ಕೆ. ರಾಮರಾವ್ ಮತ್ತು ರಾ|| ಮುಂಡ್ಕೂರು ಭವಾನಿರಾವ್ ಇವರ ಸಾಹಸದಿಂದಲೂ ರಾ|| ಬಂಗ್ಲೆ ಕಾರವರೇ ಮೊದಲಾದ ಗೃಹಸ್ಥರ ಸಹಾನುಭೂತಿ ಔದಾರ್ಯಗಳಿಂದಲೂ ಆ ಬಗ್ಗೆ ಆಮಂತ್ರಿಸಲ್ಪಟ್ಟ ಸಭೆಯಲ್ಲಿ "ದಿ ಯೂನಿಯನ್ ಮುಲ್ಕಿ" ಎಂಬ ಹೆಸರಿನ ಕ್ಲಬ್ಬನ್ನು ಸ್ಥಾಪಿಸಲು ನಿರ್ಣಯಿಸಲ್ಪಟ್ಟಿತು. ಸಬ್ ರಿಜಿಸ್ಟ್ರಾರರಾದ ರಾ|| ವೈ. ಮಂಗೇಶರಾಯರವರನ್ನು ಆಡಳಿತೆ ಅಧ್ಯಕ್ಷರನ್ನಾಗಿಯೂ ಡಾಕ್ಟರ್ ರಾ|| ಕೆ ರಾಮರಾಯರನ್ನು ಉಪಾಧ್ಯಕ್ಷರನ್ನಾಗಿಯೂ ರಾ|| ಮುಂಡ್ಕೂರು ಭವಾನಿರಾಯರನ್ನು ಖಜಾನ್ಚಿಯವರಾಗಿಯೂ ಮತ್ತು ರಾ|| ಕೆ. ಶ್ರೀನಿವಾಸರಾಯರನ್ನು ಕಾರ್ಯದರ್ಶಿಗಳಾಗಿಯೂ ಆರಿಸಿರುವರು. ಸಭೆಯಲ್ಲಿ ನಿರ್ಣಯವಾದಂತೆ ಕ್ಲಬ್ಬಿನ ಮುಹೂರ್ತ ಸಮಾರಂಭವೂ ಇದೇ ತಿಂಗಳ ತಾ. 4ನೇ ಶನಿವಾರ ದಿನದ ರಾ|| ಬಂಗ್ಲೆಕಾರರಿಂದ ಕ್ಲಬ್ಬಿನ ಉಪಯೋಗಕ್ಕೆ ಉಚಿತಾರ್ಥವಾಗಿ ಬಿಟ್ಟುಕೊಟ್ಟ ಮನೋಹರವಾದ ಮನೆಯಲ್ಲಿ ಸನ್ಮಾನ್ಯರಾದ ತಾಲೂಕು ಬೋರ್ಡ್ ಪ್ರೆಸಿಡೆಂಟರಾದ ರಾ|| ಸುಬ್ಬಾರಾಯ ಪೈಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರುಗಿತು. ಸಭಾಕಾರ್ಯಕ್ಕೆ ಪ್ರಾರಂಭದಲ್ಲಿ ಸರ್ವರೂ ಎದ್ದು ನಿಂತು ದೇವತಾ ಪ್ರಾರ್ಥನೆ ಮಾಡಿ ತರುವಾಯ ಕವಿ ಸಮ್ರಾಟ್ ಸರ್ ರವೀಂದ್ರನಾಥ ಠಾಕೂರವರಿಂದ ವಿರಚಿತವಾದ ಕವಿತೆಯ ನ್ನವಲಂಬಿಸಿ ಕನ್ನಡಿಸಿರುವ ಹಿಂದೂ ದೇಶದ ರಾಷ್ಟ್ರಗೀತವನ್ನು ಉಪಸ್ಥಿತೀಯಧಿಕಾರಿಗಳಾದ ಬಾಲಕರಿಂದಾರರು ಸುಸ್ವರದಿಂದ ಹೃದಯಂಗಮವಾಗುವಂತೆ ಹಾಡಿ ತೋರಿಸಿದರು. ಅನಂತರ ಅಧ್ಯಕ್ಷರು ಆಸೀನರಾಗಲು ಕ್ಲಬ್ಬಿನ ಕಾರ್ಯದರ್ಶಿಗಳಾದ ರಾ|| ಕೆ ಶ್ರೀನಿವಾಸರಾಯರು ಕ್ಲಬ್ಬಿನ ವಿಷಯವಾಗಿ ತಿಕ್ಕ ನಾದಿಯನ್ನು ಓದಿದರು. ಆ ವರದಿ ಪ್ರಕಾರ ಆತನಕ ಕ್ಲಬ್ಬಿಗೆ ೫೦ ಮಂದಿ ಸದಸ್ಯರು ಸೇರಿರುವದಾಗಿಯೂ ಆವರೆಗೆ ಸೇರಿದ ೬ ಮಂದಿ ಪೋಷಕರಿಂದ ೫೦ ರೂಪಾಯಿ ಪೋಷಕ ದ್ರವ್ಯವು ಜಮೆಯಾಗಿರುವದಾಗಿಯೂ ಇಂಗ್ಲಿಷ್, ಕನ್ನಡ, ತಮಿಳು ಭಾಷೆಗಳ ದೈನಿಕ ಸಾಪ್ತಾಹಿಕ, ಮಾಸಿಕ, ಪತ್ರಿಕೆಗಳನ್ನು ತರಿಸುವ ಏರ್ಪಾಡು ಮಾಡಿರುವದಾಗಿಯೂ ಉದಾರಿಗಳಾದ ಕೆಲವು ಗೃಹಸ್ಥರಿಂದ ಕ್ಲಬ್ಬಿನ ಉಪಯೋಗಕ್ಕೆ ಕುರ್ಚಿ ಮೇಜು ಗುಂಪ ಮೊದಲಾದವುಗಳು ಉಚಿತಾರ್ಥವಾಗಿ ಕೊಡಲ್ಪಟ್ಟಿರುವದಾಗಿ ಸಹ ತಿಳಿಸಿ ಓದಲ್ಪಟ್ಟ ವರದಿಯನ್ನು ಓದಿಕೇಳಿದ ನಂತರ ಡಾಕ್ಟರ್ ರಾ|| ಕೆ. ರಾಮರಾಯರವರು "ಸಂಕಲ್ಪ" (Urna) ಎಂಬ ವಿಷಯವಾಗಿಯೂ ರಾ|| ಪಿ. ಸೋನ್ನರವರು ಕ್ರಿಕೆಟ್ಟಿನ ವಿಷಯವಾಗಿಯೂ ರಾ|| ರಾವ್ ಕೃಷ್ಣ ಪೂಜಾರವರು ಕ್ಲಬ್ಬಿನ ಪ್ರಯೋಜನಗಳ ವಿಷಯವಾಗಿ ರಾ|| ಎಂ. ಚಾಪೆಯವರು ಬ್ಯಾಡ್ಮಿಂಟನ್ ವಿಷಯವಾಗಿಯೂ ರಾ|| ಮುಂಕುಂದರಾಯರು ರಾಜಭಕ್ತಿ ವಿಷಯವಾಗಿಯೂ ರಾ|| ಬಂಗ್ಲೆಕಾರರವರು ಬ್ಯಾಟ್ಮಿನ ವಿಷಯವಾಗಿ ದೇಶಭಾಷೆಯ ಭಾಷಣಗಳನ್ನು ಮಾಡಿದರು. ತರುವಾಯ ಸನ್ಮಾನ್ಯರಾದ ಅಧ್ಯಕ್ಷ ಮಹಾಶಯರು ಅವರ ಸುದೀರ್ಘವಾದ ಕಾಲಾನುಭವದಿಂದ ಸೂಚಿಸಲ್ಪಟ್ಟ ತಿಳಿಗನ್ನಡದಲ್ಲಿ ಸುರಸವಾದ ಭಾಷಣವನ್ನಾರಂಭಿಸಿದರು. ತನ್ನಂತೆಯೇ ಪರರಿಗೂ ಸುಖಮಯಗಳೆಂದು ತಿಳಿದು ಪರರ ಸುಖ ವಿನೋದಕ್ಕಾಗಿಯೂ ಪರರ ಸುಖವರ್ಧನೆಗಾಗಿಯೂ ಪ್ರತಿಬಿಟ್ಟರು ತತ್ಪರರಾಗಿರಬೇಕಾದುದಿಂದ ಒಬ್ಬರಲ್ಲೊಬ್ಬರಿಗೆ ಪ್ರೀತಿಯುಂಟಾಗಿ ಪ್ರೀತಿಯಿಂದ ಐಕ್ಯವೂ ಐಕ್ಯದಿಂದ ಉನ್ನತಿಯೂ ಪ್ರಾಪ್ತವಾಗುವದು. ಬರೇ ಬಗ್ಗಟ್ಟಿನಿಂದ ನಮಗೆ ಪ್ರಯೋಜನ ಉಂಟೆಂತ ಕೇಳಿದವರಿಗೂ ಯಾ ಅಲ್ಪ ಸ್ವಲ್ಪ ಪ್ರಯೋಜನ ಅದರಲ್ಲಿ ಕಂಡು ಬಂದರೂ ಬಗ್ಗಟ್ಟಿನ ಪೂರ್ಣ ಪ್ರತಿಫಲವನ್ನು ಪಡೆಯುವದಕ್ಕೂ ಬಗ್ಗಟ್ಟು ಬಲಿತು ಚಿರಸ್ಥಾಯಿ ಯಾಗ ವದಕ್ಕೂ ಬಗ್ಗಟ್ಟಿನ ಅಂತರ್ಗತವಾದ ಮೇಲಿನ ಗುಣಗಣಗಳೆನ್ನು ಅನುಸರಿಸಿ ವರ್ತಿಸಬೇಕಾದುದು ಅವಶ್ಯವೆಂದು ಬಗ್ಗಟ್ಟಿನ ಉನ್ನತಿಯೂ ನಮಗೆ ಪ್ರಾಪ್ತವಾಗುವದೆಂದು ಬಗ್ಗಟ್ಟು ಮತ್ತು ಉನ್ನತಿಯ ವಿಷಯ ತಮ್ಮ ಅನುಭವಿಕ ವಿಚಾರವನ್ನು ಅಧ್ಯಕ್ಷರವರು ಬಹಳವಾಗಿ ವಿವರಿಸಿದರು. ಮತ್ತು ನಮ್ಮ ದಯಾಳುಗಳಾದ ಸರಕಾರದವರು ಸಮ್ಮನ್ನು ದಯಾಭಾವದಿಂದ ನಡಿಸುವ ರಾಜ್ಯಭಾರದ ವಿಷಯವಾಗಿಯೂ ನಮ್ಮ ಸರಕಾರಿಯವರು ಉದಾರವಾಗಿ ಗುಣಾಳ ವಿಷಯಗಳಿಗೆ ವಿಶೇಷವಾಗಿ ಮಾತಾಡಿ ರಾಜಭಕ್ತಿಯಿಂದ ನಡೆಕೊಳ್ಳುವದು ನಮ್ಮ ಧರ್ಮವೆಂತ ಬುದ್ಧಿಹೇಳಿದರು. ಕೊನೆಗೆ ಈ ಕ್ಲಬ್ಬಿಗೆ ಕಲ್ಯಾಣವನ್ನು ಒಯಿಸಿ ಸರ್ವೇಶ್ವರಿಕೃಪೆ ಕರುಣದಿಂದ ಈ ಶಿಶುವನ್ನು ಆಶೀರ್ವದಿಸಿ ಸಭಿಕರ ಕೈಚಪ್ಪಾಳೆಗಳ ಧ್ವನಿಯೊಡನೆ ಉಪದೇಶಭರಿತವಾದ ಭಾಷಣವನ್ನು ಮುಕ್ತಾಯಗೊಳಿಸಿದರು. ತರುವಾಯ ಡಿಸ್ಟ್ರಿಕ್ಟ್ ಬೋರ್ಡ ಮೆಂಬರರಾದ ರಾ|| ದೊಡ್ಡ ಮನೆ ಶೇಷಗಿರಿರಾಯರವರು ಅಧ್ಯಕ್ಷರವರನ್ನು ಈ ಕ್ಲಬ್ಬಿನ ಹೊನರರಿಪೆಟ್ರನ್ (ಗೌರವ ಪೋಷಕ) ವಾಗಿರಬೇಕಾಗಿ ಸೂಚಿಸಿದ್ದನ್ನು ರಾ|| ಬಂಗ್ಲೆಕಾರವರು ಅನುಮೋದಿಸಿದರು ಅನಂತರ ರಾ|| ಶೇಷಗಿರಿರಾಯರು ಅಧ್ಯಕ್ಷರವರನ್ನು ಹೂಮಾಲೆಗಳಿಂದ ಸತ್ಕರಿಸಲು, ಸಭಾವಂಡಳಿಗೆ ಪನ್ನೀರು ಹೂಗಳಿಂದಲೂ ತಾಂಬೂಲಾದಿಗಳಿಂದಲೂ ಉಪಚರಿಸಿದರು. ತರುವಾಯ ಎಲ್ಲರು ಎದ್ದುನಿಂತು ನಮ್ಮ ಬ್ರಿಟಿಷ ರಾಷ್ಟ್ರಗೀತವನ್ನು ಹಾಡಿ ನಮ್ಮ ಮಹಾರಾಜಾ ಚಕ್ರವರ್ತಿಯವರಿಗೆ ಯುದ್ಧದಲ್ಲಿ ವಿಜಯವನ್ನೂ ಆಯುರಾರೋಗ್ಯ ಧನವನ್ನೂ ಬಯಸಿ ಜಯಧ್ವನಿಯೊಡನೆ ಸಭೆಯನ್ನು ವಿಸರ್ಜನೆಮಾಡಿದರು

ಮುಲ್ಕಿ,
ತಾ. 30–11–1915.

ಮೆಂಬರರೊಬ್ಬರು

ಯುದ್ಧ ಸ್ವವಾಚಾರ.

———o———

ತಾ. ೨೫ನೇ ನವಂಬರ.

ಈಸ್ಟ್ ಇಂಡಿಯೊಂದಿಂದ ಹೋಗುತ್ತಿದ್ದ 'ಡೆನ್ ಆಫ್ ಕ್ರೊಂಬಿ' ಎಂಬ ಹಡಗದ ಎರಡು ದೋಣಿ ತುಂಬಾ ಕಲಾಸಿಗಳಾ ಳ ಆಫೀಸರರೂ ಪಿ. ಎಂಡ್ ಒ ಕಂಪನಿಯ 'ಸೆಲೆಡೋನಿಯ' ಎಂಬ ಹಡಗದಿಂದ ಪ್ಲೀಮೌತ್ ಬಂದರಕ್ಕೆ ಬಂದು ತಲಪಿರುವರು ಈ ಹಡತೆಗಳಲ್ಲಿ ೫ ದಿನ ದೋಣಿಗಳಲ್ಲಿ ಅಲೆದಾಡುತ್ತಿದ್ದರು ತಾ ಗಿಂದರಲ್ಲು "ಸೆಲೆಡೋನಿಯಾ" ಹಡಗದವರು ಅವರನ್ನ ಕಂಡು ರಕ್ಷಿಸಿದರು. 'ಡೆನ್ ಆಫ್ ಕ್ರೊಂಬಿ' ಹಡಗದ ಇತರ ದೋಣಿ ಗಳಲ್ಲಿದ್ದವರ ಗತಿ ಏನೆಂದು ತಿಳಿಯಬರಲಿಲ್ಲ

ಬ್ರಿಟಿಷರ "ಮರ್ಗೆನ್ಸರ್" ಮತ್ತು "ಹೆಲ್ಮ್‌ಶರ್ಗ್" ಎಂಬ ಹಡಗ್ಗಳನ್ನು ಜರ್ಮನರ ಜಲಂತರ್ಗಾಮಿ ನಾವೆಗಳ ಮುಖಾಂತಿಸಿರುತ್ತವೆ

ಜರ್ಮನರ ಹೊಸ ೭ ಸೈನ್ಯಾಂಗಗಳು ಪೂರ್ವ ರಣರಂಗಕ್ಕೆ ಬಂದಿರುತ್ತವೆ ಇವುಗಳಲ್ಲಿ ಹೆಚ್ಚಿನವು ರುಶ್ಯಾ ರಣರಂಗದಿಂದ ಬಂದವುಗಳು. ರುಶ್ಯಾ ರಣರಂಗದಿಂದ ಜರ್ಮನರು ತಮ್ಮ ಮೂರನೇ ಒಂದಂಶ ಸೈನ್ಯವನ್ನು ಹಿಂದೆಗೆದಿರುವರು ರುಶ್ಯನರ ಈಚೆಗೆ ಬಹಳ ಸಾಹಸದಿಂದ ಕಾದಾಡುತ್ತಿರುವದರಿಂದ ಜರ್ಮನರಿಗೆ ಇನ್ನು ಹೆಚ್ಚಿನ ಸೈನ್ಯವನ್ನು ರುಶ್ಯಾ ರಣರಂಗದಿಂದ ಹಿಂದೆಗೆಯಲು ಅಸಾಧ್ಯವಾಗಿದೆಂತ ಜೂರಿಕ್‌ನಗರದಲ್ಲಿ ಪ್ರಕಟವಾಗಿದೆ

ಕೆಚನರ್ ಪ್ರಭುಗಳು ರಾಜೀನಾಮೆ ಕೊಟ್ಟಿದ್ದರೆಂದು ಪ್ರಕಟಿಸಿದ "ಗ್ಲೋಬ್" ಪತ್ರಿಕೆಯನ್ನು ಸರಕಾರದವರು ನಿಲ್ಲಿಸಿದೆಂದು ತಿಳಿಸಿತ್ತಷ್ಟೆ, ಆದರೆ ಆ ಪತ್ರಿಕಾ ಮಾಲೀಕರು ಕ್ಷಮಾಪಣೆ ಕೇಳಿ ಕೊಂಡದ್ದರಿಂದ ಆ ಪತ್ರಿಕೆಯನ್ನು ಪುನಃ ಪ್ರಕಟಿಸಲು ಆಜ್ಞೆ ಯಾಗಿ ತಾ. ೩೦ರಿಂದ 'ಗ್ಲೋಬ್' ಪತ್ರಿಕೆಯು ಪ್ರಕಟವಾಗುತ್ತಿದೆ

ನಿಸ್ ಲೆಸ್ಸೊವಟ್ಟೊ ಲೈನಿನಲ್ಲಿ ಸರ್ವಿಯನರು ಬಲ್ಗೇರಿಯನರನ್ನು ಸೋಲಿಸಿರುತ್ತಾರೆ ಇಲ್ಲಿ ಮೂರು ದಿವಸಗಳ ಕದನವು ನಡೆದಿರುತ್ತದೆ ಬಲ್ಗೇರಿಯನರು ಹತ್ತಿರ ಬಂದು ಕಡೆಗೆ ಗಲಬಲೆ ಯಿಂದ ಬಹಳ ಯುದ್ಧ ಸಾಮಾಗ್ರಿಗಳನ್ನು ಬಿಟ್ಟು ಓಡಿಹೋದರು

ನೋವಿ ಬಜಾರಿನ ಪೂರ್ವದಲ್ಲಿ ಆಸ್ಟ್ರೀಯ ಹಂಗೇರಿಯನ್ ಸೈನ್ಯವು ಮೇಲ್ಕಾಯಿದ ಸರ್ವಿಯನರನ್ನು ಹಿಂದಕ್ಕೆ ಓಡಿಸಿರುವದು ಎಂಬ ಆಸ್ಟ್ರೀಯನರ ವಾರ್ತೆಯಿಂದ ತಿಳಿದುಬಂದಿದೆ ಇದರಿಂದ ಸರ್ವಿಯನರು ಯುದ್ಧ ಕೊಡಲು ಇನ್ನೂ ಶಕ್ತರಾಗಿದ್ದಾರೆಂತ ತಿಳಿಯಬೇಕಾಗಿದೆ

ದಕ್ಷಿಣ ಸರ್ವಿಯದ ಸ್ಥಿತಿಯು ಗಳಿಗೆ ಗಳಿಗೆಗೆ ನೆಟ್ಟಗೆಯಾಗುತ್ತಿದೆ. ಬಲ್ಗೇರಿಯನರು ಪ್ರಿಲೆಪಿನಿಂದ ಹಿಂದೆ ಸರಿದಿರುವರು ಸರ್ವಿಯನರ ಅಭ್ಯಪಡೆಯು ಬಬೂನ ಕಣಿವೆಗೆ ಹೋಗಿರುವದು ಆದರೆ ಅಲ್ಲಿ ಶತ್ರುಗಳ ಚಿನ್ನೆಯೇ ಕಂಡುಬರಲಿಲ್ಲ

ತಾ. ೨೬ನೇ ನವಂಬರ

ಶತ್ರುಗಳ ನೆಲೆಗಳ ಮೇಲೆ ಬ್ರಿಟಿಷರ ತೋಪುಗಳು ನಿಡಿ ಮದ್ದಿನ ಗುಂಡುಗಳನ್ನು ಹಾಸಿ ಶತ್ರುಗಳ ನೆಲೆಗಳಲ್ಲಿ ಹೆಚ್ಚಿನವು ಗಳನ್ನು ಕೆಡಿಸಿರುತ್ತವೆ ಶತ್ರುಗಳ ತೋಪು ಸೇನೆಯು ಲೂಸ್ ಎಂಬ ಸ್ಥಳದ ಉತ್ತರದಲ್ಲಿ, ಅರ್ಮೆಂಟಿಯರಿನ ಮತ್ತು ಮೈಕ್ರೆಸಿನ ಪಶ್ಚಿಮ ದಲ್ಲಿ ಚಟುವಟಿಕೆಯಿಂದ ಕೆಲಸ ಮಾಡುತ್ತಿರುವಂತ ಪ್ರಕಟವಾಗಿದೆ

ತಾ. ೧೯ರಲ್ಲು ಜರ್ಮನರ ಒಂದು ವಾಯುನಾವೆಯು ಬ್ರಿಟಿಷ ನೆಲೆಗಳ ಮೇಲೆ ಇಳಿದಿದ್ದಿತು. ಆದರಲ್ಲಿದ್ದ ಇಬ್ಬರು ನಾವಿಕರು ತೆರೆಯಿದ್ದಿರುತ್ತಾರೆ. ನಾವೆಯು ಹಾಳಾಗಲಿಲ್ಲ ಎಂತ ಸರ್ ಜೋನ್ ಫ್ರೆಂಚರು ವರದಿ ಮಾಡಿರುತ್ತಾರೆ

ಅಮೇರಿಕಳಲ್ಲಿ ಜರ್ಮನರ ಕುಹಕೋಕ್ತಿಗಳನ್ನು ತಡೆ ಕಟ್ಟುವ ಉದ್ದೇಶದಿಂದ ಅಲ್ಲಿಯ ಸರಕಾರದವರು ಸಂಕಗಳನ್ನೂ, ಸೈಲ್ಗೆಗಳನ್ನೂ, ಕಾಯ್ಲು ಕಾವಲುಗಾರರನ್ನೂ ಇಟ್ಟಿರುತ್ತಾರೆ

ರುಶ್ಯನರ ಕಾಕೇಸ್ಸಸ್ ಮೋನೆಯು ಜರ್ಮನರ ಪೆಟ್ರೋಲ್ ಮೋನೆಯನ್ನು ಮುಖಾಂತಿಸಿ ಒಬ್ಬ ಆಫೀಸರರನ್ನೂ ೧೯ ಸೈನಿಕರನ್ನೂ ತೆರೆಹಿಡಿದಿರುತ್ತದೆ.

ಫ್ರೆಂಚರು ತಾ. ೧೯ರಲ್ಲು ಸರ್ ನದಿಯ ಬಳಿ ಬಲ್ಗೇರಿಯನರನ್ನು ಓಡಿಸಿರುತ್ತಾರೆ. ಮತ್ತು ಇದೇ ಕದನ ಪ್ರಾರಂಭವಾಗಿದೆ. ಸರ್ವಿಯನರು ಕುಪ್ರುಲ್-ಪ್ರಿಲೆಪ್‌ಲೈನನ್ನು ಪುನಃ ಸ್ವಾಧೀನಮಾಡಿಕೊಂಡು ಬಬೂನ ಕಣಿವೆಯಲ್ಲಿ ಕಾದಾಡುತ್ತಿರುವ ಸೇನೆಗೆ ಸಹಾಯ ಮಾಡಲು ಮುಂದರಿಯುತ್ತಲಿದ್ದಾರೆಂಕ ಅಥೆನ್ಸಿನಿಂದ ವಾರ್ತೆ ಬಂದಿದೆ

ಉತ್ತರ ಸರ್ವಿಯದ ಗೈಲೋನ, ವಿಲಿಕವ್ಲಾನ, ನಿಸ್ ಪಟ್ಟಣದ ಪೂರ್ವ ಮತ್ತು ಜಗೋವಟ್ಟ್ ಪರ್ವತದ ಬಳಿ ಕಠಿಣ ಕಾಳಗವು ನಡಿಯುತ್ತಿದೆ ಜಗೋವಟ್ಟ್ ಪರ್ವತದಲ್ಲಿ ಸರ್ವಿಯನರು ಶತ್ರುಗಳನ್ನ ಹಿಂದಕ್ಕಟ್ಟಿ ಪರ್ವತದಲ್ಲಿ ಉಪಯೋಗಿಸುವ ೫ ಫಿರಂಗಿಗಳನ್ನ ಹಿಡಿದಿರುತ್ತಾರೆ

ಇಕೊನ್ಸಡಲ್ಲಿ ಪೆಡ್‌ಗೋರ ಮತ್ತ ಸಬೋಸಿನದ ವಧ್ಯೆ ಶತ್ರುಗಳು ಕಳಕೊಂಡಿದ್ದ ೪ಳಿಕನ್ನು ಇಟಲಿಯನರಿಂದ ಹಿಂದಕ್ಕೆ ಪಡೆಯುವ ಉದ್ದೇಶದಿ ದ ವೆಲ್ಲಾಯಿದರು ಆದರೆ ಹೋರಾ ವಾದ ಕೈಪುಡಸಿನ ಕಾಳಗ ನಡೆದು ಶತ್ರುಗಳು ಹಿಮ್ಮೆಟ್ಟಿದರು ಇಟಲಿಯನರ ಸೇನೆಯು ಒಂದೇ ಅಗಲ ಸ್ಥಳವನ್ನಾದರೂ ಶತ್ರುಗಳಿಗೆ ಬಿಟ್ಟುಕೊಡದೆ ಸನಿಸುಗಳ ದ ಶತ್ರುಗಳನ್ನು ತಿವಿದು ಶತ್ರು ಸೈನ್ಯವ್ನ ಹೆಚ್ಚಿನ ನಷ ಪಡಿಸಿದರು ೮೯ ಶತ್ರುಸೈನಿಕರು ಇಟಲಿಯನರ ಶರೆ ಬಿದ್ದಿರುತ್ತಾರೆ

ಇಟಲಿ ರಣರಂಗದಲ್ಲಿ ಕರಿಣ ಕಾಳಗವು ನಡೆಯುತ್ತಿದೆ ಇಟಲಿಯನರ ತೋಪುಗಳ ಪರ್ಗುಡುಗಳನ್ನು ಹಾರಿಸಿದೊಡನೆ ಎಂಬಲ್ಲಿ ಆಸ್ಟ್ರಿಯನರ ನೆಲೆಗಳನ್ನು ಸೀದಿಸಿರುವರೆ ತ ಆಸ್ಟ್ರಿಯನರ ವಾರ್ತೆಯಿಂದ ತಿಳಿದ ಬಂದದೆ

ಡರ್ಡನೆಲ್ಲಿನ ಎಸೊಸಿನಲ್ಲಿ ಬಹಳ ಕ್ರೂರತನದ ಕೃತ್ಯವು ನಡೆದಿರುವದೆಂತ ತರ್ತನೆಲ್ಲಿನ ಬ್ರಿಟಿಷ ಸೇನಾಧಿಪತಿಯು ವರದಿ ಮಾಡಿರುತ್ತಾರೆ ಬ್ರಿಟಿಷರ ಎರಡ ನಾವೆಗಳ ಸೈನಿಕರು ಜಿಕೆನ ವಿಷ ಪೈಪ್ಲೈ ಸ್ಫೋಟನ ಮೇಲ್ಚಾಯಕ ಆದರೆ ಒಬ್ಬ ನಾವೆಯು ರಕ್ಷಣೆಗೆ ಸಿಕ್ಕಿಕೊಂಡಿತ ಇದನ್ನು ಕಂಡ ಮತ್ತೊಂದ ಬ್ರಿಟಿಷ ನಾವೆಯ ನಾವಿಕನು ಕೆಳಗೆ ಗಿದು ಶತ್ರುಗಳ ನಾವೆಯ ನ್ನ ಲಕ್ಕೆ ತೋಗಿ ತ್ತಿದ್ದಾಗಲೆ ಸಡು ತ್ತಿದ್ದ ನಾವೆಯ ನಂವಿಕನನ್ನು ರಕ್ಷಿಸಿದನು

ತಾ ೨೭ನೇ ನವಂಬರ.

ರುಶ ರಣರಂಗದ ಸ್ಟೆಟ್ಸ್ ಸರೋವರದ ಉತ್ತರದಲ್ಲಿ ಕದನವು ನಡೆಯ ತ್ತಿದೆ ಜರ್ಮನರು ಡ್ರಿನ್‌ಸಿಕಿನ ಸೈರತ ವಲಯೆಯಲ್ಲಿ ಯ ದ್ಧಕ್ಕೆ ನಿತರ ಆದರೆ ರುಶ್ಯನರು ಅವರನ್ನ ಹಿಂದಕ್ಕೆ ಓಡಿಸಿರುತ್ತಾರೆ ಸ್ಟೆಟ್ಸಿನ ವಧ್ಯದಲ್ಲಿ ರುಶ್ಯನರ ಶತ್ರು ಗಳ ೧೯ನೇ ಸೈನಿಕರನ್ನೂ, ಅನೇಕ ಯ ದ್ಧಸಾಮಾಗ್ರಿಗಳನ್ನೂ ತೆರೆ ಹಿಡಿದಿರುತ್ತಾರೆ

ತಾ ೨೦ರಲ್ಲು ಮೊನಸ್ಟಿರಿನಲ್ಲಿ ಕದನ ಪ್ರಾರಂಭವಾಗಿದೆ ಸರ್ವಿಯನರ ಬಲಿಷ್ಠ ನರನ್ನು ಲ ಕೆಲೆಶಿನಿಟ್ ದೂರಕ್ಕೆ ಹಿಂದೆ ಓಡಿಸಿರ ತ್ತಾರೆ ಬಲ್ಗೇರಿಯಾನರಲ್ಲಿ ೧೯೦೦೦ ದ ಂದಿ ಪ್ರಾಣಾಪಾಯ್ಕ ಹೊಂದಿ ರವೆಂತ ವೆಟಿಟ್ ಜರ್ನಲ್' ಪತ್ರಿಕೆಯ ಜಿನೋವ ಬಾತ್ಮೀದಾರರ ತಿಳಿಸುವರು

ತಾ ೨೩ ತಿಳಿರಲ್ಲು ಮೆಸಪೊಟೇಮಿಯದ ಟ್ರಿಗ್ರಿಸ್ ನದಿಯ ಬಳಿ ತುರ್ಕರಿಗೂ, ಬ್ರಿಟಿಷ ಸೇನಿಕರಿಗೂ ಕದನವು ನಡೆದ ಬ್ರಿಟಿಷರು ತುರ್ಕರನ್ನು ನೆಲೆಗಳಿಂದ ಹಿಂದಕ್ಕೆ ಆಟ್ಟಿದರು ಸೆಟ್ ಸ್ಫಾನಿನಲ್ಲಿ ಶತ್ರುಗಳು ಬಲವಾದ ಬೆಂಬಲ ಸೇನೆಯನ್ನು ತಲದೊ ಡ್ಡಿದರೂ ಬ್ರಿಟಿಷರು ಅಂಂತ ರ್ಕರನ್ನೂ ಬಹಳ ಯುದ್ಧಸಾಮಾಗ್ರಿ ಗಳನ್ನೂ ತೆರೆಹಿಡಿದರ ಶತ್ರುಗಳ ವಮ್ಮಿ ನೆಲೆಯು ನ್ನೂ ಬ್ರಿಟಿ ಷರ ಕೈಸೇರಲಿಲ್ಲ

ತಾ. ೨೮ನೇ ನವಂಬರ.

ಎಸ್ಟ್ರೊಸ್, ಎಸ್ಪ್ರಾಸ್ ಸ್ಟೇಶನುಗಳ ಮೇಲೆ ತೋಪುಗಳು ಗುಂಡು ಹಾರಿಸಿರುತ್ತವೆ ಚಿಂಪಾನೆ ಮತ್ತು ಒನೆಜಿನಲ್ಲಿಯೂ ತೋಪು ಕಾಳಗ ನಡೆಯ ತ್ತಿರುವದು ಪ್ರತಿ ಕಡೆಯಲ್ಲಿಯೂ ಫ್ರೆಂಚರ ಸ್ಥಿತಿಯ ಅನ ಕೂಲವಾಗಿರುವದು

ಯ ದ್ಧವ ಪ್ರಾರಂಭವಾದಂದಿನಿಂದ ಬೆಲ್ಜಿಯನ್ ಸೈನಿಕರ ಹೆಂಡತಿ ಮಕ್ಕಳಿಗೆ ಸಹಾಯಮಾಡುತ್ತಿದ್ದ ಬೆಲ್ಜಿಯನ್ ಮಂತ್ರಿಯ ಸಹೋದರಿಯೊಬ್ಬಳನ್ನು ಜರ್ಮನರು ತೆರೆಹಿಡಿದಿರುತ್ತಾರೆ

ಯುದ್ಧವ ಪ್ರಾರಂಭವಾದಾಗ ಜರ್ಮನ್ ಯುದ್ಧ ಹಡಗ ಗಳಿಗೆ ಅಮೇರಿಕದಿಂದ ಸನ್ನಾಹಗಳನ್ನು ಒದಗಿಸಿ ಕೊಟ್ಟಿದ್ದಾರೆಂಬ ಆಪಾದಿತ ಮೇರೆ ಹೆಂಬರ್ಗ್ ಅಮೇರಿಕ ಹಡಗದ ಕೆಪ್ಟನ್ ಫಾಕೆನ್‌ಬರ್ಗ್ ಮೊದಲಾದವರ ವಿಚಾರಣೆಯು ನಡೆಯುತ್ತಿರುವದು.

ಅಮೇರಿಕ ಹೆಂಬರ್ಗ್ ಲೈನಿನ ಕೆಪ್ಟನ್ ಫಾಕೆನ್‌ಬರ್ಗನು ಅಮೇರಿಕಳ ಪ್ರಜೆಯನ್ನು ವಿರಿಸಿದ ಒಂದು ಹಡಗದಲ್ಲಿ ಜರ್ಮನ ಯುದ್ಧನಾವೆಗಳಿಗೆ ೩೦೦೦ ಟನ್ ಕಲ್ಲಿದ್ದಲನ್ನೂ ಬಹಳ ಆಹಾರ ಸಾಮಾಗ್ರಿಗಳನ್ನೂ ಕಳುಹಿಸಿಕೊಟ್ಟಿದ್ದನೆಂಕ ವಾಗ್ಮೂಲ ಕೊಟ್ಟಿರುತ್ತಾನೆ.

ಟೋರ್ಕ್ ಚಕ್ರವರ್ತಿಯವರು ಗುಣಹೊಂದುತ್ತಲಿದ್ದು ಸ್ವಲ್ಪ ಮಟ್ಟಿಗೆ ಅತ್ಯುತ್ತ ನಡೆಯಲು ಶಕ್ತರಾಗಿರುವರು.

ಮಿತ್ರ ರಾಜ್ಯಗಳ ನಾಲ್ಕು ಮಂತ್ರಿಗಳು ಒಟ್ಟುಗೂಡಿ ಸಹಿ ಮಾಡಿದ ಒಂದು ಪತ್ರವನ್ನು ಗ್ರೀಕ ಮಂತ್ರಿಯವರಿಗೆ ಕಳುಹಿಸಿ ಕೊಟ್ಟಿರುವರು ಗ್ರೀಕರಿಗೆ ಸೇರಿದ ಸಲೋನಿಕದಲ್ಲಿ ಇರಿದಿರುವ ಮಿತ್ರರಾಜ್ಯಗಳ ಸೈನಿಕರ ಭದ್ರತೆಯ ಪರವಾದ ದೃಢ ನಂಬಿಕೆ ಯನ್ನ ಕೊಡಬೇಕೆಂದೇ ಮಿತ್ರರಾಜ್ಯಗಳ ಮಂತ್ರಿಗಳು ಗ್ರೀಕ ಸರ ಕಾರಕ್ಕೆ ಕಳುಹಿಸಿಕೊಟ್ಟ ಈ ಪತ್ರಿಕೆಯು ಉದ್ದೇಶವಾಗಿದೆ ಮಿತ್ರ ರಾಜ್ಯಗಳ ಈ ವಿಜ್ಞಾಪನೆಯನ್ನು ಗ್ರೀಕ ಸರಕಾರದವರು ಪೂರ್ಣ ವಾಗಿ ಅಂಗೀಕರಿಸುವರೆಂತ ಅಥೆನ್ಸಿನ ಪ್ರಜಾ ಜನರಿಗೆ ನಂಬಿಕೆ ಇದೆ

ಆಸ್ಟ್ರಿಯನರು ಕೊಲ್ಲಿಲಾನ, ಜಬೋರ ವತ್ತು ಒಸ್ಸಾವ್ಯ ದಲ್ಲಿ ಇಟಲಿಯನರ ಮೇಲ್ಕಾಯಿದು ಪ್ರತಿ ಕಡೆಯಲ್ಲಿಯೂ ಹಿಮ್ಮೆಟ್ಟಿರುತ್ತಾರೆ ಒಂದು ಕಡೆಯಲ್ಲಿ ಆಸ್ಟ್ರಿಯನರು ೫೦೦ ಶವ ಗಳನ್ನು ಬಿಟ್ಟು ಹೋಗಿದ್ದರು ಮೋಂಟೆ ಸಾನ್‌ಮಿಖಯೇಲ್ ಪ್ರಾಂತ್ಯದಲ್ಲಿ ಇಟಲಿಯನರಿಗೆ ಒಂದು ದೊಡ್ಡ ಜಯವಾಗಿದೆ ಇಟಲಿಯನರು ಹಗಲು ಮಂದಿಯನ್ನ ತೆರೆಹಿಡಿದಿರುತ್ತಾರೆ ಬಹಳ ಯುದ್ಧ ಸಾಮಾಗ್ರಿಗಳ ಇಟಲಿಯನರಿಗೆ ದೊರಕಿರುತ್ತದೆ

ತಾ. ೨೯ನೇ ನವಂಬರ.

ಯುದ್ಧ ಪ್ರಾರಂಭವಾದ ೧೫ ತಿಂಗಳಲ್ಲಿ ಜರ್ಮನ ಸೇನೆಯಲ್ಲಿ ಸಾಲ್ವತರೆ ಮಿಲಿಯ ಜನರು ನಷ್ಟವಾಗಿರುವರೆಂದೂ ಈ ಸೈನಿಕಾಧಿಲಿಯ ಜನ ಇನ್ನೂ ರಣರಂಗಕ್ಕೆ ಹಿಂದಿರಳುವ ಹಾಗಿಲ್ಲವೆ ತಲೂ ಅ ದಾಜಾಗಿದೆ ಪ್ರತಿ ತಿಗಳಲ್ಲಿ ಜರ್ಮನರಿಗೆ ೨೦೦೦೦ ಸೈನ್ಯ ನಷ್ಟವಾಗುತ್ತಿದೆ ಈ ನಷ್ಟವನ್ನು ಭರ್ತಿ ಮಾ ಡುವರೆ ಜರ್ಮನರ ಸೇನೆ ಸೇರುವವರ ವಾಯವನ್ನು ಳಕ್ಕೆ ಪೈಸಲೇಬಾಕಾಗಿರುವದು ೨೬ ೫೦ ವರ್ಷ ವಯಸ್ಸಿನವರ ಹೆಸರು ಗಳನ್ನು ರಿಜಿಸ್ಟರ್ ಮಾಡಿಕೊಳ್ಳಬೇಕೆಂಬ ಗಟ್ಟಿನ ಆಜ್ಞೆಯು ಜರ್ಮನ ಅಧಿಕಾರಿಗಳಾಗಿರುವದೆ ಎಂಬದಾಗಿ ಬ್ರಿಟಿಷ ವರ್ತ ಮಾನ ಪತ್ರಿಕೆಗಳ ಪ್ರತಿನಿಧಿಯೊಬ್ಬರು ತಿಳಿಸುವರು

ಗ್ಯಾಲಿಷಿಯ ರಣರಂಗದಲ್ಲಿ ಕೊನಗ್ ಸರೋವರದ ಬಳಿ ರುಶ್ಯನ ರೂ ಜರ್ಮನ್ನರೂ ಕಾಳಗ ನಡೆಯು ತ್ತಿದೆ ಇಲ್ಲಿ ಜರ್ಮನರು ಹಿ ದಕ್ಕೆ ಸರಿದಿ ಕ್ಕಾರೆ ಎಲ್ಕಾಸ್ಟ್ಸ್, ಸ್ವೆಂಟನ್ ಸರೋವರ, ಮತ್ತು ಸ್ಟೈಕ್ ಎಂಬ ಸ್ಥಳಗಳಲ್ಲಿ ಸಣ್ಣ ಸಣ್ಣ ಕದನಗಳು ನಡೆಯುತ್ತಿರು ವವೆ ರಿಗಾ ರಣರಂಗದ ಬರ್ಸ್‌ಮ್ಯೂಂಡೆ ಎಂಬ ಸ್ಥಳದ ಬಳಿ ರುಶ್ಯನರ ಬಂದ ನವರ್ತವನ್ನು ಸ್ವಾಧೀನಮಾಡಿಕೊಂಡು ೧೯೦೦ ಜರ್ಮನ ಸೈನಿಕರನ್ನೂ ಯಂತ್ರಮೂಲಕ ನಡಿಯುವ ೬ ಫಿರಂಗಿ ಗಳನ್ನೂ ತೆರೆಹಿಡಿದಿರವರು ಸ್ವೆಂಟನ್ ಮತ್ತು ಸ್ಮೊರ್ಗನ್ ವಿಶ್ವಿಕ್ಕಳಗಳಲ್ಲಿ ಬಹಳ ಚಟ ವಟಿಕೆಯಿಂದ ಕದನವು ನಡೆಯುತ್ತಿದೆ ಸೆವಕೊಪಿಟ್ಸ್ ಗ್ರಾವದ ಸಮೀಪ ರುಶ್ಯನರು ಶತ್ರುಗಳ ಮೇಲೆ ಬಿದ್ದ ಸೈನ ಎಂಬಲ್ಲಿಗೆ ಶತ್ರುಗಳನ್ನು ಹಿಂದಟ್ಟಿ ಶತ್ರು ಸೇನೆಯ ಒಂದಂಶವನ್ನು ನಿರ್ನಾಮ ಮಾಡಿದರು ಉಳಿದ ಸೈನಿಕರು ಹೊಳೆಯನ್ನು ದಾಟಲು ಪ್ರಯತ್ನಿಸುವಾಗ ಮುಣುಗಿ ಸತ್ತರು.

ಸರ್ವಿಯ ಸರಕಾರವು ಸ್ಕುಕಾರಿಗೆ ಹೋಗಿರುವದು ಎಂತ ತಿಳಿದುಬರುತ್ತದೆ

ಕ್ರಿಪುಲಕ್ ಪ್ರಾಂತ್ಯದಲ್ಲಿ ಬಲ್ಗೇರಿಯನರಿಗೂ ಫ್ರೆಂಚರಿಗೂ ಕದನ ನಡೆಯುತ್ತಿದೆ ಫ್ರೆಂಚರು ಇಲ್ಲಿ ಒಂದು ಮುಖ್ಯ ಗ್ರಾಮ ವನ್ನು ಸೇರಿಕೊಂಡು ರಾತ್ರಿ ಕಾಲವೆಲ್ಲಾಯಿದು ಬಂದ ಬಲ್ಗೇರಿಯ ನರನ್ನು ಹಿಂದಕ್ಕಟ್ಟಿರುವರು ಬ್ರಿಟಿಷರ ಮತ್ತು ಫ್ರೆಂಚರ ಬೆಂಬಲ ಸೇನೆಗಳು ಬಂದು ಸೇರುತ್ತಲಿವೆ

ಮಿತ್ರಸೈನಿಕರು ಸಲೋನಿಕದಲ್ಲಿ ಬಹಳ ಕಾಲ ನಿಲ್ಲುವ ಆಲೋಚನೆ ಮಾಡಿರುವರು ಎಲೆಕ್ಟ್ರಿಕ್ ಪವರ್ ಸ್ಟೇಷನ್ ಬಾ ದೊಡ್ಡ ದೊಡ್ಡ ಫಿರಂಗಿಗಳೂ ಯಿಕ್ಕಲ್ಲಿಗೂ ಬಂದಿರುತ್ತವೆ ದಂಡಿನ ಪಾಲೆಯಗಳನ್ನು ಕಟ್ಟಿಸುವ ಕೆಲಸವನ್ನು ಕಂಟ್ರಾ ಕ್ಟಿಗೆ ಕೊಟ್ಟಿರುವರು ಎಂತ ಆಸ್ಟ್ರಿಯನರಿಂದ ವಾರ್ತೆ ಬಂದದೆ.

ದಕ್ಷಿಣ ರಣರಂಗದಲ್ಲಿ ಅಡಿಜ್ಜೆ ಮತ್ತು ಟ್ರೆಂಟಿದ್ದ ರುಶ್ಯ ತೋಪು ಸೇನೆಗಳ ಮತ್ತು ಕಾಲಾಳು ಸೇನಿಕರ ಕದನವು ಕಾಯ್ದು ತ್ತಿದೆ. ಆಸ್ಟ್ರಿಯನರ ವಾಯುನಾವಿಕರು ರೊವೆರೆಟೊ ಎಂಬವರ ಮೇಲೆ ಬೊಂಬುಗಳನ್ನು ಬೀಸಾಡಿರುತ್ತಾರೆ. ಆದರೆ [illegible]

ಲ್ಲ. ಗಾರಿಷ್ಟಿಯದ ಆಗ್ನೆಯದಲ್ಲಿ ಕೆಂಪು ಕಾಳಗವು ನಡೆಯುತ್ತಿದೆ. ಇಟಲಿಯನರು ಮುಂದರಿದು ಹೆಚ್ಚಿನ ಕಂದಕಗಳನ್ನು ಪಡಕೊಂಡಿರುವರು.

ಮೆಸಪೊಟೊಮಾಯದಲ್ಲಿ ನಡೆಯುವ ಕದನದಲ್ಲಿ ವಾರ್ತೆಯು ಈ ಪ್ರಕಾರವಾಗಿರುವದು:—ಸೆಟೆಸ್ಫೊನಿನಲ್ಲಿ ತಾ ೨೨ ೨೩ರಲ್ಲು ನಡದ ಕದನದನಂತರ ನೀರಿನ ಕೊರತ ಬಂದೊದಗಿದ್ದರಿಂದ ಬ್ರಿಟಿಷ ಜನರಲ್ ಟೌನ್ಸೆಂಡರವರ ಸೇನೆಯು ತಾ ೨೪ರಲ್ಲು ಹೊಳೆಯ ಕಡೆಗೆ ಮುಂದರಿದು, ಬೇಕಾದಷ್ಟು ನೀರನ್ನು ತುಂಬಿಸಿಕೊಂಡು ಸೆಟಿಸ್ಫೊನ್ ನೆಲೆಯನ್ನು ಬಿಟ್ಟು ಸ್ವಾಧೀನಮಾಡಿಕೊಂಡಿರುವದು ಶತ್ರುಗಳು ಇಲ್ಲಿ ಎದುರಾಡಲಲ್ಲ. ಈಗ ಈ ಸೇನೆಯು ಶತ್ರುಗಳ ಶವ ಮತ್ತು ಗಾಯ ಒಡರಿರವರು ತುಂಬಿರವ ಕಂದಕಗಳನ್ನು ಸಂಪಡಿಸುತ್ತಿರುವರು. ಕೆರಬಿದ್ದ ತುರ್ಕರ ಒಟ್ಟು ಸಂಖ್ಯೆ ೧೫೦೦ ಅದಲ್ಲದೆ ಬಹಳ ಯುದ್ಧ ಸಾವಾಗ್ರಿಗಳು ಬ್ರಿಟಿಷರಿಗೆ ದೊರಕಿರುತ್ತವೆ. ತುರ್ಕರು ಡಿಲಿಲ್ಲಾ ಎಂಬ ಸ್ಥಳಕ್ಕೆ ತನ್ನು ಸೇನೆಯನ್ನು ಕೊಂಡುಹೋಗಿರುವರು ಎಂತ ವಾಯು ನಾವಿಕರು ತಿಳಿಸಿರುತ್ತಾರೆ. ಈ ಸ್ಥಳವು ಬಗ್ದಾದಿಗೆ ೧೦ ಮೈಲು ದೂರದಲ್ಲಿದೆ. ಬ್ರಿಟಿಷ ಸೇನೆಯ ೧೫೦೦ ಮಂದಿ ಪ್ರಾಣಾಪಾಯಪಟ್ಟಿರವರು

ತಾ. ೭ನೇ ನವಂಬರ.

ಪಶ್ಚಿಮ ರಣಾಂಗದಲ್ಲಿ ಭೂವಿಯ ಮೇಲೆ ವಿಶೇಷ ಕದನಗಳೇನೂ ನಡೆಯಲಿಲ್ಲ. ಆದರೆ ವಾಯುಮಂಡಲದಲ್ಲಿ ಕೆಲವು ಕದನಗಳು ನಡೆದಿರುತ್ತವೆ. ಜರ್ಮನ ವಾಯುನಾವೆಯನ್ನು ಸ್ಪೆಂಚ್ ವಾಯುನಾವೆಯು ಹಿಂದಟ್ಟಿಕೊಂಡು ಹೋಯಿತು. ಆ ಜರ್ಮನ ವಾಯುನಾವೆಯ ಸಮುದ್ರಕ್ಕೆ ಬಿತ್ತು. ಬಿದ್ದ ವಾಯುನಾವಿಕರನ್ನು ರಕ್ಷಿಸಲು ಪ್ರಯತ್ನಿಸಿದ ದೋಣಿಗಳ ಮೇಲೆ ಮಿಕ್ಕರ ತೋಪುಗಳು ಗುಂಡು ಹಾರಿಸಿದವು. ಒಂದು ದೋಣಿಯು ಮುಣುಗಿತು. ಮುಳ್ಳಾಸಿನ ಪೂರ್ವದಲ್ಲಿರುವ ಶತ್ರುಗಳ ವಾಯುನಾವೆಗಳ ಸೆತ್ತುಗಳಿಗೆ ಫ್ರೆಂಚ್ ವಾಯುನಾವಿಕರು ಅನೇಕ ಬಾಂಬುಗಳನ್ನು ಹಾಕಿರುವರ ಕ್ಷ ವಾಯುನಾವಿಕರು ಮೇಲಕ್ಕೆ ಅಪ್ಪಳಿಸಿ ಬಿದ್ದಿರುವರು. ನಾಸ್ನಿಯಲ್ಲ ವಾಯುನಾವೆಗಳ ಕದನವು ನಡದು ಶತ್ರುಗಳ ಒಂದು ವಾಯುನಾವೆಯು ಕೆಳಗೆ ಬಿದ್ದಿರುತ್ತದೆ ಮತ್ತೊಂದು ಜರ್ಮನ ನಾವೆಯು ಓಡಿಹೋಗಿರುತ್ತದೆ

ಕಿಚನರ್ ಪ್ರಭುಗಳವರು ರೋಮು ನಗರಕ್ಕೆ ಚತ್ತ್ಯಸಿದರು ಇಟಲಿ ಮಂತ್ರಿ ಸಭೆಯವರು, ಸೇನೇಪರುಗಳು ಡ್ಯುಟಿಗಳು, ಸೇನೆಯ ಆಫೀಸರರು ಎದುರ್ಗೊಂಡು ಸ್ವಾಗತ ಮಾಡಿಕೊಂಡರು. ಕಿಚ್ನರ್ ಪ್ರಭುಗಳವರು ರೋಮುಪುರದ ಬ್ರಿಟಿಷ ರಾಯಭಾರಿಯವರ ಸಹಿತ ಅಲ್ಲಿಯ ಪ್ರಧಾನ ಮಂತ್ರಿಯವರ ಕೂಡೆ ಮಾತನ್ನಾಡಿದರು. ಅಲ್ಲಿಂದ ಕಿಚ್ನರ್ ಪ್ರಭುಗಳವರು ಇಟಲಿ ರಣರಂಗಕ್ಕೆ ಹೋಗಿ ಜನರಲ್ ಸೆಡೋರ್ನ ಮತ್ತು ಇಟಲಿ ಅಧಿಕಾರಿಗಳ ಕೂಡೆ ಆಲೋಚನೆ ನಡಿಸಿದರು. ಇಟಲಿ ರಣರಂಗದಿಂದ ಮಿಲಾನಿಗೆ ಬಂದು ಅಲ್ಲಿಂದ ಟ್ಯುರಿಂಗಕ್ಕೆ ಹೋಗುತ್ತಾರೆ

ಸರ್ಬಿಯನಾಗೆ ಸಹಾಯ ಮಾಡಲು ರಷ್ಯನರು ಒಂದು ಮಂದೊಳಗೆ ಸೈನ್ಯವನ್ನು ಕಳಹಿಸಿಕೊಡುವರೆಂತ ರುಸ್ಕಾ ಚಕ್ರವರ್ತಿಯವರು ತಂತೀ ಬಿಟ್ಟಿರುವರೆಂತ ಸಲೋನಿಕದಿಂದ ವಾರ್ತೆ ಬಂದದೆ. ಇಟಲಿಯು ೪೦,೦೦೦ ಸೈನಿಕರನ್ನು ಸರ್ಬಿಯನರ ಸಹಾಯಕ್ಕೆ ಕಳಹಿಸಿಕೊಡುವದು

ಸಂಧಾನ ಪ್ರಸ್ತಾವನೆಯ ಮಾತುವತ್ತೆ ತಟಸ್ಥ ರಾಜ್ಯಗಳ ಒಂದು ಸಭೆಯನ್ನು ಕೂಡಿಸಬೇಕೆಂತ ಕೆಲವರು ಯುನೈಟೆಡ್ ಸ್ಟೇಟಿನ ಪ್ರೆಸಿಡೆಂಟ ವಿಲ್ಸನರ ಕೂಡೆ ಮಾಡಿದ ಪ್ರಯತ್ನವು ವ್ಯರ್ಥವಾಗಿ ಹೋಗಿರುತ್ತದೆ

ಉತ್ತರ ಹಿಂದೂಸ್ಥಾನ.

ಮದ್ರಾಸಿನ ಡಾಕ್ಟರ್ ಕೃಷ್ಣಸ್ವಾಮಿ ಅಯ್ಯರ್‌ರವರು ಮದ್ರಾಸ್ ತಿರುವಲ್‌ಕಣಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಕಲವಲಾ ಕಂಪ್ಣಿ ಜೆಟ್ಟಿಯವರ ಆರ್ಯುವೇದಿಕ್ ಡಿಸ್ಪೆನ್ಸರಿಯ ಆಡಳಿತೆಯನ್ನು ತೆಕ್ಕೊಂಡಿರುವರೆಂಬ ಸಬಬಿನ ಮೇಲೆ ಅವರ ಹೆಸರನ್ನು ರಿಜಿಸ್ಟ್ರಿಯಿಂದ ತೆಗೆದು ಹಾಕಲು ನಿರ್ಣಯಿಸಿರುವ ಮದ್ರಾಸ್ ಮೆಡಿಕಲ್ ಕೌನ್ಸಿಲಿನವರ ವರ್ತನೆಯನ್ನು ಮುಂಬಾಯಿ ಮೆಡಿಕಲ್ ಕೌನ್ಸಿಲರವರು ಕೂಡಾ ಅನುಸರಿಸಿರುವರೆಂಬ ವಾರ್ತೆಯು ಈಗತಾನೇ ಬಂದಿರುವದು. ಮುಂಬಾಯಿ ಮೆಡಿಕಲ್ ಕೌನ್ಸಿಲಿನವರು ಪಟ್ಟಣದಲ್ಲಿರುವ ಆಯುರ್ವೇದ ವೈದ್ಯರಿಗೆ ವಿರೋಧವಾದ ದೌಡನ್ನು ಮಾಡಲುಪಕ್ರಮಿಸಿ ಪ್ರಭುರಾಮ ಆಯುರ್ವೇದ ಕಾಲೇಜಿನ ಪ್ರಿನ್ಸಿಪಲರಾದ ಡಾಕ್ಟರ್ ಪಿ. ಪ್ರಭುರಾಮ ವೈದ್ಯ ಎಲ್ ಎಮ್ ಎಂಡ್. ಎಸ್‌ರವರಿಗೆ ಆ ಕಾಲೇಜಿನ ಸಂಬಂಧವನ್ನು ಬಿಡಬೇಕಾಗಿ ನೋಟೀಸು ಕೊಟ್ಟಿರುತ್ತಾರೆ ಮೆಡಿಕಲ್ ಕೌನ್ಸಿಲಿನ ಎಕ್ಸಿಕ್ಯೂಟಿವ್ ಕಮಿಟಿಗೆ ಅಪೀಲು ಮಾಡಿಕೊಳ್ಳಲಿಕ್ಕಾಗುವ ಹಾಗೆ ತನ್ನ ಮೇಲಿರುವ ಅಪವಾದ ಇತ್ಯಾದಿಗಳನ್ನು ತಿಳಿಸಬೇಕಾಗಿ ಡಾಕ್ಟರ್ ವೈದ್ಯರವರು ನೋಟೀಸು ಸಿಕ್ಕಿದ ನಂತರ ಕೌನ್ಸಿಲಿಗೆ ಬರಕೊಂಡಿರುತ್ತಾರೆ ಈ ಕಾಲೇಜಿನ ಮೊಕ್ತೇಸರರೂ ಮೆಡಿಕಲ್ ಎಕ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರರೂ ಆದ ಸರ್ ಬಾಲಚಂದ್ರಕೃಷ್ಣರವರು ಡಾಕ್ಟರ್ ವೈದ್ಯರವರಿಗೆ ನೋಟೀಸು ಕೊಡೋಣಾಗುವ ಮೊದಲು ಕಾಲೇಜ ಮೊಕ್ತೇಸರ ಕೆಲಸಕ್ಕೆ ರಾಜೀನಾಮೆ ಕಳುಹಿಸಿಕೊಟ್ಟಿರುವರೆಂದೂ ತಿಳಿದುಬಂದದೆ ಮುಂಬಾಯಿ ಸರ್ಜನ್ ಜನರಲರವರ ಪರ್ಸನಲ್ ಅಸಿಸ್ಟಾಂಟರು ಡಾಕ್ಟರ್ ವೈದ್ಯರವರಿಗೆ ಪತ್ರ ಬರೆದು ಪ್ರಭುರಾಮ ಆಯುರ್ವೇದಿಕ್ ಕಾಲೇಜಿನಲ್ಲಿ ಕಲಿಸೋಣಾಗುವ ಸ್ಥಾರಕ್ರಮಗಳ್ಯಾವೆಂತ ಕೇಳಿರುವರು ಡಾಕ್ಟರ್ ವೈದ್ಯರವರು ಈ ಸಂಬಂದವಾದ ತಕ್ಕ ಸೂಚನೆಗಳನ್ನು ಅವರಿಗೆ ಕಳುಹಿಸಿಕೊಟ್ಟಿರುವರು.

ಮೈಮಾನ್‌ಸಿಂಗ್‌ದ ಗವರ್ನಮೆಂಟ್ ಟ್ರಜರಿಯಿಂದ ೫೫,೦೦೦ ರೂಪಾಯಿಯ ಕರೆನ್ಸಿ ನೋಟುಗಳು ಕಾಣದೆ ಹೋದ ವಿಷಯವು ಅಧಿಕಾರಿಗಳಿಗೆ ತಿಳಿದಾಕ್ಷಣ ಟ್ರೆಜರರ್ ಬಾಬು ರೇವತಿ ಮೋಹನ್ ತಾಲೂಕ್‌ದಾರ್ ಎಂಬವನು ವಜ್ರ್ಯವಾಗಿ ಬಿದ್ದ ವಾರ್ತೆಯು ವಾಚಕರ ನೆನಪಿನಲ್ಲಿರಬಹುದು ಇದೇ ಟ್ರೆಜರರನ ಕೂಡೆ ಮೈಮಾನ್‌ಸಿಂಗಿನ ಟೌನ್‌ಬೆಂಕ್ ಮತ್ತು ಸೆಂಟ್ರಲ್ ಬೇಂಕಿನವರು ಕೆಲವು ಹಣವನ್ನು ಇಡಲು ಕೊಟ್ಟಿದ್ದರು. ಈ ಹಣವೂ ಕಾಣೆಯಾಗಿರುವದು ಟ್ರೆಜರನನ್ನು ಕೈದುಮಾಡಿದಲ್ಲಿ ಅವನು ತನ್ನನ್ನು ಜಾಮೀನಿನ ಮೇಲೆ ಬಿಡಬೇಕೆಂದು ಕೇಳಿಕೊಂಡನು ಸೆಶನ್ಸ್ ಜಡ್ಜರು ಜಾಮೀನಿನ ಮೇಲೆ ಬಿಡಲಿಲ್ಲ. ಆದರೆ ಸೆಶನ್ಸ್ ಜಡ್ಜರು ಆತನ ಅನಾರೋಗ್ಯವನ್ನು ಲಕ್ಷಕ್ಕೆ ತಂದು, ನವಂಬರ ತಾ ೨೦ರ ವರೆಗೆ ಪೋಲೀಸ್ ಒಂದೋಜಿನ್ಸಿಯಲ್ಲಿ ಅವನು ತನ್ನ ಮನೆಯಲ್ಲೇ ಇರಬಹುದೆಂಬ ಅಪ್ಪಣೆ ಕೊಟ್ಟರು. ನವಂಬರ ತಾ ೨೦ರಲ್ಲು ಸ್ವತಃ ಅಪೀಲು ಆಯಿತು ಜೀವಕ್ಕೆ ಹಾನಿಯಾಗದಂತೆ ಆತನನ್ನು ಅಸ್ಪತ್ರಿಗೆ ಕೊಂಡುಹೋಗಬಹುದೆಂತ ಸಿವಿಲ್ ಸರ್ಜನರು ಅಭಿಪ್ರಾಯಪಡುತ್ತಾರಾದ್ದರಿಂದ ಜಾಮೀನಿನ ಮೇಲೆ ಬಿಡಕೂಡದೆಂದು ಸರಕಾರ ಕಡೆಯ ವಕೀಲರು ವಾದಿಸಿದರು ಡಿಸ್ಟ್ರಿಕ್ಟ್ ಜಡ್ಜರು ಜಾಮೀನಿನ ಮೇಲೆ ಬಿಡಲು ನಿರಾಕರಿಸಿದ್ದರಿಂದ ಅವನನ್ನು ತಾ. ೨೦ರಲ್ಲು ಜೈಲಿಗೆ ಕೊಂಡುಹೋದರು. ಈ ಟ್ರೆಜರರನಿಗೆ ಜಾಮೀನು ನಿಂತ ಅವನ ಸಹೋದರ ಮತ್ತು ತಾಯಿಯಿಂದ ಕಳದು ಹೋದ ೫೫ ಸಾವಿರ ರೂಪ್ಯಾಗಳನ್ನು ಪಡಕೊಳ್ಳುವ ಬಗ್ಗೆ ಟ್ರೆಜರಿಯಿಂದ ಅವರಿಗೆ ಸರ್ಟಿಫಿಕೇಟು ಹೋಗಿರುವದು. ಟೌನ್ ಬೇಂಕ್ ಮತ್ತು ಸೆಂಟ್ರಲ್ ಬೇಂಕಿನವರು ಕೂಡಾ ಈ ಟ್ರೆಜರರನ ಮೇಲೆ ದಾವೆ ದಾಖಲು ಮಾಡಿರುತ್ತಾರೆ.

ನಾನಪುರ ಎಂಬಲ್ಲಿ ನಡದ ಜಾತ್ರೆಗೆ ಹೋಗಿದ್ದ ರಿವಾ ಮಹಾರಾಜರವರು ಹರಿಕ್ಷೇತ್ರ ಮೇಳದಲ್ಲಿ ದನಕಾ ದನಗಳನ್ನು ಕೊಲ್ಲುತ್ತಾರೆಂಬ ವಾರ್ತೆ ಕೇಳಿದ್ದರಿಂದ ಕೂಡಲೇ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರ ಬಳಿಗೆ ಹೋಗಿ ದನಗಳನ್ನು ಕೊಲ್ಲುವದನ್ನು ಮರುದಿನಕ್ಕೆ ಇಡಿಸುವಹಾಗೆ ಮಾತನಾಡಿದರು. ಹ್ಯಾಗೂ ಬಹಳ ಕವ್ವಂದಿ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರಿಂದ ಅಪ್ಪಣೆ ದೊರಕಿತು. ಮರುದಿನ ಬೆಳಗ್ಗೆ ರಿವಾ ಮಹಾರಾಜರವರು, ಕೊಲ್ಲುವದಕ್ಕೆ ತಂದಿದ್ದ ಎಲ್ಲಾ ದನಗಳನ್ನು ೩೫೦೦ ರೂಪಾಯಿಗೆ ಕೊಂಡು ಕೊಂಡರು ಈ ಜಾತ್ರೆಯಲ್ಲಿ ಜರಗಿದ ಹಿಂದೂ ಧರ್ಮಸಮ್ಮೇಳನಕ್ಕೆ ಮಹಾರಾಜರವರು ಹೋಗಿ, ಕೊಲ್ಲುವದಕ್ಕಾಗಿ ದನಗಳನ್ನು ಮಾರುವ ಹಿಂದೂಗಳ ವರ್ತನೆಯನ್ನು ಖಂಡಿಸಿ ಮನಸ್ಸು ಕರಗುವಂತೆ ಮಾತನ್ನಾಡಿದರು. ಹಿಂದೂಧರ್ಮಸಮ್ಮೇಳನದವರು ಇದರಿಂದ ಮನಸ್ಸು ಕರಗಿದವರಾಗಿ ಹರಿಕ್ಷೇತ್ರ ಮೇಳದಲ್ಲಿ ದನಗಳನ್ನು ಕೊಲ್ಲುವದನ್ನು ನಿಲ್ಲಿಸುವ ಹಾಗೆ ಸರಕಾರದವರನ್ನು ಕೇಳಿಕೊಳ್ಳಲು ನಿರ್ಣಯಿಸಿರುತ್ತಾರೆ.

ವ್ಯಾಸರಾಯ ಪ್ರಭುಗಳವರು ಬಿಕಾನಿರ ಸಂಸ್ಥಾನವನ್ನು ಸಂದರ್ಶಿಸಿರುವರು

ಇದೇ ೫ನೇ ರಾಷ್ಟ್ರೀಯ ಸಭೆಯು ದಶಂಬರ ತಾ ೩೧-೨೮-೨೯ರಲ್ಲಿ ಮುಂಬಾಯಿಯಲ್ಲಿ ಕೂಡಿ ಬರುವದು.

ವ್ಯಾಸರಾಯ ಹಾರ್ಡಿಂಜ ಪ್ರಭುಗಳವರ ಕೆಲಸದ ಧಿಯು ೨ ವರ್ಷಕ್ಕೆ ಹೆಚ್ಚಿಸಲ್ಪಟ್ಟಿರುವದೆಂಬ ವಾರ್ತೆಯು ಸಿಮ್ಲದಲ್ಲಿ ಹಬ್ಬಿರುವದೆಂತ "ಸಿಮ್ಲ ಟೈಮ್ಸ್" ಪತ್ರಿಕೆಯಲ್ಲಿ ಪ್ರಕಟವಾಗಿರುವದು.

ದಕ್ಷಿಣ ಹಿಂದೂಸ್ಥಾನ.

ಇದೇ ಕಳೆದ ನವಂಬರ ತಾ. ೨೩, ೨೪, ೨೫ ೨೬ರಲ್ಲು ಮದ್ರಾಸ್ ನ್ಯಾಯವಿಧಾಯಕ ಸಭೆಯು ಮದ್ರಾಸ್ ಸರಕಾರ ಮಂದಿರದಲ್ಲಿ ಕೂಡಿ ಬಂದಿದ್ದಿತು. ಈಗಳೇ ಇಡಿಯ ಮದ್ರಾಸ್ ಮೆಡಿಕಲ್ ರಿಜಿಸ್ಟ್ರೇಶನ್ ಆಕ್ಟಿನಲ್ಲಿ ತಿದಪಡಿಯನ್ನು ಸೂಚಿಸುವ ಮಸೂದೆಯನ್ನು ಕೌನ್ಸಿಲಿಮುಂದೆ ತರುವರೆ ಅವಪ್ಪನೆಯಾಗಬೇಕೆಂದು ಬಹುಮಾನಪಟ್ಟ ರಾವ್ ಬಹದ್ದೂರ್ ಬಿ. ನರಸಿಂಹೇಶ್ವರ ಶಮ್ಮರವರು ನ್ಯಾಯವಿಧಾಯಕ ಸಭೆಯನ್ನು ಕೇಳಿಕೊಂಡರು ಈಗಲಿರುವ ಮೆಡಿಕಲ್ ರಿಜಿಸ್ಟ್ರೇಶನ್ ಆಕ್ಟು ಯುನಾನಿ ಮತ್ತು ಆಯುರ್ವೇದೋಕ್ತ ಚಿಕಿತ್ಸಾಕ್ರಮಗಳ ಅಭಿವೃದ್ಧಿಗೆ ಹೇಗೆ ಪ್ರತಿಕೂಲವಾಗಿ ಪರಿಣಮಿಸಿಯದೆಂಬದನ್ನು ಡಾಕ್ಟರ್ ಕೃಷ್ಣಸ್ವಾಮಿ ಐಯ್ಯರವರ ಪ್ರವಾಗಿ ಮೆಡಿಕಲ್ ಕೌನ್ಸಿಲಿನವರು ತೆಕ್ಕೊಂಡ ವರ್ತನೆಯ ದೃಷ್ಟಾಂತದಿಂದ ತೋರಿಸಿಕೊಟ್ಟರು. ಬಹುಮಾನಪಟ್ಟ ಮೆಂಬರರಲ್ಲಿ ಕೆಲವರು ಮಾನ್ಯ ಶರ್ಮರವರು ಸೂಚಿಸಿದ ಅಭಿಪ್ರಾಯಗಳನ್ನು ಅನುಮೋದಿಸಿ ಮಾತನ್ನಾಡಿದರು ಸರಕಾರ್ದ ಕಡೆಯಿಂದಲೂ ಶರ್ಮರವರು ಆಲೋಚನೆಗೆ ಹೆಚ್ಚಿನ ಅಧಿಕಾರದ್ದರಿಂದ ಮೆಡಿಕಲ್ ರಿಜಿಸ್ಟ್ರೇಶನ್ ಆಕ್ಟಿನಲ್ಲಿ ತಿದ್ದುಪಡಿ ಸೂಚಿಸುವ ಮಸೂದೆಯನ್ನು ಸಭೆಯು ಮುಂದೆ ತರಲು ಅಪ್ಪಣೆ ಕೊಟ್ಟಿರುವದು

ದಕ್ಷಿಣ ಮಲಬಾರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಎರಡು ಮಾಕ್ಕತ್ತಾಯ ಮತ್ತು ಅಳಿಯ ಸಂತಾನ ಕಟ್ಟಿನ ಪ್ರಕಾರ ನಡೆಯುವ ಮಾಪಿಳೈಯರಲ್ಲಿ ಮರಣ ಶಾಸನ ಬರೆದಿಡದೆ ಸತ್ತವರ ಆಸ್ತಿಯ ಉತ್ತರಾಧಿಕಾರದ ವಿಷಯ ನಾಗಿರುವ ಕಟ್ಟನ್ನು ತಿದ್ದುಪಡಿಮಾಡಿ ಅದನ್ನು ಸ್ಪಷ್ಟೀಕರಿಸುವ ಬಗ್ಗೆ ಒಂದು ಮಸೂದೆಯನ್ನು ಕೌನ್ಸಿಲಿನ ಮುಂದೆ ತರಲು ಅಪ್ಪಣೆಯಾಗಬೇಕೆಂದು ಮಾನ್ಯ ಎ ಟಿ ಪಿ ಎಮ್ ಮಹಮ್ಮದ್ ತಂಬಿ ಮರಕ್ಕಯರವರು ಕೇಳಿಕೊಂಡರು. ಇದಕ್ಕೆ ಸರ್ವಸಮ್ಮತದಿಂದ ಅಪ್ಪಣೆ ದೊರಕಿರುತ್ತದೆ

ಗ್ರಾಮಪಂಚಾಯತಗಳನ್ನು ರೂಪಿಸುವದರ ವಿಷಯವಾಗಿ ತನಕೆ ನಡಿಸಿ ವರದಿ ಮಾಡುವ ಬಗ್ಗೆ ಆಫೀಸಿಯಲ್ ಮತ್ತು ನೊನ್ ಆಫೀಸಿಯಲರಿರುವ ಒಂದು ಕಮಿಟಿಯನ್ನು ಸ್ಥಾಪಿಸಬೇಕೆಂಬ ಮಸೂದೆಯನ್ನು ಮಾನ್ಯ ಪಿ ಕೇಶವ ಪಿಳ್ಳೈಯವರು ಕೌನ್ಸಿಲಿನ ಮುಂದೆ ತಂದರು. ಈ ಮಸೂದೆಯ ಮತ್ತು ಗ್ರಾಮಪಂಚಾಯತಗಳ ವರವಾಗಿ ಇಂಡಿಯಾ ಸರಕಾರದವರಿಂದ ಈಚೆಗೆ ಕೊಡೋಣವಾದ ಹುಕುಂಗಳ ವಿಷಯ ಸುಮಾರು ಏಳು ಮಸೂದೆಗಳು ಸಭೆಯ ಮುಂದೆ ತರಲ್ಪಟ್ಟವು. ಮರುದಿನದ ಸಭೆಯಲ್ಲಿ ಚರ್ಚೆ ನಡೆದು ಇವುಗಳಲ್ಲಿ ಕೆಲವು ಬಿದ್ದು ಹೋದವು, ಕೆಲವು ಹಿಂತೆಗೆಯೋಣವಾದವು.

ಸಂಸ್ಥಾನದ ಹೆಮ್ಮಕ್ಕಳಿಗೆ ಎಲಿಮೆಂಟರಿ ವಿದ್ಯೆ ಸೆಕೆಂಡರಿ ವಿದ್ಯೆಯನ್ನು ತಕ್ಕ ರೀತಿಯಲ್ಲಿ ಕೊಡೋಣವಾಗ ಬೇಕಾದ ವಿಷಯವನ್ನು ಆಲೋಚಿಸುವರೆ ಆಫೀಸಿಯಲ್ ಮತ್ತು ನೊನ್ ಆಫೀಸಿಯಲರು ಕೂಡಿದ ಒಂದು ಕಮಿಟಿಯನ್ನು ನೇಮಿಸಬೇಕೆಂಬ ನಿರ್ಣಯವನ್ನು ಮಾನ್ಯ ಕೆ ಆರ್. ವಿ ಕೃಷ್ಣರಾವ್‌ರವರು ಕೌನ್ಸಿಲಿನ ಮುಂದಿಟ್ಟರು ಸರಕಾರದ ವರವಾಗಿ ಮಾನ್ಯಸ್ಟೋನ ದೊರೆಗಳವರು ತಿಳಿಯಹೇಳಿದ ಅಭಿಪ್ರಾಯಗಳನ್ನು ಕೇಳಿ ಮಾನ್ಯ ಕೃಷ್ಣರಾಯರವರು ತನ್ನ ನಿರ್ಣಯವನ್ನು ಹಿಂದೆಗೆದರು.

ಸಂಸ್ಥಾನದಲ್ಲಿರುವ ಮುನ್ಸಿಪಾಲಿಟಿಗಳ ಎಲಿಮೆಂಟರಿ ಶಾಲೆಗಳಲ್ಲಿ ವಿದ್ಯಾಧ್ಯಾಸವನ್ನು ಕಡ್ಡಾಯವಾಗಿಯೂ, ಧರ್ಮಾರ್ಥವಾಗಿಯೂ ಕೊಡಿಸುವಂತೆ ಮುನ್ಸಿಪಾಲಿಟಿಗಳಿಗೆ ಅಧಿಕಾರವನ್ನು ಕೊಡಬೇಕೆಂಬ ನಿರ್ಣಯವನ್ನು ಮಾನ್ಯ ಎ. ಎಸ್. ಕೃಷ್ಣರಾಯರವರು ಕೌನ್ಸಿಲಿನ ಮುಂದೆ ತಂದರು. ಈ ಮಸೂದೆಯನ್ನು ಮಾನ್ಯ ಸೆಂಬರರಲ್ಲಿ ಕೆಲವರು ಅನುಮೋದಿಸಿದರು. ಆದರೆ ಈ ವಿಷಯ ಚರ್ಚೆ ನಡೆದು ಕಡೆಗೆ ಬಹುಮತದಿಂದ ಈ ನಿರ್ಣಯವು ಬಿದ್ದು ಹೋಯಿತು.

ಆಯುರ್ವೇದ ವಿದ್ಯೆಯನ್ನು ಅಭಿವೃದ್ಧಿಗೆ ತರಲು ಅನುಕೂಲವಾಗುವಂತೆ ತಕ್ಕದಾದ ಶೋಧನೆಗಳನ್ನು ನಡಿಸುವ ವಿಷಯವನ್ನು ಮಾಡಬೇಕೆಂಬ ಮಸೂದೆಯು ಮಾನ್ಯ ಎ. ಎಸ್. ಕೃಷ್ಣರಾಯರಿಂದ ಕೌನ್ಸಿಲಿನ ಮುಂದೆ ತರೋಣವಾಯಿತು. ಆಯುರ್ವೇದ ವಿದ್ಯೆಯ ವರವಾಗಿ ಶೋಧನೆಯ ಆಲೋಚನೆಯು ಸರಕಾರದವರಿಗೆ ಹಿಂದಿನಿಂದಲೇ ಇದೆಯಾದರೂ ಇಂಥಾ ಶೋಧನೆ ಮಾತ್ರಲು ಯೋಗ್ಯರಾದ ಜನರು ಸಿಕ್ಕಲಿಲ್ಲವಾದುದರಿಂದಲೂ ಈಗ ಈ ವಿಷಯವು ಬಹಳ ಕಾಲ ಅಂಥಾ ಜನರು ಸಿಕ್ಕುವದು ದುರ್ಲಭವಾದುದರಿಂದಲೂ ಈ ಕೆಲಸವನ್ನು ಮಾಡಲು ಸರಕಾರದವರಿಗೂ ಆಗದೆ ಹೋಯಿತು. ಯೋಗ್ಯನಾದವನು ದೊರಕಿದಲ್ಲಿ ಈ ವಿಷಯ ಆಲೋಚಿಸಲಾಗುವದೆಂಬದಾಗಿ ಸರಕಾರದ ವರವಾಗಿ ಮಾನ್ಯ ಕಾರ್ಯ್ಯೂ ದೊರೆಗಳವರು ಹೇಳಿದ್ದರಿಂದ ಈ ಮಸೂದೆಯು ಹಿಂದೆಗೆಯಲಾಯಿತು.

ಕೆಲವು ಅರಿಸಿದ ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ನೊನ್ ಆಫೀಸಿಯಲ್ ಪ್ರೆಸಿಡೆಂಟರನ್ನು ನೇಮಿಸಬೇಕೆಂಬ ಮಸೂದೆಯನ್ನು ಮಾನ್ಯ ಪಿ ವಿ ನರಶಿಂಹ ಅಯ್ಯರರು ಕೌನ್ಸಿಲಿನ ಮುಂದೆ ತಂದಿದ್ದರು ಮಾನ್ಯ ಮಲ್ಲಿಕಾರ್ಜುನಯ್ಯರ್, ಮಾನ್ಯ ಕೆ ಮೂಪಿಲ್ ನಾಯರ್ ಮೊದಲಾದ ಪೆಂಬರರು ಈ ಮಸೂದೆಯನ್ನು ಅನುಮೋದಿಸಿ ಮಾತನ್ನಾಡಿದರು. ಮಾನ್ಯ ಸರ್ ಶಿವಸ್ವಾ ಅಯ್ಯರ್ ರವೇ ಮೊದಲಾದ ಕೆಲವು ಮೆಂಬರರು ವಿರೋಧಿಸಿದರು. ಕಡೆಗೆ ಈ ಮಸೂದೆಯು ಬಹುಮತದಿಂದ ಬಿದ್ದು ಹೋಯಿತು.

ದಕ್ಷಿಣ ಕನ್ನಡ

ನೋಟೀಸು

ಮಂಗಳೂರಿನ ರದಬೀದಿ ಪ್ರೇ ಮೆಂಕಟರಮಣ ದೇವಸ್ಥಾನದ ಒಡಿಯಲ್ಲಿ ಮೆಸರ್ಸ್ ಪಿ ಎಮ್ ಕಾಮತ್ ಮತ್ತು ಕಂಪೆನಿ ಎಂಬ ಹೆಸರಿನಲ್ಲಿ ನಡಿಯುತ್ತಿದ್ದ ಏಲಾಯಿತ ಔಷಧಿ ವ್ಯಾಪಾರದ ಕಂಪೆನಿಯಲ್ಲಿ ಮಾಲಿಕರಾಗಿದ್ದ ಪಿ. ಎಮ್ ಕಾಮತ್ ಮತ್ತು ಬಿಜಾರ ಗೋಪಾಲ ಪೈಯವರು ಇವರ ನೈಕಿ ಈ ಕಂಪೆನಿಯು ನಾಲೆ ಕತ್ತುವನ್ನು ಬಿಜಾರ ಗೋಪಾಲ ಪೈಗಳು ಬಿಟ್ಟಿರುವರು. ಸದ್ರಿ ಕಂಪೆನಿಯು ಪೈಸಾಟುಗಳಿಗೂ, ಲೇವಾದೇವಿಗೂ, ಲಾಭನಷ್ಟಕ್ಕೂ ಸದ್ರಿ ಗೋಪಾಲ ಪೈಗಳವರು ಜವಾಬ್ದಾರರಲ್ಲವೆಂಬುದನ್ನು ಈ ಮೂಲಕ ಸರ್ವರಿಗೂ ತಿಳಿಸೋಣಾಗಿದೆ

ತಾ 2-11-1915 M Gopal Pai

ನೋಟೀಸು.

ದಿ. ಕೆನರಾ ಪಬ್ಲಿಕ್ ಕನ್‌ವೇಯನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು

ಮಂಗಳೂರಿನಿಂದ ಪುತ್ತೂರಿಗೆ ಹೋಗುವ ಮೋಟರ್ ಒನ್ಸಿನ 2ನೇ ತರಗತಿ ಪ್ರಯಾಣಿಕರ ಟಿಕೇಟಿಗೆ ದರವು ಇದೇ ದಶಂಬರ ತಾ 1ರಿಂದ ತಗ್ಗಿಸೋಣಾಗಿರುತ್ತದೆಂತ ಈ ಮೂಲಕ ತಿಳಿಸೋಣಾಗಿರುತ್ತದೆ

	ರೂ ಆ ಪೈ
ಮಂಗಳೂರಿಂದ ಪುತ್ತೂರಿಗೆ IIನೇ ಕ್ಲಾಸು	1—8—0
ಮಂಗಳೂರಿಂದ ಕಲ್ಲಡ್ಕ ಮಾಣಿ ಅಥವಾ ನೀರಕಟ್ಟೆ IIನೇ ಕ್ಲಾಸು	1—4—0
ಪುತ್ತೂರಿಂದ ಮಾಣಿ ಅಥವಾ ನೀರಕಟ್ಟೆ IIನೇ ಕ್ಲಾಸು	0—8—0
ಪುತ್ತೂರಿಂದ ಮಂಗಳೂರು IIನೇ ಕ್ಲಾಸು	1—8—0

B. Babu Rao & Sons.
Managing Agents.

ನೋಟೀಸು.

ನಾನು ಮಂಗಳೂರು ಶಹರಿನಲ್ಲಿರುವ ಮದ್ದೋಳಿ ಮರಿಯಪ್ಪಯ್ಯನವರ ಮಗ ಪ. ಗೋವಿಂದಯ್ಯನವರಿಂದ ಕಳದ ತಾ 6-9-13 ರಲ್ಲು ರೂ. 3000ಕ್ಕೆ ಬರಿಸಿಕೊಂಡ ಡಿಮಾಂಡು ನೋಟು ಕಳದ ತಾ. 25—11—15 ರಲ್ಲು ಹೂವಿನ ಮಾರ್ಕೆಟು ಬಳಿ ಕೈಯಲ್ಲಿ ವಸ್ತ್ರದ ಬ್ಲಿ ಮುಚ್ಚಿ ಹಿಡಕೊಂಡದ್ದು ಗ್ಯೆರವಿಲೆಯಾಗಿರುತ್ತದೆ. ಈ ಸಂಗತಿಯನ್ನು ಪೋಲೀಸು ಆಫೀಸರಿಗೂ ತಿಳಿಸಿರುತ್ತೇನೆ. ಈ ನೋಟು ಶಿಕ್ಕಿದವರು ನನಗೆ ತಂದುಕೊಟ್ಟಲ್ಲಿ ವ ಪೋಲೀಸ ಆಫೀಸಿಗೆ ಹಾಜರು ಪಡಿಸಿದಲ್ಲಿ ಆ ಕುರಿತು ರೂ ೨ ಇನಾಮು ಕೊಡುತ್ತೇನೆ

ತಾ 2-11-1915 ಕದ್ರಿ ಕೃಷ್ಣಶೆಟ್ಟಿ ಮರಿದ ಲಕ್ಷ್ಮೀನಾರಾಯಣ ಭಟ್ರ ಮಗ ಅನಂತ ದಟ್ಟನ ರುಜು.

ಉಡುಪಿ: ಈ ವರ್ಷ ಮುಂಗಾರು ಮಳೆಯು ಕಡಿಮೆಯಾದರೂ ಹಿಂಗಾರು ಮಳೆಯು ತಕ್ಕಮ್ಟು ಸುರಿದುದರಿಂದ ಸೀಗಿ ಬೈರಿಗೂ ಹುರುಳಿ ಮೊದಲಾದ ಧಾನ್ಯಗಳ ಬೈರಿಗೂ ತಕ್ಕಷ್ಟು ಅನುಕೂಲವಾಯಿತು. ಮಳೆಗಾಲದಲ್ಲಿ ಕಕ್ಕುವ ಬೆಳೆಗಳಲ್ಲಿ ಮಳೆಯ ಅಭಾವದಿಂದ ವಂಚಿತವಾದ್ದೇ ಬೈರಿ ಬಹಳಮಟ್ಟಿಗೆ ಸುಟ್ಟು ಹೋಗಿರುವದು. ಈ ಗ್ರಾಮಾಂತರ್ಗತದಲ್ಲಿ ಪಂಜ (ಬೆಟ್ಟ) ಗದ್ದೆಗಳೆ ಹೆಚ್ಚಾಗಿರವದರಿಂದ ನೀರಿಗೆ ಕೊರತ್ತೆ ಕಂಡಿಯು ಪಂಪಿಲ್ಲದೇ ದಾಗಿ ಕೆಲವಕ್ಕಲ್ಲಾಗಲೂ ತೀರ್ಪಿ ಕೊಟ್ಟು ಸ್ವಲ್ಪ ಪಂಪಿಲ್ಲದೆಂ ವಾಗಿ ವರ್ಷವಾಗಲೂ ಗುಣಗುಟ್ಟುತಿರುವರು. ಅಸ್ಥಿಧಾರಣೆಯು ವಿಪರೀತವಾಗಿ ಚಡಾವಾಗಿಯೇ ಇರುವದು.

ರವ ಜನವರಿ ತಿಂಗಳಲ್ಲಿ ಜರಗತಕ್ಕ ಶ್ರೀ ಸೋದೆ ಸ್ವಾಮಿಗಳ ಪರ್ಯಾಯೋತ್ಸವಕ್ಕೆ ಬೇಕಾದ ಸಮಾರಂಭಗಳು ಯಥಾ ಪ್ರಕಾರ ಕ್ರಮದಂತೆ ಜರಗುತ್ತಿರುವದು. ಮಂಗಳೂರಲ್ಲಿ ಸ್ಟೇಗು ಇದ್ದ ಸಂಬಂಧ ಕೆಲವು ವರ್ಷಗಳಿಂದ ಇಲ್ಲಿಗೆ ಪರ್ಯಾಯಕ್ಕೆ ಬರತಕ್ಕ ಜನರಿಗೆ ಪಲಾನಾ ತಾರೀಕಿನ ನಂತರ ಕುಡುಪಿಗೆ ಬರಕೂಡದಾಗಿ ನಿರ್ಬಂಧ ವಿದ್ದಿತು. ಇದರಿಂದ ಯಾತ್ರಿಕರೂ, ಸ್ಥಳಿಕರೂ ನಾನಾ ತರ ಅಡಚಣೆಗಳಿಗೆ ಗುರಿಯಾಗುತ್ತಿದ್ದರು. ಈ ಒರುವ ಪರ್ಯಾಯೋತ್ಸವಕ್ಕೆ ಅಂಥ ನಿರ್ಬಂಧವ್ಯಾವುದೂ ಇರುವದಿಲ್ಲವಾಗಿ ವಾಂತಿ ಇರುವುದು ಗುಣದೋಷಗಳನ್ನು ವಿಮರ್ಶೆ ಮಾಡಿ ಇಂಥ ನಿರ್ಬಂಧಗಳು ಇಲ್ಲದಂತೆ ನಮ್ಮ ಮಾನ್ಯ ಡಿವಿಜನಲ್ ಆಫೀಸರವರು ಮಾಡಿಸಿದ್ದು ತುಂಬಾ ಅನುಕೂಲವಾಯಿತು

ಇಲ್ಲಿ ಕಳೆದ ನವಂಬರ ತಾ ೧೫ರ ಭಾಗಾಯಿತು ಸರ್ವೀ ಶಾಲೆಯು ಆರಂಭವಾಗಿರುವುದು ೩೩ ಮಂದಿ ತರಬೇತು ಹೊಂದುತ್ತಿರುವರು. ಇವರನ್ನು ತರಬೇತು ಮಾಡುವ ಇಲ್ಲಿಯ ಲೇಂಡರಿಕಾರ್ಡು ಇನ್ಸ್‌ಪೆಕ್ಟರವರಾದ ಮಾ ರಾ ಕೃಷ್ಣಪ್ಪನವರು ಒಳ್ಳೆ ಯೋಗ್ಯರೀತಿಯಲ್ಲಿ ಕಲಿಸುತ್ತಿರುವರಾಗಿ ತಿಳಿದು ಬರುತ್ತದೆ.

ಇಲ್ಲಿಯ ಪೇಜಾವರ ಶ್ರೀಸ್ಥಾದಂಗಳವರು ಹರಿದ್ವಾರದಿಂದ ಹೊರಟು ಗೋಕುಲ, ವೃಂದಾವನ, ಮಥುರಾ, ಕುರುಕ್ಷೇತ್ರ, ಹಸ್ತಿನಾಪುರ, ಅಯೋಧ್ಯಾ ಮೊದಲಾದ ಕ್ಷೇತ್ರಗಳ ಯಾತ್ರೆಯನ್ನು ತೀರಿಸಿ ಪ್ರಯಾಗಕ್ಕೆ ದಯ ಮಾಡಿಸಿರುವರಾಗಿಯೂ ಅಲ್ಲಿಂದ ನದ್ದೆ ಕಾಶಿಗೆ ದಯ ಮಾಡಿಸುವರಾಗಿಯೂ ತಿಳಿದು ಬರುತ್ತದೆ

ಬೈಂದೂರು:— ಇಲ್ಲಿ ಶ್ರೀಮಂತರಾಗಿರುವ ಮಾ| ರಾ| ಎಡ್ತರೆ ಅಣ್ಣಪ್ಪ ಶೆಟ್ಟರವರು ಮತ್ತು ಮಾ| ರಾ| ವೆಂಕಟ್ರಮಣ ಹೊಳ್ಳರವರು ಪ್ರತಿಯೊಬ್ಬರೂ ಸಾರ್ವಜನಿಕವಾದ ಬೈಂದೂರು ಸಭಾಪದನಕ್ಕೆ ರೂ ೫೦೦ ಉದಾರ ಧನಸಹಾಯವನ್ನು ಮಾಡಿರುತ್ತಾರೆ

ಇಲ್ಲಿಯ ಬೋರ್ಡ್ ಎಲಿಮೆಂಟರಿ ಶಾಲೆಯನ್ನು ಹ್ಯಾಯರ್ ಎಲಿಮೆಂಟರಿ ತರಗತಿಗೆ ತರುವ ಉದ್ದೇಶದಿಂದ ಕಳೆದ ಮಾರ್ಚಿ ತಿಂಗಳಿನಿಂದ ಈನೇ ದರ್ಜೆಯನ್ನು ಏರ್ಪಡಿಸಿರುತ್ತಾರೆ. ಮತ್ತು ಇಂಗ್ಲಿಷ್ ಎರಡನೆ ಬಾಷೆಯಾಗಿ (optional) ಕಲಿಸಲ್ಪಡುತ್ತಿದೆ ಇಲ್ಲಿಯ ಜನರು ಮಾ. ಉ ಮಂಗೇಶರಾಯರ ಈ ಸಹಾಯದ ಬಗ್ಗೆ ಅವರಿಗೆ ಬಹಳ ಕೃತಜ್ಞತರಾಗಿರುತ್ತಾರೆ ತ್ಪರ್ಯದಲ್ಲಿ ಈನೇ ದರ್ಜೆ ಬಗ್ಗೆ ಒಬ್ಬ ಯೋಗ್ಯ ಉಸಾಧ್ಯಾಯನನ್ನೂ ಇಂಗ್ಲಿಷು ಕಲಿಸತಕ್ಕ ಬಚ್ಚನನ್ನೂ ಅವರು ಇಲ್ಲಿಗೆ ಕಳುಹಿಸುವಂತೆ ಜನರ ಪ್ರಾರ್ಥನೆ.

ಮಂಗಳೂರು

ಇಲ್ಲಿನೆ ಪೋಲೀಸ ಸಪರಿಂಟೆಂಡೆಂಟರವರ ಮನೆಯಿಂದ ೬೫ ರೂಪಾಯಿ ಕ್ರಯ ಬಾಳುವ ಪದಕ ಇತ್ಯಾದಿಗಳನ್ನು ಕಳವು ಮಾಡಿದ್ದ ವ್ಯಾಪಾರಿ ಮತ್ತು ಅವನ ಹೆಂಡತಿಯ ವಿಚಾರಣೆಯು ನಡೆದು ಇದೇ ಸವಂಬರ ತಾ ೨೬ಕ್ಕೆ ವ್ಯಾಪಾರಿಗೆ ೬ ತಿಂಗಳ ಕಠಿಣ ಸಜೆ ವಿಧಿಸೋಕಾಗಿರುವದು ಅವನ ಹೆಂಡತಿಯನ್ನು ಮೇಜಿಸ್ಟ್ರೇಟರು ಖುಲಾಸುಪಡಿಸಿದರು. ಆರೋಪಿತ ವ್ಯಾಪಾರಿಯು ಕುಂಬಕೋಣದವನು ಪ್ರಲೋಭನೆಯಿಂದ ನಟಿಸಿ ನಿಯಮನೆಗಳ ತಿಳ್ಳಪಡಿಗಳು ಸರಕಾರದವರಿಂದ ಮಂಜೂರು ಮಾಡಲ್ಪಟ್ಟ ಪೋರ್ಟ ಸೈಂಟ್ ಬೋರ್ಜ ಗಜೇಟೆಸ್ಸಲ್ಲಿ ಪ್ರಕಟಿಸಲ್ಪಟ್ಟಿವೆ ರೂ ೧೫ ಇವನು ಈ ಮೊಲಗಿಗ ಮಿಕ್ಕಿದ ವೆನ್ನನು ಪಡಿಯುವ ಸರಕಾರದ ನೌಕರರು ಮತ್ತು ರೂ ೬೦೦ ವೇತನ ಸಂಬಳ ಹೊಂದುವ ಸರಕಾರದ ನೌಕರರ ಬದಲಿಗೆ ಸರಕಾರದಿಂದ ಪರಿದುಗಳನ್ನ ಪಡೆದವರು ವೋಟರ್‌ರಾಗಿರಬೇಕೆಂತ ಹೊಸ ನಿಯಮಗಳಲ್ಲಿ ಅದೆ ಮತ್ತೊಂದ ವಿಶೇಷವಾದ ಗಲಾವಣೆಯು ಏನಂರೆ ವೋಟರ್‌ರಾಗಿರುವಂಥವನಿಗೆ ಮೊದಲು ಉಮೇದ್ವಾರನಾಗಿ ನಿಲ್ಲಲು ಈ ಮೊದಲು ಲಗತ್ಯವಿದ್ದ ಜೋಯ್ತೆಗಳನ್ನ ವಜಾ ಮಾಡಿದವರು.

ಪೆನಿಪ ನಿಧಿಯೆಗಳು.

ಲಂಡನ್‌ನಲ್ಲಿ ಕಾಷೀ ಸಂಸ್ಥಾನತಕ್ಕ ದೊಡ್ಡ ರಸ್ತೆಯಲ್ಲಿ ವಸಿಸ್ಯರು ತಿರುಗಾಡುವುದು ಹೇ ಅಸಾಯಕರವಾಗಿದೆ ಈ ಅಭಿಪ್ರಾಯದಿಂದ ಕಳೆದ ಸಂವತ್ಸರದಲ್ಲಿ ಸುಮಾರು ೬೦೦ ವಂದಿ ವ್ಯಕ್ತಪಟ್ಟರು ಇಪ್ಪತ್ತು ಸಾವಿರ ಮಂದಿಗೆ ಗಾಯಗಳಾದವು

ಇಂಡಿಯಾದೇಶದ ಹಗ್ಗದ ವ್ಯಾಪಾರವೆಲ್ಲಾ ಮುಖ್ಯವಾಗಿ ಮದ್ರಾಸು ಅದಿಪತ್ಯಕ್ಕೆ ಸೇರಿದ್ದಾಗಿರುತ್ತದೆ ಇಂದ ಪೌಂಡು ನೆಯ ಮೌಲ್ಯದ ಹಗ್ಗಗಳು ಮಲಬಾರಿನಿಂದ ಸುಮಾರು ೬೦೦ ಲಕ್ಷ ರೂಪಾಯಿ ಬೆಲೆ ಬಾಳುವ ಹಗ್ಗಗಳು ಹೊರ ದೇಶಕ್ಕೆ ಕಳುಹಿಸಲ್ಪಟ್ಟವು.

ಅಮೆರಿಕಾದೇಶದ ಒಬ್ಬ ಡಾಕ್ಟರು ಅಲ್ಲಿ ಒಬ್ಬ ಹುಡುಗಿಯ ಕವಿಯ ಮೂಲಕ ವಾಯುಚಲನೆಯನ್ನು ನಿಲ್ಲಿಸಿ, ರಿಪೋರ್ಟು ಆಗಿದ್ದಿತಷ್ಟೆ. ಡಾಕ್ಟಾರರು ಶವ ಪರೀಕ್ಷೆ ಮಾಡಿ ಮೈರೆ ಹೆಂಗಸು ಸ್ವಾಭಾವಿಕವಾದ ರೋಗದಿಂದ ಮೃತಪಟ್ಟಳೆಂದು ಅಭಿಪ್ರಾಯಪಟ್ಟಿದ್ದರಿಂದ ಚಾಯಬ್ಯಾರಿಯನ್ನು ಪೋಲೀಸಿನವರು ಬಿಟ್ಟುಬಿಟ್ಟರು.

ಕೊಯಮುತ್ತೂರಲ್ಲಿ ಪೋಲಿಸ್ ಇನ್ಸ್‌ಪೆಕ್ಟರಾಗಿದ್ದ ರಾ| ಎಮ್ ವೆಂಕಟ್ಟಪ್ಪನವರಿಗೆ ಪುತ್ತೂರಿಗೆ ವರ್ಗವಾಗಿಯಿದೆ

ಪೋಸ್ಟ್ ಆಪೀಸುಗಳ ಸುಪರಿಂಟೆಂಡೆಂಟರಾದ ಮಾ| ರಾ| ವೆಂಕಟರಾವ್ ನ್ಯಾಡುರವರು ಇದೇ ತಾ ೧೫ರಲ್ಲು ಇಲ್ಲಿಗೆ ಚೆತ್ತೈಸಿದರು

ಮಂಗಳೂರು ಮುನಿಸಿಪಾಲಿಟಿಯಲ್ಲಿ ಕಳವು ವಾರನಾಲ್ಕು ಪ್ಲೇಗು ಮರಣಗಳಿದ್ದವು

ಈ ತಿಂಗಳ ಡಿಸ್ಟ್ರಿಕ್ಟ್ ಬೋರ್ಡಿನ ಸಭೆಯು ತಾ ೧೫ರಲ್ಲಿ ಕೂಡಿದ್ದು

ನಗರಕ್ಕೆ ಉಡಿನ ಮೇಲೆ ಕೆನರಾ ಬೆಂಕಿನಿಂದ ಒಂದು ಸಾವಿರ ರೂಪಾಯಿಗಳನ್ನು ಪಡೆದು ಕಳದ ತಿಂಗಳ ತಾ ೨೦ನೇ ಸಾಯಂಕಾಲ ಮಿಶನ್ ಶಾಲೆಯ ಎದುರಿಗಡೆಯಲ್ಲಿರುವ ಹೊಸ ರಸ್ತೆಯಿಂದ ಕಂಡತ್‌ಪಳ್ಳಿ ಮಾರ್ಗದತ್ತಕಡೆ ಹೋದ ಮಾಜಿ ಪದ್ರಾನ್ ಬೀಂಕಿನ ಕೇಶಿಕೇವರರ ಮಗ ರಾಮ ಬಂಡಾರಿಯೆಂಬವರು ಕಾಣೆಯಾಗಿರುವರು ಪೋಲಿಸಿನವರು ಈ ವಿಷಯ ಕಳವಳೆಂಟು ದಿನಗಳಿಂದ ತನಪಿ ನಡಿಸುತ್ತಿರುವರಾದರೂ ತನಪಿ ಫಲವು ಏನೆಂಬುದು ಈ ತನಕ ಗೊತ್ತಾಗಲಿಲ್ಲ

ಮುನ್ಸಿಪಲ್ ಕೌನ್ಸಿಲು ವತ್ತು ತಾಲೂಕು ಬೋರ್ಡು ಗಳಿಗೆ ಪೆಂಬರನ್ನು ಚುನಾಯಿಸುವ ಸ್ಥಿತಿ ಇರುವ ನಿಯಮನೆಗಳು ತಿಳ್ಳಪಡಿಗಳು ಸರಕಾರದವರಿಂದ ಮಂ

ಊರೂರು ತಿರುಗಾಡಿ ಕಳವು ಮಾಡುವದೇ ಈ ಯಾತ್ರಸ್ಥ ದಂಪತಿಗಳ ವೃತ್ತಿಯಾಗಿರುವದೆಂತ ತಿಳಿದು ಬಂದಿರುವದು. ಇತರ ಊರುಗಳ ಇಂಥಾ ಇನ್ನು ನಾಲ್ಕು ಕಳವು ಮೊಕದಮೆ ತನಕೆಯ ವ್ಯಾಪಾರಿಯ ಮೇಲೆ ಬಾಕಿಯಲ್ಲಿರುವದೆಂತ ತಿಳಿಯಬರುತ್ತದೆ

ಮಂಚಾಬಿಗೆ ಹೋಗುವ ಟ್ರೇಮರ್ ಮೇಲೆ ಹಾಕಲು ವಂಬಿಯಲ್ಲಿ ತಂಬಿಸಿದ್ದ ಕಲ್ಲಿಕೋಟೆಯ ಸಾಹುಕಾರರೊಬ್ಬರ ಪೆಟ್ಟಿಗೆ ಮೂಬಯೊಂದನ್ನು ಇದ್ದಿನ ಬ್ಯಾರಿ ಎಂಬವ ಕಳವು ಮಾಡಿದ್ದನು ಈತನ ಮೇಲೆ ಕಟ್ಟಳೆ ನಡೆದು ಪೀಜಿಸೈಂಟರ ಅವನಿಗೆ ತಿಂಗಳ ಕಠಿಣ ಸಜೆ ವಿಧಿಸಿರುತ್ತಾರೆ

ಹತ್ತು ರೂಪಾಯಿಯ ಕರೆನ್ಸಿ ನೋಟು ಕೂಟ್ಟಲ್ಲಿ ೫೦ ರೂಪಾಯಿ ಇತ್ಯಾದಿಗಳ ಕರೆನ್ಸಿ ನೋಟ್ಟನ್ನು ಹಿಂದೆ ಕೊಡುತ್ತೇನೆಂದಾಗಿ ಜನರನ್ನ ಠಕಾಯಿಸಿ ಮೋಸ ಕ್ಕೊಳಪಡಿಸಲು ಇಲ್ಲಿಗೆ ಬಂದಿದ್ದವನೆ ಅನುಮಾನದ ಮೇಲೆ ಪೋಲಿಸಿನವರ ಇದೇ ತಾ ೨೦ರಲ್ಲು ಕರಿಕೋಟಿಯ ಸೈಯದ್ ಕಾಸಿಂ, ಕಾಲ್ಗಾರ್ಟಿನ್ ಕರ್ವನ್ ಸ್ಟ್ರೀಟ್ ಪೊಲ್ಲಾಚಿಯ ಕೃಷ್ಣ ನೆಟ್ಟಿ ಅಲ್ಲಾಅಸಾರಿ ಮತ್ತು ಕಳನ ಚೆಟ್ಟಿ ಎಂಬ ವಿದು ವಂದಿಯನ್ನು ಕೈಗೆ ಸಾಂಪರಿವಾರಿ ನಲ್ಲಿಟ್ಟಿರುವರು ಈ ಸಂದರ್ಭದಲ್ಲಿ ವೆಸ್ಟರ್ನ್ ಮರ್ಕಾಂಟೈಲ್ ಎಂಡ್‌ಸನ್ ಕಾಫಿಕಾರ್ಖಾನೆಯ ಕ್ಲಾರ್ಕ ರಾ ಎನ್ ಶೇಷಪ್ಪನವರೂ ರಾ| ಕಚ್ಚೂರು ವೆಂಕಟ್ರಾಯರ ಗುಮಾಸ್ತರಾದ ರಾ| ರಾಮರಾಯರೂ ಈ ರಕ್ಷರನ್ನು ಹಿಡಿದು ಕೊಡುವರೆ ಬಹಳ ಸಾಹಸವಟ್ಟಶರವರೆಂದು ತಿಳಿಯುತ್ತೇವೆ

ಬಸವನಗುಡಿ ಮೈರೆ ಹೆಂಗಸನ್ನು ಚಾಯಬ್ಯಾರಿ ಎಂಬವನು ಖೂನಿಮಾಡಿದ್ದನೆಂದು ಪೋಲಿಸಿನವರಿಗೆ ಅವಳ ಪ್ರಾಣವನ್ನು ತೆಗೆದು ಕಳೇಬರವನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ಮುಚ್ಚಿ ಮೊಳೆ ಹೊಡೆದು ಮೂರಾ ಳ್ಳುದ್ದುದ ಗುಂಡಿಯಲ್ಲಿ ಹೂಳಿಟ್ಟದ್ದು ಮೂರು ದಿನದ ಮೇಲೆ ಅನೇಕರೊಡನೆ ಅಲ್ಲಿಗೆ ಹೋಗಿ ಆ ಕಳೇಬರದ ಕವಿಯ ಮೂಲಕ ವಾಯುಚಲನೆಯ ಳನ್ನು ಬದುಕಿಸಿದನಂತೆ.

ಮಾತನಾಡುವ ಗಡಿಯಾರ ಒಂದು ಬರ್ಲಿನ್ ನಗರದ ಒಂದು ಹೋಟೆಲಿನಲ್ಲಿ ಪ್ರದರ್ಶಿಸಲ್ಪಟ್ಟಿರುತ್ತದೆ. ಅದು ಕಾಲುಘಂಟೆ, ಅರ್ಧಘಂಟೆಗೆ ಮತ್ತು ಒಂದು ಘಂಟೆಗೆ ಸಂದಾವರ್ತಿ ಘಂಟೆ ಇವ್ವು ಆಯಿತೆಂದು ಮನುಷ್ಯನ ಧ್ವನಿಯ ಹಾಗೆ ಕೂಗಿಕೊಳ್ಳುತ್ತದೆ. ಆ ಗಡಿಯಾರವು ನಿದ್ರೆಮಾಡು-ತ್ತಿರುವವರಿಗೆ ಕೂಡ ಘಂಟೆ ಇಷ್ಟಾಯ್ತೆಂದು ತಿಳಿಸಿ ಎಬ್ಬಿಸುತ್ತದೆ ಅದು ಯಾವ ಭಾಷೆಯಲ್ಲಿ ದೇಕಾಗಿದ್ದರೂ ಮಾತನಾಡುವ ಹಾಗೆ ಸೂಚಿಸಿಕೊಳ್ಳಬಹುದು.

ಒಂದು ರಾಸಿನ ತೂಕವನ್ನು ಗೊತ್ತುಮಾಡುವ ಕ್ರಮವು ಹ್ಯಾಗಂದರೆ.—ಭುಜದ ಕೇಶಿನಿಂದ ಹಿರುಳಿನ ವರೆವಿಗೂ ಇರುವ ಉಳತೆಯನ್ನೂ ಮತ್ತು ರಾಸಿನ ಹೊಟ್ಟೆಯ ಸುತ್ತಳತೆಯನ್ನೂ ಕಂಡುಹಿಡಿಯುವುದು. ಅನಂತರ ಸುತ್ತಳತೆಯನ್ನು ಅಂಗುಲಗಳಾಗಿ ಮಾಡಿಕೊಂಡು ಅದನ್ನು ಅದರಿಂದಲೇ ಗುಣಿಸಿ ಬಂದ ಲಬ್ಧವನ್ನು ಬುಜದಿಂದ ಹಿರುಳಿನವರಿಗಿರುವ ಉಳತೆಯಿಂದ ಗುಣಿಸಿ ಲಬ್ಧವನ್ನು ೩೦೦ರಿಂದ ಭಾಗಿಸಿದರೆ ಬರುವ ಪೌಂಡಿನಷ್ಟು ಆ ರಾಸಿನ ತೂಕವೆಂದು ಹೇಳುತ್ತಾರೆ. ಒಳ್ಳೆಯ ರಾಸಿನ ಸುತ್ತಳತೆಯು ಅದರ ತೊಡೆಯ ಸುತ್ತಳತೆಯ ಒಂಭತ್ತರ ಷ್ಟೆಂದು ತಿಳಿಯಬರುತ್ತದೆ

ಜೆನಸು ಧಾರಣೆ.

ಮುಸ್ಕತಿ ಹೊಸ ಅಕ್ಕಿ	5— 4—0	5— 8—0
ಗಾಡಿ ರಾತಿ ಹೊಸ ,,	4—10—0	5— 3—0
ಗುಡ್ಡು ,, ,,	4—14—0	5— 4—0
ಅವ್ವಲ್ ಬೆಲ್ಲಿಗೆ ,,	6— 8—0	6—10—0
ಗುಡ್ಡು ಬೆಲ್ಲಿಗೆ ,,	5—10—0	5—12—0
ರಂಗೂನು ಬೆಲ್ಲಿಗೆ ಗೋಣಿ ೧ರ	11— 4—0	10—12—0
ಗೋದಿ ಗೋಣಿ ೧ರ	13— 0—0	13— 8—0
ಹುರುಳಿ ಗೋಣಿ ೧ರ	6— 4—0	7— 8—0
ಕಡಲೆ ಗೋಣಿ ೧ರ ಬೊಂಬೈ	9— 4—0	9—12—0
ತೊಗರಿ ಗೋಣಿ ೧ರ	12— 0—0	13—12—0
ತೊಗರಿ ಬೇಳೆ ಗೋಣಿ ೧ರ	13— 8—0	16— 0—0
ಉದ್ದು ಗೋಣಿ ೧ರ	11— 0—0	12— 0—0
ಊರುಬಲ್ಲ ಖಂಡಿ ೧ರ	... ...	60— 0—0
ಉಪ್ಪು ಗೋಣಿ ೧ರ	3— 2—0	3— 4—0
ಪೊಟ್ಟಿ ಖಂಡಿ ೧ರ	75— 0—0	82— 8—0
ಪೊಟ್ಟಿಕಂಡಿ ಖಂಡಿ ೧ರ	20— 0—0	22— 0—0
ಎಳ್ಳಂಡಿ ಖಂಡಿ ೧ರ ಬೊಂಬ್ಬಿ	20— 0—0	30— 4—0
ಪೊಟ್ಟಿ ಎಣ್ಣೆ ಮಣ ೧ರು.	6—10—0	6—12—0
ಎಳ್ಳೆಣ್ಣೆ ಮಣ ೧ರ(ಕುರಾಸನ)	4— 5—0	4—12—0
ಆಮಿಣೆ ಎಣ್ಣೆ ಪೆಟ್ಟಿಗೆ ೧ರ	4— 9—0	5— 0—0
ಮೋರಿಸ್ ಸಕ್ಕರೆ ಮಣ ೧ರು.	0—0	4—10—0
ಕಾಫಿ ಖಂಡಿ ೧ರ	240— 0—0	252— 0—0
ಹೊಸಬೀಳಗೋಟು ಖಂಡಿ೧ರು.	94— 0—0	98— 0—0
ಹೊಸ ಗೇಯಬೀಜ ಮುಡಿ ೧ರ		2—13—0
ಕಬ್ಬಿಣ ಖಂಡಿ ೧ರ		50— 0—0
ಕಾಂಬ್ರ ತಗಡು ಮಣ ೧ರು.		20— 0—0
ಕಾಂಬ್ರ ಪಾತ್ರೆಗಳು ಮಣ ೧ರು		22— 0—0
ಜೀನ ಬೆಳ್ಳಿ ಶೇರು ೧ರು.		18—12—0
ಪಚ್ಚೆಹೆಸರು ಮುಡಿ ೧ರ	5—10—0	5—12—0

ದಿನವಹಿ ಉಪಯೋಗಿಸುವ ಇತ್ಯಾದಿಗಳನ್ನು ಬರೆಯಲು ಆಗತ್ಯವುಳ್ಳ

1916ನೇ ವರುಷದ

ಪೊಕೆಟ್ ಡೈರಿಗಳು.

ಸಿವಿಲ್ ಮತ್ತು ರೆವಿನ್ಯು ಕೋರ್ಟುಗಳಲ್ಲಿ ಕೂಡಿಸೋಣಾಗುವ ಫೀಸು, ಭತ್ತೆ ಬರಗಳು. ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳ, ಸಾಕ್ಷಿಗಾರರ ಕ್ರಯಗಾದ ಖರ್ಚು ಕೊಡೋ ಹಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ಟ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟಾಂಪ್ ಡೂಟಿ, ನೋಟು, ವಿಲ್ಲಾನು ಬಾತಿಗೆ ಟೀಟು, ರಿಜಿಸ್ಟ್ರೇಶನ್ ಇತ್ಯಾದಿಗಳ ಮಾದರಿ ಫೋರ್ಮು, ಶಕಗಳ ಮೊಕಾಬಲೆ ಸಣ್ಣ ಪಿಪ್ಪಾಲಾಫೀಸಿನ ಕ್ರಯ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮಹಮ್ಮದೀಯ ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿರ

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ, ವರ್ತಕರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೇಟು ಬುಕ್ಕು.

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8
ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4.

ವ್ಯಾಪಾರಸ್ಥರಿಗೂ ರಿಯಿಂ ತಕ್ಕೊಳ್ಳುವವರಿಗೂ ರಿಯಿ ಹೆಚ್ಚಿನ ಪ್ರತ್ಯೇಕ ದರಗಳಿವೆ.

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾರ್ಡ್, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

— ಡೈರಿಗಳು ಸಿಕ್ಕುವ ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮವರಿಗೆ ಸೋಮೇಶ್ವರ ನರಸಿಂಗರಾಯರು ಮುಂಜಿಗಿಂತ ಕೈಲ್ವೆ ಸ್ಟೇಶನಿಗೆ ಇನ್ನೂ ಹತ್ತಿರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗೆ ಮನೆ ತಕ್ಕೊಂಡಿದ್ದಾರೆ. ಮುಂದಾಗಿ ಒಂದು ಕಾರ್ಡು ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ. ಬಿರ್ಚೇನೂ ವಿಶೇಷವಿಲ. ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ:— ಸೋಮೇಶ್ವರ ನರಸಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉಪ್ಪುನೀರ ಜಾತಿಯ ಮತ್ಸ್ಯದ ಯಕೃತ್ತಿಯಿಂದ ಪಕ್ವಗೆದಿಯುದು. ಇದರಿಂದ ದೊರಕತಕ್ಕ ಲಾಭವಾದರೋ ಇದರಲ್ಲಿಯ ಎಷ್ಟನೆಯ ಭಾಗವು ಶಾರೀರಕ ಕೃತ ದೊಡನೆ ಸೇರಿಕೊಳ್ಳುವುದೋ ಆದನ್ನು ತಾನೇ ಅವಲಂಬಿಸಿರುತ್ತದೆ. ಆಳ್ಳೆ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೆದ ಬೇರೆ ಔಷಧಗಳು ಕೊಲಸಾಗಿಯೂ ಕುಶಲವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ವತ್ತ ಅವು ಸಾಯವಾಗಿ ಜೀರ್ಣವಾಗುವದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸ್ಥಿತ್ತದೆ. ಆದರೆ ಅಂತಹ ಅಪಾಯಗಳಾದರೂ ಹೇಗಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ರೀತಿಯಿಂದ ಸೇರಿಸಲ್ಪಟ್ಟಿದೆ. ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಅರ್ಥೈಯಿಕಂಡಾಗದ ಶ್ವಾಸಕೋಶ್ಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಕ್ಷಾಸಪಾಸ ಕ್ಷಯಾದಿ ರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಅಗ್ಗೆ ಪೋಟ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಔಷಧಗಳಲ್ಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಬರೆಯುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು.

ಬಾಟ್ಲಿ 1ಕ್ಕೆ ರೂ. 3—4—0. ಅರ್ಧ ಬಾಟ್ಲಿಗೆ 1—12—0

ಎ ಹೂಲನ್ ಮಾರ್ಟ್,
ಮಂಗಳೂರು. ದ.ಕ.

NOTICE.

The Canara High School Day will be celebrated this year on the 26th December 1915. All 'OLD BOYS' of the School are requested to be present on the occasion and to make the Celebration a success

Canara High School
Mangalroe, 24-11-15

A Padmanabhaiya,
B A., L.T.
President,
School Day Committee

ಡಾಕ್ಟಾರ್ ಪಿ. ಡಿ'ಲಿಮಾ.
ಎಂಬ
ದಂತ ವೈದ್ಯರು.

ಇನ್ನು ಇಲ್ಲಿ ಸ್ವಲ್ಪ ಸಮಯದವರೆಗಿರುವರು ಬಿದ್ದುಕೋದ ಅಥವಾ ಹುಳು ಹಿಡಿದು ಹಾಳಾದ ಹಲ್ಲುಗಳ ಸ್ಥಳಗಳಲ್ಲಿ ವಸೂ ಕಂದುಕೊಡತೆಗಳಲ್ಲದಂತೆ ಕೃತಕ ದಂತಗಳನ್ನು ತಯ್ಯಾರಿಸಿಡುವರು

ದರಗಳು ಸುಲಭ.

ವೈದಾನಿನ ಇದಿರುಗಡೆಯಲ್ಲಿರುವ ಮೆ| ಪರ್ಫರ ಶೋಪಿನ ಮಾಳಿಗೆಯಲ್ಲಿ ದಂತ ಚಿಕಿತ್ಸೆಯು ಮಾಡೋಣಾಗುವದು

ವಿಳಾಸ —
ಡಾಕ್ಟಾರ್ ಪಿ. ಡಿ'ಲಿಮಾ,
ದಂತ ವೈದ್ಯ,
ಪರ್ಫರ ಶೋಪು, ಮಂಗಳೂರು.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ವಿಜಯಪುರ ಬೇಕ I ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ, ಥರಪೂರ್ ಕಮಿಷನ್!!

ಶಕಮೂಲಿಕಾ ಅಮರ ಸಂಜೀವನಿ ಟೊನಿಕ್, ಬಾಲಸಂಜೀವನಿ ಟೊನಿಕ್, ವಸಂತಕ ಸುಮಾಕರ ಶೈಲ್ಯ, ಸರ್ದರ್ಶನ ಮಾಲಿನಿ, ಗರುಡ್ಧಜ, ಆನಂದವನ ವಿಲಾಸ, ಕುಟುಂಬ ಜೀವನ ಮೊದಲಾದವುಗಳನ್ನು ತರಿಸಲು ವ ರೆಯಬೇಡಿರಿ.

೧. ಕಂಠೀರವ. ಈ ಸಿದ್ಧರಸಾಯನದಿಂದ, ರಕ್ತವು ಶುದ್ಧವಾಗಿ ಎಲ್ಲಾ ಕುಷ್ಠಮೇಹ ವಾತರೋಗಾಗಳು ನಿಸ್ಸಂಶಯವಾಗಿ ಗುಣವಾಗುತ್ತವೆ 16 ಮಾತ್ರೆ ರೂ 1

೨. ಸೂರ್ಯಪ್ರಭಾ. ಇದು ಸ್ವಪ್ನೇಂದ್ರಿಯ, ಸಪ್ನೇಂದ್ರಿಯವನ್ನು ಶಕ್ತಿಪೂರ್ಣ ಸಮಿಸುತ್ತದೆ. ತೊಲೆ 1ಕ್ಕೆ ರೂ 1-

೩. ಅಶೋಕಾರಿಷ್ಟ. ಈ ಸಿದ್ಧೌಷಧವು ಸ್ತ್ರೀಯರ ಸರ್ವ ರೋಗಗಳನ್ನು ನಾಶಮಾಡಿ ಪುಕ್ರವತಿಯಾಗಿ ಮಾಡುತ್ತದೆ. ಬಾಟ್ಲಿ 1ಕ್ಕೆ ರೂ. 1—4—0

೪. ಗರ್ಭ ಪ್ರಪ್ತಿಕರಣಿ. ಇದು ಸ್ತ್ರೀಯರ ಎಲ್ಲಾ ಜವ ರೋಗಗಳನ್ನು ನಾಶಪಡಿಸಿ ಸುಪ್ರಸವವನ್ನೂ ಸುಪುತ್ರಸನ್ನು ಕೊಡುತ್ತದೆ ತೊಲೆ 6ಕ್ಕೆ ರೂ. 1.

೫. ಮಧುಮಾಧವಿ ಪಿಲ್ಸ್. ಇದು ಸ್ತ್ರೀಯರ ಪ್ರಸವ ಕಾಲದಲ್ಲಿ ಕೊಷತಕ್ಕೆ ಸಿದ್ಧೌಷಧವಾಗಿರುತ್ತದೆ ಮಾತ್ರೆ 60ಕ್ಕೆ ರೂ 2.

೬. ಬಾಲಶಂಕರಿ. ಬಾಲಕರ ಹೊಟ್ಟೆಯಲ್ಲಿ ಹುಟ್ಟುವ ಕೃಮಿ ವ್ಯಾಧಿ, ಜ್ವರಗಡ್ಡೆ, ಗುಲ್ಮ ಇತ್ಯಾದಿ ರೋಗಗಳ ಮೇಲೆ ರಾಮಬಾಣವಾಗಿರುತ್ತದೆ. ಮಾತ್ರೆ 48ಕ್ಕೆ 1—8—0.

೭. ರಬಾರ್ ಬ್ಯೂಟೆ ವೆಸ್ಟಿನ್. ಇದರ ದಂತಲೇಪನದಿಂದ ಮುಖದ ಮೇಲೆ ಆಗುವ ಸರ್ವ ಕಲೆಗಳೂ ನಿಶ್ಚಯವಾಗಿ ಮುಖವು ಪೂರ್ವದಂತೆ ಶೋಭೆಯುತ್ತದೆ. ಬಾಟ್ಲಿ 1ಕ್ಕೆ ರೂ 8—0.

೮. ಅಮೃತಸಾರ. ಇದು ವಾಯು ದುರ್ಮೂರ್ ಎಂಬ ಬಹು ಕಠಿಣಕ್ಕೆ ಸಿದ್ಧೌಷಧವಾಗಿರುತ್ತದೆ. 1 ತೊಲೆ ದ್ರಾವಕಕ್ಕೆ ರೂ 1.

N B. — ನಮ್ಮ ಡಿಸ್ಪೆನ್ಸರಿಯಲ್ಲಿ ಸರ್ವ ರೋಗಗಳಿಗಾಗುವ ಸ್ವಾವಿಧಾನ ಔಷಧಗಳು ಸಿದ್ಧವಾಗಿರುತ್ತವೆ. ನಮ್ಮ ಕಟಲಾಗನ್ನು ತರಿಸಿಕೊಳ್ಳಿರಿ.

ಎಮ್. ಎ. ಶಂಕರ್, ಉದ್ಯೋಗಸ್ಥಕಾರ್ಯ, ವೈದ್ಯರು.

ಕನ್ನಡ ಕಥೆ ಪುಸ್ತಕಗಳು.

ಶತಪ್ರತಿ ೭೦ ಕಥೆಗಳು ಸಚಿತ್ರ	೨	೦	೦	ತೊರವಿ ರಾಮಾಯಣ ೨ ಸೆಟ್ಟುಂ	೧	೦	೦
ಚಿತ್ರ ವಿದ್ಯಾವೆಂಜರಿ ಕಥೆಗಳು	೧	೮	೦	ಕೈವಿನ ಭಾರತ ಗ್ರೇಜಿವಲ್	೧	೪	೦
ಧಟ್ಟನಿಕ್ಕನೂಡಿಕ್ಕಾಯನ ಕಥೆ	೧	೮	೦	,, ದುಯ್ಯಂ	೦	೧೦	೦
ಚಿತ್ರ ರಾಮಾಯಣ ಕಥಾಸಂಗ್ರಹ ಗ್ರೇಜ್ ಆವ್ತಲ್	೧	೪	೦	,, ಸೌಂದ	೦	೬	೦
ರಥ ದುಯ್ಯಂ	೦	೧೨	೦	೧೮ ಪರ್ವ ಭಾರತ	೨	೮	೦
ವಿನ ಭಾರತ ಕಥಾಸಂಗ್ರಹ	೦	೧೨	೦	೧೨ ಸ್ಕಂಧ ಭಾಗವತ ಗ್ರೇಜಿವ	೫	೦	೦
ಸ್ಯಜ್ಞೋಧಾಮೃತ	೦	೧೦	೦	,, ದುಯ್ಯಂ	೪	೦	೦
ರತ ಕಥಾಸಂಗ್ರಹ	೦	೬	೦	ಪದ್ಯಗಳು.			
ಭಾವತಿ ಶುಕಮಂಜರಿ ಕಥೆ	೦	೫	೦	ರಪದ್ಯಾಕರ ೨ ಭಾಗ	೧	೦	೦
ಕಾವಳಿ ಕಥೆ	೦	೬	೦	ಮಿಂದ ದುಸ್ತರ ಕೀರ್ತನೆ	೦	೬	೦
ವನನೋಹನರಾಜ ಚರಿತ್ರೆ	೦	೬	೦	,, ಬೆಳ್ಳಾಲ	೦	೬	೦
ಂಚಲಕುಮಾರಿ ಕಥೆ	೦	೪	೦	ಸಾದಾಸಕೀರ್ತನೆ	೦	೩	೦
ಳ್ಳಿ ಗುಣವ ಂಜರಿ ಕಥೆ	೦	೫	೦	ಗೀತಕವರಾಜು	೦	೪	೦
ತ್ರಕಾಮಾಕ್ಷಿ ಕಥೆ	೦	೬	೦	ಗೀತಲ್ಯಾಂಕಿ	೦	೫	೦
ರಿಶ್ಚಂದ್ರನ ಕಥೆ	೦	೪	೦	ಂಕಿಯಂ ವಂದ ರತಾಲಿಕಾ	೦	೩	೦
ಳದಮಯ ಂತಿಯರ ಕಥೆ	೦	೬	೦	ಗಿ ತಿಂ ತರಂಗಿಣಿ	೦	೪	೦
ತ್ರೀಸಪುತ್ರರ ಕಥೆ	೦	೫	೦	ಂಲ ತರಿಣಿಯ ಪದ	೦	೦	೬
ಟ್ಟಿಮುಂಡಿಗಳ ಕಥೆ	೦	೬	೦	ತ್ವ ಂತಿಪದ ಗಾಳು	೦	೦	೬
ಸ್ಯಶುಂದು ಶುಕವಾಣಿ ಕಥೆ	೦	೪	೦	ಕ್ಕೂರ ವಿಸ್ತಾರ ಂಧ	೦	೬	೦
ಂಜ ಪೊಂಸಾ ಶೃಂಗಾರಾದ್ಭುತಕಥೆ	೦	೧೨	೦	ದೂಷಣಾರ್ಜ	೦	೫	೦
ತಿಮುಕಾಯಿ ಕಥೆ	೦	೧೦	೦	ಲಕ್ಷ್ಮೀಶೋಭಾನೆ	೦	೧	೬
ಪುರಾಣಗಳು.				ಪಾಂಡವಗೀತೆ	೦	೧	೬
ರವಿರಾಮಾಯಣ ಗ್ರೇಜಿವಲ್	೨	೦	೦	ವಿಷ್ಣುಶಕ್ತಸಾರ (ಶ್ಲೋಕ)	೦	೨	೦
,, ದುಯ್ಯಂ	೧	೮	೦	ಕಾರ್ತೂನಮುಂಸ್ವಾಮಿ ಚಂಪೂಧಿ	೦	೪	೦

ಇವುಗಳಲ್ಲದೆ ಇನ್ನೂ ಅನೇಕ ತರದ ಕನಸು, ಮಂತ್ರಾ, ಸಂಸ್ಕೃತ ಪುಸ್ತಕಗಳೂ ೀರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊಟಮಿತ್ತಿಗಳೂ, ಆರಗಜ ತ್ತ, ದಶಾಂಗ, ಗಂಧದಪುಲ್ಲೆ ಮೊದಲಾದ ಸುಗಂಧದ್ರವ್ಯಗಳೂ ಒಳಿತ ಕಮ್ಮಿ ಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ. ವ್ಯಾಪಾರದವರಿಗೆ ಒಳ್ಳೇ ಕಮಿಷನ್ ದೊರಿ ಸುವದು ಅರ್ಧಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಳಿಸಿಕೊಡಲಾ ೀವೆ. ಬೇಕಾದವರು ಈ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳಬಹುದು

ಶ್ರೀ ರಾಘವೇಂದ್ರ ವಿಲಾಸ.
ರಥಬೀದಿ ಮಂಗಳೂರು

ಔಷಧಗಳು.

ಮಹಾಮದನ ಕಾಮೇಶ್ವರೀ ಲೇಹ್ಯ:—ಒಕಳ ಶ್ರಮಪಟ್ಟು ಕೆಲಸ ಮಾಡುವವರೂ, ಲೇಖಕರೂ, ಮತ್ತು ಇಂದ್ರಿಯ ದೌರ್ಬಲ್ಯ ಜರ್ಜರಿತ, ಎದೆನೋವು, ೀರಗಳ ಘಳಿತದಿಂದಾದ ನಿಶ್ಯಕ್ತಿ ಮೊದಲಾದ ಪ್ರಕೃತಿಯ ಳ್ಳವರೂ ಇದನ್ನು ಸೇವಿಸಿ ಲ್ಲಿ ಧಾತುಪುಷ್ಟಿಯಾಗಿ ವಂಬುವು ಕಾಂತಿಯೂ ಳಿಸುವದು ಸೇವನಾ ಕ್ರಮ—ಧ್ಯಾನವುಳ್ಳವರು 1 ಸಾನಲೆ ತೂಕ ಯಾ ಗೋಲಗಾತ್ರ ಅಭ್ಯಾಸಿಸುವವರು 2 ಣೆ ತೂಕ ರಾತ್ರೆ ಊಟಾದ ವೇಳೆ ಸೇವಿಸಿ ಹಾಲು ಕುಡಿಯಬೇಕಾಗ್ಗಿದೆ

1 ಶೀಸಿನ ಡಬ್ಬಿಗೆ ಕ್ರಯ. 2—0—0

ಚಂದ್ರೋದಯಾವರ್ತಿ:—ಕಣ್ಣಿಗೆ ಅಂಜನ ವಾಗುವಷ್ಟಿ ಬೆಳೆದ ದು ರ್ಣಾಂಸ, ತಿಮಿರ, 3 ವರ್ಷದ ಹೂವು, ಇತ್ಯಾದಿಗಳ್ಳಿ, ತಾಜವೆಂದು ಗುಣ

ಕ್ರಯ ರೂ ೦—೨—೦

ಮಹಾಜ್ವರಾಂಕುಶ:—ದಿವಸಕ್ಕೊಮ್ಮೆ ದ್ವಿತೀಯ, ತೃತೀಯ, ಚಾತುರ್ಥಿಕ ರಗಳ ಮೇಲೆ ರಾಮಬಾಣ. ಡಜನ್ ಕ್ರಯ ೦—೪—೦,

ಮೇಹನಮುದ್ಗರವಟಿ:—೭೦ ನಮೂನೆಯ ಪ್ರಮೇಹ, ಧಾತು ಗತಜ್ವರ ಮೂತ್ರಕೃಚ್ಛ್ರ, ಅಶ್ಮರಿ, ಕಾಮಲೆ, ಪಾಂಡು ಗುಣ. ಡಜನ್ ೧೦ ಕ್ರಯ: ೧—೨—೦.

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ. ೦—೧೨—೦.

ಚಂದನಾಸವ:—ನೋಹ, ಶುಕ್ಲಧಾತು ನಷ್ಟತ್ವ ಗುಣ. ಬಾಟ್ಲಿಗೆ ರೂ. ೧.

ನಮ್ಮ ಔಷಧಾಲಯದಲ್ಲಿ ಆಕಳ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯು ಳುವದು ಕೆಟಲಾಗ ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ಕ್ರಯವನ್ನು ಕಡಿಮೆ ಮಾಡಿರುತ್ತದೆ.

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ ೨೬೪ನೇ. ಮಂಗಳೂರು.

ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿ.

ಪಿ. ಸುಬ್ಬರಾಯಿ ಯವರ

ಲೋಕ ಪ್ರಸಿದ್ಧವಾದ ಆಯುರ್ವೇದ ಔಷಧಗಳು.

ಓದಿ ಕಲ್ಲೋನ್:—ಇದು ವಿಲಾಯತಿಯಿಂದ ತರಿಸಿದ್ದಲ್ಲ, ನಮ್ಮ ಔಷಧ ಕಾಲಯಲ್ಲಿಯೇ ಸ್ವತಾ ತುಯಾರಿಸಲ್ಪಟ್ಟಿದ್ದ ಮನಸ್ಸು ಸಂತೋಷವಾಗುವ ಸುವಾಸನ ಯುಳ್ಳದ್ದು ಹಾಗು ದೇಹಕ್ಕೆ ಸವರಬಹುದು, ಮತ್ತು ವಸ್ತ್ರಗಳಿಗೆ ಹಾಕಬಹುದು. ಇತರ ಉಪಯೋಗದಿಂದ ತೀಕ್ಷೂಲ ಗುಣವಾಗುವದಲ್ಲದೆ ದೇಹಶ್ರಮವನ್ನು ತೀರಿಸುವದು ಒಕಳ ಹೊತ್ತ ಇದನ್ನು ಉಪಯೋಗಿಸಿದವರ ಸುತ್ತಲು ಅತಿ ವಾಸನೆಯಾಗಿರುವದು ಸಾಧಾರಣವಾಗಿ ಅಂಗಡಿಗಳಲ್ಲಿ ಜಲಮಿಶ್ರವಾದಂತೆ ಇಲ್ಲದೆ ಇದೊಂದು ಸ್ವಯವಾದ ವಾಸನೆಯಾಗಿ ವಸ್ತ್ರವು. ಅಂಗಡಿಗಳಲ್ಲಿ ಇರುವ ಓದಿಕಲೋನ್ 10 ಬೊಟ್ಟು ಉಪಯೋಗಿಸುವದಕ್ಕಿಂತಲೂ ನಿವ್ಮಿಂದ ತಯಾರಾಗಿ ಮಾರುತ್ತುಲಿರುವ ಓದಿಕಲೋನನ್ನು 2 ಬೊಟ್ಟು ಬಿಟ್ಟರೆ ಸಾಕಾಗುವುದು ಅರ್ಧ ಔನ್ಸ್ ಬುಡ್ಡಿಗಳಲ್ಲಿ ವರ್ತಾಲ್ಪಡುವದು ಕ್ರಯ ಒಂದ್ದಿ 1ಕ್ಕೆ 8 ಆಣೆ. 10ರಿಂದ 6 ಬುಡ್ಡಿಗಳಿಗೆ ವಿ ಪಿ. ಚಾರ್ಜು 5 ಆಣೆ ಬೀಳುವದು,

ಬಟ್ಟೆಗಳಿಗೆ ಹಾಕುವ ಸುವಾಸನಾ ದ್ರವ್ಯಗಳು:—ಮನಮೋಹಿನಿ, ಮನೋರಂಜಿನಿ, ಜಗನ್ಮೋಹಿನಿ, ಮದನವಿಲಾಸ, ಆಕ್ಬರ್‌ಜಿರಾಯಿ, ಷಾಜಿಹಾನ್ ಜಿರಾಯಿ, ಎಂಬ ಅನೇಕ ವಿಧ ಸುವಾಸನೆಗಳುಂಟು ಈ ದಿನಸುಗಳು ಈಗ ಪುಷ್ಪಿಸಿದ ಪುಷ್ಪಗಳಂತೆಯೇ ಪರಿಮಳ ಕೊಡುವದು ಯಾವದು ಬೇಕಾದರೂ ಸೀಸೆ 1ಕ್ಕೆ 8 ಆಣೆಗಳು ವಿ. ಪಿ 10ರಿಂದ 6 ಸೀಸೆಗಳವರಿಗೂ 5 ಆಣೆಗಳು ಪ್ರತ್ಯೇಕವು.

ಕೇಸರಿ ಪೌಡರ್:—ಇದು ಒಂದು ವಿದವಾದ ಹೆಚ್ಚು ಬೆಲೆಯಾದ ಸುಗಂಧ ದ್ರವ್ಯ ಇದರಲ್ಲಿ ಸ್ವಲ್ಪ ಹಣಿಯನ್ನು ತೆಗದು ನೀರಲ್ಲಿ ಆಗಲಿ ಶ್ರೀಗಂಧದಲ್ಲಿ ಆಗಲಿ ತೇದಿಸಿ ದೇಹಕ್ಕೆ ಹಚ್ಚಿಕೊಂಡದ್ದೇ ಆದರೆ ಸರ್ವಜನಗಳಿಗೆ ಸಂತೋಷವನ್ನು ಕೊಡುವಂತೆ ಸುವಾಸನೆಯನ್ನು ಕೊಡುವದು ವಿವಾಹಪ್ರತ್ಯ ಮೊದಲಾದ ಶುಭ ಪ್ರಯೋಜನಗಳಿಗೆ ಇದನ್ನು ಅವಶ್ಯ ಉಪಯೋಗಿಸಬೇಕು. ಇದನ್ನು ಶ್ರೀಗಂಧದಲ್ಲಿ ತೇರಿಸಿದರೆ ಇತರ ಅತ್ತರು ಪನ್ನೀರು, ಕುಂಕುಮದ ಹೂವು, ವಗೈರೆ ಯಾವ ಸುವಾ ಸನದ್ರವ್ಯಗಳು ತೇರಿಸಬೇಕಾದವಶ್ಯವಿಲ್ಲ. ಕ್ರಯ ಸೀಸೆ 1ಕ್ಕೆ 8 ಆಣೆಗಳು 10ರಿಂದ 6 ಸೀಸೆವರೆಗೆ ವಿ ಪಿ ಚಾರ್ಜು 5 ಆಣೆ ಪ್ರತ್ಯೇಕವು.

ಅರಗಜಾ:—ಇದು ಮತ್ತೊಂದು ವಿಧವಾದ ಪರಿಮಳದ್ರವ್ಯವು. ಇದನ್ನು ಪ್ರತ್ಯೇಕವಾಗಲಿ ಶ್ರೀಗಂಧದಲ್ಲಿ ಆಗಲಿ ತೇರಿಸಬಹುದು. ಪ್ರತ್ಯೇಕವಾಗಿ ಶರೀರಕ್ಕೆ ಹಚ್ಚಿಕೊಳ್ಳಬಹುದು ಮುಖಕ್ಕೆ ತಿಲಕವನ್ನು ಇಟ್ಟುಕೊಳ್ಳಬಹುದು; ದಿವ್ಯವಾದ ಉಡುಪುಗಳಿಗೆ, ವಸ್ತ್ರಗಳಿಗೆ, ಕೈಗುಡ್ಡೆಗಳಿಗೆ ಹಚ್ಚಬಹುದು ಇದರ ಸುವಾಸನೆಯನ್ನು ಹೇಳಲು ಸಾಧ್ಯವಿಲ್ಲ ಇದನ್ನು ದೇಹಕ್ಕೆ ಹಚ್ಚಿಕೊಂಡನಂತರ ಮೂರು ದಿವಸದ ವರಿಗೂ ಪ್ರತಿನಿತ್ಯ ಅಭ್ಯಂಗಸ್ನಾನಮಾಡಿದರೂ ಪರಿಮಳ ಬಿಡದೇ ಇರುತ್ತದೆ. ಕ್ರಯ ಡಬ್ಬಿ 1ಕ್ಕೆ 8 ಆಣೆಗಳು 12. ಡಬ್ಬಿಗಳವರಿಗು ವಿ. ಪಿ. ಚಾರ್ಜು 5 ಆಣೆ ಪ್ರತ್ಯೇಕ.

ಈ ಪ್ರಾಂತ್ಯದಲ್ಲಿ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲ, ನಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವ ಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಳುನಲ್ಲಾಗಲೀ ಸ್ಪುಟವಾಗಿ ತಿಳಿಯು ವಂತೆ ಬರಿಯಬೇಕು

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ,
ಆಯುರ್ವೇದ ಔಷಧಾಲಯ,
ಶ್ರೀ ವೆಂಕಟೇಶ್ವರ ಪೆರುಮಾಳ್ ದೇವಸ್ಥಾನ,
ಸನ್ನಧಿ, ತಂಜಾವೂರು

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ

ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಎಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ

ಹೈಮಾದಿ ಘಾನಕ.

ಹೈಮಾದಿ ಘಾನಕವನ್ನು ಪ್ರತಿನಿತ್ಯವೂ ಹೇಳಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮ ಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ. 1. ಚಿಕ್ಕ ಸೈಜು ಅಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ.

ಗಂಬು ಈ ಘೃತವು ಗ್ಲಿಸರೀನ್ ಎಂಬ ಪದಾರ್ಥವನ್ನೂ ಹೊಂದಿ ನಾಜೂಕು ಕಡತಗಳನ್ನೂ ಬಳಿ ವ್ರಣ ಮತ್ತು ನಾರುವ ಹುಣ್ಣುಗಳನ್ನೂ ಹೋಗಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿಗೆ ಅಣೆ 12 ಚಿಕ್ಕ ಸೈಜು ಅಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಎ ವಿ ಎಸ್ ಎ ಎಮ್ ಬಿ
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್
ಆಯುರ್ವೇದಾಶ್ರಮ,
ಎ. ಆಚಾರ್ಯನ ಬೀದಿ,
ಜಾರ್ಜ್ ಟೌನ್ ಮದರಾಸ್

ತಂತಿ ವಿಳಾಸ —"ಪಂಡಿಟ್" ಮದರಾಸ್.

ಡಾಕ್ಟರ್ ನವರತ್ನರ

ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ ಒಳಗೆ ಅಗ್ಗ ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1 ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY

ತಂತಿ ವಿಳಾಸು—ಡಿ. ಸೋಲನ್ ಮಾರ್ಕ್,
ಮಲ್ಪೆ ಅಡ್ಡಂಗ, ತಂಬಿಕಳ್ಳಿ, ಮಂಗಳೂರು.



B. Narasimha Prabhu,
Bantval, (SOUTH CANARA).
AGENT FOR
Malabar and South Canara.

ಬಿಜಾಬೆ ಮುಷ್ತಾಖಂಬ

ಕೂದಲು ರಂಗು.

ನಮ್ಮ ಈ ಕೂದಲು ರಂಗನ್ನು ಪರೆಕ ಬೇರೆ ಕೂದಲಿಗೆ ಲೇಪಿಸುವದರಿಂದ ಬೇರೆ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವವು. ಈ ಕೂದಲು ರಂಗಿನಲ್ಲಿ ಎಷ್ಟ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ಮಾಸನೆಯು ಇದಕ್ಕಿಲ್ಲ ಬ್ರಷ್ಷಿನಿಂದ ಒತ್ತಿದಂತೆ ಕಪ್ಪಾಗುವುದು ದೀರ್ಘಕಾಲ ಬಣ್ಣ ಅಳಿಯುವದು ಅನಂತರ ಕೂದಲು ಕೆಂಪು ಯಾ ತವುಡು ಬಣ್ಣಕ್ಕೆ ತಿರುಗಿದರು ಒಂದು ಸಲ ಪರೀಕ್ಷಿಸಿ ನೋಡಿರಿ

ಪೆಟ್ಟಿಗೆ ಒಂದರ ಕ್ರಯ ರೂ 1—0—0 ಒಂದು ಡಜನ್ ಪೆಟ್ಟಿಗೆಗಳಿಗೆ ರೂ 9—0—0 ವಿ ಪಿ. ಚಾರ್ಜು ಬೇರೆ ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ಬರೆಯಿಸಬೇಕು.

Address —

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಪಿರಿನೆ (ಒಲೆಯ) ಉಪಯೋಗಗಳು.



ಪ್ರೈಮಸ್ ಸ್ಟವ್ ಎಂಬ ಒಲೆಯು ೧೦೦೦ ಮೋಂಬತ್ತಿಗಳನ್ನು ಹಚ್ಚಿದರೆ ಎಷ್ಟು ಬೆಳಕು ಎತ್ತ ಕಾಪುವಂಟಾಗುತ್ತದೆಯೋ ಅಷ್ಟು ಬೆಳಕನ್ನು ಮತ್ತು ಕಾವನ್ನೂ ಕೊಡುವದು. ಇದರಿಂದ ಅಡಿಗೆಯನ್ನು ಮಾಡಬಹುದು ಮತ್ತು ನೀರನ್ನೂ ಕಾಯಿಸಬಹುದ ಇದನ್ನು ಕುಲಭವಾಗಿ ಶುದ್ಧಮಾಡಬಹುದು. ಮತ್ತು ನಾನೆ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು

೧೦೦೯ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ 7 8 0
ಬರೀ ಒಲೆಗೆ ಮಾತ್ರ ಕ್ರಯ ರೂ 5 12 0
ಹಸೇ ಮತ್ತ ೧೦೦೯ ನಂಬರ್ ಒಲೆಗಳ ಬರ್ನರ್ ಕ್ರಯ ೧ಕ್ಕೆ 2 4 0

ಟಪ್ಪಾಲು ಹಾಸಲು ಪ್ರತ್ಯೇಕ

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಅಲಾಯಿದ ವಿಕ್ರಯಿಸಲ್ಪಡುತ್ತವೆ ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಕಾವ್ ಡಿಪೊ,
ಒಳ್ಳೆ ಗಿರಗಾಂ ಬೊಂಬಾಯಿ.

ಪಂಡಿತ್ ಟಿ ಬಾಬುರಾಯರ

ಬೆಂಗಳೂರಿಂದ ವ ದ್ರಾಸಿಗಿರುವಷ್ಟೇ ಅಂತರವು ಅಥವಾ ಅದಕ್ಕೂ ಸ್ವಲ್ಪ ಕಡಿಮೆಯಾಗಿದೆ ಬೆಂಗಳೂರಿಗೂ, ಮಂಗಳೂರಿಗೂ ಇರುವ ಹಿಂಗಾಮುದರಿಂದ ಮೈಸೂರ ಸೀಮೆಯ ಕೇವಲ ಪೂರ್ವ ದಿಕ್ಕಿನ ಎಷ್ಟು ಸ್ವಲ್ಪ ಭಾಗವನ್ನು, ಎಂದರೆ ಬೆಂಗಳೂರಿನ ಪೂರ್ವದಲ್ಲಿರುವ ಭಾಗವನ್ನು ಮಾತ್ರ ಬಿಟ್ಟರೆ ಮೈಸೂರು ಸೀಮೆಗೆ ಪಶ್ಚಿಮ ಸಮುದ್ರ ತೀರವೇ ನ್ಯಾಯವಾದ ಸನ್ನ ಮಾರ್ಗವೆಂದೂ, ಆ ಮಾರ್ಗವಾಗಿಯೇ ಮೈಸೂರಿನ ಉತ್ಪನ್ನಗಳಲ್ಲಾ ಪರದೇಶಗಳಿಗೆ ಹೋಗತಕ್ಕದ್ದೆಂದೂ ಸ್ಪಷ್ಟವಾಗತ್ತದೆ. ಈ ಪ್ರಾಕೃತಿಕ ಕಾರಣಗಳಿಂದಲೇ ಬಹು ವ್ರಾಚೀನ ಕಾಲದಿಂದಲೂ ರೈಲು ಇಲ್ಲದಿದ್ದಾಗ ಕೂಡ ಎಂದಿಯ ಮಾರ್ಗವಾಗಿಯೂ ಅದಕ್ಕೂ ಹಿಂದೆ ಹೇಗಾಟದ ಎತ್ತುಗಳ ಮೂಲಕವೂ ಮೈಸೂರಿನ ಸರಕುಗಳು ಕನ್ನಡ ಜಿಲ್ಲೆಯ ತೀರಕ್ಕೆ ಬರುತಿರವವು ಆದರೆ ಈ ಸಂದರ್ಭಾವಾವುದಾರದೊಂದ ಪರ ಜಿಲ್ಲೆಯ ತೀರಕ್ಕೆ ರೈಲು ಹಾಕಿದ್ದಾದರೆ ಆ ಸೌಕರ್ಯದ ದೆಶೆಯಿಂದ ಇದುವರೆಗೆ ನಡೆದು ಬಂದ ವ್ಯಾಪಾರವೆಲ್ಲ ಆ ಪರ ಜಿಲ್ಲೆಗೆ ತಿರಿಗಿ ಕನ್ನಡ ಜಿಲ್ಲೆಯ ಸೌದಾಗ್ಯವು ಮಂಕಾಗುವ ಬಯವಿರುವುದು ಆದ ದರಿಂದಲೇ ಕನ್ನಡ ಜಿಲ್ಲೆಯವರು ಈ ವಿಷಯದಲ್ಲಿ ಉದಾಸೀನರಾಗದೆ ಜಾಗರ ಕತೆಗೆ ವಿಶೇಷವಾಗಿ ಗಮನಕೊಡತಕ್ಕುದು ಅವಶ್ಯವೆಂದು ನಾವು ಭಾವಿಸುವೆವು

ಮೈಸೂರ ಸೀಮೆಗೆ ಸೇರಿಸಿ ಎಷ್ಟು ಜಿಲ್ಲೆಗಳೊಳಗೆ ಶಿವಮೊಗ್ಗಾ, ಕಡೂರು ಮತ್ತು ಹಾಸನ ಜಿಲ್ಲೆಗಳೂ ಮೈಸೂರು ಜಿಲ್ಲೆಯ ದಕ್ಷಿಣ ಮತ್ತು ಪಶ್ಚಿಮದ ತಾಲೂಕುಗಳೂ ಸಂಪ್ರಹವಾಗಿ ಹೇಳುವುದಾದರೆ ಆ ರಾಜ್ಯದ ಪಶ್ಚಿಮಾರ್ಧವು ಮಲೆನಾಡು ಎಂದೂ ಉಳಿದ ಭಾಗವು ಬಯಲು ಸೀಮೆಯೆಂದೂ ಕರೆಯಲ್ಪಡುತ್ತವೆ. ಈ ಮಲೆನಾಡು ಭಾಗವು ಪಶ್ಚಿಮ ಗಟ್ಟುಗಳಿಗೆ ತಗಲಿಕೊಂಡಿರುವುದರಿಂದ ದಟ್ಟವಾದ ಅರಣ್ಯಗಳಿಂದ ಕೂಡಿದುದಾಗಿಯೂ ತಂಪು ವಳಯ ಪ್ರದೇಶವಾಗಿಯೂ, ಅಥವಾ ಏವ ಸರ್ವದಾ ಶೀತಜ್ವರಾದಿಗಳಿಗೆ ತವರು ವ ಸೆಯಾಗಿಯೂ ಇರುವುದು ಈ ಪ್ರಾಂತ್ಯದಲ್ಲಿ ಏಲಕ್ಕಿ ವೆಣಸು, ಅಡಕೆಯ, ಬೆಳೆ ವಿಶೇಷ ಕಡೂರ ಹಾಸನ ಜಿಲ್ಲೆಗಳಲ್ಲಿ ಕಾಫಿಯ ತೋಟಗಳು ಕಿಕ್ಕಿರಿದು ತಲೆಯೆತ್ತಿವೆ ಆದರೆ ವಲನಾಡಿನಲ್ಲಿ ಸರ್ವತ್ರವೂ ಜನಸಂಖ್ಯೆ ಕಡಿವೆ, ಇನ್ನು ದಿನಕ್ಕನುವಾಗಿ ಕಡಿಮೆಯಾಗುತ್ತಲೇ ಇರುವದಾಗಿ ತಿಳಿದು ಬಂದಿದೆ. ಹೀಗಾಗಿ ಕೂಲಿಯ ಆಳುಗಳನ್ನು ಹೆಚ್ಚಾಗಿ ಕನ್ನಡೀಯದಿಂದಲೂ ಕೊಂಚಮಟ್ಟಿಗೆ ಮಲಯಾಳದಿಂದಲೂ ಕರೆಯಿಸಿಕೊಂಡು ಬೇಸಾಯವಾಗಬೇಕಾಗಿರುವುದು, ಮತ್ತು ಈ ಉತ್ಪನ್ನಗಳೆಲ್ಲ ಪರದೇಶಗಳಿಗೆ ಹೋಗುವುದಕ್ಕಾಗಿಯೇ ಪಶ್ಚಿಮ ತೀರದಲ್ಲಿ ಒಂದು ರೇವು ಕೂಡಾ ಬೇಕಾಗಿರುವುದು

ಪಶ್ಚಿಮ ತೀರದಲ್ಲಿ ಮೈಸೂರಿಗೆ ತಗಲಿಕೊಂಡಿರುವ ಬೇರೆ ಬೇರೆ ಜಿಲ್ಲೆಗಳಿಗೂ ಮೈಸೂರಿನ ಮಲೆನಾಡು ಜಿಲ್ಲೆಗಳಿಗೂ ಇರುವ ಸಂಬಂಧದ ತಾರತಮ್ಯವನ್ನು ನೋಡ ಹೋದೆವಾದರೆ, ಉತ್ತರದಲ್ಲಿ ಶಿವಮೊಗ್ಗಾ ಜಿಲ್ಲೆಯ ಪಶ್ಚಿಮ ಗಡಿಯ ಒಂದು ಭಾಗವು ಮಾತ್ರ ಉತ್ತರಕನ್ನಡ ಜಿಲ್ಲೆಗೆ ತಗಲಿಕೊಂಡಿರುವಂತೆಯೂ, ದಕ್ಷಿಣದಲ್ಲಿಯೂ, ಮೈಸೂರು ಜಿಲ್ಲೆಯ ಅತ್ಯಲ್ಪ ಭಾಗವು ಮಾತ್ರ ಮಲೆಯಾಳಕ್ಕೆ ನೇರಾಗಿ ತಗಲಿಕೊಂಡಿರುವುದೆಂದೂ, ಅಪ್ರತ್ಯಕ್ಷವಾಗಿ ಎಂದರೆ ಕೊಡಗು, ನೀಲಗಿರಿಗಳನ್ನು ದಾಟಿ ಕೂಡ ಮೈಸೂರು ಸೀಮೆಗೂ, ವ ಲೆಯಾಳಕ್ಕೂ ಇರುವ ಸಂಪರ್ಕವು ಅಧಿಕ ವಲ್ಲವೆಂದೂ ಸ್ಪಷ್ಟವಾಗಿ ಕಂಡುಬರುತ್ತದೆ ಪಕ್ಷಾಂತರದಲ್ಲಿ ದಕ್ಷಿಣಕನ್ನಡ ಜಿಲ್ಲೆಯಾದರೆ, ಶಿವಮೊಗ್ಗಾ ಜಿಲ್ಲೆಯ ಪಶ್ಚಿಮ ಮೇರೆಯ ಅರ್ಧಕ್ಕೂ, ಕಡೂರು ಜಿಲ್ಲೆಯ ಪಶ್ಚಿಮದ ಅರ್ಧಾಂತ ಮೇರೆಗೂ ಹಾಸನ ಜಿಲ್ಲೆಯ ಒಂದು ಭಾಗಕ್ಕೂ ನೇರಾಗಿ ತಗಲಿಕೊಂಡಿರುವುದು ಮಾತ್ರವೇ ಅಲ್ಲದೆ, ಕೊಡಗನ್ನು ದಾಟಿ ಮೈಸೂರು ಜಿಲ್ಲೆಯ ಒಂದು ಭಾಗದೊಂದಿಗೂ ಸಂಸರ್ಗವುಳ್ಳದ್ದಾಗಿದೆ, ಮತ್ತು ಹೀಗೆ ಮಲೆನಾಡಿನ ನಾಲ್ಕು ಜಿಲ್ಲೆಗಳಿಗೂ ತಗಲಿಕೊಂಡಿರುವುದರಿಂದ ಈ ಯಾವತ್ತು ಜಿಲ್ಲೆಗಳ ಉತ್ಪನ್ನಗಳನ್ನು ಸಮುದ್ರ ಮಾರ್ಗವಾಗಿ ಸಾಗಿಸುವುದಕ್ಕೆ ಬಲು ತಕ್ಕುದಾದ ಮಧ್ಯ ಸ್ಥಳವಾಗಿದೆ. ಹೀಗಾದ ಬಳಿಕ ದಕ್ಷಿಣಕನ್ನಡದ ತೀರಕ್ಕೆ ಕೇವಲ ಮಳ್ಳ ಬಂದರವಾಗಿರುವ ಮಂಗಳೂರೇ, ಅಥವಾ ಅದಕ್ಕೆ ಬಹು ಸಮೀಪವಾಗಿರುವ ಬೇರೆ ಯಾವುದೊಂದು ಪಟ್ಟಣವೇ ಮೈಸೂರು ಸೀಮೆಗೆ ಬಹು ಸಮರ್ಪಕವಾದ ರೇವಾಗಿರುವದೆಂದು ನಾವು ಪ್ರತ್ಯೇಕವಾಗಿ ಹೇಳಬೇಕಾದುದಿಲ್ಲ

ಇನ್ನು ಮೈಸೂರು ಸರಕಾರದವರ ಆಲೋಚನೆಯಲ್ಲಿರುವ ಬೇರೆ ಬೇರೆ ಬಂದರುಗಳ ಗುಣದೋಷಗಳನ್ನು ಕುರಿತು ಮುಂದಿನ ಸಂಚಿಕೆಯಲ್ಲಿ ವಿವೇಚಿಸುವೆವು

ಹಿಂದೂಸ್ಥಾನದ ರಾಜಕೀಯ ಧ್ಯೇಯವು

ಲೇಖಕರು

ರಾಷ್ಟ್ರೀಯತ್ವದ ಭಾವನೆಗೆ ಪ್ರತಿಬಂಧಕವಾದ ಕಾರಣಗಳು ಯಾವವು, ಅವುಗಳನ್ನು ತೊಲಗುವುದರಿಂದ ಈ ಭಾವನೆಯು ನಿಸ್ಸಂದೇಹವಾಗಿ ಹೇಗೆ ಮೂಡುವುದು ಎಂದೀ ವಿಷಯದಲ್ಲಿ ಕೆಲವರು ಪಡುವ ಅಭಿಪ್ರಾಯವನ್ನು ಕಳೆದ ಸಾರಿ ವಿಸ್ತಾರವಾಗಿ ತೋರಿಸಿಯಾದೆ ತೋರಿಸಿದ ಈ ಅಭಿಪ್ರಾಯದಲ್ಲಿ ಅನೇಕ ಸಂಗತಿಗಳು ವಿಚಾರಣೀಯವಾಗಿರುತ್ತವೆ ಮಾತ್ರವಲ್ಲ ಅವುಗಳಲ್ಲಿ ಕೆಲವು ಮಟ್ಟಿಗೆ ಸತ್ಯಾಂಶವೂ ಕೂಡ ಇರುವುದು ಜಾತಿಭೇದ ಮತದ್ವೇಷ ಮುಂತಾದ ಸಂಗತಿಗಳು ರಾಷ್ಟ್ರದ ವಿಕ್ಯವರ್ಧನೆಗೆ ಒಂದು ದೊಡ್ಡ ತೊಡಕೆಂಬುವದರಲ್ಲಿ ಸಂದೇಹವಿಲ್ಲ ಈ ಸಂಗತಿಗಳನ್ನು ಆದಷ್ಟು ತಗ್ಗಿಸಿ, ಜಾತಿಮತಗಳನ್ನು ಸ್ವರೂಪತಃ ಇಟ್ಟು ಅವುಗಳಿಂದ ಜಾತಕ ಮನೋವೃತ್ತಿಗಳು ಉಂಟಾಗದ ಹಾಗೆಮಾಡಿದರೆ ಧ್ಯೇಯದ ಏಕತ್ವವನ್ನು ಇರು ಬಲಪಡಿಸುವದೆಂಬುದರಲ್ಲಿ ಸಂದೇಹವಿಲ್ಲ ಆದರೆ ಜಾತಿಗಳನ್ನೂ ಮತಗಳನ್ನೂ ನಿರ್ಮೂಲಪಡಿಸುವದೇ ಹಿಂದೂದೇಶದ ಅಂತಿಮ ಧ್ಯೇಯವೆಂದು ನೆನೆಸುವದಾಗಲಿ ಅಥವಾ ಇವುಗಳನ್ನು ಬೇರುಬೇರೊಂದಿಗೆ ಕಿತ್ತುಹೊರತು ಹಿಂದೂಸ್ಥಾನದಲ್ಲಿ ಏಕ ರಾಷ್ಟ್ರೀಯತ್ವವು ಸಾಧ್ಯವಾಗಲಾರದೆಂದು ತಿಳಿಯುವದಾಗಲಿ ತಪ್ಪೆಂದು ನಾವು ಖಂಡಿತವಾಗಿ ಹೇಳುತ್ತೇವೆ ಏಕರಾಷ್ಟ್ರೀಯತೆಯ ಭಾವನೆಗೆ ಇವು ಸ್ವಲ್ಪ ಅಡ್ಡಿ ಮಾಡಬಹುದಾಗಿರುವುಗಳಾದರೂ ಇಂತಹ ತೊಂದರೆಗಳು ಇರುವಾಗಲೇ ಆ ಭಾವನೆಯೂ, ಒಂದೇ ಧ್ಯೇಯವೂ ಏನೂ ತೊಡಕಿಲ್ಲದೆ ಆಗುತ್ತವೆ ಇನ್ನೊಂದು ದೃಷ್ಟಿಯಿಂದ ನೋಡಿದರೂ ಈ ಮತದಲ್ಲಿ ಸಾರವಿಲ್ಲವೆಂದು ಕಂಡುಬರುತ್ತದೆ ಏನೆಂದರೆ, ಯುರೋಪಖಂಡದಲ್ಲಿ ಜಾತಿಭೇದವಿಶಾಜವು ಇಷ್ಟರವರೆಗೆ ಪ್ರವೇಶಿಸಲಿಲ್ಲ ಎಂದರೆ ಸಾಮಾನ್ಯವಾಗಿ ಊಟ ಉಪಚಾರಗಳಲ್ಲಿ ಶರೀರ ಸಂಬಂಧದಲ್ಲಿ ಹೆಚ್ಚಿನ ನಿರ್ಬಂಧವಿಟ್ಟುಕೊಳ್ಳದೆ ಯುರೋಪೀಯರು ಸಮವಾಗಿ ನಡೆಕೊಳ್ಳುತ್ತಾರೆ ಹಾಗಾದೇ ಪರದೇಶಗಳಲ್ಲಿ ಅನೇಕ ಪಂಥಗಳು ಹಿಂದೂಸ್ಥಾನದಲ್ಲಿ ಇದ್ದ ಹಾಗೆ ಅಲ್ಲಿ ಇಲ್ಲ ಇಡೀ ಯುರೋಪಖಂಡದಲ್ಲಿ ಸಣ್ಣದಾದ ಬಂದೆರಡು ದೇಶಗಳನ್ನು ಬಿಟ್ಟರೆ ಒಂದೇ ಧರ್ಮವು ಸರ್ವತ್ರ ಪ್ರಚಾರದಲ್ಲಿ ಬಂದಿರುವದು ಈ ಅನುಕೂಲತೆಗಳಲ್ಲಿ ಇರುವಾಗ ಲಲ್ಲಿ ಎಲ್ಲರ ಧ್ಯೇಯವೂ, ರಾಷ್ಟ್ರವೂ ಒಂದೇಯಾಗಿರುವುದೋ? ಯುರೋಪಿನ ಜಾತಿಯು ಒಂದೇ (ಜಾತಿ ಎಂದರೆ ಕುಲವೆಂಬ ಅರ್ಥವನ್ನು ವಾಚಕರು ತಿಳಿಯಬಾರದು) ಧರ್ಮವು ಒಂದೇ! ಆದರೆ ಆಯಾ ರಾಷ್ಟ್ರಗಳು ಮಾತ್ರ ಬೇರೆ! ಇದರ ವೇಳೆಂಗ ಜಾತಿ, ಮತ, ಧರ್ಮ ವ್ಯತ್ಯಾಸಗಳಿಗೂ ಮತ್ತು ಏಕರಾಷ್ಟ್ರಿಯ ತ್ವಕ್ಕೂ ಪರಸ್ಪರ ಕಾರ್ಯಕಾರಣ ಭಾವನ್ನು ಕಲ್ಪಿಸುವುದು ತರ್ಕಶಾಸ್ತ್ರ ದೃಷ್ಟಿಯಿಂದ ತಪ್ಪೆಂದು ಯಾರಿಗೂ ತಿಳಿಯದೆ ಇರದು ಎಲ್ಲರ ಧ್ಯೇಯವು ಏಕರೂಪವಾಗಿ ಬೆಂಕಾಗಲಿ ಇವು ಮುಖ್ಯಕಾರಣಗಳಲ್ಲ ಸಮುದ್ರಗಳೂ ನದಿಗಳೂ, ಪರ್ವತಗಳೂ ದೇಶವನ್ನೂ ರಾಷ್ಟ್ರವನ್ನೂ ವಿಂಗಡಿಸುವ ಸಾಧನಗಳು ಈ ಉದ್ದೇಶನಿರ್ವಿಕ ಸಾಧನಗಳು ಒಂದು ದೇಶದ ಸುತ್ತಲು ಇದ್ದು ಅನ್ಯದೇಶದಿಂದ ಅದನ್ನು ಪ್ರತ್ಯೇಕವಾಗಿ ವಿಂಗಡಿಸುವಾಗ ಆನರೊಳಗಣ ಜನರು ಅನೇಕ ಧರ್ಮ ಜಾತಿ ಮತ ಭಾಷಾದಿಗಳಿಂದ ನಾನಾ ಪ್ರಕಾರ ದವರಾದರೂ ಆ ರಾಷ್ಟ್ರವು ಒಂದೇ, ಅದರ ದೀವನಿಯು ಒಂದೇ, ಜಾತಿ ಮತಾದಿಗಳು ಬೇರೆ ಬೇರೆಯಾದರೂ ಅವುಗಳ ಹಿತ ಸಂಬಂಧವು ಒಂದೇ ಎಂದೆನ್ನಿಸಿರುವುದು ಮತ್ತು ಈ ಸಂಬಂಧವೇ ಏಕರಾಷ್ಟ್ರೀಯತ್ವಕ್ಕೆ ಮುಖ್ಯ ಕಾರಣವಾಗಿರಬೇಕೆಂದು ತಿಳಿಯಬೇಕು ಈ ದೃಷ್ಟಿಯಿಂದ ನೋಡಿದರೆ ಈ ನವ್ಯ ಹಿಂದೂಸ್ಥಾನದಲ್ಲಿ ಅನೇಕ ಜಾತಿ ಮತಗಳ ಜನರಿದ್ದರೂ ಅವರ ಹಿತ ಸಂಬಂಧವು, ಬ್ರಿಟಿಷರಾಜ್ಯದ ಏಕಬೆಕ್ಕಾಧಿಪತ್ಯದಲ್ಲಿ ಶೇರಿರುವುದರಿಂದ, ಒಂದೇಯಾಗಿರುವುದು ಆಶ್ಚರ್ಯವಲ್ಲವು ಬ್ರಿಟಿಷರಾಜ್ಯದ ಬಂಧವು ಎಲ್ಲರಿಗೆ—ಅವರು ಬ್ರಾಹ್ಮಣರಿರಲಿ, ಹೊಲೆಯರಿರಲಿ, ಹಿಂದುಗಳಿರಲಿ, ಮುಸಲಮಾನರಿರಲಿ, ಸುಧಾರಕರಿರಲಿ, ಅಸುಧಾರಕರಿರಲಿ, ತಮಿಳರಿರಲಿ, ಕನ್ನಡಿಗರಿರಲಿ ಇವರೆಲ್ಲರಿಗೆ—ಒಂದೇ ಸಮವಾಗಿ ನಡಿಸುವುದರ ಇದೇ ಏಕರಾಷ್ಟ್ರೀಯತೆಯ ಮೂಲಕಾರಣವು. ಹಿಂದೂದೇಶದ ಪೂರಾ ಉತ್ತರದಲ್ಲಿರುವ, ಮೊಳ, ಎರಡು ಮೊಳ ಗಡ್ಡ ಮೀಸೆಗಳನ್ನು ಬೆಳಸಿಕೊಳ್ಳುವ ಮತ್ತು ೫೦-೬೦ ಮೊಳ ಉದ್ದ ಮುಂಡಾಸನ್ನು ಮೈತುಂಬಾ ಬಟ್ಟೆಯನ್ನು ಧರಿಸುವ ಪಂಜಾಬಿಯಾ ಕಾಶ್ಮೀರಿಯಾದರೇನು ಅಥವಾ ಪೂರಾ ಗಡ್ಡ ಮೀಸೆಗಳನ್ನು ಬೋಳಿಸುವ ಮತ್ತು ಮುಂಡಾಸು ವಸ್ತ್ರಗಳನ್ನು ತ್ಯಜಿಸಿ ಬೋಳುತಲೆಯಿಂದ ಮೈದಟ್ಟಿ ತಿರುಗಾಡುವ ದಕ್ಷಿಣದಲ್ಲಿರುವ ಮಲಿಯಾಳಿಯಾ ಕನ್ನಡಿಗನಾದರೇನು, ಒಂದೇ ಇಂಗ್ಲಿಷ ಸಾಮ್ರಾಜ್ಯದಲ್ಲಿ ಶೇರಿರುವುದರಿಂದ, ಅವರ ಆಚಾರ, ವೇಷ, ಭಾಷಾ, ಲಿಪಿಗಳಲ್ಲಿ ದಕ್ಷಿಣೋತ್ತರ ಧ್ರುವದಷ್ಟು ವ್ಯತ್ಯಾಸವಿದ್ದರೂ ರಾಜಕೀಯ ಹಿತ ಸಂಬಂಧವು ಒಂದೇಯಾಗಿರುವುದು ಇದನ್ನಾಲೋಚಿಸದೆ, ಪರಕೀಯರು ಹೇಳುತ್ತಾರೆಂಬುವುದರಿಂದ ಜಾತಿಭೇದ ಮುಂತಾದ್ದನ್ನು ನಿರ್ಮೂಲಪಡಿಸಬೇಕೆಂದು ಆ ಸಮಾಜ, ಈ ಸಮಾಜ, ಆ ಸಂಸ್ಥೆ, ಈ ಸಂಸ್ಥೆ ಮೊದಲಾದ್ದನ್ನು ಹೊಂಡಿಸಿ ನವ್ಯ ನವ್ಯಲಿಯೇ ಇನ್ನಷ್ಟು ಹೊಸ ಹೊಸ ಗೋತಿಗಳನ್ನು ಹಾಕಿಕೊಳ್ಳುವುದು ಎಷ್ಟು ಮಾತ್ರವೂ ಲೇಸಲ್ಲ. ಅಷ್ಟು. ಈ ಪ್ರಿಟಿಷರಾಜ್ಯದ ಮೂಲಕ, ಸೇತುವಿನಿಂದ ಹಿಮಾಲಯದ ವರೆಗೆ ಎಲ್ಲರ ಭಾವನೆಯು ಏಕರೂಪವಾಗಿ ೨೦ ೫೦ ವರ್ಷಗಳ ಹಿಂದೆಯೇ ರಾಷ್ಟ್ರೀಯ ಸಭೆಯೆಂಬ ಸಂಸ್ಥೆಯು ಅಸ್ತಿತ್ವಕ್ಕೆ ಬಂದಿದೆ ಇದು ಸಾಮಾನ್ಯವಾಗಿ ಯಾರಿಗೂ ಅಜ್ಞಾತ ವಿಷಯವಲ್ಲ. ಇದರಲ್ಲಿ ಸಂಸ್ಮರಣೀಯವಾದ ಕೆಲವು ಚಳವಳಿಗಳು ಎಷ್ಟೋ ಸಮಯದಿಂದ ನಡಿಯುತ್ತಿದ್ದುವೆ ಅವು ಬೆಳೆದರದಾಗಿವೆ ಆದುದರಿಂದ ಈ ರಾಷ್ಟ್ರೀಯ ಸಭೆಯ ಇತಿಹಾಸವೇನು, ಅದರ ಧ್ಯೇಯವು ಯಾವುದು, ಆ ಧ್ಯೇಯವು ಹಿತ ಪರಿಣಾಮಿಯೋ ಹೇಗೆ ಮುಂತಾದ ಹಲವು ಸಂಗತಿಗಳನ್ನೂ ನಾವು ನಮ್ಮ ನಾಚಕರಿಗಾಗಿ ವಿವರಿಸಲಿದ್ದೇವೆ

ಮದ್ರಾಸು ಆಧಿಪತ್ಯದಲ್ಲಿ ವಾಙ್ಮಯಾಭಿವೃದ್ಧಿ

ಕಳೆದ ೧೯೧೩ನೇ ಇಸವಿ ಜೂನು ೩೦ಕ್ಕೆ ಮುಗಿಯುವ ದ್ವಿತೀಯ ಪಾದ (Quarter) ದಲ್ಲಿ ಮದ್ರಾಸು ಆಧಿಪತ್ಯದೊಳಗೆ ಒಟ್ಟು ೪೯೭ ಪುಸ್ತಕಗಳು ಅಚ್ಚಾಗಿರುವು, ಅವುಗಳೊಳಗೆ ೭೭ ಇಂಗ್ಲಿಷ್ ೧೯೯ ತಮಿಳು, ೧೫೬ ತೆಲುಗು, ೮ ಮಲೆಯಾಳ, ೧೩೫ ಕನ್ನಡ, ೬ ಉರಿಯ ೧೭ ಸಂಸ್ಕೃತ ಮತ್ತು ೪೪ ಇತರ ಭಾಷೆಗಳಲ್ಲಿ ಬರೆಯಲ್ಪಟ್ಟವುಗಳೆಂದೂ ತಿಳಿಯಬರುತ್ತಿದೆ

ಇಂಗ್ಲಿಷ್ ಪುಸ್ತಕಗಳೊಳಗೆ ಸಂಯುಕ್ತ ಒಡ್ಡ (United Orissa) ಎಂಬ ಚಿಕ್ಕ ಒಂದು ಪುಸ್ತಕವು ಈಗ ಹಲವು ಭಾಗಗಳಾಗಿರುವ ಆ ದೇಶವನ್ನು ಒಂದಾಗಿ ಮಾಡುವ ಚಳವಳಿಯನ್ನು ಲಪಡಿಸುವುದಕ್ಕಾಗಿ ಬರೆಯಲ್ಪಟ್ಟಿದೆ. ಮಿ॥ ಸ್ವಾಮಿ ಕಣ್ಣು ಪಿಳ್ಳೆಯವರು ಬರೆದ An Indian Ephemeris ಎಂಬ ಇನ್ನೂರು ವರ್ಷಗಳ ಪಂಚಾಂಗವು ಜ್ಯೋತಿಶಾಸ್ತ್ರಿಗಳಿಗೆ ಉಪಯೋಗಕರವಾಗದಿರದು.

ಕಲಾ ವಿಷಯವಾಗಿ ತಮಿಳಿನಲ್ಲಿ ಮಾತ್ರ ೩ (೨ ಪೂ ಮು.) ಪುಸ್ತಕಗಳು ಅಚ್ಚಾಗಿರುವುವುಗಳೊಳಗೆ 'ದಾಕ್ಷಿಣಾತ್ಯ ಗಾನ'ವೆಂಬ ಶ್ರೀತ್ಯಾಗರಾಜ ಕವಿಯ ಹಾಡುಗಳ ಸಂಗ್ರಹವು ಮುಖ್ಯವಾಗಿದೆ

ಜೀವನ ಚರಿತ್ರೆಗಳು ತಮಿಳಿನಲ್ಲಿ ೩ ಮತ್ತು ತೆಲುಗಿನಲ್ಲಿ ೪ (೨ ಪೂ ಮು.) ಬರೆಯಲ್ಪಟ್ಟಿವೆ ಇವುಗಳೊಳಗೆ ಮಿ॥ ರಾಘವಯ್ಯಂಗಾರ್ಯರ "ಚೇರನ್ ಸೆಂಗಟ್ಟುವನ್" ಎಂಬ ತಮಿಳು ವ ಹಾರಾಜನ ಚರಿತ್ರೆಯು ಅನೇಕವಾದ ನೂತನ ಪರಿಶೋಧನೆಗಳಿಂದ ಕೂಡಿದ ವುದಾಗಿ ತಿಳಿಯಬರುತ್ತಿದೆ

ನಾಟಕಗಳು ತಮಿಳಿನಲ್ಲಿ ೯, ತೆಲುಗಿನಲ್ಲಿ ೧೫, ಕನ್ನಡ ಮತ್ತು ಉರಿಯ ಭಾಷೆಗಳಲ್ಲಿ ಒಂದೊಂದು ಪುಸ್ತಕಗಳಿವೆ ಇವುಗಳೊಳಗೆ 'ದುರ್ಗಾದಾಸ'ವೆಂಬ ಕನ್ನಡ ನಾಟಕವು (೧೮ ಲಿಸೆ) ವ ಆರ್ ವ್ಯಾಸರಾವ್ ಎಂಬವರಿಂದ ಬರೆಯಲ್ಪಟ್ಟು ಮಂಗಳೂರು ಶಾರದಾ ವ ದ್ರಾಕ್ಷರ ಶಾಲೆಯಲ್ಲಿ ಅಚ್ಚಾಗಿದೆ ಔರಂಗಜೇಬನಿಗೂ ಅತನ ಕಾಲದಲ್ಲಿದ್ದ ರಜಪೂತ ನಾಯಕರಿಗೂ ನಡೆದ ಕೆಲವು ವ್ಯವಹಾರಗಳು ಇದರಲ್ಲಿ ವರ್ಣಿತವಾಗಿವೆ

ಕಾದಂಬರಿ (fiction) ಗಳೊಳಗೆ ತಮಿಳಿನಲ್ಲಿ ೩೦ (೨೬ ಪೂ ಮು.), ತೆಲುಗಿನಲ್ಲಿ ೩೦ (೨ ಪೂ ಮು) ಮಲೆಯಾಳ ಕನ್ನಡಗಳಲ್ಲಿ ಒಂದೊಂದು ಪ್ರಕಾರವಾಗಿವೆ. ಮಿ॥ ಸನ್ಯಾಸಿರಾಜು ಎಂಬವರು ಶ್ರೀಯುತ ರವೀಂದ್ರನಾಥರ 'ಪ್ರೇಮಾಂಜಲಿ' ಎಂಬ ಕಲ್ಪನಾ ಪ್ರಬಂಧವನ್ನು ತೆಲುಗಿಗೆ ಭಾಷಾಂತರಗೊಳಿಸಿರುವರು. ಮಿ॥ ಆರುಣಾಚಲಂ ಎಂಬವರು 'ಸುವಾಸಿನಿಯ ಗತಿ' (೬ ಪೈ) ಎಂಬ ಚಿಕ್ಕ ಕಥೆಯನ್ನು ತಮ್ಮ ತಮಿಳಿನಲ್ಲಿ ಪ್ರಕಾಶಗೊಳಿಸಿರುವರು.

ಚರಿತ್ರೆ (History) ಗಳು ತೆಲುಗಿನಲ್ಲಿ ಎರಡು, ಕನ್ನಡದಲ್ಲಿ ಮೂರು ಅಚ್ಚಾಗಿವೆ. ಮಿ॥ ತೀನಸೆ ಹೆಗಡೆಯವರ 'ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ' (೧ ಪೂ ಮು

ಎಂ ಗ್ರಂಥವು ಮಂಗಳೂರಿನ ಶಾರದಾ ಗ್ರಂಥಾಲಯದಲ್ಲಿ ಅಚ್ಚಾಗಿದೆ. ಇದರಲ್ಲಿ ನೇಕ ಸೂತನ ವಿಷಯಗಳಿರುವುದಾಗಿ ತಿಳಿಯಬರುತ್ತಿದೆ.

ಭಾಷಾ (language) ವಿಷಯಕವಾಗಿ ತಮಿಳಿನಲ್ಲಿ ೫, ತೆಲುಗಿನಲ್ಲಿ ೫, ಕನ್ನಡದಲ್ಲಿ ೧೧ ಅಚ್ಚಾಗಿವೆ. ಯಾವ ದ್ರಾವಿಡವರ್ಗದ ಭಾಷೆಯಲ್ಲಿಯೂ ಇದುವರೆಗೆ ಅಚ್ಚಾಗದಿದ್ದ ಸಂಸ್ಕೃತ 'ದಶರೂಪಕ'ಗ್ರಂಥವು ವಿ। ಸೂರ್ಯನಾರಾಯಣ ಶಾಸ್ತ್ರಿಗಳೆಂಬುವರಿಂದ ತೆಲುಗಿನಲ್ಲಿ ಸಟೀಪ್ಪಣವಾಗಿ ಪ್ರಚುರಗೊಳಿಸಲಾಗಿದೆ ಆಂಧ್ರರಂಗ ಭೂಮಿಯ ವಿಕಾಸಕ್ಕೆ ಇದು ತುಂಬ ಸಹಕಾರಿಯಾಗಿದ್ದೀತು. ಮಿ। ಹೊನ್ನಾವ್ರರ ಮರದ ಗದಿಗೆಯ್ಯನವರು ಬರೆದ 'ಬಾಲಭಾರತ' (೮ ಆಣೆ) ಎಂಬ ವಚನ ಭಾರತ ಸಾರವು ಮಂಗಳೂರಿನಲ್ಲಿ ಅಚ್ಚಾಗಿ, ಈ ಶಿಕ್ಷೋನಾಮೆಯ ಕೆಳಗೆ ಕೊಡಲ್ಪಟ್ಟಿದೆ

ವೈದ್ಯ ವಿಷಯಕವಾಗಿ ತಮಿಳಿನಲ್ಲಿ ೪ ಮತ್ತು ತೆಲುಗಿನಲ್ಲಿ ೨ ಪುಸ್ತಕಗಳು ಅಚ್ಚಾಗಿವೆ. ಇವುಗಳೊಳಗೆ ಮಿ। ಕುಮಾರ ಸ್ವಾಮಿ ಮುದಲಿಯವರ 'ಕಾಂತಶಕ್ತಿ ವೈದ್ಯ ಕಾಸ್ತ್ರ'ವೆಂಬ ತಮಿಳು ಪುಸ್ತಕವು Hypnotism ಅಥವಾ animal magnetism ಎಂಬ ಶಕ್ತಿ ಮೂಲವಾಗಿ ರೋಗಚಿಕಿತ್ಸೆ ಮಾಡುವ ರೀತಿಯನ್ನು ಹೇಳುತ್ತಿದೆ

ವಿವಿಧ (miscellaneous) ಪುಸ್ತಕಗಳು ತಮಿಳಿನಲ್ಲಿ ೪೧ (೧೨ ಪು ಮಿ), ತೆಲುಗಿನಲ್ಲಿ ೧೭ (೧ ಪು. ಮು), ಮಲೆಯಾಳದಲ್ಲಿ ೬ (೧ ಪು ಮಿ) ಕನ್ನಡದಲ್ಲಿ ೩, ಉರಿಯದಲ್ಲಿ ೧ ಅಚ್ಚಾಗಿವೆ ಇವುಗಳೊಳಗೆ ಶ್ರೀ ಅಂಜಾತಾಮ್ಮಾಳ್ ಎಂಬಾಕೆ 'ಮಾಂಬಳಕೊಮ್ಮಿ' ಎಂಬ ಮಹಾಭಾರತದಲ್ಲಿ ವನಪರ್ವದೊಳಗೆ ಬರುವ ಪಾಂಡವರನ್ನು ಶ್ರೀಕೃಷ್ಣನು ಪರೀಕ್ಷಿಸಿದ ಕಥೆಯನ್ನೂ ಶ್ರೀ ವಿಶಾಲಾಕ್ಷಿ ಅಮ್ಮಾಳ್ ಎಂಬವರು 'ರುಕ್ಮಾಂಗದ ಚರಿತ್ರ ಕೀರ್ತನೆ'ಯನ್ನೂ ತಮಿಳಿನಲ್ಲಿ ರಚಿಸಿದವರು ಇವೆ ಸಿ. ಮಾನವಿಕ್ರಮರಾಜರವರು ಮಲೆಯಾಳಕ್ಕೆ ಭಾಷಾಂತರಗೊಳಿಸಿದ malabar gazetteer ಎಂಬ ಪುಸ್ತಕವೂ ಈ ಭಾಗದಲ್ಲಿ ಹೇಳಲ್ಪಟ್ಟಿದೆ ಕನ್ನಡದಲ್ಲಿ ವಿದ್ವಾನ್ ಉಪಾಧ್ಯಾಯರ ದ್ರೋಣಪರ್ವ (೫ ಆಣೆ) ವೂ, ಮಿ। ಕಾಂಗಲಾಯರ 'ಸಂಖ್ಯೆ, ಕಾಲ ಮತ್ತು ಕ್ಷೇತ್ರನಿರ್ಣಯ, ಮತ್ತು ಸಾಮಾನ್ಯ ತಿಳಿವಳಿಕೆಯ ಪ್ರಕಾರಗಳು ಎಂಬ ಪುಸ್ತಕವೂ, ಮಿ। ಸುಬ್ಬಣ್ಣ ಪ್ರಭುಗಳ 'ಲವಕ ಶರ ಕಾಳಗದ ಪದ್ಯ ಸಂಪುಟ' (೧೦ ಆಣೆ) ಉಡುಪಿಯಲ್ಲಿ ಅಚ್ಚಾಗಿವೆ

ತತ್ವಜ್ಞಾನ ((philosophy) ವಿಷಯವಾಗಿ ತಮಿಳಿನಲ್ಲಿ ೨ ಮತ್ತು ಕನ್ನಡದಲ್ಲಿ ಮಾತ್ರ ಒಂದೊಂದು ಅಚ್ಚಾಗಿದೆ ಮಿ। ಎಸ್ ಏ ರಾಮಾನುಜೈಯ್ಯಂಗಾರ್ಯರ 'ಸುವ್ರತ'ವೆಂಬ (೧೦ ಆಣೆ) ಉಡುಪಿಯಲ್ಲಿ ಅಚ್ಚಾಗಿ ಕಥಾಮುಖ ಕರ್ಮತತ್ವ ಬೋಧಕವಾಗಿದೆ

ಕಾವ್ಯಗಳು (poetry) ತಮಿಳಿನಲ್ಲಿ ೬ (೨ ಪು ಮಿ), ತೆಲುಗಿನಲ್ಲಿ ೧೫, ಕನ್ನಡದಲ್ಲಿ ೧೪ ಉರಿಯದಲ್ಲಿ ೩, ಅಚ್ಚಾಗಿವೆ ಇವುಗಳೊಳಗೆ ತೆಲುಗಿನಲ್ಲಿ ಜಕ್ಕಾದ ಗರ್ಭಗಸ್ತೋತ್ರ'ವೆಂಬುದರಲ್ಲಿ, ಜನರು ಅಧಿಕಾರವಲ್ಲರಿರುವ ಒಬ್ಬರಿಗೆ ವಿವಿಧ ಸ್ತುತಿ ಹೊಡುವ ಕೆಟ್ಟ ಚಾಳಿಯನ್ನು ಪರಿಹಾಸಕ್ಕೂ ಪಡಿಸಿದೆ ಮಿ। ರಾಜಗೋಪಾಲಾಚಾರ್ಯರವರು 'ಶ್ರೀಕೃಷ್ಣದಿನಾಶ್ವಮೇಧ ಕಥಾ' ಎಂಬ (೬ ಆಣೆ) ಕನ್ನಡ ಕಾವ್ಯವನ್ನು ಶ್ರೀಕೃಷ್ಣನು ಒಂದೇ ದಿನದಲ್ಲಿ ಅಶ್ವಮೇಧಯಾಗವನ್ನು ಮಾಡಿ ಮುಗಿಸಿದ ಕಥೆಯನ್ನು ಪದ್ಯರೂಪವಾಗಿ ಕೊಟ್ಟಿದೆ ಇದು ಉಡುಪಿಯಲ್ಲಿ ಅಚ್ಚಾಗಿದೆ

ಮತ (religion) ವಿಷಯವಾಗಿ ತಮಿಳಿನಲ್ಲಿ ೬೬ (೪ ಪು ಮಿ), ತೆಲುಗಿನಲ್ಲಿ ೩೮ (೫ ಪು. ಮು), ಮಲೆಯಾಳ ಕನ್ನಡ ಉರಿಯಗಳಲ್ಲಿ ಎರಡೆರಡೂ ಅಚ್ಚಾಗಿವೆ. ತಮಿಳಿನಲ್ಲಿ 'ವೆಳ್ಳಿಯಮ್ಮನ್ ಶೋಭನಂ' ಎಂಬ ಹಾಡುಗಳನ್ನು ಶ್ರೀ ಅಲಮೇಲು ಅಮ್ಮಾಳ್ ಎಂಬಾಕೆಯೂ, 'ಮಹಾಬಕ್ಕವಿಜಯಮ್' ಎಂಬ ಕಾವ್ಯ ಗ್ರಂಥವನ್ನು ಶ್ರೀಕೃಷ್ಣಮ್ಮಾಳ್ ಎಂಬಾಕೆಯೂ ಬರೆದಿರುವರು ಕನ್ನಡ ಪುಸ್ತಕಗಳ ವಿಷಯವಾಗಿ ಏನೂ ಹೇಳತಕ್ಕುದಿಲ್ಲ.

ಇದಲ್ಲದೆ ತಮಿಳಿನಲ್ಲಿ ೧ ಶಾಸ್ತ್ರಗ್ರಂಥವೂ, ವಿದ್ಯಾಶಾಲೆಗಳಿಗಾಗಿ ತಮಿಳಿನಲ್ಲಿ ೧೧, ತೆಲುಗಿನಲ್ಲಿ ೯, ಮಲೆಯಾಳದಲ್ಲಿ ೩, ಕನ್ನಡದಲ್ಲಿ ೨ ಪುಸ್ತಕಗಳೂ ಅಚ್ಚಾಗಿವೆ ಮದ್ರಾಸು ಅಧಿಪತ್ಯದಲ್ಲಿ ತಮಿಳು ತೆಲುಗುಗಳು ಎಂದಿನಂತೆಯೇ ಪ್ರಧಾನವಾಗಿಯೂ ಮಲೆಯಾಳ ಕನ್ನಡಗಳು ಹೀನವಾಗಿಯೂ ಇರುವುದು ಈ 'ರಿಪೋರ್ಟಿ'ನಿಂದಲೂ ತಿಳಿದುಬರುತ್ತಿದೆ.

ಜ್ಞಾನದ ಮಿಠಾಯಿ.

(ಲೇಖನ ಮುಟ್ಟಿಸಿ.)

'ಇದುವೇ ನವಗೆ ಬಿರುದು!'

"ನನಗೇಕೆ ಇದು—ಈ ಬಿರುದು? ಆ ಅಕ್ಕತಂಗಿಯರು ಇರುವಾಗ—ಅವರ ಸಮಕ್ಷವೇ ಈ ಬಿರುದೇ ನನಗೆ ಕೊಡುವುದು? ಆ ಮಾನಸ ಸರೋವರದಂತಹ ಉಜ್ಜ್ವಲ ಮತ್ತು ಪ್ರಶಾಂತವಾದ ಸ್ಥಳದಲ್ಲಿ ನನ್ನೆಲ್ಲ ಭಗಿನಿಗಳ ಸ್ವಾಗತಕ್ಕಾಗಿ ಏರ್ಪಡಿಸಿದ ಆ ದಿವ್ಯ ಮತ್ತು ರಮಣೀಯವಾದ ಪರಿಷನ್ಮಂಟಪದಲ್ಲಿ ನಾವೆಲ್ಲ ಸಹೋದರಿಯರು ಸೋದರ್ಯಭಾವದಿಂದ ಕೂತುಕೊಂಡಿರುವಾಗ ನನ್ನ ಕಂಠದಲ್ಲಿ ಈ ಬಿರುದಿನ ಮಾಲೆಯೇ? ಅಯ್ಯೋ! ನನ್ನ ದುರದೃಷ್ಟವೇ? ಇಂತಹ ಬಿರುದು ನನ್ನ ಪಾಲಿಗೆ ಬರುವುದೆಂದು ಪೂರ್ವ ಸೂಚನೆಯು ನನಗೆ ಕೊಂಚವಾದರೂ ಇದ್ದಿದಾದರೆ ನಾನು ಈ ಶೃಂಗಾರದಿಂದ ನಟಿಸಿ, ಇಷ್ಟು ಪ್ರಯಾಸಪಟ್ಟು ಅಲ್ಲಿತನಕ ಪ್ರತಿನಿಧಿಯಾಗಿ ಏಕೆ ಹೋಗುತ್ತಿದ್ದೆ? ಹಾಗೆ ಹೋಡಿದ್ದಕ್ಕೆ ಈ ಸಂಭಾವನೆಯೇ? ವಾಗ್ದೇವಿಯಾದ ಸರಸ್ವತಿಯು ಅಗ್ರಾಸನವನ್ನಲಂಕರಿಸಿದ್ದಾಗ ಅನೇಕಾನೇಕ ಅಕ್ಕತಂಗಿಯರು ಗೌರವಸ್ಥಾನಾಪನ್ನರಾಗಿ ಪ್ರಸನ್ನ ಮುಖಿಗಳಾಗಿರುವಾಗ ನನ್ನಪಾಲಿಗೆ ಮಾತ್ರ ಈ ಬಿರುದು ಒಂತಲ್ಲವೇ? ಕೊರಳಲ್ಲಿ ಮುತ್ತಿನ ಸರವನ್ನು ಹಾಕುವಾಗ ಸುವ್ವನೆ ಆ ಸರವನ್ನು ಹಾಕಿದರೆ ಸಾಲದೇ? ಆ ಸರಕ್ಕೆ ಕಟ್ಟಿರುವ ಬಿರುದಿನ ಆ ಸಣ್ಣ ಜೀಟನ್ನು ಎಲ್ಲರಿಗೆ ಕೇಳುವಂತೆ ಒಹಿರಂಗವಾಗಿ ಗಟ್ಟಿಯಾದ ಸ್ವರದಿಂದ ಓದಿ ಆ ಮುಕ್ತಾಮಾಲೆಯನ್ನು "ಅಮ್ಮಾ ನಿನಗಿದು ಒಹುಮಾನ"ವೆಂತ ಹೇಳಿ ಹಾಕಬೇಕೇ? ಕೆಲವರಿಗೆ "ವೀರಮಾಲೆ" "ದಿವ್ಯ ಮನೋರಮೆ" "ಮಹಾರಾಜ್ಞೀ" ಮುಂತಾದ ಬೀರಬೀರೆ ಪದವಿಗಳನ್ನು ಬಿರುದುಗಳನ್ನು ಇದೇ ಕ್ರಮದಿಂದ ಉಚ್ಚಸ್ವರದಿಂದ ಕೂಟ್ಟರೂ ನನಗೆ ಕೊಟ್ಟು ಈ ಬಿರುದನ್ನು ಇಷ್ಟು ಒಹಿರಂಗವಾಗಿ ಆ ನೆರೆದ ಸಭೆಯಲ್ಲಿ ಏಕೆ ಉಚ್ಚರಿಸಿದ್ದು?" ಹೀಗೆನ್ನುತ್ತ ಬೇಸರ ಮತ್ತಿರವ ನವ್ಯ ಕರ್ನಾಟಕ ಭಾಷಾದೇವಿಯನ್ನು ನೋಡಿ, ಈ ಮಿಠಾಯಿಯ ಪೂರ್ಣನವನ್ನು ಬಿಚ್ಚುವಾಗಲೇ ವಾಚಕರ ವಿಸ್ಮಿತರಾಗಿದೆ ಇರಲು ಅದುದರಿಂದ ಕೊಂಚಪೂರ್ವ ವೃತ್ತಾಂತವನ್ನು ಹೇಳಿ ಮೊಗಲು ಈ ವಿಸ್ಮಯವನ್ನು ಒಗೆಹರಿಸುವ

ಕಳದ ಆದಿತ್ಯವಾರ ಮಾನಸ ಸರೋವರದ ಪವಿತ್ರಸ್ಥಳದಲ್ಲಿ ನಮ್ಮ ಹಿಂದೂ ದೇಶದೊಳಗಣ ಎಲ್ಲ ದೇಶಭಾಷಾ ಭಗಿನಿಗಳು ಪರಿವೃತ್ತ ಸೇರೀರಿತ್ತು ಆ ಸುಪ್ರಸಂಗದಲ್ಲಿ ವಾಗ್ದೇವಿಯಾದ ಸರಸ್ವತಿ ಜಿವ್ಯನವರು ಅಧ್ಯಕ್ಷಸ್ಥಾನವಹಿಸಿದ್ದರು ಸಭಾ ಕಾರ್ಯಕ್ರಮದಂತೆ ಎಲ್ಲಾ ಭಾಷಾಭಗಿನಿಗಳು ತಂತಮ್ಮ ವಾರ್ಷಿಕ ವರದಿಯನ್ನೋದಿದ ನಂತರ ಅವರವರ ಯೋಗ್ಯತಾನುರೂಪವಾಗಿ ಪದವಿಗಳು ಕೊಡಲ್ಪಟ್ಟವು ಭಾಷಾಭಗಿನಿಗಳಲ್ಲಿ ಹಿಂದೀಭಾಷೆಯು ಎದ್ದುನಿಂತು ಮಾತಾಡುವಾಗ ಯಾರಲ್ಲಿಯೂ ವೀರರಸ ಹುಟ್ಟದೆ ಇರದು. ಶಬ್ದಗಳಲ್ಲಿಯು ಆ ಓಜಸ್ವಿತೆಯೂ, ಉಚ್ಚಾರದ ಆ ಗಾಂಭೀರ್ಯವೂ ವಿಚಾರದ ಆ ಪ್ರಭಾವವೂ ಇವು ಇನ್ನೆಲ್ಲಿ ಕಾಣುವವು? ಈ ಭಗಿನಿಗೆ "ವೀರಮಾತೆ" ಯೆಂಬ ಹೆಸರು ಒಪ್ಪುವದಲ್ಲವೇ? ದಂಗಜಗಿನಿಯ ಕೇವಲ ಸ್ತ್ರೀಯರಿಗೆ ಒಪ್ಪುವ ಶಬ್ದವ ಘನಿನ್, ಉಚ್ಚಾರ ಮಾರ್ದವ, ಮನೋವಿಕಾರಗಳ ಪ್ರಾಧಾನ್ಯ ಇವು ಅವೂ ರ್ಗವೇ ಸರಿ' "ದಿವ್ಯತೇಜೋಮಾಲಿನೀ" ಅಥವಾ "ದಿವ್ಯಮನೋರಮೆ" ಎಂದರೆ ಇವಳ್ಗೆ! ಗುರ್ಜರಜಗಿನಿಯ ಲಲಿತವಾಙ್ಮಯವು ನ್ಯಾಯಾರ ಉದ್ಯೋಗಗಳಿಂದ ದಣಿದು ಹೋದ ಲಕ್ಷ್ಮೀಪುತ್ರರ ಮನೋರಂಜನೆಗೆ ಪಾತ್ರವೇ. ಆದುದರಿಂದ "ಮನೋವಿನೋದಿನಿ" ಎಂಬ ಒಹುಮಾನಾರ್ಥಕ ಹೆಸರನ್ನು ಇವಳಲ್ಲದೆ ಇನ್ನಾರು ಪಡೆದಾರು? ಮಹಾರಾಷ್ಟ್ರ ಭಾಷಾಭಗಿನಿಯು ತನ್ನ ಬೆಕ್ಕಿ ಪ್ರಧಾನವಾದ ರಸಾಳವಾಣಿಯಿಂದ ರಾಜಕಾರಣಗಳನ್ನು ಆರ್ಜಿಸುವಾಗ "ಮಹಾರಾಜ್ಞಿ" ಎಂಬ ಹೆಸರನ್ನು ಅವಳಿಗಲ್ಲದೇ ಕೊತಬೇಕಾದುದ್ದು? ಈ ರೀತಿಯಲ್ಲಿ ಅವರವರ ಯೋಗ್ಯತಾನುಸಾರ ಪದವಿಗಳನ್ನು ಕೊಡುವಾಗ ನವ್ಯ ಕರ್ನಾಟಕ ಭಾಷಾಭಗಿನಿಗೂ ಒಂದು ಪದವಿಯು ಸಮರ್ಪಿಸಲ್ಪಟ್ಟಿತು. ಆದರೆ ಆ ಪದವಿಯಿಂದ ಅವಳಿಗೆ ಮಾತ್ರ ವಿರಸವಾಯಿತೆಂದು ಅವಳ ಆತ್ಮಗತ ಧಾರಣದ ಮೇಲಿಂದ ಕಂಡುಬರುತ್ತದೆ. ಕರ್ನಾಟಕ ಭಾಷಾಭಗಿನಿಯ ಮುಖದಿಂದ ಈ ಪ್ರಕಾರ ದುಃಖೋದ್ಗಾರಗಳು ಉಕ್ಕುತ್ತಿರುವಾಗಲೇ ಅವಳು ಹೇಳಿದ್ದೇನೆಂದರೆ —

"ಆ ದೊಡ್ಡ ಸಮಾರಂಭದಲ್ಲಿ ಈ ಹೆಸರನ್ನು ಓದಿ ಹೇಳಿದಾಗ ನನ್ನ ಮುಖದಲ್ಲಿ ಆನಂದವು ಮೂಡಬೇಕಿತ್ತೇ! ಹೇಗೆ ಮೂಡೀತು? ಅದು ಲೋಕಸ್ವಭಾವಕ್ಕೆ ವಿರುದ್ಧವಲ್ಲವೇ! ಅಷ್ಟರೊಳಗೆ ನನ್ನ ಸಮೀಪದಲ್ಲಿಯೇ ಇದ್ದ ಪಂಜನದೆಯು ನನ್ನ ಕಡೆಗೆ ನೋಡಿ "ಅಮ್ಮಾ ನಿನಗೇತಕ್ಕೆ ವ್ಯಸನವಾಗುತ್ತದೆ" ಎಂದು ಮಂಗಳಾಕ್ಷತೆಯಾಡಿ

ಹೇಳಿದಳು! ಈ ಪದವೀದಾನದಲ್ಲಿ ಪಕ್ಷಪಾತವೇನೂ ಇಲ್ಲ ಕಂಡಿಯಾ ಸರಿ, ನೀನು ನೆನಸುವುದು ಮೊದಲಿನ ಕಾಲದಲ್ಲಿ ನಿನ್ನ ಎಷ್ಟೋ ಕವಿಪುತ್ರರು ಉತ್ತಮೋತ್ತಮ ವಾದ ಮಹಾಕಾವ್ಯಗಳನ್ನು ಬರೆದಿರುವರು. ನಿಜವೇ ಆದರೆ ಆ ಪ್ರಾಚೀನ ನೈಭವವು ಈಗೇನು-ಶಾನಿ ಪ್ರಯೋಜನಕ್ಕೆ ಬರುವುದು? ಏಂಗರೆ ಅದೆಲ್ಲವು ವ್ಯರ್ಥವೆಂತ ನನ್ನ ಮಾತಿನ ಅರ್ಥವಲ್ಲ ಆದರೆ ಈಗಿನ ವಾಙ್ಮಯವನ್ನು ನಿರೀಕ್ಷಿಸು ವಿನಿದೆ ಇತಿ ಹಾಸ, ತತ್ವಜ್ಞಾನ, ರಸಾಯನಶಾಸ್ತ್ರ, ಖಗೋಲಶಾಸ್ತ್ರ, ಭೂಗರ್ಬಶಾಸ್ತ್ರ, ಗಣಿತ ವಿಜ್ಞಾನ ವಂತಾದ್ದೇನಾದರೂ ಕುಂಬೇಗೆ ಗ್ರಾವ್ಯಜನ ಸ್ತೋವದಲ್ಲಿ ಕೂತು ಕೊಂಡು, ಸಭ್ಯತೆಯನ್ನು ಮೀರಿ ಗ್ರಾವ್ಯಮತ್ತ ಬೀಜಿತ್ಸಕ್ಷಿಗ್ನಾನ್ನಾಡಿ ಆ ಗ್ರಾವ್ಯರ ಹಲ್ಲುಗಳು ತೋರುವಂತೆ ಮಾಡುವ ಗ್ರಾವ್ಯಹಾಸ್ಯಗಾರನಂತೆ ಈಗಿನ ನಿನ್ನ ವಾಙ್ಮಯವು ಹಾಸ್ಯರಸಪ್ರಧಾನವಾಗಿದ್ದುದರಿಂದಲೇ ಕೊಂಚವಷ್ಟಿಗೆ ಅಂತಹ ಜನರ ಆದರವನ್ನು ಹೊಂದಿರುವುದು ಹೀಗೆ ನಿಜಸ್ಥಿತಿಯಿರುವಾಗ ಜಮ್ಮಾ ವಿದೂಷಕಮಾತೆ ಎಂಬ ಹೆಸರು ನಿನಗೆ ನೈಜನಕ್ಕೆ ಕಾರಣವಾಗಿದೆಯೇ ಎಂದು ನನ್ನ ಸಮೀಪದಲ್ಲಿಯೆ ಇದ್ದ ಆ ಕಂಚನದೆಯು ನನ್ನ ಪದವಿಯ ವ್ಯಾಖ್ಯಾನ ಮಾಡಲಾಗಿ ನನ್ನ ವ್ಯಸನದ ದಿಗ್ವಿಯು ಇನ್ನೆಷ್ಟು ಏರಬೇಕಾಯಿತು? ಆದರೂ ನನ್ನ ಪ್ರಣ್ಯಕ್ಕೆ ಅವಳು ಕಟ್ಟಿಯಾಗಿ ಮಾತಾಡಲಿಲ್ಲ ಆದುದರಿಂದ ನಾನು ಸ್ವಲ್ಪ ಬುದ್ಧಿವಂತಿಕೆಯಿಂದ ಅವಳ ನನಗೆ ಕೊಟ್ಟ ಬಿರುದ್ದುಗಳನ್ನೆಂತ ತೋರಿಸಿಕೊಂಡು ಸಂತೋಷಪಟ್ಟೆವು ಹಾಗೆ ಸಭಾವಂಟಪದಿಂದ ಹೋಗೋ ಒಮ್ಮೆ ಹೊರಗೆ ಹೊಂದನು ಇಲ್ಲದಿದ್ದರೆ ಇವಳ ಉಪನ್ಯಾಸವು ಎಲ್ಲರ ಕೆವಿಗೆ ಹೋಗಿ ಬಾಯಿಂದ ರಭ್ಯದ! ಸರಿ ನಿತೆ ಅಪಮಾನದ ಗಾಣಾಕಾಪೀ ಸರಿ! ಆದರೆ ಇಗಾವೇ ನನಗೆ ವಿರುದ್ಧ ಹೊಂದಿ ಆತ್ಮಗತವಾಗಿ ಮಾತಾಡುತ್ತ ತವ್ಮ ಬಾವಾವೇಶವು ಮಾನನ ಸಹೋವದಿಂದ ತನ್ನ ಬಾಯಿನ ದಾರಿಯನ್ನು ಒಹು ಕಷ್ಟದಿಂದ ಬಾಚಿಗಳು

ಅವಿತು ಇಲ್ಲಿಗೆ ಈ ಪ್ರಹಸನ ಮುಗಿಯಿತ ಆದರೆ ವಾಚಕರ ಇನ್ನು ಸೀಜೋ ಕುಯೋ! ನಿ ಸ್ವಲ್ಪ ಕವಿನೆ ಯಾದರೆ ಅದಕ್ಕೆ ಸ್ವಲ್ಪ ಸಕ್ಕರೆಯನ್ನು ತಾವು ಸೇರಿಸಿ ಕೊಳ್ಳಬಿಡಿ

ವಾಙ್ಮಯ ಕಲಾಶಾಸ್ತ್ರಗಳ ಅಭಿವೃದ್ಧಿಯ ಸಮಾಚಾರ
(Progress of Literature Science, and Art

ಸಿವಣಾವಿರ್ತಿ ಕೊಪಿ ಎಂಬ ವ್ಯಾಖ್ಯಾ ರ್ತಿ, ಪಂಡಿತ ಶಿವನಾರಾಯಣ ಎಂಬ ವಿದ್ವನ್ಮಣಿಗಳ ಕಾತ್ರವತ್ತು ಒಪ್ಪಿ(೫೫) ದ್ವೀಪಗಳಲ್ಲಿ ಈ ದಿನ ಹಿಂದೂ ಜನರು ವಾಸಿಸುತ್ತಿರುವರೆಂದೂ, ಹಿಂದೂಸ್ಥಾನದಿಂದ ಹಿಂದೂ ಉಪದೇಶಕರು ಹೋಗಿ ಅಲ್ಲಿ ಜನರಿಗೆ ಹಿಂದೂ ಧರ್ಮವನ್ನು ಕೊಟ್ಟರೆಂದೂ, ಅದರಂತೆಯೆ ಪರ್ಶಿಯದಿಂದ ಬಾಂಧವರ್ಮಕ್ಕೆ ಬಂದಿದ್ದ ಗಾರಿಕರೂ ಹಿಂದೂಗಳಾಗಿ ಮಾಡಲ್ಪಟ್ಟರೆಂದೂ, ಅಪ್ಪಣೆಕೊಡಿಸಿದರ

∴

ಕೊಂ ಪಸ್ಟ್ರಾಂಕ ಪತ್ಯಾದಿ ವರ್ತಮಾನದೆ ತೋರವ ಮತ್ತು ಒಹ ಪ್ರಯೋಜನಕರವಾದ ಒಂ ಕೃತಿಕ ಪದಾರ್ಥವನ್ನು ದೊಡ್ಡ ಪ್ರಮಾಣದಲ್ಲಿ ಮಾಡ ತೊಡಗಿರುವರೆಂದು 'ಕೆಮಿಕಲ್ ವರ್ಲ್ಡ್' ಎಂಬ ಪತ್ರಿಕೆಯಿಂದ ತಿಳಿಯ ಬರುತ್ತದೆ ಈ ಪದಾರ್ಥವನ್ನು ಗಂಡನ್ನಾಗಿಯೂ ಸಲಾಕೆಗಳಾಗಿಯೂ, ತಗಡುಗಳಾಗಿಯೂ ಬೇಕಾದ ಪರಿಮಾಣದಲ್ಲಿಯೂ ಆಕಾರದಲ್ಲಿಯೂ ದೊರಯಿಸಿಕೊಳ್ಳ ಬರುವುದು ಅನ್ನ ಗರಸದಿಂ ಸಿಂಲಾ ಟ್ರೈಡೆಯಿಂಗ್ ತೂಕಮಾಡಲೂ, ನುಣ್ಣಗಾಗಿ ಮಾಡಲೂ, ಬೇಕಾ ಣ್ಣಕೂಡಲೂ ಬರುವುದು ಹೊಲು ವಿಸೀರಲ್ಲಿಯೂ ಒಳಿಕ ತಣ್ಣೀರಲ್ಲಿಯೂ ಇ ಗಿಸಿಟ್ಟ ಬೇಕಾದ ಆಕಾರದಲ್ಲಿ ಗ್ಗಿಸಲು ಬರುವುದು ಅದಕ್ಕೆ ಅಗ್ನಿ ಅಧವಾ ಜಲದಿಂ ಏನೂ ಇರುವುದಿಲ್ಲ

∴

ಕಡಪೆಯ ಪ್ರಜರೀ ವಿಸ್ಯಟ್ ಕಲೆಕ್ಟರು ವಿ ಡಾ ಎ ನಾರಾಯಣಯ್ಯನವರಲ್ಲಿ ಮಂತ್ರವಿದ್ಯೆಯು ವಿಶೇಷವಾಗಿ ಅಸಾಧ್ಯವಾದ ಶೋಗಗಳನ್ನು ಗುಣಪಡಿಸಕ್ಕ ಅದ್ಭುತವಾದ ಶಕ್ತಿಯಿರವುದೆಂದೂ ಸಾವಿರಾರು ಜನರು ಅಲ್ಲಿಗೆ ಪ್ರತಿವರ್ಷವೂ ಕಷ್ಟ, ಕಡು, ಬೀಹ್ವಾಸಂಭವ ಇತ್ಯಾದಿ ನಿರಾಳ ಸಂಬಂಧವಾದ ರೋಗಗಳನ್ನೂ ಇವರು ನಿವೃತ್ತಿಪಡಿಸಿರುವರೆಂದೂ 'ಸ್ಯೂ ಇಂಡಿಯಾ' ಪತ್ರಿಕೆಯಿಂದ ತಿಳಿಯ ಬರುತ್ತಿದೆ ಕಡಪೆಯಲ್ಲಿ ಇತ್ತಲಾಗೆ ಕೋವಿಗರ ಹುಡುಗನೊಬ್ಬನಿಗೆ ತೀವ್ರವಾದ ಆಸ್ಥಮವೂ ಬೆಂಹ್ವಾಸ್ತಂಭನವೂ ಪ್ರಾಪ್ತವಾಗಿ ಆರು ತಿಂಗಳ ವರೆಗೆ ಏಕರೀತಿಯಾಗಿದ್ದುದರಿಂದ ಅತನ ದಾಯವಾದಿಗಳು ಅತನ ಆಸ್ತಿಯ ಅಡಳಿತವನ್ನು ತಮ್ಮ ಕೈಗೆ ಕೊಡಬೇಕೆಂದು ಜಿಲ್ಲಾ ಕೋರ್ಟಿಗೆ ಮನವಿಮಾಡಿಕೊಂಡಿದ್ದರು. ಈ ಹುಡುಗನನ್ನು ಕೆಲವು ದಿನಗಳ ಚಿಕಿತ್ಸೆಯೊಗಾಗಿ ಶ್ರೀಯುತ ನಾರಾಯಣಯ್ಯನವರು ಗುಣಪಡಿಸಿಕೊಟ್ಟು ಮನೆ ವಿಯು ನಿಷ್ಫಲವಾಗುವಂತೆ ಮಾಡಿದರು. ಪ್ರಸಿದ್ಧ ಸಂಸ್ಕೃತ ಪಂಡಿತರೂ ವೈಶೂರು ಓರಿಯಂಟಲ್ ಲೈಬ್ರರಿಯ ಅಧ್ಯಕ್ಷರೂ ಆದ ಶ್ರೀಯುತ ಮಹಾದೇವ ಶಾಸ್ತ್ರಿಯವರು ಇವರಿಗೆ ಸೋದರರಾಗಿಬೇಕು

∴

ರಾಮೇಶ್ವರ ದೇವಾಲಯದ ಧರ್ಮಾದಾಯದ ಹಣದಿಂದ ಮಧುರೆಯಲ್ಲಿ ತಮಿಳಿನಲ್ಲಿಯೂ ಸಂಸ್ಕೃತದಲ್ಲಿಯೂ ಉಚ್ಚಶಿಕ್ಷಣವನ್ನು ಕೊಡುವುದಕ್ಕಾಗಿ ಒಂದು ಪಾಠಶಾಲೆಯನ್ನು ನಿರ್ಮಿಸಿರುವರು ಈ ಪಾಠಶಾಲೆಗೆ ಮದ್ರಾಸು ಯುನಿವರ್ಸಿಟಿಯಲ್ಲಿ ಸಂಸ್ಕೃತದಲ್ಲಿ ಎಮ್ ಎ ಪರೀಕ್ಷೆ ತೇರಿದ ಪದವೀಧರರೊಬ್ಬರು ಅಧ್ಯಕ್ಷರಾಗಿ ನಿಯಮಿಸಿರುವರು

∴

ಪೆದ್ದಾಪುರ ಸಂಸ್ಥಾನದ ಗರ್ಲ್ಸ್ ಸ್ಕೂಲೇ ಇನಿಯರು ಮೆಟ್ರಿಕ್ಯುಲೇಷನ್ ಪರೀಕ್ಷೆಯ ವಿದ್ಯಾರ್ಥಿನಿಯರಲ್ಲಿ ಕಡೆಯಿಂದಲೇ ಅಚ್ಚಾದ ತಮಿಳು ಪದ್ಯ ಪುಸ್ತಕವು ತಸ್ಪತಕ್ಕಾಗಿ ವುದೆಂದೂ ಪರಿಶ್ರಮಿಸಿ ವುದರಲ್ಲಿ ಅಜಾಗರೂಕತೆ ಮಾತ್ರವೇ ಅಲದೆ ಅಕ್ಷಾಪೇಕ್ಷಿತವಾ ಅಜ್ಞಾನವು ಕೂಡ ಪ್ರಕಟವಾಗುತ್ತಿರುವುದೆಂದೂ ಹಲವರು ಪತ್ರಿಕಾವ ಇವಾಗಿ ಲಕ್ಷೀಪಿಸುತ್ತಿರವರು ಇಂಥ ದೊಡ್ಡ ತಪ್ಪುಗಳು ಬಾರದಂತೆ ನೋಡಿಕೊಳ್ಳುವು ಸಿಂಡಿಕೇಟಿನವರ ಪಧನ ಕರ್ತವ್ಯವೆಂದೂ ಪಂಸ್ಕರಣ ಕಾರ್ಯ ವನ್ನು ಈ ಸರಪಸ್ಥರಿಸಿಂಥ ವಿದ್ವಾಂಸರ ಕೈಗೆ ಒಪ್ಪಿಸಕಕ್ಕುದಲ್ಲವೆಂದೂ 'ನ್ಯೂ ಇಂಡಿಯಾ' ಪತ್ರಿಕೆಯ ತೀವ್ರವಾಕ್ಷರಗಳಿಂ ನಿವೇದಿಸುತ್ತಿದೆ ಈ ವಿಷಯದಲ್ಲಿ ಯೂನಿವರ್ಸಿಟಿಯವರು ತಕ್ಕಂತೆ ಶಾಸನಮಾಡಲು ಯೋಚಿಸುತ್ತಿರುವರಾಗಿ ಜನನಾ ತೆಯಿಂದ ತಿಳಿಯ ಬರುತ್ತಿದೆ

ಪತ್ರವ್ಯವಹಾರ.
ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣ ಪರಿಷದ.

ಸಂಯುಕ್ತ ಗೌಡಸಾರಸ್ವತ ಬ್ರಾಹ್ಮಣ ಪರಿಷದದ ಮುಂದಿನ ಅಧಿವೇಶನವು. ಇಂಗ್ಲೀಷಿನಲ್ಲಿ ಸೌ ವಿಷಯ ರಾ ವಿ ಬಲವಂತರಾವ್ ಸಾಂಡುರಂಗವಾಗಳೆ, ಮಾ ರಾ ರಾ ಮಾಪಸ್ಥಾನ್ ಕೃಷ್ಣವಾಳ್ ಬ್ಯಾರಿಸ್ಟರ್ ಇವರ ಕಛೇರ್ಯಾಂಡೆನ್ಸಿನಿಂದ ಇಂಗ್ಲೀ ಅಕ್ಷರಗಳ ಸಜನರಿಂದ ಮನ್ಯಸ್ಥಳವಾಗಿದ್ದು ಈ ತಿಂಗಳದಲ್ಲಿ ಪರಿಷದವು ಜಲ್ಲಿಜಿ ಸೇರಬೇಕೆಂಬ ಉದ್ದಿಶ್ಯವು ಸದರಿ ವಕೀಲರಿಗಿತ್ತು ಆದರೆ ದುರ್ದೈವ ವಶದಿಂದ ತಿಂಗಳ ಆಸ್ಥಳದಲ್ಲಿ ಪ್ಲೇಗು ಇದ್ದ ಕವಿಯಾಗುವ ಸಂಭವ ತೋರದೆಂ ಇದರಿಂದಲೂ ಈ ತಿಂಗಳದಲ್ಲಿ ರಾಷ್ಟ್ರಿಯ ಧರ್ಮ, ಸಾಮಾಜಿಕ ವರಿಷದ ವೈರೆಕ್ಟಿಯ ತಕ್ಕದ್ದಿವ ರಿಂ ಜನಗಳ ಮನಸ್ಸು ಸಹಜ ಆ ಕಡೆ ಎಳೆಯು ವರಿಂದ ಕೂಡಾ ಎಂ ಲವಂಕರಾವ್ ವಾಗಳೆಯವರ ಮತ್ತು ಇತರ ಮಿತ್ರರ ಅಪೇಕ್ಷೆಯಮೇರೆ ಈ ಪರಿಷದ್ಸಮ್ಮೇಳನವು ಗರ್ಗಟಗೇ ಎಪ್ರಿಲ್ ತಿಂಗಳ ಈಸ್ಟರ್ ಹಬ್ಬಾ ಕಾಲದಲ್ಲಿ ಸೇರತಕ್ಕದ್ದೆಂದು ನಿಶ್ಚಯಿಸಿದೆ ತವ್ಮ

ಬಾಂಬಯಿ 16 ಪೊಸ್ಟಾಫೀಸು, (ಸಹಿ) ಸದಾನಂದ ತ್ರಿಯಂಬಕ ಭಾಂಡಾರೆ
ತಾ 28 ನವೆಂಬರ 1911, (ಸಹಿ) ಬಾಜೆವಿಷ್ಣು ಕಿರೂರಕರ್.
ಜನರಲ್ ಸೆಕ್ರೆಟರಿ ಸಂ ಗೌ ಸಾ ಬ್ರಾ ಪರಿಷದ್.

ವೆರ್ಡೂರದಲ್ಲಿ ಜರಗುವ ಜಾನುವಾರುಗಳ ಸಂತೆ.

ಅಯ್ಯಾ,

ತವ್ಮ ಪತ್ರದ ಕಳೆದ ನವೆಂಬರ ತಿಂಗಳ ತಾ ೨೮ರಲ್ಲಿ ಬರುವ ನಾರ್ಥ್ ತಿಂಗಳಿನಿಂದ ಎಪ್ರಿಲ್ ತಿಂಗಳ ತನಕ ಚಾರುವಾರುಗಳ ಸಂತೆಯು ಕೂಡುವುದೆಂದು ಜಿಲ್ಲಾ ಕಲೆಕ್ಟರ ದೊರೆಗಳಾದ ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರವರು ನೊಜಿಸಿರುವ ದನ್ನು ಓದಿ ನೋಡಿ ಒಹಳ ಸಂತೋಷವಾಯಿತು ಕಳೆದ ವರ್ಷ ಜರುಗಿಸಿದೆ ಸಂತೆಯ ಫಲದ ಅನುಭವದಿಂದ ಈ ವರುಷದ ಸಂತೆಯನ್ನು ನಿರ್ವಹಿಸುವದು ಉತ್ತಮ ಸಂತ ತೋರುತ್ತದೆ

ಮಾರ್ಚಿ ಎಪ್ರಿಲ್ ತಿಂಗಳುಗಳಲ್ಲಿ ಬೇಸಿಗೆಯ ಸಮಯ ಇದನ್ನು ಜರುಗಿಸುವ ದಕ್ಕಿಂತ ಸಪ್ಪಂಬರದಿಂದ ಜನವರಿ ತಿಂಗಳ ಅಂತ್ಯದ ವರೆಗಿನ ತಿಂಗಳುಗಳ ಮಧ್ಯ ಇದನ್ನ ಜರುಗಿಸುವದು ಉತ್ತಮ ಈ ಸಮಯದಲ್ಲಿ ವೆರ್ಡೂರದಲ್ಲಿ ಜರಗುವ ಉತ್ಸವಗಳ ವಿವಾರವೂ ಇಲ್ಲದೆ ಸಂತೆಗೆ ಮತ್ತಷ್ಟು ಒಳ್ಳೇದಾಗುವದು. ಮೈಸೂರಿನ ಸರಕಾರದವರಿಗೆ ಒರೆಯ ವದು ವಿನಹ ಆ ಸಂಸ್ಥಾನದ ಜಾನುವಾರುಗಳ ವ್ಯಾಪಾರಸ್ಥರೆಲ್ಲರಿಗೂ ಈ ಸಂತೆಯ ವರ್ತಮಾನವು ತಿಳಿಯುವಂತೆ ಅಲ್ಲಿಯ ವರ್ತಮಾನ ಪತ್ರಗಳಲ್ಲಿ ಕೆಲವು ವಾರಗಳ ತನಕ ಮುಂದಾಗಿ ಪ್ರಕಟಿಸುವದು ಅಗತ್ಯ.

ಇಪರಲ್ಲಿ ಅನುಕೂಲವಿದ್ದ ಸೂಚನೆಗಳನ್ನು ಅಂಗೀಕರಿಸುವರಾಗಿ ಕೋರುವ

ಉದ್ವಿಗ್ನ ಭೃತ್ಯ.

ಯುದ್ಧ ಸಮಾಚಾರ.

ತಾ. ೫ನೇ ನವೆಂಬರ.

ಜರ್ಮನರ ಜಲಂತರ್ಗಾಮಿ ನಾವೆಯು ಫ್ರೆಂಚರ "ಅಲ್ಸೇರಿಯನ್" ಮತ್ತು "ಒವಾರ" ಎಂಬ ಹಡಗಗಳನ್ನೂ ಬ್ರಿಟಿಷರ "ಟ್ಯುನಿಸ್" ಎಂಬ ಹಡಗವನ್ನೂ ಮುಳುಗಿಸಿರುತ್ತದೆ "ಅಲ್ಸೇರಿಯನ್" ಹಡಗದ ೬೦ ಮಂದಿ ಕಾಣದೆ ಹೋಗಿರುತ್ತಾರೆ "ಟ್ಯೂನಿಸ್" ಹಡಗದ ನಾವಿಕರು ದಡ ಸೇರಿರುವರು

ಕೆಮರೂನಿನಲ್ಲಿ ಫ್ರೆಂಚ್ ಸೇನಿಕರು ಜರ್ಮನ ಸೈನ್ಯದ ಮುಂದೆ ಚಕ್ರಾಕಾರದಲ್ಲಿ ವ್ಯೂಹ ಕಟ್ಟಿರುವರು ಮಿತ್ರಸೈನಿಕರು ಜರ್ಮನ ಸೈನ್ಯದಲ್ಲಿ ವಿಶೇಷ ನಷ್ಟವನ್ನು ಉಂಟುಮಾಡಿರುತ್ತಾರೆ ಉತ್ತರ ಕೆಮರೂನಿನ ಜರ್ಮನ ಸೈನ್ಯವು ದಿಕ್ಕಾಪಾಲಾಗಿ ಓಡುತ್ತಲಿದೆ ಎಂಬ ಪ್ರಕಟಣೆಯಾಗಿರುತ್ತದೆ

ಸರ್ವಿಯನರ ಮುಖ್ಯ ಸೇನೆಯು ಅಲ್ಬಾನಿಯದ ಸರಹದ್ದಿಗೆ ಪೆಟ್ಟಗಿರುವ ಒಂದು ನೆಲೆಯಲ್ಲಿ ಸೇರಿ ಡುರಾಜೊ ಪಟ್ಟಣದವರೆಗೆ ಮೆರವಣಿಗೆಯನ್ನು ನಡಿಸುತ್ತಿದೆ ಮೊನಸ್ಟಿರನ್ನು ಸ್ವಾಧೀನಮಾಡಿಕೊಳ್ಳುವ ಸಂಧರ್ಭದಲ್ಲಿ ಜರ್ಮನರಿಗೂ ಬಲ್ಗೇರಿಯನರಿಗೂ ವತ್ತಿಭೇದ ಉಂಟಾಗಿರುವದೆಂಬ ವಾರ್ತೆ ಇದೆ ಮೊಂಟಿನಿಗ್ರೋದ ಅರಸರು "ಪರರದಾಸ್ಯದಲ್ಲಿ ಸಿಕ್ಕಾತದಕ್ಕಿಂತಲೂ ಯುದ್ಧದಲ್ಲಿ ಮೃತರಾಗುವದೇ ಲೇಸು" ಎಂಬದಾಗಿ ಹೇಳಿ ತನ್ನ ದೇಶವನ್ನ ಹುರಿದುಂಬಿಸಿರುತ್ತಾರೆ ಸರ್ವಿಯನರ ಸೇನೆಯು ಮೊಂಟಿನಿಗ್ರೋದ ಎಲ್ಬೆಸಟ್ಟಿನಲ್ಲಿ ಬಂದಿಳಿದಿರುವದು ಅಲ್ಲಿ ಸರ್ವಿಯರು ಮತ್ತು ಮೊಂಟಿನಿಗ್ರೋ ರಾಜ್ಯಗಳ ಸೇನೆಗಳು ಶತ್ರುಗಳಿಗೆ ವಿರೋಧವಾಗಿ ಕಡೆಯ ವರೆಗೆ ಕಾದಾಡಬೇಕಾಗಿರುವದು, ವಿದೇಶ ಪ್ರಜಾಜನರಿಗೆ ಮತ್ತು ಸೈನಿಕರಿಗೆ ಆಹಾರಸಾಮಾಗ್ರಿಗಳನ್ನು ಒದಗಿಸಿಕೊಡುತ್ತೇವೆಂಬ ಭರವಸೆ ಕೊಟ್ಟಿರುತ್ತಾರೆ ಮೊಂಟಿನಿಗ್ರೊ ಸೇನೆಯು ಈ ಯುದ್ಧದಲ್ಲಿ ತಮ್ಮ ಪ್ರಾಣಕೊಡಲು ಹಿಂಜರಿಯದೆ, ಪೂರ್ಣ ಜಯವಾಗುವದೆಂಬ ನಂಬಿಕೆಯಿಂದ ಪರ್ವತದಿಂದ ಪರ್ವತಕ್ಕೆ ಹೋಗಿ ಯುದ್ಧಮಾಡುವದೆಂತ ಮೊಂಟಿನಿಗ್ರೊ ಅರಸರು ಹೇಳಿರುವರು.

ಸರ್ವಿಯನರ ಒಂದು ಸಣ್ಣ ಸೇನೆಯು ಇನ್ನೂ ಪ್ರೆಲಿಪ್ಟಿನ ಪಶ್ಚಿಣ ಕಡೆಯಲ್ಲಿ ಶೂರತನದಿಂದ ಕಾದಾಡುತ್ತಿದೆ ಕ್ಯಸ್ತೋರಿಯಾ ಪ್ರಾಂತ್ಯದಲ್ಲಿ ಬಲ್ಗೇರಿಯನರ ಸೇನೆಯು ಹಿಂದಕ್ಕೆ ಸರಿಯತ್ತಿದ್ದಾ ಅವುಗಳ ದೊರಕೆದಾಗ ಮಾತ್ರ ವಿಶ್ರಮ ನೆಲೆಗಳಿಗೆ ತೋಪು ಕಾಯುತ್ತಿದೆ ರುಷ್ಯನ್ನರು ಬಲ್ಗೇರಿಯದ ಒಳನುಗ್ಗುವದಾದರೆ ಬಲ್ಗೇರಿಯನರ ಸಹಾಯವಾಗಿ ಜರ್ಮನ ಸೇನೆಯು ಕಳುಹಿಸಲ್ಪಡುವದೆಂತ ತಿಳಿದುಬರುತ್ತದೆ. ಬಲ್ಗೇರಿಯನರು ಟರ್ಕದೇಶದ ಸರಹದ್ದಿನಿಂದ ತಮ್ಮ ಸೈನ್ಯವನ್ನು ಹಿಂದೆ ಕರೆಯಿಸಿ ಅದನ್ನು ತಮ್ಮ ಪಶ್ಚಿಮ ದಿಕ್ಕಿನ ರಣರಂಗಕ್ಕೆ ಕಳುಹಿಸುತ್ತಿದ್ದಾರೆ

ವಿತ್ರರಾಜ್ಯಗಳು ಸಲೋನಿಕದಲ್ಲಿ ಇಳಿಸಿದ ಕವ್ಕ ಸೇನೆಯ ಭೂದ್ರೆತೆಯ ಕೆರವಾಗಿ ಗ್ರೀಕ ದೇಶಕ್ಕೆ ಕಳುಹಿಸಿಕೊಟ್ಟ ಪತ್ರಕ್ಕೆ ಸಮರ್ಪಕವಾದ ಉತ್ತರವು ದೊರಕಿರುವದು

ಕಿಚನರ್ ಪ್ರಭುಗಳವರು ಟೂನಿನಿಂದ ಪಾರಿಸಿಗೆ ಹೊರಟು ಹೋಗಿರುವರು.

ಗೊರಿಜ್ಜಿಯದ ಉತ್ತರ ಪಶ್ಚಿಮದಲ್ಲಿ ಇಟಲಿಯನರು ಜಯಪ್ರದರಾಗುತ್ತಿದ್ದಾರೆ ಇಟಲಿಯನರು ಒಸ್ಟಾಮ್ಯದ ತೆರೆಹೊರೆಯಲ್ಲಿ ಶತ್ರುಗಳ ೧೧೫ ಸೈನಿಕರನ್ನು ಶೆರೆಹಿಡಿದಿರುವರು ಘೋರ ಕಾಳಗವು ನಡೆದು ಇಟಲಿಯನರು ಒಂದು ಪರ್ವತವನ್ನು ಸ್ವಾಧೀನಮಾಡಿ ಶತ್ರುಸೈನಿಕರಲ್ಲಿ ೨೬೦ ಮಂದಿಯನ್ನು ಶೆರೆಹಿಡಿದರು

ತಾ ೧೧ನೇ ದಶಂಬರ.

ಬ್ರಿಟಿಷರ ಒಂದು ವಾಯುನಾವೆಯು ಜರ್ಮನರ ಒಂದು ಜಲಂತರ್ಗಾಮಿ ನಾವೆಯನ್ನು ನಾಶಪಡಿಸಿರುತ್ತದೆಂತ ಫೀಲ್ಡ್ ಮಾರ್ಸಲ್ ಫ್ರೆಂಚರವರು ತಿಳಿಸಿರುತ್ತಾರೆ.

ಕ್ರೇತ ದ್ವೀಪದ ಸಮೀಪ ಒಂದು ಜರ್ಮನ ಜಲಂತರ್ಗಾಮಿ ನಾವೆಯ ಮುಳುಗಿಸಲ್ಪಟ್ಟಿರುವದು ಉತ್ತರ ಕಡಲಲ್ಲಿ ಜರ್ಮನ ರಕ್ಷಿ ವಾಯುನಾವೆಗಳು ಬ್ರಿಟಿಷರ ಒಂದು ಹಡಗದ ಮೇಲೆ ಬೊಂಬುಗಳನ್ನು ಎಸೆದಿರುತ್ತವೆ. ಆದರೆ ಈ ಬೊಂಬುಗಳು ಹಡಗಕ್ಕೆ ತಾಗಲಿಲ್ಲ, ಹಡಗವು ಸುರಕ್ಷಿತವಾಗಿ ಬಂದರಕ್ಕೆ ತಲಪಿರುವದು ಎಂತ ಪ್ರಕಟವಾಗಿ

ಫ್ರೆಂಚರ್ಬೆರ್ರಿ ಆಂಬೆಕ್ ಎಂಬಲ್ಲಿ ಜರ್ಮನರೊಡನೆ ಸಣ್ಣ ಕಾಳಗ ಮಾಡಿ ಜರ್ಮನ ಸೇನಿಕರನ್ನು ಓಡಿಸಿರುವರು ಜರ್ಮನರ ೪ ವಾಯುನಾವೆಗಳು ವೆರ್ಡನಿನ ಮೇಲೆ ಬೊಂಬುಗಳನ್ನು ಹಾಕಿರುತ್ತವೆ. ಆದರೆ ವಿಶೇಷ ನಷ್ಟ ಉಂಟಾಗಲಿಲ್ಲ. ಈ ಹಗೆಯನ್ನು ತೀರಿಸುವ ಉದ್ದೇಶದಿಂದ ಫ್ರೆಂಚರ ೫ ವಾಯುನಾವೆಗಳು ಜರ್ಮನರ ಒಂದು ರೈಲ್ವೆಸ್ಟೇಶನಿನ ಮೇಲೆ ಬೊಂಬುಗಳನ್ನು ಬಿಸಾಡಿ ರೈಲ್ವೆ ಲೈನನ್ನ ಹಾಳುಮಾಡಿದ್ದರಿಂದ ಜರ್ಮನರ ಆಗ್ಗಾಡಿಯು ಹಿಂತಿರುಗಿ ಓಡಿಕೊಗಿರುತ್ತದೆ

ಜರ್ಮನಿಗೆ ಸುಮಾರು ೧೦೦೦ ಹೆಂಗಸರು ಬೆರ್ಲಿನ್ ನಗರದಲ್ಲಿರುವ ಅರಸರ ಆಪ್ತ ನೆಮ್ಮನ್ನು ಸುತ್ತುಹಾಕಿ, ರಣರಂಗಕ್ಕೆ ಹೋಗಿರುವ ತಮ್ಮ ಗಂಡ ದಿಮ್ಮನ್ನ ಹಿಂದೆ ಕೊಡಬೇಕೆಂದೂ ಆಹಾರ ಸಾಮಾಗ್ರಿಗಳ ಕೊಡತೆಯನ್ನ ಹೋಗಲಾಡಿಸಬೇಕೆಂದೂ ಹೇಳಿ ಗಲಾಟೆಮಾಡಿದರು ಪೊಲೀಸಿನವರು ಈ ಹೆಂಗಸರ ಗುಂಪನ್ನು ಚದುರಿಸಿದರೆಂತ ಅಮ್ಸ್ಟರ್‌ಡಮ್ ಪಟ್ಟಣದಲ್ಲಿ ಪ್ರಕಟವಾಗಿದೆ

ಪೂರ್ವ ರಣರಂಗದ ಇಲ್ಲಿ ಪ್ರಾಂತದಲ್ಲಿ ಜರ್ಮನರಿಗೂ ರಷ್ಯನ್ನರಿಗೂ ಕರಿದಾ ಕಾಳಗ ನಡೆದಿರುವದ ಲ್ಲಿ ರಷ್ಯರು ಜರ್ಮನರ ಕಂದಕಗಳನ್ನು ಸ್ವಾಧೀನಮಾಡಿಕೊಂಡರು ಶತ್ರುಗಳ ಸೈನ್ಯದ ಎಡದಿಶೆಯ ಕಡೆಗೆ ಸಂದಿನ ದಿನಸಿಕಿನದಕ್ಷಿಣಾಭಿಮುಖದಲ್ಲಿ ೨೦೦ ಜಾತಿಕಾಲ ಶತ್ರುಗಳ ವೆಲ್ಲಾ ಯುದ್ಧ ಶತ್ರುಗಳ ಒಬ್ಬ ಸೇನಾಪತಿಯನ್ನೂ ಒಬ್ಬ ಜನರಲನನ್ನೂ ಇತರ ಕೆಲವು ಆಫೀಸರರನ್ನೂ ಶೆರೆಹಿಡಿದಿರುತ್ತಾರೆ

ರಷ್ಯನರು ಈ ಭಾಗಾಲದಲ್ಲಿ ರಣರಂಗಕ್ಕೆ ಕಳಹಿಸಿಕೊಡಲು ೭ ವಿಲಿಯ ಸೇನಿಕರನ್ನ ಸಜ್ಜುಗೊಳಿಸಿರುವರು ಈ ಪೈಕಿ ಒಂದು ಮಿಲಿಯ ಆಸ್ಟ್ರಿಯನಿಯಾಗಿರುತ್ತದೆ ಇಂಗ್ಲೆಂಡ್ ಫ್ರಾನ್ಸ್, ಅಮೆರಿಕ ಮತ್ತ ಜಪಾನಿನಿಂದ ದಿನಂಪ್ರತಿ ಯುದ್ಧ ಸಾವಿಗ್ರಿಗಳು ರುತ್ಯಕ್ಕೆ ಬರುತ್ತಲಿವೆ ಎಂತ ಒಂದು ಸುದ್ದಿಕೆಯಲ್ಲಿ ಪ್ರಕಟವಾಗಿದೆ

ಜರ್ಮನ್ ಕೈಸರರು ಆಸ್ಟ್ರಿಯ ಮಿಲಿಟರಿ ಪ್ರಧಾನರ ವಿಯೆನ್ನಕ್ಕೆ ಹೋಗಿ ಅಲ್ಲಿಯ ಚಕ್ರವರ್ತಿಗೆ ಭೇಟಿಕೊಟ್ಟ ಅದೇ ಸಾಯಂಕಾಲ ವಿಯೆನ್ನದಿಂದ ಹಿಂದಿರುಗಿದರು

ಮೊನಸ್ಟರ್ ನಗರದ ಕ್ಷೇತ್ರ ಅತಿ ಘೋರ ಕಾದಾಟಗಳಿಗೆ ವದು ಸಿವಿಲ್ ಅಧಿಕಾರಿಗಳ ಪ್ರಯತ್ನವನ್ನ ಬಿಟ್ಟು ಮೊಂಗಿಯರ ವರ ಆವರೆ ಕರ್ನಲ್ ವಿಟ್ಟ ರವು ಕಡೆಯ ಗಳಿಗೆ ಪರ್ಯಂತ ವನ್ನ ಕಾಪಾಡಲು ನಿರ್ಧಾರ ಮಾಡಿರುತ್ತಾರೆ ಮೊನಸ್ಟಿರಿನಲ್ಲಿ ಶತ್ರುಗಳ ಈ ವರೆಗೆ ಸುಮಾರು ಮೇಲೆ ಬಿಲ್ಲಲ್ಲು ಹಿಂದ ಅಲ್ಲಿ ಸಾಧಿಸಿರುವಿಕೊಂಡಿರುವ ವಿಷಯವನ್ನು ರತ್ಯಗಳು ಒಪ್ಪಿರುವರು ಎಂತ ಜೂಗಿಸಿದ ವಾರ್ತೆ ಬಂದಿರುವದು

ತನ್ನಾಳ್ವಿಕೆಯಲ್ಲಿರುವ ಟರ್ಕಿ ಸೈನಿಕರು ಜರ್ಮನ ಆಫೀಸರರಿಗೆ ವಿರೋಧವಾಗಿ ನಿಂತು ಇಬ್ಬರು ಆಫೀಸರರನ್ನ ಗುಂಡುಹೊಡೆದು ಕೊಂದರೆಂಬ ವಾರ್ತೆ ಇದೆ

ತಾ ೭ನೇ ದಶಂಬರ.

ಜರ್ಮನರ ಜಲಂತರ್ಗಾಮಿ ನಾವೆಗಳು "ಕಿಂಗ್ಸ್‌ಲೇ" "ಮೊಲೆನ್ಸ್" "ಕೊವೆನ್ಸ್" ಮತ್ತು "ಬೆರೆಂಜ್‌ಪ್ರಿನ್ಸ್" ಎಂಬ ೪ ಹಡಗಗಳನ್ನು ಮುಳುಗಿಸಿರುತ್ತವೆ

ಫೆಬ್ರವರಿ ತಿಂಗಳಿಂದ ಈ ವರೆಗೆ ಬ್ರಿಟಿಷರು ಜರ್ಮನರ ೫೩ ಜಲಂತರ್ಗಾಮಿ ನಾವೆಗಳನ್ನ ಮುಳುಗಿಸಿದರು ೩೩ ಜಲಂತರ್ಗಾಮಿ ನಾವೆಗಳನ್ನು ನಾಶಪಡಿಸಿದರು ಎಂತ ಅಮೆರಿಕ ದವರ ಅಂಬಾಜು ಮಾಡಿರುತ್ತಾರೆ.

ಜರ್ಮನಿಯ ಬ್ರಿಟಿಷರ ೩೨,೦೦೦ ಸೈನಿಕರು ಶೆರೆಯಲ್ಲಿರುವರ ನೌಕಾವಳಿ ಸೇನಿಕರಲ್ಲಿ ೧೧೦೦ ಮಂದಿ ಜರ್ಮನರ ಸೆರೆಬಿದ್ದಿರವರೆಂತ ಮಿ ಟೆನ್ನಾಂಟ್‌ರವರು ಬ್ರಿಟಿಷ ಪಾರ್ಲಿಮೆಂಟ್ ಸಭೆಯಲ್ಲಿ ಹೇಳಿರುತ್ತಾರೆ

ನವೆಂಬರ ತಾ ೧೫ ವರೆಗೆ ಬ್ರಿಟಿಷ ಸೇನೆಯಲ್ಲಿ ಪ್ರಾಣಾಪಾಯ ಹೊಂದಿದ ಸೇನಿಕರ ಸಂಖ್ಯೆ ೫೧೦,೩೬೦ ಈ ಪೈಕಿ ೪೬೦ ಆಫೀಸರರು ವತ್ತ ೬೯,೩೬೩ ಸೇನಿಕರು ಪ್ರಾಣಾಪಾಯ ಹೊಂದಿದರು ಫ್ರಾನ್ಸ್ ರಣರಂಗದಲ್ಲಿಯೂ ೧೫೦೦ ಆಫೀಸರರು ಮತ್ತು ೩೧,೪೬೩ ಸೇನಿಕರು ಡರ್ಡನೆಲ್ಲಿನಲ್ಲಿಯೂ ಪ್ರಾಣಾಪಾಯ ಹೊಂದಿದರು ನೌಕಾವಳಿ ಸೇನೆಯಲ್ಲಿ ೨೯೦ ಆಫೀಸರರು ಮತ್ತು ೯೯೨೦ ಸೇನಿಕರು ಪ್ರಾಣಾಪಾಯ ಹೊಂದಿದರು ಎಂತ ಮಿ ಅಸ್ಕಿತರವರು ಹೇಳಿರುತ್ತಾರೆ.

ಸರ್ವಿಯನರು ಮೊನಸ್ಟೀರನ್ನು ಹಿಡಕೊಂಡಿರುವರು. ಜರ್ಮನರ ಮತ್ತು ಆಸ್ಟ್ರಿಯಾನರ ಸೇನೆಯು ಬಲ್ಗೇರಿಯಾನರ ಸಹಾಯಕ್ಕೆ ಹೋಗುತ್ತಿದೆ ಎಂಬ ವಾರ್ತೆ ಬಂದಿದೆ.

ತಾ. ೫ನೇ ದಶಂಬರ.

ಶತ್ರುಗಳ ಬಲಂತಗಾವಿ: ನಾವೆಯು ಬ್ರಿಟಿಷರ ಎರಡು ಹಡಗಗಳನ್ನು ಮುಣುಗಿಸಿರುತ್ತವೆ

ಅಮೇರಿಕ ಹಂಬರ್ಗ್ ಹಡಗ ಕಂಪೆನಿಯ ಹುದ್ದೆದಾರರು ಕಾನೂನಿಗೆ ವಿರೋಧವಾಗಿ ಜರ್ಮನರ ಯುದ್ಧ ಹಡಗಗಳಿಗೆ ಕಲ್ಲಿದ್ದಲು, ಇತ್ಯಾದಿಗಳನ್ನು ಒದಗಿಸಿಕೊಟ್ಟಿದ್ದಾರೆಂಬಾಗಿ ಆಪಾದಿ ಸಲ್ಪಟ್ಟಿದ್ದರಷ್ಟೆ. ಇವರ ವಿಚಾರಣೆಯು ನಡೆದು ಮೂರು ಮಂದಿ ಹುದ್ದೇದಾರರಿಗೆ ಒಬ್ಬೊಬ್ಬನಿಗೆ ಒಂದೂವರೆ ವರ್ಷಗಳ ಸಜೆಯೂ ಒಬ್ಬ ಹುದ್ದೇದಾರನಿಗೆ ಒಂದು ವರ್ಷದ ಸಜೆಯೂ ಕಂಪೆನಿಗೆ ಒಂದು ಡೊಲ್ಲರ್ ಜುಲುಮಾನೆಯೂ ವಿಧಿಸೋಣಾಗಿರುವದ ಆಪಾದಿತರು ಸುಪ್ರೀಮ್ ಕೋರ್ಟಿಗೆ ಆಪೀಲು ಮಾಡಿಕೊಳ್ಳಲಿಕ್ಕಿರುವದರಿಂದ ಅವರನ್ನು ಜಾಮೀನಿನ ಮೇಲೆ ಬಿಟ್ಟಿರುತ್ತಾರೆ ಜರ್ಮನ್ ಯುದ್ಧ ಹಡಗಗಳಿಗೆ ಗುಟ್ಟಾಗಿ ಸಾಮಾಗ್ರಿಗಳನ್ನು ಒದಗಿಸಿ ಕೊಡುತ್ತಿರ ವೆಂಬ ಅನುಮಾನದ ಮೇಲೆ ಇತರ ಕೆಲವರ ಮೇಲೆಯೂ ವಾರಾಂಟು ಹೊಗಿರತ್ತವೆ

ಜರ್ಮನಿಯ ಹಲ್ಲೆ ಎಂಬಲ್ಲಿರುವ ಮದ್ದುಗುಂಡುಗಳನ್ನು ತಯಾರಿಸುವ ಕಾರ್ಖಾನೆಯಲ್ಲಿ ಪಡಿತ ಅ ಬಗ್ಗೆ ಕೆಲವು ಸೂರ ಮಂದಿ ಸಕ್ತುಹೋಪತ್ರ ಬೆಂಕಿಕ್ ನಿಲ್ಸಾಯಿ ಎಂಬ ಸ್ಥಳ ಗಳಲ್ಲಿರುವ ಜರ್ಮನರ ಗಂಡಮದ್ದುಗಳ ಕಾರ್ಖಾನೆಗಳನ್ನು ಹಾರಿಸಿ ಛಿದ್ರವ ಪ್ರಯತ್ನ ನಡೆದಿದ್ದಿತು ಆದರೆ ಕಡೇ ಗಳಿಗೆಯಲ್ಲಿ ಈ ಸಂಗತಿಯು ಪ್ರಕಟವಾಯಿದಂದಿದ ಕೆಲವರನ್ನು ಕೈದು ಮಾಡಿರುತ್ತಾರೆ. ಕೆಲಸಗಾರರಲ್ಲಿ ಹುಬ್ಬರ ಅಸಂತೃಪ್ತಿಯೇ ಇದಕ್ಕೆ ಕಾರಣವಾಗಿರಬಹುದೆಂತ ಊಹಿಸಲ್ಪಟ್ಟಿರತ್ತದೆ.

ಸ್ವೈಸ್ ನವಿಯು ಎಡವಡವಲ್ಲಿ ರುಷ್ಯನರ ಕೋಂಪ್ರಗಳ ಶತ್ರುಗಳಲ್ಲಿ ವಿಶೇಷ ನಪ್ಪಡಿಸಿರ ವಮ ಶತ್ರುಗಳ ವಿಕ್ಕ ಪ್ಲಾಲಾಗಿ ಓಡಿಹೋಗಿರುವರು.

ಕೆಳದ ಬ್ರಕಟನಿವಾರ ಸರ್ವಿಯನರು ಮೊನಸ್ಟರನ್ನು ಬಿಟ್ಟು ಹೋಗಿರುತ್ತಾರೆಂತ ರೂಟರ್ಸ್ ವಾರ್ತೆಯಿಂದ ತಿಳಿದುಬಂದಿರತ್ತದ ತಾ ತನೆ ಸಾಯಂಕಾಲ ಎಲ್ಲಿ ವಿಮಾನದಾ ಮೊನಸ್ಟರನ್ನು ಪ್ರವೇಶಿಸಿದ ರೆಂತ ಆಥೆನ್ಸಿಂದ 'ಡೈಲಿಮೈಲ್' ಪತ್ರಿಕೆಗೆ ತಂತಿ ಬಂದಿರ ವದು

ಜರ್ಮನ, ಆಸ್ಟ್ರಿಯ ಬಲ್ಗೇರಿಯಾನರ ಆಫೀಸರರ ನೇತೃತ್ವ ಮೊನಸ್ಟರನ್ನು ಪ್ರವೇಶಿಸಿದ ವರು ಶತ್ರುಗಳ ಸೇನೆಯು ಮೊನಸ್ಟರನ್ನು ಪ್ರವೇಶಿಸಲ್ಪಟ್ಟಿದ್ದ ಸ್ವೀಕಾರಕಾರವಾ ಪ್ರಕಟಿಸಿರತ್ತಾರೆ

ಸ್ಟುಮಿಸಿದ್ದರಲ್ಲಿ ಬಲ್ಗೇರಿಯನರು ಬ್ರಿಟಿಷ ಎಡಸ್ಕ್ವಾಡ್ರನ ಸೇನೆಯ ಮೇಲೆ ಗ ಕಾಲ ವ್ಯಾಪ್ತಿಯ ಆದ ಕೂಡಲೆ ಬ್ರಿಟಿಷರ ಬಲ್ಗೇರಿಯನರಿಗೆ ವಿರೋಧವಾಗಿ ಬಲ್ಗೇರಿಯನರನ್ನು ಪ್ರವೇಶಿಸುವ ಪ್ರವರ್ತಿಸಿದೆ

ಇಟಲಿ ರಾಜ್ಯದಲ್ಲಿ ಕೆಲವರಾದ ಕೈದಿಯಾಗಿದ್ದ ಕೆಲವು ನವಿಯ ಶತ್ರುಗಳ ಓಡಿಹೋಗಿರುತ್ತಾರೆ ಇತರರಲ್ಲಿ ಸಂಂ ಸೈನಿಕರು ಸತ್ತಿರುವರು ಇನ್ನು ಕೆಲವರು ತಪ್ಪಿಸಿಕೊಂಡಿರುತ್ತಾರೆ

ಉತ್ತರ ಹಿಂದೂಸ್ಥಾನ.

ಈ ತಿಂಗಳ ಅಂತ್ಯದ ವಾರದಲ್ಲಿ ಮುಂಬಾಯಿಯಲ್ಲಿ ನಡಿಯಲಿಕ್ಕಿರುವ ವಿಶೇಷ ಸಂಗತಿಗಳಲ್ಲಿ ಒಂದು ಹಿಂದೂಗಳ ಸಹಪಂಕ್ತಿ ಭೋಜನವಾಗಿರುವದು. ಈ ಬಗ್ಗೆ ಒಂದು ಕಮಿಟಿಯು ಏರ್ಪಾಡಾಗಿದೆ ಸಂ ನಾರಾಯಣ ಚಂದಾವರಕಾರರವರು ಕಮಿಟಿಯ ಪ್ರೆಸಿಡೆಂಟರಾಗಿರುತ್ತಾರೆ. ಆಯಾ ಹಿಂದೂ ಮತಗಳ ಮಾನ್ಯ ಹೆಂಗಸರೂ, ಗಂಡಸರೂ ಈ ಭೋಜನಕ್ಕೆ ಆಮಂತ್ರಿಸಲ್ಪಡುವರು.

ಇದೇ ಕಳ್ಳದ ಎಪ್ರಿಲ್ ತಾರೀಕು ಶೀತಲ್ಲು ಸೂರಿ ಎಂಬಲ್ಲಿಯ ಕೊಳದಲ್ಲಿ ಸ್ನಾನ ಮಾಡುತ್ತಿದ್ದ ೧೬ ಮತ್ತು ೧೫ ವರ್ಷ ವಯಸ್ಸಿನ ಇಬ್ಬರು ಮಹಮ್ಮದೀ ಹುಡುಗಿಯರು ನೆಲೆ ತಪ್ಪಿ ಮುಳುಗುತ್ತಿರುವುದನ್ನು ಕಂಡ ಅಬ್ದುಲ್ ಜಲಲ್ ಎಂಬ ಒಬ್ಬ ಮಹಮ್ಮದೀ ವಿದ್ಯಾರ್ಥಿಯು ಕೊಳಕ್ಕೆ ಹಾರಿ ಇಬ್ಬರನ್ನೂ ಮೇಲಕ್ಕೆ ತಂದಿದ್ದನು. ೧೬ ವರ್ಷ ವಯಸ್ಸಿನ ಹುಡುಗಿಯು ಸತ್ತಿದ್ದಳು. ೧೫ ವರ್ಷ ವಯಸ್ಸಿನ ಹುಡುಗಿಯಲ್ಲಿ ಸ್ವಲ್ಪ ಜೀವಕಳೆ ಇದ್ದದರಿಂದ ಬದುಕಿಕೊಂಡಳೆ. ಈ ವಿದ್ಯಾರ್ಥಿಯ ಶೂರ ತನವನ್ನು ಒಂಗಾಳ ಸರಕಾರದವರು ಲಕ್ಷಕ್ಕೆ ತಂದು ಕೊಂತು ಲಂಡನಿನ "ರೋಯಲ್ ಹ್ಯೂಮನ್ ಸೊಸೈಟಿ" ಯಿಂದ ಅವನಿಗೆ ಕಂಚಿನ ಒಂದು ಪದಕವನ್ನೂ ಅವನ ಶೂರತನವನ್ನು ಸೂಚಿಸುವ ಒಂದು ಸರ್ಟಿಫಿಕೇಟನ್ನೂ ಕೊಡಿಸಿರುತ್ತಾರೆ

ಆಲಿಪುರ ಡಿಸ್ಟ್ರಿಕ್ಟಿನ ಗೋಕರ್ವ ಗ್ರಾಮದಲ್ಲಿ ಲಖುಂಧರಾಣಿಯವರು ಸುಮಾರು ೧೬ ಲಕ್ಷಾಯ ತಿರು ಧನಿಕನಾದ ಒಬ್ಬ ಬಂಗಾಳಿ ಚಿನಿವಾರನ ಮನೆಗೆ ನುಗ್ಗಿ, ಮನೆಯವರಿಗೆ ಹೊಡೆದು ಸುಮಾರು ೫೦೦೦ ರೂಪಾಯಿಗಳನ್ನು ಕೊಂತು ಹೋಗಿರುತ್ತಾರೆ

ಗ್ವಾಲಿಯೋ ಇಸವಿಯಲ್ಲಿ ಸೂರತಿನಲ್ಲಿ ನಡಿದ ಬ್ಯಾನೆ ರಾಷ್ಟ್ರೀಯ ಸಭೆಯ ಸ್ವಾಗತ ಕಮಿಟಿಯವರು ರೂ ೧೫೦೦೦ರನ್ನು ಈ ವರ್ಷದ ಬಂಬಾಯಿಲ್ಲಿ ಜರಗಲಿಕ್ಕಿರುವ ರಾಷ್ಟ್ರೀಯ ಸಭೆಯ ಕಮಿಟಿಯವರಿಗೆ ಕಳಿಸಿಕೊಟ್ಟಿರುತ್ತಾರೆ

ಮುಂಬಾಯಿಯ ಒನಿಯ ಸಾಹುಕಾರರಾದ ಸೇಟ್ ಲಲ್ಲುಭಾಯಿ ಜಮನಾದಾಸ್ ಇವರು ತಮ್ಮ ಜಾತಿಯವರಲ್ಲಿ ವಿದ್ಯಾವ್ಯಾಪನೆಯನ್ನು ಪ್ರಸರಿಸುವ ಉದ್ದೇಶದಿಂದ ೧೫೦೦೦ ರೂಪಾಯಿಗಳನ್ನು ದಾನಮಾಡಿರುತ್ತಾರೆ

ಯಧೇಪ್ಸ ಕೊಚ್ಚಿರಿಯು ಈಗ ತಟಸ್ಥರಾಜ್ಯಗಳಿಗೆ ಹೋಗುತ್ತಿರುವದರಿಂದ ಕೊಚ್ಚಿರಿಯ ಕೃಯವು ವಿರುತ್ತ ರಿರುವದು ಕೊಲಂಬದಿಂದ ಶಂಖಾ ತಾ ಹಿಂದಲ್ಲು ಸುಮಾರು ೧೫೦೦೦ ಟನ್‌ಗಿಂತಲೂ ಹೆಚ್ಚಿನ ಕೊಚ್ಚಿರಿಯು ಮೂರು ಪಡಗಳಲ್ಲಿ ಕರಡೇರ್‌ಗೆ ಹೋಗಿರುವದು ಬ್ರಾಜಿಲ್‌ಗೆ ಸಪ್ಲೈ ರಿತಾ ಬಂದ ನರಿಗೆ ಗ್ರೀಕ್‌ಲ್ಯಾಂಡಿಗೆ ಹಂಕ್ರುಪ್ ಪೀಪ್ ಕೊಚ್ಚಿರಿಯು ಹೊಲ್ಲಾಂಡಿಗೂ, ಸ್ಕಾಂಡಿನೇವಿಯಾ ಹಂಪ್ರಪ್ಟೇವೇಪ್ ಡೆನ್ಮಾರ್ಕಿಗೂ, ೪೦೦೦ ಹಂಪ್ರಪೇಪ್ ಸ್ಪೇನ್ ದೇಶಕ್ಕೂ ಹೋಗಿರತ್ತದೆ. ಈ ವರ್ಷ ಬಂದ ಸಪ್ಲೈ ಹಂಪ್ರಪ್ಟೇವೇಪ್ ಹೊಲ್ಲಾಂಡಿಗೂ, ಹಂಪ್ರಪ್ಟೇವೇಪ್ ಡೆನ್ಮಾರ್ಕಿಗೂ ಹೋಗಿತ್ತ ಸ್ಪೇನ್‌ಗೆ ಕೊಚ್ಚಿರಿಯು ಹೋಗಿರಲ್ಲ

ಇ. ಎಲ್ ಸೊರ್ನ್‌ಟನ್ ಐ ಸಿ ಎಸ್. ರವರಿಗೆ ಕಲ್ಕತ್ತೆಯ ಹೈಕೋರ್ಟಿನಲ್ಲಿ ಬೆರಿಷ್ಟರ ಉದ್ದಿಮೆ ನಡಿಸಲು ಅಪ್ಪಣೆ ದೊರಕಿರುತ್ತದೆ ಮಿ| ಥೊರ್ನ್‌ಟನ್‌ನವರು ಗಿಲ್ಲಾಗಿರಲ್ಲು ಮದ್ರಾಸ್ ಸಿವಿಲ್ ಸರ್ವಿಸಿಗೆ ಸೇರಿ ೧೯೦೯ ರಲ್ಲು ಡಿಸ್ಟ್ರಿಕ್ಟ್ ಜಡ್ಜರಾಗಿ ನೇಮಿಸಲ್ಪಟ್ಟು ಈಚೆಗೆ ರಜೆಯ ಮೇಲಿದ್ದರು.

ಇದೇ ತಾ. ೫ರಲ್ಲು ಜಪಾನ ಚಕ್ರವರ್ತಿನಿಯವರಿಗೆ ಒಂದು ಗಂಡು ಕೂಸು ಜನಿಸಿರುತ್ತದೆ.

ಸಿಮ್ಲದ ಎಲಾಯನ್ಸ್ ಬ್ಯಾಂಕಿನ ಲಾಹೋರು ಬ್ರೀಂಚಿನ ಏಜಂಟರಾದ ಮಿ| ಎ. ಪ್ರಿಸ್ಟ್ಲೈಯವರನ್ನು ತಾ. ೪ರಲ್ಲು ಯಾರೋ ಕೊಲೆಮಾಡಿರುವರು. ಲಾಹೋರಿನ ಲೋರೆನ್ಸ್ ಗಾರ್ಡನಿನಲ್ಲಿ ಕೆಲಸಮಾಡುವ ಕೂಲಿಯಾಳುಗಳು ಪ್ರಿಸ್ಟ್ಲೈಯವರ ಶವವನ್ನು ತೋಟದ ಹುಲ್ಲುಗಳ ಮಧ್ಯೆ ಕಂಡರು. ಇವರ ಕುತ್ತಿಗೆಯು ಕಡಿಯಲ್ಪಟ್ಟಿತ್ತು. ಮೈಮೇಲೆ ಗಾಯಗಳೂ ಇದ್ದವು. ಅರ್ಧ ಸೇದಿದ್ದ ಚುರುಟು ಶವದ ಹತ್ತಿರವೂ ವ್ಯತರ ಬೈಸಿಕಲ್ ಶವದ ಸ್ವಲ್ಪ ದೂರಕ್ಕೂ ಬಿದ್ದಿತ್ತು. ಈ ಕೊಲೆಯು ಯಾವ ಉದ್ದೇಶದಿಂದ ನಡೆಯಿತೆಂಬದನ್ನು ಗ್ರಹಿಸುವದು ಕಷ್ಟಸಾಧ್ಯವಾಗಿದೆ. ವ್ಯತರ ಜೇಬಲದಲ್ಲಿದ್ದ ರೂಪಾಯಿಗಳೂ ಕೃಯ ಬಾಳುವ ಇತರ ಸಾಮಾನುಗಳೂ ಇದ್ದಹಾಗೆಯೇ ಇದ್ದವು ಇದರಿಂದ ಪ್ರಿಸ್ಟ್ಲೈಯವರ ಹಣ ಸುಲಕೊಳ್ಳುವ ಉದ್ದೇಶದಿಂದ ಈ ಕೊಲೆಯಾಗಿದೆ ಎಂದು ಗ್ರಹಿಸಲಾಗುವದಿಲ್ಲ

ನಾಗಪುರದ ನಾರಾಯಣ ಗಣೇಶ ಚಾಪಟೆ ಎಂಬವರು ಹೆಂಗಸರ ಕ್ಷಯಿನ ಭವನವನ್ನು ಕಟ್ಟಿಸುವದಕ್ಕಾಗಿ ೧೫ ಸಾವಿರ ರೂಪಾಯಿಗಳನ್ನು ಕೊಡುವೆನೆಂಬದಾಗಿ ವಾಗ್ದಾನ ಮಾಡಿದ್ದು ತಪ್ಪಿದ್ದರೆಂದು ಹೆಂಗಸರ ಕ್ಷಯಿನವರು ರಾ| ಗಣೇಶಚಾಪಟೆಯವರ ಮೇಲೆ ವ್ಯಾಜಮಾಡಿದ್ದರು. ತನಗೆ ರಾವ್ ಬಹದ್ದೂರ್ ಎಂಬ ಬಿರುದನ್ನೂ ಆನರರಿ ಮೇಜಿಸ್ಟೇಟರ ಪದವಿಯನ್ನೂ ಕೊಡಿಸುವೆನೆಂದು ಟ್ರಸ್ಟಿಗಳ ತಂದೆ ರಾಮಕೃಷ್ಣರಾವ್ ಪಂತುಲರವರು ಸೆಳ್ಳು ಹೇಳಿ ಅಸೆಹುಟ್ಟಿಸಿ ಬಲವಂತದಿಂದ ಕೊಡಂಬಡಿಸಿದರೆಂದೂ ತಾನು ಬುದ್ಧಿಪೂರ್ವಕವಾಗಿ ಒಪ್ಪಲಿಲ್ಲವೆಂದೂ ಕಡೆಗೆ ಅವರ ಮಾತಿನ ಮೇಲಿನ ನಂಬಿಕೆಯು ತಪ್ಪಿಹೋಗಿ ತಾನು ಹಣ ಸಲಾಯಿಸಲಿಲ್ಲವೆಂದೂ ಚಾಪಟೆಯವರು ಸ್ಟೇಟಮೆಂಟ್ ಕೊಟ್ಟಿರುತ್ತಾರೆ. ಈಗಿನ ಕಾಲದ ದಾನಗಳ ಸ್ವಬಾವವು ಹೇಗಿದೆಂಬುದಕ್ಕೆ ಇದೊಂದು ದೃಷ್ಟಾಂತವು.

ಕೂಚ್‌ಬಿಹಾರಿನ ಪ್ರಿನ್ಸ್ ಹಿತೇಂದ್ರ ನಾರಾಯಣರವರು ವಾರ್ನ್ಸ್ ರಣರಂಗದಿಂದ ಹಿಂದೂಸ್ಥಾನಕ್ಕೆ ಹಿಂತಿರಿಗಿ ಬಂದಿರುವರು.

ಅಲ್ಲಹಾಬಾದಿನ ಬಟ್ಟಿ ಮಹಮ್ಮದೀ ಹೆಂಗಸು ಮತ್ತು ಅವಳ ಅಳಿಯನು ಕೂಡಿ ಖೂನಿಮಾಡಿದ್ದಾರಾ ಆಪಾದಿಸಲ್ಪಟ್ಟಿದ್ದರು. ಈ ಮೊಕದಮೆಯಲ್ಲಿ ೧ನೇ ಆಪಾದಿತಳೆ ಮಗನೇ ಕೊಲೆಯಾಗಿದ್ದನು. ಮಗನ ತಾಯಿಯ ಮನೆಯೊಳಗೆ ಪ್ರವೇಶಿಸಲಿಕ್ಕಿರುವಾಗ ತಾಯಿಯು ಆಟಂಕಿಸಿ, ಚೂರಿ ತೆಗೆದು ಅಳಿಯನ ಕೈಯ ಕೊಟ್ಟು ಮಗನಿಗೆ ಹೊಡೆಯಹೇಳಿದಳು. ಅಳಿಯನ ಹಾಗೆಯೇ ಮಾಡಿದನು. ಕೆಳಕೋರ್ಟಿನಲ್ಲಿ ಆಪಾದಿತರಿಬ್ಬರಿಗೂ ಪಾಶಿ ಶಿಕ್ಷೆಯು ವಿಧಿಸೋಣಾಯಿತು. ಆಪಾದಿತರು ಅಪೀಲು ಮಾಡಿಕೊಂಡಲ್ಲಿ ಅಲ್ಲಹಾಬಾದ್ ಹೈಕೋರ್ಟಿನವರು ಕೆಳಕೋರ್ಟಿನ ಶಿಕ್ಷೆಯನ್ನೇ ಕಾಯಮ್ ಮಾಡಿರುತ್ತಾರೆ.

ಮುಂಬಾಯಿಯಲ್ಲಿ ಯುದ್ಧ ಫಂಡಿಗೆ ಈ ವರೆಗೆ ೧೮ ಲಕ್ಷದ ೧೬ ಸಾವಿರ ರೂಪಾಯಿ ಕೂಡಿರುವದು.

ಹಿಂದೂ ಯೂನಿವರ್ಸಿಟಿ ಫಂಡಿಗೆ ಜಯಪುರದ ಮಹಾರಾಜರವರು ೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರೆ.

ಕಲ್ಕತ್ತೆಯ ರಾಜದ್ರೋಹ ಪಿತೂರಿ ಮಂಡಲಿಯವರು ಹೊಸ ವಿಧಾನದಲ್ಲಿ ಹಣಕೂಡಿಸಲು ಪ್ರಾರಂಭಿಸಿರುವರು. ಕೆಲವು ದಿವಸಗಳೆಂದೀಚೆಗೆ ಕಲ್ಕತ್ತೆಯ ಐಶ್ವರ್ಯವಂತರಾದ ಬಂಗಾಳಿಗಳಲ್ಲಿ ಕೆಲವರಿಗೆ "ಇಂತಿಷ್ಟು ಹಣವನ್ನು ಇಂಥಾ ಸ್ಥಳದಲ್ಲಿ ಸೊಜಿಸಿದ ತಾರೀಕಿನೊಳಗೆ ತಂದಿಡದಿದ್ದರೆ ನಿಮ್ಮ ಮನೆಗಳು ಸೂರೆಸುಳಿಗೆಯಾಗುವವು" ಎಂಬ ಪತ್ರಗಳು ತಲಪಿರುತ್ತವೆ.

ಮುಂಬಾಯಿಯಲ್ಲಿ ಇದೇ ದಶಂಬರ ತಾ. ೨೫ ಮತ್ತು ೨೭ರಲ್ಲು ಕೂಡಲಿಕ್ಕಿರುವ 'ಆಲ್ ಇಂಡಿಯಾ ಹಿಂದೂ ಕನ್ಫರೆನ್ಸ್'ಗೆ ಮಾನ್ಯಪಂಡಿತ ಮದನಮೋಹನ್ ಮಾಲವಿಯರನ್ನು ಅಧ್ಯಕ್ಷರಾಗಿ ಕೇಳಿಕೊಳ್ಳಿಬೇಕೆಂದಿರಾಗಿ ಕನ್ಫರೆನ್ಸಿನ ಸ್ವಾಗತ ಕಮಿಟಿಯವರು ನಿರ್ಣಯಿಸಿರುತ್ತಾರೆ.

ದಕ್ಷಿಣ ಹಿಂದೂಸ್ಥಾನ.

ಮದ್ರಾಸಿನ ಹೆಂಗಸರ ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿನಿಯರ ಬಗ್ಗೆ ರಾವ್ ಸಾಹೇಬ್ ಸಿ. ರಮಾನುಜ್ಜಮ್ ಚೆಟ್ಟಿಯವರು ಕೊಟ್ಟ ಮಾಹೆಯಾನ ರೂ. ೨೫೦ ಎರಡು ವೇತನಗಳನ್ನು ಸರಕಾರದವರು ಸ್ವೀಕರಿಸಿರುತ್ತಾರೆ.

ಮದರಾಸ ಗವರ್ನರ ಪ್ರಭುಗಳವರು ಪರಿವಾರ ಸಹಿತ ತಿರುಚಿನಾಪಳ್ಳಿ ಮತ್ತು ತಂಜಾವೂರು ಡಿಸ್ಟ್ರಿಕ್ಟ್‌ಗಳನ್ನು ಸಂದರ್ಶಿಸುವರೆ ತಾ. ೨೯ರಲ್ಲು ಮದ್ರಾಸಿನಿಂದ ಹೊರಟು ತಾ ೩೦ರಲ್ಲು ತಿರುಚಿನಾಪಳ್ಳಿಗೆ ಚಿತ್ತೈಸಿರುತ್ತಾರೆ.

ಕುಂಭಕೋಣದ ವ್ಯಾಸ ಆಚಾರಿ ಮತ್ತು ಅವನ ಪತ್ನಿ ಸರಸ್ವತಿಬಾಯಿ ಎಂಬ ದಂಪತಿಗಳು ಕಲ್ಲಿಕೋಟೆಯ ಪೋಸ್ತುಮಾಸ್ತೆರರಾದ ರಾ. ನರಸಿಂಗರಾಯರ ಮನೆಯಿಂದ ಆಭರಣಗಳನ್ನು ಕಳವು ಮಾಡಿದ್ದರಾಗಿ ಕಲ್ಲಿಕೋಟೆ ಟೌನ್ ಮೇಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಇವರ ವಿಚಾರಣೆಯು ನಡೆದು ಮೇಜಿಸ್ಟ್ರೇಟರು ದಂಪತಿಗಳಲ್ಲಿ ಒಬ್ಬೊಬ್ಬರಿಗೆ ಆರಾರು ತಿಂಗಳ ಸಜೆಯನ್ನು ವಿಧಿಸಿದರು. ಸರಸ್ವತಿಬಾಯಿಯು ತನಗೆ ಕ್ಷಮಾಪಣೆ ಮಾಡಬೇಕೆಂದು ವಿಜ್ಞಾಪಿಸಿಕೊಂಡಿರುವಳು. ವ್ಯಾಸಾಚಾರಿಗೆ ಮಂಗಳೂರು ಪೋಲಿಸ್ ಸುಪರಿಂಟೆಂಡೆಂಟರ ಮನೆಯಿಂದ ಆಭರಣ ಕಳವು ಮಾಡಿದ್ದ ತಕ್ಷೀರಿಗಾಗಿ ಈಮೊದಲೇ ಮಂಗಳೂರಲ್ಲಿ ಆರು ತಿಂಗಳ ಶಿಕ್ಷೆ ವಿಧಿಸೋಣಗಿತ್ತು.

ಸೀಲೋನಿನಲ್ಲಿ ಯೂನಿವರ್ಸಿಟಿ ಕಾಲೇಜನ್ನು ಸ್ಥಾಪಿಸುವ ಚಳವಳಿ ನಡಿಯುತ್ತಿದೆ.

ಮದ್ರಾಸ್ ಗವರ್ನರ್ ಪ್ರಭುಗಳವರು ತಿರುಚಿನಾಪಳ್ಳಿಯ ಆಯಾ ಸ್ಥಳಗಳನ್ನು ಸಂದರ್ಶಿಸಿಕೊಂಡು ತಾ. ೩೦ರಲ್ಲು ತಂಜಾವೂರಿಗೆ ಚಿತ್ತೈಸಿರುವರು.

ಮೈಸೂರು ಸರಕಾರದವರು ಕೋಲಾರ, ತಿವ ಮೊಗ್ಗ, ಚಿಕ್ಕಮಂಗಳೂರು, ತುಮಕೂರು ಈ ನಾಲ್ಕು ಪಟ್ಟಣಗಳಲ್ಲಿ ಕೈಗಾರಿಕೆಯ ಶಾಲೆಗಳನ್ನು ಸ್ಥಾಪಿಸುವ ದಕ್ಕೂ ಇದುವರೆಗೆ ಹಾಸನದಲ್ಲಿಯೂ, ಚಿತ್ರದುರ್ಗದಲ್ಲಿಯೂ ಸರಕಾರದಿಂದ ಸ್ವಲ್ಪ ಧನ ಸಹಾಯವನ್ನು ಹೊಂದಿ ನಡೆಯುತ್ತಿದ್ದ ಕೈಗಾರಿಕೆ ಶಾಲೆಗಳನ್ನು ಸಂಪೂರ್ಣವಾಗಿ ತಾವೇ ವಹಿಸಿಕೊಂಡು ನಡಿಸುವದಕ್ಕೂ ಅಪ್ಪಣೆ ಮಾಡಿದ್ದಾರೆ. ತಿಂಗಳಿಗೆ ೫೦-೧೦೦ ರೂಪಾಯಿ ವರೆಗಿನ ಸಂಬಳದ ಮೇಲೆ ೬ ಮಂದಿ ಸುಪರಿಂಟೆಂಡೆಂಟರುಗಳನ್ನು ಈ ಶಾಲೆಗಳ ಮೇಲ್ವಿಚಾರಣೆ ಬಗ್ಗೆ ನಿಯಮಿಸುವರು.

ಕೊಲೊಂಬದಲ್ಲಿರುವ ಒಬ್ಬ ವೈದ್ಯರು ಅತ್ಯಂತ ಕ್ರೂರ ಮರಣ ಸಾಧನವಾದ ಸಿಡಿಮದ್ದೊಂದನ್ನು ಕಂಡು ಹಿಡಿದು ಇಂಗ್ಲಿಷು ಯುದ್ಧ ಪಂತ್ರಿಮಂಡಲಿಗೆ ಈ ಸಂಗತಿಯನ್ನು ತಿಳಿಸಿರುವರು.

ಹೈದರಾಬಾದ್ ನಿಜಾಮರವರು ಸರ್. ಜ್ಹೋನ್ ಪ್ರೆಂಚರ ಗೌರವನೀಯ ಅಂಗರಕ್ಷಕರಾಗಿ ನೇಮಿಸಲ್ಪಟ್ಟಿರುವರು.

ಸರ್. ಜೆ. ಅಂಡರ್ಸನ್‌ರವರು ಸೀಲೋನಿನ ಗವರ್ನರರಾಗಿ ನೇಮಿಸಲ್ಪಟ್ಟಿರುವರು. ಇವರು ಇಂಗ್ಲಾಂಡಿನಿಂದ ಯಾವಾಗ ಹೊರಡುವರೆಂಬುದು ತಿಳಿದುಬರಲಿಲ್ಲ.

ಸೀಲೋನಿನ ಗವರ್ನರರಾಗಿದ್ದ ಸರ್. ರೋಬರ್ಟ್ಸ್ ಚಾಮರ್ಸ್‌ರವರು ಕಳೆದ ಶನಿವಾರ ಇಂಗ್ಲಾಂಡಿಗೆ ಹೊರಟು ಹೋದರು.

ಬೆಂಗಳೂರು:—ಕರ್ನಾಟಕ ಸಾಹಿತ್ಯ ಪರಿಷತ್ತನ್ನು ಸರಕಾರದಲ್ಲಿ ರಿಜಿಸ್ಟರು ಮಾಡಿಸಲಾಗಿಯಿದೆ. ಈ ಕೆಳಗೆ ನಮೂದಿಸಿರುವಂತೆ ಪರಿಷತ್ತಿನ ಸದಸ್ಯರುಗಳಿಂದ ಸವಂಬರ ತಿಂಗಳಲ್ಲಿ ಚಂದಾ ರೂಪವಿಯಾಗಿರುವದು.

ತಾ. ೨-೧೧-೧೫ರಲ್ಲಿ ಮ. ಸಿ. ಕೃಷ್ಣರಾವ್ ಬಿ. ಎ. ಬೆಂಗಳೂರು, ಇವರಿಂದ ರೂ. ೫೦; ತಾ. ೨-೧೧-೧೫ರಲ್ಲಿ ಮ। ಆರ್. ದೇಸಾಯಿ, ಎಂ. ಎ. ಧಾರವಾಡ ರೂ. ೧೮-೪-೦; ತಾ. ೧೩-೧೧-೧೫ರಲ್ಲಿ ಮ. ಎಚ್. ವೆಂಕಟರಮಣಯ್ಯನವರು ಬೆಂಗಳೂರು. ರೂ. ೪; ತಾ. ೧೫-೧೧-೧೫ರಲ್ಲಿ ಮ। ಎಚ್. ಕೆನ್ನಪಂತರಾವ್ ಚನ್ನಪಟ್ಟಣ. ರೂ. ೪; ತಾ. ೧೬-೧೧-೧೫ರಲ್ಲಿ ಮ। ಎ. ಭೀಮಾಚಾರ್ ಎಂ. ಎ. ಬಳ್ಳಾರಿ. ರೂ. ೪; ತಾ. ೧೯-೧೧-೧೫ರಲ್ಲಿ ಮ। ಕೆ. ರಾಮಸ್ವಾಮಯ್ಯಂಗಾರ್ ಶ್ಯಾವಿಗೊಂತ್ತು. ರೂ. ೧೦; ತಾ. ೧೯-೧೧-೧೫ರಲ್ಲಿ ಮ। ಹನುಮಾನ್ ನೈಸೂರು, ರೂ. ೧೫; ತಾ. ೧೯-೧೧-೧೫ರಲ್ಲಿ ಮ। ಎಂ. ಪಿ. ವಲ್ಲಭಯ್ಯಂಗಾರ್ ಕೋಲಾರ. ರೂ. ೪; ತಾ. ೨೯-೧೧-೧೫ರಲ್ಲಿ ಮ। ಕೆ. ಸುಂದರರಾವ್ ಬಿ. ಎ. ಬೆಂಗಳೂರು ರೂ. ೪; ತಾ. ೨೯-೧೧-೧೫ರಲ್ಲಿ ಮ। ಎ. ಆರ್. ಮಹಿಪಿ, ಸಿರಹಟ್ಟಿ, ಬೆಂಗಳೂರು. ರೂ. ೧೫. ಶ್ರೀಮತಿ ಲಾ ರೂ. ೧೫೦-೯-೦. ನವಂಬರ ಸ್ಯಾರಂಭದ ವರೆಗೆ ವಸೂಲಾಗಿದ್ದ ಚಂದಾ ರೂ. ೨೯೪; ದಶಂಬರ ಆರಂಭದ ವರೆಗೆ ವಸೂಲಾಗಿರುವ ಒಟ್ಟು ಹಣ ರೂ. ೪೧೯-೯-೦.

ದಕ್ಷಿಣ ಕನ್ನಡ.

The Canara Bank, Ltd, Mangalore.

ಕೆನರಾ ಬ್ಯಾಂಕು, ಲಿಮಿಟೆಡ್, ಮಂಗಳೂರು.

ನೋಟೀಸು.

ಈ ಬ್ಯಾಂಕಿನ ಪಾಲು ಮ್ಹಾಲೀಕರ ಮಹಾ ಸಭೆಯು (General meeting of Shareholders) ಇದೇ ದಶಂಬರ ತಾ. 18ನೇ ಶನಿವಾರ ಮಧ್ಯಾಹ್ನ ಘಂಟೆ 3ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಕೂಡಬೇಕಾಗಿ ಈ ಮೊದಲು ಕೊಟ್ಟ ನೋಟೀಸು ಪ್ರಕಾರ ಸದರೀ ಆಫೀಸಿನಲ್ಲಿ ಸ್ಥಳ ಸಂಕೋಚದ ಸಂಬಂಧ ಅನಾನುಕೂಲವಾಗಬಹುದಾಗಿ ಕಂಡುಬಂದುದರಿಂದ ಸದರೀ ಸಭೆಯು ಅದೇ ದಶಂಬರ ತಾ. 18ನೇ ಶನಿವಾರ ಮಧ್ಯಾಹ್ನ ಘಂಟೆ 3ಕ್ಕೆ ಕೆನರಾ ಹೈಸ್ಕೂಲಿನಲ್ಲಿ ಕೂಡಬೇಕಾಗಿ ಈ ಮೂಲಕ ತಿಳಿಸೋಣಾಗುತ್ತದೆ ವ ಪಾಲು ಮ್ಹಾಲೀಕರು ದಯಮಾಡಿ ಆ ದಿವಸ ಅಲ್ಲಿಗೆ ಬರಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಕೆನರಾ ಬ್ಯಾಂಕು, ಲಿಮಿಟೆಡ್,
ಮಂಗಳೂರು, ತಾ. 8-11-15.

K. Venkat Rao.
ಆಕ್ಟಿಂಗ್ ಸೆಕ್ರೆಟರಿ.

ಪುತ್ತೂರು:—ಇತ್ತಕಡೆ ಎರಡು ಮೂರು ದಿವಸಗಳಿಂದ ಭಲೆ ನಿವರೀತವಾಗಿರುವದು.

ಭೂರೆಪ್ಪ ಇಲಾಖೆಯವರು ರೆವಿನ್ಯೂ ಕಾಡುಗಳಿಂದ ಮರಗಳನ್ನು ಕಡಿಯುವರೆ ಪರ್ಮಿಟು ಕೊಡುವರೆ ನಿಷೇಧಿಸಿದರಿಂದ ಇಲ್ಲಿಯ ಜನರಿಗೆ ಬೇಕಾದ ಮರಗಳು ಸಿಕ್ಕದೆ ತೊಂದರೆ ಪಡುವರು. ಭೂರೆಪ್ಪ ಇಲಾಖೆಯವರು ಅಗ್ಯಾಸ್ಯೆ ಹೊಸೆ ಕಾಯಿದೆ ಜ್ಯಾರಿಗೆ ತರುವದು ಇದರ ಕಾರಣವಾಗಿರಬಹುದು. ಕನ್ನಡಜಿಲ್ಲೆಯ ಪರವಾಗಿರುವ ನ್ಯಾಯ ವಿಧಾಯಕ ಸಭೆಯ ಮೆಂಬರರಾದರೂ ಭೂರೆಪ್ಪ ಇಲಾಖೆಯವರಿಂದ ಜನರಿಗೆ ಉಂಟಾಗುವ ಸಂಕಷ್ಟಗಳ ಕುರಿತು ತಕ್ಕ ನಿಗಾಕೊಡುವದು ಹಿತವಾಗಿರುತ್ತದೆ.

ಮಂಗಳೂರು.

ಜಿಲ್ಲಾ ಸರ್ಜನರವರ ಸರ್ಕೀಟ್ ಕ್ರಮವಟ್ಟು:—ಇದೇ ದಶಂಬರ ತಾರೀಕು ೧೩ಲ್ಲು ಮಂಗಳೂರಿಂದ ಮೂಡು ಬಿದ್ರೆ ಬಂಟ್ವಾಳಕ್ಕಾಗಿ. ತಾ. ೧೪ಲ್ಲು ಮೂಡಬಿದ್ರೆಯಿಂದ ಕಾರ್ಕಳ; ತಾ. ೧೫ಲ್ಲು ಕಾರ್ಕಳ, ತಾ. ೧೬ ಕಾರ್ಕಳ ಬೆಳ್ತಂಗಡಿ ಮೂಡಬಿದ್ರೆಗಾಗಿ. ತಾ. ೧೭ರಲ್ಲು ಬೆಳ್ತಂಗಡಿ ಮಂಗಳೂರು ಬಂಟ್ವಾಳಕ್ಕಾಗಿ. ತಾ. ೨೦ ಮಂಗಳೂರು ಪುತ್ತೂರು. ಅಲ್ಲಿಂದ ಸುಳ್ಯ. ತಾ. ೨೧ ಸುಳ್ಯ ತಾ. ೨೨ ಸುಳ್ಯ ಪುತ್ತೂರು ತಾ. ೨೩ ಪುತ್ತೂರು ಉಪ್ಪಿನಂಗಡಿ ಅಲ್ಲಿಂದ ವಾಪಾಸು ಬಂದು ಮಂಗಳೂರಿಗೆ ಹಿಂತಿರುಗುವರು.

ಶ್ರೀ ಮಹಾಲಕ್ಷ್ಮೀ ಪ್ರಸಾದಿಕ ಶಿರಹಟ್ಟಿ ನಾಟಕ ಕಂಪೆನಿಯವರು ತಾ. ೧೧-೧೨-೧೫ನೇ ತನಿವಾರ ಪ್ರಖ್ಯಾತ ನಾಟಕವನ್ನು ಒಳ್ಳೇ ಸೀನಸೀನರಿಯೊಂದಿಗೆ ಮಾಡಿ ತೋರಿಸಿ ತೀರ್ಥಹಳ್ಳಿಗೆ ಹೋಗತಕ್ಕವರಿದ್ದಾರೆಂಬುದಾಗಿ ತಿಳಿಯುತ್ತೇವೆ.

ಇದೇ ತಾ. ೭ನೇ ಬೇಡ್ಕಿ ಹಳೇ ಸಾರಸ್ವತಾಲಯ ಕಟ್ಟೋಣದ ಹಿಂದಳಿಯ ಬಳ್ಳಲುತಿಟ್ಟುಗೆ ಹೊ

ಬಿದ್ದು ಆದರೊಳಗೆ ಕಟ್ಟಿದ್ದ ಒಂದು ಎಮ್ಮೆ ಸುಟ್ಟುಹೋಗಿರುವದು ತಾ ೭ನೇ ಮಧ್ಯಾನ್ಹ ಒಂದೂವರೆ ಘಂಟೆಗೆ ರಥಬೀದಿ ಹೂವಿನ ಮಾರ್ಕೆಟ್ ಹಿಂದಕಡೆಯ ತೋಟದಲ್ಲಿದ್ದ ಹಂಚುಮಾಡಿನ ಒಣ್ಣಲು ಕೊಟ್ಟಿಗೆಗೆ ಬೆಂಕಿತಗಲಿ ಸುಟ್ಟುಹೋಗಿರುತ್ತದೆ.

ಬೈಂದೂರಲ್ಲಿ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರಾಗಿದ್ದ ರಾ. ಯು ನರಸಿಂಹ ಕೆಣಿಯವರು ಒಂದು ತಿಂಗಳ ಪ್ರಿವಿಲೆಜ್ ರಜೆ ತಕ್ಕೊಂಡಿರುವದರಿಂದ ಕುಂದಾಪುರ ಡಿವಿಜನಲ್ ಆಫೀಸಿನ ಆಕ್ಟಿಂಗ್ ಎನೇ ಕ್ಲಾರ್ಕರೂ ಪಂಗಡರೂ ಲೇಂಡ್ ರಿಕೋರ್ಡ್ಸ್ ತಹಸಿಲ್‌ದಾರರ ಆಫೀಸಿನ ಕ್ಲಾರ್ಕರೂ ಆಗಿರುವ ರಾ| ಎಸ್| ನರಸಿಂಹ ಆಚಾರ್ಯರವರು ಬೈಂದೂರಿನ ಆಕ್ಟಿಂಗ್ ರೆವಿನ್ಯೂ ಇನ್ಸ್‌ಪೆಕ್ಟರಾಗಿ ನೇಮಿಸಲ್ಪಟ್ಟಿರುವರು.

ನಂದಿಗುಡ್ಡೆಯ ವೆ ಎಸ್ ಎಸ್ ಮಸ್ಸರೆಂಹ್ಞನವರು ಮನೆಯಿಂದ ತಾ ೨೫ ಗಿಂಗಿಯಲ್ಲು ಹೊಲ ಹೊತ್ತಿಗೆನೇ ೧೦೦ ರೂಪಾಯಿ (ಕೆಲವು ಕರೆನ್ಸಿ ನೋಟುಗಳು)ಕಳವಾಗಿತ್ತು. ಪೋಲೀಸಿನವರು ಇದೇ ನವಂಬರ ತಾ ೨೫ರಲ್ಲು ಜೆಂಸ್ಸ್ ಎಂಬವನನ್ನು ಕಳವಾದ ರೂಪಾಯಿ ನೋಟುಗಳ ಸಹಿತ ಕೈದುಮಾಡಿರುತ್ತಾರೆ.

ಕಾಣೆಯಾಗಿ ಹೋಗಿದ್ದ ರಾಮ ಬಂಡಾರಿಗಳ ಶವವನ್ನು ಕಂಡತಪಳ್ಳಿ ಸಮಾಜದವರು ಸಮಸ್ಥಿಪಲ್ ಮಹತ್ಮ ದೀಯರ ಶಾಲೆಯ ಎದುರು ಗದ್ದೆಯಲ್ಲಿ ಸ್ಯಾರಿಬ್ಯಾರಿ ಎಂಬ ಮಾಪಿಳ್ಳೆಯು ಇದ್ದ ಮನೆಯ ಹಿಂದುಗಡೆಯ ಜಗಲಿ ಕೆಳಗೆ ಯಾರೂ ತಿಳಿಯದಂತೆ ಹೊಂಡದಲ್ಲಿ ಹೂಣಿಟ್ಟಿದ್ದನ್ನು ಪೋಲೀಸಿನವರು ತಲಾಸಿಯಿಂದ ಅಗಿಸಿ ಹಿಡಿದಿರುವರು ಸ್ಯಾರಿಬ್ಯಾರಿ, ಕುಸೆನಬ್ಬ, ಕುಂಟಿಬಾವು ಮತ್ತು ಹಾಮದ್-ಈ ನಾಲ್ಕು ಜನರನ್ನು ಕೈದು ಮಾಡಿರಿಮಾಂಡಿ ನಕ್ಷಿಟ್ಟಿರ ತ್ತಾರೆ ಈ ಮನೆಯನ್ನು ಜಪ್ತಿಮಾಡುವಾಗ ರೂಪಾಯಿ ನೂರರ ಎರಡು ನೋಟುಗಳನ್ನು ಆ ಮನೆಯಲ್ಲಿದ್ದ ಮಾಪ್ಳಿ ಹೆಂಗಸರೊಬ್ಬಳು ಅಗಲು ಪ್ರಯತ್ನಿಸಿದಳು ಆದರೆ ಅವಳನ್ನು ಪೋಲೀಸು ಕಾರ್ಯದಲ್ಲಿ ಒಬ್ಬ ತಂಡಿನವ ಪತ್ತೆಮಾಡಿದ್ದ ಈ ನೋಟುಗಳ ಕಟ್ಟು ಆ ಹೆಂಗಸಿನ ಉಡಿಯಿಂದ ಬಿದ್ದುಹೋದ್ದರಿಂದ ಈನೋಟುಗಳನ್ನು ಪೋಲೀಸಿನವರು ಹಿಡಿದಿರುವರು ಇದೂ ರೂಪಾಯಿ ೨೦೦ಕ್ಕೆ ಮಿಕ್ಕಿದ ಐವಜು ಈ ಮನೆಯಲ್ಲಿ ಸಿಕ್ಕಿರುತ್ತದೆ ಪೋಲೀಸಿನವರು ತಲಾಸಿಯ ಪ್ರಯತ್ನವನ್ನೂ ಈ ದೊಡ್ಡ ಶರೀರದ ವಧ್ಯ ನಡಿದಿರುವ ಈ ಭಯಂಕರವಾದ ಕೊಲೆಯ ಪೈಕಿನ ವೃತ್ತಾಂತವನ್ನೂ ಕುರಿತ ವಿವರವಾಗಿ ಪ್ರಸ್ತಾಪಿಸುವರು ಮೊಕದ್ದಮೆಯು ಕೋರ್ಟ್ ಮುಂದೆ ಬಂದನಂತರವೇ ವಿಶೇಷವಾಗಿದೆ ಕುಂಬಳೆಯಿಂದ ಮಂಜೇಶ್ವರದಿಂದ, ರಾವ ಬಂಡಾರಿಯ ಕಾಗದಗಳು ಒಂದಿವೆ ಎಂತ ನಟಿಸಿ ಕೃತಕ ಕಾಗದಗಳನ್ನ ಕೈಯಲ್ಲಿ ಹಿಡಕೊಂಡು ಪೇಟೆಯಲ್ಲಿ ಹಲವು ಗೃಹಸ್ಥರಿಗೂ, ಪೋಲೀಸು ಅಧಿಕಾರದಲ್ಲಿ ಕೆಲವರಿಗೂ ತೋರಿಸುತ್ತ ಪೇಟೆ ಸವಾರಿ ಮಾಡಿದ ಸದ್ಗೃಹಸ್ಥರೂ ನೋಟುಗಳನ್ನು ಅಡಗಿಸಲು ಪ್ರಯತ್ನಿಸಿದ ಮಾಪಿಳ್ಳೆ ಹೆಂಗಸೂ ಮೊಕದ್ದಮೆಯ ತನಖಿ ಕಾಲದಲ್ಲಿ ಯಾವ ವೃತ್ತಿಯನ್ನು ಕೈಕೊಳ್ಳುವರೆಂಬುದನ್ನು ನೋಡಲಿಕ್ಕಿರುವದು.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯಲ್ಲಿ ಪಾಲುಗಳನ್ನು ಪಡೆದ ಮಲ್ಪೆ, ಉಡುಪಿ ಪ್ರಾಂತ್ಯಗಳ ಪ್ರಯಾಣಿಕರಲ್ಲಿ ಹಲವರಿಗೆ ಹಿಂದೂ ಟ್ರಾನ್ಸ್‌ಪೋರ್ಟು ಕಂಪೆನಿಯಲ್ಲಿ ಟಿಕೇಟುಗಳು ಕೊಡೋಣವಾಗುವದಿಲ್ಲವೆಂತ ದೂರು ಬಂದಿರುವದು ಟ್ರಾನ್ಸಿಟ್ ಕಂಪೆನಿಯು ಮಾಲೀಕರು ಈ ವಿಷಯದಲ್ಲಿ ತನಖಿ ನಡಿಸಿ ಪ್ರಯಾಣಿಕರಿಗೆ ತೊಂದರೆಗಳು ಉಂಟಾಗದಂತೆ ಮಾಡುವರಾಗಿ ನಂಬುತ್ತೇವೆ

ಕಳೆದ ವಾರ ವಂಗಳೂರು ಮುನ್ಸಿಪಾಲಿಟಿಯಲ್ಲಿ ೫ ಪ್ಲೇಗು ಮರಣಗಳಾದ್ದವು

ಬೈಂದೂರು:— ಬೈಂದೂರು ಪಟ್ಟಣದ ಮಧ್ಯ ಭಾಗದ ತೇರುಬೀದಿ ರಸ್ತೆಯು ಪೂರ್ವ ದಿಕ್ಕಿಗೆ ೫ ಮೈಲಿಗೆ ವೇಗ ಗಂಗಾನಾಡು ಪೋಷ್ಟಿಗೆ ಚಾಚಿಮಂತೆ ಒಂದು ಹೊಸ ಮಾರ್ಗವನ್ನು ಮಾಡಿಸುವ ಬಗ್ಗೆ ಕುಂದಾಪುರ ಲೋಕಲ್ ಬೋರ್ಡಿನವರು ರಾ ರಾ ಗಿಂಡಂನ್ನು ಮ ರಾ ಯ ಡ್ಡಾರೆ ಅಣ್ಣಪ್ಪಶೆಟ್ಟಿ, ಮ ರಾ ಪೆಂಕಟ್ರಮಣ ಹೊಳ್ಳರು ಮತ್ತು ಇತರ ಸ್ಥಳೀಕ ಮಿತರು ರಾ ಗಿಂಡಂನ್ನೂ ಸೆಂಕ್ಷನ್ ಮಾಡಿ ರಸ್ತೆಯ ಕೆಲಸವು ಕಳೆದ ಪಟ್ಟಂಬರ ತಿಂಗಳಲ್ಲಿಯೇ ಪ್ರಾರಂಭಿಸಿದ್ದಾರೆ ಇನ್ನು ಒಂದು ತಿಂಗಳೊಳಗಾಗಿ ಪೂರ್ಣ ಮಾಡುವರು.

ಬೈಂದೂರು ಟೌನ ರಸ್ತೆಗಳ ವಿಭಾಗಗಳಲ್ಲಿಯೇ ಇಲ್ಲಿಯ ಪರಸ್ಪರ ಸಹಾಯಕ ಸಂಘದ ಮೂಲಧನ ಯಿಂದಲೂ, ಸ್ವಂತ ಖರ್ಚಿನಿಂದಲೂ ಮ ರಾ ಯ ಡ್ಡಾರೆ ಅಣ್ಣಪ್ಪಶೆಟ್ಟಿ ಮತ್ತು ಮ ರಾ ಪೆಂಕಟ್ರಮಣ ಹೊಳ್ಳರು ದೀವಟ್ಗೆಗಂಬಗಳನ್ನು ಸ್ಥಾಪಿಸಿರುವದರಿಂದ ಟೌನಿಗೆ ಅಲಂಕಾರವಾಗಿರುವದಲ್ಲದೆ ಪ್ರಯಾಣಿಕರಿಗೂ, ಊರ ಜನರಿಗೂ ರಾತ್ರಿಕಾಲದಲ್ಲಿ ಸರಾಗವಾಗಿ ತಿರುಗಲಿಕ್ಕೆ ಅತ್ಯಂತ ಉಪಯೋಗಕರವಾಗಿರ ತ್ತದೆ

ಈ ಡಿಸ್ಟ್ರಿಯ ವೆಡಿಕಲ್ ಮತ್ತು ಸೆನಿಟರಿ ಆಫೀಸರರವರು ಇದೇ ತಾ ೭ನೇ ದಿವಸ ಇಲ್ಲಿಯ ಲೋಕಲ್ ಫಂಡ ಆಸ್ಪತ್ರೆಯ ಸಂದರ್ಶನೆ ಮಾಡಿ ಅದೇ ದಿನ ಇಲ್ಲಿಂದ ತೆರಳಿ ಹೋಗಿರುವರ

ಇಲ್ಲಿಯ ವಾರ್ತಿಕ ಮಂಡಿತದ ಪ್ರಥಮ ವಾರ್ಷಿಕ ವರ್ಧಂತಿ ಉತ್ಸವವು ಕಳೆದ ನವಂಬರ ತಾ ೨೫ನೇ ದಿವಸ ಸಾಂಘವಾಗಿ ಜರಗಿತು ಈ ಸಮಾಜವು ಸ್ಥಾಪನೆಯಾದ ಕಳೆದ ೧೯೧೪ನೇ ಇಸವಿ ನವಂಬರ ತಾ ೧೯ನೇ ದಿವಸ ಸರಿ ಸಮಾಜವು ಯೋಗ್ಯವಾಗಿ ನಡೆಯುವಂತೆ ಉತ್ಸಾಹವನ್ನು ತೋರಿದರೆ ಸಮಾಜದ ಬಗ್ಗೆ ಒಂದು ಚೈತ್ಯ ಮಂದಿರವನ್ನು ತಾಮಿಚ್ಛೂ ಕಟ್ಟಿಸಿ ಕೊಡುವೆವಾಗಿ ಮ| ರಾ ಕಟ್ಟರೂ ಪ ರಾ ಹೊಳ್ಳರೂ ವಾಗ್ದಾನಮಾಡಿದಂತೆ ವರ್ಧಂತಿ ದಿನ ಈ ಮಾತನ್ನು ಅವರ ನೆನಪಿಗೆ ತರಲಾಯಿತ ಬಾಡಿಗೆ ಕಟ್ಟೋಣದಲ್ಲಿರುವ ಈ ಸಮಾಜಕ್ಕೆ ಬಂದ ನವೀನ ವಂದಿರವನ್ನು ತವ್ಕ ಖರ್ಚಿ ಎಂಬಂ ಕಟ್ಟಿಸಕ ಬಗ್ಗೆ ಸದರಿ ಶೆಟ್ಟರು ರೂಪಾಯಿ ೫೦೦ ಹೊಳ್ಳರು, ರೂಪಾಯಿ ೫೦೦, ಈ ರೀತಿ ರೂಪಾಯಿ ೧೦೦೦ ಕೊಡುವರೆ ಒಪ್ಪಿ ಊರು ಮಧ್ಯವಿರುವ ಶ್ರೀ ಸೇನೇಶ್ವರ ದೇವಸ್ಥಾನದ ಎದುರು ಬೆಷ್ಯವಾದ ಜಾಗವನ್ನು ಅರಿಸಿರುವರು ಈ ಕಟ್ಟೋಣವು ಬರುವ ಮಾರ್ಚಿ ಅಖೈರ ಒಳಗಾಗಿ ಪೂರ್ಣವಾಗುವದು. ಒಂದು ಸರ ಸ್ವತೀ ಸಂಗ್ರಹವು ಕೂಡಾ ತೆರೆಯಲಾಗುವದು. ಈ ಪ್ರಕಾರ ಊರು ವಿಳಗೆಗೆ ಆಧಾರ ಸ್ಥಂಬರಾಗಿರುವ ಈ ಮಹಾನುಧಾವರಿಗೆ ಶ್ರೀ ಪರಮೇಶ್ವರನು ಆಯುಸ್ಸನ್ನು ಸಂಪತ್ತನ್ನೂ ಅನುಗ್ರಹಿಸಿ ಸದಾ ಆನಂದ

ಸ್ವಾರ್ಥಿಸುತ್ತೇ

ವಿವಿಧ ವಿಷಯ.

ಜಾವಾ ದ್ವೀಪದವರು ಇದುವರೆಗೂ ಕಬ್ಬನ್ನು ಹೇರಳವಾಗಿ ಬೆಳೆಯುವುದರಲ್ಲಿಯೂ, ಸಕ್ಕರೆಯನ್ನು ವಿಶೇಷವಾಗಿ ತಯಾರು ಮಾಡುವುದರಲ್ಲಿಯೂ ನಿರತರಾಗಿದ್ದರು. ಈಚೆಗೆ ಅವರು ಒಂದು ಕಮಿಟಿಯನ್ನು ಏರ್ಪಡಿಸಿ, ಅಲ್ಲಿ ಬೆಳೆಯುವ ಪದಾರ್ಥಗಳ ಸಂಬಂಧವಾಗಿ ಇನ್ನೂ ಹೊಸ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಆಲೋಚಿಸುತ್ತಿರುವರು ಮತ್ತು ಆ ವಿಚಾರದಲ್ಲಿ ಸರಕಾರದವರು ಏನೇನು ಏರ್ಪಾಡು ಮಾಡಬೇಕೆಂಬ ವಿಷಯವನ್ನು ಕೂಡ ಆಲೋಚಿಸುತ್ತಿರುವರು ಸದ್ಯಕ್ಕೆ ಅಲ್ಲಿ ಒಂದು ಕಾಗದದ ಕಾರ್ಖಾನೆಯನ್ನು ಸ್ಥಾಪಿಸುವುದಕ್ಕೆ ತಕ್ಕ ಪ್ರಯತ್ನಗಳು ನಡೆಯುತ್ತಿವೆ ಕಾಗದದ ತಯಾರಿಗೆ ಬೇಕಾಗುವ ಒಂದು ವಿಶೇಷ ಜಾತಿಯ ಬಿದಿರನ್ನು ಹಾಕಿ ಬೆಳೆಯಿಸುವುದಕ್ಕಾಗಿ ವಿಸ್ತಾರವಾದ ಜಮೀನುಗಳನ್ನು ಗೇಣಿಗೆ ಬಿಟ್ಟುಕೊಟ್ಟಿರುವರು ಈ ಹೊಸ ಕೈಗಾರಿಕೆಯ ವಿಷಯದಲ್ಲಿ ಅಲ್ಲಿಯ ಅನೇಕ ಸಾಗುವಳಿದಾರರೂ ಹಣವಂತರೂ ಶ್ರದ್ಧೆಯಿಂದ ಮುಂದೆ ಬರುತ್ತಿರುವರು.

ಜೀನಸು ಧಾರಣೆ.

ನಮ್ಮ ಹೊಸ ಅಕ್ಕಿ	5— 4—0	5—12—0	
ಗಾಡಿ ರಾತಿ ಹೊಸ ,,	5— 0—0	5— 3—0	
ಗುಡ್ಡು ,, ,,	5— 4—0	5— 7—0	
ಅವಲ್ ಬೆಲ್ಲಗೆ ,,	5—10—0	5—14—0	
ಗುಡ್ಡು ಬೆಲ್ಲಗೆ ,,	5— 6—0	5— 8—0	
ರಂಗೂನು ಬೆಲ್ಲಗೆ ಗೋಣಿ ೧೮	11— 4—0	10—12—0	
ಗೋದಿ ಗೋಣಿ ೧೮	13— 0—0	13— 8—0	
ಹುರುಳಿ ಗೋಣಿ ೧೮	6— 2—0	7— 0—0	
ಕಡಲೆ ಗೋಣಿ ೧೮ ಬೊಂಬ್ಳೆ	9— 4—0	10— 4—0	
ತೊಗರಿ ಗೋಣಿ ೧೮	12— 0—0	13— 0—0	
ಹೊಗರು ಬೇಳೆ ಗೋಣಿ ೧೮	12— 8—0	16— 8—0	
ಉದ್ದು ಗೋಣಿ ೧೮	11— 0—0	11— 8—0	
ಊರುಬೆಲ್ಲ ಖಂಡಿ ೧೮	... ...	66— 4—0	
ಉಪ್ಪು ಗೋಣಿ ೧೮	3— 0—0	3— 2—0	
ಪೊಪ್ಪು ಖಂಡಿ ೧೮	95— 0—0	105— 8—0	
ಪೊಪ್ಪುಹಿಂಡಿ ಖಂಡಿ ೧೮	20— 0—0	23— 0—0	
ಎಳ್ಳಿಂಡಿ ಖಂಡಿ ೧೮ ಬೊಂಬ್ಳೆ	20— 0—0	30— 4—0	
ಪೊಪ್ಪು ಎಣ್ಣೆ ಮಣ ೧೮	6—10—0	6—14—0	
ಎಳ್ಳೆಣ್ಣೆ ಮಣ ೧೮(ಳುರಾಸನ)	4— 6—0	4—12—0	
ಚಿಮಣಿ ಎಣ್ಣೆ ಪೆಟ್ಟಿಗೆಗಾರ	4— 9—0	5— 0—0	
ಮೋರಿಸ್ ಸಕ್ಕರೆ ಮಣ ೧೮	4—10—0	4—11—0	
ಕಾಫಿ ಖಂಡಿ ೧೮	240— 0—0	252— 0—0	
ಹೊಸಬಳಗೋಟು ಖಂಡಿ೧೮	94— 0—0	98— 0—0	
ಹೊಸ ಗೇರುಬೀಜ ಮುಡಿ ೧೮	... ...	2—13—0	
ಕಳ್ಳಿಡಿ ಖಂಡಿ ೧೮	... ...	50— 0—0	
ತಾಂಬ್ರ ತಗಡು ಮಣ ೧೮	... ...	20— 0—0	
ತಾಂಬ್ರ ಪಾತ್ರೆಗಳು ಮಣ ೧೮	... ...	22— 0—0	
ಜೀರಾ ಬೆಲ್ಲ ತೀರು ೧೮	... ...	18—12—0	
ಪಚ್ಚೆ ಹೆಸರು ಮಣ ೧೮	5—10—0	5—12—0	

ದಿನವಹಿ ಲೆಕ್ಕಾಚಾರ ಇತ್ಯಾದಿಗಳನ್ನು ಬರೆಯಲು ಆಗತ್ಯವುಳ್ಳ

1916ನೇ ವರುಷದ

ಪೊಕೆಟ್ ಡೈರಿಗಳು.

ಸಿವಿಲ್ ಮತ್ತು ರವಿನ್ಯೂ ಕೋರ್ಟುಗಳಿಂದ ಕೊಡಿಸಬೇಕಾದ ವಿವಿಧ ಫೀಸು, ಪೆನ್ಷನ ದರಗಳು, ಕ್ರಿಮಿನಲ್ ಕೋರ್ಟುಗಳ ಭತ್ತೆ ದರಗಳ, ಸಾಕ್ಷಿಗಾರರ ಪ್ರಯಾಣದ ಖರ್ಚಿಗೆ ಕೊಡುವ ಹಾಗುವ ದರಗಳ ಪಟ್ಟಿ, ವಕೀಲರ ರುಸುಂ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ಟ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟ್ಯಾಂಪ್ ಡ್ಯೂಟಿ, ಸೊಟ್ಟ, ವಿಲ್ಲಾಮು ಖಾತೆಗೆ ಚೀಟು, ರಿಜಿಸ್ಟ್ರೇಷನ್ ಇತ್ಯಾದಿಗಳ ಮಾದರಿ ಫೋರ್ಮ್ ಶಕಾರ ವೆಕಾಬಿಲಿ ಪಟ್ಟಿ ಓಪ್ಪಿಲಾಫೀಸಿನ ಕ್ರಮ, ಪರಸ್ಪರ ಸಹಾಯಕ ಸಂಘಗಳ ವಾಹಿತಿ, ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಹಿಂದೂ ಮುಹಮ್ಮದೀಯರು ಮತ್ತು ಕ್ರೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಗೊಂಡಿದೆ

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ ವರ್ತಕರಿಗೆ, ಇತರ ಎಲ್ಲಾ ವೃತ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೆಟ್ ಬುಕ್ಕು

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8

ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4.

ವ್ಯಾಪಾರಸ್ಥರಿಗೂ ರುಜು ತಕ್ಕೊಳ್ಳುವವರಿಗೂ ರಿಯಾಯಿತಿಯ ಪ್ರತ್ಯೇಕ ದರಗಳಿವೆ

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾಗದ, ಅವುಗಳನ್ನು ಜೋಡಿಸಿ ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ಡೈರಿಗಳು ಸಿಕ್ಕುವ ವಿಳಾಸ — ಶಾರದಾ ಭಾಷಖಾನೆ,
ರಥಬೀದಿ, ಮಂಗಳೂರು

NOTICE.

The Canara High School Day will be celebrated this year on the 26th December 1915 All 'OLD BOYS' of the School are requested to be present on the occasion and to make the Celebration a success

Canara High School
Mangalroe, 24-11-15

A Padmanabhaiya,
B A L T
President
School Day Committee

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಒ ಪಿ. ನಂಬ್ರ $\frac{142}{1915}$

1. ಏಶಾಜಿ.
2. ಜೈನಾಬಿ
3. ಬಿಜಾನಬಿ.

} ಮ್ಯಾನರರು

ಅಂಡಾರ ಸೆಯ್ಯದ ಉಸ್ಮಾನ್ ಸಾಹೇಬ—ಅರ್ಜಿದಾರ

ಮಂಗಳೂರು ಶಹಾರಿನಲ್ಲಿ ಮೃತಪಟ್ಟ ಮರಿಯಾಂಬಿಯ ಮೇಲೆ ಹೆಸರು ಕಾಣಿಸಿದ ಮೃತರ ಮಕ್ಕಳ ಸೊತ್ತುಗಳಿಗೆ ತನ್ನನ್ನು ಗಾರ್ಡಿಯನನಾಗಿ ನೇಮಿಸಬೇಕೆಂತ ಅರ್ಜಿದಾರನು ಅರ್ಜಿ ಕೊಟ್ಟಿರುವದರಿಂದ ಆಕ್ಷೇಪ ಇದ್ದವರು ತಾ. 16-12-15ಕ್ಕೆ ಮೇಲ್ಕಾನ್ನ 11 ಗಂಟೆಗೆ ಸದರಿ ಕೋರ್ಟಿನಲ್ಲಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

MANGALORE.
—12—1915.

A Varada Rao,
Vakil for Petitioner.

ಕೋಮಲ ವಿಲಾಸವು.

ಪ್ರಿಯರೇ,

ನಾವು ವಿದ್ಯಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲೆ ಬೇಡ. ಯಾಕಂದರೆ, ಅಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಸಿಂಗರಾಯರು ಮುಂಜಿಗಿಂತ ರೈಲ್ವೆ ಸ್ಟೇಶನಿಗೆ ಇನ್ನೂ ಹತ್ತಿರದಲ್ಲಿ ಇನ್ನೂ ವಿಶಾಲವಾದ ಉಪ್ಪರಿಗ ಮನೆ ತಕ್ಕೊಂಡಿದ್ದಾರೆ ಮುಂದಾಗಿ ಒಂದು ಕಾರ್ಡ ಬರೆದರೆ ಸ್ಟೇಶನಿಗೇ ಜನಕಳುಹಿಸಿ ನಿಮ್ಮನ್ನು ಆಮಂತ್ರಿಸುತ್ತಾರೆ. ಊಟಕ್ಕೂ ವಸತಿಗೂ ಮನೆಯಷ್ಟೇ ಸೌಕರ್ಯ ವಿರ್ಚೇನೂ ವಿಶೇಷವಿಲ ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ — ಸೋಮೇಶ್ವರ ನರಸಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು

ನೋಟೀಸು.

ದಕ್ಷಿಣಕನ್ನಡಾ ಜಿಲ್ಲಾ ಕಾಸರಗೋಡು
ಡಿಸ್ಟ್ರಿಕ್ಟ್ ಮುನ್ಸಿಪ್ ಕೋರ್ಟಿನಲ್ಲಿ.

ಕ್ರಮ ನಂಬ್ರ $\frac{7ಸ}{191}$

ಮೊದಿನೆ ಕೂಡಾ II ಜನರು — ವಾದಿರು.

ಮತ್ತು

ಪಟುಕಾರ ತೋಮ ಕೂಡಾ 5 ಜನರು — ಪ್ರತಿವಾದಿರು

ಕೋಟಿಪುರ ನಾಲ್ವೊರಪಾಟಿಲ್ ಎಂಬ ವಾದಿರ ಮತ್ತು 2 3ನೇ ಪ್ರತಿವಾದಿರ ತರ್ವಾಟು ಬಾಬ್ತು ಆಸ್ತಿಗಳ ಬಗ್ಯೆ 1ನೇ ಪ್ರತಿವಾದಿಯು 3ನೇ ಪ್ರತಿವಾದಿ ಅಂದು ಮತ್ತು ಮೃತಪಟ್ಟ ಮಮ್ಮದೆಯಿಂದ ಬರಿಸಿಕೊಂಡ ತಾ. 22—7—1910ನೇ ರಿಜಿಸ್ಟ್ರಿ ಇಳಿದಾರವಾರ ದಸ್ತವೇಜು ಮತ್ತು ಮೃತಪಟ್ಟ ಮಮ್ಮದೆಯು ಬೆಳ್ಳಂಬಾಡಿಗೆ ಬರಕೊಟ್ಟ ತಾ. 24—3—1908ನೇ ರಿಜಿಸ್ಟ್ರಿ ಕ್ರಯಕಾಣ ದಸ್ತೆವೇಜು ಸಹ ವಾದಿರ ಮತ್ತು 2 3ನೇ ಪ್ರತಿವಾದಿರ ತರ್ವಾಟಿಗೆ ಬಾಧಿಸತಕ್ಕದಲ್ಲವೆಂತ ಸ್ಥಾಪಿಸಿ ಆಸ್ತಿಯನ್ನು ತರ್ವಾಡಿನಗೋಸ್ಕರ ಸ್ವಾಧೀನ ಕೇಳಿ ವಾದಿರು ಮೇಲ್ಕಂಡ ವ್ಯಾಜ್ಯ ದಾಖಲು ಮಾಡಿರುವದರಿಂದ ವಾದಿರ ಮತ್ತು 2-3ನೇ ಪ್ರತಿವಾದಿರ ಕೋಟಿಪುರ ನಾಲ್ವೊರಪಾಟಿಲ್ ತರ್ವಾಟಿನ ಯಾವನೊಬ್ಬ ಮೆಂಬರನಿಗಾದರೂ ಸದರಿ ವಾಜ್ಯದಲ್ಲಿ ಕಕ್ಷಿಯಾಗಿ ಸೇರಬೇಕೆಂತ ಮನಸ್ಸು ಇದ್ದರೆ ಅಂಥವರು ಸದರಿ ನಂಬ್ರ ಪ್ರಥಮ ತನ್ನಿಗೆ ಇಡೋಣಾದ ತಾರೀಕು 14—12—1915ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿ ಕೊಟ್ಟು ಕಕ್ಷಿಯಾಗಿ ಸೇರಿ ವ್ಯವಹರಿಸಿಕೊಳ್ಳತಕ್ಕದೆಂತ ಸದರಿ ಕೋಟಿಪುರ ನಾಲ್ವೊರ ಪಾಟಿಲ್ ತರ್ವಾಟಿನ ಎಲ್ಲಾ ಮೆಂಬರರಿಗೆ ಈ ಮೂಲಕ ತಿಳಿಯಪಡಿಸಿರುತ್ತದೆ.

V. Kunhiraman Nair.
District Munsif.

ಕನ್ನಡ ಕಥೆ ಪುಸ್ತಕಗಳು.

ಶುಕಸಪ್ತತಿ ೭೦ ಕಥೆಗಳು ಸಚಿತ್ರ	೨	೦	೦
ಸಚಿತ್ರ ವಿದ್ಯಾಮಂಜರಿ ಕಥೆಗಳು	೧	೪	೦
,, ಭಟ್ಟಿವಿಕ್ರಮಾದಿತ್ಯರಾಯನ ಕಥೆ	೧	೪	೦
ಸಚಿತ್ರ ರಾಮಾಯಣ ಕಥಾಸಂಗ್ರಹ ಗ್ಲೇಜ್ ಅವ್ವಲ್	೧	೪	೦
,, ರಫ್ ದುಯ್ಯಂ	೦	೧೨	೦
ಚೈಮಿನಿ ಭಾರತ ಕಥಾಸಂಗ್ರಹ	೦	೧೨	೦
ಕೃಷ್ಣಚರಿತ್ರಾಮೃತ	೦	೧೦	೦
ಭಾರತ ಕಥಾಸಂಗ್ರಹ	೦	೬	೦
ಪ್ರಭಾವತಿ ಶುಕಮಂಜರಿ ಕಥೆ	೦	೫	೦
ಬಕಾವಳಿ ಕಥೆ	೦	೬	೦
ಮದನಮೋಹನರಾಜ ಚರಿತ್ರೆ	೦	೬	೦
ಚಂಚಲಕುಮಾರಿ ಕಥೆ	೦	೪	೦
ಸಾಧ್ವಿ ಗುಣಮಂಜರಿ ಕಥೆ	೦	೫	೦
ಪತಿವ್ರತಾಮಹಾತ್ಮೆ ಕಥೆ	೦	೬	೦
ಹಂಳ್ಳಿಂದ್ರನ ಕಥೆ	೦	೬	೦
ನೆಳದಮಯಂತಿಯರ ಕಥೆ	೦	೬	೦
ಬತ್ತೀಸಪುತ್ಥಳಿ ಕಥೆ	೦	೫	೦
ಹುಚ್ಚಿಮ್ಮುಂಡಿಗಳ ಕಥೆ	೦	೬	೦
ಹಾಸ್ಯಸುಂದರಿ ಶುಕವಾಣಿ ಕಥೆ	೧	೪	೦
ಮಂಜುಘೋಷಾ ಶೃಂಗಾರಾದ್ಭುತಕಥೆ	೦	೧೨	೦
ಹಾತೀಮತಾಯಿ ಕಥೆ	೦	೧೨	೦

ಪುರಾಣಗಳು.

ಕೊರವೆರಾಮಾಯಣ ಗ್ಲೇಜಿವ್ವಲ್	೨	೦	೦
,, ದುಯ್ಯಂ	೧	೪	೦

ತೊರವೆ ರಾಮಾಯಣ ಸೀಯಂ	೧	೦	೦
ಚೈಮಿನಿ ಭಾರತ ಗ್ಲೇಜಿವ್ವಲ್	೧	೪	೦
,, ದುಯ್ಯಂ	೦	೧೦	೦
,, ಸೀಯಂ	೦	೬	೦
೧೪ ಪರ್ವ ಭಾರತ	೨	೪	೦
೧೨ ಸ್ಕಂಧ ಭಾಗವತ ಗ್ಲೇಜಿ	೫	೦	೦
,, ದಯ್ಯಂ	೪	೦	೦

ಪದಗಳು.

ಪದಕರ್ತೃಕರ ಗಿನೆ ಭಾಗ	೧	೦	೦
ಪುರಂದರದಾಸರ ಕೀರ್ತನೆ	೦	೬	೦
,, ಬೆಂಗಳೂರು	೦	೬	೦
ಕನಕದಾಸರ ಕೃತಿ ಪದಾಸಂಗ್ರಹ	೦	೩	೦
ಗೀತಶತ್ರತ್ನ ಮಂಜರಿ	೦	೪	೦
ಗೀತಕಲ್ಪ ಕಾಂಡ	೦	೫	೦
ಗೀತಿಕಾ ವಿವರಣೋದ್ಧಾರ	೦	೩	೦
ಗೀತಿಕಾ ತರಂಗಿಣಿ	೦	೪	೦
ಬಾಲಲತಿಯುವ ಪದ	೦	೦	೬
ಕೃಷ್ಣ ತಿನಿವ ಕಾಂಡು	೦	೦	೬
ಕೃಷ್ಣ ವಿಜಯ ಕೀರ್ತನೆ	೦	೬	೦
ದೊಡ್ಡಪರ್ವ	೦	೫	೦
ಲಕ್ಷ್ಮೀತೊಂಭಾನೆ	೦	೧	೬
ಪಾಡವಗೀತೆ	೦	೧	೬
ವಿಷ್ಣುಶತನಾಮ (ಕ್ಲೋಕ)	೦	೨	೦
ಸಾರ್ವೋಸಿಯಂಸ್ಯ ಗೀತೋಪಿ	೦	೪	೦

ಇವುಗಳಲ್ಲದೆ ಇನ್ನೂ ಅನೇಕ ತರದ ಕನ್ನಡ, ಪರಿಸಾರಿ, ಸಂಸ್ಕೃತ ಪುಸ್ತಕಗಳೂ, ಹೇರಾಯಿಲ್, ಸೆಂಟ್ಸ್, ಅತ್ತರ್‌ಗಳೂ, ಉತ್ತಮ ತರದ ಊದುಬತ್ತಿಗಳೂ, ಅರಗಜ, ಫಿಶ್ಷ, ದಶಾಂಗ, ಗಂಧದಪುಲ್ಲ ಮೊದಲಾದ ಸುಗಂಧದ್ರವ್ಯಗಳೂ ಬಹಳ ಕಮ್ಮಿ ಕ್ರಯಕ್ಕೆ ಮಾರಾಟಕ್ಕೆ ಸಿದ್ಧವಾಗಿವೆ ವ್ಯಾಪಾರಸ್ಥರಿಗೆ ಕಮಿಶನ್ ಕೊರಿಯುವದು. ಅರ್ಥಾಣೆ ಸ್ಟಾಂಪು ಕಳುಹಿಸಿದರೆ ದೊಡ್ಡ ಕ್ಯಾಟಲಾಗನ್ನು ಕಳುಹಿಸುತ್ತೇವೆ. ಬೇಕಾದವರು ಈ ಕಳಗಣ ವಿಳಾಸಕ್ಕೆ ಬರೆಯಿರಿ.

ಶ್ರೀ ರಾಮಾಕೃಷ್ಣ ಸೀಲಾದ
ರಪಟಿ ವಿ ವಂಗಳೂರು

ಔಷಧಗಳು.

ಮಹಾಮದನ ಕಾಮೇಶ್ವರಿ ಲೇಹ:— ಮಾ ರನಷ್ಟಿ ಕೆಲಸ ಮಾಡುವವರೂ, ಲೇಖಕರೂ, ವೃತ್ತ ಇಂದ್ರಿಯ ಶಕ್ತಿಯ ಅಜೀರ್ಣ ಎನೆನೋವು, ಶರೀರಗಳ ಪುಷ್ಟಿತದಿಂದಾದ ನಿಶ್ಶಕ್ತಿ ಮೊದಲಾದ ಪ್ರಕೃತಿ ಗಳವನ್ನು ಇದನ್ನು ಸಂಪೂರ್ಣವಾಗಿ ಧಾತುಪುಷ್ಟಿಯಾಗಿ ಮುಖವು ಕಾಂತಿ ಹೊಂದುವದು ಸೇವನಾ ಕ್ರಮ — ಅಭ್ಯಾಸವುಳ್ಳವರು 1 ಪಾವಲಿ ತೂಕ ಯಾ ಹೊತ್ತಾರೆ ಬರಿಹೊಟ್ಟೆಯಲ್ಲಿ ತೆಗೆದುಕೊಳ್ಳುವದು 1 ಆಣೆ ತೂಕ ರಾತ್ರೆ ಊಟಾದ ಮೇಲೆ ಸೇವಿಸಿದರೆ ಮಲಬದ್ಧತೆ ಪರಿಹಾರವಾಗುತ್ತದೆ

1 ಶೀಸಿನ ಡಬ್ಬಿಗೆ ಕ್ರಯ 2—0—0

ಚಂದ್ರೋದಯಾವರ್ತಿ:— ಕಣ್ಣಿಗೆ ಬೀಜದ ಪೊಡಿಸಿದ್ದರೆ ಬೆಳದ ದರ್ಮಾಂಸ, ತಿಮಿರ, 3 ವರ್ಷದ ಹೂವು, ಇತಳುಕಲ್ಲು, ತಾಚಚಿಂದು ಗುಣ

ಕ್ರಯ. ರೂ 0—1'—0

ಮಹಾಜ್ವರಾಂಕುಶ:—ದಿನವಹಿಕ್ಕೊನೆತ್ತಿದ್ರಿಂದ, ತೃತೀಯ ಚಾತುರ್ಥಿಕ ಜ್ವರಗಳ ಮೇಲೆ ರಾಮಬಾಣ ಡಜನ್ ಕ್ರಯ 0—9—0,

ಮೇಹಮುದ್ಗರವಟಿ.—20 ನಮೂನೆಯ ಪ್ರಮೇಹ, ಧಾತು ದೌರ್ಬಲ್ಯ ಮೂತ್ರಕೃಚ್ಛ್ರ, ಅಶ್ಮರಿ ಕಾಮಲೆ, ಪಾಂಡು ಗುಣ ಡಜನ್ 1ಕ ಕ್ರಯ 1—2—0

ಕೊಲೆರಾ ಯಾನೆ ವಾಂತಿಭೇದಿ ಗುಟಿಕೆ:—ಒಂದೆರಡು ಗುಟಿಕೆಯಿಂದ ವಾಂತಿಭೇದಿ ಕೂಡಲೇ ಗುಣ. ಡಜನ್ ಗುಟಿಕೆಯ ಕ್ರಯ 0—12—0

ಚಂದನಾಸವ:—ಮೇಹ, ಶುಕ್ಲಧಾತು ನಷ್ಟತ್ವ ಗುಣ ಬಾಟ್ಲಿಗೆ ರೂ 1.

ನಮ್ಮ ಔಷಧಾಲಯದಲ್ಲಿ ಅನೇಕ ವಿಧದ ಬೇರೆ ಔಷಧಗಳು ದೊರೆಯುತ್ತವೆ ಅಪೇಕ್ಷೆಯು ಳ್ಳವರು ಕೆಟಲಾಗು ತರಿಸಿಕೊಳ್ಳಬಹುದು. ಮೇಲಿನ ಔಷಧಗಳು ಬಹಳವಾಗಿ ಖರ್ಚಾಗುವದರಿಂದ ತ್ರಯವನ್ನು ಕಡಿಮೆ ಮಾಡಿರುತ್ತದೆ

ವಿಳಾಸ:— ಮೂಲ್ಕಿ ಗಣಪಯ್ಯ ಎಂಡ್ ಸನ್ಸ್,
ನೇಟಿವ್ ಡಾಕ್ಟರ್ಸ್,
ತೇರಬೀದಿ ಮನೆ ನಂಬ್ರ 268ನೇ, ಮಂಗಳೂರು.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ

ಪಿ. ಸುಬ್ಬರಾಯಿಯವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ತಂಬರ್:— ಈ ಸುಗಂಧದ್ರವ್ಯವನ್ನು ಸ್ವಲ್ಪ ತೆಗೆದುಕೊಂಡು ಧೋತ್ರಗ ಉಡಪುಗಳಿ, ಮೊದಲಾದ ವಸ್ತ್ರಗಳಿಗೆ ಹಾಕಿದರೆ ಸುವಾಸನೆ ಕೊಡುವದಲ್ಲದೆ, ಬಟ್ಟೆಗಳಿಗೆ ಹುಳ ವಂತಾ ಕ್ರಿಮಿಗಳು ಸೇರದೇ ಇರುತ್ತದೆ ಶರೀರಕ್ಕೂ ಮುಖಕ್ಕೂ ಹಚ್ಚಿಕೊಂಡರೆ ಮುಖದಲ್ಲಿಯೂ ಶರೀರದಲ್ಲಿಯೂ ಉಂಟಾಗುವ ಕಜ್ಜಿತುರಿ ಮೇ ಸಂಬಂಧವಾದ ಹುಳಿಕನ್ನು ಮೊದಲಾವುದು ಹೋಗಲಾಡಿಸಿ ತೇಜಸ್ಸನ್ನು ಉಂಟುಮಾಡುತ್ತದೆ ತಾಂಬೂಲಾದಿ ಸಂಗಡ ಉಪಯೋಗಿಸಬಹುದು. ಇದನ್ನೇ ಸ್ವಲ್ಪ ತೆಗೆದು ಸ್ನಾನ ಮಾಡುವಾಗ ಬಿಸಿನೀರಲ್ಲಿ ಕೆರೆಸಿದರೆ ಸೀಗೆಕಾಯಿ (ಪನ್ನೀರು) ಗುಲಾಬಿಯಂತೆ ಪರಿಮಳಿಸಿ, ಮನಸ್ಸಿಗೆ ತೃಪ್ತಿಕರವನ್ನು ಕೊಟ್ಟು ದೇಹಶ್ರಮವನ್ನು ನಿವಾರಣೆಮಾಡುತ್ತದೆ. ಡಬ್ಬಿ 1ಕ್ಕೆ 8 ಆಣೆ, 1 ಮೊದಲು 12 ಡಬ್ಬಿಗಳವರಿಗೆ ವಿ ಪಿ 5 ಆಣೆ ಪ್ರತ್ಯೇಕವು.

ಇಂಡಿಯನ್ ಪೆಟಲ್ಡಸ್ಟ್:— ಈ ವಸ್ತು ಮನೋಹರವಾದ ಸುಗಂಧ ಒಂದು ಪೌಡ್ಡವು ನೀವು ವಸ್ತ್ರವಿಡಬೇಕಾದ ಪೆಟ್ಟಿಗೆಯಲ್ಲಿಯಾಗಲಿ ಇಟ್ಟರೆ ನಿಮ್ಮ ಎಲ್ಲಾ ಉಡುಪುಗಳಿಗೆ ಬಹಳ ದೀರ್ಘಕಾಲದವರೆಗೆ ಘುಳಿಯುವ ಸುವಾಸನೆಯನ್ನು ಕೊಡುವದು ಮತ್ತು ನಿಮ್ಮ ವಸ್ತ್ರವನ್ನು ಕ್ರಿಮಿಗಳ ಅನಾಹುತದಿಂದ ಕಾಪಾಡುವ ಶಾಂತವಾದ ಮತ್ತು ಇಂಪಾದ ಪರಿಮಳದಿಂದ ಆಪ್ರಮೇಯವಾಗಿದ್ದು ಆದರ ಮೃದು ಸುಗಂದಕ್ಕೂ ಸ್ಥಿರವಾದ ಪರಿಮಳಕ್ಕೂ ಅನೇಕರಿಂದ ಹಾರೈಸಲ್ಪಡುವದು. ಈ ವಸ್ತುವಿಯವಾದ ಸುಗಂದವು ಪರಿಮಳಾತಿಶಯದಿಂದಲೂ, ಸುಗುಣ ರಮ್ಯತೆ ಎಲ್ಲೂ ಸ್ಥಿರವಾಗಿನಿ ತಿಂಗಳು ದೂರವಾಗಿಯೂ, ವಿಸ್ತಾರವಾಗಿಯೂ ವ್ಯಾಪಿಸಿ ಕೂಡದೆ ಈ ವಿಶೇಷವಾದ ಕ್ರಿಮಿನಾಶಕವೂ ಅಪೂರ್ವ ಗುಣಗಳಿಂದ ಕೂಡಿದ ವಿಷದನೆ ಸ್ವಚ್ಛಕಾರಿಯೂ ಆಗಿರುವದು ಮತ್ತು ಈಗ ಇರುವವುಗಳಲ್ಲಿ ಅತ್ಯಂತ ಶಕ್ತಿ ಕ್ರಿಮಿನಾಶಕ ಔಷಧವಲ್ಲದೆ ಹಿಂದೂಸ್ಥಾನದ ಅತ್ಯಂತ ಮನೋಹರವಾದ ವಿವಿಧ ಪುಷ್ಪಗಳ ಸಾರವು ಕ್ರಯ ಪೌಂಡ್ಗೆ 1ಕ್ಕೆ 4 ಆಣೆಗಳು.

ನಸ್ಯಗಳಿಗೆ ವಿಲಾಸಹಾಕುವ ಕೆಡದಂಧಾ ಶಾಯಿ:—ಹರಳೆ, ಉಣ್ಣೆ ಲೆಂಪ್ಡಿ ಮೊದಲಾದ ವಸ್ತ್ರಗಳಿಗೆ ಇದರಿಂದ ವಿಲಾಸಹಾಕಿದರೆ ಎಷ್ಟಾವರ್ತಿ ತೊಳೆದರೂ ಪುನಃನಾಮಾತ್ರವೂ ವಿಲಾಸವು ಮಾಸಾಗಲೂ ಕೆಡುವದಿಲ್ಲ. ಈ ಶಾಯಿಯಿಂದ ವಿಳಾಸ ಹಾಕಿದಲ್ಲಿ ವಸ್ತ್ರಗಳು ಕಳವುಹೋಗದೆ ಇರುವಂತೆ ಕಾಯುವದು. ಕ್ರಯ ಬಾಟ್ಲಿ 1ಕ್ಕೆ ೪ ಆಣೆ 12ಂದ 6 ಬಾಟ್ಲಿಗಳಿಗೆ ವಿ ಪಿ ಖರ್ಚು 5 ಆಣೆಗಳು ಬೀಳುವದು.

☞ ಈ ಪ್ರಾಂತ್ಯದವರಿಗೆ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲ ನಾವುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಳುನಲ್ಲಾಗಲೀ ಸ್ಪುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.
P. SUBBA ROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀ ವೆಂಕಟೇಶ ಪೆರುಮಾಳ್ ದೇವಸ್ಥಾನ,
ಸನ್ನಧಿ, ತಂಜಾವೂರು.

ಪ್ಲೇಗನ್ನು ನಿರ್ಮೂಲಮಾಡಿ ತಿರುಗಿ ತಲೆದೋರದಂತೆ ಮಾಡತಕ್ಕ
ಸಿದ್ಧೌಷಧಗಳು.

ಇಂಡಿಯಾ, ಬರ್ಮಾ, ಸಿಲೋನ್, ಏಡನ್ ಮೊದಲಾದ ದೇಶಗಳಲ್ಲಿ 17 ವರ್ಷಗಳಿಂದ ಅನೇಕ ಪ್ರಾಣಿಗಳನ್ನು ಪ್ಲೇಗ್ ಎಂಬ ಮಹಾಮಾರಿ ವ್ಯಾಧಿಯಿಂದ ಕಾಪಾಡಿದ



ಹೈಮಾದಿ ಪಾನಕ.

ಹೈಮಾದಿ ಪಾನಕವನ್ನು ಪ್ರತಿನಿತ್ಯವೂ ಹೇಗಿದಪ್ರಕಾರ ತಕ್ಕೊಳ್ಳುವದರಿಂದ ಪ್ಲೇಗ್ ಜ್ವರವು ಹತ್ತರ ಬರುವದಿಲ್ಲ. ವಿಷಮಜ್ವರ, ಶೀತಜ್ವರ ಇವುಗಳನ್ನು ತಪ್ಪದೆ ಗುಣಮಾಡುತ್ತದೆ.

ಬೆಲೆ 6 ಔನ್ಸ್ ಸೀಸೆ 1ಕ್ಕೆ ರೂ 1. ಜಿಕ್ಕ ಸ್ಯಾಜು ಆಣೆ 10. ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ.

ಶತಧೌತ ಘೃತ.

ಗಳಂಬಿ ಈ ಘೃತವು ಪ್ಲೇಗ್ ಬ್ಯೂಬೊ ಎಂಬ ಗಡ್ಡೆಯನ್ನೂ ಹುಚ್ಚು ನಾಯಿ ಕಡತಗಳನ್ನೂ ಹೀ ವ್ರಣ ಮತ್ತು ನಾರ್ದುವ ಹುಣ್ಣುಗಳನ್ನೂ ಕೋಲಾಡಿಸುತ್ತದೆ

ಬೆಲೆ 1 ಔನ್ಸ್ ಡಬ್ಬಿ 1ಕ್ಕೆ ಆಣೆ 12 ಚಿಕ್ಕ ಸ್ಯಾಜು ಆಣೆ 8 ಪ್ಯಾಕಿಂಗ್ ಪೋಸ್ಟೇಜ್ ಅಲಾಯಿದ

ವೈದ್ಯರತ್ನ ಪಂಡಿತ ಡಿ. ಗೋಪಾಲಾಚಾರ್ಲು ಬಿ ಎ ಎಸ್ ಎ ಎಮ್ ಜಿ.
ಪ್ರಿನ್ಸಿಪಾಲ್ ಆಯುರ್ವೇದಿಕ್ ಕಾಲೇಜ್, ಮದರಾಸ್.
ಆಯುರ್ವೇದಾಶ್ರಮ,
೨೨ ಆಚಾರಪ್ಪನ ಬೀದಿ,
ಜಾರ್ಜ್ ಟೌನ್ ಮದರಾಸ್

ಕಂತೀ ವಿಳಾಸ:—"ಪಂಡಿಟ್" ಮದರಾಸ್

ಖಿಜಾಬೆ ಮುಶ್ಹಾ ಎಂಬ
ಕೂದಲು ರಂಗ

ನಮ್ಮ ಈ ಕೂದಲು ರಂಗನ್ನು ನರೆತ ಬೀ ಕೂದಲಿಗೆ ಲೇಪಿಸುವುದರಿಂದ ಬೀ ಕೂದಲುಗಳು 5 ನಿಮಿಷದೊಳಗೆ ಕಪ್ಪಾಗಿ ರೇಷ್ಮೆಯಂತೆ ನುಣುಪಾಗುವುವು. ಈ ಕೂದಲು ರಂಗಿನಲ್ಲಿ ಎಸಿಡ್ ಸೇರಿಸಿಲ್ಲ. ಕೂದಲಿಗೆ, ಹಲ್ಲುಗಳಿಗೆ, ಚರ್ಮಕ್ಕೆ ಬಾಧಕವಿಲ್ಲ. ದುರ್ವಾಸನೆಯು ಇದಕ್ಕಿಲ್ಲ ಬಚ್ಚಾವು ಸೈಸರ್ಗಿಕ ಬಣ್ಣದಂತೆ ಕಪ್ಪಾಗುವದು ದೀರ್ಘಕಾಲ ಬಣ್ಣ ಉಳಿಯುವದು ಅನಂತರ ಕೂದಲು ಕೆಂಪು ಯಾ ತವುಡು ಬಣ್ಣಕ್ಕೆ ಮಾರ್ಪಡದು ಒಂದು ಸಲ ಪರೀಕ್ಷಿಸಿ ನೋಡಿರಿ

ಪೆಟ್ಟಿಗೆ ಒಂದರ ಕ್ರಯ ರೂ 1—0—0 ಒಂದು ಡಜನ್ ಪೆಟ್ಟಿಗೆಗಳಿಗೆ ರೂ. 9—0—0. ವಿ ಪಿ. ಚಾರ್ಜು ಬೇರೆ ಕಾಗದ ಪತ್ರಾದಿಗಳನ್ನು ಇಂಗ್ಲಿಷಿನಲ್ಲಿ ನಡೆಯಿಸಬೇಕು.

Address —

Hakim Sayed Khaki Shah,
Doongri Bazar Road,
Opposite Karimbhai Ibhram Orphanage,
Bombay.

ಪ್ರೈಮಸ್ ಎಂಬುವ ಸ್ಪವಿನ (ಒಲೆಯ) ಉಪಯೋಗಗಳು.



ಪ್ರೈಮಸ್ ಸ್ಟವ್ ಎಂಬ ಒಲೆಯು ೧,೦೦೦ ಮೋಂಬತ್ತಿಗೆ ಅನ್ನ ಹಚ್ಚಿದರೆ ಎಷ್ಟು ಬೆಳಕು ವತ್ತಶಾಖವುಂಟಾಗುತ್ತದೆಯೋ ಅಷ್ಟು ಬೆಳಕನ್ನು ಮತ್ತು ಶಾಖವನ್ನೂ ಕೊಡುವುದು. ಇದರಿಂದ ಅಡಿಗೆಯನ್ನೂ ಮಾಡಬಹುದು. ಮತ್ತು ನೀರನ್ನೂ ಕಾಯಿಸಬಹುದು ಇದನ್ನು ಶುಲಭವಾಗಿ ಶುದ್ಧಮಾಡಬಹುದು. ಮತ್ತು ನಾನೇ ರಿಪೇರಿಯನ್ನು ಸಹ ಮಾಡಿಕೊಳ್ಳಬಹುದು.

೧೦೦ನೇ ನಂಬರ್ ಒಲೆ ಬರ್ನರ್ ಸಹಾ ಕ್ರಯ ರೂ 7 8 0
ಬರೀ ಒಲೆಗೆ ಮಾತ್ರ . ಕ್ರಯ ರೂ. 5 12 0
೫೦೦ನೇ ಮತ್ತ ೧೦೦೦ನೇ ನಂಬರ್ ಒಲೆಗಳ ಬರ್ನರ್
ಕ್ರಯ ೧ಕ್ಕೆ 2 4 0
ಟಪ್ಪಾಲು ಹಾಸಲು ಪ್ರತ್ಯೇಕ

ಈ ಒಲೆಗೆ ಸಂಬಂಧಪಟ್ಟ ಪದಾರ್ಥಗಳು ಆಲಾಯಿದ ವಿಕ್ರಯಿಸಲ್ಪಡುತ್ತವೆ ರಿಪೇರಿಗಳೂ ಕೈಕೊಳ್ಳಲ್ಪಡುವವು. ಕ್ಯಾಟಲಾಗು ಮುಫತ್ತಾಗಿ ಕಳುಹಿಸಲ್ಪಡುವುದು.

ಡಿ. ಆರ್. ವ್ಯಾಗೆಲ್,
ಗಿರಗಾಂ, ಸ್ಟಾವ್ ಡಿಪೋ,
೬೩೭ ಗಿರಗಾಂ ಬೊಂಬಾಯಿ.

ಪಂಡಿತ್ ಟಿ. ಬಾಬುರಾಯರ
ವರಿಮಳಾಂಜನ
ಎಂಬ
(ವಿದ್ಯುಚ್ಚಕ್ತಿ ಬೇನೆಹಾರಿ ಮುಲಾಮು).

ಇದರ ಬಾಹ್ಯಲೇಪನದಿಂದಲೇ ತಲೆನೋವು, ಶಿರೋಭಾರ, ಒಕ್ಕೆನ್ನೆ, ಅರ್ಧಾಂಗವಾಯು, ವಾತ, ಸಂಧುವಾತ, ಶೀತ, ಕೈಮ್ಮು, ಗಂಟ್ಲುನೋವು, ಜಮುಮ್, ಉಳುಕು, ಸ್ನಾಯುಗಳು, ಪಕ್ಕವಾತ, ಬೆನ್ನುನೋವು, ಅನೆಕಾಲು, ಜಜ್ಜು, ಸುಟ್ಟ ಘಾಯ, ಕೈಕಾಲು ವ ಇತರ ಅಂಗಗಳಲ್ಲಿ ಆಗುವ ಎಲ್ಲಾ ನೋವುಗಳು ಸಹಾ ನಿಶ್ಚಯವಿಲ್ಲದ ನಿಲ್ಲುವವು ಚಿಕ್ಕ ಕೂಸುಗಳ ದೇಹಕ್ಕಾದರೂ ಇದನ್ನು ನಿರ್ಭೀತಿಯಿಂದ ಹಚ್ಚಬಹುದು. ಡಬ್ಬಿ ಗರೆ 0—8—0. ಅರ್ಧ ಡಬ್ಬಿಗೆ 2—8—0. ವಿ. ಪಿ. ಖರ್ಚು ಪ್ರತ್ಯೇಕ.

ನಮ್ಮಲ್ಲಿ ಇನ್ನೂ ಅನೇಕ ಔಷಧಗಳೂ, ಕಾಯಗಳೂ ಇರುವದರಿಂದ ನಮ್ಮ ಕೆಟಲಾಗಿಗೆ ಬರೆಯಿರಿ.

ವಿಳಾಸ:— ವರಿಮಳಾಂಜನ ಡಿಪೋ,
ಮಂಗಳೂರು.

ಡಾಕ್ಟರ್ ನವರತ್ನರ
ಹಳ್ಳಿಹಳ್ಳಿಗಳಲ್ಲಿ ನಡತೆ ನಡಾವಳಿಗಳನ್ನು ಚೆನ್ನಾಗಿ ಪರಿಶೀಲಿಸಿದರೆ ಈ ಬಿಲ್ಲೆಯಲ್ಲಿ ಗ್ರಾಮಪಂಚಾಯತದ ಕ್ರಮವು ಅನಾದಿಯಿಂದಲೂ ಪ್ರಚಾರದಲ್ಲಿತ್ತು ಎಂದು ಗೊತ್ತಾಗುವುದು. ಇದರ ರಚನೆ ಹೇಗಿತ್ತೆಂದು ವಿಚಾರಿಸೋಣ. ದಕ್ಷಿಣ ಕನ್ನಡದಲ್ಲಿ ಹಳ್ಳಿಗಳೇ ಹೆಚ್ಚು; ಶಹರುಗಳು ಬಹಳ ಕಡಿಮೆ. ವ್ಯಾಪಾರ ಚಲಾವಣೆಯು ಹೆಚ್ಚಾಗಿ ಎತ್ತುಗಳ ಮೇಲೆ ಹೇರಿ ಬಂಡೂರಿಂದ ಇನ್ನೊಂದೂರಿಗೆ ಆಗಬೇಕಿತ್ತು. ಹಳ್ಳಿರಸ್ತೆಗಳು ಬಹಳ ಅಗಲವಿಲ್ಲ. ಕೆಲವು ಕಡಗಳಲ್ಲಿ ಬಹಳ ಇಕ್ಕಟ್ಟಾಗಿದ್ದವು. ಹೊಳೆಗಳಲ್ಲಿ ನೀಕ್ಷಾವತಿ ವಿನಹ ಬೇರೆಯವುಗಳು ಬಹಳ ಸಣ್ಣವಾಗಿ, ಬೇಸಿಗೆಯಲ್ಲಿ ಬಹುಭಾಗವು ಬತ್ತಿ ಹೋಗುತ್ತಿದ್ದುದರಿಂದಲೂ, ಮಳಗಾಲದಲ್ಲಿ ವಿಪರೀತವಾಗಿ ಉಕ್ಕಿ ಬಂದು ನೆಲವು ಹೆಚ್ಚಾಗಿದ್ದುದರಿಂದಲೂ ದೋಣಿಗಳ ಚಲಾವಣೆ ಬಹಳ ಕಡಿಮೆಯಾಗಿತ್ತು. ಪೂರ್ವದಿಂದಲೂ ನೈಸೂರು ಕೊಡಗು ಸೀಮೆಗಳೊಡನೆ ವ್ಯಾಪಾರವು ಹೆಚ್ಚು. ಇದೆಲ್ಲ ಜೈನ ಸೆಟ್ಟಿಗಳ ಕೈಯಲ್ಲಿತ್ತು. ಅನೇಕ ಊರುಗಳಲ್ಲಿ ಮುಖ್ಯವಾಗಿ ಜಿಲ್ಲೆಯ ಪೂರ್ವಭಾಗದಲ್ಲಿನ ಹಳ್ಳಿಗಳಲ್ಲಿ ಅವುಗಳ ಹೆಸರುಗಳಿಗೆ 'ಅಂಗಡಿ' ಎಂಬ ಪ್ರತ್ಯಯಗಳು ಹತ್ತುವಲ್ಲಿ ಜೈನ ಹರದರೇ ವ್ಯಾಪಾರವನ್ನು ನಡಿಸುತ್ತಿದ್ದರು. ಜೈನ ಮತವೇ ರಾಜಮತವಾಗಿತ್ತು. ಈ ಜೈನರಲ್ಲಿ ಕ್ಷತ್ರಿಯರಲ್ಲದವರು ತೀರಾ ಅಳಿಯ ಕಟ್ಟನ್ನು ಆಚರಿಸುತ್ತಿದ್ದರು. ಈಗಲೂ ಜೈನ ಪಾಳಯಗಾರರ ಕೆಲವು ವಂಶಸ್ಥರಲ್ಲಿ ಮಕ್ಕಳ ಕಟ್ಟು ರೂಢಿಯಲ್ಲಿದೆ. ಮಯೂರ ವರ್ಮನಕಾಲದಿಂದ ಒಂದ ಬ್ರಾಹ್ಮಣರು ಅಲ್ಲಲ್ಲಿ ಅಗ್ರಹಾರಗಳಲ್ಲಿ ವಾಸಮಾಡಿಕೊಂಡಿದ್ದರೂ ಮೊತ್ತಮೊದಲು ಜನರಿಗೆ ಇವರಲ್ಲಿ ಹೆಚ್ಚಿನ ವಿಶ್ವಾಸವೂ ಇರಲಿಲ್ಲ. ಮತ್ತು ಅವರು ಈ ಬ್ರಾಹ್ಮಣರೊಡನೆ ಯಾವುದೊಂದು ಬಗೆಯ ಸಂಪರ್ಕವನ್ನೂ ನಡೆಸುತ್ತಿದ್ದಿಲ್ಲ. ಕಾಲಕ್ರಮದಲ್ಲಿ ಜೈನರ ಅಧಿಕಾರವು ತಗ್ಗಿದಷ್ಟಕ್ಕೆ ಬ್ರಾಹ್ಮಣರ ಅಧಿಕಾರವು ಹೆಚ್ಚುತ್ತ ಬಂತು. ಆದರೂ ಗ್ರಾಮ ಕೂಟದಲ್ಲಿ ಅವರಿಗೆ ಹೆಚ್ಚಿನ ಅಧಿಕಾರವು ಮೊತ್ತಮೊದಲು ಬರಲಿಲ್ಲ. ಜೈನ ಪ್ರಾಭಲ್ಯವು ತಗ್ಗಿದಷ್ಟಕ್ಕೆ ಬಂಟರು ಅಥವಾ ನಾಡವರು ಬಲಗೊಳ್ಳುತ್ತ ಬಂದರು. ಇವರು ಅಳಿಯ ಕಟ್ಟನ್ನು ಆಚರಿಸುತ್ತಿದ್ದರು. ಮನೆಯೊಳಗಣ ಆಡಳಿತೆಯು ಚಾಯಿಯಿಂದ ಮಗಳಿಗೆ ಪಾರಂಪರ್ಯವಾಗಿ ಬರುತ್ತಿದ್ದರೂ ಗ್ರಾಮದ ಇತರ ವಹಿವಾಟುಗಳನ್ನು ನಡಿಸುವುದಕ್ಕೆ ಸಹಜವಾಗಿ ಗಂಡಸರೇ ಪ್ರವೇಶವಾಗಬೇಕಿರುವುದರಿಂದ ಮನೆಯ ಯಜಮಾನತ್ವವು ಸೋದರ ಮಾವನಿಂದ ಸೋದರ ಅಳಿಯನಿಗೆ ಕ್ರಮಾಗತವಾಗಿ ಬಂದಿತು. ಇಂಥ ಹಲವು ಮನೆಗಳಿರುವುದೇ ಹಳ್ಳಿ; ಹಲವು ಹಳ್ಳಿಗಳು ಕೂಡಿ ಒಂದು ಮಾಗಣೆ. ಗ್ರಾಮದ ಅಧಿಕಾರವು ಈ ಮನೆಗಳ ಯಜಮಾನರಲ್ಲಿಯೇ ಅಡಕವಾಗಿತ್ತು. ಇವರೇ ಗೊತ್ತುಗಾರ ಗುತ್ತಿನವ ಅಥವಾ ಗುರಿಕಾರರಾಗಿದ್ದರು. ಇತರ ಜನರು ಇವರ ಅಡಿಯಳಾಗಿದ್ದು ಇವರನ್ನು ಅನುಸರಿಸಿ ಜೀವಿಸುತ್ತಿದ್ದರು.

ಆಗ ಮಾಗಣೆಗೊಂದು ದೇವಸ್ಥಾನ ಅಥವಾ ಭೂತಸ್ಥಾನ. ದೇವಸ್ಥಾನವಾದರೆ ಬ್ರಾಹ್ಮಣರು ಅರ್ಚಕರು. ಭೂತಸ್ಥಾನವಾದುದೆ ಬಿಲ್ಲವರು ಪೂಜಾರಿಗಳು. ಈ ಮಾಗಣೆಯ ದೇವಸ್ಥಾನದಲ್ಲಿ ಮುಖ್ಯ ಕೆಲಸಗಳು ನಡೆಯಬೇಕಾದರೆ ಈ ಮುಖ್ಯ ಗೊತ್ತುಗಾರರು ಹಾಜರಿರಬೇಕು. ಅವರ ಮನೆಗೆ 'ಗುತ್ತಿನ ಮನೆ' ಎಂದು ಹೇಳುವರು. ಇವರ ಪೈಕಿ ಪ್ರಮುಖನಾದ ಮೊಕ್ತೇಸರನು ಆ ಭೂತಸ್ಥಾನದ ಸಾಮಾನ್ಯ ವಹಿವಾಟುಗಳನ್ನು ನಡಿಸುವುದಾಗಿತ್ತು. ಗ್ರಾಮ ಅಥವಾ ಮಾಗಣೆ ದೇವಸ್ಥಾನದ ನಗ ನಾಣ್ಯಗಳೂ ಅವನಲ್ಲಿಯೇ ಇರಬೇಕು. ಅವನೇ ಗ್ರಾಮದ 'ಭಂಡಾರಿ' ಅಥವಾ ಕೋಶಾಧ್ಯಕ್ಷನು. ಆದರೆ ವಿಶೇಷ ದಿನಗಳಲ್ಲಿ ಈ ಮುಖ್ಯ ಗೊತ್ತುಗಾರರೆಲ್ಲರು ಸೇರಿ ನಡೆಯಬೇಕು.

ದೇವಸ್ಥಾನದ ಅಥವಾ ಭೂತಸ್ಥಾನದ ವಹಿವಾಟುಗಳು ನಡೆಯುವಂತೆ ವಂತಿಗೆ ವಸೂಲಿ ಮಾಡಿ ಪದಾರ್ಥಗಳು, ಇವನ್ನು ಎಲ್ಲರು ಅವರ ಆಸ್ತಿಸಾಸ್ತಿಯ ದಾಮಾಶಾಯದಿಂದ ತೆತ್ತುಕೊಂಡು ಬರಬೇಕಿತ್ತು. ಇಂತಹ ಆಸ್ತಿಪಾಸ್ತಿಗಳು ಜೈನ ಮತಸ್ಥರ ಪಾಲಾದಕಾಲದಲ್ಲಿಯೂ ಆ ಮನೆಯ 'ಮರ್ಯಾದಿ'ಯನ್ನು ಆ ಜೈನನು ಆ ಕಟ್ಟಳೆಗಳನ್ನು ನಡೆಸಿಕೊಂಡು ಬರುವುದಲ್ಲದೆ ಆ ಭೂತಸ್ಥಾನ ಅಥವಾ ದೇವಸ್ಥಾನದ ವಹಿವಾಟಿನಲ್ಲಿ ಆ ಮನೆತನಕ್ಕೆ ಇದ್ದ ಹಕ್ಕು ಬಾಧ್ಯತೆಗಳಿಗೆ ಜವಾಬ್ದಾರನಾಗಿದ್ದನು. ಈ ರೀತಿಯಾಗಿ ಭೂತಾದಿಗಳಿಗೆ ನಂಬಲಾಗದ ಮತಸ್ಥರು ಈಗಲೂ ಅಂಥಾ ಭೂತಸ್ಥಾನಗಳಲ್ಲಿ ಮೊಕ್ತೇಸರರಾಗಿ ಕೆಲಸ ನಡಿಸುವುದನ್ನು ಕಾಣಬಹುದು.

ಆ ಕಾಲದಲ್ಲಿ ಗ್ರಾಮಕ್ಕೆ ಸಂಬಂಧಪಟ್ಟ ಕರ್ತವ್ಯಗಳು ಯಾವುವು? ದೇವಸ್ಥಾನದಲ್ಲಿ ನಡೆಯತಕ್ಕ ಪಂಚಪರ್ವಗಳು. ಗ್ರಾಮದಲ್ಲಿ ಸರ್ವರ ಪ್ರಯೋಜನಾರ್ಥವಾಗಿ ಸಾಗುವಳಿಯ ಅನುಕೂಲತೆಗೆ ಬೇಕಾದ 'ಕಟ್ಟು'ಗಳನ್ನು ಕ್ಷಪ್ತಕಾಲದಲ್ಲಿ ಹೊಳೆಗಳಿಗೆ ಕಟ್ಟಿಸುವುದು, ಬೆಳೆಗೆ ಬೇಕಾದ ಸೊಪ್ಪನ್ನು ಬೆಳಸುವ ಕಾಡುಗಳನ್ನು ಸುರಕ್ಷಿತ ಪಡಿಸುವುದು, ಇದೇ ಗ್ರಾಮಸ್ಥರ ಸಾರ್ವಜನಿಕ ಕರ್ತವ್ಯಗಳಾಗಿದ್ದುವು. ಕಟ್ಟಗಳನ್ನು ಕಟ್ಟಿಸುವ ಕಾಲದಲ್ಲಿ ಆಸ್ತಿಯ ದಾಮಾಶಾಯದಿಂದ ವಂತಿಗೆ ಅಥವಾ ಆಳು ಸಹಾಯ, ಗದ್ದೆಗೆ ಸೊಪ್ಪು ಕಡಿಯುವಾಗ ಅದೇ ಮೇರೆಗೆ ಆಸ್ತಿಯ ದಾಮಾಶಾಯದಿಂದ ಹೊರೆಗಳ ನಿರ್ಣಯ, ಇವನ್ನೆಲ್ಲ ಈ ಗೊತ್ತುಗಾರರೇ ಮಾಡಬೇಕಿತ್ತು. ಮನೆಗೆ ಇಷ್ಟೇ ಜನ, ಅಥವಾ ಇಷ್ಟೇ ಕತ್ತಿಗಳನ್ನು ತರಬೇಕೆಂದು ಅವರು ನಿರ್ಣಯಿಸಬೇಕು. ಇದಕ್ಕೆ ವಿರೋಧವಾಗಿ ನಡೆದವರನ್ನು 'ಕಟ್ಟಿನಲ್ಲಿ' ಇಡುವುದು ಅಂದರೆ ಅವರನ್ನು ಸೇರಿ ನಡೆಯದೆ ಏಗಿಡಿಸಿ ಇಡುವುದು, ಇದೆಲ್ಲ ಗೊತ್ತುಗಾರರಿಗೆ ಹೊಂದಿಕೊಂಡಿತ್ತು. ಇಂಥ ನಿರ್ಣಯಗಳನ್ನು ಮಾಡಲಿಕ್ಕೂ ಅವುಗಳ ಜಾರಿ ನಡೆಯಲಾರದಿದ್ದರೆ ತಪ್ಪುಗಾರನಿಗೆ ವಿಚಾರ ನಡಿಸಿ ದಂಡಿಸಲಿಕ್ಕೂ ಅವರಿಗೆ ಪೂರ್ಣ ಸ್ವತಂತ್ರವಿತ್ತು. ಈ ಚರ್ಚೆಗಳನ್ನು ಇತ್ಯರ್ಥಿಸುವುದಕ್ಕೆ ದೇವಸ್ಥಾನ ಅಥವಾ ಭೂತಸ್ಥಾನವೇ ಸರ್ವಥಾ ಮಂದಿರ. ಅಂಥಾ ಚರ್ಚೆಗಳನ್ನು ತೀರ್ಮಾನ ಮಾಡುವುದೆ ದೇವಸ್ಥಾನದ ವಿಶೇಷ ಕೆಲಸದ ದಿನಗಳಲ್ಲಿ. ಈ ಗೊತ್ತುಗಾರರು ಎಂದು ಯಾ ಏನು ಮಂದಿ. ಇವರಿಗೆ ಈ ಕೆಲಸಗಳನ್ನು ನಿರ್ವಹಿಸುವುದಕ್ಕೆ ಪ್ರತಿಫಲವು ಯಾವುದು? ಕಟ್ಟದ ನೀರಿನಲ್ಲಿ ಸ್ವಲ್ಪ ಹೆಚ್ಚಿನ ಅಂಶವು ಅವರಿಗೆ ಸಲ್ಲಬೇಕು. ಗೊಬ್ಬರ ಸೊಪ್ಪಿನಲ್ಲಿ ಕೆಲವು ಹೊರೆ ಹೆಚ್ಚಿಗೆ ಸಲ್ಲಬೇಕು; ಇದು ಮಾತ್ರವಲ್ಲ; ಭೂತಸ್ಥಾನ ಅಥವಾ ದೇವಸ್ಥಾನಗಳಲ್ಲಿ 'ಪ್ರಸಾದ' ಅಥವಾ 'ಬೂಳ್ಯ' ಅವರಿಗೆ ಮೊದಲು ಸಲ್ಲಬೇಕು. ಈ 'ಮರ್ಯಾದಿ'ಯಲ್ಲಿ ಹೆಚ್ಚು ಕಡಿಮೆಯಾದರೆ ಅದನ್ನು ಸರಿಗೊಳಿಸುವ ವರೆಗೆ ಮುಂದಿನ ಕೆಲಸವು ಯಾವುದೂ ನಡೆಯಲಾರದು.

ಈ ಗೊತ್ತುಗಾರ ಅಥವಾ ಗುತ್ತಿನವರು ನಿರ್ಣಯಿಸಿದ ದಿನಕ್ಕೆ ಗ್ರಾಮದ ಕಾಡಿನಲ್ಲಿ ಎಲ್ಲರು ಅವರಿಗೆ ಹಂಚಿ ಹಾಕಿದ ಮೇರೆಗೆ ಕತ್ತಿಗಳನ್ನು ತಕ್ಕೊಂಡು ಬಂದು ಕ್ಷಪ್ತಪಡಿಸಿದ ಹೊರೆಗಳನ್ನು ಕಡಿದು ಹೊತ್ತುಕೊಂಡು ಹೋಗುವರು. ಇದಕ್ಕೆ ಮುಂಚಿತವಾಗಿ ಯಾರೂ ಕಾಡನ್ನು ದುರುಪಯೋಗ ಮಾಡದಂತೆ ಅದಕ್ಕೆ 'ಕೊಡಿ' ಕಟ್ಟುವರು. (ಅಂದರೆ ಇಂಜಂಕ್ಷನ್ ಇಸ್ಯಿಹಾರು ಎಂದು ಹೇಳಬಹುದು). ಎಲ್ಲರ ಅನುಕೂಲತೆಯನ್ನು ತೃಪ್ತಿಪಡಿಸಿದ ಮೇಲೆ ಒಂದು ದಿನ ಭೂತಸ್ಥಾನದಲ್ಲಿ ಎಲ್ಲರು ಕೂಡಿ ಒಂದು 'ಕೋಲ' ಅಥವಾ ಉತ್ಸವ ಮಾಡುವರು. ಈ ಕಾಲದಲ್ಲಿ ಗ್ರಾಮದಲ್ಲಿ ನಡೆದ ಬೇರೆ ಬೇರೆ ತಕ್ಷೀರುಗಳ ಇತ್ಯರ್ಥವಾಗಿ ತಪ್ಪಿನ ಸ್ಥಿತಿಗೆ ಮತ್ತು ಆಪಾದಿತನ ಸ್ಥಿತಿಗೆ ಅನುಗುಣವಾಗಿ ದಂಡ ವಿಧಿಸೋಣಾಗುವುದು. ಅದನ್ನು ತರುವ ವರೆಗೆ ಅವನು ಜಾತಿ ಮರ್ಯಾದೆಗೆ ಬಹಿಷ್ಕೃತನಾಗಿರುವನು.

ಕೆಲವು ಸಲ ಈ ಗೊತ್ತುಗಾರರು ತಮ್ಮ ತಮ್ಮೊಳಗೆ ಕಾರಣಾಂತರದಿಂದ ವಿರೋಧ ಕಟ್ಟಿಕೊಂಡು ಗ್ರಾಮದ ಕೆಲಸಗಳ ವಿಚಾರವು ನಿಂತುಹೋಗುವುದೂ ಇದ್ದಿರಬಹುದು. ಅಥವಾ ಕೆಲವು ಸಲ ರುಜುವಾತು ಸಾಲದೆ ಇದ್ದರೂ ಆಪಾದಿತನೊ ಫಿರ್ಯಾದು ಕೊಟ್ಟವನೂ ತಮ್ಮ ನ್ಯಾಯವನ್ನು ನಿಜವೆಂದು ಪ್ರತಿಪಾದಿಸುವಾಗ ಮನುಷ್ಯಯತ್ನದಿಂದ ಈ ವಿವಾದವನ್ನು ತೀರಿಸಲು ಅಶಕ್ಯವಾಗಿತ್ತು. ಇದರ ನಿವೃತ್ತಿಗಾಗಿಯೇ ಆ ದೇವರು ಅಥವಾ ದೈವವು ಎಲ್ಲರ ಪ್ರಾರ್ಥನೆಯನ್ನು ಕೇಳಿ ಪೂಜಾರಿಯ ಮೇಲೆ ಆವೇಶವಾಗುವುದು ಮತ್ತು ಆ ಕಾಲದಲ್ಲಿ ಆ ಮನುಷ್ಯನು ಕೊಟ್ಟ ತೀರ್ಮಾನವು ಸರ್ವಮಾನ್ಯವಾಗಿತ್ತು. ಸಾಕ್ಷಿ ರುಜುವಾತು ಇಲ್ಲದ ಕಾಲದಲ್ಲಿ ವಾದಿ ಪ್ರತಿವಾದಿಗಳು ಅಥವಾ ಮುದ್ದೈ ಮುದ್ದೈಯಾಳೆರೂ ಆ ದೇವರ ಅಥವಾ ದೈವದ ಮುಂದೆ 'ಸತ್ಯ ಪ್ರಮಾಣ' ನುಡಿಯುವ ಕ್ರಮವಿತ್ತು. ಇದರಿಂದ ನಿಜವಾಗಿ ತಮ್ಮ ಮಾಡಿದವರು ಸುಳ್ಳು ನುಡಿದರೆ ಅವರಿಗೆ ಆ ದೇವರು ಅಥವಾ ದೈವವು ಅನೇಕ ಬಗೆಗಳಿಂದ ಕಾಡಿಸುವುದಲ್ಲದೆ ಕೆಲವು ಸಲ ಆತನ ದೇವವನ್ನೂ ಬಲಿ ತೆಗೆದುಕೊಳ್ಳುವುದು ಎಂದು ಜನರ ದೃಢ ನಂಬಿಕೆಯಿತ್ತು. ಹೀಗಾದ ಕಾರಣದಿಂದಲೂ ಕಾಯದೆ ಕಾನೂನುಗಳ ಬಲವಿಲ್ಲವು ನೀತಿವಾಗಿದ್ದರಿಂದಲೂ ಸಿವಿಲ್ ಕ್ರಿಮಿನಲ್ ಮತ್ತು ಇತರ ಎಲ್ಲಾ ಬಗೆಯ ವ್ಯವಹಾರಗಳು ಬಹಳ

ಸೇಗನೇ ತೀರ್ಮಾನವಾಗುತ್ತಿದ್ದುವು. ತೀರ್ಮಾನಗಳಿಗೆ 'ರಿಕಾರ್ಡು' ಇಲ್ಲ. ಆದರೆ ಆ ವಿಶೇಷ ಉತ್ಸವದ ದಿನದಲ್ಲಿ ನೆರೆದ ಸಾವಿರಾರು ಮಂದಿಯ ಸಮ್ಮುಖದಲ್ಲಿ ಆದ ಇತ್ಯರ್ಥವೇ ಕಾಯಂ ತೀರ್ಮಾನ, ಇದಕ್ಕೆ 'ಆಪ್ಪೀಲ್' 'ಸೆಕೆಂಡ್ ಆಪ್ಪೀಲು'ಗಳೆ ಇಲ್ಲ. ವಕೀಲರೂ ಇಲ್ಲ; ರುಸುಂ ಇಲ್ಲ. ಜಾತಿ ಬಹಿಷ್ಕಾರವೇ ಕಠಿಣ ತರದ ಶಿಕ್ಷೆ, ಅದಕ್ಕೆ ಮಿಕ್ಕಿದ ಶಿಕ್ಷೆಯೇ ಇಲ್ಲ. ಜನ ಸಾಮಾನ್ಯಕ್ಕೆ ಈ ತೀರ್ಮಾನಗಳಲ್ಲಿ ವಿಶ್ವಾಸವಿತ್ತು. ಹೀಗಾಗಿ ನಿಷ್ಕಾರಣವಾದ ಹಟ, ಒರಟುತನ, ದೀರ್ಘದ್ವೇಷಗಳಿಗೆ ಎಡೆ ಇರುತ್ತಿರಲಿಲ್ಲ. ಯಾವ ವರೆಗೆ ಹಳ್ಳಿಯಲ್ಲಿರುವವರು ಒಂದೇ ಮತಾವಲಂಬಿಗಳಾಗಿದ್ದರೋ ಆ ವರೆಗೆ ಈ ದೇವಸ್ಥಾನ ಅಥವಾ ಭೂತಸ್ಥಾನದ ಕೋರ್ಟು ಸರ್ವಸಮ್ಮತವಾದ ನ್ಯಾಯಸ್ಥಾನವಾಗಿತ್ತು. ಆದರೆ ಈ ಮತವನ್ನು ಅವಲಂಬಿಸದ ಜನರು ಕಾಲಕ್ರಮೇಣ ಹಳ್ಳಿಗಳಲ್ಲಿ ನಿವಾಸಮಾಡತೊಡಗಿದ್ದರಿಂದಲೂ, ಹಳ್ಳಿಗಳಲ್ಲಿರುವವರ ದುರ್ಬಾಯಿದ ನಿಮಿತ್ತದಿಂದ ಅವರ ಆಸ್ತಿಗಳು ಆ ಹಳ್ಳಿಗಳಲ್ಲಿ ನಿವಾಸಮಾಡದೆ ಬೇರೆ ಕಡೆಯಲ್ಲಿ ಇದ್ದಿರುವ ಸಾಹುಕಾರ ಅಥವಾ ಹುದ್ದೇದಾರರ ಕೈಸೇರಿದೊಡನೆ ಅಂಥವರ ಮೇಲೆ ಈ ಹಳ್ಳಿಯ ಗ್ರಾಮ ಕೂಟಗಳ ಅಧಿಕಾರವು ಸಿಥಿಲತೆಗೆ ಒಂದಿತು. ಕಾಯದೆ ಕಾನೂನು ಸಾಮಾನ್ಯ ಜನರಿಗೆ ತಿಳಿವಳಿಕೆಗೆ ಗಹನ ವಿಷಯವಾಗುತ್ತ ಒಂದಷ್ಟಕ್ಕೆ ನಿದ್ಯಾವಂತರಾಗಿ ಪೇಟೆಗಳಲ್ಲಿರುವ ಜನರ ಮೇಲೆ ಹಳ್ಳಿನಿವಾಸಿಗಳು ಆದರಿಸಬೇಕಾಗಿ ಒಂತು, ಮತ್ತ ಅದು ಕಷ್ಟ ವಿಷಯವಾಗುತ್ತ ಒಂದಷ್ಟಕ್ಕೆ ಜಾಸ್ತಿಲ್ಲ, ಇನ್ನೊಂದು ಕೋರ್ಟಿನಲ್ಲಿ ತನಗೆ ಉಪಕಾರ ವಾಗುವುದು ಎಂಬ ತಪ್ಪು ಗ್ರಹಿಕೆಯಿಂದ ಜನರು ಗ್ರಾಮ ಕೂಟಗಳ ಮೇಲೆ ವಿಶ್ವಾಸ ವಿಡದೆ ಹೋದರು. ಇಷ್ಟಲ್ಲದೆ ಗ್ರಾಮ ಪಂಚಾಯತರ ಅಥವಾ ಗೊತ್ತುಗಾರರ ಅಧಿಕಾರವು ಪಾರಂಪರ್ಯವಾಗಿ ಒಂದರೂ ಅದರೊಂದಿಗೆ ಅಗತ್ಯವಿರುವ ಬುದ್ಧಿವಿಚಕ್ಷಣತೆಯೂ ಪಾರಂಪರ್ಯವಾಗಿ ಬರುವುದಿಲ್ಲವಾದ್ದರಿಂದ ಜನಸಾಮಾನ್ಯದವರಿಗೆ ಈ ಗ್ರಾಮ ಕೂಟಗಳ ಮೇಲಣ ವಿಶ್ವಾಸವು ಕುಂದಿಹೋಯಿತು. ಇದಲ್ಲದೆ ಅನ್ಯಮತಸ್ಥರ ಸಂಖ್ಯೆಯು ಗ್ರಾಮಗಳಲ್ಲಿ ಹೆಚ್ಚುತ್ತಲೇ ಅವರು ಈ ದೇವಸ್ಥಾನ ಬೂತಸ್ಥಾನಗಳಲ್ಲಿ ನಡೆಯುವ ಸತ್ಯಪ್ರಮಾಣ ಮತ್ತು ತೀರ್ಮಾನಗಳಿಗೆ ಕಿವಿಕೊಡುತ್ತಲೂ ಇರಲಿಲ್ಲ ಮತ್ತು ಅದು ಅವರ ವ ತಪೋದನೆಗೆ ಕೇವಲ ವಿರೋಧವಾಗಿಯೇ ಇದ್ದು ಜನರು ಒಮ್ಮುಖವಾಗಿ ಒಪ್ಪುವ ಗ್ರಾಮ ಕೋರ್ಟಿನ ದೆಸೆ ಕೆಟ್ಟುಹೋಯಿತು. ಹಾಗಿದ್ದರೆ ಇದಕ್ಕೆ ಪ್ರತಿನಿಧಿಯಾಗಿ ಬೇರೆ ಯಾವ ಸಂಸ್ಥೆಗಳನ್ನು ಸಾರ್ವಜನಿಕ ಉಪಯೋಗಾರ್ಥವಾಗಿ ಏರ್ಪಡಿಸಬಹುದು ಎಂಬುದನ್ನು ಮುಂದೆ ಚರ್ಚಿಸೋಣ.

ಹಿಂದೂಸ್ಥಾನದ ರಾಜಕೀಯ ಧ್ಯೇಯವು

ಲೋಕಮಿತ್ರ

ಹಿಂದೂ ದೇಶವು ಜಾತಿಭೇದ, ಮತದ್ವೇಷ, ಧಾರಾಬಾಹುಲ್ಯ ಮುಂತಾದವುಗಳಿಂದ ವಿವಿಧಾತ್ಮಕವಾದರೂ, ಪಶ್ಚಿಮೋತ್ತರದಲ್ಲಿ ಕನ್ಯಾಕುಮಾರಿಯಿಂದ ಹಿಮಾಲಯದ ವರೆಗಿನ ಮತ್ತು ಪೂರ್ವ ಪಶ್ಚಿಮದಲ್ಲಿ ವಂಡಾಲಯಿಂದ ಕರಾಚಿಯ ವರೆಗಿನ ಅತಿ ವಿಸ್ತೀರ್ಣವಾದ ಈ ಪ್ರದೇಶವು, ಬೇರೆ ಬೇರೆ ಬಣ್ಣದ, ಬೇರೆ ಬೇರೆ ಆಕಾರದ ಮತ್ತು ಬೇರೆ ಬೇರೆ ಜಾತಿಯ ಮಣಿಗಳು ಒಂದೇ ಸೂತ್ರದಲ್ಲಿ ಸುರಿಯಲ್ಪಡುವಂತೆ ಇಲ್ಲವೆ ದ್ರವದ್ರವ್ಯವು ಒಂದೇ ಪಾತ್ರದಲ್ಲಿ ಹಿಡಿಯಲ್ಪಡುವಂತೆ ಬ್ರಿಟಿಷ್ ಸಾಮ್ರಾಜ್ಯದ ಸೂತ್ರದಿಂದ ಒಂದಿಸಲ್ಪಟ್ಟ ಕಾರಣ ಏಕರಾಷ್ಟ್ರೀಯತ್ವದ ಗಾಳಿಯು ಅನುಕೂಲವಾಗಿ ಇಡೀ ದೇಶ ತುಂಬ ಬೀಸಿತ್ತಿದ್ದರೂ ಆಶ್ಚರ್ಯವೇನೂ ಇಲ್ಲ; ಮತ್ತು ಹೀಗೆ ಏಕರಾಷ್ಟ್ರೀಯತ್ವದ ಭಾವನೆಯು ದೃಢಮೂಲವಾದಲ್ಲಿ ಹಿಂದೂಸ್ಥಾನದ ರಾಜಕೀಯಧ್ಯೇಯವು ರಾಷ್ಟ್ರೀಯ ಸಭೆಯಂತಹ ಸಂಸ್ಥೆಯ ಮುಖಾಂತರ ವ್ಯಕ್ತವಾಗುವುದೂ ಕೂಡ ಸಹಜವೇ. ಈ ಎರಡೆರಡಾದ ಸಂಗತಿಗಳನ್ನು ನಾವು ಕಳೆದ ಸಾರಿ ಪ್ರಸ್ತಾಪಿಸಿದ್ದನ್ನು ವಾಚಕರು ಮರೆತಿರಲಾರರು. ರಾಷ್ಟ್ರೀಯ ಸಭೆಯೆಂದರೇನು, ಅದರ ಆಸ್ತಿತ್ವವು ಹೇಗಾಯಿತು, ಅದು ಯಾವ ಕೆಲಸಗಳನ್ನು ಮಾಡುತ್ತಿದೆ, ಅದರಲ್ಲಿ ಯಾವ ಯಾವ ಬದಲಾವಣೆಗಳಾದವು ಮುಂತಾದ ಸಂಗತಿಗಳನ್ನು ವಿಶದವಾಗಿ ವಿವರಿಸುವುದೆಂದರೆ ಹಿಂದೂಸ್ಥಾನದ ೩೦-೪೦ ವರ್ಷಗಳ ಈಚೆಯ ರಾಜಕೀಯ ಇತಿಹಾಸವನ್ನು ಬರೆಯುವುದೇ ಸರಿ. ಈ ನಿರೀಕ್ಷಣೆಯು ಒಂದು ದೃಷ್ಟಿಯಿಂದ ಮನೋರಂಜಕವಾದರೂ ಆ ಎಲ್ಲ ಸಂಗತಿಗಳನ್ನು ಸ್ಪುಟವಾಗಿ ವಿವರಿಸುವಷ್ಟು ಕಾರಣವೂ, ಅವಕಾಶವೂ ಇಲ್ಲ; ಆದುದರಿಂದ "ಹಿಂದೂಸ್ಥಾನದ ರಾಜಕೀಯ ಧ್ಯೇಯ"ವೆಂಬ ನಮ್ಮ ಪ್ರಕೃತ ವಿಷಯಕ್ಕೆ ಬೇಕಾದುದಷ್ಟೇ ಭೂತಕಾಲದ ಸಂಗತಿಗಳನ್ನು ಆದಷ್ಟು ಸಂಕ್ಷೇಪವಾಗಿ ಉಲ್ಲೇಖಿಸಿದರೆ ಸಾಕೆಂದು ತೋರುತ್ತದೆ.

ಇಲ್ಬರ್ಟ್ ಇಸವಿಯಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ಸಿಪಾಯಿಗಳ ಬಂಡು ಆದ ನಂತರ ಕಂಪನೀ ಸರಕಾರದವರ ಕೈಯಲ್ಲಿದ್ದ ಈ ದೇಶದ ಅಧಿಕಾರ ಸೂತ್ರಗಳನ್ನು ಕಾಯಿದೆಯ ಮೂಲಕವಾಗಿ ಮಹಾರಾಣಿ ಸರಕಾರದವರು ತಮ್ಮ ವಶದಲ್ಲಿ ತಕ್ಕೊಂಡರು. ಇದಕ್ಕಿಂತ ೨೦-೩೦ ವರುಷಗಳ ಹಿಂದೆ ಕಂಪನಿ ಸರಕಾರದ ದಿರೆಕ್ಟರುಗಳ ಹುಕುಮಿನಿಂದ ಈ ದೇಶದಲ್ಲಿ ಪಾಶ್ಚಾತ್ಯ ಶಿಕ್ಷಣವು ಪ್ರಾರಂಭವಾಗಿತ್ತು. ಆ ಶಿಕ್ಷಣದಿಂದ ಸುಸಂಸ್ಕೃತರಾದ ಜನರಿಗೆ ತಮ್ಮ ದೇಶದ ಸ್ವಾಧೀನವಿಕವಾದ ಹಕ್ಕುಗಳು ಯಾವವು ಎಂಬುದು ಮೆಲ್ಲಮೆಲ್ಲನೆ ತಿಳಿಯ ಹತ್ತಿತು; ಮತ್ತು ಅವರು ಕೊಂಚ ಪ್ರಯತ್ನವನ್ನೂ ಕೂಡ ಮಾಡಹತ್ತಿದರು. ದಾದಾಬಾಯಿಯವರ ಬೋಂಬೆ ಎಸೋಸಿಯೇಶನ್, ಸ್ಯೆಸ್ಸೋದೆಸಪಾಲರ ಬ್ರಿಟಿಷ್ ಇಂಡಿಯನ್ ಎಸೋಸಿಯೇಶನ್, ವಿದ್ಯಾಸಂಸ್ಥಾನದ ಮಹಾಜನ ಸಭೆ, ಪೂನಾ ಪಟ್ಟಣದ ಸಾರ್ವಜನಿಕ ಸಭೆ ಮುಂತಾದ ಪ್ರಯತ್ನಗಳು ಅಲ್ಲಲ್ಲಿ ನಡೆಯಹತ್ತಿದವು. ಹಾಗೆಯೇ ಕೆಲವು ವರ್ಷಗಳ ನಂತರ ಎಂದರೆ ೧೮೮೫ನೇ ಇಸವಿಯಲ್ಲಿ 'ದಿಲ್ಲೀ ದರಬಾರ'ವು ನೆರೆಯಿತು. ಆಗ ಮಹಾರಾಣಿಯವರು ಕೇಸರ ಇ-ಹಿಂದ ಎಂಬ ಪದವಿಯನ್ನು ಧರಿಸಿದರು. ಈ ಸಮಾರಂಭದಲ್ಲಿ ಮಾಂಡಲಿಕ ಅರಸರು ಈ ದೇಶದ ಬೇರೆ ಬೇರೆ ಭಾಗಗಳಲ್ಲಿಯ ದೊಡ್ಡ ದೊಡ್ಡ ಅಧಿಕಾರಿಗಳು, ಪ್ರಜೆಗಳಲ್ಲಿಯ ಮುಖಂಡರು—ಸಾರಾಂಶ ಎಲ್ಲ ತರಗತಿಯ ಜನರು ಏಕತ್ರ ಸೇರಿ ರಾಣಿ ಸರಕಾರದ ವಿಷಯದಲ್ಲಿರುವ ತಮ್ಮ ಪೂಜ್ಯಭಾವನೆಯನ್ನು ವ್ಯಕ್ತಗೊಳಿಸಿದರು. ಇದೇ ಸುಪ್ರಸಂಗದಿಂದ, ರಾಜನಿಷ್ಠೆಯನ್ನು ವ್ಯಕ್ತಪಡಿಸಲು ಪ್ರಜಾಪ್ರತಿನಿಧಿಗಳು ಏಕತ್ರ ಸೇರುವಂತೆ ಪ್ರಜೆಗಳ ನೈಸರ್ಗಿಕ ಹಕ್ಕುಗಳನ್ನು ಪಡಕೊಳ್ಳಲು ಜನರು ಏಕೆ ಏಕತ್ರ ಸೇರಬಾರದು ಎಂಬುದೊಂದು ಪ್ರಶ್ನೆಯು ತತ್ಕಾಲದ ವಿಚಾರವಂತರಲ್ಲಿ ಉದ್ಭವಿಸಿತು. ಮುಂದೆ ಲಿಟನ್ ವಾಯಸರಾಯರ ರಾಜ್ಯಧೋರಣವು ಸ್ವಲ್ಪ ಕಠಿಣವಾದುದರಿಂದಲೂ, ಆ ಮುಂದಿನ ದಯಾಕಾಲಿಗಳಾದ ರಿಪನ್ ಪ್ರಭುಗಳ ಉತ್ತೇಜನ ಪರವಾದ ಕಾರಕಿರ್ದಿಯಿಂದಲೂ ಸುಪ್ರಸಿದ್ಧವಾದ ಇಲ್ಬರ್ಟ್ ಬಿಲಿನ ವಿಷಯದಲ್ಲಿ ನಡೆದ ಚಳವಳಿನ ರೂಪದಿಂದ ಈ ರಾಜಕೀಯ ಚಳವಳಿಗಳ ಏಕೀಕರಣದ ಪ್ರಶ್ನೆಯು ಮೂರ್ತಿ ಸ್ವರೂಪವನ್ನು ಹೊಂದಿತು, ಮತ್ತು ೧೮೮೫ನೇ ಇಸವಿಯಲ್ಲಿ ಮುಂಬಾಯಿ ಪಟ್ಟಣದಲ್ಲಿ ಪರಮಪೂಜ್ಯ ದಾದಾಬಾಯಿ, ಮಿ. ಹ್ಯೂಮ್, ವೆಡರಬರ್ನ್ ಈ ತ್ರಿಮೂರ್ತಿಗಳ ಪ್ರಯತ್ನದಿಂದ ರಾಷ್ಟ್ರೀಯ ಸಭೆಯು ಜನ್ಮಕ್ಕೆ ಬಂತು. ಮುಂಬಯಿ ಪಟ್ಟಣದಲ್ಲಿ ನೆರೆದ ರಾಷ್ಟ್ರೀಯ ಸಭೆಯ ಈ ಮೊದಲನೆಯ ಅಧಿವೇಶನದಲ್ಲಿ ೭೨ ಪ್ರತಿನಿಧಿಗಳಿದ್ದರು ಮುಂದೆ ಬರಬರುತ್ತ ಈ ಸಭೆಯ ಉದ್ದೇಶವೂ, ಸ್ವರೂಪವೂ, ಕಾರ್ಯಕ್ಷೇತ್ರವೂ ವಿಸ್ತಾರವಾಗುತ್ತ ಒಂತು. ಆ ಮಧ್ಯದಲ್ಲಿಯೇ ಈ ರಾಷ್ಟ್ರೀಯ ಸಭೆಯೊಳಗೆ ಬೇರೆ ಬೇರೆ ಧರ್ಮದ, ಮತದ ಮತ್ತು ತರಗತಿಯ ಜನರು ಸೇರಿರುವುದರಿಂದ ಅವರಲ್ಲಿ ತೀವ್ರ ಮತಭೇದವು ಹುಟ್ಟಿ, ಈ ಸಭೆಯೇ ನಿಂತುಹೋಗುತ್ತದೋ ಎಂಬೀ ಭೀತಿಯು ಬಂದಲ್ಲಿ ಮತಭೇದಕ್ಕೆ ಆಸ್ಪದವಾದ ಸಂಗತಿಗಳನ್ನು ಸಭೆಯಲ್ಲಿ ಚರ್ಚಿಸಕೂಡದೆಂಬ ತತ್ವವನ್ನವಲಂಬಿಸಿ ದಾದಾಬಾಯಿ, ಬದ್ರುದ್ದಿನ, ಮೇಥಾ, ಆಯೋಧ್ಯಾನಾಥ ಮುಂತಾದ ಮುಖಂಡರು ರಾಷ್ಟ್ರೀಯ ಸಭೆಯ ಉದ್ದೇಶವನ್ನು ನಿಶ್ಚಿತ ಪಡಿಸಿದರು. ಮತ್ತು ಸಭೆಯನ್ನು ಕಾಪಾಡಿದರು. ಅಂದಿನಿಂದ ಎಂದರೆ ೧೮೮೫ರಿಂದ ರಾಷ್ಟ್ರೀಯ ಸಭೆಯ ಪ್ರಗತಿಯು ಮುಂದಿನ ಆರೇಳು ವರ್ಷಗಳ ವರೆಗೆ ತಡೆಯಿಲ್ಲದೆ ಏಕಪ್ರಕಾರವಾಗಿ ನಡೆಯಿತು.

ಅನಂತರ ಕಾಲಕ್ರಮೇಣ ರಾಷ್ಟ್ರೀಯ ಸಭೆಯಲ್ಲಿ ಇನ್ನು ಕೆಲವು ಮಾರ್ಪಾಟುಗಳಾಗ ಬೇಕಾದವು ಯಾವುದಾದರೊಂದು ದೊಡ್ಡ ಪಟ್ಟಣದಲ್ಲಿ ಪ್ರತಿವರ್ಷ ೪೦ ಸಾವಿರ ರೂಪಾಯಿಗಳನ್ನು ಒಟ್ಟುಗೂಡಿಸಿ ೨-೩ ದಿವಸಗಳೊಳಗೆ ದೊಡ್ಡ ದೊಡ್ಡ ಪ್ರತಿನಿಧಿಗಳು ಸೇರಿ ಆ ದ್ರವ್ಯವನ್ನು ಖರ್ಚುಮಾಡಿ ಬರೆ ನಿಷ್ಪ್ರಯೋಜಕವಾದ ಕೆಲವು ಠರಾವುಗಳನ್ನು ಪಾಸುಮಾಡುವದರಿಂದ ದೇಶಕ್ಕೆ ಯಾವ ಲಾಭ ದೊರಕುವುದು? ರಾಷ್ಟ್ರೀಯ ಸಭೆಯ ಮುಖಾಂತರ ಪ್ರಕಟವಾಗುವ ಈ ನಿರ್ಜೀವ ಲೋಕಮತದ ಪರಿಣಾಮವು ನಿರಂಕುಶರಾದ ಅಧಿಕಾರಿಗಳ ಮೇಲೆ ಎಳ್ಳಷ್ಟೂ ಆಗುವುದಿಲ್ಲ! ಅಧಿಕಾರಿಗಳು ಸ್ವಚ್ಛಂದಾನುವರ್ತಿಗಳಾಗಿ ಸ್ವಾಮಾನಿಕವಾದ ಲೋಕಮತವನ್ನು ಕೂಡ ತುಳಿದು ಏಕಮುಖರು ದ್ರಾಕ್ಷದಂತೆ ಅಧಿಕಾರದ ಸೂತ್ರಗಳನ್ನು ಇನ್ನಷ್ಟು ಬಿಗಿಯಾಗಿ ಎಳೆಯುತ್ತಿರುವಾಗ, ಕಾಂಗ್ರೆಸ್ ಕಮಿಟಿಯು ವರ್ಷವೆಲ್ಲ ನಿದ್ದೆಮಾಡಿ, ಮಳೆಯ ಆರಂಭದಲ್ಲಿ ನಾಲ್ಕು ದಿವಸ ಕಪ್ಪೆಗಳು ಕೂಗುವಂತೆ ದಿಸೆಂಬರ ತಿಂಗಳಿನ ೨-೩ ದಿವಸಗಳಲ್ಲಿ ಈ ಪ್ರತಿನಿಧಿಗಳು ವಕ್ತೃತ್ವ ಪೂರ್ಣವಾದ ಕೂಗಾಟಗಳನ್ನು ಮಾಡುವುದರಿಂದ ದೇಶಕ್ಕೆ ಆದ ಲಾಭವೇನು? ಇಲ್ಲವೆ ನಿರಂಕುಶ ಅಧಿಕಾರಿಗಳಿಗೆ ಆದ ಹಾನಿಯೇನು? ಈ [illegible]

ಅನೇಕ ಪ್ರಾಮಾಣಿಕ ದೇಶಭಕ್ತರಲ್ಲಿ ಇಂತಹ ವಿಚಾರಗಳು ಉದಯಿಸುತ್ತಿರುವಾಗಲೇ ಲೋರ್ಡ್ ಕರ್ಝನ್ ದೊರೆಗಳ ಆಳಿಕೆಯಲ್ಲಿ ವಂಗಭಂಗದಂತಹ ಇಡೀ ದೇಶವನ್ನು ಅಲ್ಲಾಡಿಸಿದ ಕೃತ್ಯವು ನಡೆಯಹತ್ತಿತು. ಗಲಭೆಯೇ ಇಸವಿಯಲ್ಲಿ ಮಹಾರಾಣಿ ಸರಕಾರದವರು ಕೊಟ್ಟಿರುವ ಜಾಹಿರನಾಮೆಯೊಳಗಿನ ಉದಾರವಚನಗಳ ಅರ್ಥದಲ್ಲಿ ವಿಪರ್ಯಾಸವನ್ನು ಕಲ್ಪಿಸಿ ಹಿಂದೂದೇಶದ ನ್ಯಾಯ್ಯವಾದ ಆಕಾಂಕ್ಷೆಗಳನ್ನು ಹಿಮ್ಮೆಟ್ಟಲು ಕರ್ಝನ್ ದೊರೆಯವರು ಉಪಕ್ರಮಿಸಿದರು. ಕ್ರಿಯಾಶೂನ್ಯವಾದ ರಾಷ್ಟ್ರೀಯ ಸಭೆಯು ನಿರ್ಜೀವವಾಗಿದೆಂದು ಮೊದಲೇ ತರುಣರಾಷ್ಟ್ರಭಕ್ತರು ತಿಳಿದಿದ್ದರು ವತ್ತು ಅದೇ ಕಾಲದಲ್ಲಿ ಕರ್ಝನ್ ದೊರೆಗಳ ಪ್ರಜಾಜನರ ಆಕಾಂಕ್ಷೆಗಳಿಗೆ ಪ್ರತಿಕೂಲವಾದ ರಾಜ್ಯಕಾರಧಾರಕ್ಕೆ ಪ್ರಾರಂಭವಾಯಿತು. ಈ ಎರಡು ಕಾರಣಗಳಿಂದ ಆ ಸಮಯ ಇಡೀ ದೇಶದಲ್ಲಿ ಒಂದು ವಿಲಕ್ಷಣವಾದ ಕ್ಷೋಭವುಂಟಾಯಿತು. ಆಗ ತರುಣ ರಾಷ್ಟ್ರಭಕ್ತರ ಪ್ರಾಮಾಣಿಕವಾದ ಮನಃಸ್ಥಿತಿಯನ್ನೂ, ದೇಶಭಕ್ತರ ನ್ಯಾಯ್ಯವಾದ ಆಕಾಂಕ್ಷೆಯನ್ನೂ ಮತ್ತು ಬ್ರಿಟಿಷ್ ಜನರ ನ್ಯಾಯ ಮತ್ತ ಸ್ವಾತಂತ್ರ್ಯ ಪ್ರೀತಿಯನ್ನೂ ಚನ್ನಾಗಿ ಅಲೋಚಿಸಿ ಹಿಂದೂದೇಶದ ವ್ಯವಸ್ಥಿತಾವತಾರವಾದ ಪೂ ದಾದಾಭಾಯಿಯವರು ೧೯೦೬ನೇ ಇಸವಿಯಲ್ಲಿ ಕಲಕತ್ತಾ ಪಟ್ಟಣದಲ್ಲಿ ನೆರೆದಿರುವ ರಾಷ್ಟ್ರೀಯ ಸಭೆಯ ತಿಗನೇ ಅಧಿವೇಶನದಲ್ಲಿ ೨೦ ಸಾವಿರ ಜನ ಸಮಾಜದಿಂದ ತಂದಿಹೋದ ಬನ್ನೆ ಮತ್ತು ಪ್ರಚಂಡವಾದ ಮಂಟಪದಲ್ಲಿ "ಸ್ವರಾಜ್ಯ"ದ ತುತೂರಿಯನ್ನು ಊದಿದರು ಇದೇ ಧಾವಿಸ್ವರಾಜ್ಯೋತ್ಸವದ ಪುಣ್ಯಾಹವಾಚನವು! ಇಲ್ಲವೆ ಸ್ವರಾಜ್ಯ ಮಂದಿರದ ಮುಹೂರ್ತಸ್ತಂಭಾರೋಪಣೆಯು! ವ್ಯಾಸಪೀಠದಂತಹ ಉಚ್ಚವಾದ ಅದೃಶ್ಯಪೀಠದಿಂದ ಮಹರ್ಷಿತುಲ್ಯರಾದ ದಾದಾಭಾಯಿಗಳು ಸ್ವರಾಜ್ಯದ ಕಾಂತಿ ಪಾರವನ್ನು ಓದುತ್ತಿರುವಾಗ ಧಾವಿಕಾಲದ ಸ್ವರಾಜ್ಯವು ಆ ಮಂಡವದೊಳಗಣ ಜನರ ವಿಜಯ ಸೂಚಕವಾದ ಚಪ್ಪಾಳೆಗಳಿಂದಲೂ ಸಂತೋಷಸೂಚಕವಾದ ಸ್ಮಿತದಿಂದಲೂ ಸ್ವೀಕರಿಸಲ್ಪಟ್ಟಿತು.

ಮಹತ್ತರವಾದ ಧರ್ಮಕರ್ಮ.

ಧರ್ಮಸ್ಥಳದ ಧರ್ಮರಾಜರು.

ಉಪ್ಪಿನಂಗಡಿ ತಾಲೂಕಿನವರು ಯಾವ ಕೆಲಸವನ್ನು ಕೈಕೊಳ್ಳುವುದರಲ್ಲಿಯೂ ಪ್ರಥಮದಲ್ಲಿ ಸ್ವಲ್ಪ ಅಧೈರ್ಯಗೊಂಡರೂ, ಕೈಕೊಂಡ ಒಳಿಕ ಅದನ್ನು ಜಯಶೀಲರಾಗಿಯೇ ಕೊನೆಮುಟ್ಟಿಸುವರೆಂದು ನಾವು ಈ ಮೊದಲು ಒಂದೆರಡಾವರ್ತಿ ಹೇಳಿದ್ದೆವಷ್ಟೇ ಈ ಮಾತಿನ್ನು ಸಾರ್ಥಕಗೊಳಿಸಲು ಒಂದು ಅತ್ಯುತ್ಕೃಷ್ಟವಾದ ದೃಷ್ಟಾಂತವು ನಮ್ಮ ತಿಳುವಳಿಕೆಗೆ ಬಂದಿರುವುದು ಪುತ್ತೂರಲ್ಲಿ ಹೊಸತಾಗಿ ಸ್ಥಾಪಿಸಬೇಕೆಂದಿರುವ ಸೆಕಂಡರಿ ಶಾಲೆಯ ಕಟ್ಟೋಣದಲ್ಲಿ ಎದುರುಗಡೆಯ ಇಡೀ ಹಜಾರ (Hall) ವನ್ನೇ ಕಟ್ಟಿಸುವ ಪೂರಾ ಖರ್ಚನ್ನು ತಾನು ಹಾಕಿಕೊಳ್ಳುತ್ತೇನೆಂದು ಮಹಾರಾಜೇಶ್ರಿ ಧರ್ಮಸ್ಥಳದ ಚಂದಯ್ಯ ಹೆಗಡೆಯವರು ವಾಗ್ದಾನ ಮಾಡಿರುತ್ತಾರಂತೆ! ಮಂಗಳೂರಲ್ಲಿ ಹಳೇ ಕೋರ್ಟು ರಸ್ತೆಯಲ್ಲಿ ನವೀನವಾಗಿ ನಿರ್ಮಿಸಿದ ಸುಂದರವಾದ ಗಣಪತಿ ಸೆಕಂಡರಿ ಶಾಲೆಯ ಕಟ್ಟೋಣವನ್ನು ನೋಡಿದವರು ಎದುರುಗಡೆಯ ಹಜಾರವೆಂದರೆ ಎಂತಹದು ದೆಂದು ಮನಸ್ಸಿನಲ್ಲಿ ಮಾಡಿಕೊಳ್ಳಬಹುದು ಪುತ್ತೂರಲ್ಲಿ ಕಟ್ಟಿಸುವ ಕಟ್ಟೋಣವೂ ಶುಮಾರು ಅದರಂತೆಯೇ ಆಗುವುದು. ಹಜಾರಕ್ಕೆ ಈಗ ಕಟ್ಟಿದ ಅಂದಾಜು ಶುಮಾರು ೫,೦೦೦ ರೂಪಾಯಿ ಆಗಿರುತ್ತದೆ; ಅಂದ ಮೇಲೆ, ಚಂದಯ್ಯ ಹೆಗಡೆಯವರು ವಾಗ್ದತ್ತಮಾಡಿದ ಖರ್ಚಿನ ಮೊಖಲಗು ಎಷ್ಟೆಂದು ನಾವು ಬೇರೆ ಹೇಳಬೇಕಾದುದಿಲ್ಲ

ದಕ್ಷಿಣಕನ್ನಡಾ ಜಿಲ್ಲೆಯ ಚರಿತ್ರೆಯಲ್ಲಿ ಇಂತಹ ಔದಾರ್ಯಕ್ಕೆ ಇದೇ ಮೊದಲಾಗಿರುತ್ತದೆ. ಉತ್ತರ ಹಿಂದೂಸ್ಥಾನದಲ್ಲಿ ಅನೇಕ ಜಮಾನುದಾರರು ಮೊದಲಾದವರು ಆಗಾಗ್ಗೆ ವಿದ್ಯಾಭಿವೃದ್ಧಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಕೊಡುತ್ತಿರುವುದು ನಾವು ಕೇಳಿಬಲ್ಲೆವು. ಮುಂಬಾಯಿ ಅಧಿಪತ್ಯದಲ್ಲಿಯೂ ಪೂನೆಯಲ್ಲಿನ "ಡೆಕ್ಕಾನ್ ಎಜ್ಯುಕೇಶನ್ ಸೊಸೈಟಿ" (ದಕ್ಕಾನ್ ಪ್ರಾಂತ್ಯದ ವಿದ್ಯಾವರ್ಧಕ ಸಂಘ) ಎಂಬ ಸಂಸ್ಥೆಯವರಿಂದ ಸ್ಥಾಪಿತವಾಗಿ ನಡೆಯಿಸಲ್ಪಡುವ ಫೆರ್ಗುಸ್ಸನ್ ಕೊಲೇಜಿನ್ನುವ ಮಹಾ ವಿದ್ಯಾಲಯಕ್ಕೆ ಒಬ್ಬ ಉಪರಾಜರು ಒಂದು ಕಟ್ಟೋಣವನ್ನು ಕಟ್ಟಿಸುವಗೋಸ್ಕರ ರೂ. ೧೫,೦೦೦ನ್ನು ಅತ್ತಲಾಗೆ ಕೊಟ್ಟರೆಂದೂ ನಾವು ಓದಿದ್ದೇವೆ. ಮದ್ರಾಸು ಅಧಿಪತ್ಯದಲ್ಲಿ ಸಹ ಶಕ್ತಿಸ್ಥರಾಗಿ ವಿದ್ಯಾಭಿವೃದ್ಧಿಗೋಸ್ಕರ ಕೆಲವು ಮಹನೀಯರು ಅನೇಕ ಬಗೆಗಳಲ್ಲಿ ಸಹಾಯ ಮಾಡಿದ್ದಾರೆ. ಕೆಲವು ದಿನಗಳ ಹಿಂದೆಯೇ ಮದರಾಸು ಗವರ್ನರರವರು ತಿರುಚಿನಾಪಳ್ಳಿ ಅತ್ತಕಡೆಗೆ ದಯಮಾಡಿಸಿದ್ದಾಗ ಮಹಾರಾಜೇಶ್ರಿ ಬಹುಮಾನಪಟ್ಟ ಶಿವಸ್ವಾಮಿ ಐಯ್ಯರವರು ತನ್ನ ಸ್ವಂತದುಡ್ಡಿಂದಲೇ ಖರ್ಚು ಮುಟ್ಟಿಸಿ ನಡೆಯಿಸುತ್ತಿದ್ದ ಒಂದು ಶಾಲೆಯನ್ನು ಸಂದರ್ಶಿಸಿದರು. ಹೀಗೆಲ್ಲಾ ಕ್ರಮೇಣವಾಗಿ ವಿದ್ಯೆಯೂ ದಾನಾರ್ಹವೆಂಬದು ದಿನೇದಿನೇ ಧನಾಢ್ಯರ ಮನಸ್ಸಿಗೆ ಗೋಚರವಾಗಹತ್ತಿದೆ.

ಆದರೆ ನಮ್ಮ ಜಿಲ್ಲೆಯಲ್ಲಿ ಯಾರಾದರೂ ಒಬ್ಬರೇ ಒಬ್ಬರು ಇದುವರೆಗೆ ಚಂದಯ್ಯ ಹೆಗಡೆಯವರು ತೋರಿಸಿದಂತಹ ಔದಾರ್ಯವನ್ನು ತೋರಿಸಲಿಲ್ಲವೆಂದೇ ಹೇಳಬೇಕು ನಿರಂತರವೂ ದಾನಧರ್ಮ ನಿರತರಾಗಿರುವ ಹೆಗಡೆಯವರ ಸ್ಥಾನಕ್ಕೇನೇ ಧರ್ಮಸ್ಥಳವೆಂಬ ಹೆಸರು ಅನ್ವರ್ಥನಾಮವಾಗಿರುವುದೆಂದು ಎಲ್ಲರಿಗೆ ತಿಳಿದೇ ಇದೆ. ಅದರಲ್ಲಿಯೂ ದಶೆನಗಳಲ್ಲೆಲ್ಲಾ ವಿದ್ಯಾದಾನವೇ ಮಹಾ ದಾನವೆಂಬ ಶಾಸ್ತ್ರ ಸೂತ್ರದ ತತ್ವವನ್ನು ಚೆನ್ನಾಗಿ ಗ್ರಹಿಸಿ ಹೆಗಡೆಯವರು ಚಾಚಿದ ಕೊಡುಗೈಯು ಇನ್ನಷ್ಟು ಅರ್ಥಗರ್ಭಿತವಾಗುವುದು ಆ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರನ ಪ್ರಸಾದವು ಕೊನೆವರೆಗೂ ಇದೇ ತೀತಿಯಲ್ಲಿದ್ದು ಹೆಗಡೆಯವರಂತೆಯೇ ಉಪ್ಪಿನಂಗಡಿ ತಾಲೂಕಿನ ಇತರ ಸದ್ಗೃಹಸ್ಥರನ್ನೂ ಪ್ರೇರೇಪಿಸುವುದೆಂಬುದರಲ್ಲಿ ಸಂದೇಹವಿರದು.

ನಾವು ಒಂದೇ ಒಂದು ಉದಾಹರಣೆಯನ್ನು ಕೊಡುವುದಾದರೆ, ಬೆಳ್ಳಿಪಾಡಿಯ ಕುಟುಂಬದವರ ಹೆಸರನ್ನೆತ್ತಬಹುದು ಯೂರೋಪು ಖಂಡದಲ್ಲಿ ನಡೆಯುತ್ತಿರುವ ಭೀಕರವಾದ ಕೋಲಾಹಲದಲ್ಲಿ ಅಹುತಿಯಾಗುವವರ ನಿವಾರಣಾರ್ಥವಾಗಿ ಉಪ್ಪಿನಂಗಡಿ ತಾಲೂಕಿನವರ ಮಹಾ ಸಭೆಯು ಕೂಡಿದ್ದಾಗ, ಧರ್ಮಸ್ಥಳದ ಹೆಗಡೆಯವರು ರೂ ೫೦೦ ವಂತಿಗೆ ಕೊಟ್ಟರ್ತಾರೆಂಬ ವಾರ್ತೆಯನ್ನು ಪ್ರಕಟಿಸುತ್ತಲೇ, ಬೆಳ್ಳಿಪಾಡಿ ಕುಟುಂಬದ ಪ್ರತಿನಿಧಿಯಾಗಿ ಒಂದಿದ್ದವರು ರೂ ೫೦೫ ವಂತಿಗೆ ಹಾಕಿದರಂತೆ! ಯೂರೋಪ ಖಂಡದಲ್ಲಿ ಅತ್ಯಂತ ದೂರದಲ್ಲಿರುವ ದೇಶದ ನಿವಾಸಿಕರ ತಾತ್ಕಾಲಿಕ ಸಂಕಷ್ಟಗಳ ನಿವಾರಣೆಗೋಸ್ಕರ ಕೂಡಾ ಇಂತಹ ಶಭಸ್ಪರ್ಧೆಯನ್ನು ಕೋರಿಸಿದವರು ಮನೆಬಾಗಲಲ್ಲೆಂಬಂತೆ ಅತ್ಯಂತ ಸವಿಾಪದವರ ಅಜ್ಞಾನನಿಂ ಮಹಾ ವಿಪತ್ತಿನಿಂದ ಸಂಭವಿಸುವ ನಿರಂತರ ಸಂಕಷ್ಟಗಳ ಅಮೂಲಪರಿಹಾರಕ್ಕೋಸ್ಕರ ಎಲ್ಲರಿಗಿಂತಲೂ ತಾವೇ ಮಿಗಿಲೆನಿಸುವಷ್ಟು ದ್ರವ್ಯ ಸಹಾಯವನ್ನು ಅತ್ಯುತ್ಸಾಹದಿಂದ ಎಂದಿಗೂ ಮಾಡದೆ ಇರಲಾರರೆಂದು ನಾವು ದೃಢವಾಗಿ ನಂಬುತ್ತೇವೆ ಒಬ್ಬನು ಹಜಾರವನ್ನು ಕಟ್ಟಿಸುತ್ತೇನೆಂದರೆ, ಇನ್ನೊಬ್ಬನು ಆ ಹಜಾರದ ಒಂದು ಬದಿಯ ಎಲ್ಲಾ ಕೋಣೆಗಳ ಇಡೀ ಸಾಲನ್ನೇ ತಾನು ಕಟ್ಟಿಸಿಕೊಡುತ್ತೇನೆಂದು ಏಕೆ ಹೇಳಲಾರನು? ಹಾಗೆ ಧರ್ಮಸ್ಥಳದ ಧರ್ಮದೊಂದಿಗೆ ಬೆಳ್ಳಿಪಾಡಿಯ ಬೆಳ್ಳಿಯು ಬೆರತರೆ ಶುಭಕಾರ್ಯವು ಕೈಗೂಡಿಯೇ ತೀರುವುದು.

ಕೆನರಾ ಹೈಸ್ಕೂಲಿನ ವರ್ಧಂತಿಯುತ್ಸಹ, ೧೯೧೫.

ದಕ್ಷಿಣಕನ್ನಡದಲ್ಲಿರುವ ಸ್ವತಂತ್ರ ಹೈಸ್ಕೂಲುಗಳಲ್ಲಿ ಕಳೆದ ಎರಡು ದಶಾಬ್ದಗಳಿಂದಲೂ ಹೆಸರು ಪಡೆದಿರುವ ಕೆನರಾ ಹೈಸ್ಕೂಲಿನ ವರ್ಧಂತಿಯನ್ನು ಈ ವರ್ಷ ದಶಂಬರ ತಾ 26ರಲ್ಲು ಜರಗಿಸುವುದಾಗಿ ತಿಳಿದಿದೆ. ಸದರಿ ಶಾಲೆಯಿಂದ ವಿದ್ಯಾಧ್ಯಾಸವನ್ನು ಹೊಂದಿರುವ ಹಳೆಯ ವಿದ್ಯಾರ್ಥಿಗಳಲ್ಲಿ ಹಲವರು ತಾವಾಗಿ ಒಂದು ಸಂಘವನ್ನೇರ್ಪಡಿಸಿಕೊಂಡು, ಆ ಉತ್ಸವವು ಸಾಂಗವಾಗಿ ನೆರವೇರುವಂತೆ ಧನ ಕೂಡಿಸಿ ವಿನಿಯೋಗಗಳನ್ನು ನಡೆಸಲು ಸಾಧನೆಮಾಡುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ, ನಾಲ್ಕಾರು ಮಾತುಗಳನ್ನು ಬರೆದುಕೊಳ್ಳಲು ಕ್ಷಮೆ ಬೇಡುವೆವು.

ಸಮಾಜದಲ್ಲಿ ಇತ್ತೀಚಿಗೆ ಕಾಣಬರುತ್ತಿರುವ ಪರಸ್ಪರ ಅನುರಾಗ ಸಹಕಾರಗಳ ಸದ್ಗುಣಗಳು ಇನ್ನೂ ರೂಢಿಗೆ ಬಾರದ ಇಪ್ಪತ್ತನಾಲ್ಕು ವರ್ಷಗಳಿಗೆ ಹಿಂದೆ,—ವಿದ್ಯೆಯಲ್ಲಿ ಹಿಂದುಳಿದ ವ್ಯಾಪಾರಿಗಳೆಂದು ಅವಹೇಳನಕ್ಕೂ, ತಿರಸ್ಕಾರಕ್ಕೂ ಗುರಿಯಾದ ಗೌಡಸಾರಸ್ವತರಲ್ಲಿ ಕೆಲವು ಹೊಸ ವಿದ್ಯಾವಂತರು, ಸಮಾಜ ಸೇವೆಯ ಕಾರ್ಯಕ್ಕೆ ಕೈಹಾಕಿ, ತಮ್ಮನ್ನು ಕಾವಾಗಿ ಅರ್ಪಿಸಿಕೊಂಡರು. ಬೆರಳೆಣಿಕೆಯಲ್ಲಿ ಅಡಗುವಷ್ಟಾಗುವಂತಹ ಇವರೇ ಕೆಲವರ ಶ್ರದ್ಧೆಯನ್ನೂ, ಉತ್ಸಾಹವನ್ನೂ ಕಂಡ ಅಗಣ್ಯ ಮಹನೀಯರಲ್ಲಿ ಕೆಲವರು ಇವರಿಗೆ ಬೆಂಬಲವಾಗಿ ನಿಂತು, ಮನಧನಗಳನ್ನು ಸಹಾಯವಾಗಿತ್ತುದರಿಂದ, ಈ ನೂತನಾಲಯವನ್ನು ಸಂಸ್ಥಾಪಿಸಲು ಮುಂಕೊಂಡವರಿಗೆ ತನುಮನಧನಗಳನ್ನೂ ಸಮರ್ಪಿಸಲು ಧೈರ್ಯವುಂಟಾದದು. ಅನಂತರ ಸ್ಥಳವೂ ದೊರೆತು, ಮಂದಿರಗಳನ್ನು ನಿರ್ಮಾಣ ಮಾಡಿದುದಾಯಿತು. ಅಲ್ಲಲ್ಲಿಂದ ಹಣವೂ ದೊರೆತುದು. ವಿದ್ಯಾರ್ಥಿಯರೂ ಉಪಾಧ್ಯಾಯರೂ ಕಲೆತ್ತು ಕೆಲಸ ಮಾಡಿ, ಶಾಲೆಯ ಹೆಸರಲ್ಲಿ ಗೌರವ ತುಂಬುವಂತೆ ಮಾಡಿದರು. ಉದಾತ್ತ ಹೃದಯರ ಸಹಾಯ, ಮಹನೀಯರ ಧರ್ಮಬುದ್ಧಿ, ಉಪಾಧ್ಯಾಯರ ಸೇವೆ, ಪರಿಜಾಲಕರ ಆಸಕ್ತಿ, ಸರಕಾರದವರ [illegible] ಧೂತಿ ಮುಂತಾದುವು ಕ್ರಮೇಣ ಒದಗುತ್ತ [illegible]

ನೆಯ ವರ್ಧಂತಿ ಸೂಚಕವಾದ ಜುಬಿಲಿಯ ಉತ್ಸವಕ್ಕೆ ತಕ್ಕುದಾದ ಯೋಗ್ಯತೆಯನ್ನು ಪಡೆದುಕೊಂಡು ಬರುತ್ತಲಿದೆ.

ಜೀವನ ಯುದ್ಧವು ಮಿಗಿಲಾಗುತ್ತ ಬರುತ್ತಿರುವ ಈ ದಿನಗಳಲ್ಲಿ, ಕಾರ್ಯ ನಿರ್ವಾಹಕರಾಗಲಿ ವಿದ್ಯಾಸಂಸ್ಥೆಗಳಾಗಲಿ ಅನಿರ್ವಾಹದ ದೆಸೆಯಿಂದ ವಿದ್ಯಾದಾನವನ್ನು ಮನಃಪೂರ್ತಿಯಿಂದ ಮಾಡಲು ದೆಸೆತೋರದಂತಿವೆ ಈಗ ಸರಕಾರವು ಕೊಡುವ ಗ್ರಾಂಟು ಉಚಿತ ಧನಸಹಾಯವು, ಅವಶ್ಯವಾಗಿಯೂ "ನನಗರ್ಧ—ನಿನಗರ್ದ" ಎಂಬುವ ಗಾದೆಯಂತೆ, ಸಂಸ್ಥೆಯವರು ಹಾಕುವ ಹಣದಷ್ಟರದೊಂದು ಅಂಶವೇ ಸರಿ ಶಾಲೆಗಳಿಗೆ ಹಿಂದೆಯೊಂದು ಉಂಬಳ ಶಾಸನವು ಬೆಂಬಲವಾಗಿದ್ದರೆ ಮಾತ್ರ, ಅದರಿಂದ ಹಣವನ್ನು ವಿನಿಯೋಗಿಸಿದ್ದಲ್ಲಿ, ಮುಂದೆ ಸರಕಾರವು ಏಕ್ಕಪ್ರಕಾರ ಅರ್ಧಾಂಶವನ್ನು ವಿಾರದಷ್ಟು ಧನಸಹಾಯ್ಯವನ್ನು ಮಾಡುವದು ಕಟ್ಟಡ ಉಪಾಧ್ಯಾಯರ ಸಂಬಳ, ಉಪಕರಣಗಳು ಪುಸ್ತಕಾದುವಕ್ಕೂ ಪರಿಚಾಲಕರು ಮಾಡುವ ವ್ಯಯವುಗಳೊಂದು ಪಾಲನ್ನು ಮಾತ್ರವೆ ಗ್ರೆಂಟಾಗಿ ಪಡೆಯಲಾಗುವುದು ಇಷ್ಟೂ ಅಲ್ಲದೆ ಗ್ರೆಂಟನ್ನು ಇಂತಿಂತಹ ಬಾಬಿನಲ್ಲಿ ಇಷ್ಟಿಷ್ಟೇ ಕೊಡಬೇಕೆಂದಿದೆ ಬಗ್ಗು ಬಾಬಿನಿಂದ ಮತ್ತೊಂದಕ್ಕೆ ಗ್ರೆಂಟನ್ನೇನೂ ಕೊಡಲಾಗುವುದೇ ಇಲ್ಲ

ಕೆಲವು ಉತ್ತಮವಾದ ಶಾಲೆಗಳಿಗೆ ಕಡಿಮೆ ಗ್ರೆಂಟು ಕೆಲವು ಉಚ್ಚತರಗತಿಯ ಶಾಲೆಗಳಿಗೆ ಗ್ರೆಂಟೇ ಇಲ್ಲದಿದೆ ಶಾಲೆಯು ದೊಡ್ಡದಾಗಿ, ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿರುವಂತೆ, ಅವರಿಗೆ 'ಸೀ ಇನ್‌ಕವರ್' ಎಂಬುದನ್ನು ಹೊತ್ತಾಗಿ ಸರಕಾರದ ನಿಯಮಗಳು ಎಡೆಸುತ್ತ ಬರುವುದರಿಂದ,—ಅನಿವಾರ್ಯವಾಗಿಯೂ ನಷ್ಟವೇನೂ ಅಂಕೆಗಳ ಲೆಕ್ಕದಲ್ಲಿ ತೋರದೆ, ಗ್ರೆಂಟೂ ದೊರೆಯದಂತಿದೆ ಸರಕಾರವು ಉದಾರಹಸ್ತದಿಂದ ಕೊಡುವೆನೆಂದರೂ, 'ಕೋಡ' ಪಿತದು ಇದುಕಾರಣ ಪರಿಚಾಲಕರು ಅತಂತ್ರರಾಗಿ ಉಪಾಧ್ಯಾಯರಿಗೆ ಸಂಬಳವನ್ನು ಕಡಿಮೆಮಾತಿಯೂ, ಇಕ್ಕಟ್ಟಿನಲ್ಲಿ ಸಿಕ್ಕುಕಟ್ಟಿನಲ್ಲಿ ಕಟ್ಟಡಗಳನ್ನು ಇರಿಸಿಯೂ, ಅನನುಕೂಲತೆಗಳಿಂದ ಮಿಗಿಲಾಗಿ ಹೆಣ್ಣೂಸೂ ನೆಂಕಾತಿ —ಸಂಸಾರ ಕಟ್ಟಿಕೊಂಡಿರುವ ಸಾವರರಂತೆ—ಮಾರ್ಕುತ್ತಿದ್ದರೂ ನಿಶ್ಚಿತರಿರಬೇಕಾಗುವುದು ಮಹಾಜನರಲ್ಲಿಯಾದರೂ ಈ ರೀತಿ ಉಚಿತಸ್ಥಿತಿಯನ್ನು ಸಾಧಿಸಬೇಕೆಂದು ಇವರು ಮಾಡುವ ಸೇವಾಟನೆಗಳು, ವಿದ್ಯೆಗೆ ಈ ಇರುವ ಗೌರವವನ್ನು ಸೂಚಿಸುವಂತಿದೆ

ಸಾಮಾನ್ಯವಾಗಿ ಉತ್ತಮತರದ ವ್ಯವಸ್ಥೆಯುಳ್ಳ ಸೆಕೆಂಡರಿ ಶಾಲೆಗಳಲ್ಲಿ ಗತಿಯು ಹೇಗಿರುತ್ತಿದೆಯೊ ಕಾಣೆ ಕೆನರಾ ಹೈಸ್ಕೂಲಿನ ಅವಸ್ಥೆಯೂ ಆಗಿದೆ ಕಾರ್ಯ ಚಾಲಕ ಸಮಿತಿಯವರು ಹಾಗೂ ಉಪಾಧ್ಯಾಯ ವರ್ಗದವರು, ಉತ್ತಮ ಆದರ್ಶಗಳನ್ನು ಇದಿರಿನಲ್ಲಿ ಇರಿಸಿಕೊಂಡು, ಯಥಾರ್ಥವಾದ ಶಿಕ್ಷಣದೆಡೆಗೆ ಇರುವರಾದರೂ, ಇನ್ನೂ ಕ್ರಮವಾಗಿ ಕಾಲಾ ವರ್ತಾರ್ಹ ಅತ್ಯಾವಶ್ಯಕವಾದ ಅವಿಷ್ಕೋ ಸಲಕರಣೆಗಳನ್ನು ಮಾಡಿಕೊಳ್ಳಲು ತಮ್ಮಲ್ಲಿರುವ ಆಸೆಯನ್ನು ಪೂರೈಸಿಕೊಳ್ಳದೆ ಬಿಡ್ಡಿನ ಸಲುವಾಗಿ ಕಳವಳಿಸುವರು ವಿದ್ಯಾವಿಷಯಕವಾಗಿ ಸಂಪೂರ್ಣ ಅರ್ಹತೆಗಳ ಜ್ಞಾನವೂ ಮಾಹಿತಿಯೂ ಇರುವವರು ಈ ಶಾಲೆಯನ್ನು ಸೇರಿಕೊಂಡಲ್ಲಿ,—ಕಾಲಾಕಾರ್ಯದಲ್ಲಿ ನಡೆದು ಹಾಗೂ ನಡೆಯಬೇಕಿರುವ ಪರಿವರ್ತನೆಗಳನ್ನು ತಾವೇಯಾಗಿ ತಿಳಿದುಕೊಳ್ಳಬಹುದಾಗಿದೆ ಉತ್ತಮ ವಾಗಿ ಈ ಶಾಲೆಯನ್ನು ಅತ್ಯುತ್ತಮನುವೆನಿಸಿಕೊಳ್ಳಲು, ಧನವೊಂದಿದ್ದರೆ—ಅನೇಕ ಕಾಲವು ಕಳೆಯಬೇಕಾದೀತು

೪೦೦ನ್ನು ಮೀರಿದ ವಿದ್ಯಾರ್ಥಿಗಳು ಈ ಶಾಲೆಯನ್ನು ಸೇರಿ ವಿದ್ಯೆಯನ್ನು ಗಳಿಸಿಕೊಂಡು ಕೊನೆಯ ಪಕ್ಷ ಇವರಲ್ಲಿ ೩೦೦ ಮಂದಿಗಳಾದರೂ, ತಮ್ಮತಮ್ಮಗೆ ಲಭಿಸಿರುವ ಉದ್ಯೋಗದಲ್ಲಿ, ಅದೆಷ್ಟೇ ಸಾಮಾನ್ಯವಾದ ದಾಗಿರಲಿ, ಜೀವನವನ್ನು ಮಾಡುತ್ತಲಿರುವರು. ಇವರೊಳಗೂ ಸಹಾನುಭೂತಿಯಾಗಿ ಳಿಂದ ಮಂದಿಗಳಿಗಿಂತಲೂ ಹೆಚ್ಚಿನವರೇ ಈ ಶಾಲೆಯಲ್ಲಿ ಧರ್ಮಾರ್ಥವಾಗಿ ವಿದ್ಯೆಯನ್ನು ಪಡೆದವರು ಶಾಲೆಯಿಂದ ಪಡೆದ ದಾನವನ್ನು ಇನ್ನೂ ಚತನವಾಗಿರಿಸಿಕೊಂಡು, ಅದರ ಪ್ರತಿದಾನ ಮಾಡುವ ಯೋಗ್ಯತೆಯು ಇನ್ನೂ ತಮ್ಮಲ್ಲಿರುತ್ತ ಇವರು ಸಹಾಯ ಮಾಡಲಾರರೆಂದು ಎಂದೂ ಹೇಳಲಾರರು ಪರಮಪದವಿಯಾದ ಐ. ಸಿ. ಎಸ್ ಹುದ್ದೆಗಳಿಗೂ ಸಂಬಂಧಿಸುವ ಮಹನೀಯರೂ ಈ ಶಾಲೆಯ ಹಳೆಯ ಹುಡುಗರಲ್ಲಿ ಕೆಲವರು ಇರುವರು. ವಕೀಲರು, ಡಾಕ್ಟರರು, ಗುಮಾಸ್ತೆಯರು, ರೆವಿನ್ಯು ಹಾಗೂ ಸಿವಿಲ್ ಅಧಿಕಾರಿಗಳು, ಉಪಾಧ್ಯಾಯರು, ವರ್ತಕರು, ಇನ್ನೆಷ್ಟೋ ಇತರಗತಿಯವರಲ್ಲಿ ಅನೇಕರು ಈ ಶಾಲೆಯಲ್ಲಿ ವಿದ್ಯೆ ಕಲಿತವರು ಒಬ್ಬೊಬ್ಬನು ತನ್ನಿಂದ ಸಾಧ್ಯವಾಗುವ ಘಟ್ಟಿನ ಸಹಾಯವನ್ನು ಈ ಶಾಲೆಗೆ ವರ್ಷಕ್ಕೊಮ್ಮೆ ಕೊಡುತ್ತ ಬರುವನಾದರೆ, ಕೆನರಾ ಹೈಸ್ಕೂಲನ್ನು ಅದ್ವಿತೀಯವಾಗಿ ಮಾಡಬಹುದಾಗಿದೆ. ಬಡವರು ವರ್ಷಕ್ಕೆ ನಾಲ್ಕಾಣೆಯನ್ನೂ ಕೊಡುವುದಾದರೂ, ಅದೇ ದರದಲ್ಲಿ ಎಲ್ಲ ಹಳೆಯ ವಿದ್ಯಾರ್ಥಿಗಳು ಕೊಡುವರಾದರೂ, ವರ್ಷಕ್ಕೆ ಒಂದು - ಸಾವಿರ ರೂಪಾಯಿಗಳಾದರೂ ಆಗ ಬಹುದು. ಇಷ್ಟೇ ರೂಪಾಯಿಗಳನ್ನೂ ಸರಕಾರದಿಂದಲೂ, ಕಾಲಾಧಿಕಾರಿಗಳು ವ್ಯಯಿಸುವಾಗ ಸಹಾಯವಾಗಿ ಪಡೆಯಬಹುದು. ಈ ರೀತಿ ಸಹಾಯವು ಕೆಲವು ವರುಷಗಳ ತನಕ ದೊರಕಿದರೆ ಎಲ್ಲಿ ಸರಂಜಾಮುಗಳನ್ನೂ ಮಾಡಿಕೊಂಡು, ಶಾಲೆಯನ್ನು ಅತ್ಯುತ್ತಮ ಸ್ಥಿತಿಗೆ ತಂದಿರಿಸಿದಂತಾಗುವ ಆ ಭಾಗ್ಯದ ಅಧಿಕಾರಿಗಳು ಶಾಲೆಯಿಂದ ವಿದ್ಯಾಲಾಭ ಪಡೆದವರೇ ಆಗುವರು. M. N. K

ಪತ್ರವ್ಯವಹಾರ.

(Self-save) ಸೆಲ್ಫ್ ಸೇವ್, ಕ್ಷೌರಕತ್ತಿಯನ್ನು ತಾವಾಗಿಯೇ ಉಪಯೋಗಿಸಿದ್ದರಿಂದ ಉಂಟಾದ ಪರಿಣಾಮ!

ಸ್ವಾಮಿ,

ಜಾತಿ, ಯರ ರೀತಿ ಮತ್ತ ನೀತಿ ಈ ವಿಧವಾಗಿ ಜಾತಿಯ ವಿಷಯ ತಮ್ಮ ಪತ್ರಗಳಲ್ಲಿ ಆಗಿಂದಾಗ್ಯೆ ಲೇಖನಗಳು ಪಲವು ಪ್ರಕಟವಾಗುತ್ತಲಿವೆ. ಕ್ಷೌರಕತ್ತಿಯನ್ನು ಉಪಯೋಗಿಸಿ ವೃತ್ತಿ ನಡಿಸುತ್ತಿರುವ ಕ್ಷೌರಿಕ ಜಾತಿಯು ಈಗಲೂ ಇರುವದು. ಇಂಥಾ ವೃತ್ತಿಯವರಿದ್ದರೂ ಉಚ್ಚ ತರಗತಿ ಬ್ರಾಹ್ಮಣರಲ್ಲಿಯೂ ಇತರ ಮೇಲು ಜಾತಿಯ ಹಿರಿಯೂರಗಳಲ್ಲಿಯೂ, ಸರಕಾರದ ಭಾರಿ ಭಾರಿ ನೌಕರರೂ, ವಕೀಲರೂ ಇನ್ನ ನಾನಾ ಪ್ರಮುಖ ವೃತ್ತಿಗಳನ್ನು ನಡಿಸುವವರೂ ಕ್ಷೌರಕತ್ತಿಯನ್ನು ಕೈಯಲ್ಲಿ ಹಿಡಕೊಂಡು ಗಡ್ಡವನ್ನು ತಾವೇ ಬೋಳಿಸುತ್ತಿದ್ದಾರೆ. ಈಗ ಇಂಥವರ ಜಾತಿಯ ವಿಚಾರದಲ್ಲಿ ಮಾತೆತ್ತಲು ಸಾಧ್ಯವೇ? ಸ್ವಾಮಿ, ಕೆಲವು ವರುಷಗಳ ಹಿಂದೆ ಈಗಿನ ಬ್ರಾಹ್ಮಣ ವಕೀಲ ಸರಕಾರದ ನೌಕರರಂತೆ ಕ್ಷೌರಕತ್ತಿಯನ್ನು ಉಪಯೋಗಿಸಿದ ಬ್ರಾಹ್ಮಣ ವರ್ಗಕ್ಕೆ ಸೇರಿದ್ದ ಇಬ್ಬರು ಸಹೋದರರ ಇತಿಹಾಸವನ್ನು ಕೇಳುವಿರೋ?

ಕ್ಷೌರಿಕರು ಸಿಕ್ಕುವಲ್ಲಿ ಕ್ಷೌರವು ಅತಿರೇಕವಾಗಿ ಬೆಳೆದಿತ್ತು. ಬೇರೆಯೂ ಉಪಾಯವಿಲ್ಲದ್ದರಿಂದ ಸಹೋದರರಿಬ್ಬರು ಕ್ಷೌರಕತ್ತಿಯನ್ನು ಹಿಡಕೊಂಡು ಒಬ್ಬರ ತಲೆಯನ್ನು ಇನ್ನೊಬ್ಬರು ಬೋಳಿಸಿಬಿಟ್ಟರು ಕೂಡಲೆ ಊರೆಲ್ಲಾ ವಾರ್ತೆ. ಜಾತಿಯ ಕೋಲಾಹಲ ರಾಮನೆ ಮತ್ತು ಪಿನ್ನಹ ಪತ್ರಗಳ ರಾಶಿ. ಪರಸ್ಪರ ಮಕ್ಕರ ಕಡಿದಾಟ, ಹೊಡೆದಾಟ ಇಬ್ಬರೂ ಸಹೋದರರಿಗೆ ಬಹಿಷ್ಕಾರ! ಇವರಿಬ್ಬರ ಪಟಶ್ಕಾರ್ದಗಳನ್ನ ಮಾಡಿ ಪೂರ್ಣವಾಗಿ ಇವರ ಸಂಪರ್ಕವನ್ನು ಜಾತಿಯಿಂದ ಕಡಿದು ಬಿಟ್ಟರು ಆ ಕಾಲದಲ್ಲಿಯೂ ಮನುಷ್ಯ ಸ್ವಭಾವದಲ್ಲಿ ಸಹಾನುಭೂತಿ, ಸಹಾನುಭಾವಗುಣಗಳಿದ್ದರಿಂದ 'ಸೆಲ್ಫ್ ಸೇವ್' ಮಾಡಿದ ಸಹೋದರರ ರೀತಿ ಅಥವಾ ನೀತಿಯನ್ನು ನೋಡಿಕೊಂಡು ಅದೇ ಜಾತಿಯ ಕೆಲವು ಜನರು ಈ ಸಹೋದರರನ್ನು ಕೂಡಿ ನಡದರು ಕಾಲಕ್ರಮೇಣ ಸಹೋದರರ ಜಾತಿಯು ಬೆಳೆಯಿತು. ಕ್ಷೌರಿಕ ವೃತ್ತಿಯನ್ನ ಇವರು ಅನುಸರಿಸಬೇಕಾಯಿತು ಇವರದೇ ಒಂದು ವೃಂದವಾಯಿತು ಈ ಜಾತಿಗೆ ಗುರುಗಳ ಅಗತ್ಯವು ತೋರಿತು. ಶ್ರೀಂಗೇರಿ ಜಗದ್ಗುರುಗಳು ಈ ಜಾತಿಯನ್ನು ತಮ್ಮ ಶಿಷ್ಯವರ್ಗದಲ್ಲಿ ಸೇರಿಸಿಕೊಂಡರು

ಮಂಗಳೂರಲ್ಲಿ ಈ ಜಾತಿಯ ಕೆಲವು ೧೫ ಮನೆಗಳು ಇರುತ್ತವೆ ಇವರು ಸಮಾಜದಲ್ಲಿ ಶೂದ್ರರ ಸ್ಥಾನದಲ್ಲಿರುವರು. ಇಲ್ಲಿರುವವರು ಕೌಂಶ, ಭಾರದ್ವಾಜ, ಮತ್ತು ವತ್ಸ ಗೋತ್ರೋತ್ಪನ್ನರೆಂಬದಾಗಿ ತಿಳಿದುಬರುತ್ತದೆ ಸ್ಥಾಯಿಧರಿತರಾದ ಮೇಲೆ ಶಬರೋಟನೆಗಳ ಕಾಲದಲ್ಲಿ ಇವರು ಜನಿವಾರವನ್ನು ಹಾಕಿಕೊಳ್ಳುವರು. ನಂತರ ಇವರಿಗೆ ಜನಿವಾರವು ಸಾಯುವ ತನಕವೂ ಇರುವದು ಕರಾಡಿ ಭಟ್ಟರು ಇವರ ಪುರೋಹಿತರಾಗಿದ್ದಾರೆ. ಉಪಾಕರ್ಮದ ದಿನ ಪ್ರತಿ ವರುಷದಲ್ಲಿಯೂ ಇವರು ಜನಿವಾರಗಳನ್ನು ಹಾಕಿಕೊಳ್ಳುವರು.

ಇವರ್ಯಾರೆಂಬುದು ಈಗ ತಿಳಿಯುವದೋ? ಶಣಯಿ ಅಥವಾ ಶ್ಯಾನುಭೋಗ, ಕಾಮತ್, ಪೈ, ಪ್ರಭು ಮೊದಲಾದ ಪೈಕಗಳಿಗೆ ಸೇರಿದವರು ಇವರಲ್ಲಿರುವರು. ಕೊಂಕಣಿ ಭಾಷೆಯನ್ನಾಡುವರು. ಸಾರಸ್ವತ-ಗೌಡಸಾರಸ್ವತ ಬ್ರಾಹ್ಮಣ ವೃಂದದಿಂದ ಹೊರಬಿದ್ದಿದ್ದವರು—ಮಲ್ಯರು! ಮಲ್ಯರ ಪೈಕಕ್ಕೆ ಸೇರಿದ್ದ ತಾವಾಗಿಯೇ ತಲೆ ಬೋಳಿಸಿಕೊಂಡ ಸಹೋದರರಿಬ್ಬರ ಜಾತಿ! ಈಗ ಸಕಲ ಬ್ರಾಹ್ಮಣರಲ್ಲಿಯೂ ಪ್ರಚಾರಕ್ಕೆ ಬರುತ್ತಿರುವ "ಸೆಲ್ಫ್ ಸೇವಿಂಗಿ"ನ ಪರಿಣಾಮ! ಸ್ವಾಮಿ, ಸಾವಿರಾರು ಜಾತಿಗಳು ಬೆಳೆದುಹೋದದ್ದು ಹೇಗೆಂದು ನೋಡಿರಿ. ಸಮುದಾಯದಲ್ಲಿ ವ್ಯಕ್ತಿಯರನ್ನು ತಾವಾಗಿಯೇ ಬೆಳಿಸಿದ ವೃತ್ತಾಂತವನ್ನು ಹೇಗೆಂಬುದು ತಿಳಿಯರಿ. ಇಲ್ಲಿಗೆ ಇದೊಂದು ಜಾತಿದ್ದು ಸಾಕು! ಜಾತಿ ರೀತಿ ಮತ್ತು ಅದರ ನೀತಿ!

ಯುದ್ಧ ಸಮಾಚಾರ.

ತಾ. 8ನೇ ನವಂಬರ.

"ಜಾವಾನಿಸ್ ಪ್ರಿನ್ಸ್" ಎಂಬ ಹಡಗವು ಶತ್ರುಗಳ ಜಲಂತರ್ಗಾಮಿ ನಾವೆಯಿಂದ ತಪ್ಪಿಸಿ ಸುರಕ್ಷಿತವಾಗಿ ಬಂದರಕ್ಕೆ ತಲಪಿರುವದು "ಜಾವಾನಿಸ್ ಪ್ರಿನ್ಸ್" ಹಡಗದಲ್ಲಿ ಬಹಳ ಮಂದಿ ನಾವಿಕರೂ ಪ್ರಯಾಣಿಕರೂ ಇದ್ದರು. ಈ ಹಡಗವು ಜರ್ಮನ ಜಲಂತರ್ಗಾಮಿ ನಾವೆಯಿಂದ ತಪ್ಪಿಸಿಕೊಳ್ಳಲು 5½ ತಾಸುಗಳ ತನಕ ಒದ್ದಾಡಿ ಕಡೆಗೆ ತಪ್ಪಿಸಿ ಬಂದಿರುತ್ತದೆ ಈ ಕೃತ್ಯಕ್ಕಾಗಿ ಹಡಗದ ಕೆಪ್ತನನಿಗೆ ೫೦೦ ಪವನುಗಳು ಇನಾಂ ದೊರಕಿರುತ್ತದೆ ಹಡಗದ ನಾವಿಕರು ತಮ್ಮೊಳಗೆ ಹಂಚಿಕೊಳ್ಳುವ ಬಗ್ಗೆ ೫೦೦ ಪವನುಗಳು ಕೊಡೋಣಾಗಿರುತ್ತದೆಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುತ್ತಾರೆ

ಬ್ರಿಟಿಷ ವಾಯುನಾವೆಗಳು ಜರ್ಮನ ಪ್ರಾವಿನ್ಸಿನವಾದ ಡೊನ್ ಎಂಬ ರೈಲ್ವೆ ಸ್ಟೇಶನಿನ ಮೇಲೆ ಗುಂಡುಗಳನ್ನು ಹಾಕಿರುತ್ತವೆ ರೈಲ್ವೆ ಲೈನಿಗೆ ಸಿಡಿಮದ್ದಿನ ಗುಂಡುಗಳು ತಗಲಿರುತ್ತವೆ ಇದರಿಂದ ಪಟ್ಟಿಹದ ಕೆಲವು ಕಡೆಗಳಲ್ಲಿ ಬಿಂಕಿ ತಗಲಿಕೊಂಡಿರುವದು. ಮದ್ದುಗುಂಡುಗಳ ಕೊರಡಿಯಲ್ಲಿ ಸಿಡಿತ ಉಂಟಾಗಿರುವದು ಈ ಬ್ರಿಟಿಷರ ವಾಯುನಾವೆಗಳೊಡನೆ ಜರ್ಮನರ ೪ ವಾಯು ನಾವೆಗಳು ಕಾದಾಡಬಂದವು ಬ್ರಿಟಿಷರ ನಾವಿಕರು ಆವನ್ನು ಸಲಭವಾಗಿ ಹಿಂದಕ್ಕೆ ಓಡಿಸಿ, ಸುರಕ್ಷಿತವಾಗಿ ಹಿಂದೆರಳಿ ಬಂದಿರುವರು.

ನಿಷ್ ಮತ್ತು ಸೊಪಿಯದವರೆಗೆ ರೈಲ್ವೇ ವ್ಯವಹಾರಗಳು ಪುನಃ ನಡೆಯಲು ತೊಡಗಿರುತ್ತದೆ ನಿಷ್ ಮತ್ತು ಬಲ್ಗೇರಿಯಗೆ ಇನ್ನೂ ರೈಲ್ವೆ ವ್ಯವಹಾರಗಳು ನಡೆಯ ಪ್ರಾರಂಭವಾಗಲಿಲ್ಲವೆಂತ ತಿಳಿದು ಬರುತ್ತದೆ

ಮರ್ಮೋರ ಸರೋವರದಲ್ಲಿದ್ದ ಬ್ರಿಟಿಷರ ಒಂದು ಜಲಂತರ್ಗಾಮಿ ನಾವೆಯು ಇಸ್ಮಿದ್ ರೈಲ್ವೇಯ ಒಂದು ಟ್ರೇನನ್ನ ಹಾಳು ಪಡಿಸಿರುವದು ತುರ್ಕರ ಒಂದು ಡಿಸ್ಟ್ರೋಯರ್ ನಾವೆಯನ್ನು ಮುಣುಗಿಸಿರುತ್ತದೆ ಅದೇ ಜಲಂತರ್ಗಾಮಿ ನಾವೆಯು ೪ ದೊಡ್ಡ ವ್ಯಾಪಾರ ಹಡಗಗಳನ್ನು ಮುಣುಗಿಸಿರುತ್ತದೆಂಬ ವಾರ್ತೆ ಬಂದಿರುತ್ತದೆ

ತಾ. ೮ನೇ ದಶಂಬರ.

ಬ್ರಿಟಿಷ ಇಂಡಿಯಾ ಕಂಪೆನಿಯ "ಉಮೈಟ್" ಹಡಗವನ್ನ ಬ್ರಿಟಿಷರ ಜಲಂತರ್ಗಾಮಿ ನಾವೆಯು ಮುಣುಗಿಸಿರುತ್ತದೆ ಹಡಗದ ೪೯ ಜನರನ್ನು ಕರೆಸೇರಿಯಲ್ಲಿರುವರು ೫ ಆಫೀಸರರೂ ೪೭ ಕಲಾಸಿಗಳೂ ಕಾಣೆಯಾಗಿರುವರು.

ಜರ್ಮನರ ಜಲಂತರ್ಗಾಮಿ ನಾವೆಯು ಮೆಡಿಟರೇನಿಯನ್ ಸಮುದ್ರದಲ್ಲಿ ಗ್ರೀಕರ ಒಂದು ಹಡಗವನ್ನು ಮುಣುಗಿಸಿರುತ್ತದೆ ಆಟೊಮ್ಯನ್, ಬೂಸ್, ಸೌಜೆ, ಬ್ಯಸ ಮತ್ತು ನೋರ್ವೆಯ ಮಧ್ಯೆ ತೋಪುಕಾಳಗಗಳು ನಡೆಯುತ್ತಿವೆ ಆರ್ಗೋನ್ನೆ ಮತ್ತು ಶಂಪೇನೆಯಲ್ಲಿ ಕಠಿಣ ತೋಪುಕಾಳಗವು ನಡೆದಿರುವದು

ಡರ್ಡನೆಲ್ಲೆಸ್‌ನಲ್ಲಿ ಉಭಯ ಕಡೆಗಳಲ್ಲಿಯೂ ತೋಪುಕಾಳಗವು ನಡೆಯುತ್ತಿದೆ. ಮಿತ್ರರ ವಾಯುನಾವೆಯು ತುರ್ಕರ ಹಂದರಗಳ ಮೇಲೆ ಸಿಡಿಮದ್ದುಗಳನ್ನು ಬಿಸಾಡಿರುತ್ತವೆ

ತಾ. ೯ನೇ ದಶಂಬರ.

ಆಸ್ಟ್ರಿಯನರ ಯುದ್ಧಹಡಗವು ಫ್ರೆಂಚರ ಒಂದು ಜಲಂತರ್ಗಾಮಿ ನಾವೆಯನ್ನು ಮುಣುಗಿಸಿ ನಾವಿಕರಲ್ಲಿ ೫೮ ಮಂದಿಯನ್ನು ತೆರೆಹಿಡಿದಿರುವದೆಂತ ಪ್ರಕಟವಾಗಿದೆ.

ಸ್ವೆಂಡರ್ಡ್ ಬ್ಯಲ್ ಕಂಪೆನಿಯ "ಪ್ರೆಟ್ರೋಲಿಟ್" ಎಂಬ ನಾವೆಗೆ ಕ್ರೀತ ಮತ್ತು ಟ್ರಿಪೋಲಿಯ ಮಧ್ಯೆ ಆಸ್ಟ್ರಿಯನರ ಜಲಂತರ್ಗಾಮಿ ನಾವೆಯು ಗುಂಡುಹಾರಿಸಿರುವದು.

ಆಸ್ಟ್ರಿಯನರ ಜಲಂತರ್ಗಾಮಿ ನಾವೆಯು ಮೆಸಿನದ ಬಳಿ ಸ್ಟೀಕರ ಒಂದು ಹಡಗವನ್ನು ನಿಲ್ಲಿಸಿ ಆದರಲ್ಲಿದ್ದ ಬ್ರಿಟಿಷ ಕರ್ನೆಲ್ ನೇಪಿಯರ್ ಮತ್ತು ಬ್ರಿಟಿಷ ಪಾರ್ಲಮೆಂಟ್ ಸಭೆಯ ಮೆಂಬರರಾದ ಮೆ! ಸ್ಟೈಫಿಲ್ಲರನ್ನು ತಪ್ಪಿಸಿಕೊಂಡು ಹೋಗಿರುತ್ತದೆ.

ಒಂದು ಜಲಂತರ್ಗಾಮಿ ನಾವೆಯು ಅಮೇರಿಕಾದವರ ಒಂದು ಹಡಗವನ್ನು ಮುಣುಗಿಸಿರುತ್ತೆಂಬ ವಾರ್ತೆ ಬಂದಿರುತ್ತದೆ. ಬ್ರಿಟಿಷರ "ಕೆಲ್ಟಿಕ್" ಎಂಬ ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ಮುಣುಗಿಸಿರುತ್ತದೆಂಬ ವಾರ್ತೆ ಬಂದಿರುತ್ತದೆ

ಕಾಕಾಸಸ್ ರಣರಂಗದ ಪರ್ವತಗಳಲ್ಲಿ ೧೯ ಅಡಿ ಎತ್ತರಕ್ಕೆ ಹಿಮ ಬಿದ್ದಿರುವದೆಂಬ ವಾರ್ತೆ ಬಂದಿರುವದು.

ಮಕೆದೋನಿಯದಲ್ಲಿ ಬಲ್ಗೇರಿಯನರು ಬ್ರಿಟಿಷ ಮತ್ತು ಫ್ರೆಂಚ್ ಸೇನೆಗಳ ಮೇಲೆ ಬಿದ್ದು ಹಿಮ್ಮೆಟ್ಟಿರುತ್ತಾರೆ. ಬ್ರಿಟಿಷರಲ್ಲಿ ಪ್ರಾಣಾಪಾಯಹೊಂದಿದವರ ಸಂಖ್ಯೆ ಬಹಳ ಕಡಿಮೆ.

ತಾ. ೧೦ನೇ ದಶಂಬರ.

ಆಮಿರಿಕದವರ "ಅಂಕೋನ" ಎಂಬ ಹಡಗವನ್ನು ಆಸ್ಟ್ರಿಯನರ ಜಲಂತರ್ಗಾಮಿ ನಾವೆಯು ಮುಣುಗಿಸಿತ್ತೆಪ್ಪೆ ಈ ಸಂಬಂಧ ಅವರಿಂದ ಸರಕಾರದವರು ಆಸ್ಟ್ರಿಯನರಿಗೆ ಪತ್ರ ಬರೆದು, "ಅಂಕೋನಾ" ಹಡಗವನ್ನು ಮುಣುಗಿಸಿದ ಜಲಂತರ್ಗಾಮಿ ನಾವೆಯ ಕಪ್ತಾನರನ್ನಿ ತಕ್ಕ ಶಿಕ್ಷೆ ವಿಧಿಸಬೇಕೆಂತಲೂ, ಈ ಹಡಗದಲ್ಲಿ ನಾಶವಾದ ಆಮೆರಿಕಾದವರ ಕುಟುಂಬದವರಿಗೆ ಪರಿಹಾರ ದ್ರವ್ಯವನ್ನು ಕೊಡಬೇಕೆಂತಲೂ ಇಂಥಾ ಸಂಗತಿಗಳು ಮುಂದಕ್ಕೆ ನಡೆಸುವದಿಲ್ಲವೆಂಬ ಭರವಸೆ ಕೊಡಬೇಕೆಂತಲೂ ತಿಳಿಸಿರುವರು

ಜರ್ಮನರ ಜಲಂತರ್ಗಾಮಿ ನಾವೆಗಳು ಪುನಃ ೩ ಹಡಗಗಳನ್ನು ಮುಣುಗಿಸಿರುತ್ತವೆ

ರುಷ್ಯದ ದೂತರವರು ರಣರಂಗಕ್ಕೆ ಹೋಗಿರುವರು.

ಆಸ್ಟ್ರಿಯನರ ಯುದ್ಧನಾವೆಗಳ ಸಾನ್‌ಗೊವಾನ್ನಿಯ ಮೇಲೆ ಗುಂಡು ಹಾರಿಸುತ್ತಿವೆ ಒಂದು ಗ್ರೀಕರ ಹಡಗವನ್ನೂ ಇಟಲಿಯನರ ಒಂದು ಹಡಗವನ್ನೂ ಇತರ ೧೦ ನಾವೆಗಳನ್ನೂ ಫ್ರೆಂಚರ ಒಂದು ಜಲಂತರ್ಗಾಮಿ ನಾವೆಯನ್ನೂ ಈ ಯುದ್ಧ ಹಡಗಗಳ ಮುಣಗಿಸಿರುತ್ತವೆ

ಮಿತ್ರರ ಸೇನೆಯ ಕೈವೆಲಕನ್ನು ಬಟು ಡಮಿರ್‌ಶಾಪು ಎಂಬಲ್ಲಿಯ ಹೊಸ ನೆಲೆಗೆ ಸೇರಿರುವದ

ಜರ್ಮನ ಮತ್ತು ಬಲ್ಗೇರಿಯನರ ಸೇನೆಗಳ ಮೊನಸ್ಟಿರನ್ನು ಪ್ರವೇಶಿಸಿರವದ

ತಾ ೧೧ನೇ ದಶಂಬರ.

ಬಲ್ಗೇರಿಯನರ ಸೇನಿಕರ ಕೆಲವು ಕಡೆಗಳಲ್ಲಿ ಮಿತ್ರಸೇನಿಕರ ಮೇಲ್ಯಾಯದಿರುವರು ಪ್ರತಿ ಕಡೆಯಲ್ಲಿ ಬಲ್ಗೇರಿಯನರು ವಿಶೇಷ ನಷ್ಟಪಟ್ಟು ಹಿಮ್ಮೆಟ್ಟಿರುವರು

ಆಸ್ಟ್ರಿಯನರ ಯುದ್ಧಹಡಗಗಳ ದುರಾಕ್ರಿ ಪಟ್ಟಣದ ಮೇಲೆಯೂ ಇಟಲಿಯನರ ತರ್ತಿಲ್ಲದ ಟಿಲಗ್ರಾವ್ ಸ್ಟೇಶನಿನ ಮೇಲೆಯೂ ಗುಂಡು ಹಾರಿಸುತ್ತವೆ ಮೋಂಟಿನೆಗ್ರೆಯನರ ಮತ್ತು ಅಲ್ಬಾನಿಯರ ಕೆಲವು ಸಣ್ಣ ಹಡಗಗಳು ಮುಣುಗಿಸಲ್ಪಟ್ಟಿರುತ್ತವೆ

ತಾ. ೧೫ನೇ ದಶಂಬರ.

ಬಾಲ್ಟಿಕ್ ಸಮುದ್ರದಲ್ಲಿ ಜರ್ಮನ್ ದೊಡ್ಡ ಸೌಕಾವಳಿ ಕಡೆ ನಗಳು ನಡೆಯುವ ಸಂಭವವಿದೆಂಬ ವಾರ್ತೆ ಇದೆ

ಜರ್ಮನ ಜಲಂತರ್ಗಾಮಿ ನಾವೆಗಳು ಬ್ರಿಟಿಷರ ಒಂದು ಹಡಗವನ್ನೂ ಇಟಲಿಯನರ ಒಂದ ಹಡಗವನ್ನೂ ನೋರ್ವೇದೇಶದ ತರ ಒಂದು ಹಡಗವನ್ನೂ ಗ್ರೀಕರ ಒಂದು ಹಡಗವನ್ನೂ ಮುಣುಗಿಸಿರುತ್ತವೆ

ಈ ಫ್ರಾನ್ಸ್ ರಣರಂಗದಲ್ಲಿ ತೋಪುಕಾಳಗಗಳ ನಡೆಯುತ್ತಿವೆ ವಿಶೇಷ ಸಂಗತಿಗಳೇನೂ ನಡೆದಿರುವದಿಲ್ಲ

ಬ್ರಿಟಿಷ ಮಂತ್ರಿಗಳಾದ ಸರ್ ಎಡ್ವರ್ಡ್‌ಗ್ರೆ ಮತ್ತು ಕೆಚನರ್ ಪ್ರಭುಗಳವರು ಪಾರೀಸಿಗೆ ಹೋಗಿ ಅಲ್ಲಿಯ ಮಂತ್ರಿಗಳೊಡನೆ ಆಲೋಚನೆ ನಡಿಸಿದರು.

ಪರ್ಶಿಯಕ್ಕೆ ಸೇರಿದ ಹೆಮಡಾನಿನ ಬಳಿ ಶತ್ರುಗಳ ೫೦೦ ಸೇನಿಕರಿದ್ದ ಒಂದು ಸೇನೆಯನ್ನು ರುಷ್ಯನರು ಸೋಲಿಸಿ ಹಿಂದಕ್ಕೆ ಅಟ್ಟಿರುತ್ತಾರೆ. ರುಷ್ಯನರ ಸೇನೆಯು ಸುಲ್ತಾನ್ ಬುಲಾಕ್ ಕಣಿವೆಯನ್ನು ಸ್ವಾಧೀನಮಾಡಿಕೊಂಡಿರುವದು ಶತ್ರುಗಳು ಗಲಿಬಿಲಿಯಿಂದ ಓಡಿಹೋಗಿರುತ್ತಾರೆ. ಈಗ ಹೆಮಡಾನಿಗೆ ಹೋಗುವ ದಾರಿಯು ತೆರೆಯಲ್ಪಟ್ಟಿರುತ್ತದೆ.

ಬಾಲ್ಕಾನ್ ಸಂಸ್ಥಾನದ ಸೆರ್ವ ಮತ್ತು ಕ್ರಿಪೊಲಕಿನಳ್ಳಿದ್ದ ಮಿತ್ರರ ಸೇನೆಗಳು ಬೊಜಪಿಯ ಸಮಿಯ ಬಳಿಗೆ ಹೋಗಿರುತ್ತವೆ. ಬಲ್ಗೇರಿಯನರು ಕಳದ ಶುಕ್ರವಾರ ಫ್ರೆಂಚರ ರಣರಂಗದ ಪ್ರತಿ ಒಂದು ಸ್ಥಳದ ಮೇಲ್ಯಾಯದರು. ಆದರೆ ಪ್ರತಿ ಒಂದು ಕೆಡೆಯಲ್ಲಿಯೂ ಬಲ್ಗೇರಿಯನರು ಸೋತುಹೋಗಿರುತ್ತಾರೆ. ಮಿತ್ರ ಸೇನೆ ಶನಿವಾರ ದಿನ ಮೇಲ್ಯಾಯದ ಬಲ್ಗೇರಿಯನರನ್ನು ಮಿತ್ರಸೇನಿಕರು ಹಿಂದಕ್ಕಟ್ಟಿರುತ್ತಾರೆ.

ಇಟಲಿಯನರು ಅಲ್ಬಾನಿಯದ ವಲೋನ ಪಟ್ಟಣವನ್ನು ಸ್ವಾಧೀನಮಾಡಿಕೊಂಡಿರುತ್ತಾರೆ.

ಬಾಲ್ಕಾನ್ ಸಂಸ್ಥಾನದ ಬ್ರಿಟಿಷ ರಣರಂಗದಲ್ಲಿ ನಡೆಯುತ್ತಿದ್ದ ಕದನವು ಕಳದ ಬುಧವಾರದಿಂದ ನಿಂತಿರುವದು. ಸೋಮವಾರದಿಂದ ಬ್ರಿಟಿಷ ಸೇನೆಯಲ್ಲಿ ಹೆಚ್ಚಿನ ನಷ್ಟವಾಗಿಲ್ಲ ಆದರೆ ಬಲ್ಗೇರಿಯನರ ಸೇನೆಯಲ್ಲಿ ವಿಶೇಷ ನಷ್ಟವಾಗಿರುವದು. ಎಂತ ಸಲೋನಿಕಾದಿಂದ ವಾರ್ತೆ ಬಂದಿರುವದು

ಉತ್ತರ ಹಿಂದೂಸ್ಥಾನ.

ಕೊಲೊಂಬದಲ್ಲಿ ಕೊಬ್ಬರಿ ಖಂಡಿ ೧೧ ಕ್ರಯವು ರೂ ೧೪ಕ್ಕೆ ಏರಿರುತ್ತದೆ ಕಳದವಾರ ಖಂಡಿ ೧೧ ಕ್ರಯವು ರೂ ೧೧।೦।೦ ಮಾತ್ರವಾಗಿತ್ತು

"ಆಲ್ ಇಂಡಿಯಾ ಮುನಿಲ್ಮಾನ್‌ಲೀಗ್" ಎಂಬ ಮುನಿಲ್ಮಾನರ ಸಭೆಯು ಇದೇ ದಶಂಬರ ತಾ ೩೦ ಮತ್ತು ೩೧ರಲ್ಲಿ ಮುಂಬಾಯಲ್ಲಿ ಕೂಡಿ ಬರುವದು

ಪ್ಲೇಗ ಬೇನೆಯು ಸೂರತಿನಲ್ಲಿ ಉಲ್ಬಣವಾಗಿರುತ್ತದೆ. ಕಳದ ಒಂದು ವಾರದಲ್ಲಿಯೇ ಅಲ್ಲಿ ಪ್ಲೇಗ ಬೇನೆಯಿಂದ ೫೧ ಮಂದಿ ವ್ಯತಿತಾವರು

ಯುದ್ಧಕ್ಕೆ ವಾಯುನಾವೆಗಳನ್ನು ಒದಗಿಸಿಕೊಡುವ ನಿಟ್ಟಿನ ಪಂಜಾಬಿನಲ್ಲಿ ಒಂದು ಫಂಡು ತೆರೆಯಲ್ಪಟ್ಟಿರುವದು. ಈ ಫಂಡಿಗೆ ಈ ವರೆಗೆ ೩೬,೦೦೦ ರೂಪಾಯಿ ವಾಗ್ದಾನ ವಾಗಿದೆ

ಅಲ್ಲಹಾಬಾದಿನಲ್ಲಿ ಕಿಂಡರ್‌ಗಾರ್ಟನ್ ಕನ್ವರೆನ್ಸ್ ಜರಗುವದು ಈ ಕನ್ವರೆನ್ಸಿಗೆ ಅಲ್ಲಿಯ ವಿದ್ಯಾಖಾತೆಯ ದಿರೆಕ್ಟರರು ಅಧ್ಯಕ್ಷರಾಗಿರುವರು ಕಿಂಡರ್‌ಗಾರ್ಟನ ಮೂಲಕ ಮಕ್ಕಳು ಮಾಡಿದ ವಸ್ತುಗಳ ಪ್ರದರ್ಶನವ ಲೇಡಿ ಮೆನ್ನರವರಿಂದ ತೆರೆಯಲ್ಪಡುವದು ಇನ ಇತರ ಕೆಲವರು ಕಿಂಡರ್‌ಗಾರ್ಟನ್ ಸಂಬಂಧವಾದ ಉಪನ್ಯಾಸಗಳನ್ನು ಕೊಡುವರು

ನಾಧದ ಮಹಾರಾಜರವರು ಗೋಖಲೆಯವರ ಸ್ಮಾರಕ ಫಂಡಿಗೆ ೧೫೦೦ ರೂಪಾಯಿ ವಂತಿಗೆ ಕೊಟ್ಟಿರುವರು.

ವೈಸರಾಯ ಪ್ರಭುಗಳವರು ಪಂಜಾಬನ್ನು ಸಂದರ್ಶಿಸಿರುವೆರು ತಾ ೧೧ರಲ್ಲು ಪಂಜಾಬಿನ ಚೀಫ್ಸ್ ಕಾಲೇಜಿನಲ್ಲಿ ಪ್ರಭುಗಳವರಿಗೆ ಗಾರ್ಡನ್ ಪಾರ್ಟಿಗೆ ಆಮಂತ್ರಣವಿತ್ತು

ಪಂಜಾಬು ವಾಯುನಾವೆಯ ಫಂಡಿಗೆ ೨ ಲಕ್ಷದ ೯ ಸಾವಿರ ಕೂಡಿರುವದು. ಇನ್ನು ಅರ್ಧ ಲಕ್ಷ ರೂಪಾಯಿ ವಾಗ್ದಾನವಾಗಿರುತ್ತದೆ.

ಬಂಗಾಳ ಗವರ್ನರ ಪ್ರಭುಗಳವರು ಕಳ್ಳತ್ತೆಯ ಸರಕಾರ ಮಂದಿರದಲ್ಲಿ ದರಬಾರು ನಡಿಸಿ ೫೧ ಗೃಹಸ್ಥರಿಗೆ ಬಿರುದುಗಳನ್ನು ದಯಪಾಲಿಸಿದರು. ಒಬ್ಬರಿಗೆ ರಾಜಾ, ೮ ಮಂದಿಗೆ ರಾಯಿ ಬಹದ್ದೂರ್, ಒಬ್ಬರಿಗೆ ಖಾನ್ ಬಹದ್ದೂರ್, ೪ ಮಂದಿಗೆ ರಾಯಸಾಹೇಬ್, ಒಬ್ಬರಿಗೆ ಖಾ

ಮಾರಿಟ್. ಇಬ್ಬರಿಗೆ ಕೈಸರ್ ಇ ಹಿಂದ್ ಪೆಡಲುಗಳು ೪ ಮಂದಿಗೆ ಕೆಂಗ್ಸ್ ಪೋಲಿಸ್ ಮೆಡಲುಗಳು, ಒಬ್ಬರಿಗೆ ಇಂಪೀರಿಯಲ್ ಸರ್ವಿಸ್ ಮೆಡಲು ದೊರಕಿದವು

ಜೋರ್ಜಚಕ್ರವರ್ತಿಯವರು ಹೈದರಾಬಾದ್ ನೈಜಾಮರವರನ್ನು ಗೌರವದ ಅಂಗರಕ್ಷಕರಾಗಿ ನೇಮಿಸಿದ್ದಾರೆಂಬದಾಗಿ ಈ ಮೊದಲು ತೀಮಿಯಿಂದ ಒಂದ ವಾರ್ತೆಯು ತಪ್ಪಾಗಿದೆ ಹೈದರಾಬಾದಿನ ಆನರೆರಿ ಲೆಪ್ಪನೆಂಟ್ ಕರ್ನೆಲ್ ಮಹಮ್ಮದಿ ಅಲಿಬೇಗ್ ನನಾಬ್‌ಸರ್ ಅಪ್ಸರ್ ಜಂಗರವರು ಫೀಲ್ಡ್ ಮಾರ್ಸೆಲ್ ಫ್ರೆಂಚರ ಗೌರವದ ಅಂಗರಕ್ಷಕರಾಗಿ ನೇಮಿಸಲ್ಪಟ್ಟಿದ್ದಾರೆ

ಸರಕಾರ ಆಫೀಸರರಿಗೆ ರಾಷ್ಟ್ರೀಯ ಸಭೆಗೆ ಸಂದರ್ಶಕರಾಗಿ ಯಾ ಪ್ರತಿನಿಧಿಗಳಾಗಿ ಹೋಗಲು ಸಮ್ಮತಿ ಇದೆಯೋ ಎಂಬ ಪ್ರಶ್ನೆಯನ್ನು ಮುಂಬಾಯಿ ನ್ಯಾಯವಿಧಾಯಕ ಸಭೆಯಲ್ಲಿ ಮಾನ್ಯ ವಿ ಜೆ ಪಟೇಲರವರು ಕೇಳಿದ್ದರು ಆ ಪ್ರಶ್ನೆಗೆ ರಾಷ್ಟ್ರೀಯ ಸಭೆಯ ಸಂದರ್ಶಕರಾಗಿಯೂ ಪ್ರತಿನಿಧಿಗಳಾಗಿಯೂ ಹೋಗಲು ಸರಕಾರ ಆಫೀಸರರಿಗೆ ಅಪ್ಪಣೆ ಇರುವದಿಲ್ಲ ಎಂಬ ಉತ್ತರವು ದೊರೆಕಿರುತ್ತದೆ

ಬಹುಮಾನಪಟ್ಟ ಸರ್ ಅಲಿ ಇಮಾಮರವರು ತಾಲರಲ್ಲಿ ಮುಂಬಾಯಿಗೆ ಚಿತ್ತೈಸಿ ತಾ ೧೫ರಲ್ಲಿ ಇಂಗ್ಲಾಂಡಿಗೆ ಪಯಣಮಾಡಿದರು

ಬರುವ ವಾರ ಅಲ್ಲಹಾಬಾದಿನಲ್ಲಿ ಕೂಡಲಿಕ್ಕಿರುವ ಹಿಂದೂಸ್ಥಾನದ ಭಾರತೀಯ ಕ್ರೈಸ್ತರ ಸಮಿತಿಗೆ ರಾಜಸರ್ ಹರ್ನಾಮ ಸಿಂಘರವರು ಅಧ್ಯಕ್ಷರಾಗಿರುವರು.

ಫ್ರಾನ್ಸ್ ರಣರಂಗದಲ್ಲಿ ಈಚೆಗೆ ಗಾಯಪೊಡೆದ ನೇಪಾಳ ದೇಶದ ಪ್ರಧಾನ ಮಂತ್ರಿಯ ಸೋದರಳಿಯ, ಲೆಪ್ಪನೆಂಟ್ ರಾಣ ಜೋಧ್ ಜಂಗ್ ಬಹದ್ದೂರರವರು ಹಿಂದೂಸ್ಥಾನಕ್ಕೆ ಹಿಂದಿರಳಿ ಬಂದಿರುವರು. ಇವರಿಗೆ ರಣರಂಗದಲ್ಲಿ ಮಿಲಿಟರಿ ಕ್ರೊಸ್ ಎಂಬ ಪದಕ ದೊರಕಿರುತ್ತದೆ ಸ್ವಂತ ಮನೆಗೆ ಒಂದು ತಲಪಿದ್ದರಿಂದ ಲೆಪ್ಪನೆಂಟ್ ರಾಣರವರಿಗೆ ಉಂಟಾದ ಸಂತೋಷವು ಅವರ ಸೈಹಾಜರಿಯಲ್ಲಿ ಅವರ ಪತ್ನಿಯು ಕಾಲವಾಗಿದ್ದರೆಂಬ ಮನೆಗೆ ಬಂದ ನಂತರ ಸಿಕ್ಕಿದ ವಾರ್ತೆಯಿಂದ ಮಾಜಿಹೋಯಿತು.

ಮ. ರಾ ವಸಂತರಾವ್ ಡಾಬೋಲಕಾರರವರು ಮುಂಬಾಯಿಯ ಶೆರಿಫರಾಗಿ ನೇಮಿಸಲ್ಪಟ್ಟಿರುತ್ತಾರೆ ಡಾಬೋಲ್ಕಕಾರರವರು ಗೌಡಸಾರಸ್ವತ ವೃಂದಕ್ಕೆ ಸೇರಿದವರು. ಮುಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಮೆಂಬರರೂ, ಮುಂಬಾಯಿ ಪಟ್ಟಣದ ಮುಂದಾಳುಗಳಲ್ಲಿ ಒಬ್ಬರೂ ಆಗಿದ್ದ ಮಾಜಿ ಮ ರಾ ನಾರಾಯಣ ವಾಸುದೇವರು ಇವರ ಅಜ್ಜ ಸುಮಾರು 36 ವರ್ಷಗಳ ಈಚೆಗೆ ಧಾರ್ವಾಡದ ಗೃಹಸ್ಥರಲ್ಲಾರೂ ಮುಂಬಾಯಿ ಶೆರೀಫರಾಗಿ ನೇಮಿಸಲ್ಪಟ್ಟಿದ್ದಿಲ್ಲ. ಮ ರಾ. ಡಾಬೋಲಕಾರರು ಈಗಾಗಲೆ ಮುಂಬಾಯಿ ಮುನ್ಸಿಪಾಲ್ ಕೌನ್ಸಿಲಿನ ಮೆಂಬರರಾಗಿ ಸೇರಿದ್ದರು.

ಮುಂಬಾಯಿ ಮೆಡಿಕಲ್ ಆಕ್ಟಿನಲ್ಲಿ ತಿದ್ದುಪಡಿಯನ್ನು ಸೂಚಿಸುವ ಮಸೂದೆಯನ್ನು ಮಾನ್ಯ ಕಾಮತರವರು ಮುಂಬಾಯಿ ನ್ಯಾಯವಿಧಾಯಕ ಸಭೆಯ ಮುಂದೆ ತಂದಿರುತ್ತಾರೆ ಮುಂಬಾಯಿ ಸರ್ಜನ್ ಜನರಲರವರು ಈ ಮಸೂದೆಗೆ ವಿರೋಧವಾಗಿ ಮಾತನ್ನಾಡಿ, ಆಯುರ್ವೇದ ಪದ್ಧತಿಯಲ್ಲಿರುವ ಕೊರತೆಗಳನ್ನು ಸೂಚಿಸಿದರು. ಈ ವಿಷಯವಾದ ಚರ್ಚೆ ನಡೆದು ಮೆಡಿಕಲ್ ಆಕ್ಟಿನಲ್ಲಿ ತಿದ್ದುಪಡಿಯನ್ನು ಸೂಚಿಸುವ ಮಸೂದೆಯನ್ನು ಕೌನ್ಸಿಲಿನ ಮುಂದೆ ತರುವರೆ ಮಾನ್ಯ ಕಾಮತರವರಿಗೆ ಅಪ್ಪಣೆ ದೊರೆಕಿರುವದು

ಕಾಶ್ಮೀರದ ರಾಜಕುಮಾರ ಶ್ರೀಹರಿಸಿಂಘರವರು ತನ್ನ ಖಾಸಗಿ ಹಣದಿಂದ ಎರಡೂವರೆ ಲಕ್ಷ ರೂಪಾಯಿ ಕ್ರಯ ಬಾಳುವ ಎರಡು ನಾಯುನಾವೆಗಳನ್ನು ಬ್ರಿಟಿಷ ಸರಕಾರದವರಿಗೆ ದಾನಮಾಡಿರುತ್ತಾರೆ

ಡಾಕ್ಟರ್ ಜೆ ಸಿ ಬೋಸರವರ ವನಸ್ಪತಿ ವರ್ಗದ ಶೋಧನೆ ಕೆಲಸಕ್ಕೆ ೭೫,೦೦೦ ರೂಪಾಯಿಗಳ ಗ್ರೇಂಟು ಸರಕಾರದಿಂದ ದೊರಕಿರುತ್ತದೆ ಈ ಮೊಬಲಗಿನಲ್ಲಿ ಪ್ರತಿ ವರ್ಷವೂ ಡಾಕ್ಟರ್ ಬೋಸರವರಿಗೆ ಸಿಕ್ಕುವ ೫೦,೦೦೦ ರೂಪಾಯಿಗಳ ರಿಕರಿಂಗ್ ಗ್ರೇಂಟ್ ಸೇರಿರುತ್ತದೆ

ದಶಂಬರ ತಾ ೪ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ ೫೮೭೧ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೬೫೫೮ ಮಂದಿ ವ್ಯಕ್ತರಾದರ ಈ ಪೈಕಿ ಮುಂಬಾಯಿ ಮತ್ತ ಸಿಂಧ್ ಸಂಸ್ಥಾನಗಳಲ್ಲಿಯೇ ೧೫೭೧ ಮರಣಗಳಾದವು ಮದ್ರಾಸಿನಲ್ಲಿ ೧೬೪, ಬಿಹಾರ್ ಮತ್ತು ಒರಿಸ್ಸ ೧೫೬, ಸಂಯುಕ್ತ ಸಂಸ್ಥಾನ ೪೦೫, ಪಂಜಾಬು ೬೫, ಬರ್ಮ ೬೬, ಮಧ್ಯಸಂಸ್ಥಾನ ೫೬, ಮೈಸೂರು ೧೪೫, ಹೈದರಾಬಾದ್ ೪೬೩, ಮಧ್ಯ ಹಿಂದೂಸ್ಥಾನ ೧೫೬, ಕಾಶ್ಮೀರ ೭೮ ಮರಣಗಳಾದವು

ಪೂರ್ವ ಬಂಗಾಳ ರೈಲ್ವೆಯ ಡ್ರೈವರ್ ಜೇಮ್ಸ್ ಪೀಕ್‌ಡೋನಾಲ್ಡ ಮತ್ತು ಫಯರ್‌ಮೆನ್ ವೆರ್ಸ್ ಮೆಕ್‌ಡೋನಾಲ್ಡರೆಂಬವರು ಒಬ್ಬ ಕೂಲಿ ಹೆಂಗಸಿಗೂ ಈ ಮಧ್ಯೆ ಪ್ರವೇಶಿಸಿದ ಕನ್‌ಸ್ಟೆಬಲನಿಗೂ ಹೊಡೆದ್ದಿನ್ನರೆಂದು ವಿಚಾರಣೆಗೆ ಗುರಿ ಮಾಡಲ್ಪಟ್ಟಿದ್ದರು ದಿನಾಜಪುರದ ಡಿಸ್ಟ್ರಿಕ್ಟ್ ಮೇಜಿಸ್ಟ್ರೇಟರು ಜೇಮ್ಸ್‌ನು ಕೂಲಿಹೆಂಗಸಿಗೆ ಹೊಡೆದ ತಕ್ಸೀರಿಗಾಗಿ ರೂ ೧೦, ಕನ್‌ಸ್ಟೆಬಲನಿಗೆ ಹೊಡೆದ ತಕ್ಸೀರಿಗಾಗಿ ರೂ ೫೫ ಜುಲುಮಾನೆಯನ್ನೂ ಮತ್ತೊಬ್ಬ ಕೂಲಿಯವನಿಗೆ ಹೊಡೆದ ತಕ್ಸೀರಿಗಾಗಿ ಪೆರ್ಸಿಗೆ ರೂ. ೧೫೫ನ್ನೂ ಜುಲುಮಾನೆ ವಿಧಿಸಿದರು ಈ ಶಿಕ್ಷೆಯನ್ನು ಹೆಚ್ಚಿಸಬೇಕೆಂಬದಾಗಿ ಬಂಗಾಳ ಸರಕಾರದವರು ಕಲ್ಕತ್ತಾ ಹೈಕೋರ್ಟನ್ನು ಕೇಳಿಕೊಂಡಿದ್ದರು ಹೈಕೋರ್ಟ್ ಜಡ್ಜರು ತನಕೆ ನಡಿಸಿ, ಜೇಮ್ಸನಿಗೆ ವಿಧಿಸಿದ ಜುಲುಮಾನೆಯನ್ನು ರೂ ೩೦೦ಕ್ಕೆ ಹೆಚ್ಚಿಸಿ, ಮತ್ತೊಬ್ಬ ಕೂಲಿಯವನಿಗೆ ಮತ್ತು ಕನ್‌ಸ್ಟೆಬಲನಿಗೆ ವಿಧಿಸಿದ ಶಿಕ್ಷೆಯನ್ನು ಇದ್ದ ಹಾಗೆ ಇರಗೊಡಿಸಿದರು

ಕಲಕತ್ತೆಗೆ ಸೇರಿದ ಕಾಶೀಪುರದಲ್ಲಿರುವ ಕೋವಿಗಳನ್ನು ಮಾಡುವ ಕಾರ್ಖಾನೆಯಲ್ಲಿ ಒಬ್ಬ ಸೋಲ್ಜರನು ಸ್ಥಳಿಕ ಪೋಲಿಸ್ ಸ್ಪೇಶನಿನ ಒಬ್ಬ ಧಾರತೀಯ ಕನ್‌ಸ್ಟೇಬಲನಿಗೆ ಗುಂಡುಹೊಡೆದಿರುವನು. ಗಾಯವೊಡೆದ ಕನ್‌ಸ್ಟೇಬಲನನ್ನು ಆಸ್ಪತ್ರೆಗೆ ಕೊಂಡುಹೋಗಿ ಪರೀಕ್ಷಿಸಿದಲ್ಲಿ ಅವನಲ್ಲಿ ಜೀವಕಳೆಯಿಲ್ಲವೆಂದು ತಿಳಿದುಬಂತು.

ಮಾನ್ಯ ಗಂಧಿಯವರು ಗ್ಲೋಬಲೆಯವರ ಸ್ಮಾರಕ ಭಂಡಿಗೆ ಕಾಥ್ಯಾವಾಡದತ್ತಕಡೆ ಹಣ ಕೂಡಿಸುವ ಕೆಲಸದಲ್ಲಿರುವರು.

ದಕ್ಷಿಣ ಹಿಂದೂಸ್ಥಾನ.

ಮೈಸೂರು ಮಹಾರಾಣಿ ಕಾಲೇಜಿಯ ಅಸಿಸ್ಟಾಂಟ್ ಉಪಾಧ್ಯಾಯಿನಿ ಶ್ರೀ ಭಾಗೀರಥಿ ಅಮ್ಮನವರು ಮಹಾರಾಣಿ ಕಾಲೇಜಿಯ ಬಾಲಿಕೆಯರಿಗೆ ಪ್ರತಿವರ್ಷವೂ ಇನಾಮುಗಳನ್ನು ಕೊಡುವ ಬಗ್ಗೆ ೧೦೦೦ ರೂಪಾಯಿ ದಾನಮಾಡಿದುತ್ತಾರೆ. ಈ ದಾನವನ್ನು ಮೈಸೂರು ಸರಕಾರದವರು ಮಾನ್ಯಮಾಡಿ ಆ ೧೦೦೦ ರೂಪಾಯಿಗೆ ಸರಕಾರದಿಂದ ೧೦೦೦ ರೂಪಾಯಿ ಕೂಡಿಸಿಕೊಟ್ಟು ಅದರಿಂದ ಹುಟ್ಟುವ ಬಡ್ಡಿಯಿಂದ ಭಾಗೀರಥಿ ಅಮ್ಮನವರ ಹೆಸರಲ್ಲಿ ಪ್ರತಿವರ್ಷವೂ ಮಹಾರಾಣಿ ಕಾಲೇಜಿನ-ಬಾಲಿಕೆಯರಲ್ಲಿ ೩ ಮಂದಿಗೆ ಇನಾಮು ಕೊಡಿಸುವ ಏರ್ಪಾಡು ಮಾಡಿರುತ್ತಾರೆ. ಒಂದು ಇನಾಮು ಇಂಗ್ಲಿಷ್ ಲವರ್ ಸೆಕಂಡರಿ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದವಳಿಗೂ ಮತ್ತೊಂದು ಇನಾಮು ಕನ್ನಡ ಲವರ್ ಸೆಕಂಡರಿ ಪರೀಕ್ಷೆಯಲ್ಲಿ ಪ್ರಥಮಸ್ಥಾನವನ್ನು ಪಡೆದವಳಿಗೂ ದೊರೆಕುವದು

ಮದ್ರಾಸ್ ಗವರ್ನರ ಪ್ರಭುಗಳವರು ಮಾಯಾವರಂ, ತೀಯಾಳಿ ಮೊದಲಾದ ಸ್ಥಳಗಳನ್ನು ಸಂದರ್ಶಿಸುತ್ತಲಿರುವರು

ತಿನ್ನವೆಲ್ಲಿಯ ಅಂಬಸಮುದ್ರದಲ್ಲಿಯ ಹಿಂದೂ ದೇವಸ್ಥಾನದ ಪ್ರತಿಮೆಯ ಮೇಲೆ ವಿಶೇಷ ಚಿನ್ನಾಭರಣಗಳು ಇರುವದೆಂಬ ಭಾವನೆಯಿಂದ ಕೆಲವು ಕಳ್ಳರು ಮಧ್ಯರಾತ್ರಿ ದೇವಸ್ಥಾನದೊಳಗೆ ನುಗ್ಗಿದರು. ಆದರೆ ಪ್ರತಿಮೆಯ ಮೇಲೆ ಆಭರಣಗಳು ಇರಲಿಲ್ಲವಾದುದರಿಂದ ಅದರ ಪೀಠವನ್ನು ಕೆಡವಿ ಕೆಳಗಿದ್ದ ಕೆಲವು ಆಭರಣಗಳನ್ನು ಮಾತ್ರ ಕೊಂಡುಹೋಗಿರುವರು.

ದಕ್ಷಿಣ ಕನ್ನಡ.

ಸಹಕಾರ.

ಸರ್ಕಿಲಾರು ವಂಬ್ರ ೧೫.

ಪಂಚಾಯತರ ಸಾಲಗಳು.

ಸಂಘದ ಕಾರ್ಯಭಾರವನ್ನು ನಡೆಯಿಸುವುದಕ್ಕೆ ಪಂಚಾಯತರನ್ನು ಆರಿಸುವಾಗ, ಮೆಂಬರರ ಪೈಕಿ ಹೆಣದ ಮಟ್ಟಿಗಾಗಲಿ ಗುಣದ ಮಟ್ಟಿಗಾಗಲಿ ಅಧ್ಯರಾಗಿರುವವರನ್ನೇ ಆರಿಸಿ ತೆಗೆಯುತ್ತಾರೆ. ಪಂಚಾಯತರ ನಡತೆಯು ಯಾವಾಗಲೂ ಇತರರೆಲ್ಲರಿಗೆ ಒಂದು ಬಗೆಯ ಮಾದರಿಯಾಗಿರಬೇಕು; ಮತ್ತು ಇತರ ಅಧಿಕಾರಿಗಳೊಂದಿಗೆ ಸಾಲಗಳನ್ನು ಸೇಂಕ್ಷನ್‌ಮಾಡುವ ಅಧಿಕಾರವು ಕೂಡಾ ಸಂಪೂರ್ಣವಾಗಿ ಪಂಚಾಯತರಿಗೆ ಒಪ್ಪಿದ ಕಾರ್ಯವೇ ಆಗಿರುವುದರಿಂದ ಅವರು ಸಂಘದ ಹಣಗಳನ್ನು, ಅತಿ ಜಾಗ್ರತೆಯಿಂದಲೂ ಅತ್ಯಂತ ಸ್ವಾಮಾಣಿಕತೆಯಿಂದಲೂ ಉಪಯೋಗಿಸಬೇಕು.

ತಮ್ಮ ಅಧಿಕಾರವನ್ನು ತಮ್ಮ ಸ್ವಪ್ರಯೋಜನಕ್ಕೇನೇ ಉಪಯೋಗಿಸಿಕೊಳ್ಳುವುದು ಅಯೋಗ್ಯವಾದುದರಿಂದ ಪಂಚಾಯತರು ತಮ್ಮ ಸಂಘದಿಂದ ಪಡೆದ ಸಾಲಗಳನ್ನು

ಪಡಕೊಳ್ಳುವುದು ಅನುಚಿತವಾಗಿರುತ್ತದೆ. ಮೇಲೆ ಹೇಳಿದಂತೆ ಪಂಚಾಯತರೆಂದರೆ ಹೆಚ್ಚಾಗಿ ಧನಾಢ್ಯರೇ ಆಗಿರುವುದರಿಂದ, ಅವರಿಗೆ ಹಣದ ಅಡಚಣೆಗಳು ಒದಗುವ ಸಂಭವವೇ ಇರಲಾರದು. ಆದರೂ ಕೆಲವು ಸಂಘಗಳಲ್ಲಿ ಸಂಘದಿಂದ ಕೊಡಲ್ಪಟ್ಟ ಸಾಲಗಳ ಪೈಕಿ ಅನೇಕ ಸಾಲಗಳು ಪಂಚಾಯತರು ತೆಗೆದುಕೊಂಡವುಗಳೇ ಎಂದು ಕಂಡುಬಂದ ಕಾರಣ, ಹಾಗೆ ಮಾಡುವುದು ಸಂಘಗಳ ಕೀರ್ತಿಗಾಗಲಿ ಪಂಚಾಯತರ ಘನತೆಗಾಗಲಿ, ಒಂದು ದೊಡ್ಡ ಕೊರತೆಯಾಗಿರುತ್ತದೆಂದು ಸೂಚಿಸುವುದು ಅಗತ್ಯವಾಗಿ ಬಂದಿದೆ

ಇತ್ತಿತ್ತಲಾಗೆ ಏರ್ಪಡಿಸಲ್ಪಟ್ಟ ಬಂದೆರಡು ಸಂಘಗಳಲ್ಲಿ ಪಂಚಾಯತರಿಗಾಗಲಿ, ಅವರ ಕುಟುಂಬದವರಿಗಾಗಲಿ, ಸಾಲಗಳನ್ನು ಕೊಡಬೇಕಾದರೆ ಮಹಾ ಸಭೆಯವರ ಮಂಜೂರಾತಿಯು ಅಗತ್ಯವೆಂಬೊಂದು ಉಪನಿಬಂಧನೆಯನ್ನು ಮಾಡಿಯದೆ ಮೊದಲಿನ ಸಂಘಗಳಲ್ಲಿ ಅಂತಹ ಕ್ರಮವನ್ನು ಮಾಡಿರಲಿಲ್ಲ, ಅದು ಹೇಗಿದ್ದಾಗ್ಯೂ, ಪಂಚಾಯತರು ತಮಗೋಸ್ಕರವಾಗಲಿ, ಸಂಘದಿಂದ ಸಾಲಗಳನ್ನು ಪಡಕೊಳ್ಳುವ ಅಥವಾ ಕೊಡಿಸುವ ವಿಷಯದಲ್ಲಿ ಸ್ವಲ್ಪ ಹಿಂದೆಗೆಯುವುದು ಅವಶ್ಯವಾಗಿರುತ್ತದೆ

ಕೆಲವು ಸಂದರ್ಭಗಳಲ್ಲಿ ಪಂಚಾಯತರ ಸಾಲದ ಅರ್ಜಿಗಳನ್ನಾಗಲಿ, ಪಂಚಾಯತರನ್ನು ಜ್ಯಾಮೀನುದಾರರಾಗಿರಿಸಿ ಮಾಡಿದ ಅರ್ಜಿಗಳನ್ನಾಗಲಿ ಆಯಾ ಪಂಚಾಯತ್ತರು ಹಾಜರಿರುವ ಪಂಚಾಯತ ಸಭೆಗಳಲ್ಲೇ ಆಲೋಚಿಸುವ ರೂಢಿಯುಂಟು ಇದು ಕೇವಲ ತಪ್ಪಾಗಿರುತ್ತದೆ ಯಾವ ಅರ್ಜಿಗಳನ್ನು ಆಲೋಚಿಸುವುದಕ್ಕಾದರೂ ಆ ಅರ್ಜಿಗಳಿಗೆ ಸಂಬಂಧಿಸಿದವರಿಗೆ ಯಾರೊಬ್ಬರಿಗೂ ಅಧಿಕಾರವಿರಕೂಡದು. ಮುಂಬಾಯಿ ಅಧಿಪತ್ಯದಲ್ಲಿನ ಸಂಘಗಳೆಲ್ಲೆಲ್ಲಾ ಪಂಚಾಯತರು ತಮ್ಮ ಸ್ವಂತ ಸಾಲದ ಅರ್ಜಿಗಳ ಕುರಿತು ಪಂಚಾಯತ ಸಭೆಯಲ್ಲಿ ವೋಟ್ ಮಾಡಕೂಡದೆಂಬ ಪ್ರತ್ಯೇಕ ಕ್ರಮವಿದೆ ಸಂಘದ ಆಡಳಿತೆಯು ಎಲ್ಲಾ ವಿಷಯಗಳಲ್ಲಿಯೂ ನಿಷ್ಪಕ್ಷಪಾತದಿಂದಲೇ ನಡೆಯಬೇಕಾದುದರಿಂದ, ಇದನ್ನು ಎಲ್ಲಾ ಸಂಘಗಳ ಪಂಚಾಯತರೂ ಚೆನ್ನಾಗಿ ಗಮನದಲ್ಲಿಟ್ಟುಕೊಳ್ಳಬೇಕು.

ದಕ್ಷಿಣ ಕನ್ನಡಾ ಸೆಂಟ್ರಲ್ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್ ಪುತ್ತೂರು ತಾ 12-12 15 } ಎಮ್ ಅನಂತರಾವ್, ಕಾರ್ಯದರ್ಶಿ

ಉಡುಪಿ: — ಉಡುಪಿಯಲ್ಲಿ ಮದ್ರಾಸ ಗವರ್ನ ಮೆಂಟಿನವರ ಹೊಸ ರಾಜಿನ ಮೇರೆಗೆ ಯೂನಿಯನ್ನ್ ಪಂಚಾಯತವನ್ನು ಏರ್ಪಡಿಸುವ ವಿಷಯದಲ್ಲಿ ಮಹಾಜನದ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಉಡುಪಿ ಯೂನಿಯನ್ನ್ ಕ್ಲಬ್ಬಿನಲ್ಲಿ ಕಳೆದ 11ನೇ ತಾರೀಕೆಗೆ ಸಭೆ ನೆರೆದಿತ್ತು. ಊರಿನ ಪ್ರಮುಖ ಗೃಹಸ್ಥರೆಲ್ಲರೂ ಸಭೆಗೆ ಬಂದಿದ್ದರು. ಗವರ್ನಮೆಂಟಿನವರ ಹುಕುಂ, ಯೂನಿಯನ್‌ಗಳ ಉಪಯೋಗ, ಆದಾಯವ್ಯಯಗಳ ಕ್ರಮ;—ಇವನ್ನೆಲ್ಲ ಸಭಾಧ್ಯಕ್ಷರಾದ ಕುಂದಾಪುರ ಡಿವಿಜನ್ ಡಿಪ್ಯುಟಿ ಕಲೆಕ್ಟರರಾದ ಮ. ರಾ. ಡಿ. ಆನಂದರಾವ್ ಬಿ. ಎ. ಇವರು ಕುಲಂಕುಷವಾಗಿ ವಿವರಿಸಿದ ಮೇಲೆ, ವಕೀಲ ಮ. ರಾ. ವಿಟ್ಠಲ್ ರಾಮಯ್ಯ ಬಿ. ಎ. ಬಿ. ಎಲ್. ಇವರು ನಾಲ್ಕು ಗ್ರಾಮಗಳು ಕೂಡಿರುವ ಈ ಟೌನ್ಷಿಪ್ಪಿನಲ್ಲಿ ಯೂನಿಯನ್ ಸಾಧ್ಯವಿಲ್ಲೆಂದೂ, ಯೂನಿಯನ್‌ನಿಂದ ಉಂಟಾಗುವ ಹುಟ್ಟುವಳಿಯಿಂದ ಈ ತಪ್ಪಿನ ಸೌಕರ್ಯಗಳನ್ನು ಒದಗಿಸಿಕೊಳ್ಳಲು ಅಸಾಧ್ಯವೆಂದೂ, ಇಂತಹ ಸಂದರ್ಭದಲ್ಲಿ ಲಂಂಂಕ್ಕೆ ಮಿಕ್ಕಿ ಜನಸಂಖ್ಯೆ ಇರುವ ಈ ಯೂನಿಯನಿಗೆ ಸರಕಾರಿ ರೂಲ್ಸುಗಳ ಮೇರೆಗೆ ತಾಲೂಕು ಬೋರ್ಡಿನವರು ದ್ರವ್ಯ ಸಹಾಯ ಕೊಡಲು ಬದ್ಧರಲ್ಲವೆಂದೂ ಇನ್ನಿ ಮುನ್ಸಿಪಾಲಿಟಿಯೇ ಅತಿ ಅಗತ್ಯವೆಂದೂ ರಿಗೆ ಕಲಿಸುವ ರೀತಿಯನ್ನು ವಿವರಿಸಿ ತಿಳಿಸಿದರು. ಬಹಳ ಚೆನ್ನಾಗಿ ವಿವರಿಸಿದರು. ಅನಂತರ ಒಬ್ಬಿಬ್ಬರು ಈ ಸಭೆಯಲ್ಲಿ ಮುನ್ಸಿಪಾಲಿಟಿಯ ಚರ್ಚೆ ಬರುವುದು ಸರಿಯಲ್ಲವೆಂದು ಚರ್ಚೆ ಎತ್ತಿದರು. ಇನ್ನೂ ಹಲವರು ನಮಗೆ ಮುನ್ಸಿಪಾಲಿಟಿಯೇ ಪ್ರಯೋಜನಕರವಲ್ಲದೆ, ಯೂನಿಯನ್ ಉಪಕಾರಿಯಲ್ಲವೆಂದು ಪ್ರತಿವಾದಿಸಿದರು, ಕಡೆಗೆ ಹೇಗೂ ಯೂನಿಯನ್ ಇಲ್ಲಿ ಸಾಧ್ಯವಿಲ್ಲವೆಂಬ ರಾಜಿನ್ನು ಸರಕಾರಕ್ಕೆ ತಿಳಿಸಿಬಹುದಾಗಿಯೂ ಮುನ್ಸಿಪಾಲಿಟಿಯ ಸಮಾಚಾರವು ತಕ್ಷಾಲಕ್ಕೆ ಮುಂದರಿಸಿದಬೇಕೆಂದೂ ಅಧ್ಯಕ್ಷರನ್ನು ಸಬಕರು ಕೇಳಿಕೊಂಡರು

ಕಾಪು — ಬಹಳ ಕಾಲದಿಂದ ಹಾಳೈಸಿ ತ್ತಿದ್ದ ರಾಂಗಾಳ ಹೊಳೆಯ ಸೇತುವೆಯ ಕೆಲಸವು ಪೂರ್ಣ ಆಗಿದ್ದರಿಂದ ಸದ್ಯದಲ್ಲಿಯೇ ಜನರಿಗೆ ಸಾಂಗಾಗುವರೆ ಬಿಡುವರು ಎಂದು ಕೇಳಿ ಸಂತೋಷಪಡುತ್ತೇವೆ

ನಿನ್ನೆ ದಿನ ಇಲ್ಲಿಯೇ ಸಮೀಪ ಆಕ್ಕಸಾಲಿಗರ ಜಾತಿಯ ಒಬ್ಬ ಹೆಂಗಸು ಅಕಸ್ಮಾತ್ ನೀರಿನಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು ಕಾರಣ ಇನ್ನೂ ತಿಳಿಯದು

ಅನೇಕ ಸಾಹುಕಾರರೂ ಏಶ್ವರ್ಯವಂತರೂ ಇರುವ ಪಡುಬಿದ್ರೆ ಪೇಟೆಯಲ್ಲಿ ಒಂದು ಪರಸ್ಪರ ಸಹಾಯಕ ಸಂಘವು ಇಲ್ಲದೆ ಇರುವುದು ಶೋಚನೀಯವಾಗಿದೆ ಇನ್ನಾದರೂ ಅಲ್ಲಿಯ ಮಹನೀಯರುಗಳು ಸಂಘ ಆಗುವಂತೆ ಪ್ರಯತ್ನಿಸಿದ್ದಲ್ಲಿ ಒಡಜನರಿಗೆ ಎಷ್ಟೋ ಉಪಕಾರವಾಗುತ್ತಿತ್ತು

ಪಡುಬಿದ್ರೆಯಲ್ಲಿ ಗಂಗುಸುಬ್ರಾಯರೆಂಬವರು (ಶಿವಳ್ಳಿ ಬ್ರಾಹ್ಮಣರು) ಕಳೆದ ವಾರ ವಿಧಿವಶರಾದರು ಎಂದು ತಿಳಿಸುವರೆ ವಿಷಾದವಿದೆ ಎವರು ಪಡುಬಿದ್ರೆ ಪೇಟೆಯಲ್ಲಿ ಪ್ರಯಾಣಿಕರ ಅನುಕೂಲತೆ ಒಗ್ಯೆ ಒಂದು ಛತ್ರವನ್ನೂ, ದನಕರುಗಳ ನೀರಡಿಕೆ ಒಗ್ಯೆ ಒಂದ ಅರವಟ್ಟಿಗೆಯನ್ನೂ ಕಟ್ಟಿಸಿರುವರು ಪ್ರಯಾಣಿಕರಿಗೆ ಅನುಕೂಲವಾಗುವಂತೆ ಪಾತ್ರೆಗಳನ್ನು ಕಾಸಿಗೆ ಮುಂತಾದ್ದನ್ನೂ ಛತ್ರದಲ್ಲಿಡಿಸಿದ್ದರು ಇವರು ದಸ್ತಾವೇಜು ಮುಂತಾದ್ದು ಬರೆಯುವ ದರಲ್ಲಿ ನಿಪುಣರಾಗಿದ್ದರು ಇವರಿಂದ ಬಡಜನರಿಗೆ ಹೆಚ್ಚಿನ ಉಪಕಾರವಿರುತ್ತಿತ್ತು ಎಂದು ಪ್ರತ್ಯೇಕ ಹೇಳಬೇಕಾದ್ದಿಲ್ಲ

ಪಡುಬಿದ್ರೆ ಪೇಟೆಯಲ್ಲಿ ೫ ಜನರು ಪಾಲಿನಿಂದ ಕೆನರಾ ವೀವಿಂಗ್ ಫೇಕ್ಟರಿ ಎಂಬ ಹೆಸರನ್ನಿಟ್ಟು ಒಂದು ನೇಯುವ ಕಾರ್ಖಾನೆಯನ್ನು ತೆರೆದಿರುವರು

ಯರ್ಮಾಳ ಶ್ರೀ ಜನಾರ್ಧನ ದೇವಸ್ಥಾನದ ಮಹೋತ್ಸವವು ಇದೇ ತಿಂಗಳ ತಾ. ೨೦ಕ್ಕೆ ಆಗುವದು ತಕ್ಕ ಏರ್ಪಾಡುಗಳು ಈಗಿನ ಆಡಳಿತೆದಾರರಾದ ಮ। ರಾ। ಪಟೇಲ ಕುಮಾರರಾಯರಿಂದ ಯೋಗ್ಯರೀತಿಯಲ್ಲಿ ನಡಿಯುತ್ತಲಿದೆ.

ಇದೇ ತಿಂಗಳ ತಾ. ೪—೧೦—ಗಿಂತಿರಲ್ಲು ಮಲ್ಲಾರು ಬೋರ್ಡು ಹಿಂದೂಸ್ತಾನೀ ಶಾಲೆಯಲ್ಲಿ ಉಪಾಧ್ಯಾಯರ ನೆಮ್ಮೇಳನವು ಜರಗಿತು. ಸಭೆಗೆ ಉಡ್ರಿ ರೇಂಜುಸ್ಕೂಲುಗಳ ಶಾಲಾ ಇನ್ಸ್‌ಪೆಕ್ಟರವೆರೂ ಕಾರ್ಕಳ ಸಬ್ ರೇಂಜಿನ ಸುಪರ್‌ವೈಜರರಾಗಿದ್ದ ಮ। ರಾ। ರಾ। ಎಮ್. ರಾಮ ಹೆಗ್ಗಡೆಯರವರೂ ಸುಮಾರು ೫೦ ಮಂದಿ ಉಪಾಧ್ಯಾಯರೂ ನೆರೆದಿದ್ದರು. ಅಧ್ಯಕ್ಷರು ಸ್ವತಹಾ "ಗ್ರಹಣಗಳು ಇತಿ, ಭೀತ" ಮುಂತಾದ ವಿಷಯಗಳನ್ನು ನೆರೆದ ಸಭಿಕರಿಗೆ ಕಲಿಸುವ ರೀತಿಯನ್ನು ವಿವರಿಸಿ ತಿಳಿಸಿದರು.

ಕುಂಬಳೆ: — ಇಲ್ಲಿಯ ಬಾಸ್ಸೆಲ್ ಮಿಶ್ಶನ್ ಎಲಿಮೆಂಟರಿ ಶಾಲಾ ಕಟ್ಟಿಣವು ಯೋಗ್ಯ ಸ್ಥಳದಲ್ಲಿದ್ದು ಬಾಲಕರಿಗೆ ಹೊಳ, ಹಳ್ಳ, ಗುಡ್ಡೆ ಗದ್ದೆಗಳು ತೋರಿಸುವರೆ ಒಂದೆರಡು ಫರ್ಲೊಂಗುಗಳೊಳಗೆ ಅನುಕೂಲವಿದ್ದರೂ ದೊಡ್ಡ ಶಹಾನಿನ ಮಧ್ಯದಲ್ಲಿರುವ ಶಾಲೆಗಳಂತೆ ಇದೆಲ್ಲಾ ತೋರಿಸುವದಕ್ಕೆಂತ ಮಕ್ಕಳಿಂದ ಚಂದಾ ಹಣ ಕೂಡಿಸಿ ಮೊಗ್ರಾಲನ್ನಿಕಾವ ವಗೈರೆ 4 6 ಮೈಲುಗಳ ನಡಿಸುವ ಮತ್ತು ಬಾಲಕ ದರ್ಜಿಯ ಮಕ್ಕಳು ಅನಾನುಕೂಲತೆಗಳಿಂದ ಒಪ್ಪತ್ತು ಶಾಲೆಗೆ ಗೈರಹಾಜರಾದಲ್ಲಿ ಸಹಬೆತ್ತರ ಪೆಟ್ಟು ವಜಾ ಮಾನೆ ವಿಧಿಸುವ ನವೀನ ಕ್ರಮಗಳೂ ಜಾರಿಗೆ ಬಂದಂತೆ ಆದ್ದರಿಂದ ಮೇಲಾಧಿಕಾರಿಗಳು ಈ ಕುರಿತು ತಕ್ಕ ನಿಗಾ ಇಡುವುದು ಅಗತ್ಯವಾಗಿದೆ.

ಇದೇ ತಾ 3ನೇಯ ಸ್ವದೇಶಾಭಿಮಾನಿಯ ಶಿರೋಲೇಖನದಲ್ಲಿ ತೋರಿಬ ಅಭಿಪ್ರಾಯವು ಸ್ಥಿತ್ಯವಾದದ್ದೇ! ಮಾನೇಶುಮಾರಿ ಲೆಕ್ಕದ ಪ್ರಕಾರ 2937 ಜನಸಂಖ್ಯೆ ಇರುವದೆಂತ ತಿಳಿದಾಗ್ಯೂ ಅಭಿವೃದ್ಧಿ ಕೊಂಡುತ್ತಿರುವ ಈ ಗ್ರಾಮದಲ್ಲಿ ಈಗ ಜನಸಂಖ್ಯೆ 3000 ವಿಕ್ಕಿರುವದಕ್ಕೆ ಸಂದೇಹವಿಲ್ಲದ್ದರಿಂದ ಗ್ರಾಮ ಪಂಚಾಯತ ಏರ್ಪಾಡು ಇಲ್ಲಿ ಅವಶ್ಯವಾಗಿರುವದು

ಇಲ್ಲಿ ಆನಪಾಸಿನಲ್ಲಿ ಸಹ ಜುಗಾರಾಟವು ನಿರ್ಭೀತವಾಗಿ ನಡಿಯುವದಾಗಿ ಕೇಳುವದರಿಂದ ರಾತ್ರಿ ಹಗಲು ಸಹ ಪೋಲಿಸ್ ಬೀಟು ಇಲ್ಲಿ ಇಡಿಸುವದು ಅಗತ್ಯ

ವಿಟ್ಲ: — ಕಾಟುಕುಕ್ಕೆ ಗ್ರಾಮದ ಪಡ್ಡಂಬೈಲ ಎಂಬಲ್ಲಿ ಸಾಂತಪ್ಪ ಒಂಟರ ಮನೆಯಲ್ಲಿ ಸುಬ್ಬಣ್ಣ ಎಂಬ ಹೆಸರಿನ 2 ವರ್ಷ 10 ತಿಂಗಳು ವಯಸ್ಸಿನ ಒಬ್ಬ ಬಾಲಕ ನಿರುವನು ಇವನು ಸುಮಾರು 10 ವರ್ಷದ ಹುಡುಗನಂತೆ ಕಾಣುತ್ತಾನೆ ಮಾತು ಮತ್ತು ಮೈತುಂಬಾ ರೋಮ ಒಂದಿರುತ್ತದೆ ಸಾಧಾರಣ 25 ವರ್ಷ ವಯಸ್ಸಿನವರಂತೆ ಮಾತಾಡುತ್ತಾನೆ ನಡಿಯುತ್ತಾನೆ ಶಕ್ತಿಯೂ 25 ವರ್ಷ ವಯಸ್ಸಿನವರಷ್ಟೇ ಆದೀತು.

ಇಲ್ಲಿಂದ ಕಾಸರಗೋಡು ತೆತ್ತಲಾಗೆ ಹೋಗುವ ರಸ್ತೆಯ ಮೈಲು ಕಲ್ಲುಗಳು ಬಹಳ ಅನಾದುರುಸ್ತಿ ಸ್ಥಿತಿಯಲ್ಲಿರುವದರಿಂದ ಈ ವಿಷಯ ತಾಲೂಕು ಬೋರ್ಡಿನವರು ನಿಗಾ ಕೊಡುವದು ಅಗತ್ಯವಾಗಿದೆ.

ಬಂಟ್ವಾಳ: — ತಾ. ೧೫ನೇ ಸಾಯಾನ್ನ ಬರೂಮೊಟೋರಿನಡಿಯಲ್ಲಿ ಒಂದು ಮಗುವು ಬಿದ್ದು, ಆದೆ ರಾತ್ರಿ ಮಡಿದಿತು. ಸ್ವಾಭಾವಿಕವಾಗಿಯೂ ಅತಿಜಾಗ್ರತೆಯಿಂದಲೂ ಭೂತದಯೆಯಿಂದಲೂ ಕೆಲಸ ಮಾಡುತ್ತಿದ್ದ ಡ್ರೈವರು ಎಷ್ಟು ನೋಡಾಟಪಟ್ಟರೂ, ಮೋಟೋರ ಬಿದ್ದ ಮಗುವನ್ನು ದಾಟದಂತೆ ಬ್ರೇಕು ಉಪಯೋಗಿಸುದು ಮಾತ್ರ ಸಾಧ್ಯವಾಯಿತ್ತಲ್ಲದೆ, ಈ ಅವಘಡವನ್ನು ನಿವಾರಿಸಲು ಸಾಧ್ಯವಾಗಲಾರದಾಯಿತು. ಜೋರು ಪೆಡ್ಡಿನಲ್ಲಿ ಮನುಷ್ಯರ ನಡೆಯನ್ನು ಮಂದವಾಗಿ ಎಂಜಿ

ಮಾನ್ಯ ಗಂಟೆಗೆ ಮೂರು ಮೈಲಿಗಳ ಓಟಹಿಡಿದರೆ ಕೆಂದು ನಾವು ಅಭಿಪ್ರಾಯಪಡುತ್ತಿದ್ದೇವೆ. ಜನ ಪ್ರೀತರಾದ ನಮ್ಮ ಪೋಸ್ಟ ಮಾಸ್ತರು ರಾ. ಫಲಮಾರು ರಾಮರಾಯರಿಗೂ ಅವರ ಕುಟುಂಬಕ್ಕೂ ಈ ಅವಘಡ ದಿಂದುಂಟಾದ ದುಃಖದಿಂದ ಶ್ರೀದೇವರು ಉಪಶಮನವ ನ್ನುಂಟು ಮಾಡಲಿ!

ಶಾಲಾ ಅಸಿಸ್ಟೆಂಟ ಇನ್ಸ್‌ಪೆಕ್ಟರವರು ಇಲ್ಲಿಯ ಬೋರ್ಡು ಬಾಲಿಕಾ ಪಾಠಶಾಲೆಯನ್ನು ಸಂದರ್ಶಿಸಿ ಚಿತ್ತೈಸಿದರು.

ಮಂಗಳೂರು.

ಹುಡುಗಿಯರ ಶಾಲೆಗಳ ಇನ್ಸ್‌ಪೆಕ್ಟೆಸ್ ಮಿಸ್ ಪೆಟ ರ್ಸನರವರು ಕಳೆದ ವಾರದಿಂದ ಇಲ್ಲಿಯ ಬಾಲಕಿಯರ ಶಾಲೆಗಳನ್ನು ಸಂದರ್ಶಿಸಿ ಶಾಲಾ ಪರೀಕ್ಷೆಗಳನ್ನು ಮಾಡು ತ್ತಿದ್ದಾರೆ.

ಇಲ್ಲಿಯ ಎಲಿಮೆಂಟರಿ ಶಾಲೆಗಳಲ್ಲಿ ಇದೇ ತಾ 12 ರಲ್ಲು ದಿಲ್ಲಿದರ್ಬಾರು ಉತ್ಸವವು ಎಂದಿನಂತೆಯೇ ಒಳಗೆ ವಿಜೃಂಭಣೆಯಿಂ ಆಚರಿಸಲ್ಪಟ್ಟಿರ ವು ಗವರ್ನಮೆಂಟ ಟ್ರೈನಿಂಗ್ ಶಾಲೆಯ ಹೈಯರ್ ಎಲಿಮೆಂಟರಿ ತರಗತಿಯ 2ನೇ ವರ್ಷದ ಕುಮೇದ್ವಾರರು ಆ ದಿನ ಹೆಡ್‌ಮಾಸ್ತರ ರಾದ ರಾ. ಎಸ್ ರಘುನಾಥಯ್ಯನವರೊಡನೆ ಅಳುವೆ ಬಾಗಲಿಂದ ತಣ್ಣೀರುಬಾವಿ ವರೆಗೆ ರಾಜಗೀತಗಳನ್ನು ಹಾಡುತ್ತ, ದೋಣಿ ಸವಾರಿ ಮಾಡಿ, ಒಳಗೆ ಸಂತೋಷಪಟ್ಟ ರೆಂಬ್ಯ ತಿಳಿಯುತ್ತೇವೆ.

ಮಾಜಿ ಸಬ್ ಮೇಜಿಸ್ಟ್ರೇಟರಾಗಿರುವ ಮೆ. ಪಿ ರೋಬರ್ಟ್ಸರವರ ಕಿರಿ ಮಗ ಮಿ. ಲಿಯೊನಾರ್ಡ ರೋಬರ್ಟ್ಸರು ಕಲ್ಕತ್ತೆಯ ಮೆಡಿಕಲ್ ಕಾಲೇಜಿನಲ್ಲಿ ತೇರ್ಗಡೆ ಹೊಂದಿ, ಚಿನ್ನದ ಬಹುಮಾನ ಪದಕಗಳನ್ನ ಪಡೆದು, ಬಂಗಾಳ ಎಂಬ್ಯುಲೆನ್ಸ್ ಕೋರಿನ ಮೆಡಿಕಲ್ ಆಫೀಸರರಾಗಿ ಸೇರಿ ಈ ವಾರ ಮೆಸಪೊಟಾಮಿಯದ ರಣ ರಂಗಕ್ಕೆ ಹೋಗುವೆಂಕ ತಿಳಿಯುತ್ತೇವೆ. ಮಿ. ಲಿಯೊ ನಾರ್ಡರವರು ಕೆನರಾ ಹೈಸ್ಕೂಲಿನ ವಿದ್ಯಾರ್ಥಿಯಾ ಗಿದ್ದು ಸಂಸ್ಕೃತದಲ್ಲಿ ಪಿಟ್ರಿಕ್ ಪರೀಕ್ಷೆಯನ್ನು ತೇರ್ದಿ, ನಂತರ ಗವರ್ನಮೆಂಟ್ ಕಾಲೇಜಿನಲ್ಲಿ ಎಫ್ ಎ ಪರೀ ಕ್ಷೆಯಲ್ಲಿ ಉತ್ತೀರ್ಣರಾಗಿದ್ದರೆಂದು ತಿಳಿದುಬಂದಿರುತ್ತಾರೆ.

ರಜೆಯಲ್ಲಿರುವ ಫ್ಲೀಟರ್ ಮಿ. ಲೂಯರ ಮನೆಯಿಂ ದಿಂಗಲ್ ಸೋಜನಿಂ ವನು ಮಕ್ಕಾಲು ಪವನು ತೂಕದ ಕೆಳಿ ಕೂಂಬ್ರಿಸಿದ ಒಂದು ಚಿನ್ನದ ಉಂಗುರವನ್ನು ಕಳವು ಮಾಡಿ 8 ರೂಪಾಯಿಗೆ ಮಾರಿದ್ದನು. ಇದನ್ನು ಪೋಲೀ ಸಿನವರು ಪತ್ತೆ ಮಾಡಿ ವಿಚಾರಣೆಗೆ ಗುರಿಮಾಡಿದಲ್ಲಿ ಮೇಜಿಸ್ಟ್ರೇಟರು ಪಿಂಗಲ್ ಸೋಜನಿಗೆ 2 ತಿಂಗಳ ಸಜಾ ವಿಧಿಸಿರುತ್ತಾರೆ

ಒಂದರದ ಅಬ್ದುರ್ ರಹಿಮಾನನೆಂಬವನು ಸೇವಿ ಗುಡ್ಡೆಗೆ ಹೋಗಿ ಒಂದು ಬಾಳೆಗೊನೆಗೆ ಕ್ರಯಮಾಡಿ ದ್ದನು. ಅಬ್ದುರ್ ರಹಿಮಾನನು ಕೇಳಿದ ಕ್ರಯಕ್ಕೆ ಆ ಬಾಳೆಗೊನೆಯನ್ನು ಹೆಂಗಸು ಕೊಡಲೊಪ್ಪದ್ದನ್ನು ಕಂಡು ರಾಮನೆಂಬವನು ಹೆಂಗಸಿನ ಒಳಿಗೆ ಹೋಗಿ, ರಹಿಮಾನನು ಕೇಳಿದ ಕ್ರಯಕ್ಕಿಂತ ಸ್ವಲ್ಪ ಹೆಚ್ಚಿಗೆ ಕ್ರಯ ಕೊಟ್ಟು ಬಾಳೆಗೊನೆಯನ್ನು ಕೊಂಡುಕೊಂಡನು. ಅಬ್ದು ರ್ ರಹಿಮಾನನು ಇದರಿಂದ ಶಿಟ್ಟಾಗಿ ರಾಮನಿಂದ ಬಾಳೆ ಗೊನೆಯನ್ನು ಎಳದುಕೊಂಡು ಹೋದನೆಂಬ ಮೊಕದ ಮೆಯು ತನಕೆಯಾಗಿ ಅಬ್ದುರ್ ರಹಿಮಾನನಿಗೆ 3 ತಿಂಗಳ ಸಜಾ ವಿಧಿಸೋಣಾಗಿದೆ.

ಇಲ್ಲಿಯ ಬಾಸೆಲ್ ಮಿಶ್ಶನ್ ನೇಯುವ ಕಾರ್ಖಾನೆ ಯಲ್ಲಿ ಹೆಡ್‌ಕ್ಲಾರ್ಕರಾಗಿದ್ದ ಜೋರ್ಜ ಹೆರ್ಬರ್ಟರು ಕಾರ್ಖಾನೆಯ ಹಣವನ್ನು ದುರುಪಯೋಗಮಾಡಿದ್ದರೆಂದು ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರಷ್ಟೆ. ಈ ಮೊಕದಮೆ ಯನ್ನುದ್ಯೋಪಿಲೆ ಕಲೆಕ್ಟರರು ತನಕೆ ನಡಿಸಿ ಇದೇ ತಾ. ೧೫ರಲ್ಲು ಆರೋಪಿತನಿಗೆ ೬ ತಿಂಗಳ ಸಜಾ ಮತ್ತು 1000 ರೂಪ್ಯಾ ಜುಲುಮಾನೆ ವಿಧಿಸಿದರು ೬ ತಿಂಗಳ ಸಜೆಯಲ್ಲಿ 2 ವಾರ ಸಾಧಾರಣ ಸಜೆ ಅನುಭವಿಸಿ, ಕಳುಹಿಸಿಕ್ಕಾ ತ್ರಿರುವ ಜ್ಞಾನೋದಯ ಮಂದಿರದ ಬಗ್ಗೆ ಮುಂಬಯಿ ಅವಧಿಯು ಕರಣ ಸಜೆಯಾಗಿರಬೇಕೆಂದೂ ರೂ. 1000 ಜುಲುಮಾನೆಯಲ್ಲಿ ರೂ 835 ಮಂದೈಗೆ ಸಲ್ಲಬೇಕೆಂದೂ ತೀರ್ಮಾನಿಸಿದರು. ಆರೋಪಿತನು ಜುಲುಮಾನೆ ಕೊಡ ತಪ್ಪಿದರೆ ಹೆಚ್ಚಿಗೆ 6 ತಿಂಗಳ ಕರಣ ಸಜಾ ಅನುಭವಿಸಬೇ ಕಾಗಿರುವ ಮಾಜಿ ಪ್ಯೂಪಿಲೆ ಕಲೆಕ್ಟರರ ಈ ತೀರ್ಮಾನ ಮೇಲೆ ಅಪೀಲು ಮಾಡಲಿಕ್ಕಿರುವದರಿಂ ತಿಸ್ಕ್ಕೆ ಮತ್ತು ಸ್ಯೆನ್ ಜಡ್ಜರು ಆರೋಪಿತನನ್ನು ಜಾಮೀ ನಿನ ಮೇಲೆ ಬಿಟ್ಟಿರುತ್ತಾರೆ ಆಪೀಲು ತನಕೆಯು ಬರುವ ಜನವರಿ ತಾ 17ರಲ್ಲಿ ಪ್ರಾರಂಭವಾಗುವದೆಂಕ ತಿಳಿಯುತ್ತೇವೆ

ಇಲ್ಲಿಯ ಪಬ್ಲಿಕ್ ಕೆನರಾ ಕನ್ಸೆಯನ್ಸ್ ಕಂಪೆನಿಯ ವರು ಉತ್ಪಿಯುತ್ತಕಡೆ ಮೋಟರ್ ಲೈನನ್ನು ತೆರೆಯುವ ಕವಕದಲ್ಲಿದ್ದ ಪಗಂಬೂರು, ಮೂಡ್ಕಿ ಮೊದಲಾದ ಸ್ಥಳ ಗಳಿಗೆ ಜೆಂಕಾದ ಮೋಟರ್ ಕೆಲ್ಸಗಳನ್ನು ಸದರಿ ಕಂಪೆನಿಯ ವರ್ಕ್‌ಶೋಪಿನಲ್ಲಿ ತಯಾರಿಸಿಕ್ಕಿರುವರು. ಇದೇ ತಾ 25-26ರ ಒಳಗೆ ಮಂಗ್ಳಿವರೆಗೆ ಮೋಟರ್‌ಬಸ್ ತೆರೆಯು ವುದೆಂದೂ ಪ್ರತಿದಿನ 2 ಮೋಟರ್ ಬಸ್ಸುಗಳು ಒಂದು ತಲಪಲು ವೀಲಿ ವಾಗುವದೆಂದೂ ಮೋಟರ್ ಬಸ್ಸು ಗಳು ಒಂದು ತಲಪಿದಾಕ್ಷಣ ಬರುವ ಜನವರಿ ಪ್ರಥಮ ವಾರದೊಳಗೆ ಉಡುಪಿವರೆಗೂ ಮೋಟರ್ ಒಂದಿಗಳ ನ್ಯವ ಹಾರವು ನಡಿಸಲ್ಪಡುವದೆಂದೂ ತಿಳಿಯುತ್ತೇವೆ

ಜಪ್ಪಾ ಎಂಬಿಗಳಿಗೆ ಗಾಯವೊಡೆದ ಯಾ ರೋಗದ ಕುದುರೆಗಳನ್ನು ಗಾಡಿಗೆ ಕಟ್ಟುವ ಮತ್ತು ಜಳಿಗೆ ಗಾಡಿಗಳ ನ್ನು ಪ್ರಯೋಗಿಸುವ ಜಟ್ಕಾ ಡ್ರೈವರ ಮೇಲೆ ಹೆಕ್ಕಿ ಕೆರೆ ಜು ಆಫೀಸರರು ಜಾರ್ಜಮಾಡಿ ಆಗಾಗ್ಗೆ ಅವರನ್ನು ತಿಳಿಕೆ ಸರಿಪಡಿಸುತ್ತಲಿ ಇರುವರು. ಹಳೇಗಾಡಿಯನ್ನು ಉಪಯೋಗಿಸಿ ಕೊರಗನೆಂಬವನಿಗೆ ಇದೇ ತಾ 15ಲ್ಲು ರೂ. ೧ ಮತ್ತು ಗಾಡಿಯನ್ನು ಬಾಡಿಗೆಗೆ ಕೊಡಲು ನಿರಾ ಕರಿಸಿದ ಜಟ್ಕಾಡ್ರೈವರ ಜೋಸೆಫ್ ಕೊರ್ನೆನೆಂಬವನಿಗೆ ರೂ. ೫ ಜುಲುಮಾನೆಯಾಗಿರುವರು

ಬೆಟ್ಟಾಳ ಎಂಪರ್ ಸೆಕೆಂಡ್ ಶಾಲೆ, ಎಲಿಮೆಂಟರಿ ಶಾಲೆ, ಕಾರ್ಕಳ ಬೋರ್ಡುಶಾಲೆ, ಕಾವು ಬೋರ್ಡು ಶಾಲೆ, ಪರ್ಲಂಗಿಪೇಟೆಯ ಪೆರಮಜ್ಜಿ ಸೈಂಟ್ ಜೋಸೆಫ್ಸ್ ಶಾಲೆ —ಮೊದಲಾದ ಶಾಲೆಗಳಲ್ಲಿ ದಿಲ್ಲಿದರ್ಬಾರ್ ದಿನಾ ಚರಣೆಯು ಒಳ್ಳೆ ವಿಜೃಂಭಣೆಯಿಂದ ನಡಿಸಲ್ಪಟ್ಟಿರುತ್ತ ದೆಂಬ ವಾರ್ತೆಯು ಬಂದಿರುತ್ತದೆ.

ಪೀರ್ಸ್ ಮೊರ್ಗನ್ ಎಂಡ್ ಸನ್ಸ್ ಕಂಪೆನಿಯಲ್ಲಿ ಕ್ಲಾರ್ಕರಾಗಿರುವ ರಾ! ಅರಿಕೆರೆ ಲಕ್ಷ್ಮೀನಾರಣಪ್ಪಯ್ಯನ ವರ 6 ವರ್ಷದ ಮಗಳು ತಾ. 12ನೇ ಬೆಳಿಗ್ಗೆ ಒಂದು ಕೈ ದೀಪವನ್ನು ಹಚ್ಚಿಟ್ಟುಕೊಂಡು ಶೀರೆಕುಡಲು ಪ್ರಯತ್ನಿಸು ತ್ತಿರುವಾಗ ವಸ್ತ್ರಕ್ಕೆ ಬೆಂಕಿತಾಗಿ ಸುಟ್ಟ ಗಾಯದಿಂದ ಅದೇ ರಾತ್ರಿ ಮೃತಳಾದಳು.

ಹಿಂದಿನ ಸಂಚಿಕೆಯಲ್ಲಿ ತಿಳಿಸಿದಂತೆ ಇದೇ ತಾ. 16ನೇ ಬುಧವಾರ ಡಿಸ್ಟ್ರಿಕ್ಟ್‌ಬೋರ್ಡು ಸಭೆಯು ಕೂಡಿ ಬಂತು. ಮುಖ್ಯವಾಗಿ ಈ ಸಭೆಯಲ್ಲಿ ಆಯಾ ತಾಲೂಕು ಬೋರ್ಡುಗಳ ಬರುವ ವರ್ಷದ ಆದಾಯವೆಚ್ಚಗಳ ಪ್ರಸ್ತಾಪವು ನಡೆದಿದ್ದಿತು.

ಮಂಗಳೂರು, ಪಾಣೆಮಂಗಳೂರು ವರೆಗೆ ತೆರೆಯ ಲಿಕ್ಕಿರುವ ಲೈಲೈ ಲೈನು ಸರ್ವೆ ಮಾಡುವರೆ ಶೆಂಕ್ಷನ್ ದೊರ ಕಿರುತ್ತದೆ.

ಶ್ರೀ ಜ್ಞಾನೋದಯ ಸಮಾಜದವರು ಇಲ್ಲಿ ನಿರ್ಮಿಸು ತ್ತಿರುವ ಜ್ಞಾನೋದಯ ಮಂದಿರದ ಬಗ್ಗೆ ಮುಂಬಯಿ ಯಲ್ಲಿ ಇರುವ ಮೊಗೇಯರರ ಹೋಬಳಿ ಸಭೆಯವರು ಭಿಜಿಸಿರುವ ಶ್ರೀ ಅಮ್ಮನವರ ಭಂಡಾರದಿಂದ ರೂಪ್ಯಾ ೫೦ನ್ನು ದಾನನಾಗಿ ಕಳುಹಿಸಿರುತ್ತಾರೆ.

ಮೇಲಿನ್ಸ್ ಫೂಡ್ ಕಂಪೆನಿಯ ಪ್ರಧಾನ ಏಜೆಂಟರಾದ ಮುಂಬಯಿಯ ಲೆಥೆಮ್ ಎಬರ್ ಕ್ರೊಂಬಿ ಎಂಬವರು ಕಳುಹಿಸಿಕೊಟ್ಟ ಶ್ರೀ ವೇಣುಗೋಪಾಳ ಕೃಷ್ಣನ ಚಿತ್ರವುಳ್ಳ ಕೆಲೆಂಡರನ್ನು ವಂದನಾಪೂರ್ವಕ ಸ್ವೀಕರಿಸಿರುವೆವು. ಮುಂ ಬಯಿಯ ಲೇಥೆಮ್ ಎಬರ್ ಕ್ರೊಂಬಿ ಕಂಪೆನಿಯವರಿಗೆ ಎರಡಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸಿಕೊಟ್ಟ ವರಿಗೆ ಕೆಲೆಂಡರಿನ ಪ್ರತಿಯು ಧರ್ಮಾರ್ಥವಾಗಿ ಕಳುಹಿ ಸೋಣಾಗುವದೆಂಬದಾಗಿ ತಿಳಿಯುತ್ತೇವೆ.

ಹಿಂದೂ ಪ್ರಿಸ್ಟಿಟ್ ಕಂಪೆನಿಯಲ್ಲಿ ಕೆಲವು ಪ್ರಯಾಣಿ ಕರಿಗೆ ಟಿಕೇಟುಗಳು ಕೊಡೋಣಾಗುವದಿಲ್ಲವೆಂಕ ದೂರು ಬಂದಿರುವ ವಿಷಯದಲ್ಲಿ ಈ ಕಂಪೆನಿಯ ಮಾಲಿಕರಾದ ಮ। ರಾ। ರಾ। ಬಿ. ಸುಬ್ಬಯ್ಯ ಶೆಟ್ಟರವರು--ನನ್ನ ಕಂಪೆ ನಿಯ ನೌಕರರು ತಾವು ಪ್ರಕಟಿಸಿದ ತರದಲ್ಲಿ ಯಾರೊಬ್ಬ ರಿಗೆ ತೊಂದರೆ ಕೊಟ್ಟಿದ್ದರೆ ಆ ದೂರು ನನ್ನಕೂಡೆ ಬಂದಲ್ಲಿ ಅವರ ನಿವೃತ್ತಿಮಾಡಲಿಕ್ಕೆ ಸಿದ್ಧವಿದ್ದೇವೆಂಕ-ತಿಳಿಸಿರುವರು.

ದಿಲ್ಲಿದರ್ಬಾರ ದಿನ ಸ್ಮರಣಾರ್ಥವಾಗಿ ಇಲ್ಲಿಯ ವೈದಾನಿನಲ್ಲಿ ಮೂಲಪಾಠಶಾಲೆಗಳ ಅಧ್ಯಾಪಕರ ಸಂಘವು 'ಕಪ್ಪು' ಇದರ ವಂದ್ಯಾಟವು ಕಲೆಕ್ಟರ್ ದೊರೆ ಗಳವರ ಮತ್ತು ದೊರೆಸಾನಿಯವರ ಅಧ್ಯಕ್ಷತೆಯಲ್ಲಿ ನೆರೆ ವೇರಿತು. ಕಪ್ಪು ಈ ವರ್ಷದಲ್ಲಿ ಮುನಿರ್-ಇಲ್-ಇಸ್ಲಾಮ್ ಶಾಲೆಗೆನೇ ದೊರಕಿತೆಂಬದಾಗಿ ತಿಳಿಯುತ್ತೇವೆ.

ಇಲ್ಲಿಯ ಬಿಕರನ್ಯಾಕನ ಕಟ್ಟೆ ಪದವಿನಲ್ಲಿ ವಾಸಮಾ ಡುತ್ತಿದ್ದು ಜಿಲ್ಲರೆ ಚಿನ್ನಾಭರಣಗಳನ್ನು ಅತ್ತಿತ್ತ ತಕ್ಕೊಂಡು ಹೋಗಿ ವಿಕ್ರಯಿಸುತ್ತಿದ್ದ ಚರ್ಡಯ್ಯ ಪ್ರಭುಗಳೆಂಬವರು ಇತ್ತಲಾಗೆ ಒಂದು ವಾರದಿಂದ ಕಾಣೆಯಾಗಿರುವರೆಂಬ ದಾಗಿ ಕೇಳುತ್ತೇವೆ.

ಮಂಗಳೂರು ತಾಲೂಕಿಗೆ ಸೇರಿದ ಎಕ್ಕಾರು ಗ್ರಾಮದ ಗ್ರೇಸಿಯ ಲುಯಿಸಬಾಯಿ ಎಂಬವಳು ತನ್ನ ಗಂಡ ಬವತೀಸ್ ಸೋಜನು ತನಗೆ ಹೊಡದಿದ್ದನೆಂಬದಾಗಿ ಅಸಿಸ್ಟಾಂಟ ಮೇಜಿಸ್ಟ್ರೇಟ ಕೋರ್ಟಿನಲ್ಲಿ ಪಿರ್ಯಾದಿ ಕೊಟ್ಟಿದ್ದಳು. ಅಸಿಸ್ಟಾಂಟ ಮೇಜಿಸ್ಟ್ರೇಟರಾದ ಮಿ. ವೈಂಟರ್ ಐ ಸಿ. ಎಸ್. ದೊರೆಗಳವರು ಈ ಮೊಕದಮೆ ತನಕೆ ನಡಿಸಿ ಬವತೀಸ್ ಸೋಜನಿಗೆ 4 ವಾರಗಳ ಸಜ ಮತ್ತು 5 ರೂಪಾಯಿ ಜುಲುಮಾನೆಯನ್ನು ವಿಧಿಸಿದರು. ಈ ಮೊಕದಮೆಯಲ್ಲಿ ಅಸಾದಿಸಲ್ಪಟ್ಟಿದ್ದ ಮುದ್ದೆಯು ಮಾವ ಸಲ್ವಾದೋರು ಸೋಜನು ಮದ್ದು ತುಕೊಟ್ಟವನೆಂಬ ತಕ್ಸೀರಿನ ಮೇಲೆ ಅವನಿಗೆ 2 ವಾರಗಳ ಸಜಾ ಮತ್ತು ರೂ. 5 ಜುಲುಮಾನೆ ಆಗಿರುವದು.

ಪುತ್ತೂರು ಡಿವಿಜನಲ್ ಅಧಿಕಾರರಾದ ಮ. ರಾ. ವೆ. ಶೀತಾರಾಮಯ್ಯಗಾರುರವರಿಗೆ 3 ತಿಂಗಳ ಪಿವೆಲೆವ್ ರಜೆ ಕೊಡೋಣಾಗಿರುವದು.

ದಿನವಹಿ ಲೆಕ್ಕಾಚಾರ ಇತ್ಯಾದಿಗಳನ್ನು ಬರೆಯಲು ಅಗತ್ಯವುಳ್ಳ

1916ನೇ ವರುಷದ

ಪೊಕೆಟ್ ಡೈರಿಗಳು.

ಸಿವಿಲ್ ವಕ್ಕು ರವಿನ್ನು ಕೋರ್ಟಿಗಳಿಂದ ಹೊರಡಿಸಲ್ಪಡುವ ಪ್ರೊಸೆಸ್ ಫೀಸು, ಭೂಪರಿಗಳು, ಕ್ರಿಮಿನಲ್ ಕೋರ್ಟುಗಳ ಭೂತ್ತ ದರಗಳು, ಸಾಕ್ಷಿಗಳಿಗೆ ಕೊಡುವ ಖರ್ಚಿಗೆ ಕೊಡುವ ಹಣಗಳ ಪಟ್ಟಿ, ವಕೀಲರ ಶುಲ್ಕ, ಕೋರ್ಟು ಫೀಸು, ದಸ್ತಾವೇಜುಗಳನ್ನು ರಿಜಿಸ್ಟ್ರಿ ಮಾಡಿಸಲು ಬೇಕಾದ ಮಾಹಿತಿ, ಸ್ಟ್ಯಾಂಪ್ ಡ್ಯೂಟಿ ನೋಟಿ ವಿಲ್ಲಾಮೆ ಬಾಬಿಗೆ ಚೀಟು ರಿಜಿಸ್ಟ್ರಿ ನೋಟೀಸು ಇತ್ಯಾದಿಗಳ ಮಾದರಿ ಫೋರ್ಮು ಸರಕಾರಿ ಮೊಕಾಬಿಲೆ ಪಟ್ಟಿ ಓಪ್ಪಾಲಾಫೀಸಿನ ಕೃತ್ಯ, ಪರಸ್ಪರ ಸಹಾಯಕ ಸಂಘಗಳ ಮಾಹಿತಿ ಬಡ್ಡಿ ಎಣಿಕೆಗೆ ಬೇಕಾದ ಪಟ್ಟಿ, ಓರೂ ಮಾಹಿತಿಗಳು ಮತ್ತು ಕೈಸ್ತರ ಹಬ್ಬಗಳು — ಮೊದಲಾದ ಈ ವಿಷಯಗಳನ್ನು ಒಳಕೊಂಡಿದೆ

ವ್ಯಾಪಾರಸ್ಥರಿಗೆ, ವಕೀಲರಿಗೆ, ಸಾಹುಕಾರರಿಗೆ ದಾರ್ದಾರರಿಗೆ, ಇತರ ಎಲ್ಲಾ ವ್ಯಕ್ತಿಗಳವರಿಗೆ ಸಹ ಉಪಯುಕ್ತವಾಗಿರುವ ಪೊಕೆಟ್ ಬುಕ್

ದೊಡ್ಡ ಸೈಜಿನ ಡೈರಿ ಪೆನ್ಸಿಲ್ ಸಹಿತ ಪ್ರತಿಯೊಂದಕ್ಕೆ ಆಣೆ 8

ಸಣ್ಣ ಸೈಜಿನ ಡೈರಿ ಪ್ರತಿಯೊಂದಕ್ಕೆ ಆಣೆ 4

ವ್ಯಾಪಾರಸ್ಥರಿಗೂ ರಿಜಿಸ್ಟರ್ ಮಾಡಿಕೊಳ್ಳುವವರಿಗೂ ವಿಶೇಷ ರಿಯಾಯಿತಿ ಪ್ರತ್ಯೇಕ ದರಗಳಿವೆ

ನಮ್ಮಲ್ಲಿ ತಯಾರಾಗುವ ಡೈರಿಗಳ ಕಾರ್ಡ್, ಅವುಗಳನ್ನು ಹೊಲಿದು ತಯಾರು ಮಾಡಿದ ಕ್ರಮ, ಇತ್ಯಾದಿಗಳನ್ನು ನೋಡಿಕೊಳ್ಳಿರಿ!

ಡೈರಿಗಳು ಸಿಕ್ಕುವ ವಿಳಾಸ — ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

NOTICE.

The Canara High School Day will be celebrated this year on the 26th December 1915 All OLD BOYS of the School are requested to be present on the occasion and to make the Celebration a success

Canara High School
Mangalroe 24 11 15

A Padmanabhaiya,
B A L T
President
School Day Committee

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಒ ಪಿ. ನಂಬ್ರ 143/1915

ಬಿ. ಆನಂದರಾವ್—ಮೈನರ್—ತನ್ನ ಕ್ಷೇಮಚಿಂತಕಳು ಅರ್ಜಿದಾರ
ಬಾಳಮ್ಮ ಯಾನೆ ಅಮ್ಮಣ್ಣಿ ಅಮ್ಮ.

ಕಾಸರಗೋಡು ತಾಲೂಕು ಕಾಸರಗೋಡು ಮಾಣೆ ಅಚ್ಯುತಪೈ ಗ್ರಾಮದಲ್ಲಿದ್ದ ಕಳೆದ 1913ನೇ ಇಸವಿ ಸಪ್ಟಂಬರ ತಾ 13ನ್ನು ಪೈತ್ತೂರಲ್ಲಿ ವ್ಯತಪಟ್ಟ ಬಿರಾಂತಬೈಲ್ ಅಪ್ಪಣ್ಣಯ್ಯನ ಸಾಲಗಳನ್ನು ವಸೂಲು ಮಾಡುವದೆ ತನಗೆ ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಮೃತನ ಮಗ ಸದರಿ ಮೈನರ್ ಬಿ ಆನಂದರಾವ್ ಕ್ಷೇಮಚಿಂತಕ ಬಾಳಮ್ಮ ಯಾನೆ ಅಮ್ಮಣ್ಣಿ ಅಮ್ಮಳು ಬರಕೊಂಡ ಅರ್ಜಿಯು ಇದೇ ತಿಂಗಳ ತಾ. 21ರಲ್ಲು ಪೂರ್ವಾನ್ಹ 11 ಘಂಟೆಗೆ ತನಕೆಗೆ ಇಟ್ಟಿರುತ್ತದೆ ಆ ಕುರಿತು ಯಾರೊಬ್ಬರ ಆಕ್ಷೇಪ ಇದ್ದರೆ ಅವನ್ನು ಸದರಿ ಕೋರ್ಟಿನಲ್ಲಿ ಸದರಿ ತಾರೀಕಿಗೆ ಜಾಹೀರುಮಾಡಿಕೊಳ್ಳತಕ್ಕದ್ದು.

MANGALORE,
13—12—1915.

P. D'Souza;
Pleader for Petitioner.

ಕೋಮಲ ವಿಲಾಸವು.

ಪ್ರಿಯರೇ,

ನಾವು ಮದ್ರಾಸಿಗೆ ಹೋದರೆ ಯಾರಲ್ಲಿ ಉಳಕೊಳ್ಳುವದು? ಎಂಬ ಈ ಚಿಂತೆ ನಮಗೆ ಇನ್ನು ಮೇಲ ಬೇಡ ಯಾಕಂದರೆ, ಆಲ್ಲಿದ್ದ ನಮ್ಮೂರಿನ ಸೋಮೇಶ್ವರ ನರಶಿಂಗರಾಯರು ಮುಂಚಿಗಿಂತ ಭೈವ್ಯ ಸ್ವೀಕರಿಸಿಗೆ ಇನ್ನೂ ಹತ್ತರದಲ್ಲಿ ಇನ್ನೂ ವಿಶಾಲ ವಾದ ಉಪ್ಪರಿಗ ಮನೆ ತಕ್ಕೊಂಡಿದ್ದಾರೆ ಮುಂದಾಗಿ ಒಂದು ಕಾರ್ಡು ಬರೆದರೆ ಸ್ವೀಶ ನಿಗೇ ಜನಕಳ ಹಿಸಿ ನಿಮ್ಮನ್ನು ಆಮಂತ್ರಿಸ ತ್ತಾರೆ ಊಟಕ್ಕೂ ವಸತಿಗೂ ಮನೆಯ ಷ್ಟೇ ಸೌಕರ್ಯ ಬಿರ್ಚೇನೂ ವಿಶೇಷವಿಲ್ಲ ಹೀಗಿರುವಲ್ಲಿ ನಿಮ್ಮ ಕಾರ್ಯವನ್ನು ಸ್ವತಹಾ ಹೋಗಿ ಜಯಿಸಿಕೊಂಡು ಬರಲಿಕ್ಕೆ ಅನುಮಾನಪಡುವದೇಕೆ?

ವಿಳಾಸ — ಸೋಮೇಶ್ವರ ನರಶಿಂಗರಾವ್,
ಕೋಮಲ ವಿಲಾಸ,
ರಸಪ್ಪಚೆಟ್ಟಿ ಬೀದಿ, ಮದರಾಸು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಒ ಪಿ ನಂಬ್ರ —

ಮಾರ್ಟಿನ್ ಸಿಕ್ವೇರಾ—ಅರ್ಜಿದಾರಳ

ಕಂದಾವರ ತಾಲೂಕಿನ ಬಾಕ್ರೂರು ಕಸಬೆಯಲ್ಲಿ ತಾ 17 5 1913ನ್ನು ಮೃತಪಟ್ಟ ಜೊನವೆ ಜರ್ ಸ್ಯಾನಿಸ್ ಲಾವ್ರಸ್ ಡಿಸೋಜನ ಆಸ್ತಿ ಆಡಳಿತೆ ನಡಿಸಿವರೆ ತನಗೆ ಲೆಟರ್ ಆಫ್ ಎಡ್ಮಿನಿಸ್ಟ್ರೇಶನ್ ಕೊಡಬೇಕಾಗಿ ಅಪೇಕ್ಷಿಸಿ ಮೃತನ ವಿಧವೆ ಯಾದ ಮೇಲ್ಕಂಡ ಅರ್ಜಿದಾರಳು ಬರಕೊಂಡ ಅರ್ಜಿಯ ಇದೇ ತಿಂಗಳ ತಾರೀಕು 21ಲ್ಲು ಪೂರ್ವಾನ್ಹ 11 ಘಂಟೆಗೆ ತನಕೆಗೆ ಇಟ್ಟಿರುತ್ತದೆ ಆ ಕುರಿತು ಯಾರೊ ಬ್ಬರ ಆಕ್ಷೇಪ ಇದ್ದರೆ ಅವನ್ನು ಸದರಿ ಕೋರ್ಟಿನಲ್ಲಿ ಸದರಿ ತಾರೀಕಿಗೆ ಜ್ಯಾಹೀರು ಮಾಡಿಕೊಳ್ಳತಕ್ಕದ್ದು

ಮಂಗಳೂರು
ತಾ 13-12 1915

P D'Souza,
Pleader for Petitioner

ನೋಟೀಸು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ.

ದಿವಾಳಿ ಅರ್ಜಿ ನಂಬ್ರ 12/1915

ಜೋನಿ ಫರ್ನಾಂಡಿಸ್, ಮನುವೇಲ್ ಫೆರ್ನಾಂಡಿಸನ ಮಗ ಉಪ್ಪಿತಾಲೋಕ, ಪಡಮುನ್ನೂರುಮಾಗಣೆ, ಕೊಡವೂರುಗ್ರಾಮ. } ಅರ್ಜಿದಾರ

ಎದ್ರಿರು

ಅಂಡಾರ ಸೈದ್ ಅಬ್ಬಾ ಸಾಹೇಬ ಕೂಡಾ 8 ಜನರು—ಕೌಂಟರರು.

1907ನೇ ಇಸವಿ ನಂಬ್ರ III ನೇ ಆಕ್ಟಿನ ಸೆಕ್ಷನ್ 12 ಕ್ಲೋಜ್ 2ರ ಪ್ರಕಾರ ಮೇಲ್ಕಂಡ ಅರ್ಜಿದಾರನು ತನ್ನನ್ನು ದಿವಾಳಿಯೆಂತ ಸ್ಥಾಪಿಸಬೇಕಾಗಿ ಕೊಟ್ಟ ಅರ್ಜಿಯು ತಾರೀಕು 12ನೇ ಜನವರಿ 1916ಕ್ಕೆ ತನಕೆಗೆ ಇಟ್ಟಿದೆ

District Munsif's Court
Udipi, 11th December 1915

C. N. Kuppuswami Aiyer,
District Munsif.

ಕನ್ನಡ ಕಥೆ ಪುಸ್ತಕಗಳು.

ಶುಕಸಪ್ತತಿ ೭೦ ಕಥೆಗಳು ಸಚಿತ್ರ	೨	೦	೦	ತೊರವೆ ರಾಮಾಯಣ ಸೀಯಂ	೧	೦	೦
ಸಚಿತ್ರ ವಿದ್ಯಾವಂಜುರಿ ಕಥೆಗಳು	೧	೮	೦	ಜೈಮಿನಿ ಭಾರತ ಗ್ಲೇಜಿವಲ್	೧	೪	೦
,, ಭಟ್ಟಿವಿಕ್ರಮಾದಿತ್ಯರಾಯನ ಕಥೆ	೧	೮	೦	,, ದುಯ್ಯಂ	೦	೧೦	೦
ಸಚಿತ್ರ ರಾಮಾಯಣ ಕಥಾಸಂಗ್ರಹ ಗ್ಲೇಜ್ ಆವ್ವಲ್	೧	೪	೦	,, ಸೀಯಂ	೦	೬	೦
ಡಿ ರಫ್ ದುಯ್ಯಂ	೦	೧೩	೦	೧೫ ಪರ್ವ ಭಾರತ	೨	೮	೦
ಜೈಮಿನಿ ಭಾರತ ಕಥಾಸಂಗ್ರಹ	೦	೧೩	೦	೧೨ ಸ್ಕಂಧ ಭಾಗವತ ಗ್ಲೇಜಿವ	೫	೦	೦
ಕೃಷ್ಣಚೋಧಾಮೃತ	೦	೧೦	೦	,, ದುಯ್ಯಂ	೪	೦	೦
ಭಾರತ ಕಥಾಸಂಗ್ರಹ	೦	೬	೦	ಪದಗಳು.			
ಪ್ರಭಾವತಿ ಶುಕಮಂಜರಿ ಕಥೆ	೦	೫	೦	ಪದ್ಮರತ್ನಾಕರ ೧ನೇ ಭಾಗ	೧	೦	೦
ಬಕಾವಳಿ ಕಥೆ	೦	೬	೦	ಪುರಂದರದಾಸರ ಕೀರ್ತನೆ ೩	೦	೬	೦
ಮದನಮೋಹನರಾಜ ಚರಿತ್ರೆ	೦	೬	೦	,, ಬೆಂಗಳೂರು	೦	೬	೦
ಚಂಚಲಕುಮಾರಿ ಕಥೆ	೦	೪	೦	ಕನಕದಾಸಕೃತ್ಯದಾಸಕೀರ್ತನೆ	೦	೩	೦
ಸಾಧ್ವಿ ಗುಣವಂಜರಿ ಕಥೆ	೦	೫	೦	ಗೀತರತ್ನಮಂಜರಿ	೦	೪	೦
ಪತಿವ್ರತಾಮಹಾತ್ಮೆ ಕಥೆ	೦	೬	೦	ಗೀತಕಲ್ಪಾಂಕುರ	೦	೫	೦
ಹುಂಶ್ಚಂದ್ರನ ಕಥೆ	೦	೪	೦	ಗೀತಿಕಾವಂದಾನವಾಲಿಕಾ	೦	೩	೦
ಸಳದಮಯ್ಯಂತಿಯರ ಕಥೆ	೦	೬	೦	ಗೀತಿಕಾ ತರಂಗಿಣಿ	೦	೪	೦
ಬತ್ತೀಸಪುತ್ತಳಿ ಕಥೆ	೦	೫	೦	ಬಾಗಲುತಡಿಯುವ ಪದ	೦	೦	೬
ಹುಚ್ಚುಮುಂಡಗಳ ಕಥೆ	೦	೬	೦	ಕುಪ್ಪೆಗುಡಿಸಿದ ತಾಡು	೦	೦	೬
ಹಾಸ್ಯಸುಂದರಿ ಶುಕವಾಣಿ ಕಥೆ	೦	೪	೦	ಕೃಷ್ಣ ವಿವಾಹಪ್ರಮೇಧ	೦	೬	೦
ಮಂಡುಘೋಷಾ ಶೃಂಗಾರಾದ್ಭುತಕಥೆ	೦	೧೨	೦	ದ್ರೌಪದಿ ವರ್ಣ	೦	೫	೦
ಹಾತೀಮತಾಯಿ ಕಥೆ	೦	೧೦	೦	ಲಕ್ಷ್ಮೀಶೋಭಾನೆ	೦	೧	೬
ಪುರಾಣಗಳು.				ಪಾಂಡವಗೀತ	೦	೧	೬
ತೊರವೆರಾಮಾಯಣ ಗ್ಲೇಜಿವಲ್	೨	೦	೦	ವಿಷ್ಣುಸಹಸ್ರನಾಮ (ಪ್ರೋಕ್ಷ)	೦	೨	೦
,, ದುಯ್ಯಂ	೧	೪	೦	ಹಾರ್ಮೋನಿಯಂಪುಸ್ತಯಂಟೋಧಿನ	೦	೪	೦

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಖಿಮಾಗಿಯೂ, ಜಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಿಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ —ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಶಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಸ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್ಸ್,
ಜೋರ್ಜ್‌ಟೌನ್, ಮದ್ರಾಸು.

109 ಫೈಯರ್ ರೋಡ್,
ಮುಂಬಯಿ,

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,, ...	225,000—0—0
Subscribed Capital	219,100—0—0	ಪ್ರತಿಜ್ಞಾತ ಮೂಲ ಧನವು ,, ...	219,100—0—0
Paid up Capital	194,100—0—0	ಆಗತ ಮೂಲ ಧನವು ,, ...	194,100—0—0
Deposits	371,976—4—4	ರೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	371,976—4—4
Reserve Fund	33,500—0—0	ರಕ್ಷಿತ ಧನವು	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs. 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 3½% per annum at the discretion of the managing committee

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%

Loans granted on proper securities and pledges

Sealed Parcels for safe custody received on a moderate charge.

Canara Bank Ltd.,

Mangalore, 1st December 1917.

ನಿಯಮಿತ ಮೂಲ ಧನವು ರೂಪಾಯಿ 300,000 ಹುಟ್ಟಿಬಂದ ಮೂಲ ಧನವು ರೂಪಾಯಿ 225,000 ಪ್ರತಿಜ್ಞಾತ ಮೂಲ ಧನವು ರೂಪಾಯಿ 219,100 ಆಗತ ಮೂಲ ಧನವು ರೂಪಾಯಿ 194,100 ರೇವಣಾತಿಯಾಗಿ ಕೊಡೋಣಾದ ಮೊಬಲಗುಗಳು 371,976 ರಕ್ಷಿತ ಧನವು ರೂಪಾಯಿ 33,500

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಶೇಕಡಾ 25 ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,100 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 28,485—0—0 ಸಂಕಾರದ ರೂ. 29,300ರದ ಭದ್ರತಾಪತ್ರಗಳಲ್ಲಿ ರೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಸಾಲುವಾಟಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಶೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಪಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ರೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವದಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ರೇವಣಾತಿಗಳು ಶೇಕಡಾ 3½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ರೇವಣಾತಿಗಳು ರೇವಣಿದಾರರ ಅನುಕೂಲತೆಗಾಗಿ ದೇಂಕಿನ ಪರವಾಗಿ ಏನೂ ವರ್ಜಿಸಲ್ಪಡದೆ ಇಡೋಣಾಗುವವು.

ಸೇವಿಂಗ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ರೇವಣಾತಿಇಡೋಣಾವೀತು. ಈ ರೇವಣಾತಿಗಳಿಗೆ ಶೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಪಕುಟಿವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರವ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವಸ್ಕದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವುಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೋ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬಿನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಪ್ಸವಾಗಿ ಬಂದಿವೆ!

Proprietors:—**The Oriental Drug & Chemical Co.**

Sole Agents:—**MOHINI AGENCY,**

3 Fida Building, Jumma Musjid, **BOMBAY.**

Agents:—**Bhagavandas Choonilal & Co.,**

177 China Bazar Road, MADRAS

ಪ್ರೊಪ್ರೈಟರರು:—ಓರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೋ

ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,

3 ಫಿಡಾ ಬಿಲ್ಡಿಂಗ್ಸ್, ಜುಮ್ಮಾ ಮಸೀದ್, ಬೊಂಬಾಯಿ

ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ.

177 ಚೀನಾ ಬಜಾರ್ ರಸ್ತೆ, ಮದ್ರಾಸು.

Supplement to this issue.

Prices Very Moderate!

Please circulate this among your friends.

NOTICE.

Good Morning!

P. M. KAMATH & Co

Dispensing Chemists, Wholesale Druggists & General Merchants,

(near Shri Venkataramana Temple)

No. 1, New Court Road,

MANGALORE.

have great pleasure to announce that, in their shop premises (formerly occupied by Mr A. L Krishna Pai, Chemist) they have received a very fresh stock of —

1. Arrowroot, Barley, Biscuits, Cocoas, Teas, Kola powder, Infants-foods of various sorts.

2 Drugs, (Burgoynes) Druggists sundries, Feeding bottles, Irrigators, (Enemas) Measure glasses, Patent Medicines, Soaps, Toilet requisites, Thermometers, (Clinical) Lactometors, Fountain Pens, and their spare parts, Swan Ink, etc , etc.

We also stock Denatured spirits for Stoves, Lamps, Varnishing, Gaslights. etc., etc.

Prescriptions are carefully dispensed during all hours of the day by a special trained hand

Night dispensing is undertaken at **Kamath** *is called over at his residence in the Court Mutt Street.*

The public are earnestly solicited for trial orders.

Office hours: 8 A.M. to 9 P.M.



ದರಗಳು ಸುಲಭ!

ಹೊಸ ಸಾಮಾನುಗಳು!!

ತಾವು ಓದಿಕೊಂಡು ತಮ್ಮ ಮಿತ್ರರಲ್ಲೂ ಪ್ರಚುರಪಡಿಸಿರಿ.

ನೋಟಿಸು.

ಮಂಗಳೂರು ಶ್ರೀ ವೆಂಕಟ್ರಮಣದೇವಸ್ಥಾನದ ಬಳಿ (ಈ ಮುಂಚೆ ದಿವಂಗತ ಎ. ಎಲ್. ಕೃಷ್ಣಪೈಗಳವರು ಇಟ್ಟು) ಔಷಧಾಲಯದಲ್ಲಿ ವ್ಯಾಪಾರ ನಡಿಸುತ್ತಿರುವ

ಪಿ. ಎಮ್. ಕಾಮತ್ ಮತ್ತು ಕಂಪೆನಿಯವರು

ಈ ಕೆಳಗಿನ ಸಾಮಾನುಗಳನ್ನು ಈಗ ತಾನೇ ಹೊಸತಾಗಿ ತರಿಸಿರುವರು. —

1. ಅರಾರೂಟು, ಬಾರ್ಲಿ, ಬಿಸ್ಕುಟು, ಕೊಕ್ಕೊ, ಚಾ, ಕೋಲಾಹುಡಿ ಮತ್ತು ಮಕ್ಕಳ ವಗ್ಗೈರೆ ಉಪಯೋಗದ ಸರ್ವ ಆಹಾರದ್ರವ್ಯಗಳು.

2. ಬರ್ಗ್ಯೊನ್ ಬರ್ಜಿಜಸ್ ಮೊದಲಾದ ಪ್ರಖ್ಯಾತಿಪಟ್ಟ ಕಾರಖಾನೆಗಳಲ್ಲಿ ತಯಾರಿಸಲ್ಪಟ್ಟ ಅತ್ಯುತ್ತಮ, ಖಾತ್ರಿ ಮತ್ತು ಗುಣಕಾರಿಯಾದ ಸರ್ವತರದ ಔಷಧಗಳು ಮತ್ತು ಪೇಟೆಂಟ್ ಔಷಧಗಳೂ, ಔಷಧಗಾರರಿಗೆ ಮತ್ತು ಶಸ್ತ್ರವೈದ್ಯರಿಗೆ ಬೇಕಾದ ಉಪಕರಣಗಳೂ, ಶಿಶುಗಳಿಗೆ ಹಾಲು ಕುಡಿಸುವ ಬಾಟಲಿಗಳೂ, ಪಿಚ್ಕಾರಿಗಳೂ, ಔಂನ್ಸಗ್ಲಾಸುಗಳೂ, ಸಾಬೂನುಗಳೂ, ಥರ್ಮಾಮೆಟರುಗಳೂ, ಲೆಕ್ಟೊಮೆಟರುಗಳೂ, ಫೌಂಟನ್ ಪೇನುಗಳೂ, ಮ ಇದರ ಬೇರೆ ಬೇರೆ ಸಾಹಿತ್ಯಗಳೂ, ಸುಗಂಧದ್ರವ್ಯಗಳೂ ಸ್ವಾನ ಇಂಕ್ ವಗ್ಗೈರೆ.

ಸ್ಟೌವ್ ವಗ್ಗೈರೆ ದೀಪಗಳಿಗೂ, ವಾರ್ನಿಸ್ ಬಣ್ಣಗಳಿಗೂ ಉಪಯೋಗಿಸುವ ಸ್ಪಿರೀಟು ಸಹಾ ಮಾರಲ್ಪಡುವದು.

ಔಷಧಗಳನ್ನು ಹಗಲು ಎಲ್ಲಾ ಸಮಯದಲ್ಲಿ ಅನುಭವಸ್ಥರಿಂದ ಬಹು ಜಾಗ್ರತೆಯಾಗಿ ಮಿಶ್ರಣಮಾಡಿ ತಯಾರಿಸಿಕೊಡುವರು.

ರಾತ್ರಿ ಸಮಯದಲ್ಲಿ ಔಷಧಗಳು ಬೇಕಾದ್ದಲ್ಲಿ ಗೌರೀಮಠದ ರಸ್ತೆಯಲ್ಲಿರುವ ಕಾಮತ್‌ರ ಮನೆಯಲ್ಲಿ ತಿಳಿಸಿದ್ದಲ್ಲಿ ಸ್ವತಹಾ ಬಂದು ತಯಾರಿಸಿಕೊಡುವರು.

ವ್ಯಾಪಾರ ಸಮಯ: ಬೆಳಿಗೆ 8 ಘಂಟೆಯಿಂದ ರಾತ್ರಿ 9 ಘಂಟೆ ವರೆಗೆ.

ಪಿ. ಎಮ್. ಕಾಮತ್,
ಪ್ರೊಪ್ರೈಟರ್

P. M. Kamath,
Sole Proprietor

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 24ನೇ ದಶಂಬರ 1915

ಮದ್ರಾಸು ನ್ಯಾಯವಿಧಾಯಕ ಸಭೆಗೆ ಮೆಂಬರರ ಚುನಾವಣೆ—

ಈ ಜಿಲ್ಲೆಯವರು ತೋರಿಸಬೇಕಾದ ಐಕ್ಯ:—

ಬರುವ ಜೂನ್ ತಿಂಗಳಲ್ಲಿ ನ್ಯಾಯವಿಧಾಯಕ ಸಭೆಯ ಮೆಂಬರರುಗಳ ಚುನಾವಣೆಯು ನಡಿಯುವದೆಂತ ವಾಚಕರು ಈ ಮೊದಲೇ ತಿಳಿದಿರಬಹುದು. ದಕ್ಷಿಣ ಕನ್ನಡ ಮತ್ತು ಮಲೆಬಾರು ಜಿಲ್ಲೆಗಳು ಒಂದಾಗಿ ಎರಡು ಜನ ಮೆಂಬರರನ್ನು ಆರಿಸಬೇಕಾಗಿದೆ. ಇವರ ಪೈಕಿ ಒಬ್ಬರು ವರ್ಗದಾರರ ಪರವಾಗಿಯೂ, ಇನ್ನೊಬ್ಬರು ಲೋಕಲ್‌ಬೋರ್ಡು ಮತ್ತು ಮುನ್ಸಿಪಾಲಿಟಿಗಳ ಪರವಾಗಿಯೂ ಆರಿಸಲ್ಪಡುವರು. ನ್ಯಾಯವಿಧಾಯಕ ಸಭೆಗೆ ಮೆಂಬರರುಗಳನ್ನು ಆರಿಸುವದರಲ್ಲಿ ಈ ಜಿಲ್ಲೆಯನ್ನು ಮಲೆಬಾರು ಜಿಲ್ಲೆಯೊಂದಿಗೆ ಸೇರಿಸಿರುವದರಿಂದ ಈ ಜಿಲ್ಲೆಯ ಜನರಿಗೆ ಇರುವ ಅಡಚಣೆಗಳ ಕುರಿತು ಹಿಂದೊಮ್ಮೆ ಪ್ರಸ್ತಾಪಿಸಿರುತ್ತೇವೆ. ವರ್ಗದಾರರ ಪರವಾಗಿ ಆರಿಸೋಣಾಗುವ ಮೆಂಬರರನ್ನು ಮಲೆಬಾರಿನಿಂದಲೂ ಲೋಕಲ್‌ಬೋರ್ಡುಗಳ ಕಡೆಯಿಂದ ಚುನಾಯಿಸಲ್ಪಡುವ ಮೆಂಬರರನ್ನು ಈ ಜಿಲ್ಲೆಯಿಂದಲೂ ಆರಿಸೋಣಾಗುವಂತೆ ಮಲೆಬಾರಿನವರು ಈ ಜಿಲ್ಲೆಯವರಿಗೆ ಭ್ರಾತೃಭಾವದಿಂದ ಸಹಾಯಮಾಡಬೇಕಾಗಿ ಮೊದಲೊಮ್ಮೆ ವಿಜ್ಞಾಪಿಸಿಕೊಂಡಿದ್ದೆವು. ಹೈಕೋರ್ಟು ವಕೀಲ ಮ ರಾ ರಾ ಕಾರ್ಕಳ ಸದಾಶಿವ ಪಟ್ಟರು ಲೋಕಲ್‌ಬೋರ್ಡುಗಳ ಕಡೆಯಿಂದ ಈ ಪದವಿಗೆ ಉಮೇದ್ವಾರರಾಗಿ ನಿಲ್ಲುವುದರಿಂದ ಈ ಜಿಲ್ಲೆಯವರಿಗೆ ಈ ವಿಷಯದಲ್ಲಿ ಮಲೆಬಾರಿನವರು ಸಹಾಯ ಮಾಡುವ ಸಂದರ್ಭವು ಬಂದೊದಗಿರುವದು. ಇಂಥಾ ಸಂದರ್ಭದಲ್ಲಿ ಮಲೆಬಾರಿನವರು ತಮ್ಮ ಔದಾರ್ಯವನ್ನು ವ್ಯಕ್ತಗೊಳಿಸುವರೆಂತ ನಂಬಿರುವೆವು.

ಈ ವೇಳೆ ನಮ್ಮ ಜಿಲ್ಲೆಯವರು—ಮುನ್ಸಿಪಲ್ ಮತ್ತು ಲೋಕಲ್‌ಬೋರ್ಡಿನ ಮೆಂಬರರು ಮಾಡತಕ್ಕದ್ದೇನಿದೆ? ನಮ್ಮ ಜಿಲ್ಲೆಯ ಸ್ಥಿತಿಗತಿಗಳನ್ನು ಚೆನ್ನಾಗಿ ಯೋಚಿಸಬೇಕಾಗಿರುವದು. ರಾಷ್ಟ್ರೀಯ ಪ್ರಗತಿಯು ದೇಶದ ಇತರ ಕಡೆಗಳಲ್ಲಿ ಚಲಿಸುವಂತೆ ಇಲ್ಲಿ ಚಲಿಸದೆ ಇದೆ. ದೇಶದ ಆಡಳಿತೆಯ ವಿಚಾರದಲ್ಲಿ ಇತರ ಕಡೆಗಳವರಿಗೆ ಪ್ರವೇಶವಿರುವಂತೆ ನಮಗಿರದು. ಈ ಜಿಲ್ಲೆಯಲ್ಲಿ ಆಗಿಂದಾಗ್ಯೆ ತೋರಿಬರುವಂಥಾ ಕೆಲವು ಆಫೀಸರರ ನಿರಂಕುಶ ಪ್ರವರ್ತನ—ಸಾಮಾನ್ಯ ಶಿಕ್ಷಣ, ರೆವಿನ್ಯು ಅಬ್ಕಾರಿ ಮತ್ತು ಜಂಗ್ಲಿ ಇಲಾಖೆಗಳಿಂದ ಇಲ್ಲಿಯವರು ಪಡಿಯಬೇಕಾದ ನಿವೃತ್ತಿ, ಭೂಕಂದಾಯದ ವಿಚಾರ—ಮೊದಲಾದ ಹಲವು ವಿಷಯಗಳು ಈ ಜಿಲ್ಲೆಯಲ್ಲಿ ವಿಶೇಷವಾದಂಥವುಗಳನೆ. ಜಿಲ್ಲೆಯ ಈ ಎಲ್ಲಾ ಮಾಹಿತಿ ಇದ್ದಂಥವರು ನ್ಯಾಯವಿಧಾಯಕ ಸಭೆಯಲ್ಲಿದ್ದರೆ ನಮ್ಮ ಹಾಲ್‌ಹವಾಲೆಗಳನ್ನು ಪದೇಪದೇ ಸರಕಾರದವರ ಮುಂದೆ ಇರಿಸಿಕೊಂಡು ಉಚಿತವಾದ ನಿವಾರಣೋಪಾಯಗಳನ್ನು ಸಾಧಿಸಿಕೊಳ್ಳಲು ಅಪ್ಪದ ದೊರಕುವದು. ಇಲ್ಲಿಯ ಆಯಾ ಜಾತಿಯವರು ಸರ್ವ ಜನ ಪ್ರಯೋಜನಾರ್ಥವಾದ ಕೆಲಸಗಳಲ್ಲಿ ಒಂದಾಗಿ ಕೂಡಿ ನಡಿಯುವ ಸಂದರ್ಭಗಳು ವಿರಳವಾಗಿರುವುದರಿಂದ ಒಬ್ಬರಿಗಿನ್ನೊಬ್ಬರ ಪೂರ್ಣ ಪರಿಚಿತಿಯೂ, ಪರಸ್ಪರ ವಿಶ್ವಾಸವೂ ಕಡಿಮೆಯಾಗಿರಬಹುದು. ಇಲ್ಲಿಯ ಈ ಕುಂದಕವನ್ನು ನೋಡಿ ಇಲ್ಲಿ ನ್ಯಾಯವಿಧಾಯಕ ಸಭೆಯ ಮೆಂಬ್ರರುತನಕ್ಕೆ ಯೋಗ್ಯತೆ ಇರುವಂಥವರು ಇಲ್ಲವೆಂತ ಹೇಳಿಕೊಂಡು ಇಂಥಾ ಹೇಳಿಕೆಗಳನ್ನು ನಾನಾ ವಿಧಾನಗಳಲ್ಲಿ—ಈ ಜಿಲ್ಲೆಯವರಲ್ಲದ ಅಧಿಕಾರಸ್ಥರ ಮೂಲಕ ದೃಢೀಕರಿಸಲು ಕೆಲವರು ಪ್ರಯತ್ನಿಸಬಹುದು. ಆದರೆ ಇಂಥಾ ಪ್ರಯತ್ನಗಳಿಗೆ ಬೆಳಗಾಗದೆ. ಇಲ್ಲಿಯ ಮುನ್ಸಿಪಲ್ ಮತ್ತು ಲೋಕಲ್‌ಬೋರ್ಡಿನ ಮೆಂಬರರು ವರ್ತಿಸಬೇಕಾಗಿ ನಮ್ಮ ವಿಜ್ಞಾಪನೆಯಾಗಿದೆ. ನ್ಯಾಯವಿಧಾಯಕ ಸಭೆಗಳ ನಿರ್ಮಾಣವು ಮಾನ್ಯ ಮೊರ್ಲೆ ಮಿಂಟೊ ಪ್ರಭುಗಳವರ ಉದಾರಹಸ್ತಗಳಿಂದ ತಿದ್ದಲ್ಪಟ್ಟು ಪ್ರಜಾಜನರಿಗೆ ಹೆಚ್ಚಿನ ಹಕ್ಕು ಸ್ವಾತಂತ್ರ್ಯಗಳು ದೊರಕಿರುವವಾದರೂ ಇವುಗಳ ಪ್ರಯೋಜನಗಳು ಪ್ರಜಾಪ್ರತಿನಿಧಿಯ ಮೂಲಕ ನಮಗೆ ಈತನಕ ಪ್ರಾಪ್ತವಾಗಲಿಲ್ಲವೆಂತ ದೃಢವಾಗಿ ಹೇಳಬಹುದು. ಈ ಎಲ್ಲಾ ವಿಚಾರಗಳನ್ನು ಸರಿಯಾಗಿ ಯೋಚಿಸಿಕೊಂಡು ಸಾರಸ್ವತ, ಗೌಡ ಸಾರಸ್ವತ, ಹವೀಕ, ಶಿವಳ್ಳಿ, ಕ್ಶೈತ್ರ, ಅಕ್ಕೈಸ್ತ, ಬಂಟು, ಬಿಲ್ಲವ ಮೇಲು ಜಾತಿ ಹಿಂದು, ಶೇಳು ಜಾತಿ ಹಿಂದು, ಹಿಂದೂ ಮುಸಲ್ಮಾನ ಎಂಬ ಭೇದಗಳನ್ನು ಲೆಕ್ಕಿಸದೆ ತನ್ನ ಪ್ರತಿನಿಧಿಯನ್ನು ಈ ಜಿಲ್ಲೆಯಿಂದ ಆರಿಸುವದರಲ್ಲಿ ಅಗತ್ಯವಿರುವ ಐಕ್ಯವನ್ನು ವ್ಯಕ್ತಗೊಳಿಸಬೇಕಂತ ಕೋರುತ್ತೇವೆ.

ಪುತ್ತೂರು ಮತ್ತು ಕುಂದಾಪುರ ತಾಲೂಕು ಬೋರ್ಡುಗಳ ನೊನ್ ಆಫೀಸಿಯಲ್ ಮೆಂಬರರು ರಾ ಸದಾಶಿವ ಪಟ್ಟರವರು ಈ ಸರ್ತಿಯ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಲ್ಲಬೇಕಂತ ಪಟ್ಟರವರನ್ನು ವಿಜ್ಞಾಪಿಸಿಕೊಂಡಿರುವರು. ಇವರ ವಿಜ್ಞಾಪನೆಯನ್ನನುಸರಿಸಿ, ಜಿಲ್ಲೆಯ ಇತರ ಕಡೆಗಳಿಂದಲೂ ತನಗೆ ಪರಿಪೂರ್ಣವಾದ ಆದರಣೆಯು ದೊರಕುವದೆಂಬ ಭರವಸೆಯ ಮೇರ ವಿಶೇಷ ಶ್ರಮಸಾಧ್ಯವಾದ ಈ ಕೆಲಸವನ್ನು ಪಟ್ಟರವರು ಕೈಕೊಳ್ಳಲು ನಿಶ್ಚಯಿಸಿರುವರು. ಮೆಂಬರುತನದ ಪದವಿಗೆ ಬೇಕಾದಷ್ಟು ಯೋಗ್ಯತೆಯೂ ಕಾರ್ಯ ವ ವಾಕ್ಪಟುತ್ವವೂ ಪಟ್ಟರವರಿಗೆ ತುಂಬಾ ಇರುವದೆಂಬುದು ಇವರ ಪರಿಚಿತಿಯಿರುವವರೆಲ್ಲರಿಗೂ ಚೆನ್ನಾಗಿ ಗೊತ್ತಿರಬಹುದು. ಇವರಿಗೆ ಪ್ರಕೃತ ಕ್ಕೆ ವರುಷಗಳ ಪ್ರಾಯ. ಇಪ್ಪರಲ್ಲಿ ಇವರು ಬಿ ಎ ಎಲ್ ಟಿ ಪರೀಕ್ಷೆಗಳನ್ನು ಪಾಸಾಗಿ ಕೊಲೊಂಬದಲ್ಲಿ ಅನಂದ ಕೊಲೇಜಿನ ವ್ಯಾಸ್ ಪ್ರಿನ್ಸಿಪಲರಾಗಿ ಹೋಗಿ ಮೂರು ವರುಷಗಳ ಕಾಲ ಕೆಲಸ ಮಾಡಿದರು. ಕೊಲೊಂಬೊದಲ್ಲಿರುವಾಗ ಬೌದ್ಧರ ವಿದ್ಯಾವರ್ಧಕ ಸಂಘಕ್ಕೆ ಸಹಾಯ ಮಾಡಿ ಅಲ್ಲಿಯ ಹಳ್ಳಿಗಳಲ್ಲಿ ಹಲವು ಶಾಲೆಗಳು ಸ್ಥಾಪಿಸೋಣಾಗುವಂತೆ ಪ್ರಯತ್ನಿಸಿದರು. ಈ ಸಮಯದಲ್ಲಿಯೇ ಬುದ್ಧಿಸ್ಟ್ ಎಂಬ ವರ್ತಮಾನ ಪತ್ರದ ಸಂಪಾದಕರಾಗಿ ಸಹ ಇದ್ದರು. ಇಲ್ಲಿ ಇದ್ದಾಗಲೇ ಇವರು ರೊಯಲ್ "ಎಸ್ಯಾಟಿಕ್ ಸೊಸ್ಯಾಟಿ" ಎಂಬ ಸಂಘದ ಮೆಂಬರರಾಗಿ ಚುನಾಯಿಸಲ್ಪಟ್ಟರು. ನಂತರ ಬರ್ಮದೇಶದ ಬೌದ್ಧ ಪಂತಸ್ಥರು ಇವರನ್ನು ಬರ್ಮಾದೇಶಕ್ಕೆ ಆಮಂತ್ರಿಸಿದರು. ಅಲ್ಲಿಯೂ ಸಹ ಶಾಲೆಗಳು ಇವರ ಮೂಲಕ ಸ್ಥಾಪಿಸೋಣಾದವು. ಬರ್ಮಾದೇಶದ ಇವರ ಸ್ನೇಹಿತರ ಅಪೇಕ್ಷೆ ಮೇರೆಗೆ ಇವರು ಬ್ಯಾರಿಷ್ಟರ ಪರೀಕ್ಷೆ ಬಗ್ಗೆ ಕಲಿಯಲು ಹೋಗಬೇಕೆಂತ ಪ್ರಯತ್ನಪಟ್ಟರೂ ಇದು ಸಾಧ್ಯವಾಗದ್ದರಿಂದ ಮದ್ರಾಸಿನಲ್ಲಿ ನಿಂತು ಬಿ. ಎಲ್. ಪರೀಕ್ಷೆಯನ್ನು ತೇರಿ ಹ್ಯಾಕೋರ್ಟು ವಕೀಲರಾದರು. ಮದ್ರಾಸಿನಲ್ಲಿ ಹೀಗೆ ಕಲಿಯುತ್ತಿದ್ದಾಗ ಇವರು ತಮ್ಮ ಜೀವನದ ಬಗ್ಯೆ ಅಕ್ಕಿ ವ್ಯಾಪಾರವನ್ನು ನಡಿಸುತ್ತಿದ್ದರು. ಇಂಥಾ ಅಡಚಣೆಯಲ್ಲಿ ಬಿ. ಎಲ್. ಪರೀಕ್ಷೆಯ ಬಗೆ ಕಲಿತರೂ ಇವರು ಆ ವರುಷ ಪಾಸಾದ ವಿದ್ಯಾರ್ಥಿಗಳಲ್ಲಿ ಎರಡನ್ನೇಯವರಾಗಿ ಪಾಸಾಗಿರುತ್ತಾರೆ. ಕಾರ್ಕಳದಲ್ಲಿ ಬಂದು ವಕೀಲರ ವೃತ್ತಿಯನ್ನು ಪ್ರಾರಂಭಿಸಿದ ಮೇಲೆ ಇವರ ಕಾರ್ಯ ಚಟುವಟಿಕೆಯನ್ನು ಇಲ್ಲಿ ವರ್ಣಿಸಬೇಕೆಂತಿಲ್ಲ. ಕಾರ್ಯ ನಿರ್ವಾಹಕ್ಕೆ ಬೇಕಾದ ಆಸಕ್ತಿಯೂ, ಧೈರ್ಯವೂ ಹಟಸಾಧನೆಯೂ ವಿಚಕ್ಷಣತೆಯೂ ಇವರಲ್ಲಿ ತುಂಬಾ ಇದೆ. ತನ್ನನ್ನು ಈ ಪದವಿಗೆ ಆರಿಸಿದರೆ ಇದರ ಕಾರ್ಯನಿರ್ವಾಹದ ಬಗ್ಗೆ ತಮ್ಮ ಸಮಯವನ್ನೆಲ್ಲಾ ವಿನಿಯೋಗಿಸುವೆನೆಂತ ಇವರು ಧಾರವಸಿ ಕೊಟ್ಟಿರುವರು.

ಆದ್ದರಿಂದ ಪುತ್ತೂರು ಮತ್ತು ಕುಂದಾಪುರ ಬೋರ್ಡುಗಳ ನೊನ್ ಆಫೀಸಿಯಲ್ ಮೆಂಬರರಲ್ಲಿ ಬಹು ಜನರು ಸದಾಶಿವಪಟ್ಟರವರು ಈ ಸರ್ತಿಯ ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಲ್ಲಬೇಕಂತ ಅಪೇಕ್ಷಿಸಿರುವರು. ಇವರ ಅಪೇಕ್ಷೆಯು ನಮಗೂ ವಿಹಿತವೆಂತ ತೋರುವದು. ಬಹುಪಕ್ಷದವರ ಈ ಅಪೇಕ್ಷೆಯನ್ನು ಇತರ ತಾಲೂಕು ಬೋರ್ಡು ಮುನ್ಸಿಪಲ್ ಮತ್ತು ಡಿಸ್ಟ್ರಿಕ್ಟ್ ಬೋರ್ಡು ಮೆಂಬರರು ನಿವೇದಿಸಿ ತಮ್ಮ ಈ ಜಿಲ್ಲೆಯಲ್ಲಿರಬೇಕಾದ ವಿಕ್ಯದ ಪ್ರಥಮ ಪ್ರಯತ್ನವನ್ನು ಉದಾತ್ತರೂಪದಲ್ಲಿ ಪ್ರಾರಂಭಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

1914-15ಲ್ಲಿ ದಕ್ಷಿಣಕನ್ನಡ ಡಿಸ್ಟ್ರಿಕ್ಟ್ ಬೋರ್ಡಿನ ಆಡಳಿತೆಯನ್ನು ಮದ್ರಾಸು ಗವರ್ನ್‌ಮೆಂಟಿನವರು ವಿಮರ್ಶಿಸಿದ್ದು.

ಮದ್ರಾಸು ಗವರ್ನ್‌ಮೆಂಟಿನವರು ಅದನ್ನು ವಿಮರ್ಶಿಸುವಾಗ ಈ ಕೆಳಗಿನ ಸಂಗತಿಗಳನ್ನು ಉಲ್ಲೇಖಿಸಿರುತ್ತಾರೆ.:—

(1) "ಈ ವರ್ಷದಲ್ಲಿ ಮ. ರಾ. ರಾ ಸುಬ್ಬೀಣ್ ರಘುನಾಥಯ್ಯ ಅವರ್ಗಳ್ ಇವರು ಇನ್ನೂ ಮಂಗಳೂರು ತಾಲೂಕು ಬೋರ್ಡಿನ ಅಧ್ಯಕ್ಷರಾಗಿದ್ದರು. ಇವರ ಕಾರ್ಯಭಾರವನ್ನು ಕೊಂಡಾಡಿ ಸದರಿ ತಾಲೂಕು ಬೋರ್ಡಿನವರು ಒಂದು ರಿಸಾವನ್ನು ಮಂಜೂರು ಮಾಡಿರುವರು. ತಾಲೂಕು ಬೋರ್ಡುಗಳಲ್ಲಿ ಚುನಾವಣೆಯ ಆರು ಮೆಂಬರರ ಸ್ಥಾನಗಳು ಖಾಲಿಯಾದುವು. ಅವುಗಳಲ್ಲೊಂದಕ್ಕೆ ಸರಕಾರದವರೇ ಒಬ್ಬರನ್ನು ಆರಿಸಬೇಕಾಯಿತು. ಉಳಿದವುಗಳ ಪೈಕಿ 2 ಸ್ಥಾನಗಳಿಗೆ ಮಾತ್ರ ವೋಟಾ ವೋಟಿಯಿತ್ತು.

(2) ಗತವರ್ಷಕ್ಕಿಂತಲೂ ಈ ವರ್ಷದಲ್ಲಿ ಮರಹಮ್ಮತ್ ಕಾಮಗಾರಿಗಳಲ್ಲಿ ವಿಶೇಷ ಹಣ ಖರ್ಚಾಗಿದ್ದರೂ, ಅದಕ್ಕಾಗಿ ವಿಂಗಡಿಸಿದ ಹಣದಲ್ಲಿ ಸೇಕಡಾ 68 2 ಮಾತ್ರ ಖರ್ಚಾಗಿರುವುದು. ಇದಕ್ಕಾಗಿ ಬೋರ್ಡಿನವರು ಕೊಟ್ಟ ಕಾರಣಗಳು ಸಾಕಷ್ಟು ಸಮಾಧಾನಕರವಲ್ಲ; ಏತಕ್ಕೆಂದರೆ ಸುಮಾರು ಎರಡು ಲಕ್ಷ ರೂಪಾಯಿ ಖರ್ಚಾಗದೆ ಉಳಿದಿದೆ. ಈ ಶಿಲಕು ಹಣದಲ್ಲಿ ತೀರಾ ಮೊಬಲಗು ಅಥವಾ ಹೆಚ್ಚಿನ ಅಂಶವನ್ನು ಚಾಲ್ತಿ ವರ್ಷದಲ್ಲಿ ಖರ್ಚು ಮಾಡಲಿಕ್ಕೆ ಸಾಧ್ಯವಿರುವುದು ಎಂದು ನಂಬುತ್ತೇವೆ. ಸರಕಾರದ ದ್ರವ್ಯಸಹಾಯವನ್ನು ವಿರಹಿತ ಪಡಿಸಿದರೆ, ಡಿಸ್ಟ್ರಿಕ್ಟ್ ಬೋರ್ಡಿನ ಹಣದಿಂದಲೇ ಎತ್ತು ಮೊಬಲಗು ರಸ್ತೆಗಳ ಬಗ್ಗೆ ಖರ್ಚಾಗಬೇಕೆಂಬ್ಕೊ ಅದರಲ್ಲಿ ಸೇಕಡಾ 91 2ರ ದಾಮಾಶಾಯದಿಂದ ಖರ್ಚು ಮಾಡಿದ್ದಾಗಿ ಕಂಡು ಬರುತ್ತದೆ. ರಸ್ತೆಗಳ ಸ್ಥಿತಿಯು ಸಮಾಧಾನಕರವಾಗಿರುವುದಾಗಿ ತಿಳಿದು ಬರುತ್ತದೆ. ಕಳ್ಳಿ ರಸ್ತೆಗಳನ್ನು ಕಡಿಸುವುದಕ್ಕೆ ಬೋರ್ಡಿನವರು ಕೈಹಾಕಿದ್ದು ಸಮಾಧಾನಕರ, ಮತ್ತು ಈ ವರ್ಷದಲ್ಲಿ 40,095 ರೂಪಾಯಿ ಖರ್ಚು ಮಾಡಿ 145 ಮೈಲು ರಸ್ತೆಗಳನ್ನು ಕಡಿಸಿರುವುದಾಗಿ ಕಂಡು ಬರುತ್ತದೆ. ಈ ವರ್ಷದಲ್ಲಿ ನಡೆಯುತ್ತಲಿದ್ದ ಮುಖ್ಯ ಕಾಮಗಾರಿಗಳು ಮಂಗಳೂರಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನಿಯರ ಆಫೀಸಿನ ಬಗ್ಗೆ ಹೊಸ ಕಲ್ಪೋಣ, ನೇತ್ರಾವತಿ, ಅಲ್ಮದ, ಖಾಂಗಾಳ, ಎಣ್ಣೆಹೊಳೆ ಈ ನದಿಗಳ ವೀಲಣ ಸೇತುವೆಗಳು.

(3) ಸಾಲುಮರದ ವಿಸ್ತೀರ್ಣವು ಮೊದಲಿನಷ್ಟೆ ಇದೆ ಆದರೂ ಸುಮಾರು 17,000 ಮರಗಳನ್ನು ಈಗಿನ ಸಾಲುಗಳಲ್ಲಿಯೇ ನಟ್ಟಿರುವ ಸಮಾಧಾನಕರ. ಈ ಸಾಲುಮರದ ಉತ್ಪತ್ತಿಯು ಗತವರ್ಷಕ್ಕಿಂತ ಕಡಿಮೆಯಾಗಿದೆ

(4) ಕುಂದಾಪುರ ತಾಲೂಕು ಬೋರ್ಡಿನವರ ಕೈಕೆಳಗಿರುವ 3 ಸೆಕೆಂಡರಿ ಶಾಲೆಗಳೂ ತಮ್ಮ ವಹಿವಾಟಿಗೆ ತಮ್ಮ ಆದಾಯದ ಮೇಲೆ ಹೊಂದಿವೆ ಹಾಜರಿಯು ಅವುಗಳಲ್ಲಿ ಸ್ವಲ್ಪ ಹೆಚ್ಚಿದೆ. ಇಬ್ಬರು ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಹೋಗಿ ಉತ್ತೀರ್ಣರಾದರ್ರು. ಸಾಲೆಗಳ ಇನ್ಸ್‌ಪೆಕ್ಟರಕವರು ಇವುಗಳ ಕೆಲಸವನ್ನು ಶ್ಲಾಘಿಸಿದ್ದಾರೆ 15 ನವೀನ ಪ್ರಾಥಮಿಕ ಸಾಲೆಗಳನ್ನು ತೆರೆದಿರುವರು ಎಲ್ಲಾ ಬೋರ್ಡ್ ಎಲಿಮೆಂಟರಿ ಸಾಲೆಗಳಲ್ಲಿ ಹಾಜರಿಯು ಹೆಚ್ಚಿದೆ. ಜಿಲ್ಲೆಯಲ್ಲಿ ಸಾಲೆಗೆ ಹೋಗತಕ್ಕ ಪ್ರಾಯದ ಮಕ್ಕಳ ಪೈಕಿ ಗಂಡುಮಕ್ಕಳು ಸೇಕಡಾ 37·3ರ ಮೇರೆಗೆ ಹೆಣ್ಣುಮಕ್ಕಳು ಸೇಕಡಾ 7·9ರ ಮೇರೆಗೆ ಕಲಿಯ ಹೋಗುತ್ತಿದ್ದಾರೆ, ಅಂದರೆ ಸಂಸ್ಥಾನದ ದಾಮಾಶಾಯವಾದ ಗಂಡು ಸೇಕಡಾ 33·1 ಮತ್ತು ಹೆಣ್ಣು 6·6 ಕ್ಕಿಂತ ಹೆಚ್ಚು ಎಂದು ಹೇಳಬೇಕು ಬೋರ್ಡಿನವರ ಆದಾಯದಲ್ಲಿ ಸೇಕಡಾ 17·8 ಮೇರೆಗೆ ಸಾಲೆಗಳ ವಹಿವಾಟಿನ ಬಗ್ಗೆ ವೆಚ್ಚವಾಗುತ್ತಲಿದೆ ಪಂಚಮರು ಮೊದಲಾದ ಹಿಂದುಳಿದ ಜಾತಿಯವರ ಉಪಯೋಗಾರ್ಥವಾಗಿಯೇ 9 ನವೀನ ಪ್ರಾಥಮಿಕ ಸಾಲೆಗಳು ಸ್ಥಾಪಿಸಲ್ಪಟ್ಟವು, ಮತ್ತು ಈ ಬಗೆಯ ಸಾಲೆಗಳಲ್ಲಿ 1682ರಿಂದ 1990ಕ್ಕೆ ಹಾಜರಿಯು ಏರಿತು. ಮೂಪಿಳ್ಳೆಯರ ಸಾಲೆಗಳಲ್ಲಿ ಹಾಜರಿ ಸ್ವಲ್ಪ ಕಡಿಮೆಯಾಗಿದೆ. ಕಟ್ಟೋಣಗಳ ಬಗ್ಗೆ ಸರಕಾರದವರು ಮಾಡಿದ ದ್ರವ್ಯಸಹಾಯದಲ್ಲಿ 19,123 ರೂಪಾಯಿ ವೆಚ್ಚವಾಗದೆ ಬಾಕಿ ಉಳಿದಿದೆ; 14 ಹೊಸ ಕಟ್ಟೋಣಗಳ ಕೆಲಸವು ಈ ವರ್ಷದಲ್ಲಿ ಮುಗಿಯಿತು.

(5) ಲೋಕಲ್ ಫಂಡಿನಿಂದ ತೆರೆದಿರುವ ಆಸ್ಪತ್ರೆಗಳಲ್ಲಿ ಎಂದಿನಂತೆ ಒಳ್ಳೆದಾಗಿ ಕೆಲಸ ನಡೆಯುತ್ತದೆಂದು ತಿಳಿಯಬೇಕು; ಈ ವರ್ಷದಲ್ಲಿ ಗತವರ್ಷಕ್ಕಿಂತಲೂ 6,126 ಮಂದಿ ಚಿಕಿತ್ಸೆ ಹೊಂದಿದರು. ಸಾಲು ಮರದ ನಿರಿಗಳ ಕಟ್ಟೋಣಗಳು ಗತವರ್ಷದಲ್ಲಿ ಪ್ರಾರಂಭಿಸಿದ್ದು ಇನ್ನೂ ತೀರಾ ಮುಗಿಯಲಿಲ್ಲ. ಸೂಲಗಿತ್ತಿಯರ ಕೆಲಸವು ಕಡಿವೆಯಾಯಿತು ಎಂಬುದು ವಿಷಾದಕರವಾಗಿದೆ; ಈ ಸಂಗತಿಯಲ್ಲಿ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರರು ಇಡಬೇಕಾಗಿ ಸೂಚಿಸೋಣಾಗುತ್ತದೆ. ಸಿಡುಬಿನಿಂದ 491, ವಾಂತಿ ಭೇದಿಯಿಂದ 153 ಮರಣಗಳಿದ್ದವು, ಗತವರ್ಷದಲ್ಲಿ ಅವು 417 ಮತ್ತು 167. ಈ ವರ್ಷದಲ್ಲಿ ಪ್ಲೇಗ್ ಸೊಂಕಿನಿಂದ ಲೋಕಲ್ ಫಂಡಿನ ಅಧಿಕಾರದೊಳಗಣ ಪ್ರದೇಶವು ತೀರಾ ವಿನೋಜನೆ ಹೊಂದಿತ್ತು ಎಂಬುದು ಸಮಾಧಾನಕರ.

(6) ಸಿಡುಬು ಸಾಂಕ್ರಮಿಕ ರೀತಿಯಲ್ಲಿ ಹಬ್ಬದೆ ಇದ್ದಕಾರಣ ದಾಕೆನೆ ಕೆಲಸವು ವಿಶೇಷವಾಗಿ ಪ್ರಚರಿಸಲಿಲ್ಲ. ರಿಜಿಸ್ಟ್ರಿಯಿಂದ ಜನನಗಳು ಬಹಳ ಕಡಿಮೆ ಯಾದುದಕ್ಕೆ ಕಾರಣವನ್ನು ಜೆನ್ನಾಗಿ ವಿವರಿಸಲಿಲ್ಲ.

(7) ಆರೋಗ್ಯಖಾತೆಯಲ್ಲಿ ಖರ್ಚಿನ ಅಂದಾಜು ಮತ್ತು ವೆಚ್ಚವಾದ ಮೊಬಲಗು ಏರಿಯದೆ, ಆದರೆ ವಿಂಗಡಿಸಿಟ್ಟ ಹಣದಲ್ಲಿ ಸೇಕಡಾ 65·5 ಮಾತ್ರ ಖರ್ಚಾಗಿದೆ.

(8) ಇತರ ಬೋರ್ಡುಗಳೊಡನೆ ಇದಕ್ಕೆ ಇರುವ ಆವಕಜಾವಕಗಳನ್ನು ಸರಿಗೊಳಿಸಿದಾಗ ಬೋರ್ಡಿನಲ್ಲಿ ವರ್ಷಾಂತ್ಯದಲ್ಲಿ 83,004 ರೂಪಾಯಿ ಅಂದರೆ ಬೋರ್ಡಿನ ಜನರಲ್ ಫಂಡಿನ ಸೇಕಡಾ 20ರ ಮೇರೆಗೆ ಶಿಲಕು ಉಳಿದಿದೆ. ಗವರ್ನ್‌ಮೆಂಟಿನವರ ಸಹಾಯದ್ರವ್ಯದಿಂದ 3,04,843 ರೂಪಾಯಿ ವ್ಯಯವಾಗದೆ ಬಾಕಿ ನಿಂತಿದೆ. ಇದು ಗತವರ್ಷಕ್ಕಿಂತ ಸ್ವಲ್ಪ ಕಡಿಮೆಯಾಗಿದ್ದರೂ ಸಾಧ್ಯವಾದಷ್ಟು ಬೇಗನೆ ಅದನ್ನು ವ್ಯಯಮಾಡಲಿಕ್ಕೆ ಪ್ರಯತ್ನಿಸಬೇಕು ಅದನ್ನು ಯಾವ ಕಾಮಗಾರಿಗೋಸ್ಕರ ಉಪಯೋಗಿಸಲಿಕ್ಕೆ ನಿಶ್ಚಯಿಸಿರುವುದೊ ಆ ಕೆಲಸಗಳ ಜಾರಿಗೆ ಆರಂಭವಾಗಿಯದೆ ಎಂಬುದು ತಿಳಿದು ಬರುತ್ತದೆ.

ಸಾಧ್ಯವಿದ್ದ ಮಟ್ಟಿಗೆ ಈ ಗವರ್ನ್‌ಮೆಂಟ್ ಆರ್ಡರನ್ನು ಇದ್ದಕ್ಕಿದ್ದಂತೆ ಕನ್ನಡಿಸಿರುವೆವು. ಈ ಸಂಬಂಧದಲ್ಲಿ ಒಂದೆರಡು ಮಾತುಗಳನ್ನು ಎತ್ತಿ ಹೇಳುವುದು ಅಗತ್ಯ.

(1) ಈ ಸೂಚನೆಯಲ್ಲಿ ಮಂಗಳೂರ ತಾಲೂಕು ಬೋರ್ಡಿನವರ ರಿರಾವನ್ನೆ ಡಿಸ್ಟ್ರಿಕ್ಟ್ ಬೋರ್ಡಿನವರೂ ಹಾಗೆಯೇ ಗವರ್ನ್‌ಮೆಂಟಿನವರೂ ಎತ್ತಿ ಬರೆದಿರುವರಲ್ಲದೆ ಶ್ಲಾಘನೆಯ ಅಥವಾ ಹೇಳಿಕೆಯ ಮಾತನ್ನೊಂದನ್ನು ಒಳಿಯಲಿಲ್ಲ. ಹಾಗಾದರೆ 'ನೋನ್ ಒಫಿಶಿಯಲ್ ಪ್ರೆಸಿಡೆಂಟರು ಮಾತಿನ ಕೆಲಸವನ್ನು ಕುರಿತು ಚರ್ಚಿಸುವುದಕ್ಕೆ ಸಾಕಷ್ಟು ಸಂಗತಿಗಳು ಅವರಿಗೆ ದೊರೆಯಲಿಲ್ಲವೆ! ಚುನಾವಣೆ ಮೆಂಬರಿಕೆಯ ಸ್ಥಾನಕ್ಕೆ ಸಾಕಷ್ಟು ವೋಟಾವೋಟಿಯಿಲ್ಲದಿರುವುದು ಯೋಗ್ಯರಾದ ಮೆಂಬರುಗಳು ಸಿಕ್ಕದ ಕಾರಣವೊ ಅದವಾ ಯೋಗ್ಯರಾದವರು ತಮ್ಮಿಂದ ಹೆಚ್ಚು ಪ್ರಯತ್ನಗಳನ್ನು ನಡಿಸಲು ಸಾಧ್ಯವಿಲ್ಲವೆಂಬ ನಿರಾಸೆಯಿಂದಲೋ ಅಥವಾ ತಮ್ಮ ಸ್ವಂತ ಕೆಲಸಗಳೇ ಸಾಕಷ್ಟು ಇರುವುದರಿಂದ ಈ ಸಾರ್ವಜನಿಕ ಕೆಲಸಕ್ಕೆ ಕೈ ಹಚ್ಚಲು ಹಿಂಜರಿಯುವರೋ ಎಂಬುದು ಪ್ರಜೆಗಳ ಆಲೋಚನೆತಕ್ಕ ಸಂಗತಿ ಮನೆಯ ಪಡಸಾಲೆಗಳಲ್ಲಿ ಕುಳಿತು, ಕಾರ್ಯಾಕಾರ್ಯವಿಚಾರವಿಲ್ಲದೆ ಸರಕಾರದವರನ್ನು ದೂರುವುದಕ್ಕಿಂತ ಮುಂದೆ ಬಂದು ರಾಜಕಾರ್ಯದಲ್ಲಿ ಸರಕಾರದವರಿಗೆ ಸಹಾಯಕರಾಗುವುದು ಪ್ರಜೆಗಳ ಕರ್ತವ್ಯ ವೋಟಾ ವೋಟಿ ಇಲ್ಲದಿರುವುದು ಬಹಳವಟ್ಟಿಗೆ ಜನರ ಅಸಡ್ಡೆ, ಆಲಸ್ಯಗಳನ್ನು ವ್ಯಕ್ತಗೊಳಿಸುವುದು ಆದರೆ ಈ ಸಂಬಂಧದಲ್ಲಿ ಇನ್ನೊಂದು ಸಂಗತಿಯನ್ನೂ ಸರಕಾರದವರು ವಿಚಾರಕ್ಕೆ ತಕ್ಕೊಳ್ಳುವುದು ಅಗತ್ಯ ಇಲ್ಲಿ ಅಳಿಯಕಟ್ಟಿನ್ನು ಆಚರಿಸುವವರ ಸಂಖ್ಯೆಯೇ ಪ್ರಬಲವಾಗಿರುವುದರಿಂದ ಅಳಿಯಕಟ್ಟಿನ ಆಸ್ತಿಯಲ್ಲಿ ವಿಭಾಗವಿಲ್ಲದ್ದರಿಂದ ವೋಟರ್ಸ್ ಮತ್ತು ಮೆಂಬರರಾಗಲಿಕ್ಕೆ ಅರ್ಹರಾಗುವವರ ಪಟ್ಟಿಯಲ್ಲಿ ಅಳಿಯಕಟ್ಟಿನವರ ಸಂಖ್ಯೆಯು ಹೆಚ್ಚಾಗುತ್ತಲಿದೆ. ಅದಕ್ಕೆ ಸರಿಯಾಗಿ ಮಕ್ಕಳಕಟ್ಟನ್ನು ಆಚರಿಸುವವರಲ್ಲಿ ಆಗಾಗ ವಿಭಾಗವಾಗುತ್ತಲೇ ಇರುವುದರಿಂದ ಅಗತ್ಯವಿರುವ ಆಸ್ತಿಯ ಯೋಗ್ಯತೆಯು ಅವರಲ್ಲಿ ಕಡಿಮೆಯಾಗುತ್ತಲೇ ಬರುವುದು ಈ ಕಾರಣದಿಂದ ಇಲ್ಲಿ ಆಸ್ತಿಯ ಯೋಗ್ಯತೆಯ ವಿತಿಯನ್ನು ತಪ್ಪಿಲು ಮಾಡುವುದು ಅಗತ್ಯ. ಹಾಗಿಲ್ಲದಿದ್ದರೆ ಕ್ರಮೇಣ ಮಕ್ಕಳಕಟ್ಟನ್ನು ಆಚರಿಸುವವರಿಗೆ ಸರಕಾರಿ ನೇಮಣೂಕೆಯ ದ್ವಾರವಲ್ಲದೆ ಜನರ ಪ್ರತಿನಿಧಿಗಳಾಗಿ ಮೆಂಬರರಾಗುವ ದಾರಿಯೇ ಕಟ್ಟಿಹೋದಂತಾಗುವುದು.

(2) ಮರಹಮ್ಮತ್ ಕಾಮಗಾರಿಯಲ್ಲಿ ವಿಂಗಡಿಸಿಟ್ಟ ಹಣವು ಖರ್ಚಾಗದೆ ವಿಪರೀತ ಉಳಿದಿದೆ ಎಂದೂ ಇದಕ್ಕೆ ಬೋರ್ಡಿನವರು ಕೊಟ್ಟ ಕಾರಣಗಳು ತೀರಾ ಸಮಾಧಾನಕರವಲ್ಲವೆಂದೂ ಸರಕಾರದವರು ಅಭಿಪ್ರಾಯಪಡುತ್ತಾರೆ. ಬೋರ್ಡಿನವರು ಕೊಟ್ಟ ಕಾರಣಗಳು ಯಾವುವೆಂದು ನೋಡೋಣ. ಗತವರ್ಷದಲ್ಲಿ ಸರಕಾ

ವದರಿಂದ ಪಾಣೆಮಂಗಳೂರು, ಮತ್ತು ಎಣ್ಣೆಹೊಳೆ ಸೇತುವೆಗಳ ಖರ್ಚಿನ ಅರ್ಧಾಂಶವಾಗಿ ಕೊಟ್ಟ ಸಹಾಯ ದ್ರವ್ಯದಲ್ಲಿ ಖರ್ಚಾಗದೆ ಉಳಿದ ಹಣವು ಈ ವರ್ಷಕ್ಕೆ ಜಮೆಯಾದುದು, ಪಾಣೆಮಂಗಳೂರು ಸಂಕದ ಕಬ್ಬಿಣದ ಸಾಮಾನಿನ ಬೆಲೆಯು ಖತಾಯಿತಿಗಳನ್ನು ಉತಾರು ಮಾಡಿಕೊಳ್ಳಲಿಕ್ಕೆ ಆದ ಅಸಂದರ್ಭ, ಎಣ್ಣೆಹೊಳೆ ಸಂಕಕ್ಕೆ ಬೇಕಾದ ಸಾಮಾನು ಯುದ್ಧದ ದೆಸೆಯಿಂದ ತಕ್ಕ ಸಮಯಕ್ಕೆ ಒಂದು ತಲಪದೆ ಇರುವುದು, ಗತವರ್ಷದ ಸರಕಾರ ಸಹಾಯದ್ರವ್ಯದಿಂದ 26,060 ರೂಪಾಯಿ ಹೆಚ್ಚು ರಸ್ತೆಗಳ ದುರುಸ್ತಿ ಒಗ್ಗೆ ಈ ವರ್ಷಕ್ಕೆ ವಿಂಗಡಿಸಿಟ್ಟಿರುವುದು,—ಇವೆಲ್ಲ ತಕ್ಕ ಕಾರಣಗಳೆ ಇವನ್ನು ಯಾರೂ ಆಕ್ಷೇಪಿಸಲಾರರು ಸಾಮಾನಿಗೆ ನಾವು ಬೇರೆಯವರ ಮೇಲ ಅಧರಿಸಿರುವಾಗ ತಕ್ಕ ಕಾಲದಲ್ಲಿ ಅದು ತಲಪದೆ ಇದ್ದಲ್ಲಿ ಆ ಖರ್ಚು ಮುಂದಿನ ವರ್ಷಕ್ಕೆ ಸೇರುತ್ತದೆ ಆದರೆ ಕೂಲಿ ಮತ್ತು ಸಾಮಾನುಗಳ ಬೆಲೆ ಹೆಚ್ಚಿದ ಕಾರಣ ಕಂಟ್ರಾಕ್ಟರರು ಒದಗುವುದಕ್ಕೆ ಆದ ತೊಂದರೆಗಳು, ಪೀಲ್ಪ್ಜಾರವನ್ನು ನಡಿಸುವುದಕ್ಕೆ ಇಂಜಿನಿಯರ್ ಇಲಾಖೆಯಲ್ಲಿ ಸಾಕಷ್ಟು ನವ್ಕಕರರು ಈ ಜಿಲ್ಲೆಯಲ್ಲಿ ಇಲ್ಲದಿರುವುದು,—ಇವು ಬೋರ್ಡಿನವರಿಂದ ಸುದಾರಿಸಿಕೊಳ್ಳಬಹುದಾದ ಕಾರಣಗಳೇ ಯೋಗ್ಯ ತಾನುಸಾರವಾಗಿ ಸಂಬಳ ಅಥವಾ ಕೂಲಿ ಸಿಕ್ಕುವುದಾದರೆ ಕೆಲಸಕ್ಕೆ ಜನ ಸಿಕ್ಕದೆ ಇರಲಾರರು. ಇದಕ್ಕೆ ಈಚೆಗೆ ಆಗಾಗ ಬಂದಬಂದವರು ರಾಜಿನಾಮೆ ಕೊಟ್ಟು ಹೋಗುವುದರ ಕಾರಣವನ್ನು ಬೋರ್ಡಿನವರು ಕಂಡು ಹಿಡಿಯುವುದು ಅಗತ್ಯ. ಇಷ್ಟು ಹೇಳಿದರೂ ಗತವರ್ಷಕ್ಕೆಂತ ಈ ವರ್ಷದಲ್ಲಿ ಹೆಚ್ಚಿನ ಮೊಬಲಗು ಖರ್ಚಾಗಿದೆ ಎಂಬುದು ನಿರ್ವಿವಾದ

(3) 17,000 ಮರಗಳನ್ನು ಸಾಲುಮರಗಳಾಗಿ ನಟ್ಟಿರುವುದು ತುಂಬಾ ಸಮಾಧಾನಕರವೆಂದು ಸರಕಾರದವರು ತಿಳಿಯುವುದಾದರೂ, ಈ ಪೈಕಿ (rain tree) ದೇವದಾರು ಮರದಂಥ ಬೆಂಡು ಮರಗಳೆಷ್ಟು ಎಂದು ಗೊತಾಗುವುದಿಲ್ಲವಾದ್ದರಿಂದ ಸರಕಾರದವರಲ್ಲಿ ಉತ್ಸಾಹವು ನಮ್ಮಲ್ಲಿ ಇರದು ಇದಕ್ಕೆ ಸರಿಯಾಗಿ ಸಾಲುಮರಗಳಿಂದ ರೂ. 1483 ಈ ವರ್ಷದಲ್ಲಿ, ರೂ 1965 1913 14ರಲ್ಲಿ ಜಮೆ ಒಂದಿದೆ ಎಂಬುದನ್ನು ಆಲೋಚಿಸಿದರೆ ಈ ಉತ್ಸಾಹವು ಇನ್ನೂ ತಗ್ಗಿ ಹೋಗುವುದು. ಕಾಡು ತ್ಪತ್ತಿಯಾಗಲೀ, ಅಥವಾ ರೋಗಪರಿಹಾರವಾಗಲಿ ಆಗುವುದಕ್ಕೆ ಅನುವಾದ ಮರ ಸಸಿಗಳನ್ನು ನಡುವುದಕ್ಕೆ ಬದಲಾಗಿ ಬರೇ ನೆಳಲನ್ನು ಮಾತ್ರ ಕೊಡುವ ದೇವದಾರು ಮರವನ್ನು ಬೆಳೆಸಿದ ಪ್ರಯೋಜನವು ನಮಗೆ ಬೋಧೆಯಾಗುವುದಿಲ್ಲ

ಈ ಸಂದರ್ಭದಲ್ಲಿ (lock spitting) ರಸ್ತೆಯ ಅಂಚನ್ನು ವಿಂಗಡಿಸುವುದಕ್ಕೆ ರಸ್ತೆಯ ಮಧ್ಯದಿಂದ 22 ಗಜಕ್ಕೆ ಇಕ್ಕಡೆಗಳಲ್ಲಿಯೂ ಚರಂಡಿಗಳನ್ನು ಅಗಿಯುವುದಕ್ಕೆ ಬೋರ್ಡಿನವರು ಎಷ್ಟು ಹಣ ಖರ್ಚುಮಾಡಿದರು ಈ ಖರ್ಚಿನಿಂದ ಈ ಸದುದ್ದೇಶವು ನೆರವೇರಿತೋ ಎಂಬುದು ಈ ರಿಪೋರ್ಟಿನಿಂದ ಗೊತ್ತಾಗುವುದಿಲ್ಲ

(4) ಈಗ ಇರುವ ಮೂರು ಸೆಕೆಂಡರಿ ಶಾಲೆಗಳಲ್ಲಿಯೂ ಬಾಲಕದರ್ಜಿಯಿಂದ 2ನೆ ವರೆಗಿನ ಕ್ಲಾಸುಗಳೇ ಇಲ್ಲ, ಕುಂದಾಪುರ ಮತ್ತು ಕಾರ್ಕಳದಲ್ಲಿ ಕಟ್ಟೋಣಗಳಲ್ಲಿ ಸ್ಥಳ ಸಾಲದೆ ಇದೆ. ಈ ಪೈಕಿ ಕಾರ್ಕಳದಲ್ಲಿ ಕಟ್ಟೋಣವೂ, ಉಪಾಧ್ಯಾಯರ ಸಂಖ್ಯೆಯೂ ಸಾಲದೆ ಇದ್ದು ಮಕ್ಕಳನ್ನು ದಾಖಲುಮಾಡಿಕೊಳ್ಳಲು ಅಸಾಧ್ಯವಾಗಿದೆ ಈ ವಿಷಯಗಳು ಬೋರ್ಡಿನಲ್ಲಿ ಚರ್ಚೆಗೆ ಬಂದಿಲ್ಲವೆಂದು ಕಾಣುತ್ತದೆ ಇದಲ್ಲದೆ. ಹಿಂದುಳಿದ ಜಾತಿಯವರ ಬಗ್ಗೆ ಮತ್ತು ಹೆಣ್ಣು ಮಕ್ಕಳ ಬಗ್ಗೆ ಇನ್ನೂ ಶಾಲೆಗಳು ಅಗತ್ಯವಾಗಿವೆ ಮತ್ತು 1000ಕ್ಕೆ ಮಿಗಿಲಿ ಜನಸಂಖ್ಯೆ ಇದ್ದು ಯಾವ ಬಗೆಯ ಶಾಲೆಯೂ ಇಲ್ಲದ ಊರುಗಳು ಇವೆ. ಆದ್ದರಿಂದ ಸಂಸ್ಥಾನದ ದಾಮಾಶಾಯದಿಂದಲೂ ನಾವು ಮೇಲಾಗಿದ್ದೇವೆಂದು ನಮ್ಮ ಬೆನ್ನು ನಾವೇ ತಟ್ಟಿಕೊಳ್ಳದೆ ಮುಂದಿನ ಅಭಿವೃದ್ಧಿಯ ಕಡೆಗೆ ಲಕ್ಷ್ಯ ಇಡಬೇಕಾಗಿದೆ

(5) ಆಸ್ಪತ್ರೆಗಳ ಸೌಕಾರ್ಯದ ಉಪಯೋಗವನ್ನು ಗತವರ್ಷಕ್ಕಿಂತಲೂ ಹೆಚ್ಚಿನ ಮಂದಿ ಪಡದರು ಎಂಬುದು ಸಂತೋಷಾಸ್ಪದನಾದರೂ, ಇನ್ನೂ ಡಿಸ್ಪೆನ್ಸರಿಗಳ ಸಂಖ್ಯೆ ಏನೇನೂ ಸಾಲದು. ಬೋರ್ಡಿನವರು ಹೊಸತಾಗಿ ತೆರೆಯುವ ಆಸ್ಪತ್ರೆಗಳ ಅರ್ಧ ಖರ್ಚನ್ನು ಸಹಾಯ ದ್ರವ್ಯವಾಗಿ ತೆರುವುದಕ್ಕೆ ಸರಕಾರದವರು ಸಿದ್ಧವಾಗಿರುವುದರಿಂದ ಇನ್ನೂ ಕೆಲವು ಡಿಸ್ಪೆನ್ಸರಿಗಳನ್ನು ತೆರೆಯುವುದು ಅಗತ್ಯ. ಈಗ ಸ್ವಲ್ಪ ಹಣವನ್ನು ಕಂದಾಯವಾಗಿ ತೆತ್ತು ಆಸ್ಪತ್ರೆ ಮಂತಾದ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಿಕೊಂಡಿರುವ ಕೆಲವು ಊರುಗಳು ಯೂನಿಯನ್‌ಗಳನ್ನು ಸ್ಥಾಪಿಸಿಕೊಂಡು ಸ್ವಲ್ಪ ಹಣ ಬಿಟ್ಟುಕೊಟ್ಟರೆ ಕೆಲವು ಹೊಸ ಡಿಸ್ಪೆನ್ಸರಿಗಳನ್ನು ತೆರೆಯುವುದಕ್ಕೆ ಬೋರ್ಡಿನವರಿಗೆ ಅನುಕೂಲವಾಗಬಹುದು

ಸೂಲಗಿತ್ತಿಯರು ಮಾಡುವ ಕೆಲಸದ ಮಿತಿಯನ್ನು ಈಗೀಗ ಹೆಚ್ಚಿಸುತ್ತ ಬರುವುದು ಅತ್ಯಗತ್ಯ. ಅನೇಕ ಕಡೆಗಳಲ್ಲಿ ಇವರು ಪಟ್ಟಣಗಳಲ್ಲಿರುವುದರಿಂದ ಸೂಲಗಿತ್ತಿತನ ಮಾಡಿದಕ್ಕೆ ಅಲ್ಪ ಸ್ವಲ್ಪ ಹಣವನ್ನು ಖಾಸಗಿ ಸಂಪಾದಿಸುತ್ತಾರೆ. ಆದ್ದರಿಂದ ಇವರ ಸಹಾಯವು ಬಡಜನರಿಗೆ ಸಾಕಷ್ಟು ದೊರಕುವಂತೆ ಈ ಮಿತಿಯನ್ನು ಹೆಚ್ಚಿಸುವುದು ಯೋಗ್ಯ

(7) ಆರೋಗ್ಯಖಾತೆಯಲ್ಲಿ ವಿಂಗಡಿಸಿಟ್ಟ ಹಣವು ಖರ್ಚಾಗದೆ ಇರುವುದಕ್ಕೆ ಕೆಲವು ಮಟ್ಟಿಗೆ ಕೆಲವು ದೊಡ್ಡ ಊರುಗಳಲ್ಲಿ ಹೊಸರಸ್ತೆಗಳನ್ನು ಕಡಿಸುವುದಕ್ಕೆ ಮಾಡಿದ ವಿಪರ್ಯಾಡುಗಳು ಇನ್ನೂ ಜಾರಿಗೆ ಬಾರದೆ ಇರುವುದು ಒಂದು ಕಾರಣವಾಗಿರಬಹುದು ಇದಕ್ಕೆ ಅಗತ್ಯವಾದ ಹೆಚ್ಚಿಗೆ ಸಿಬಂದಿ ಇಡದೆ ಈಗಿರುವ ಸಿಬಂದಿಯಿಂದಲೇ ಕೆಲಸ ನಡಿಸುವುದರಿಂದ ಸ್ವಲ್ಪಮಟ್ಟಿಗೆ ಸಾವಕಾಶವಾಗಿರಬೇಕು

ಹಿಂದೂಸ್ಥಾನದ ರಾಜಕೀಯ ಧ್ಯೇಯವು

ಲೇಖಕರು

ಕಳೆದ ಸಂಚಿಕೆಯಲ್ಲಿ ಸೂಚಿಸಿದ ಎಲ್ಲಾ ಸಂಗತಿಗಳು ನಮ್ಮ ವಾಚಕರಿಗೆ ನವೀನವಲ್ಲ ಏಳೆಂಟು ವರುಷಗಳ ಹಿಂದೆ ನಡೆದ ವಿಷಯಗಳೇ ಇವು ಆದರೆ ರಾಷ್ಟ್ರೀಯ ಸಭೆಯಲ್ಲಿ ಇಷ್ಟು ಒದಲಾವಣೆ—ಅಲ್ಲ, ಇಷ್ಟು ಕ್ರಾಂತಿಯಾದದ್ದನ್ನು ನೋಡಿ ಯಾರಿಗಾದರೂ ಭಕ್ಷನೆ ಆಶ್ಚರ್ಯವಾದೀತು ಆದರೆ ಬೆಂರೆಬೇರೆ ಜನಾಂಗಗಳ ರಾಜಕೀಯ ಇತಿಹಾಸವನ್ನು ನಿರೀಕ್ಷಿಸಿದರೆ ಇದರಲ್ಲಿ ಆಶ್ಚರ್ಯಪಡಬೇಕಾದ್ದೇನೂ ಇಲ್ಲ, ಇದು ಉದಯೋನ್ಮುಖವತ್ತು ಸಜೀವನಾತ್ಮದ ಸಹಜಾವಸ್ಥೆಯೆ ಎಂದು ಕಂಡುಬರುತ್ತದೆ. ಇಡೀ ವರ್ಷದಲ್ಲಿ ಹೇಳುವ ಹಾಗೆ ಇಲ್ಲವೆ ಹೆಸರಿಗೆ ಒಪ್ಪುವಜಾಗೆ ಯಾವ ಕೆಲಸವನ್ನೂ ಮಾಡದೆ ಬರೇ 3-4 ದಿವಸಗಳಲ್ಲಿ ರಾಷ್ಟ್ರೀಯ ಸಭೆ ಎಂಬ ಹೆಸರಿನ ಕೆಳಗೆ ಬರೆ ವತ್ತೃತ್ವ ನಡಿಸುವುದೆಂದರೆ ಅದು ಭಾಷಣನೆಮಾರಂಭದ ಒಂದು ನಾಟಕವೇ ಸರಿ ಇದು ಯಾರಿಗೆ ಎಷ್ಟು ಸಮಯ ಒಪ್ಪೀತು? ಸಂಸ್ಥೆಗಳು ವಸ್ತುತಃ ನಿರ್ಜೀವವಾದರೂ ಆ ಸಂಸ್ಥೆಗಳ ಘಟಿಕರಾಗಿರುವವರು ನಿರ್ಜೀವರು—ನಿಶ್ಚೇತನರಾದರೆ ನಾತ್ರ ಆ ಸಂಸ್ಥೆಯು ಇದ್ದೂ ವ್ಯರ್ಥವೇ. ಆದರೆ 1906 ವರೆಗೆ ರಾಷ್ಟ್ರೀಯ ಸಭೆಗೆ ಇಂತಹ ದುರವಸ್ಥೆಯು ಒರಲಿಲ್ಲ. ಆದುದರಿಂದ ನವೀನವಾದ ತರುಣ ಭಾರತೀಯರ ಪಕ್ಷವೇ ವೃದ್ಧ ಪಿತಾಮಹರ ಕೈಯಿಂದ ಮೇಲಕ್ಕೆತ್ತಲ್ಪಟ್ಟಿತು. ಪರಂತು, ದೇಶದ ದುರ್ದೈವದಿಂದ ಈ ಸ್ಪೃಹಣೀಯ ಪರಿಸ್ಥಿತಿಯು ಬಹಳ ಸಮಯ ಎಂದರೆ ಒಂದು ವರ್ಷ ಕೂಡ ನಿಲ್ಲಲಿಲ್ಲ. ಇದು ಮಾತ್ರ ಶೋಚನೀಯವು ಪ ಪೂ. ದಾದಾಬಾಯಿಯವರು ತೋರಿಸಿಕೊಟ್ಟ ಸ್ವರಾಜ್ಯದ ಧ್ಯೇಯವನ್ನು ಬಾಹ್ಯತಃ ಒಪ್ಪಿಕೊಂಡರೂ ತರುಣ ಪಕ್ಷವನ್ನು ರಾಷ್ಟ್ರೀಯ ಸಭೆಯಿಂದ ಒಹಿಷ್ಕರಿಸಬೇಕೆಂದು ಕೆಲವರು ಪ್ರಯತ್ನಪಟ್ಟು ಮುಂದಿನ 1907ನೇ ವರುಷದ ಸೂರತ್ ದಲ್ಲಿ ಆಗಲಿಕ್ಕಿದ್ದ ರಾಷ್ಟ್ರೀಯ ಸಭೆಯನ್ನು ಎರಡ ಹೋಳಾಗಿ ಮಾಡಿದರು ಹೀಗೆನ್ನುವುದಕ್ಕಿಂತ ತರುಣ ಪಕ್ಷವನ್ನು ಅದರಿಂದ ಬಹಿಷ್ಕರಿಸಿದರೆಂದೆನ್ನುವುದೇ ಲೇಸು ಇದು ಹೇಗೂ ಇರಲಿ, ರಾಷ್ಟ್ರಭಕ್ತರಲ್ಲಿ ಆದ ಇಲ್ಲವೆ ಪ್ರಕೃತದಲ್ಲಿ ಕೂಡ ಇರುವ ಪಕ್ಷಭೇದಗಳನ್ನು ಕುರಿತು ನಮಗೇನೂ ಹೇಳಬೇಕಾದುದ್ದಿಲ್ಲ ರಾಷ್ಟ್ರ ಸಭೆಯ ಸ್ಥೂಲಮಾನದ ಇತಿಹಾಸದಿಂದ ವಾಚಕರು ತಿಳಿದುಕೊಳ್ಳಬೇಕಾದ ಮುಖ್ಯ ಸಂಗತಿ ಯಾವುದೆಂದರೆ, ರಾಷ್ಟ್ರೀಯ ಸಭೆಯು ಅಂತರ್ರಚನೆಯ ವಿಷಯವಾಗಿಯಾಗಲಿ ಬೇರೆ ಸಂಗತಿಗಳ ವಿಷಯವಾಗಿಯಾಗಲಿ ಆ ಸಭಾಭಕ್ತರಲ್ಲಿ ತೀವ್ರವಾದ ಎಷ್ಟೂ ಮತ್ತೆ ಭೇದವಿದ್ದಾಗ್ಯೂ ಹಿಂದೂದೇಶದ ಅಂತಿಮ ಧ್ಯೇಯವಾದ ಸ್ವರಾಜ್ಯದ ವಿಷಯದಲ್ಲಿ ಮಾತ್ರ ಯಾರೂ ಮತ ಭೇದವಿಲ್ಲ ಈ ಒಳ ಭೇದಗಳ ಏಕೀಕರಣವು ರಾಷ್ಟ್ರೀಯ ಸಭೆಯ ಬರುವ ಅಧಿವೇಶನದೊಳಗಾಗಿಯೇ ಆಗುವದೆಂದು ಪ್ರಸ್ತಾವಗಳು ಅಲ್ಲಲ್ಲಿ ನಡಿಯುತ್ತಿವೆ ಮತ್ತು ಹೀಗೆ ಅವರೊಳಗೆ ಐಕ್ಯವುಂಟಾದಲ್ಲಿ ದೇಶದ ಸೌಧಾಗ್ರರಥವು ಇಮ್ಮಡಿಯಾದ ವೇಗದಿಂದ ಮುಂದರಿಸೀತೆಂಬದರಲ್ಲಿ ಸಂದೇಹವೀ

ಹಿಂದೂದೇಶದ ಧ್ಯೇಯವಾದ ಸ್ವರಾಜ್ಯದ ಸ್ವರೂಪವೇನೆಂಬುದನ್ನು ನಾವು ಪ್ರಕೃತ ಲೇಖದಲ್ಲಿ ಚರ್ಚಿಸುವುದಿಲ್ಲ; ಅದಕ್ಕಾಗಿ ಯಥಾವಕಾಶ ಸ್ವತಂತ್ರ ಲೇಖನವನ್ನೆ ಬರೆಯುವೆವು. ಪಾರಲೌಕಿಕ ದೃಷ್ಟಿಯಿಂದ ಒಂದು ವ್ಯಕ್ತಿಯ ಧ್ಯೇಯವು ಹೇಗೆ ಮೋಕ್ಷವಿರುವುದೋ ಹಾಗೆಯೇ ಒಂದು ಜನಾಂಗದ ಅಂತಿಮ ಧ್ಯೇಯವು ಏಹಿಕ ದೃಷ್ಟಿಯಿಂದ ಸ್ವರಾಜ್ಯವಾಗಿರುವುದು. ಇದಕ್ಕಿಂತ ಉಚ್ಚ ಮಾತ್ರವಲ್ಲ, ಉಚ್ಚತರ

ಧ್ಯೇಯವು ಇನ್ನಾವದೂ ಇಲ್ಲ. ಆದುದರಿಂದಲೇ ಪ್ರಸ್ತುತಕಾಲದಲ್ಲಿ ಮಿಸೆಸ್ ಎನಿಬೆಸೆಂಟರವರಂತಹ ಸ್ವತಂತ್ರ ವಾತಾವರಣದಲ್ಲಿ ಹುಟ್ಟಿ ಸ್ವಾತಂತ್ರ್ಯವನ್ನನು ಧ್ವನಿಸುತ್ತಿರುವರು. ಹಿಂದೂ ಜನರ ನ್ಯಾಯ್ಯವಾದ ಮತ್ತು ಪ್ರಾಮಾಣಿಕವಾದ ಈ ಆಕಾಂಕ್ಷೆಯನ್ನು ಸ್ವಾತಂತ್ರ್ಯ ಪ್ರಿಯವಾದ ಸರಕಾರವು ಪೂರೈಸಬೇಕೆಂದು ಪ್ರಯತ್ನಿಸುತ್ತಿದ್ದಾರೆ ಈ ಪ್ರಕಾರ ತಾವಾಗಿಯೇ ಸಹಾಯಕ್ಕೆ ಬಂದ ಇವರ ನಾಯಕತ್ವದಿಂದ ನಾವು ನಮ್ಮ ಜನಾಂಗದ ಉದ್ದಿಷ್ಟ ಹೇತುವನ್ನು ಸಾಧಿಸಿಕೊಳ್ಳುವುದೇ ನಮ್ಮ ಬುದ್ಧಿವಂತಿಕೆಯು ಸಂಗತಿಯಾಗಿದೆ. ಕಾರಣವೇನೆಂದರೆ, ಮಿಸೆಸ್ ಎನಿಬೆಸೆಂಟರೇ ಎಂತಲ್ಲ, ಸಾಮಾನ್ಯವಾಗಿ ಇಂಗ್ಲಿಷರೆಲ್ಲರು ಸ್ವಾತಂತ್ರ್ಯ ಪ್ರಿಯ ಹಾಗು ದೂರದರ್ಶಿಗಳಾಗಿರುವುದರಿಂದ ಅವರು ಕೈಕೊಂಡ ಕೆಲಸವು ಕೊನೆಗಾಣದೆ ಇರುವುದಿಲ್ಲ. ಆದುದರಿಂದ. ನಮ್ಮ ಹಿಂದೀ ಬಾಂಧವರು ಬೇರೆ ಬೇರೆ ಧ್ಯೇಯಗಳನ್ನು ಕಲ್ಪಿಸಿಕೊಂಡು ಜಾತಿ-ಮತ-ಧಾಷಾ-ಲಿಪಿ ಮುಂತಾದವುಗಳನ್ನು ನಿರ್ಮೂಲಿಸಬೇಕೆಂಬ ವ್ಯರ್ಥಾಹಂಜ್ಞಿನಿಂದ ತಮ್ಮ ಬುದ್ಧಿಸಾಮರ್ಥ್ಯ, ದೇಹಶಕ್ತಿ, ದ್ರವ್ಯಬಲ ಇವುಗಳನ್ನು ವೆಚ್ಚ ಮಾಡುವುದು ಅಂತಿಮ ಧ್ಯೇಯ ಪ್ರಾಪ್ತಿಯ ನಿಜವಾದ ಉಪಾಯವಲ್ಲವೆಂದು ನಿರ್ಧರಿಸಿ ಎನಿಬೆಸೆಂಟರ ಸ್ವರಾಜ್ಯ ಸಂಘಕ್ಕೆ ಸೇರುವದೇ ನ್ಯಾಯವಾಗಿದೆ ಗುಡಾಣ, ಕೊಡ, ಮಡಿಕೆ, ಹೂಜಿ ಮುಂತಾದ ಬೇರೆ ಬೇರೆ ಪಾತ್ರೆಗಳಿದ್ದರೆ ಅವುಗಳನ್ನು ಕೈಯಲ್ಲಿ ಕೊಂಡು ಹೋಗುವುದು ಅಸಾಧ್ಯವಾಗುತ್ತದೆಂದು ಒಬ್ಬ ಉನ್ಮತ್ತನು ಮಣ್ಣಿನ ಆ ಪಾತ್ರೆಗಳನ್ನು ದಂಡದ ಒಂದೇ ಏಟಿನಿಂದ ಒಡೆದು ಒಟ್ಟುಗೂಡಿಸುವಂತೆ ಈ ಜಾತಿ ಭೇದಾದಿಗಳನ್ನು ಮುರಿಯುವ ಪ್ರಯತ್ನವು ಜೇಷ್ಟೆಯಾಗಿರುವದು ತಾತ್ಪರ್ಯವೇನೆಂದರೆ ರಾಜಕೀಯ ಧ್ಯೇಯಕ್ಕೂ ಈ ಸಂಗತಿಗಳಿಗೂ ಏನೂ ಸಂಬಂಧವಿಲ್ಲ. ಉಪಯುಕ್ತವಾದ ಈ ರಾಜಕೀಯ ಧ್ಯೇಯವನ್ನು ಸಂಪಾದಿಸುವುದಕ್ಕೆ ಎಲ್ಲರ ಪ್ರಯತ್ನಗಳು ವಿಕೀಕೃತವಾಗಿ ಆ ಮೂಲಕ ಇಷ್ಟಾರ್ಥವನ್ನು ಸಾಧಿಸಬೇಕಲ್ಲದೆ ಅನ್ಯಥಾ ಮಾರ್ಗವಿಲ್ಲ. ಈ ಸಂಗತಿಗಳು ಯಾವಾಗ ಸರ್ವ ಪಕ್ಷದವರಿಗೂ ಗೊತ್ತಾಗುವವೋ ಅದೇ ಸುದಿನವೆಂದು ನಾವು ನೆನಸುವೆವು.

ಇಷ್ಟಲ್ಲದೆ, ಇಲ್ಲಿ ಇನ್ನೊಂದು ಸಂಗತಿಯನ್ನು ಹೇಳುವುದು ಅವರಿಹಾರ್ಯವಾಗಿದೆ. ಅದೇನೆಂದರೆ, ರಾಜಕೀಯ ಧ್ಯೇಯವನ್ನು ಸಂಪಾದಿಸಿಕೊಳ್ಳದೆ ಬೇರೆ ಧಾರ್ಮಿಕ, ಸಾಮಾಜಿಕ ಮೊದಲಾದ ಉನ್ನತಿಯನ್ನು ಹೊಂದಿ ಅಂತರ್ಗತ ಸುಧಾರಣೆಯನ್ನು ಪೊದಲು ಮಾತಿಕೊಳ್ಳುವ ಎಂತ ನೆನಸುವುದು ತೀರ ತಪ್ಪಾಗಿರುವುದು. ಕಾರಣವೇನೆಂದರೆ, ಎಲ್ಲ ತರದ ಸುಧಾರಣೆಗಳಿಗೆ ಅಥವಾ ಸೌಕರ್ಯಗಳಿಗೆ ಮೂಲ ಕಾರಣವಾದುದ್ದು ಜನಾಂಗದ ರಾಜಕೀಯ ಉನ್ನತಿಯೇ ಎಂದು ಇತಿಹಾಸವು ಏಕ ಮತದಿಂದ ಹೇಳುತ್ತಿದೆ. ಹೀಗಿರಲು ಸರಕಾರದ ಕೃಪೆಯಿಂದ—ಸರಕಾರವೇ ಉದಾರ ಬುದ್ಧಿಯಿಂದ ದಾನ ಮಾಡಲಿಕ್ಕಿದ್ದ—ದಯೆಪಾಲಿಸಲಿಕ್ಕಿದ್ದ-ಸ್ವರಾಜ್ಯವನ್ನು ಹೊಂದಿ ರಾಜಕೀಯ ಧ್ಯೇಯದ ಪೂರ್ಣತೆಯನ್ನು ನಾವು ಪಡೆದರೆ ನಮ್ಮ ದೇಶದ ಏಳಿಗೆಗೆ ಏನೂ ಕೊರತೆಯಿರಲಿಕ್ಕಿಲ್ಲ

ಬಂಟರ ಯಾನೆ ನಾಡವರ ಜಾತಿಯ ಅಭಿವೃದ್ಧಿ ಸಾಧನೆಯು.

ಬಂಟರ ಜಾತಿಯ ವಿದ್ಯಾರ್ಥಿಗಳು ಮೇಲೆ ಹೆಸರು ಕಾಣಿಸಿದ ಜಿಕ್ಕದೊಂದು ವಹಿಯನ್ನು ಇತ್ತಲಾಗೆ ಸ್ರಕಟಿಸಿರುವರು ಸಾಧನೆಯ ಉಪಾಯವು ಯಾವದ್ದೆಂಬುದು ಈ ವಹಿಯಲ್ಲಿ ಸೂಚಿಸೋಣಾಗಿಯದೆ. ಸದ್ಭಾವನೆಗಳು, ಸದ್ವೃತ್ತಿಗಳು ಎಲ್ಲಾ ಅಭಿವೃದ್ಧಿಯ ಮೂಲವಾಗಿವೆ ಇವುಗಳು ಶಿಕ್ಷಣ ಮತ್ತು ವಿದ್ಯಾಭ್ಯಾಸಗಳ ಮೂಲಕ ಪ್ರಾಪ್ತವಾಗುವುದರಿಂದ ವಿದ್ಯೆಯೂ ಇದರ ಮೂಲಕ ಶಿಕ್ಷಣವೂ ಬಂಟರ ಜಾತಿಯವರಿಗೆ ಸುಲಭಸಾಧ್ಯವಾಗುವಂತೆ ಕೆಲವು ವರುಷಗಳ ಹಿಂದೆ ಒಂಟರ ಯಾನೆ ನಾಡವರ ಸಂಘವು ಸ್ಥಾಪಿಸಲ್ಪಟ್ಟಿರುವುದು. ಈ ಸಂಘದ ಸಾಧನೆಯನ್ನು ಪ್ರೋತ್ಸಾಹಿಸಬೇಕೆಂಬ ವಿಜ್ಞಾಪನೆಯು ಈ ವಹಿಯಲ್ಲಿರುವದು. ನಾಡವರ ಸಂಘದ ಮೂಲಕ ಎಂಥೆಂಥಾ ಕಾರ್ಯಸಾಧನೆಯು ಇಷ್ಟರ ತನಕ ನೆರವೇರಿರುವುದು, ಮುಂದಕ್ಕೆ ಇದರ ಬೆಳವಣಿಗೆ ಬೇಕಾದದ್ದೇನು ಎಂಬ ವಿವರವು ಈ ವಹಿಯಲ್ಲಿದೆ. ಈ ಸಂಘಕ್ಕೆ ಸಹಾಯವನ್ನು ಯಾವ ರೀತಿ ಮಾಡಬಹುದೆಂಬದನ್ನು ಬಂಟರ ವಿದ್ಯಾರ್ಥಿಗಳು ಈ ವಹಿಯಲ್ಲಿ ಸ್ಪಷ್ಟವಾಗಿ ಹೇಳಿರುತ್ತಾರೆ. ಪ್ರತಿ ವರುಷದಲ್ಲಿಯೂ ಸಂಘಕ್ಕೆ ಇಂತಿಗೆ ಕೊಡುವದು, ಮದುವೆ ಮುಂಜಿ ಮೊದಲಾದ ಶುಭಕಾರ್ಯಗಳ ಸಂದರ್ಭದಲ್ಲಿ ಸಂಘಕ್ಕೆ ಕಿಂಚಿತ್ತಾದರೂ ಸಹಾಯ ಮಾಡುವದು, ಸ್ವರ್ಗಸ್ಥರಾದ ಬಂಧುಗಳ ಸ್ಮರಣಾರ್ಥವಾಗಿ ವಿದ್ಯಾರ್ಥಿ ಧನಕ್ಕೆ ಹೊಸ ಕೋಷಗಳನ್ನು ಕಟ್ಟಿಸಿಕೊಡುವದು, ಅಥವಾ ವಿದ್ಯಾರ್ಥಿ ವೇತನಗಳನ್ನು ಸ್ಥಾಪಿಸುವದು—ಈ ವಿಧಾನಗಳಲ್ಲಿ ಸಂಘವನ್ನು ಪ್ರೋತ್ಸಾಹಿಸಬಹುದೆಂದು ಬಂಟರ ವಿದ್ಯಾರ್ಥಿ ಸಮಾಜದವರು ತಮ್ಮ ಸ್ವಜಾತಿಯವರನ್ನು ವಿಜ್ಞಾಪಿಸಿಕೊಂಡಿರುತ್ತಾರೆ. ವಿದ್ಯಾರ್ಥಿ ಸಮಾಜಕ್ಕೆ ಈಗ ಕೆಲವು ರಜಾ ದಿನಗಳಿವೆ, ಇಂಥಾ ಸಮಯದಲ್ಲಿ ವಹಿಯಲ್ಲಿ ಪ್ರಕಟಿಸಿರುವ ಈ ವಿಜ್ಞಾಪನೆಯನ್ನು ಮುಖತಃ ತಮ್ಮ ಹಳ್ಳಿ ಊರುಗಳಲ್ಲಿರುವ ಸ್ವಜಾತಿ ಬಂಧುಗಳಿಗೆ ತಿಳಿಯ ಹೇಳಬಹುದು ಮತ್ತು ಆವರಲ್ಲಿ ಸಹ ವಿದ್ಯೆಯ ಬಗ್ಗೆ ಬೇಕಾದ ಆಸಕ್ತಿಯನ್ನುಂಟುಮಾಡಬಹುದು. ಅಗ್ಗೆ ವಹಿಯನ್ನು ಪ್ರಕಟಿಸಿರುವ ಉದ್ದೇಶವು ಶೀಘ್ರದಲ್ಲಿ ನೆರವೇರುವುದು

ಪತ್ರವ್ಯವಹಾರ.

ಆರ್ಯಾ,

ತಮ್ಮ ಪತ್ರದ ಕಳೆದ ಸಂಚಿಕೆಯಲ್ಲಿ ಪ್ರಕಟಿಸಲ್ಪಟ್ಟ "ಸಮಾಜ ಸೇವಕರ" ಪತ್ರದಲ್ಲಿ ಸತ್ಯಕ್ಕಿಂತ ಆಸಕ್ತಿಯು ವಿಾರಿದಂತೆ ತೋರುತ್ತದೆ. ಉತ್ಸಾಹದಿಂದ ಇಂಥಾ ಪತ್ರಗಳನ್ನು ಬರೆಯುವಾಗ ಸಂಗತಿಗಳು ಪೂರ್ಣವಾಗಿ ನಿಜವಾಗಿರುವಂತೆ ತೋರಿಬರುವುದಿಲ್ಲ. ಅಧವಾ ಸಮಾಜ ಸೇವಕರು ಇದರ ಶೋಧನೆ ಮಾಡಿ ಬರದದ್ದೆಂತಲೂ ತಿಳಿಯಲಿಕ್ಕಾಗುವದಿಲ್ಲ ಭಾಷೆಯು ಒಂದೇಯಾಗಿರುವದನ್ನು ಕಂಡು ಜಾತಿಯೂ ಸಹ ಒಂದೇಯಾಗಿರಬೇಕೆಂಬ ಸಿದ್ಧಾಂತವನ್ನು ಮಾಡಿಕೊಂಡು ತಮ್ಮ ಪತ್ರವನ್ನು ತಯ್ಯಾರಿಸಿರಬಹುದೆಂತ ಸಮಾಜ ಸೇವಕರ ಲೇಖನದಿಂದ ತಿಳಿಯಬಹುದಾಗಿದೆ. ಇದೇ ಸಿದ್ಧಾಂತ ಮೇಲೆ ಜಾತಿಗಳ ನಿರ್ಣಯವನ್ನು ಮಾಡುವದಾದರೆ ಗಂಡು ಮತ್ತು ಹೆಣ್ಣು ಈ ಎರಡು ಜಾತಿಗಳ ಹೊರತು ಮಿಕ್ಕ ಜಾತಿಗಳು ಇರುವದು ಅಸಾಧ್ಯವೆಂತ ರುಜು ಪಡಿಸಬಹುದು. ಹ್ಯಾಗಂದರೆ —ದಕ್ಷಿಣ ಮಹಡಾಷ್ಟ್ರದಲ್ಲಿ ಸರ್ವರಿಗೂ ಮರಾಟಿ ಭಾಷೆಯಾಗಿರುವದು. ಸಮಾಜ ಸೇವಕರ ಸಿದ್ಧಾಂತದ ಪ್ರಕಾರ ಮರಾಟಿ ಭಾಷೆಯನ್ನು ಆಡುವ ಬ್ರಾಹ್ಮಣರು ಒಕ್ಕಲಿಗರು, ಇತರ ಶೂದ್ರರು, ಹೊಲೆಯರು ಇತ್ಯಾದಿಯವರು, ಒಂದೇ ಜಾತಿಯವರೆಂತ ರುಜುಪಡಿಸಬಹುದು. ಆದರೆ ಹೀಗೆ ರುಜುಪಡಿಸಲಿಕ್ಕೆ ಸ್ವಲ್ಪ ಕಲ್ಪನಾಶಕ್ತಿಯು ಮಾತ್ರ ಅಗತ್ಯವಿರುವುದು ಇದೇ ರೀತಿ ಬಂಗಾಳದಲ್ಲಿಯೂ ಇತರ ಕಡೆಗಳಲ್ಲಿ ಹೆಣ್ಣು ಮತ್ತು ಗಂಡು ಜಾತಿಗಳೆರಡು ಹೊರತು ಮಿಕ್ಕ ಯಾವ ಜಾತಿಯೂ ಇರದೆಂತ ತೋರಿಸಬಹುದು. ಆದರೆ ಇಂಥಾ ಮಾತುಗಳನ್ನು ಬರೆಯುವದರ ಬದಲಿಗೆ ನಿಜವಾದ ಇತಿಹಾಸಗಳೇನೆಂಬುದನ್ನು ಶೋಧನೆಯಿಂದ ವಿಚಾರಿಸಿಕೊಂಡು, ಬರೆಯುವ ಮಾತುಗಳಿಗೆ ಆಧಾರ ಕೊಟ್ಟು, ಸಮಾಧಾನದಿಂದ ಸಾಮಾಜಿಕ ವಿಷಯಗಳನ್ನು ಯೋಚಿಸಿಕೊಂಡು ಬರೆಯುವದುತ್ತಮ ಆಗ್ಯೆ ಅಂಥಾ ಬರವಣಿಕೆಗಳಲ್ಲಿ ಜನರಿಗೆ ವಿಶ್ವಾಸವು ಉಂಟಾಗಿ ಸಮಾಜ ಸೇವಕರ ಉದ್ದೇಶವು ಏನೆಂಬದು ಸ್ಪಷ್ಟವಾಗುವದು. ಅಭ್ಯಾಸವಿಲ್ಲದೆ ಒಬ್ಬರಿನ್ನೊಬ್ಬರ ತಲೆಯನ್ನು ಬೋಳಿಸಿ ಬಿಟ್ಟರೆಂತ "ಸಮಾಜ ಸೇವಕ"ರು ನೋಡಿರುವಂತೆ ಬರೆಯುತ್ತಾರೆ ಈ ಮಾತು ಸತ್ಯವಲ್ಲವೆಂಬದು ಬರವಣಿಕೆಯ ರೀತಿಯಿಂದಲೇ ತಿಳಿಕೊಳ್ಳಬಹುದು. ಹ್ಯಾಗೂ 'ಸಮಾಜ ಸೇವಕರು' ಮತ್ತೊಮ್ಮೆ 'ಮಲ್ಯರ' ಇತಿಹಾಸವು ಏನೆಂಬದು ತಿಳಿದು ಆಧಾರ ಪೂರ್ವಕ ಬರೆಯುವದು ಅಗತ್ಯ ಹೀಗೆ ಬರೆಯುವದು ಸಮಾಜ ಸೇವಕರಿಗೆ ಅಸಾಧ್ಯವಾಗಿ ಹೋದರೆ ಬೇರೆ ಯಾರದರೂ ಇದರ ನಿಜತ್ವವನ್ನು ತೋರಿಸಿಕೊಟ್ಟು ಬರೆದರೆ ಉಪಕಾರವಾಗುವದು.

ಹೀಗೆಯೇ ಕೊಂಕಣಿ ಭಾಷೆಯನ್ನಾಡುವ ವಿವಿಧ ಜಾತಿಯವರು ಇರುವರು. ಇವರೆಲ್ಲರ ಜಾತಿ ನಿರ್ಣಯಗಳನ್ನು ಮಾಡಿದರೆ ಕೊಂಕಣಿ ಜಾತಿಯ ಇತಿಹಾಸವನ್ನು ತಿಳಿದಂತಾಗುವದು.

ಇಂತಿ.

ಇತಿಹಾಸ ಪ್ರಿಯಃ

ಯುದ್ಧ ಸಮಾಚಾರ.

ತಾ. ೧೪ನೇ ದಶಂಬರ.

ಜರ್ಮನರ ಜಲಂತರ್ಗಾಮಿ ನಾವೆಯು ಬ್ರಿಟಿಷರ "ಮೈನ್ ಕ್ರೀವ್" ಎಂಬ ಹಡಗನ್ನು ಮುಳುಗಿಸಿರುತ್ತದೆ. ೩೨ ನಾವಿಕರು ರಕ್ಷಿಸಲ್ಪಟ್ಟಿರುತ್ತಾರೆ.

ಫ್ರಾನ್ಸಿಗೆ ಹೋಗಿದ್ದ ಬ್ರಿಟಿಷ ಮಂತ್ರಿಗಳಾದ ಕೆಚೆನರ್ ಪ್ರಭುಸ್ಟುಫರೂ ಸರ್ ಗ್ರೇಯವರೂ ಲಂಡನಿಗೆ ಹಿಂದಿರಿಗಿದರು.

ಬ್ರಿಟಿಷ ಸೇನಿಕರು ಫ್ರಾನ್ಸ್ ಮತ್ತು ಗಲಿಪೊಲಿಯಲ್ಲಿ ಹೇಗೆ ತಮ್ಮ ಶೌರ್ಯ ಪರಾಕ್ರಮವನ್ನ ತೋರಿಸಿ ಹೆಸರುವಾಸಿಯಾದರೋ ಅದೇ ರೀತಿಯ ಶೌರ್ಯಕಾರ್ಯಗಳನ್ನು ಮೆಸಿಡೋನಿಯದ ರಣರಂಗದಲ್ಲಿಯೂ ತೋರಿಸಿರುವರು. ಈ ಪ್ರಾಂತ್ಯದಲ್ಲಿ ಮೋಟ್ ಹೋಗತಕ್ಕ ಒಂದು ವಾರ್ಗಮಾತ್ರವಿದೆ ಇತರ ಮಾರ್ಗಗಳುಎತ್ತರ ಹಾಗೂ ಗಿಯೂ ಪರ್ವತಮಯವಾಗಿಯೂ ಇದ್ದು ಸೈನಿಗರಿಗೆ ಮುಂದ ರಿಸಲು ಕಷ್ಟಸಾಧ್ಯವಾದಂಥಾದ್ದು ಈ ಗಿರಿಲ್ಲು ಬಲ್ಗೇರಿಯನರ ಮಹಾ ದೊಡ್ಡ ಸೈನ್ಯವು ಬ್ರಿಟಿಷರ ಸೇನೆಯ ಮೇಲ್ಮಾಯಿದರೂ ಬ್ರಿಟಿಷ ಸೈನಿಕರು ಹಿಂಜರಿಯದೆ ಶತ್ರುಗಳ ಮೇಲೆಬಿದ್ದು ಶತ್ರುಗ ಳನ್ನ ಸಲಭವಾಗಿ ಹಿಂದಕ್ಕೆ ಓಡಿಸಿರುವರು ಶತ್ರುಗಳು ಪುನಃ ಪುನಃ ಸೈನಿಕರನ್ನು ಕೂಡಿಸಿಕೊಂಡು ಕ್ರೋಧದಿಂದ ಬ್ರಿಟಿಷರ ಮೇಲೆ ಬಿದ್ದರು ಆದರೆ ಬ್ರಿಟಿಷರ ಪಿರಂಗಿಗಳ ಹೊಡತಕ್ಕೆ ನಿಲ್ಲಲಾರದ ವರಾದರು ಬಲ್ಗೇರಿಯರು ಪುನಃ ಪುನಃ ದೊಡ್ಡ ಸೈನಿಗಳನ್ನು ಒಟ್ಟುಕೂಡಿಸಿ ಬ್ರಿಟಿಷರಮೇಲೆ ಬಿದ್ದುದರಿಂದಲೂ ಫ್ರೆಂಚ್‌ಸೈನಿಕರು ಹಿಂದೆ ಸರಿದ್ದರಿಂದಲೂ ಕಟ್ಟಕಡೆಗೆ ಬ್ರಿಟಿಷರ ಸೈನಿಕರೂ ಹಿಂದೆ ಸರಿಯಬೇಕಾಯಿತು ಆದರೂ ಫ್ರೆಂಚ್ ಮತ್ತು ಬ್ರಿಟಿಷ ಸೈನಿಗ ರುವ ಸಂಬಂಧವನ್ನು ಕಡಿಯಲು ಬಲ್ಗೇರಿಯನರಿಂದ ಸಾಧ್ಯವಾಗದೆ ಹೋಯಿತು

ಮಿತ್ರರಾಜ್ಯಗಳ ಮಂತ್ರಿಗಳು ಸಲೋನಿಕದಲ್ಲಿರುವ ಮಿತ್ರ ಸೈನಿಕರ ಬಧ್ಧತೆಪರವಾಗಿ ಪುನಃ ಗ್ರೀಕ ಸರಕಾರಕ್ಕೆ ಒಂದು ಪತ್ರ ವನ್ನು ಕಳುಹಿಸಿ ಕೊಟ್ಟಿರುತ್ತಾರೆ ಈ ಪತ್ರವು ತಲಪಿದಾಕ್ಷಣ ಗ್ರೀಕ ಮಂತ್ರಿಸಭೆಯು ಕೂಡಿಬಂದು ಮಿತ್ರರ ಪರವಾದ ಸಹಾನು ಭೂತಿಯನ್ನು ತೋರಿಸಿ, ಮಿತ್ರರಾಜ್ಯಗಳ ಮಂತ್ರಿಗಳ ತಗಾದೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಡಲು ನಿರ್ಧಾರಿಸಿರುವದು. ಸಲೋನಿಕದಲ್ಲಿರ ವ ಮಿತ್ರಸೈನಿಕರು ಪಟ್ಟಣದಲ್ಲಿ ತಮಗೆ ಬೇಕಾದ ಬಧ್ಧತೆಯ ಏರ್ಪಾಡು ಮಾಡಿಕೊಳ್ಳಲಿಕ್ಕಾಗುವ ಹಾಗೆ ಅಲ್ಲಿದ್ದ ಗ್ರೀಕ ಸೈನಿಕರ ಒಂದಂಶವು ಹಿಂದಕ್ಕೆ ಕರೆಯಲ್ಪಟ್ಟಿರುತ್ತದೆ

ಇಟಲಿಯನರು ಗೊರಿಸಿಯ ಮತ್ತು ಕೊಸ್ಕೆಲು ಪಟ್ಟಣಗಳ ಸುತ್ತಲೆ ಜಯಹೊಂದಿರುತ್ತಾರೆ

ತಾ. ೧೫ನೇ ದಶಂಬರ.

ಫ್ರಾನ್ಸ್ ರಣರಂಗದಲ್ಲಿ ಮಿತ್ರಸೈನಿಕರು ಶತ್ರುಗಳ ಕಂದಕ ಗಳನ್ನು ನಾಶಮಾಡುವ ಬಗ್ಗೆ ನಿಪುಣ್ಯವಿನ ಗಣಿಗಳನ್ನು ರೂಪಿಸುವ ಕಲಸದಲ್ಲಿಯೂ ತೋಪುಕಾಳಗದಲ್ಲಿಯೂ ನಿರತರಾಗಿರುವರು. ವಿ ಶೇಷ ಕದನಗಳು ನಡೆದಿರುವದಿಲ್ಲ

ಜೋಫರ್ ಚಕ್ರವರ್ತಿಯವರು ಗುಣಹೊಂದುತ್ತಲಿದ್ದಾರೆ ಚಕ್ರವರ್ತಿಯವರು ವಿಶೇಷ ಬಲಹೀನವಾಗಿರುವರು. ಅವರು ತನ್ನು ಮುಂಚಿನ ಶಕ್ತಿಯನ್ನು ಪಡೆಯುವ ತನಕ ಅಯಾಸದ ಕೆಲ ಸವನ್ನು ಮಾಡಕೂಡದು. ಗುಣಹೊಂದುತ್ತಲಿರುವ ಈ ಕಾಲದಲ್ಲಿ ಸ್ವಲ್ಪ ಮಧ್ಯ ತಕ್ಕೊಳ್ಳಬೇಕಾಗುವದು., ಅನಂತರ ಹಿಂದಿನಂತೆಯೇ ಸ್ಥೈರ್ಯವಾನ ನಿಶೀಧಕರಾಗಿರುವರು ಎಂತ ಚಕ್ರವರ್ತಿಯವರ ಡಾ ಕ್ಟರರು ಪ್ರಕಟಿಸಿರುತ್ತಾರೆ

ಬ್ರಿಟಿಷ ಸೈನಿಕರು ಡ್ಯೂರಾನ್ ಮತ್ತು ಗೆವ್ಗೆಲಿ ಪ್ರಾಂತ್ಯಗ ಳನ್ನು ಬಿಟ್ಟುಹೋಗಿರುತ್ತಾರೆ. ಬಲ್ಗೇರಿಯಾನರು ಗ್ರೀಕ ಸರಹ ದ್ದಿಗೆ ೫ ಮೈಲು ದೂರದಲ್ಲಿರುವರು.

ಇಟಲಿಯನರು ಬೇಗನೇ ೭೦ ಸಾವಿರ ಸೈನಿಕರನ್ನು ಅಲ್ಬಾ ನಿಯಕ್ಕೆ ಕಳುಹಿಸಿಕೊಡುವರೆಂಬ ತಿಳಿದುಬಂದಿದೆ.

ಪರ್ಷಿಯನ್ನಲ್ಲಿನಲ್ಲಿ ಕಠಿಣ ಪಿರಂಗಿಕಾಳಗವು ನಡೆಯುತ್ತಿದೆ. ಸಮುದ್ರನ ಎರಡು ಗಣಿಗಳು ಸಿಡಿದು ತುರ್ಕರ ಕಂದಕಗಳು ಹಾಳಾಗಿರುವವು.

ತಾ. ೧೬ನೇ ದಶಂಬರ.

ಜರ್ಮನರ ಜಲಂತರ್ಗಾಮಿ ನಾವೆಯು ಬ್ರಿಟಿಷರ "ಒಲೀವ್ ಫೀಲ್ಡ್ ಮಾಸೇಲ್" ಎಂಬ ಹಡಗನ್ನು ಮುಳುಗಿಸಿರುತ್ತದೆ. ಇಬ್ಬರು ಚೀನಿಯರು ಕೊಲ್ಲಲ್ಪಟ್ಟಿರುತ್ತಾರೆ.

ಮೆಡಿಟರೇನಿಯನ್ ಸಮುದ್ರದಲ್ಲಿ ಜರ್ಮನರ ಜಲಂತರ್ಗಾಮಿ ನಾವೆಗಳ ಉಪಟಳವನ್ನು ನಿಲ್ಲಿಸುವರೆ ಮಿತ್ರರಾಜ್ಯಗಳವರು ಮಾಡಿದ ಯತ್ನವು ಸಫಲವಾಗಿ ಈಗ ಕಳದ ೧೦ ದಿವಸಗಳಿಂದ ಮೆಡಿಟರೇನಿಯನ್ ಸಮುದ್ರದಲ್ಲಿ ಶತ್ರುಗಳ ಜಲಂತರ್ಗಾಮಿ ನಾವೆಗಳ ಹಾವಳಿಯೇ ಇಲ್ಲವಂತಾಗಿದೆ.

ಫ್ರೆಂಚರ ವಾಯುನಾವೆಗಳು ಮಿಲ್‌ಹೈಮಿನ ಜರ್ಮನರ ರೈಲ್ವೇ ಸ್ಟೇಶನ್ನೂ, ಹೌರಾಯಿಕೋರ್ಟಿನ ಜರ್ಮನರ ಆಯಾ ಕಾರ್ಖಾನೆಗಳ ಮೇಲೂ ಬಾಂಬುಗಳನ್ನು ಎಸೆದಿರುತ್ತವೆ ಭಾಟೆ ಸಾಲಿನ್ಸಿನಲ್ಲಿ ಜರ್ಮನರ ಐದು ವಾಯುನಾವೆಗಳನ್ನು ಫ್ರೆಂಚರ ವಾಯುನಾವೆಗಳು ಓಡಿಸಿರುತ್ತವೆ

ಬ್ರಿಟಿಷರ ತೋಪುಸೇನೆಯು ಸೊಮ್ಮೆಕೊರ್ಟ್ ಲಿಮಿನ್ನಿಲ್ ಎಂಬ ಸ್ಥಳಗಳ ಮೇಲೆ ಗುಂಡುಗಳನ್ನು ಹಾರಿಸಿರುತ್ತದೆ. ಶತ್ರುಗಳ ತೋಪುಗಳು ವೈಪ್ರೆಸಿನ ಉತ್ತರ ಪೂರ್ವದಲ್ಲಿ ಗುಂಡು ಹಾರಿಸ ಪ್ರಾರಂಭಿಸಿಯವೆ ಬ್ರಿಟಿಷರು ಇತರ ಕೆಲವು ಸ್ಥಳಗಳ ವೈರಿಯ ಸಿಡಿಮದ್ದುಗಳನ್ನು ಹಾರಿಸಿ ಶತ್ರುಗಳನ್ನು ವಿಸ್ಮಯಗೊಳಿಸಿರುತ್ತಾರೆ

ಬೆಲ್ಜಿಯಮ್ ಕರಾವಳಿಯಲ್ಲಿ ರೋಂದು ಮಾಡುತ್ತಿದ್ದ ಬ್ರಿಟಿ ಷರ ವಾಯುನಾವಿಕರು ಜರ್ಮನರ ಒಂದು ದೊಡ್ಡ ವಾಯುನಾವೆ ಯನ್ನ ಕಂಡು ಅದನ್ನು ಹಿಂದಟ್ಟಿ ಹೊಡೆದು ಮುಳುಗಿಸಿರುವರು ಅದರಲ್ಲಿದ್ದ ನಾವಿಕರು ಶರ್ತಿರುತ್ತಾರೆ ನಾವೆಯು ನೀರಿನ ಮೇಲೆ ಬೀಳ ವದಕ್ಕಿಂತ ಮೊದಲೆ ಸಿಡಿದುಹೋಗಿರುತ್ತದೆ ಈ ಕದನ ದಲ್ಲಿ ಬ್ರಿಟಿಷರ ವಾಯುನಾವೆಗೂ ಚಕಂ ಆಗಿ, ಸಮುದ್ರಕ್ಕೆ ಬಿದ್ದಿ ರುವದು ಆದರೆ ನಾವಿಕರು ರಕ್ಷಿಸಲ್ಪಟ್ಟಿರುತ್ತಾರೆ

ಜರ್ಮನರ ೩೧,೩೦೦ ಸೈನಿಕರು ಬ್ರಿಟಿಷರ ಸೆರೆ ಸಿಕ್ಕಿರು ತ್ತಾರೆ.

ಜರ್ಮನರು ರುಶ್ಯಾ ರಣರಂಗದ ಪ್ರಾಂತ್ಯದಲ್ಲಿ ಕಂದಕಗ ಳನ್ನು ಬಿಟ್ಟು ಹೋಗಿರುತ್ತಾರೆ

ಆಸ್ಟ್ರಿಯ ಹಂಗೇರಿಯದ ಪ್ರಜಾ ಜನರಲ್ಲಿ ೪೦೦೦ ವಂದಿ ಟೊಸಿನಿಯಾ ಹರ್ಜೆಗೊವಿನಾದಲ್ಲಿ ೭೦೦ ಮಂದಿ, ಬೊಹೇಮಿಯ ದಲ್ಲಿ ೭೫೦ ಮಂದಿ ಪ್ರಜಾ ಜನರು ಈ ಯುದ್ಧ ಕಾಲ ಮರಣ ಶಿಕ್ಷೆಹೊಂದಿದರೆಂಬ ವಾರ್ತೆ ಬಂದದೆ.

ಸರ್ವಿಯರ ಸಹಾಯವಾಗಿ ಹೋದ ಬ್ರಿಟಿಷ ಫ್ರೆಂಚ್ ಸೇನೆ ಗಳೆಲ್ಲಾ ಈಗ ಸಲೋನಿಕವೆಲ್ಲರುವುವು ಬಲ್ಗೇರಿಯನರು ಗ್ರೀಕ ಸರಹದ್ದನ್ನು ದಾಟಿ ಮುಂದರಿಯಲಿಲ್ಲ

ಪರ್ಶಿಯದಲ್ಲಿ ದಂಗೆ ಎದ್ದವರನ್ನು ರುಶ್ಯನರ ಸೈನಿಕರು ಸೋಲಿಸಿ, ಹೆಮಡಾನಿಗೆ ಹತ್ತಿರ ಸೇರುತ್ತಿರುವರು

ಕೈರೋದೆ ಪ್ಶಿಮ ಮರುಭೂಮಿಯಲ್ಲಿ ಬ್ರಿಟಿಷರ ಶತ್ರುಗ ಳಾಗಿದ್ದ ಅರಬಿಯನರನ್ನು ಬ್ರಿಟಿಷ ಸೈನಿಕರು ಅಟ್ಟಿಬಿಟ್ಟಿರುತ್ತಾರೆ ಈ ಕದನದಲ್ಲಿ ಬ್ರಿಟಿಷರಲ್ಲಿ ೧೬ ಮಂದಿ ಮಡಿದರು ೧೪೮ ಮಂದಿ ಗಾಯಪೊಡೆದರು.

ಸೆಟಿಸ್ಪೊನಿನಲ್ಲಿ ನಡೆದ ಕದನದಲ್ಲಿ ಬ್ರಿಟಿಷ ಸೈನಿಕರಲ್ಲಿ ೬೪೩ ಮಂದಿ ಮಡಿದರು ೩೩೩೦ ಮಂದಿ ಗಾಯಪಟ್ಟರು ೫೯೪ ಮಂದಿ ಕಾಣೆಯಾಗಿರುವರು

ತಾ. ೧೭ನೇ ದಶಂಬರ.

"ಅಂಕೋನ" ಎಂಬ ಹಡಗನ್ನು ಮುಳುಗಿಸಿದ ಸಂಬಂಧ ವಾಗಿ ಅಮೇರಿಕ ಸರಕಾರದವರು ಆಸ್ಟ್ರಿಯ ಸರಕಾರದವರಿಗೆ ಕಳುಹಿಸಿಕೊಟ್ಟ ಪತ್ರಕ್ಕೆ ಆಸ್ಟ್ರಿಯದವರು ಸಮರ್ಪಕವಾದ ಉ ತ್ತರ ಕೊಟ್ಟಿರುವದಿಲ್ಲವೆಂತ ತಿಳಿದು ಬರುತ್ತದೆ

ಟ್ರಿಸಲೆವಾಲ್ ಪ್ರಾಂತ್ಯದಲ್ಲಿ ಫ್ರೆಂಚರ ದೊಡ್ಡ ಸಿಡಿಮದ್ದಿನ ಗುಂಡುಗಳು ಶತ್ರುಗಳ ಮದ್ದುಗುಂಡುಗಳ ಕೊಟಡಿಯನ್ನು ಹಾರಿಸಿ ರುತ್ತದೆ. ಪೊಸೆಜಿನಿನಲ್ಲಿ ಹಾಳುಮಾಡಲ್ಪಟ್ಟ ಕಂದಕಗಳನ್ನು ಶತ್ರುಗಳು ಸರಿಪಡಿಸುತ್ತಿರುವಾಗ ಮಿತ್ರರ ಬಕ್ಷೀರಿಗಳು ಅವಕ್ಕೆ ಗುಂಡುಹಾರಿಸಿ ಆ ಕೆಲಸವನ್ನು ತಡೆಯಿರುತ್ತದೆ.

ಫ್ರಾನ್ಸ್ ಮತ್ತು ಫ್ಲೆಂಡರಿನಲ್ಲಿ ಬ್ರಿಟಿಷ ಸೇನಾಧಿಪತಿಯಾ ಗಿದ್ದ ಫೀಲ್ಡ್ ಮಾರ್ಸೆಲ್ ಸರ್ ಜಾನ್ ಫ್ರೆಂಚರವರು ಬ್ರಿಟಿಷ ರಾಜ್ಯದ ಭದ್ರತೆಯ ಬಗ್ಗೆ ಇಂಗ್ಲಾಂಡ್,ವೇಲ್ಸ್ ಐರ್ಲಾಂಡ್, ಸ್ಕಿಟ್ಲಾಂಡಿನಲ್ಲಿರುವ ಬ್ರಿಟಿಷ ಸೇನೆಯ ಫೀಲ್ಡ್‌ಮಾರ್ಷಲ್‌ರಾಗಿ ನೇಮಿ ಸಲ್ಪಟ್ಟಿರುತ್ತಾರೆ. ಯುದ್ಧ ಪ್ರಾರಂಭವಾಗಿ ಕಳದ ೧೬ ತಿಂಗಳಲ್ಲಿ ಫೀಲ್ಡ್ ಮಾರ್ಸೆಲ್ ಫ್ರೆಂಚರವರು ಫ್ರಾನ್ಸ್ ಮತ್ತು ಫ್ಲೆಂಡರಿನಲ್ಲಿ ಬ್ರಿಟಿಷ ಸೇನಾಧಿಪತಿಯಾಗಿದ್ದು ವಿಶೇಷ ಸಾಮರ್ಥ್ಯವನ್ನು ತೋರ್ಪ ಡಿಸಿದ್ದರು. ಈಗ ತಾನಾಗಿ ಆ ಕೆಲಸವನ್ನು ಬಿಟ್ಟಿರುತ್ತಾರೆ. ಸರ್ ಜಾನ್ ಫ್ರೆಂಚರವರು ಫ್ರಾನ್ಸಿನಲ್ಲಿ ತೋರಿಸಿದ ಕಾರ್ಯಕ್ರಮ ವನ್ನು ಜೋರ್ಜ ಚಕ್ರವರ್ತಿಯವರು ಮಾನ್ಯಮಾಡಿ ಅವರಿಗೆ ವಿಸ್ಕೌಂಟ್ ಎಂಬ ಬಿರುದನ್ನು ದಯಪಾಲಿಸಿರುತ್ತಾರೆ

ಜರ್ಮನರ ಸೇನೆಗಳೂ ಯುದ್ಧ ಸಾಮಾಗ್ರಿಗಳೂ ಫ್ಲೇಂಡ ರಿಗೆ ಬರುತ್ತಲಿವೆಂದೂ ಜರ್ಮನರು ಫ್ಲೇಂಡರ್ ರಣರಂಗದಲ್ಲಿ ದೊಡ್ಡ ಯುದ್ಧಮಾಡಲು ನಿರ್ಧಾರಿಸಿರುವರೆಂದೂ ತಿಳಿದುಬರು ತ್ತದೆ

ಕ್ಯೆಸರರು ರಣಂಗದಿಂದ ಬರ್ಲಿನ್ ನಗರಕ್ಕೆ ಹೋಗಿರು ವರು ಕೆಲವು ಸಮಯ ಅಲ್ಲಿಯೇ ಇರುವರೆಂಬ ವಾರ್ತೆ ಇದೆ

ರುಶ್ಯದ ಸಿಪಾಯಿ ರಣರಂಗದಲ್ಲಿ ಒಂದು ಘೋರ ಯುದ್ಧ ನಡಿಸುವ ಬಗ್ಗೆ ಜರ್ಮನರು ಫಿರಂಗಿಗಳನ್ನೂ ಸೇನೆಗಳನ್ನೂ ತಂದೊ ಡ್ಡುತ್ತಿರುವರೆಂಬ ವಾರ್ತೆ ಇದೆ.

ರುಶ್ಯನರು ಸೊರ್ಗೊನ್ ಎಂಬ ಸ್ಥಳವನ್ನು ಜರ್ಮನರಿಂದ ಹಿಂದಕ್ಕೆ ಪಡಕೊಂಡಿರುತ್ತಾರೆ

ಬಾಲ್ಕಾನ್ ರಣರಂಗದಲ್ಲಿ ವಿಶೇಷ ಕದನಗಳು ನಡೆಯಲಿಲ್ಲ. ಬಲ್ಗೇರಿಯನರು ಡುರೊಕ್ಕೊ ಪಟ್ಟಣಕ್ಕೆ ೧೫ ಮೈಲು ದೂರದಲ್ಲಿರು ವರು

ಟರ್ಕಿಯರ ೬೫೦,೦೦೦ ಸೈನಿಕರು ರಣರಂಗದಲ್ಲಿರುವ ರೆಂತ ಅಂದಾಜಾಗಿದೆ

ತುರ್ಕರು ಈವರೆಗೆ ೨ ಮಿಲಿಯ ಅರ್ಮೀನಿಯರಲ್ಲಿ ಒಂದು ಮಿಲಿಯ ಅರ್ಮೀನಿಯರನ್ನು ಕೊಂದ ಹಾಕಿದರೆಂಬ ದುಃಖಕರ ವಾದ ವಾರ್ತೆ ಬಂದಿರುವದು.

ತಾ. ೧೮ನೇ ದಶಂಬರ.

ಜರ್ಮನರಿಗೆ ಅಮೇರಿಕಾದಿಂದ ವಾರ್ಸೆಲ್ ಪೋಸ್ಟು ಮೂಲಕ ಆಹಾರಸಾಮಗ್ರಿಗಳು ಸಾಗುತ್ತಲಿವೆ ಇಂಥಾ ಸಂಗತಿಗಳು ನಡೆಯದ ಹಾಗೆ ಬ್ರಿಟಿಷ ಸರಕಾರದವರು ತಕ್ಕ ಏರ್ಪಾಡು ಮಾಡು ತ್ತಿರುವರು

ಬೃಸೆ ಮತ್ತು ಏನೆಯ ಮಧ್ಯೆ ಇದ್ದ ಜರ್ಮನರ ಮದ್ದುಗುಂ ಡುಗಳ ಇನ್ನೊಂದು ಕೊಠಡಿಯನ್ನು ಮಿತ್ರಸೈನಿಕರು ಹಾರಿಸಿರು ತ್ತಾರೆ.

ಅರ್ಮೆಂಟಿಯರಿನ ಸಮೀಪವಿದ್ದ ಜರ್ಮನರ ಕಂದಕಗಳನ್ನು ಬ್ರಿಟಿಷ್ ಸೈನಿಕರು ಹಿಡದಿರುತ್ತಾರೆ. ಶತ್ರುಗಳಲ್ಲಿ ೭೦ ಮಂದಿ ಮಡಿದಿರುವರು ಮೈಪ್ರೆಸಿನಲ್ಲಿ ಎರಡು ಕಡೆಗಳ ಸೇನಿಕರೂ ಫಿರಂಗಿ ಗಳನ್ನ ಹಾರಿಸುತ್ತಲಿದ್ದಾರೆ

ಆಸ್ಟ್ರಿಯ ಮತ್ತು ಬಲ್ಗೇರಿಯನರು ಆಲ್ಬಾನಿಯವನ್ನ ಸ್ವಾಧೀನ ಮಾಡಿಕೊಳ್ಳುವ ಉದ್ದೇಶದಿಂದಿರುವರು ಆಸ್ಟ್ರಿಯನರು ಮೊಂಟೆ ನಿಗ್ರೊವನ್ನು ಹತಬಡಿಸಿ ಸಾನಿಗಿಯೊನ್ನಿಗೆ ಮುಂದರಿದು ಎಲ್‌ಬಾ ಸನ್ ಮತ್ತ ಟಿರಾನಿಗೆ ಮುಂದರಿದ ಬಲ್ಗೇರಿಯನರ ಸೈನಿಗೆ ಹೋಗಿ ಕೂಡಿ ಆಲ್ಬಾನಿಯವನ್ನು ವಶಮಾಡಿಕೊಳ್ಳಲಿಕ್ಕಿರುವರು. ಹೀಗೆ ಬೇಗನೇ ಆಲ್ಬಾನಿಯವು ಮುಖ್ಯ ರಣರಂಗವಾಗುವದು ಎಂತ ಇಟ ಲಿಯಲ್ಲಿ ಪ್ರಕಟವಾಗಿದೆ ಸರ್ವಿಯನರ ಕೆಲವು ಸಾವಿರ ಹೆಂಗ ಸರೂ ಮಕ್ಕಳೂ ಅಲ್ಬಾನಿಯದಲ್ಲಿ ಮರೆಸೀರಿ, ಆಹಾರವಿಲ್ಲದೆ ಕಷ್ಟವಡುತ್ತಿರುವರು ಇತರರೆಲ್ಲಾ ಇಟಲಿಗೆ ತರಲು ಆಮೇರಿಕ ಸರಕಾರದವರು ಏರ್ಪಾಡು ಮಾಡುತ್ತಿದ್ದಾರೆ.

ಇಟಲಿ ರಣರಂಗದಲ್ಲಿ ತೋಪುಕಾಳಗವು ನಡೆಯುತ್ತಿದೆ.

ತಾ. ೧೯ನೇ ದಶಂಬರ.

ಫ್ರೆಂಚರು ಜರ್ಮನರ ಒಂದು ಕ್ರೂಜರ್ನೌನ್ ನಾವೆಯನ್ನು ಹಿಡಿದಿರುತ್ತಾರೆ ಫ್ರೆಂಚರ ಒಂದು ಕ್ರೂಜರ್ ನಾವೆಯು ಹೆಫೀ ಯದಲ್ಲಿದ್ದ ಜರ್ಮನರ ಯುದ್ಧ ಸಾಮಾಗ್ರಿಗಳನ್ನು ಮಾಡುವ ಒಂದು ಕಾರ್ಖಾನೆಯನ್ನು ಪೂರ್ಣವಾಗಿ ನಾಶಪಡಿಸಿರುತ್ತದೆ.

ಪೂರ್ವ ಬಾಲ್ಟಿಕ್ ಸಮುದ್ರದಲ್ಲಿ ಜರ್ಮನರ "ಪ್ರಿನೆನ್" ಎಂಬ ಕ್ರೂಜರ್ ನಾವೆಯು ಮುಳುಗಿಸಲ್ಪಟ್ಟಿರುತ್ತದೆ.

ಇಟಲಿಯನರ "ಪೋರ್ಟು ಸೆಡ್" ಮತ್ತು ಬ್ರಿಟಿಷರ "ಥಿವರ್‌ಹೂಲ್" ನೋರ್ವೇ ದೇಶದವರ "ನಿಕೊ" ಎಂಬ ಹಡಗ ಗಳನ್ನು ಜರ್ಮನರ ಜಲಂತರ್ಗಾಮಿ ನಾವೆಗಳು ಮುಳುಗಿಸಿರುತ್ತವೆ.

"ಅಂಕೋನ" ಹಡಗನ್ನು ಆಸ್ಟ್ರಿಯನರು ಮುಳುಗಿಸಿದ ಸಂಬಂಧವಾಗಿ ಅಮೇರಿಕದವರು ಆಸ್ಟ್ರಿಯ ಸರಕಾರದವರ ಕೆಲ

ಕೀಳಕೊಂಡ ತಗಾದೆಗಳಿಗೆ ಆಸ್ಟ್ರಿಯ ಸರಕಾರದವರು ತಕ್ಕ ಉತ್ತರ ಕೊಡದ್ದರಿಂದ ಅಮೇರಿಕ ಸರಕಾರದವರು ಪುನಃ ಒಂದು ಪತ್ರವನ್ನು ಆಸ್ಟ್ರಿಯ ಸರಕಾರದವರಿಗೆ ಕಳುಹಿಸಬೇಕೆಂದಿರುವರು

ಫ್ರಾನ್ಸ್ ರಣರಂಗದಲ್ಲಿ ಮೇಲಾಯುತ್ತಿರುವ ಜರ್ಮನರನ್ನು ಮಿತ್ರಸೇನಿಕರು ಅಲ್ಲಲ್ಲಿ ಸೋಲಿಸುತ್ತಲಿರುವರು.

ಮಿತ್ರರ ವಾಯುನಾವೆಗಳು ಜರ್ಮನರ ಮೆಸ್ಸ್ ಪಟ್ಟಣದ ಮೇಲೆ ಬೊಂಬುಗಳನ್ನು ಎಸೆದಿರುತ್ತವೆ

ಪಾರ್ಶಿಯಾನದಲ್ಲಿ ರುಶ್ಯನರು ಹೆಮದಾನನ್ನು ವಶವಾಡಿಕೊಂಡು ಕಮ್ ಎಂಬ ಸ್ಥಳಕ್ಕೆ ಮುಂದರಿಯುತ್ತಲಿದ್ದಾರೆ

ತಾ. 17ನೇ ದಶಂಬರ.

ಬೆಲ್ಜಿಯಮಿನಲ್ಲಿ ಕದನವು ತೊಡಗಿರುವದು ಆಸ್ಟ್ರೋಸ್, ಸೊಮ್ಮೆ ಮತ್ತು ವೊಸೆ ಪ್ರಾಂತ್ಯದಲ್ಲಿ ಫ್ರೆಂಚರ ವಿರಂಗಿಗಳು ಶತ್ರುಗಳ ಕಂದಕ ಇತ್ಯಾದಿಗಳನ್ನು ನಾಶಮಾಡಿರುತ್ತವೆ

ಡರ್ಡನೆಲ್ಲಿಸ್‌ನಲ್ಲಿ ತೋಪು ಕಾಳಗವು ನಡೆಯುತ್ತಿರುತ್ತದೆ

ಪಾರ್ಶಿಯಾನದಲ್ಲಿ ತೆಹರಾನ್ ಮತ್ತು ಮಧ್ಯೆ ಶತ್ರುಗಳ ಒಂದು ದೊಡ್ಡ ಸೇನೆಯನ್ನು ರುಶ್ಯನರು ಅಟ್ಟಿರುತ್ತಾರೆ

ವಿದೇಶ ವೃತ್ತಾಂತ

ಮೆ. ಮೆಕನ್ನಾರವರು ಹಿಂದೂಸ್ಥಾನದ ವ್ಯಾಸರಾಯರಾಗಿ ನೇಮಿಸಲ್ಪಡುವೆಂಬ ವಾರ್ತೆಗೆ ಆಧಾರವಿಲ್ಲವೆಂಬದಾಗಿ ಬ್ರಿಟಿಷ ಸರಕಾರದವರು ಪ್ರಕಟಿಸಿರುವರು.

ಇಂಗ್ಲಾಂಡಿನ ಸೌತ್‌ಶೀಲ್ಡ್ ಎಂಬಲ್ಲಿ ಒಂದು ಪ್ಯೂನು ಬಂಡಿಯು ಮತ್ತೊಂದು ಟ್ರೇನಿಗೆ ತಗಲಿ ದೊಡ್ಡ ಅವಗಡ ಉಂಟಾಗಿರುವದು ಬಂಡಿಯಲ್ಲಿದ್ದ ಕೆಲವು ಹೆಂಗಸರೂ ಮಕ್ಕಳೂ ನಜ್ಜುಗುಜ್ಜಾಗಿರುವರು. ಬಂಡಿಯಲ್ಲಿ ಗ್ಯಾಸು ತುಂಬಿದ್ದು ಮೊದಲಿನ ಎರಡು ಬಂಡಿಗಳಿಗೆ ಬೆಂಕಿ ತಾಗಿಕೊಂಡಿತು ಬಂಡಿಯಲ್ಲಿದ್ದವರಲ್ಲಿ ಹೆಚ್ಚಿನವರಿಗೆ ಅಪಾಯ ಸಂಭವಿಸಿರುವದ. ೧೮ ಮಂದಿ ಮೃತರಾಗಿರುವರು ಎಂಬ ವಾರ್ತೆ ಬಂದಿದೆ

ಅಮೇರಿಕದ ಸಂಯುಕ್ತ ಸಂಸ್ಥಾನದ ಪ್ರೆಸಿಡೆಂಟ್ ವಿಲ್ಸನರು ವಿ.ಸಸ್ ಗಾಲ್ಟ್ ಎಂಬಾಕೆಯನ್ನು ವಿವಾಹ ಮಾಡಿಕೊಂಡರು. ವಿವಾಹವು ವಿಶೇಷ ವಿಜೃಂಭಣೆ ಇಲ್ಲದೆ ಸಾಧಾರಣ ರೀತಿಯಲ್ಲಿ ನಡೆದಿರುತ್ತದೆ

ಬೆಲ್ಜಾವಿನಲ್ಲಿ ಪೋಲಿಸ್ ಡ್ಯೂಟಿ ಇನ್ಸ್‌ಪೆಕ್ಟರ್ ಜನರಲರಾಗಿದ್ದು ತೀವ್ರಿಗೆ ಹೋಗಿದ್ದ ಚಾರ್ಲ್ಸ್ ಬೆಟ್ಟಿ ದೊರೆಗಳವರು ತಾ ೧೫ರಲ್ಲಿ ಬೆಲ್ಜನ್‌ಹಾವಿನಲ್ಲಿ ಸ್ವೀಕೃತಮಾಡಿಕೊಂಡಿರುವರು.

ಉತ್ತರ ಹಿಂದೂಸ್ಥಾನ.

ವ್ಯಾಸರಾಯ ಪ್ರಭುಗಳವರು ಪಂಜಾಬನ್ನು ಸಂದರ್ಶಿಸಿಕೊಂಡು ತಾ. 12ರಲ್ಲು ದಿಲ್ಲಿಗೆ ಹಿಂದಿರಿಗಿ ಬಂದಿರುತ್ತಾರೆ ಪ್ರಭುಗಳವರು ಕ್ರಿಸ್‌ಮಸ್ ಹಬ್ಬವನ್ನು ಗ್ವಾಲಿಯೋರಿನಲ್ಲಿ ಕಳೆಯಬೇಕೆಂದಿರುವರು.

ದರ್ಭಂಗ ಮಹಾರಾಜರವರು ಸುಕ್ಕೂರಿಗೆ ಜೆತ್ತೈಸಿದರು. ಅಲ್ಲಿ ಅವರಿಗೆ ಅರ್ಪಿಸಿದ ಬಹುಮಾನ ಪತ್ರಗಳಿಗೆಲ್ಲಾ ಮಹಾರಾಜರವರು ಸಂಸ್ಕೃತ ಭಾಷೆಯಲ್ಲಿ ಉತ್ತರ ಕೊಟ್ಟಿರುವರು.

ಮಾಜಿ ಸರ್ ಮೇಥರವರ ಜ್ಞಾಪಕಾರ್ಥವಾಗಿ ಏನಾದರೂ ಸ್ಮಾರಕವನ್ನು ಮಾಡಬೇಕೆಂಬ ವಿಷಯವನ್ನು ಆಲೋಚಿಸುವ ಬಗ್ಗೆ ಕಳದ ಶುಕ್ರವಾರ ಮುಂಬಾಯಲ್ಲಿ ರಾಷ್ಟ್ರೀಯ ಸಭೆಯ ಮಂಟಪದಲ್ಲಿ ಒಂದು ಸಭೆಯು ಕೂಡಿತು ವಿಶಾಲವಾದ ಮಂಟಪದಲ್ಲಿ ಜನರು ಕಿಕ್ಕಿರಿದು ತುಂಬಿದರು ಮುಂಬಾಯಿ ಗವರ್ನರ ಪ್ರಭುಗಳವರು ಸಭೆಯ ಅಧ್ಯಕ್ಷರಾಗಿದ್ದರು. ಸಭೆಯ ಕಾರ್ಯವು ಸ್ವಾರಂಭೆಸವಾಗಲೇ ವ್ಯಾಸರಾಯ ಪ್ರಭುಗಳವರಿಂದ ಬಂದ ತಂತಿಯನ್ನು ಗವರ್ನರ ಪ್ರಭುಗಳವರು ಓದಿ ಹೇಳಿದರು ಈ ತಂತಿಯಲ್ಲಿ ಹೀಗೆಂದು ಬರೆದಿದ್ದಿತು. "ಸರ್ ಪೆರೋಜಿಶಾ ಮೇಧಾವರವರ ಮರಣದಿಂದುಂಟಾದ ವಿಷಾದವನ್ನು ತೋರ್ಪಡಿಸಿ, ಅವರ ಜ್ಞಾಪಕಾರ್ಥವಾದ ಸ್ಮಾರಕವನ್ನು ಮಾಡಬೇಕೆಂಬ ಉದ್ದೇಶದಿಂದ ಈ ದಿನ ಕೂಡಿ ಬಂದ ಮುಂಬಾಯಿ ಪಟ್ಟಣಿಗರೊಡನೆ ನಾನೂ ಸಹಭಾಗಿಯಾಗಿ ಸೇರಲು ಸಂತೋಷಪಡುತ್ತೇನೆ. ಸರ್ ಪೆರೋಜೆಶಾ ಮೇಥರವರು ಶ್ರೇಷ್ಠವಾದ ಪಾರ್ಶಿಯೂ ಶ್ರೇಷ್ಠನಾದ ದೇಶಭಕ್ತನೂ ಶ್ರೇಷ್ಠನಾದ ಭಾರತೀಯನೂ ಆಗಿರುತ್ತಾರೆ ಮತ್ತು ಮುಖ್ಯವಾಗಿ ಈ ಸಮಯದಲ್ಲಿ ಹಿಂದೂಸ್ಥಾನವು ಅವರನ್ನು ಕಳಕೊಂಡದ್ದು ಹಿಂದೂಸ್ಥಾನದ ದುರದೃಷ್ಟವಾಗಿದೆ. ನನ್ನ ಸಹಕಾರವನ್ನು ಮೇಥರವರ ಪತ್ನಿಯವರಿಗೆ ಕಳುಹಿಸಿ ಕೊಡಿರಿ. ಈ ದಿನ ಕೂಡಿದ ಸಭೆಯು ನಿರ್ಣಯಿಸುವ ಯಾವದಾದರೊಂದು ಸ್ಮಾರಕದ ಬಗ್ಗೆ ನಾನು 1000 ರೂಪಾಯಿ ವಂತಿಗೆ ಹಾಕುತ್ತೇನೆ" ಅನಂತರ ಮುಂಬಾಯಿ ಗವರ್ನರ ಪ್ರಭುಗಳವರೂ ಇತರ ಆಯಾ ಜಾತಿಯ ಪ್ರತಿನಿಧಿಗಳೂ ಮೇಧಾವರವರ ಗುಣ ಕಥನವನ್ನು ಮಾಡಿದರು ಕಡೆಗೆ ಸರ್. ಮೆಧಾವರವರ ಹೆಸರಲ್ಲಿ ಏನಾದರೊಂದು ಸ್ಮಾರಕ ಯಾ ಸ್ಮಾರಕಗಳನ್ನು ಮಾಡುವ ವಿಷಯ ಆಲೋಚಿಸಿ, ತಕ್ಕ ಏರ್ಪಾಡು ಮಾಡುವರೆ ಒಂದು ಕಮಿಟಿಯು ನೇಮಕವಾಯಿತು.

ಹಿಂದೂಗಳ ಹೆಸರಲ್ಲಿ ಮುಸಲ್ಮಾನ ಲೀಗಿನವರಿಗೆ ಒಂದು ಗಾರ್ಡನ್ ಪಾರ್ಟಿ ಕೊಡುವ ಏರ್ಪಾಡು ಮಾಡುವರೆ ಮುಂಬಾಯಲ್ಲಿ ಒಂದು ಕಮಿಟಿಯು ಏರ್ಪಾಡಾಗಿಯಿದೆ ಈ ಗಾರ್ಡನ್ ಪಾರ್ಟಿಗೆ ಸುಮಾರು 6000 ರೂಪಾಯಿ ಖರ್ಚು ತಗಲುವದೆಂತ ಅಂದಾಜಾಗಿರುವದು. ಹಿಂದೂ ಮತದವರಿಂದ ಮಾತ್ರ ಈ ಒಗ್ಗೆ ರೂ. 4ರಿಂದ ರೂ. 50 ವರೆಗೆ ವಂತಿಗೆಗಳನ್ನು ಎತ್ತಬಹುದೆಂಬ ನಿರ್ಣಯವಾಗಿದೆ

ಕಲ್ಕತ್ತೆಯ ಮೆಕ್‌ಲೀಡ್ ಕಂಪೆನಿಯ ಹೆಸರಿನಿಂದ 12500 ರೂಪಾಯಿಯ "ಚೇಕ್"ನ್ನು ಒಂಗಾಳ ಬೇಂಕಿನಲ್ಲಿ ವರಾಯಿಸಲು ಒಂದಿದ್ದ 17 ವರ್ಷ ವಯಸ್ಸಿನ ಒಬ್ಬ ಬಂಗಾಳಿ ಯುವಕನನ್ನು ಪೋಲಿಸಿನವರು ಕೈದು ಮಾಡಿರುತ್ತಾರೆ ಬೇಂಕ್ ಮೇಲಾಧಿಕಾರಿಗಳಿಗೆ ಚೇಕನ್ನು ನೋಡಿ ಅನುಮಾನ ಹುಟ್ಟಿದ್ದರಿಂದ ಟೆಲಫೂನ ಮೂಲಕ ಮೆಕ್‌ಲೀಡ್ ಕಂಪೆನಿಯವರನ್ನು ಕೇಳಿಕೊಳ್ಳಲು ಕಂಪೆನಿಯ ಮೆನೇಜರನು ಕೂಡಲೇ ಬೇಂಕಿಗೆ ಬಂದು ಆ ಯುವಕನು ತಂದಿದ್ದ "ಚೇಕು" ತಮ್ಮದಲ್ಲವೆಂತ ತಿಳಿಯಪಡಿಸಿದನು. ಕೆಲವು ತಿಂಗಳ ಹಿಂದೆ ಇದೇ ಕಂಪೆನಿಯ ಹೆಸರಿಂದ ಫೋರ್ಜರಿ "ಚೇಕ"ನ್ನು ತೋರಿಸಿ ಯಾರೋ 1500 ರೂಪಾಯಿ ಕೊಂಡು ಹೋಗಿರುವರು. ಆದರೆ ಇದು ಈ ವರೆಗೆ ಪತ್ತೆಯಾಗಲಿಲ್ಲ.

ಪಂಜಾಬಿನ ನಾಯುನಾವೆ ಫಂಡಿಗೆ ಫರಿದ್‌ಕೋಟ್ ರಾಜರವರು 70,000 ರೂಪಾಯಿ ವಂತಿಗೆ ಕೊಟ್ಟಿರುವರು.

ಮುಂಬಾಯಿಯ ಕಾರ್ಖಾನೆಗಳ ಮ್ಯಾನೇಜೀಕರಲಿ ಪ್ರಖ್ಯಾತರಾದ ಮೆ: ಬೊಮ್ಮಾನ್ಜಿ ಡಿ. ಪೆಟಿಟರವರು ಇದೇ ತಾ. 18ರಲ್ಲಿ ತನ್ನ 92ನೇ ವಯಸ್ಸಿನಲ್ಲಿ ಮೃತರಾದರು. ಮೃತರು ಮಾಜಿ ಸರ್. ಡಿನ್‌ಶಾ ಮಂಕೋಜಿ ಪೆಟಿಟರ ವರ ಮಗ. ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಕೂಲಿಯಾಳುಗಳ ಕೆಲಸ ಮಾಡುವ ಕಾಲವನ್ನು ಕಮ್ಮಿ ಮಾಡುವ ಹಾಗೆ ಮೃತರು ಬಹಳವಾಗಿ ಪ್ರಯತ್ನಪಟ್ಟಿದ್ದರು. ಕಾರ್ಖಾನೆಗಳ ಸಂಬಂಧವಾದ ಅಕ್ಕು ಇವರ ಈ ಪ್ರಯತ್ನದಿಂದಲೇ ಜಾರಿಗೆ ಬಂದಿತ್ತು. ಇವರು ತನ್ನ ಜೀವಕಾಲ 13 ಲಕ್ಷ ರೂಪಾಯಿ ಧರ್ಮಕಾರ್ಯಗಳಿಗಾಗಿ ವ್ಯಯೋಗಿಸಿದ್ದರು.

ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲು ಸಭೆಯು ಫೆಬ್ರುವರಿ ತಾ. 15ರಲ್ಲು ಕೂಡಿಬರುವದು.

ತಾ. 15ರಲ್ಲು ಸಿಮ್ಲದಲ್ಲಿ 4 ಅಂಗುಲ ಎತ್ತರಕ್ಕೆ ಹಿಮ ಬಿದ್ದಿರುತ್ತದೆ.

ವಿಶ್ವೇಶ್ವರವಾದಿಗಳ ಮಹಾಸಭೆಯು ಡಾಕ್ಟರ್ ನೀಲರತ್ನ ಸರ್ದಾರರವರ ಅಧ್ಯಕ್ಷತೆಯಲ್ಲಿ ಇದೇ ತಾ. 25, 26ರಲ್ಲು ಕೂಡಿಬರುವದು.

ದಶಂಬರ ತಾ 11ಕ್ಕೆ ಅಂತ್ಯವಾಗುವ ವಾರದಲ್ಲಿ ಹಿಂದೂಸ್ಥಾನದಲ್ಲೆಲ್ಲಾ 5647 ಮಂದಿಗೆ ಪ್ಲೇಗಬೇನೆಯು ಸೋಂಕಿ 4444 ಮಂದಿ ವ್ಯತರಾಗಿರುವರು ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ 1872; ಮದ್ರಾಸ್ 244; ಬಿಹಾರ್ ಮತ್ತು ಒರಿಸ್ಸ 99; ಸಂಯುಕ್ತ ಸಂಸ್ಥಾನ 473, ಪಂಜಾಬು 73; ಬರ್ಮ 94; ಮಧ್ಯಸಂಸ್ಥಾನ 490, ಮೈಸೂರು 135; ಹೈದರಾಬಾದ್ 779; ಮಧ್ಯ ಹಿಂದೂಸ್ಥಾನ 184; ರಜಪುತಾನ 1; ಕಾಶ್ಮೀರ 20 ಮರಣಗಳಾದವು.

1916ನೇ ಇಸವಿಯ ರಾಷ್ಟ್ರೀಯ ಸಭೆಯು ಲಕ್ನೌ ನಗರದಲ್ಲಿ ಕೂಡಬೇಕೆಂಬದಾಗಿ ಯುನೈಟೆಡ್ ಪ್ರೊವಿನ್ಸಿನ ಕಾಂಗ್ರೆಸ್ ಕಮಿಟಿಯವರು ಸೂಚಿಸಿರುವರು.

ಬಹುಮಾನಪಟ್ಟ ರಾಜ ಮಹೇಂದ್ರ ನಾರಾಯಣ ರೋಯಿ ಚೌದುರಿಯವರು ಬಂಗಾಳ ಎಂಬ್ಯುಲೆನ್ಸ್ ಕೋರಿಗೆ ಅರ್ಧಲಕ್ಷ ರೂಪಾಯಿ ದಾನಮಾಡಿರುವರು.

ಕಿಷನ್‌ಗಾರ ಮಹಾರಾಜರವರು ಹಿಂದೂ ಯುನಿವರ್ಸಿಟಿ ಫಂಡಿಗೆ ಅರ್ಧಲಕ್ಷ ರೂಪಾಯನ್ನೂ ಝಲವಾರ ರಾಜರವರು ವರ್ಷ 1ಕ್ಕೆ ರೂ. 1000 ವಂತಿಗೆಯನ್ನೂ ಕೊಡಲು ಒಪ್ಪಿರುವರು.

ಬಹುಮಾನ ಪಟ್ಟ ಸರ್ ವಿಲಿಯಂ ಕ್ಲಾರ್ಕರವರು ಗವರ್ನರ್ ಜನರಲ್ ಪ್ರಭುಗಳ ಕೌನ್ಸಿಲಿನ ವೈಸ್ ಪ್ರೆಸಿಡೆಂಟರಾಗಿ ನೇಮಿಸಲ್ಪಟ್ಟಿರುತ್ತಾರೆ.

"ಅಲ್ ಇಂಡಿಯಾ ಟೆಂಪರೆನ್ಸ್ ಕನ್ವೆನ್ಶನ್" ಎಂಬ ಮದ್ಯಪಾನ ನಿವಾರಣಾಸಭೆಯು ಇದೇ ತಾ. 30ರಲ್ಲು ಮುಂಬಾಯಲ್ಲಿ ಕೂಡಿಬರುವದು.

ದಕ್ಷಿಣ ಹಿಂದೂಸ್ಥಾನ.

ಇದೇ ತಾ. 15ರಲ್ಲು ಕುಣಿಗ್ಗಿರು ಸ್ಟೇಶನಿನಿಂದ ರೈಲ್ವೇ ಂಡಿಯು ಹೊರಡಲಿಕ್ಕಿರುವಾಗ ಒಬ್ಬ ಪ್ರಯಾಣಿಕನು ೂಯಮುತ್ತೂರಿಗೆ ಹೋಗುವ ಬಗ್ಗೆ 1 ರೂಪಾಯಿ ೊಟ್ಟು ಟಿಕೇಟು ಪಡಕೊಂಡನು. ಆ ರೂಪಾಯಿಯು ಳ್ಳೆ ನಾಣ್ಯವಾಗಿದ್ದುದರಿಂದ ಪೋಲೀಸಿನವರು ಆ ಪ್ರಯಾ ಿಕನನ್ನೂ, ಟಿಕೇಟನ್ನು ಒಬ್ಬ ಮಹಮ್ಮದೀಯನ ಬಗ್ಗೆ ೊಂಡುಕೊಂಡೆನೆಂದು ಆವನು ಹೇಳಿದ್ದರಿಂದ ಆ ಮಹ ್ಮದೀಯನನ್ನೂ ಕೈದು ಮಾಡಿರುತ್ತಾರೆ

ಮದ್ರಾಸ್ ಹೈಕೋರ್ಟು ವಕೀಲರು ಮತ್ತು ನೇವ್ಸ್ ರೋಯೆಲ್ ಕಮಿಷನಿನ ಮುಂದೆ ಸಾಕ್ಷಿಗಾರ ಾಗಿ ಮದ್ರಾಸ್ ಸರಕಾರದವರಿಂದ ನೇಮಿಸಲ್ಪಟ್ಟಿದ್ದ ರಾ। ಎಮ್. ಆರ್. ಸುಂದರಾಮ ಅಯ್ಯರರು ತನ್ನ ಹಣ ನ್ನು ಮದ್ರಾಸ್ ಬೇಂಕಿನಲ್ಲಿ ಇಟ್ಟಿರುವದು ಸುಳ್ಳು ಹೇಳಿ ಂಗ್ಲಾಂಡಿನ ಬೇಂಕಿನಿಂದ ಹಣವನ್ನು ಪಡಕೊಂಡೆಂಬ ಕ್ಷೀರಿನ ಮೇಲೆ ವಿಚಾರಣೆಗೆ ಗುರಿಮಾಡಲ್ಪಟ್ಟಿದ್ದರು. ಈ ಮೊಕದಮೆಯು ಮದ್ರಾಸ್ ಜೀಫ್ ಪ್ರೆಸಿಡಿನ್ಸಿ ಮೆಜಿ ್ಟ್ರೇಟ್ ಕೋರ್ಟಿನಲ್ಲಿ ತನಿಕೆಯಾಗಿ ಆಪಾದಿತನಿಗೆ 1½ ವರ್ಷಗಳ ಕರಿಣ ಸಜಾ ವಿಧಿಸೋಣಾಗಿರುತ್ತದೆ.

ಇದೇ ತಾ. 20ರಲ್ಲು ಆಲ್ ಇಂಡಿಯ ಆಯುರ್ವೇ ಿಕ್ ಕನ್ಫರೆನ್ಸ್ ಮದ್ರಾಸಿನ ವಿಕ್ಟೋರಿಯಾ ಪಬ್ಲಿಕ್ ಹೋಲಿನಲ್ಲಿ ಕೂಡಿಬಂತು. ಈ ಮಹಾ ಸಭೆಗೆ ಕವಿ ರಾಜ ಜಾಮಿನಿ ಭೂಷಣ ರೋಯಿರವರು ಅಧ್ಯಕ್ಷರಾಗಿ ದ್ದರು. ಸರ್ ಸುಬ್ರಮಣಿಯ್ಯರರು ಸ್ವಾಗತ ಭಾಷಣ ನ್ನು ಕೊಡಲಿಕ್ಕಿದ್ದರು. ಆದರೆ ಅನಿರ್ವಾಹ ಕಾ ರ್ಯದ ನಿಮಿತ್ತ ಸರ್ ಸುಬ್ರಮಣಿಯ್ಯರರು ಸಭೆಗೆ ಚಿತ್ತೈ ಿಲ್ಲವಾದುದರಿಂದ ಅವರ ಸ್ವಾಗತ ಭಾಷಣವನ್ನು ಮು. ರಾ. ದೊರೆಸ್ವಾಮಿ ಐಯ್ಯಂಗಾರರು ಓದಿದರು. ಅನಂತರ ಅಧ್ಯಕ್ಷರು ಆಯುರ್ವೇದ ಮಹತ್ವವನ್ನು ಕುರಿತಾದ ಕಾ ವ್ಯೋಚಿತ ಭಾಷಣವನ್ನು ಕೊಟ್ಟರು.

ದಕ್ಷಿಣ ಕನ್ನಡ

ಬೈಂದೂರು:—ಇದೇ ರಾಕ್ಷಸ ಸಂವತ್ಸರದಲ್ಲಿ ಮಳೆ ಕಡಿಮೆಯಾದ ಕಾಲ. ವಿಲಾಯತಿಯಲ್ಲಿ ಯುದ್ಧ ಮಡಿಯುವ ಕಾಲ. ಇಲ್ಲಿ ಬಡಬಗ್ಗರು ಹೊಟ್ಟೆಗಿಲ್ಲದೇ ಕೀಚಾಡುತ್ತಿದ್ದಾರೆ ಆದರೂ ಶುಕ್ರವಾರ ಸಂತೆಕಟ್ಟೆ ರುಲ್ಲಿ ಕಡಿಮೆ ಆಳತೆಯ ಮಾವುಗಳಿಂದ ಕೆಲವು ವ್ಯಾಪಾ ಗಾರರು ಗಿರಾಕಿಗಳನ್ನು ರಕಾಯಿಸುತ್ತಾರೆ ಅವರಲ್ಲಿ ಒಬ್ಬರ ಮೇಲೆ ಇಲ್ಲಿಯ ಪೋಲಿಸ ಸಬ್ ಇನ್ಸ್‌ಪೆಕ್ಟರ ವರು ಮೊಕದಮೆಯನ್ನು ನಡಿಸಿದಲ್ಲಿ ಅವರಿಬ್ಬರೂ ಕದಿನೈದು ರೂಪಾಯಿ ಜುಲುಮಾನೆಯನ್ನು ತೆತ್ತಿರು ತ್ತಾರೆ. ಇದು ಸುಳ್ಳು ಮಾವುಗಳನ್ನು ಉಪಯೋಗಿಸುವ ಸ್ವಾರ್ಥಪರರಾದ ವ್ಯಾಪಾರಿಗಳಿಗೆ ಎಚ್ಚರಿಕೆಯಾಗಿದೆ. ಸಂಥಾ ಸಂಗತಿಗಳಲ್ಲಿ ಪೋಲಿಸಿನವರ ಪರಿಶ್ರಮವು ಬಡ ತೆರಿಗೆ ಉಪಕಾರವಾಗಿದೆ.

ಇಲ್ಲಿ ಈ ವರ್ಷದ ಛಳಿಯು ಬಲು ಕರಿಣವಾಗಿದೆ. ಮನೆಮಂದಿಗೂ ಬಿಡದೆ ಛಳ್ಳಾರವು ಪೀಡಿಸುತ್ತಿದೆ. ಲೋಕಲ್‌ಫಂಡ ಆಸ್ಪತ್ರೆಯಲ್ಲಿಯ ರೋಗಿಗಳ ಹಾಜರಿ ರಿಜಿಸ್ಟ್ರಿಯಲ್ಲಿ ಸಂಜೆ ಏರುತ್ತಲಿದೆ.

ಮ। ರಾ। ಯಡ್ತರೆ ಶೆಟ್ಟರವರು ಸಾವಿರಗಟ್ಟಲೇ ರೂಪಾಯಿಗಳ ಭಂಡವಾಳವನ್ನು ಹಾಕಿ ಒಂದು ಅಸಾಧಾ ರಣವಾದ ದೊಡ್ಡ ವ್ಯಾಪಾರದ ಉದ್ಯೋಗವನ್ನು ನಡಿಸ ಲಿಕ್ಕೆ ಪ್ರಾರಂಭಿಸಿದ್ದಾರೆ. ಘಟ್ಟ ಪ್ರದೇಶಗಳಿಂದ ಇಳಿದು ಬರುವ ಬತ್ತ, ಮೆಣಸು, ಬೆಲ್ಲ ಮುಂತಾದ ಚೀನಸುಗ ಳನ್ನು ಸಾಪೆಮಾಡುವುದೂ, ಇಲ್ಲಿಯೇ ಅಕ್ಕಿಯನ್ನು ಮಾಡಿಸಿ ಮಲಬಾರ್ತ್ತಕಡೆಯ ಪರ ಒಂದರುಗಳಿಗೆ ಅದನ್ನು ರವಾನಿಸುವುದೂ, ಘಟ್ಟದ ಭಾಗಗಳಿಗೆ ಬೇಕಾದ ಎಣ್ಣೆ ತೆಂಗಿನಕಾಯಿ, ಉಪ್ಪು ಮೊದಲಾದ ಚೀನಸು ಗಳನ್ನು ಒದಗಿಸಿ ಕೊಡುವುದೂ, ಇವರ ವ್ಯಾಪಾರದ ಮುಖ್ಯಾಂಶಗಳಾಗಿವೆ. ಇಲ್ಲಿ ವೈಗಳ್ಳರಾದ ಖಾಲಿ ಕೂಲಿ ಜನರಿಗೆ ಈ ದೊಡ್ಡದಾದ ವ್ಯಾಪಾರ ಕಾರಖಾ ನೆಯಲ್ಲಿ ಕಸಬು ಸಿಕ್ಕುವಂತೆ ಮಾಡುವದು ಶ್ರೀಮಂತ ರಾದ ನಮ್ಮ ಶೆಟ್ಟರವರ ಅಂತರ್ಯರ ಉದ್ದೇಶವಾಗಿದೆ

ನಮ್ಮ ವಾಚಕ ಮಂದಿರದಲ್ಲಿ ಕಳೆದ ಎರಡು ಆದಿತ್ಯ ವಾರಗಳಲ್ಲಿ ನ ರಾ ವೆಂಕಟರಮಣ ಹೊಳ್ಳ ಬಿ ಎ. ಯವರು ಸ್ವಾಮಿ ವಿವೇಕಾನಂದರವರ ಭಾಷಣಗಳನ್ನು ಕನ್ನಡದಲ್ಲಿ ಭಾಷಾಂತರಿಸಿ ತಮ್ಮ ಸ್ವಂತ ಅನುಭವವನ್ನು ಅದಕ್ಕೆ ಕೂಡಿಸಿ ಸಾಂಗ್ಯವಾದ ನಿದರ್ಶಣಗಳ ಪರಿಮಳಿ ವಾಗಿ ಸಂಗತಿಗಳನ್ನು ಸಮಾಜ ಮಂದಿಳಿಯವರಿಗೆ ಅರಿಯು ವಂತೆಯೂ ಆವರಿಗೆ ತತ್ವಜ್ಞಾನ ಬೋಧಕವಾದ ವಿಷಯ ಗಳಲ್ಲಿ ಅಭಿರುಚಿಯನ್ನು ಹುಟ್ಟುವಂತೆಯೂ ಮಾಡಿ, ಸಭಿಕ ರನ್ನು ಸುತೋಷಪಡಿಸಿದರು. ವಿದ್ಯಾವಿನಯಂಪನ್ನರೂ ಮತ್ತು ಸದ್ಗುಣ ಸಂಪನ್ನರಾದ ಮ. ರಾ ಹೊಳ್ಳರವರು ಶ್ರೋತ ಜನಸ್ತೋಮದ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ

ಮಂಗಳೂರು.

ಮದ್ರಾಸು ನ್ಯಾಯಸ್ಥಾನಿಕ ಸಭೆಯ ಮಲಬಾರು ಮತ್ತು ದಕ್ಷಿಣಕನ್ನಡ ಜಿಲ್ಲೆಗಳ ಮೆಂಬರುತನಕ್ಕೆ ಹ್ಯಾ ಕೋರ್ಟ ವಕೀಲ ಕಾರ್ಕಳ ಸದಾಶಿವ ಭಟ್ಟರು ಉಮೇ ದ್ವಾರರಾಗಿ ನಿಂತಿರುವರು.

ಇಲ್ಲಿ ಡಿಸ್ಟ್ರಿಕ್ಟ್ ಜಡ್ಜರಾಗಿದ್ದ ರಜೆಯ ಮೇಲಿರುವ ಮೆ।ಬಿ ಸಿ. ಸ್ಮಿತ್. ಐ. ಸಿ. ಎಸ್ ದೊರೆಗಳವರು ರಜೆಯು ತೀರಿದನಂತರ ಗಂಜಾಮಿನ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿ ನೇಮಿಸಲ್ಪಟ್ಟಿರುವರು.

ಬಳ್ಳಾರಿಯಲ್ಲಿ ಜನರಲ್ ಡ್ಯೂಟಿ ಕಲೆಕ್ಟರರಾಗಿ ರುವ ರಾ ಕೆ ರಾಮವರ್ಮ ರಾಜರವರು ದಕ್ಷಿಣ ಕನ್ನಡಾ ಜಿಲ್ಲೆಯ ಜನರಲ್ ಡ್ಯೂಟಿ ಡ್ಯೂಪಿಟಿ ಕಲೆಕ್ಟ ರರಾಗಿ ವರ್ಗಾಯಿಸಲ್ಪಟ್ಟಿರುವರು.

ಮಲಬಾರ ಮತ್ತು ದಕ್ಷಿಣಕನ್ನಡ ಜಿಲ್ಲೆಯ ಪರ ವಾಗಿ ನಡಿಯಲಿಕ್ಕಿರುವ ಮದ್ರಾಸ್ ನ್ಯಾಯವಿಧಾಯಕ ಸಭೆಯ ಮೆಂಬರರ ಚುನಾವಣೆಗೆ ಕಲ್ಲಿಕೋಟೆಯ ಹೈ ಕೋರ್ಟ ವಕೀಲ ರಾ। ಟಿ. ಎಮ್. ಅಪ್ಪು ನೆಡುಂಗಡಿ ಯರು ಉಮೇದ್ವಾರರಾಗಿರುವರು.

ಮಲಬಾರ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿರುವ ಟಾಸೆಲ್, ಮಿಶ್ಟನ್ ಕಾರ್ಖಾನೆಗಳ ಲೆಕ್ಕ ಪತ್ರಾದಿಗಳ ಮೇಲ್ತನಿಕೆ ಬಗ್ಗೆ ಸರಕಾರದವರು ಮೆ। ಎಲ್. ಡ್ರೈಸ್‌ಡೇಲ್ ಎಂಬವರನ್ನು ನೇಮಿಸಿರುತ್ತಾರೆ

ಕಾನರಗೋಡ್ಲು ಸ್ಪೋಲಿಸ್ ಇನ್ಸ್‌ಪೆಕ್ಟರ್ ರಾ। ಟಿ. ರಾಮರಾಯರು ರಜೆ ತಕ್ಕೊಂಡಿರುವದರಿಂದ ಇಲ್ಲಿಯ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಮೆ। ಚಮ್ಮಾಡರವರು ಕಾಸರಗೋಡಿನ ಆಕ್ಟಿಂಗ್ ಪೋಲಿಸ್ ಸರ್ಕಲ್ ಇನ್ಸ್‌ಪೆ ಕ್ಟರರಾಗಿ ನೇಮಿಸಲ್ಪಟ್ಟಿರುವರು.

ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ರಾ। ಯು. ತಿಮ್ಮಪ್ಪ ನವರಿಗೆ ಬಂಟ್ವಾಳಕ್ಕೆ ವರ್ಗವಾಗಿಯದೆ.

ಇದೇ ತಾ 19ರಲ್ಲು ಕುಳ್ಳಾಲದಲ್ಲಿ ಒಂದು ಸಂಚಮ ಶಾಲೆಯು ತೆರೆಯೋಣಾಗಿರುವದು. ಆ ದಿನ ಮ ರಾ. ಕೆ. ರಂಗರಾಯರವರು ಕೆಲವು ಮಿತ್ರರೊಡನೆ ಹೋಗಿ ಶಾಳಾ ಮುಹೂರ್ತ ಮಾಡಿದರು. ಈ ಸಂಬಂಧ ಕೂಡಿದ ಸಭೆಗೆ ರಾ. ಎಸ್. ರಘುನಾಥ ವಿಠ್ಯರ್ ಬಿ. ಎ. ಎಲ್ ಟಿ ಯವರು ಅಧ್ಯಕ್ಷರಾಗಿದ್ದು ಕಾಲೋಚಿತ ಭಾಷಣ ಕೊಟ್ಟರು. ಈ ಪಂಚಮ ಶಾಲೆಯ ಬಗ್ಗೆ ಮ. ರಾ. ಹೈಕೋರ್ಟ ವಕೀಲ ಯು ಸಿ. ಕೃಷ್ಣಭಟ್ಟ ರವರು ಧರ್ಮಾರ್ಥವಾಗಿ ಮುಳಿಹುಲ್ಲಿನ ಒಂದು ಕಟ್ಟೋಣವನ್ನು ಕಟ್ಟಿಸಿ ಕೊಟ್ಟು ಪತಿತರ ಕಡೆಗಿರುವ ತನ್ನ ಉದಾರ ಮನಸ್ಸನ್ನು ಪ್ರಸಿದ್ಧಪಡಿಸಿರುವರೆಂತ ತಿಳಿ ಯುತ್ತೇವೆ ರಾ ಯು ಸಿ. ಕೃಷ್ಣಭಟ್ಟರವರು ಕ್ರಮೇಣ ಈ ಶಾಲಾ ಕಟ್ಟೋಣವನ್ನು ಹೆಂಚಿನ ಕಟ್ಟೋಣವಾಗಿ ಮಾರ್ಪಡಿಸಿ ಈ ಪಂಚಮ ಶಾಲೆಯು ಶಾಶ್ವತವಾಗಿರು ವಂತೆ ಪ್ರಯತ್ನಿಸುವರೆಂಬದಾಗಿ ನಂಬಿರುವೆವು.

ಕೆ ಟಿ ಡೊಂಗರೇ ಮತ್ತು ಕಂಪೆನಿ, ಗಿರಗಾಂವ, ಬೊಂಬಾಯಿ ಇವರು ಕಳುಹಿಸಿಕೊಟ್ಟಿರುವ, ಇದೇ ಬರುವ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸರ್. ಸತ್ಯೇಂದ್ರ ಪ್ರಸನ್ನಸಿನ್ಹ, ಹಿಂದೂಸ್ಥಾನದ ಗವರ್ನರ ಜನ ರಲರಾದ ಲಾರ್ಡ ಹಾರ್ಡಿಂಜ, ಮೈಸೂರು ಮಹರಾಜ ರಾದ ಶ್ರೀಕೃಷ್ಣರಾಜ ಒಡೆಯರ, ಮಿಸೆಸ್ ಅನ್ನಿಬಿಸೆಂತ, ಕೈ ನಾ. ಗೋಪಾಲಕೃಷ್ಣ ಗೋಖಲೆ, ಬಡೋದೆಯ ಮಹಾರಾಜರಾದ ಶ್ರೀ ಸಯಾಜಿರಾವ ಗಾಯಕವಾಡ, ಪ್ರಸಿದ್ಧ ಕವಿ ಮಿಸೆಸ್ ಸರೋಜಿನಿ ನ್ಯಾಡು, ಪಂಡಿತ ಮದನಮೋಹನ ಮಲವೀಯರ ಭಾವಚಿತ್ರಗಳಿರುವ 1916ನೇ ಇಸವಿಯ ಕೆಲಂಡರುಗಳನ್ನು ಅತ್ಯಾದರದಿಂದ ಸ್ವೀಕರಿಸಿರುವೆವು ಕೆಲಂಡರುಗಳು ಪ್ರೇಕ್ಷಾರ್ಥವರು ಮೇ ಲಿನ ವಿಳಾಸಕ್ಕೆ ಬರಕೊಂಡಲ್ಲಿ ಧರ್ಮಾರ್ಥವಾಗಿ ಈ ಅಂದವಾದ ಕೆಲಿಂಡರುಗಳು ಕಳುಹಿಸೋಣಾಗುವವು ಎಂತ ತಿಳಿಯುತ್ತೇವೆ

ಮುಂಬಾಯಿಂದ ಇಲ್ಲಿಗೆ ಬರುವ ಬೊಂಬೆ ಸ್ಟೀಮ್ ನೆವಿಗೇಶನ್ ಕಂಪೆನಿಯ ಹಡಗಗಳಲ್ಲಿ ಬರುವ ಪ್ರಯಾ ಣಿಕರ ಸಾಮಾನುಗಳನ್ನು ಮಂಚಿಯಲ್ಲಿ ಇಳಿಸುವ ವಾಡಿಕೆ ಇದೆಯಷ್ಟೆ. ಈ ಪ್ರಯಾಣಿಕರು ಫ್ಲೇಗು ನೋಟಿನು ಬಗ್ಗೆ ಕೊರಂಟೈನ್ ಸಮಿಪ "ಲೊಂಜಿ" ಯಾ ಮಂಚಿ ಯಿಂದ ಕರೆ ಸೇರುತ್ತಲೇ ಕುಳ್ಳಾಲ ಪಾತ್ರಿ ಮಾಪಿಳ್ಳೆ ಯರು ಆ ಮಂಚಿಯ ಸಮಿಪ ಬಂದು ಮಂಚಿಯಲ್ಲಿ ರುವ ಸಾಮಾನುಗಳನ್ನು ತಮ್ಮ ದೋಣಿಗಳಿಗೆ ಇಳಿಸಿ ಬಂದರಕ್ಕೆ ತಂದು ಹಾಕುವರೆಂತಲೂ ಕೊರಂಟೈನಿನ ಕೆಲಸ ತೀರಿಸಿಕೊಂಡು ಪ್ರಯಾಣಿಕರು "ಲೊಂಜಿ" ಯಾ ಮಂಚಿಯ ಮೂಲಕ ಬಂದರಕ್ಕೆ ತಲಪುತ್ತಲೇ ಈ ಮಾಪಿ ದೋಣಿಗಳ ಮಾಪಿಳ್ಳೆಯರು ಪ್ರಯಾಣಿಕರಿಂದ 8 ಆಣ ಯಾ 1 ರೂಪಾಯಿ ಕೇಳುವದು ಮಾಮೂಲಾಗಿರುತ್ತದೆ

ನಷ್ಟಕಷ್ಟಗಳಿಗೆ ಗುರಿ ಮಾಡುತ್ತಾರೆಂತಲೂ ವಾರ್ತೆ ಬಂದಿರುವದು. 3-4 ದಿವಸ ಹಡಗದಲ್ಲಿದ್ದು ದಣಿದು ಬಂದ ಈ ಪ್ರಯಾಣಿಕರಿಗೆ ಇಂಥಾ ನಷ್ಟಕಷ್ಟಗಳು ಒದಗದಂತೆ ಸಂಬಂಧಪಟ್ಟ ಆಫೀಸರರು ಪ್ರಯತ್ನಿಸಬೇಕಾಗಿ ಹಾರೈಸುವೆವು

ಮುಂಬಾಯಿಂದ ಇಲ್ಲಿಯ ಸಾಹುಕಾರರಿಗೆ ಹಡಗದಲ್ಲಿ ಬಂದ ಸಾಮಾನುಗಳನ್ನು ಇಲ್ಲಿಯ ಮಂಜಿಯವರು ಕದ್ದುಕೊಳ್ಳುವ ಪದ್ಧತಿಯು ದಿನೇ ದಿನೇ ಹೆಚ್ಚುತ್ತಲಿರುವದು. ಈಚೆಗೆ ಮೆ। ಮಾರ್ಟಿನ್ ಬ್ಯಾನರವರಿಗೆ ಒಂದಿದ್ದ ಪಿಂಗಾಣಿ ಪಾತ್ರೆಗಳಲ್ಲಿ ಸುಮಾರು ೫೦-೬೦ ರೂಪಾಯಿ ಕ್ರಯಬಾಳುವ ಪಾತ್ರೆಗಳೂ, ಮೆ। ಅಹಮ್ಮದ್ ಸೇಟರವರಿಗೆ ಒಂದಿದ್ದ ಬೆಂಕಿ ಪೆಟ್ಟಿಗೆಯ ಕಟ್ಟುಗಳೂ, ಮೆ। ಬೆರ್ಲ್ ಎಂಡ್ ಸನ್ಸರಿಗೆ ಬಂದಿದ್ದ ಬ್ರಾಂಡಿ ವಿಸ್ಕಿ ಮೊದಲಾದ ಮದ್ಯಪಾನಗಳ ಪಾರ್ಸೆಲಿನಿಂದ ಸುಮಾರು ೩೦-೪೦ ರೂಪಾಯಿ ಕ್ರಯಬಾಳುವಷ್ಟು ಶೀಸೆ ಮದ್ಯವೂ ಕಾಣೆಯಾಗಿರುವದೆಂದು ಕೇಳುತ್ತೇವೆ. ಈ ವೈಕಿ ಮೆ। ಮಾರ್ಟಿನ್ ಬ್ಯಾನರವರ ಕಳವಾದ ಪಿಂಗಾಣಿ ಪಾತ್ರೆಗಳೂ ಸೇಟರವರ ಬೆಂಕಿ ಪೆಟ್ಟಿಗೆಗಳೂ ತಾ. ೨೧ರಲ್ಲಿ ಒಂದು ಮಂಜಿಯಲ್ಲಿ ದೊರಕಿದುವಂತೆ. ಆ ದಿನ ಬೆಳಿಗ್ಗೆ ಪೊಲಿಸ್ ಸಬ್ ಇನ್ಸ್‌ಪೆಕ್ಟರ್ ರಾ। ಪದ್ಮಪ್ಪನವರು ತನ್ನ ಜತೆ ಪೊಲಿಸರೊಡನೆ ಬಂದರದಲ್ಲಿ ಗಸ್ತಿ ಮಾಡುತ್ತಿರುವಾಗ ಉಳ್ಳಾಲ ಮಾಪಿಳ್ಳೆಯರ ಒಂದು ದೋಣಿಯು ಒಂದು ದೊಡ್ಡ ಮಂಜಿಯ ಒಳಿಗೆ ಹೋಗಿ ಮಂಜಿಯು ತಾಂಡೇಲನೊಡನೆ ಮಾತಾಡುತ್ತಿರುವದನ್ನು ಕಂಡು, ಅನುಮಾನ ಪಟ್ಟು, ಸಬ್ ಇನ್ಸ್‌ಪೆಕ್ಟರ್ ಪದ್ಮಪ್ಪನವರು ಆ ಮಂಜಿಗೆ ಹೋಗಿ ಪರಿಶೋಧಿಸಿದಲ್ಲಿ ಮಂಜಿಯೊಳಗಿನ ಅಂತರ್ಭಾಗದ ಕಣದಲ್ಲಿ ಯಾರಿಗೂ ತೋರದಂತೆ ಮಡಗಿಸಿಟ್ಟಿದ್ದ ಪಿಂಗಾಣಿ ಪಾತ್ರೆಗಳೂ ಬೆಂಕಿ ಪೆಟ್ಟಿಗೆಗಳೂ ದೊರಕಿದ್ದರಿಂದ ಮಂಜಿಯ ತಾಂಡೇಲನನ್ನೂ ಇಚ್ಚರು ಕಲಾಸಿಗಳನ್ನೂ ಕಳ್ಳ ಮ್ಯಾಲುಗಳ ಸಹಿತ ಕೈದು ಮಾಡಿರುತ್ತಾರೆ

ಇಲ್ಲಿಯ ಜಿಲ್ಲಾ ಕಲೆಕ್ಟರ ವೆ. ಲೊಯ್ಡ್ ದೊರೆಗಳವರು ಕ್ರಿಸ್‌ಮಸ್ ರಜಾಕಾಲವನ್ನು ಕೂರ್ಗಿನಮುಖದಲ್ಲಿ ಕಳೆಯುವರೆಂದಾಗಿ ತಿಳಿಯುತ್ತೇವೆ.

ಕಾಣೆಯಾಗಿ ಹೋಗಿದ್ದ ರಾಮ ಭಂಡಾರಿಯ ಶವ ಸಿಕ್ಕಿದ್ದ ಸಂಬಂಧ ಸ್ಯಾರಿಬ್ಯಾರಿ, ಹುಸೇನಬ್ಬ, ಕುಂಟಿಬಾವ ಮತ್ತು ಅಹಮ್ಮದ್ ಎಂಬ ನಾಲ್ಕು ಮಂದಿಯನ್ನು ಪೋಲಿಸಿನವರು ಕೈದುಮಾಡಿ ರಿವಾಂಚಿನಲ್ಲಿಟ್ಟಿದ್ದರೆಂದು ತಿಳಿಸಿತ್ತಷ್ಟೆ. ಈಗ ಪೊಲಿಸಿನವರು ಸ್ಯಾರಿಬ್ಯಾರಿ, ಹುಸೇನಬ್ಬ, ಅಹಮ್ಮದ್ ಎಂಬ ಮೂವರ ಮೇಲೆ ಚಾರ್ಜು ಮಾಡಿ ಕುಂಟಿಬಾವ ಬ್ಯಾರಿಯ ಮೇಲೆ ಶಕ್ಯರುಜುವಾತಿಟ್ಟಿದರಿಂದ ಅವನನ್ನು ಬಿಟ್ಟಿರುತ್ತಾರೆ.

ಕಳೆದ ವಾರ ಮಂಗಳೂರು ಮುನಿಸಿಪಾಲಿಟಿಯಲ್ಲಿ ೭ ಪ್ಲೇಗು ಮರಣಗಳಿದ್ದವು.

ಡಿಲ್ಲಿದರ್ಬಾರಿನ ಸ್ಮರಣಾರ್ಥವಾಗಿ ಮೈದಾನಿನಲ್ಲಿ ಜರಗಿದ ಇಲ್ಲಿಯ ಮೂಲಸಾರಕಾಲೆಗಳ ಪಂದ್ಯಾಟದಲ್ಲಿ ನೀರೇಶ್ವಲ್ಯ ವಿಶ್ವನ್ ಶಾಲೆಗೆ ಎರಡು ಪದಕಗಳು ಸಿಕ್ಕಿರುತ್ತವೆಂತ ತಿಳಿಯುತ್ತೇವೆ.

ಇಲ್ಲಿಯ ಮುನ್ಸಿಫ್ ಕೋರ್ಟಿನ ಹೆಡ್ ಕ್ಲಾರ್ಕರಾದ ರಾ। ಕೆ. ಶ್ರೀನಿವಾಸರಾಯರು ಬರುವ ಜನವರಿ ತಾ. ೩ರಿಂದ ರಜೆ ತಕ್ಕೊಂಡಿರುವದರಿಂದ ಅವರ ಬದಲಿಗೆ ದಿ। ಸ್ಮಿಕ್ಸ್ ಕೋರ್ಟ ಕೊಪಿಸ್ಟ ಸುಪರಿಂಟೆಂಡೆಂಟರಾದ ರಾ। ಎಚ್. ನಾರಾಯಣರಾಯರು ನೇಮಿಸಲ್ಪಟ್ಟಿರುತ್ತಾರೆ.

ಕಳೆದ ಸಂಚಿಕೆಯಲ್ಲಿ ಕಾಣೆಯಾಗಿ ಹೋಗಿರುವರೆಂದು ತಿಳಿದು ಬಂದ ಚರ್ಚಯ್ಯ ಪ್ರಭುಗಳ ಅಂಗಿ ಮತ್ತು ಮಾಂಸ ತುಂಡುಗಳೂ ಅಲ್ಲಲ್ಲಿ ಬಿದ್ದುಹೋದ ಎಲುಬುಗಳೂ ಒಂದು ಶವವೂ ಸೆಡ್ಡೆಯ ಸಮೀಪ ಸಿಕ್ಕಿರುವದೆಂದು ತಿಳಿಯುತ್ತೇವೆ ಪ್ರಥಮ, ಕಾಣೆ—ನಂತರ ಕೊಲೆ ಹೇಗೂ ಈ ಭೀಕರ ಕೃತ್ಯಗಳು ಇತ್ತಿತ್ತಲಾಗೆ ಮೇಲ್ಕೆ ಒಂದು ಗೊತ್ತಾಗುವುದು ದೈವದಯೆಯಿಂದಲೇ ಎಂತ ಹೇಳಬೇಕು. ಹಲವು ಸಬ್ ಇನ್ಸ್‌ಪೆಕ್ಟರರು, ಇನ್ಸ್‌ಪೆಕ್ಟರರು, ಪೊಲೀಸು ಸುಪರಿಂಟೆಂಡೆಂಟರೂ ಮೊದಲಾದ ಆಫೀಸರರು ಇರುವ ಮಂಗಳೂರಿನಲ್ಲಿ ಮತ್ತು ಅದರ ಸಮೀಪದಲ್ಲಿ ಇಂಥಾ ಭಯಂಕರ ಕೊಲೆಗಳನ್ನು ನಡಿಸಿ ತಲೆ ತಪ್ಪಿಸಿಕೊಂಡು ಸಂಚರಿಸುತ್ತಿರುವ ಸಮಾಜ ಘಾತುಕರ ಧೈರ್ಯವೂ ಚಮತ್ಕಾರವೂ ಅಸಾಧಾರಣವೇ ಸರಿ.

ಮದ್ರಾಸು ಯುದ್ಧಭೂಮಿನ ಇಲ್ಲಿಯ ಸ್ತ್ರೀಯರ ಶಾಖೆಯ ಸಭೆಯು ಇದೇ ಒರುವ ಜನವರಿ ತಿಂಗಳ ತಾ ೧೭ರಲ್ಲಿ ಕಲೆಕ್ಟರ ದೊರೆಗಳವರ ಬಂಗ್ಲೆಯಲ್ಲಿ ಕೂಡುವದು. ಈ ಶಾಖೆಯವರು ಅಕ್ಟೋಬರ ತಿಂಗಳಲ್ಲಿ ರೂಪಾಯಿ ೧೫೪೬ನ್ನೂ ನವಂಬರ ತಿಂಗಳಲ್ಲಿ ರೂ ೧೫೭೯ನ್ನೂ ಕೂಡಿಸಿರುವರಾಗಿ ತಿಳಿಯುತ್ತೇವೆ.

ಇಲ್ಲಿಯ ಡಿಸ್ಟ್ರಿಕ್ಟ್ ಬೋರ್ಡ್ ಇಂಜಿನೀಯರರಾದ ಮ ರಾ. ರಾ. ರಾವ್‌ಸಾಹೇಬ ಕೃಷ್ಣನ್ನಾಯರರವರಿಗೆ ಗೋದಾವರಿ ಜಿಲ್ಲೆಯ ಡಿಸ್ಟ್ರಿಕ್ಟ್ ಬೋರ್ಡಿನ ಇಂಜಿನಿಯರಿಂಗ್ ಕೆಲಸವು ಸಿಕ್ಕುವ ಸಂಭವವಿರುವದೆಂಬ ವಾರ್ತೆ ಇರುವದು

ಹಿಂದೂ ಟ್ರಾನ್ಸಿಟ್ ಕಂಪೆನಿಯವರು ಯಾರೊಬ್ಬರಿಗಾದರೂ ಟಿಕೇಟು ಕೊಡಕೂಡದಾಗಿ ಯಾವ ತರದ ನಿರ್ಬಂಧ ಮಾಡಿದ್ದಿಲ್ಲವೆಂಬುದನ್ನು ತಿಳಿಯಪಡಿಸಿರುವರು.

ಇಲ್ಲಿಯ ಗೌಡಸಾರಸ್ವತ ಶ್ರೀ ವೆಂಕಟರಮಣ ದೇವಸ್ಥಾನದ ಮುಂಕ್ಕೋಟೆ ದ್ವಾದಶಿಯ ಉತ್ಸವ ಸಮಾರಾಧನೆಗಳನ್ನು ಹೊಸ ಅಡಳಿತೆದಾರರು ಇಪ್ಪತ್ತು ವರುಷಗಳಿಗಿಂತಲೂ ಹೆಚ್ಚಾದ ಅಸಕ್ತಿಯಿಂದಲೂ ಸಮಾರಂಭದಿಂದಲೂ ನೆರವೇರಿಸಿದರು ಆದರೆ ಉತ್ಸವವು ವೈಗಿಯವಷ್ಟರಲ್ಲಿ ಅಡಳಿತೆದಾರರಲ್ಲಿ ಬ್ಬರಾದ ಮಂ|ರಾ|ರಾ| ವಿಚಾರ ರಾವ್-ಕೃಷ್ಣ ಪೈಗಳವರಿಗೆ ಸಾಂತಪ್ಪ ಹೆಗ್ಗಡೆ ಎಂಬವನು ಒಂದು ದೊಡ್ಡ ದೊಣ್ಣೆಯಿಂದ ಹೊಡೆದ್ದರಿಂದ ಪೆಟ್ಟು ಮುಖದಮೇಲೆ ಬಿದ್ದ ಪೈಗಳವರು ಕೂಡಲೇ ಸ್ಮೃತಿ ತಪ್ಪಿ ನೆಲಕ್ಕೆ ಬಿದ್ದರು. ಡಾಕ್ಟಾರ್ ಬಾಳಿಗರವರ ಮತ್ತು ಡಾ। ಕೆ. ಭವಾನಿರಾಯರವರ ಶೈತ್ಯೋಪಚಾರಗಳಿಂದ ಪೈಗಳವರಿಗೆ ಹೆಚ್ಚಿನ ಉಪಶಮನ ಉಂಟಾಗಿ ಪ್ರಕೃತ ಹೊಡೆತದ ಪಾಯವು ವಾಸಿಹೊಂದುತ್ತಲಿದೆ, ಸಾಂತಪ್ಪ ಹೆಗ್ಗಡೆಯನ್ನು ಪೋಲೀಸಿನವರು ಕೈದುಮಾಡಿ ತಕ್ಕೊಂಡು ಹೋಗಿರುವರು. ಸಾಂತಪ್ಪ ಹೆಗ್ಗಡೆಗೆ ಕೆಲವು ಸಮಯದಿಂದ ಬುದ್ಧಿಸ್ವಾಸ್ಥ್ಯವು ಸರಿಯಿಲ್ಲವೆಂಬುದಾಗಿ ತಿಳಿಯುತ್ತೇವೆ.

ಬಹಳ ಸಮಯದಿಂದ ಇಲ್ಲಿ ತನಪಿ ನಡೆದು ಇತ್ತಲಾಗೆ ಹೈಕೋರ್ಟಿನವರ ಮುಂದೆ ತೀರ್ಮಾನಕ್ಕೆ ಬಾಕಿಯಿದ್ದ ಕಾಫಿ ತೋಕದ ಮೊಕದ್ದಮೆಗಳಲ್ಲಿ ಮುದ್ದೆಯಾಲೆಗಳಾಗಿದ್ದ ಪಸಾರಿ ವಿಟ್ಟಪ್ಪ ಪ್ರಭುರ ಶಿಕ್ಷೆಯು ಹೈಕೋರ್ಟಿನಲ್ಲಿಯೂ ಖಂಡಿತವಾಗಿ ಸರ್ವೋತ್ತಮ ಪ್ರಭು—ಇವರ ಮೇಲೆ ವಿಧಿಸೋಣಾದ ಶಿಕ್ಷೆಯು ಡಿವೈಟಿ ಮೆಜಿಸ್ಟ್ರೇಟರಲ್ಲಿಯೂ ಕಾಯಂ ಆಯಿತೆಂಬುದಾಗಿ ತಿಳಿಯುತ್ತೇವೆ.

ಕೆನರಾ ಹ್ಯಾನ್ಯೂಲಿನ ವರ್ಧಂತಿ ದಿನಾಚರಣೆಯು ಇದೇ ತಿಂಗಳ ತಾ. ೩೦ರಲ್ಲಿ ನಡೆಯುವದು. ಮ।ರಾ। ರಾ। ಸಬ್ ಜಡ್ಜರೂ ತಾಲೂಕು ಬೋರ್ಡು ಪ್ರೆಸಿಡೆಂಟರೂ ಆದ ಸುಜೀರ ರಘುನಾಥಯ್ಯನವರು ಈ ದಿನ ಕಾಲೇಜ್ಹುಲ್ಲಿ ಕೂಡುವ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು.

ವಿವಿಧ ವಿಷಯಗಳು

ಇದರಲ್ಲಿ "ದಿಲೀಪಸಿಂಹ ಲುದಾರ್" ಎಂಬವನು ತನ್ನ ಹಗೆ ತೀರಿಸುವುದಕ್ಕೋಸ್ಕರ ಎಂಥೆಂಥಾ ಅದ್ಭುತ ಕಾರ್ಯಗಳನ್ನೆಸಗಿ ಕಡೆಗೆ ಹೇಗೆ ಜಯ ಹೊಂದಿ ಸುಖವನ್ನನುಭವಿಸಿದನು? ಒಬ್ಬ ಸ್ತ್ರೀಯು ತನ್ನ ಪತಿವ್ರತಾ ಧರ್ಮಕ್ಕೋಸ್ಕರ ವಿವಿಧ ಕಷ್ಟೀಕರಣ ಕಾರ್ಯಗಳನ್ನು ಕಣ್ಣಾರೆ ಕಂಡರೂ ಎದೆಗುಂದದೆ ಇರಲು ಕಡೆಗೆ ತನ್ನ ಮೂರು ವರ್ಷದ ಪುತ್ರನನ್ನು ತನ್ನ ಸಮಕ್ಷಮದಲ್ಲೇ ತಲೆ ಕೆಳಗಾಗಿ ತೂಗಾಡಿ ಕಟ್ಟಿ ಕರಾರಿಯಿಂದ ತಿವಿದು ಅದರ ರಕ್ತದಿಂದ ಅವಳಿಗೆ ಸ್ನಾನಮಾಡಿಸಿ, ಅತೂಗಾಡಿಸಿಟ್ಟು ಮಗುವಿನ ಹೆಣವನ್ನು ನಿರಂತರ ಅಲ್ಲಿಯೇ ಇರಗೊಳಿಸಿ, ಅದರ ರಕ್ತವನ್ನು ಸಹ ಒಂದು ಪಾತ್ರೆಯಲ್ಲಿ ತುಂಬಿಸಿ ಬಂದಿಖಾನೆಯಲ್ಲಿ ಅವಳ ಪಕ್ಕದಲ್ಲೇ ಇಟ್ಟು ಅವುಗಳನ್ನು ನೋಡಿಯಾದರೂ ಮನಕರಗಿ ವಶಳಾಗುವಂತೆ ಶತಪ್ರಯತ್ನಗೈದರೂ ಪರವಶಳಾಗದೆ ಆ ಸತಿಯು ತನ್ನ ಪತಿವ್ರತಾ ಧರ್ಮದಲ್ಲೇ ದೃಢವಾಗಿದ್ದು ತನ್ನ ಸತಿಧರ್ಮವನ್ನು ಹೇಗೆ ಕಾಪಾಡಿಕೊಂಡಳು? ವಾಸನಾಗಿದ್ದ ನೀಚ ಸೇವಕನೊಬ್ಬನು ತನ್ನ ಅರಸನನ್ನು ಕೊಲ್ಲಿಸಿ ರಾಜ್ಯಭಾರವನ್ನು ತಾನೇ ವಹಿಸಿಕೊಂಡು ನಾನಾಬಗೆಯ ದುಷ್ಕಾರ್ಯಗಳನ್ನು ನಡಿಸಿ, ಕಡೆಗೆ ತಾನು ಸೈದ ದುಷ್ಕರ್ಮಗಳಿಗೆ ಹೇಗೆ ತಕ್ಕ ಫಲವನ್ನನುಭವಿಸಿದನು? ಎಂಬ ಎಲ್ಲಾ ವಿವರವನ್ನು ವ್ಯಕ್ತಪಡಿಸುತ್ತದೆ. ಅದ್ಭುತವಾಗಿಯೂ, ರಸಭರಿತವಾಗಿಯೂ ಇರುವ ಈ ಗ್ರಂಥವನ್ನು ಓದುವದರಿಂದ ಪುರುಷರಲ್ಲಿ ಪೌರುಷವೂ ಸ್ತ್ರೀಯರಲ್ಲಿ ಪತಿವ್ರತಾ ಧರ್ಮವೂ ನೆಲೆಗೊಳ್ಳುವದು!

ಕ್ರಯಃ 0-12-0 ಪೋಸ್ಟುಖರ್ಚು ಪ್ರತ್ಯೇಕ. ಹನ್ನೆರಡು ಪುಸ್ತಕಗಳನ್ನು ಒಂದೇಸಲ ಪಡಕೊಳ್ಳುವವರಿಗೆ ಒಂದು ಪುಸ್ತಕ ಉಚಿತವಾಗಿ ದೊರಕುವುದು.

ತಾಜ ಕಲಂ:—ಈ ನನ್ನ ಕಾರ್ಯಕ್ಕೆ ಸ್ವಜಾತಿ ಗ್ರಹಸ್ಥರು ಜಾತಿಅಭಿಮಾನದಿಂದಲೂ ವಿಜಾತಿ ಮಹನೀಯರು ಮಿತ್ರಾಭಿಮಾನದಿಂದಲೂ ಪ್ರೋತ್ಸಾಹಕೊಟ್ಟು ಸರ್ವರೂ ಓದಿ ಪ್ರಯೋಜನ ಹೊಂದುವಂತೆ ಕೋರುತ್ತೇನೆ.

ವಿಳಾಸ:— **V. C. Amin**
C/o E. A. Goll Esq.
Sirdar Palace, Apollo Street, BOMBAY

ಕನ್ನಡ ಕ್ರಿಮಿನಲ್ ಪ್ರೊಸೀಜರ್ ಕೋಡು

೬೯೬ ಪುಟಗಳುಳ್ಳದ್ದು.

ಬೊಂಬಾಯಿ, ಮದ್ರಾಸು, ಕಲ್ಕತ್ತಾ, ಮೈಸೂರು ಮುಂತಾದ ಅನೇಕ ಜಿಲ್ಲೆಗಳಲಿ ಜಾರಿಯಲ್ಲಿರುವ ಹೊಸದಾಗಿ ಮುದ್ರಿಸಲ್ಪಟ್ಟ ತೀರ್ಮಾನಗಳು ಇದರಲ್ಲಿ ಅಡಗಿವೆ.

ಇದರಿಂದ ಪ್ರಪಂಚದ ಜನಗಳಿಗೆಲ್ಲಾ ಸೌಲಭ್ಯ ಉಂಟಾಗಿದೆ. ಈ ಸೌಲಭ್ಯಗಳನ್ನು ಸಾಧ್ಯವಾದ ಮಟ್ಟಿಗೆ ಕನ್ನಡಿಗರಿಗೆ ಕಲ್ಪಿಸಿಕೊಡಲು ಆಂಗ್ಲಭಾಷಾ ಟಿಪ್ಪಣಿಗಳು ಭಾಷಾಂತರ ಮಾಡಲ್ಪಟ್ಟಿವೆ.

ಕೋರ್ಟಿಗೆ ಬರತಕ್ಕ ಕಕ್ಷಿಗಾರರಿಗೆ ಬಹಳ ಉಪಯೋಗವಾದ ಪುಸ್ತಕ. ಈ ಪುಸ್ತಕವನ್ನು ಒಂದು ಸಲ ಓದುವುದರಿಂದಲೇ ಕಠಿಣವಾದ ಮೊಕದಮೆಗಳನ್ನೂ ಲಾಯರುಗಳ ಸಹಾಯವಿಲ್ಲದೇನೆ ಗೆಲ್ಲಲು ಸಾಧ್ಯವಾಗುವುದು.

ಕ್ರಯ ರೂಪಾಯಿ ೩—೦—೦ ಅಂಚೆ ಹಾಸಲು ೫ ಆಣೆ.

ಸುಭದ್ರೆ.
ಎಂಬ ಹೊಸ ಕಥೆ (ನಾವೆಲ್)

ಈ ನವರಸಭರಿತವಾದ ಕಥೆಯು ವಿಚಾರದಲ್ಲಿ ಅನೇಕ ದೊಡ್ಡ ಮನುಷ್ಯರಿಂದ ಬಹಳ ಒಳ್ಳೆಯ ಅಭಿಪ್ರಾಯಗಳು ಬಂದಿರುತ್ತವೆ ಅವುಗಳಲ್ಲಿ ಒಂದೆರಡನ್ನು ಇದರಡಿ ತಿಳಿಸಿರುತ್ತೇವೆ:—

ಮೈಸೂರು ದೇಶದ ವಿದ್ಯಾಭ್ಯಾಸದ ಜಲಾಖೆಯ ಇನ್ಸ್‌ಪೆಕ್ಟರ ಜನರಲರವರು—"ನಿಮ್ಮ ಸುಭದ್ರೆ ಎಂಬ ಪುಸ್ತಕದ 50 ಪ್ರತಿಗಳನ್ನು ಈ ಇಲಾಖೆಯ ಉಪಯೋಗಕ್ಕಾಗಿ ಕಳುಹಿಸಿಕೊಡಿ"

ಮಾ। ರಾ। ಬಿ. ರಾಮರಾವ್ ಎಂ ಎ., ಎಲ್. ಎಲ್. ಬಿ., ಗವರ್ನಮೆಂಟ್ ಟ್ರಾನ್ಸ್‌ಲೇಟರ್ ಮದ್ರಾಸ್, ಇವರು—"ಕಥೆಯು ಬಹಳ ಸಾರಸ್ಯವಾಗಿದೆ. * * * * ಇದರಂತೆಯೇ ನಮ್ಮ ಸಮಾಜದಲ್ಲಿರುವ ನ್ಯೂನತೆಗಳನ್ನು ತಿಳಿಯಪಡಿಸಿ ಇನ್ನೂ ಕೆಲವು ಪುಸ್ತಕಗಳನ್ನು ಬರೆಯುತ್ತೀರೆಂತ ನಂಬಿರುತ್ತೇನೆ."

ವಿಳಾಸ— ಎಚ್. ಎನ್. ರಾವ್ ಅಂಡ್ ಬ್ರದರ್ಸ್,
ಜಿಕ್ಕಪೇಟೆ, ಬೆಂಗಳೂರು ಸಿಟಿ.

ಒನ್ನಿರಿ! ನೋಡಿರಿ ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಖಂಡಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಖಲ್ಲಕ ಮಿಶ್ರನ್ ಚೀಕುಗಳೂ; ಬೀರೆ ಅನೇಕ ತರದ ಸ್ವದೇಶಿ ಚೀಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ರನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಸರಿ ತೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ತೀರೆಗಳೂ, ಚೀಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಒಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ಪಗಡಿ.

ವಿಳಾಸ:— **ಜಿ. ಎಸ್. ಸೋಜ ಎಂಡ್ ಕಂಪೆನಿ,**
ಹಂಪನ್‌ಕಟ್ಟೆ, ಮಂಗಳೂರು.

ಅಮೃತಾಂಜನ.

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲನೋವು, ಶಿರೋಧಾ ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಅನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟಿ ಒಂದರ ಕಿಮ್ಮತ್ತು ಆಣೆ 8 ಡಜನ್ 1ಕ್ಕೆ ರೂ 5—4—0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಥಾಪೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ತಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್ ಮಾರ್ಕ್ 0—6—0 12 ಡಬ್ಬಿಗಳಿಗೆ 3—8—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್ ಮಾರ್ಕ್

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಒರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲಾ ನಿಲ್ಲುತ್ತವೆ. ಇದರಲಿ ಹಲವು ನಮೂನೆಯ ಔಷಧಗಳಿವೆ ಬಳೀ ಜೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—0 ವಿ ಪಿ ಪ್ರತ್ಯೇಕ

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ ದರಲ್ಲಿ ಹೊಟ್ ಆಯಿಲ್ ಇಲ್ಲಾ ಇದು ಗಿಡಮೂಲಿಕೆಗಳಿಂದಲೂ ಒದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟಿ ಒಂದರ ಕಿಮ್ಮತ್ತು ಆಣೆ 0—12—0

ಸುಂದರಿ ಮುಲಾಮು.

ಮುಂಡಿಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ 0—8—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ 20 ಗುಳಿಗೆಗಳ ಡಬ್ಬಿ ಒಂದರ ರೂ 1—0—0

ಕೆ ನಟರಾಜನ್ ಎಡಿಟರ್, ಇಂಡಿಯನ್ ಸೋಸಿಯಲ್ ರಿಫ್ರೊರ್ಮರ್:—ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಒಳ್ಳೆ ಉತ್ತಮವಾದ ಔಷಧ

ಡಬ್ಲ್ಯೂ ಮೆಕ್ಕೆವೆಲ್, ಮೈನಾಡ.—ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲುತ್ತದೆ

ಆರ್. ಆರ್. ಗಂಗೋಲಿ:—ಅಮೃತಾಂಜನ ವಾತ, ತಲನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ಡಾಂಡೆಕರ್, ಎಲ್. ಎಮ್. ಎಂಡ್ ಎಸ್:—ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ, ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ

ಅಮೃತಾಂಜನ ರಿಯಾಗಿಯೂ, ಚಿಲ್ಲರೆಯಾಗಿಯೂ ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಿಯಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಮಂಗಳೂರಲ್ಲಿ —ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ಟಿ ಊಲನ್ ಮಾರ್ಟ್, ಕೊಟ್ಟಿಕಾರ ಬ್ರದರ್ಸ್ ಉಡ್ಪಿ

ಅಮೃತಾಂಜನ ಡಿಪೊ,

6, 7 ತಂಬುಚೆಟ್ಟಿ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ.

ESTABLISHED JULY 1906.

THE CANARA BANK, LIMITED., MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು;

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	219,100—0—0	ಪ್ರತಿಜ್ಞಾತ ಮೂಲ ಧನವು ,,	219,100—0—0
Paid up Capital	194,100—0—0	ಆಗತ ಮೂಲ ಧನವು ,,	194,100—0—0
Deposits	371,976—4—4	ರೇವಣಾತಿಯಾಗಿ ಕೊಡೋಹಾದ ಮೊಬಲಗುಗಳು	371,976—4—4
Reserve Fund	33,500—0—0	ರಕ್ಷಿತ ಧನವು	33,500—0—0

Besides the uncalled capital of Rs. 25,000/ 25% of the net profits are added annually to the Reserve Fund. Rs 28,485/ have been invested in Government Paper of the face value of Rs. 29,300/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively at the discretion of the managing committee

Short-notice Deposits requiring one weeks notice of withdrawal after one month received @ 2½% per annum at the discretion of the managing committee

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge

Canara Bank Ltd,
Mangalore, 1st December 1915.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸಮಾನವಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ. 28,485—0—0 ಸರಕಾರದ ರೂ 29,300ರದ ಭದ್ರತಾಪತ್ರಗಳಲ್ಲಿ ಶೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಪಚಿತವು ಸಹ ಕೊಡಲ್ಪಟ್ಟಿರುತ್ತದೆ

ಕಾಯಂ ರೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ರೇವಣಾತಿಗಳು ಸೇಕಡಾ 2½ ದರದಲ್ಲಿ ಮೆನೇಜಿಂಗ್ ಕಮಿಟಿಯವರಿಗೆ ಯುಕ್ತತೋರುವ ಮೇರೆಗೆ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿರೇವಣಾತಿಗಳು ರೇವಣೆದಾರರ ಅನುಕೂಲತೆಗಾಗಿ ಬೆಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಹಾಗುವವು.

ಸೇವಿಂಗ್ಸ್ ಬೆಂಕಿನಲ್ಲಿ 4 ಆಣೆಗೆಕಡಿಮೆಯಾಗದ ಹಣವನ್ನು ಶೇವಣಾತಿಇಡೋಹಾಗೀತು. ಈ ರೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಹಾಗುವುದು. ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಹಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಬದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಅತ್ತರು ಮತ್ತು ಸುರಭಿಗಳಲ್ಲಿ ಮಕುಟವರ್ಧನದಂತಿರುವ

ಒಟ್ಟೊ ಮೋಹಿನಿ.

(ರಿಜಿಸ್ಟರ್ಡ್.)

ಅನೇಕ ವಸ್ತುಪ್ರದರ್ಶನಗಳಲ್ಲಿ ಪ್ರದರ್ಶಿಸಲ್ಪಟ್ಟು ಕಡೆಗೆ ಅದರ ರಮ್ಯವಾದ ಅತ್ಯಂತ ಶಾಶ್ವತವಾದ ಪರಿಮಳಕ್ಕಾಗಿ ,ಚಿನ್ನ ಬೆಳ್ಳಿಯ ಪದಕಗಳನ್ನು ಪಡೆದಿದೆ ಎಲವಸ್ಕದಲ್ಲಿ ನಾಲ್ಕು ತಟಕುಗಳನ್ನು ತಾಗಿಸುವುದರಿಂದ ಹಿಡಿ ತುಂಬಾ ಮಲ್ಲಿಗೆ ಹೂ ಇದ್ದ ಪರಿಮಳವ್ಯಂಟಾಗುವುದು. ಈ ಹೂಗಳು ಕೃತಕವಾದವುಗಳಾದರೂ ನೈಸರ್ಗಿಕ ಹೂವಿನಂತೆ ಪ್ರತಿ ಸಾಯಂಕಾಲ ಬಾಡಿಹೋಗದು. ಆದರೆ ತನ್ನ ಪರಿಮಳವನ್ನು 4 ದಿವಸಗಳಿಗಿಂತಲೂ ಹೆಚ್ಚಿಗೆ ಕೊಡುತ್ತಿರುವದು. ಆದುದರಿಂದ ಒಟ್ಟೊ-ಮೋಹಿನಿಯು ಶಾಶ್ವತವಾದ ಸುರಭಿಯೆಂದು ಕರೆಯಲ್ಪಟ್ಟು ಈ ಕಾಲಕ್ಕೆ ತಕ್ಕುದಾದ ಬಹುಮಾನವಾಗಿ ಕೊಡತಕ್ಕ ದ್ರವ್ಯವಾಗಿದೆ. ಇದರ ಪರಿಮಳವು ಶಾಶ್ವತವಲ್ಲವೆಂದು ದೃಢಮಾಡಿಕೊಡುವವರಿಗೆ 100 ರೂಪಾಯಿಗಳ ಬಹುಮಾನ ಕೊಡಲಾಗುವದು. ಆದುದರಿಂದ ಯಾಕೆ ಈ ಬಹುಮಾನವನ್ನು ಪಡೆಯಲು ಪ್ರಯತ್ನಿಸಲಾಗದು?

ಕ್ರಯ ಅರ್ಧ ಔನ್ಸ್ ಸೀಸೆಗೆ 2—0—0. 1 ಡ್ರಾಮ್ ಸೀಸೆಗೆ 0—12—0. ಪರಿಮಳದ ಕಾರ್ಡುಗಳು ಡಜನ್ 1ಕ್ಕೆ 0—12—0.

ಒಟ್ಟೊ ಆಲ್ಬನಿಯಾ, ಮಿನರ್ವಾ, ಸೆಬೀನಿಯಾ ಮತ್ತು ರೊಬ್ಬಿನಿಯಾ ಇವುಗಳು ನಮ್ಮಲ್ಲಿ ಯಥೇಪ್ಸವಾಗಿ ಬಂದಿವೆ!

Proprietors:—**The Oriental Drug & Chemical Co.**
Sole Agents:—**MOHINI AGENCY,**
3 Fida Building, Jumma Musjid, **BOMBAY.**
Agents:—**Bhagavandas Choonilal & Co.**
177 China Bazar Road, MADRAS.

ಪ್ರೊಪ್ರೈಟರರು:—ಒರಿಯಂಟಲ್ ಡ್ರೆಗ್ ಎಂಡ್ ಕೆಮಿಕಲ್ ಕೋ
ಪ್ರಾಮುಖ್ಯ ಏಜಂಟರು:—ಮೋಹಿನಿ ಏಜನ್ಸಿ,
3 ಫಿಡಾ ಬಿಲ್ಡಿಂಗ್, ಜುಮ್ಮಾ ಮಸೀದಿ, ಬೊಂಬೈ
ಏಜಂಟರು:—ಭಗವಾನ್‌ದಾಸ್ ಚೂನಿಲಾಲ್ ಎಂಡ್ ಕೋ,
177 ಚೀನಾ ಬಜಾರ್ ರೋಡ್, ಮದ್ರಾಸು.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 31ನೇ ದಶಂಬರ 1915

ರಾಷ್ಟ್ರೀಯ ಸಭೆ.

ಮುಂಬಯಿಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ೩೦ನೇ ಅಧಿವೇಶನವು ಒಂದು ವಿಶೇಷವಾಗಿತ್ತು. ದೇಶದ ಎಲ್ಲಾ ಕಡೆಗಳಿಂದಲೂ ಒಂದು ಪ್ರತಿನಿಧಿಗಳ ಸಂಖ್ಯೆಯು ೧೫೦೦ಕ್ಕೆ ಮಿಕ್ಕಿತ್ತು. ರಾಷ್ಟ್ರೀಯ ಸಭೆಯ ಕಳೆದ ೩೦ ವರುಷಗಳ ಜೀವಮಾನ ಕಾಲದಲ್ಲಿ ಪ್ರತಿನಿಧಿಗಳ ಸಂಖ್ಯೆಯು ಹೀಗೆ ವಿಶೇಷವಾಗಿ ಕೂಡಿದ್ದ ಈ ಮೊದಲು ಎರಡೇ ಸಲವಾಗಿತ್ತೆಂಬುದಾಗಿ ತಿಳಿಯುತ್ತೇವೆ. ಕಾಲಸ್ಥಿತಿಯು ವಿಶೇಷ, ಅದರಂತೆಯೇ ರಾಷ್ಟ್ರದ ಮುಂದಿನ ಗತಿಯನ್ನು ನಿರ್ಣಯಿಸಲು ಕೂಡಿದ ಸಭೆಯು ಅದಿವೇಶನವು ಸಹ ವಿಶೇಷವೇ ಸರಿ. ಯುದ್ಧಕಾಲ. ಈ ಸಂಕಷ್ಟಕಾಲದಲ್ಲಿ ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಭ್ರಾತೃಭಾವದ ಧ್ವನಿಯು ಕೇಳಿಸಿಕೊಂಡು ಅದು ಭೀಕರವಾದ ಯುದ್ಧ ರಂಗದಲ್ಲಿ ಕಾರ್ಯರೂಪುಗೊಳ್ಳುವ ಸಮಯದಲ್ಲಿ ಇಂಥಾ ಭಾವವು ಬರತಖಂಡದಲ್ಲಿ ಅಣ್ಮರಲ್ಲಿಯೂ, ಅಧಿಕಾರಸ್ಥರಲ್ಲಿಯೂ, ಸಾಮ್ರಾಜ್ಯದ ಪ್ರಜಾಜನರ ನಾನಾ ವರ್ಗ ಗಳಲ್ಲಿಯೂ ಯಾವ ರೀತಿ ಶಾಶ್ವತವಾಗಿ ಇರಗೊಳಿಸಬಹುದೆಂಬುದನ್ನು ನಿರ್ಣಯಿಸಲು ಕೂಡಿದ್ದ ಸಭೆಯು ವಿಶೇಷವಾಗದೆ ಇರದು. ಸಭೆ ಕೂಡಿದ ರಾವು ಮುಂಬಯಿ, ಸಭೆಯ ಆಮಂತ್ರಣ ಕಮಿಟಿಯ ಅಧ್ಯಕ್ಷರು—ರಾಜಕೀಯ ಚಳವಳವನ್ನು ಅನೇಕ ವರುಷಗಳಿಂದ ಈ ದೇಶದಲ್ಲಿ ಕಾವಾಡಿಕೊಂಡು ಬಂದಂಥ ಅನುಭವಸ್ಥ ಬಹುಮಾನ ಪಟ್ಟ ರಾ। ಡಿ ಇ ವಾಚಾರವರು, ಸಭೆಯ ಅಧ್ಯಕ್ಷ—ಇಂಡಿಯಾ ಸರಕಾರದ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗಿರುವಂಥ ಮತ್ತು ಈ ಮೊದಲು ಅದರ ಕಾರ್ಯನಿರ್ವಾಹಕ ಕೌನ್ಸಿಲಿನ ಮೆಂಬರರಾಗಿದ್ದ ಬಹುಮಾನಪಟ್ಟ ಸರ್ ಎಸ್ ಪಿ ಸಿಂಹ—ಇದೆಲ್ಲವನ್ನು ಪರ್ಯಾಲೋಚಿಸಿ ನೋಡುವಾಗ ದೇಶದ ಸುದೈವವಶಾತ್ ಈ ಯೋಗವು ಇಂಥಾ ಸಂದರ್ಭದಲ್ಲಿ ಪ್ರಾಪ್ತಿಸಿತೆಂಬುದಾಗಿ ಹೇಳಬೇಕು.

ಒಂದೇ ಸಾಮ್ರಾಜ್ಯದ ಪ್ರಜೆಗಳು, ಒಂದೇ ಸಮಾನವಾದ ಹಕ್ಕು ಸ್ವಾತಂತ್ರ್ಯಗಳು ಇರುವ ಭ್ರಾತೃಗಳು, ಸಾಮ್ರಾಜ್ಯ ಸರಕಾರದವರ ಮನ್ನಣೆಗೆ ಸಮತುಲ್ಯರು-ಅಣ್ಮರು ಆಗಿಂದಾಗ್ಯೆ ದಯವಾಲಿಸಿದ ಈ ವಚನಗಳ ಧರವಸೆಯಿಂದ, ಅಂಥಾ ಭ್ರಾತೃಭಾವವು ಯಥಾರ್ಥವಾಗಿರುವಂತೆಯೂ ಭದ್ರತಖಂಡದ ಉದ್ಧರಣೆಯು ಬ್ರಿಟಿಷರ ಮೂಲಕ ನೆರೆ ವೇರುವಂತೆಯೂ ಸರಕಾರದವರು ಕೈಕೊಳ್ಳಬೇಕಾದ ಹಲವು ವಿಷಯಗಳನ್ನೂ ಪ್ರಜೆಗಳು ಈ ಬಗ್ಯೆ ಅವಲಂಬಿಸಬೇಕಾದ ವರ್ತನೆಯನ್ನೂ ಸೂಚಿಸಿಕೊಂಡು ಆ ಆಮಂತ್ರಣ ಕಮಿಟಿಯ ಅಧ್ಯಕ್ಷರೂ, ಸಭಾಧ್ಯಕ್ಷರೂ ಭಾಷಣಗಳನ್ನು ಮಾಡಿರುತ್ತಾರೆ. ಸಾಮ್ರಾಜ್ಯದ ಇತರ ಕಡೆಗಳಲ್ಲಿ ನಿರ್ಬಂಧವಿಲ್ಲದೆ ಪ್ರಜಾಜನರನ್ನು ಸೇನೆಗೆ ಸೇರಿಸಿ ಕೊಳ್ಳುವ ರೀತಿಯಲ್ಲಿಯೇ ಭಾರತೀಯರನ್ನೂ ಸಹ ಸೇರಿಸಿಕೊಳ್ಳಬೇಕೆಂಬುದು ಮೊದಲನೆಯ ಸೂಚನೆಯಾಗಿದೆ. ಸೇನೆಗಳಿಗೆ ಈ ರೀತಿ ಸೇರಿಸಿಕೊಂಡ ನಂತರ ಜನಾಂಗಗಳಿಗೆ ಭೇದವಿಲ್ಲದೆ ಸೇನೆಯ ಅಧಿಕಾರಗಳು ಯಾವ ರೀತಿ ಕೊಡೋಣಾಗುವವೋ ಅದೇ ರೀತಿ ಭಾರತೀಯರಿಗೂ ಸಹ ಕೊಡೋಣಾಗಬೇಕು. ಕೋವಿ ಮೊದಲಾದವು ತನ್ನನ್ನು ಧರಿಸಿಕೊಳ್ಳುವದರಲ್ಲಿ ಪ್ರಜಾಜನರಿಗೆ ಇರುವ ಆತಂಕಗಳನ್ನು ನಿವಾರಿಸಬೇಕು. ಜನಾಂಗದಲ್ಲಿ ನೈಸರ್ಗಿಕವಾಗಿರಬೇಕಾದ ವೀರಕಲಯನ್ನು ಹೋಗಗೊಳಿಸಿ ನಿರ್ಜೀವಾವಸ್ಥೆಯನ್ನು ಬೀರಲು ಆಸ್ಪದ ಕೊಡುವ ಈ ನಿರ್ಬಂಧಗಳನ್ನು ತೆಗದುಹಾಕಬೇಕೆಂಬ ವಿಜ್ಞಾಪನೆಯು ಈ ದೇಶದ ಮಹಾಜನರ ಪರವಾಗಿ ಸಭಾಧ್ಯಕ್ಷರೂ, ರಾ। ಡಿ. ಇ. ವಾಚಾರವರೂ ಮಾಡಿದ್ದು ಕಾಲೋಚಿತವಾಗಿದೆ. ರಾಜ್ಯದಾಡಳಿತೆಯ ವಿಷಯ ಭಾರತೀಯರೆಲ್ಲರಲ್ಲಿಯೂ ತೃಪ್ತಿಯೂ ಸಮಾಧಾನವೂ ಒಂದೇ ಸಲ ಉಂಟಾಗುವಂತೆ ಬ್ರಿಟಿಷ ವಸಾಹತಿಗಳಲ್ಲಿ ರೂಢಿಯಲ್ಲಿರುವ ಸ್ವರಾಜ್ಯಧಾರದ ಧ್ಯೇಯವು ಹಿಂದೂಸ್ಥಾನದ ಆಡಳಿತೆಯ ಆದರ್ಶವಾಗಿ ಮಾಡಿಟ್ಟಿರುವೆನೆಂದು ಸೂಚಿಸುವ ನಿರೂಪಣೆಯನ್ನು ಯುದ್ಧವು ಮುಗಿದೊಡನೆ ಭಾರತೀಯ ಪ್ರಜಾವರ್ಗಕ್ಕೆ ಸಾಮ್ರಾಜ್ಯ ಸರಕಾರದವರು ದಯವಾಲಿಸಬೇಕೆಂಬುದು ಸಭಾಧ್ಯಕ್ಷರ ಎರಡನೇ ವಿಜ್ಞಾಪನೆಯಾಗಿದೆ. ಲೋಕಲ್ ಸೆಲ್ಫ್ ಗವರ್ನಮೆಂಟ್, ಅಂದರೆ, ಲೋಕಲ್ ಬೋರ್ಡ್ಸು ಮುನ್ಸಿಪಾಲಿಟಿ ಮೊದಲಾದವುಗಳ ಅಧಿಕಾರಗಳನ್ನೂ ಸ್ವತಂತ್ರವನ್ನೂ ಹೆಚ್ಚಿಸುವದು, ಮತ್ತು ಈ ಸಂಸ್ಥೆಗಳ ಪ್ರಯೋಜನವು ಪ್ರತಿ ಹಳ್ಳಿಗಳಲ್ಲಿಯೂ ಸರಿಯಾಗಿ ದೊರಕುವಂತೆ ಇವುಗಳ ಬೆಳವಣಿಕೆಯು ಹಳ್ಳಿಗಳಿಂದಲೇ ಮೊಳೆಯಲು ಅಗತ್ಯವಿರುವ ವಿಧಾನಗಳನ್ನು ಮಾಡಬೇಕೆಂಬುದು ಅಧ್ಯಕ್ಷರ ಮೂರನೇ ವಿಜ್ಞಾಪನೆಯಾಗಿದೆ. ವ್ಯಾಪಾರ ಮತ್ತು ಕೈಗಾರಿಕೆಗಳ ಮೇಲ್ಮೆಯು ಈ ದೇಶದಲ್ಲಿ ನೆಲಗೊಳ್ಳುವಂತೆ ಸರಕಾರದವರು ಯಾವ್ಯಾವ ಹಂಜಿಕೆಗಳನ್ನು ಕೈಕೊಳ್ಳಬೇಕೆಂಬುದು ಸಹ ಸರ್ ಎಸ್ ಪಿ ಸಿಂಹರವರು ತಮ್ಮ ಭಾಷಣದಲ್ಲಿ ಸೂಚಿಸಿರುತ್ತಾರೆ.

ಸರಕಾರಿಗ ಕರ್ತವ್ಯಗಳನ್ನು ಸೂಚಿಸಿಯಾದನಂತರ ಪ್ರಜೆಗಳು ವಹಿಸಿಕೊಳ್ಳಬೇಕಾದ ಕಾರ್ಯಧಾರವನ್ನು ಅಧ್ಯಕ್ಷರವರು ಹೇಳಿರುವರು. ರಾಷ್ಟ್ರೀಯ ಸಭೆಯ ಕಾರ್ಯಚಟುವಟಿಕೆಯು ವರುಷದ ಎಲ್ಲಾ ಕಾಲಗಳಲ್ಲಿಯೂ ದೇಶದ ಆಯಾ ಭಾಗಗಳಲ್ಲಿಯೂ ನಡೆಸಬೇಕೆಂದು ಅಧ್ಯಕ್ಷರವರು ಅಪ್ಪಣೆಕೊಡಿಸಿರುವರು. ಈ ಬಗ್ಯೆ ಬೇಕಾದ ದ್ರವ್ಯಸಂಗ್ರಹವನ್ನು ಮಾಡಬೇಕು. ಕಾರ್ಯಸಾಧನೆಯನ್ನು ರಾಷ್ಟ್ರೀಯರು ಬಕ್ತಿಯಿಂದ ಕೈಕೊಳ್ಳಬೇಕು. ಇನ್ನು ಹೆಚ್ಚಿನ ಅಧಿಕಾರಗಳೂ ಸ್ವತಂತ್ರಗಳೂ ಸರಕಾರದವರಿಂದ ಕೊಡೋಣಾಗುವಂತೆ ಸರಕಾರದವರೊಡನೆ ಸಾಧ್ಯವಿರುವ ಎಲ್ಲಾ ಸಾಧನೆಗಳಲ್ಲಿಯೂ ಸಹಕಾರದಿಂದ ವರ್ತಿಸಬೇಕು. ಅಸೂಯೆ, ಸ್ವಾರ್ಥ, ಪರಸ್ಪರ ದ್ವೇಷ ಇವುಗಳನ್ನು ಬಿಟ್ಟು ದೇಶಸೇವೆಯ ಬಗ್ಗೆ ತನುಮನಧನಗಳನ್ನು ಅರ್ಪಿಸಬೇಕು. ಈ ವಿಜ್ಞಾಪನೆಗಳಿಂದ ಸರ್ ಎಸ್ ಪಿ ಸಿಂಹರವರು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿರುತ್ತಾರೆ.

ರಾಷ್ಟ್ರೀಯ ಸಭೆಯಲ್ಲಿ ಈ ರೀತಿ ಮಂಜೂರಾದ ನಿರ್ಣಯಗಳು ಮತ್ತು ಅಧ್ಯಕ್ಷರ ಭಾಷಣದ ವಾದಗಳನ್ನು ಇನ್ನೊಮ್ಮೆ ಪ್ರಸ್ತಾಪಿಸುವೆವು.

ಮುಂಬಯಿಯಲ್ಲಿ ಕೂಡಿದ ಔದ್ಯೋಗಿಕ ಪರಿಷತ್ತು.

ಶಿಕ್ಷಣ, ಸುವ್ಯವಸ್ಥೆ ಮತ್ತು ಪರಸ್ಪರ ಸಹಾಯ,

ಈ ಮೂರು ಸಾಧನಗಳ ಮೂಲಕ ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸಬೇಕೆಂಬ ಸಂದೇಶವನ್ನು ಪರಿಷತ್ತಿನ ಮುಖಾಂತರ ದೇಶಕ್ಕೆಲ್ಲಕ್ಕೂ ಸಾರಿ ಮುಂಬಯಿಯಲ್ಲಿ ಕೂಡಿದ ಔದ್ಯೋಗಿಕ ಪರಿಷತ್ತಿನ ಅಧ್ಯಕ್ಷರಾದ ಸರ್ ಡೋರಾಬ್‌ಜಿ ಟಾಟಾರವರು ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿರುವರು. ಪಾಶ್ಚಾತ್ಯ ಜನಾಂಗಗಳ ಔದ್ಯೋಗಿಕ ಸಾಧನೆಗಳ ಇತಿಹಾಸಗಳಲ್ಲಿ ಕಾರ್ನಿಜಿ ಮೊದಲಾದ ಮಹನೀಯರುಗಳ ಹೆಸರು ಎಷ್ಟು ಪ್ರಸಿದ್ಧಿಯನ್ನು ಹೊಂದಿರುವದೋ ಹಾಗೆಯೇ ಈ ವರೆಗೆ ಬರೆಯಬಹುದಾದ ವತ್ತು ಇನ್ನು ಬರೆಯಲಿಕ್ಕಿರುವ ಬರತಖಂಡದ ಸಾಂಪತ್ತಿಕ ಅಭಿವೃದ್ಧಿ ಇತಿಹಾಸಗಳಲ್ಲಿ ಕೀರ್ತಿ ಹೊಂದಿರುವ ಟಾಟಾರವರು—ಇವರ ಪುತ್ರ ಸರ್ ಡೋರಾಬ್‌ಜಿ ಟಾಟಾರವರು 'ತಂದೆಯಂತೆ ಮಗ' ಎಂಬ ಮಾತು ಡೋರಾಬಜಿ ಎನ್. ಟಾಟಾರವರ ವಿಷಯದಲ್ಲಿ ಧಾರಾಳವಾಗಿ ಹೇಳಬಹುದು. ಇವರು ಖ್ಯಾತಿ ಪಡೆದ ವರ್ತಕರು ಮತ್ತು ಪ್ರಖ್ಯಾತ ಕೈಗಾರಿಕೆ ಕಂಪೆನಿಗಳ ಮಾಲಿಕರಾಗಿರುತ್ತಾರೆ. ಔದ್ಯೋಗಿಕ ಅಭಿವೃದ್ಧಿಯ ವಿಷಯ ಇವರು ಅಪ್ಪಣೆಕೊಡಿಸಿದ ಮಾತುಗಳೇನು? ಮತ್ತು, ಶಿಕ್ಷಣ ಸುವ್ಯವಸ್ಥೆ, ಪರಸ್ಪರ ಸಹಾಯ ಇವುಗಳ ಮೂಲಕ ದೇಶದ ಸಂಪದಭಿವೃದ್ಧಿ ಸಾಧಿಸುವ ಬಗೆ ಹೇಗೆ ಎಂಬೀ ವಿಚಾರವನ್ನು ಈ ಅನುಭವಸ್ಥ ಮಹನೀಯರ ಭಾಷಣದಿಂದ ತಿಳಿಕೊಳ್ಳಲು ಪ್ರಯತ್ನಿಸುವದು ಅಗತ್ಯ.

ಸ್ವಾವಲಂಬನವು ಮಿಕ್ಕ ಎಲ್ಲಾ ಅಭಿವೃದ್ಧಿ ಸಾಧನೆಗಳಿಗೆ ಬೇಕಾದಂತೆಯೇ ಕೈಗಾರಿಕೆಯ ಅಭಿವೃದ್ಧಿ ಪ್ರಯತ್ನಗಳಲ್ಲಿಯೂ ಅಗತ್ಯವಾಗಿರುವದು. ನಮ್ಮಿಂದಾಗುವ ಸಾಹಸವನ್ನು ಮಾಡಿ ನಮಗೆ ನಾವು ನೆರವಾಗುವ ಶೀಲವು ನಮ್ಮಲ್ಲಿದ್ದರೆ ಇಂದು ಸ್ವಪ್ನರೂಪದಲ್ಲಿ ನಮ್ಮ ಊಹೆಗಳಲ್ಲಿ ಮಾತ್ರತೋರಿಬರುವ ಭರತಖಂಡದ ಔದ್ಯೋಗಿಕ ಮಹಿಮೆಯ ವಿರಾಟ್ರೂಪವು ನಿಜವಾಗಿಯೂ ಕಾರ್ಯ ರೂಪಾಂತರವನ್ನು ಪಡೆಯುವದರಲ್ಲಿ ಸಂದೇಹವಿರದೆಂದು ಸರ್ ಡಿ. ಟಾಟಾರವರು ಪೂರ್ಣ ಧರವಸೆಯಿಂದ ಹೇಳಿರುತ್ತಾರೆ. ಸಕ್ಕೆಯಲ್ಲಿ ಸ್ಥಾಪಿಸಲ್ಪಟ್ಟಿರುವ ಟಾಟಾರವರ ಕಬ್ಬಿಣ ಮತ್ತು ಉಕ್ಕನ್ನು ತಯಾರಿಸುವ ಕಾರಖಾನೆಯೂ ಟಾಟಾರವರ "ಹಾಡಿಪೈ ಇಲೆಕ್ಟ್ರಿಕ್ಸ್ ವರ್ಕ್ಸ್" ಎಂಬ ವಿದ್ಯುಚ್ಛಕ್ತಿಯ ಸರಬರಾಯಿಯ ವ್ಯವಹಾರವು ಟಾಟಾರವರ ಈ ಮಾತುಗಳಿಗೆ ಪುಷ್ಟಿಯನ್ನು

ಳಾಗಿವೆ. ಉಪನ್ಯಾಸದ ಪ್ರಾರಂಭದಲ್ಲಿ ಮಾತ್ರವಲ್ಲ, ಉಪನ್ಯಾಸದ ಹಲವು ಕಡೆಗಳಲ್ಲಿ ಸಹ ಸ್ವಾವಲಂಬನದ ಈ ಸೂತ್ರವು ಅಲ್ಲಲ್ಲಿ ಬೋಧೆಯಾಗುವದು

ಕಚ್ಚಾ ಸಾಮಾಗ್ರಿಗಳು, ಕೆಲಸ ಸರಬರಾಯಿ, ಬಂಡವಾಳ, ಕಲಾನೈಪುಣ್ಯ:— ಕೈಗಾರಿಕೆಗಳ ಸ್ಥಾಪನೆಗೆ ಬೇಕಾದ ಈ ನಾಲ್ಕು ಅಂಗಗಳಲ್ಲಿ ಕಲಾನೈಪುಣ್ಯಕ್ಕೆ ಟಾಟಾರವರು ಪ್ರಥಮ ಸ್ಥಾನವನ್ನು ಕೊಟ್ಟಿರುತ್ತಾರೆ ದೇಶದಲ್ಲಿ ದೊರಕುವ ಸಾಮಾನ್ಯವಾದ 'ಕಚ್ಚಾ' ಸಾಮಾಗ್ರಿಗಳನ್ನು ಯಾವ್ಯಾವ ವ್ಯಾಮಾನಗಳಲ್ಲಿ ಎಂಥೆಂಥಾ ರೂಪದಲ್ಲಿ ಹೇಗೆ ಮಿಶ್ರಮಾಡಿಕೊಂಡು ಯಾವ್ಯಾವ ಕಾಲದಲ್ಲಿ ಉಪಯೋಗಿಸಿದರೆ ಲಾಭಕರವಾಗಬಹುದೆಂಬ ವಿಷಯವು ಕೈಗಾರಿಕೆಗಳನ್ನು ವ್ಯವಸ್ಥೆಗೊಳಿಸುವ ವಿಶೇಷವಾದ ಬುದ್ಧಿ ಶಕ್ತಿಯುಳ್ಳವರಿಗೆ ತೋರಿಬರುವದಲ್ಲದೆ ಸರ್ವರಿಗೂ ಗೋಚರವಾಗದು ಉಚ್ಚ ತರಗತಿಯ ಕಲಾಶಿಕ್ಷಣ ಪ್ರವಾಹವು ಜನರಲ್ಲಿ ಸರಿಯಾಗಿ ದ್ರವಿಸಿದರೆ ಇಂಥಾ ಬುದ್ಧಿಶಕ್ತಿಯುಳ್ಳವರು ಸಮಾಜದಲ್ಲಿ ತಲೆದೋರಿ ಬರುವರು ಇಂಗ್ಲಾಳದ ಹೊರತು ಕೈಗಾರಿಕೆಗಳ ಉನ್ನತಿಯಿಂದ ಮೆರೆಯುವ ಪಾಶ್ಚಾತ್ಯ ಜನಾಂಗಗಳ ಇತರ ದೇಶಗಳಲ್ಲಿ ಇಂಥಾ ಶಿಕ್ಷಣ ಪ್ರಸರಣೆಯ ಬಗ್ಗೆ ಕಲಾಜವನಗಳು ಕೈಗಾರಿಕೆಗಳ ಬೆಳವಣಿಕೆಯ ಹಲವು ವರುಷಗಳ ಮೊದಲೇ ಸ್ಥಾಪಿಸಲ್ಪಟ್ಟಿದ್ದವು ಇಂಥಾ ಜವನಗಳಲ್ಲಿ ಕಲಾಶಾಸ್ತ್ರಗಳಲ್ಲಿ ಉಚ್ಚತರಗತಿಯ ಶಿಕ್ಷಣ ಹೊಂದಿದವರು ಕಚ್ಚಾ ಸಾಮಾಗ್ರಿಗಳಿಂದ ಜನರಿಗೆ ಅತ್ಯಪಯುಕ್ತವಾದ ಒಡವೆಗಳನ್ನು ಹೇಗೆ ಸಿದ್ಧಪಡಿಸಬಹುದೆಂಬುದನ್ನು ಶೋಧಿಸುವದರಿಂದ ಇಂಥಾ ಶೋಧನೆಗೆ ಆಧಾರದ ಮೇಲೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶ ದೊರಕುತ್ತದೆ ಉಚ್ಚತರಗತಿ ಕಲಾಶಿಕ್ಷಣಕ್ಕೆ ಇಂಗ್ಲಾಳದಲ್ಲಿ ವಿಶೇಷ ಲಕ್ಷ್ಯ ಕೊಡುವೆ ಇತ್ತೀಚೆಗೆ ತಾತ್ಪರ್ಯವೆಂಬುದನ್ನು ಈಗ ಅಲ್ಲಿ ಕಾಸ್ತ್ರಜ್ಞರೆಲ್ಲರೂ ಚೆನ್ನಾಗಿ ತಿಳಿಕೊಂಡ ಕೈಗಾರಿಕೆಗೆ ಕಲಾಶಾಸ್ತ್ರ ಶೋಧನೆಯ ಬಗ್ಗೆ ಬೇಕಾದ ಹಂಚಿಕೆಯನ್ನು ಮಾಡಿಕೊಳ್ಳಿಲು ನಿರ್ಣಯಿಸಿರುತ್ತಾರೆ ಕೈಗಾರಿಕೆಗಳ ಬೆಳವಣಿಕೆಗೆ ಬೇಕಾದ ಇಂಥಾ ಶೋಧಿಕೆ ಗ್ರಹಗಳಲ್ಲಿ ಕಲಾಜವನಗಳನ್ನು ಹಿಂದೂ ಸ್ಥಾನದಲ್ಲಿ ಯೂ ಸ್ಥಾಪಿಸುವದು ಅತ್ಯಾವಶ್ಯಕವೆಂತ ಸರ್ ತೋಮಾಪ್ಜಿ ಟಾಟಾರವರು ಸೂಚಿಸಿರುತ್ತಾರೆ ಕೈಗಾರಿಕೆಗಳ ಅಭಿವೃದ್ಧಿಗ ಅತ್ಯಾವಶ್ಯವಿಲ್ಲ ಈ ಶಿಕ್ಷಣ ಏರ್ಪಾಡು ಸರಕಾರದವರಿಂದಲೇ ಸಂಪೂರ್ಣವಾಗಿರುವದು ಹೀಗೆ ಉಚ್ಚ ಶಿಕ್ಷಣವನ್ನು ಶೋಧಿಸುವಗಾರರು ಮಾತ್ರ ತರಬೇತಾದರೆ ಸಾಲದು ಸಮಸ್ತ ಕೈಗಾರಿಕೆಗಳಲ್ಲಿದ್ದಿಡೆಗಳಲ್ಲಾ ಈ ಶಾಸ್ತ್ರ ಮಾಹಿತಿಯ ಪ್ರವಾಹವು ಇದ್ದೇ ಇರಬೇಕು ಜನರಲ್ಲಿ ಈ ಶಾಸ್ತ್ರ ವಿಜ್ಞಾನವು ತುಂಬಾ ತಳಿಕಾಡಿ ತ್ತಲಿರಬೇಕು ಇಷ್ಟೇ ಅಲ್ಲ ಪ್ರತ್ಯಕ್ಷಾಲ್ಯವು ಕೈಕಸುಬುದಾರರಲ್ಲಿ ಹೆಚ್ಚುವಂತೆ ಕಲಾಶಾಸ್ತ್ರವೂ ಪರಿಪೂರ್ಣವಾಗಿ ಸ್ಥಾಪಿಸೋಣವಾಗುವಂತೆ ಕಲಾ ಶಿಕ್ಷಣವೂ ಇನ್ನೊಂದು ವಿಶೇಷವಾಗಿದ ಇತರ ಸರ್ವಸಾಧಾರಣ ಕೆಲಸಗಾರರು ತಮ್ಮ ಕೆಲಸಗಳನ್ನು ಹುಟ್ಟಿಸಿಕೊಟ್ಟ ವಾತಿ ಇವರ ಕೆಲಸದ ಸರಾಸರಿಯು ಇತರ ದೇಶಗಳ ಕೂಡ ಕೆಲಸದವರ ಸರಾಸರಿ ಸರಿಯಾಗಿರುವಂತೆ ಬೇಕಾದ ಸಾಮಾನ್ಯ ಶಿಕ್ಷಣ ಪ್ರಸರಣೆಯೂ ಈ ಎಲ್ಲಾ ಶಿಕ್ಷಣಗಳೊಂದಿಗೆ ಅತ್ಯಾವಶ್ಯವಾಗಿರುವದ

ಕೈಗಾರಿಕೆ ಕಾರ್ಖಾನೆಗಳನ್ನು ಸ್ಥಾಪಿಸಿ ಸಾಮಾಗ್ರಿಗಳನ್ನು ತಯ್ಯಾರಿಸಿದರೆ ಸಾಲದು ಇವುಗಳನ್ನು ವಿಕರಿಮಾಡಬೇಕು ಗಿರಾಕಿಯು ಎಲ್ಲಿ ದೊರಕುವನು, ಎಂಬೀ ವಿಷಯಗಳಲ್ಲಿ ಶಿಕ್ಷಣ ಬೇಕಾಗಿರುವದು. ಅಂದರೆ ವ್ಯಾಪಾರಶಾಸ್ತ್ರ, ಅರ್ಥಶಾಸ್ತ್ರ ಇವುಗಳ ಶಿಕ್ಷಣವೂ ಕೈಗಾರಿಕೆಗಳ ಅಭಿವೃದ್ಧಿಗೆ ಅಗತ್ಯವಾಗಿದೆ ಶೋದನಾಲಯಗಳು ಕಲಾ ಜವನಗಳು, ಶಾಲೆಗಳು ವ್ಯಾಪಾರ ಮತ್ತು ಅರ್ಥಶಾಸ್ತ್ರಗಳನ್ನು ಕಲಿಸುವ ಕೋಲೇಜುಗಳು, ಸಾಮಾನ್ಯ ಶಿಕ್ಷಣವು ಸರ್ವರಿಗೂ ಸಾಧ್ಯವಾಗುವಂತೆ ಬೇಕಾದ ಏರ್ಪಾಡು—ಇವೆಲ್ಲಕ್ಕೂ ಬಹಳ ಹಣರಾಶಿಯು ಬೇಕಾಗಿದೆ ಸರಕಾರದವರಿಗೆನೇ ಇದು ಸಾಧ್ಯ ಇದು ಅವರೇ ಮಾಡಬೇಕಾದ ಕರ್ತವ್ಯ .

ಕೈಗಾರಿಕೆಗಳ ಕಾರ್ಖಾನೆಗಳನ್ನು ಪ್ರಜೆಗಳು ಸ್ಥಾಪಿಸುವ ಮೊದಲು ಸರಕಾರದವರು ಇಂಥಾ ಕಾರ್ಖಾನೆಗಳನ್ನು ಸ್ಥಾಪಿಸಬೇಕೆಂಬುವ ಅಭಿಪ್ರಾಯಕ್ಕೆ ಸರ್ ರಿ ಟಾಟಾರವರ ಸಮ್ಮತಿಯು ಇಲ್ಲ ಅಥವಾ ಸರಕಾರದವರು ಈ ಬಗ್ಗೆ ಹಣ ವಿನಿಯೋಗಿಸುವದು ಸಹ ಅಗತ್ಯವಲ್ಲವೆಂತ ಟಾಟಾರವರು ಸೂಚಿಸಿರುವರು ಈ ಮೊದಲು ವಿವರಿಸಿದ ಬಗೆಯ ಶಿಕ್ಷಣವನ್ನು ಪ್ರಜಾಜನರಿಗೆ ಕೊಡುವದಲ್ಲದೆ ಸರಕಾರದವರು ದೇಶದ ಯಾವ್ಯಾವ ಕಡೆಗಳಲ್ಲಿ ಕೈಗಾರಿಕೆಗಳ ಸ್ಥಾಪನೆಗಳಿಗೆ ಎಂಥೆಂಥಾ ಸೌಕರ್ಯಗಳಿವೆ ಎಂಬುವ ವಿಷಯ ಶಾಸ್ತ್ರರೀತಿ ಶೋಧನೆಗಳನ್ನು ನಡಿಸಿ ಇಂಥಾ ಶೋಧನೆಗಳ ಅನುಭವವನ್ನು ಜನರ ಮುಂದೆ ಇರಿಸುವದು, ವಯ್ಯೋಣ ಸೌಕರ್ಯಕ್ಕೆ ಬೇಕಾದ ಏರ್ಪಾಡುಗಳನ್ನು ಮಾಡುವದು, ಮತ್ತು ದೇಶೀಯ ಕೈಗಾರಿಗೆಗಳ ಕಾರ್ಖಾನೆಗಳಲ್ಲಿ ತಯ್ಯಾರಾದ ಒಡವೆಗಳನ್ನು ತಮಗೆ ಬೇಕಾದ್ದಲ್ಲಿ ಕೊಂಡುಕೊಳ್ಳುವದು—ಇವುಗಳ ಹೊರತು ಕೈಗಾರಿಕೆಗಳ ಅಭಿವೃದ್ಧಿಗೆ ಬೇಕಾದ ಮಿಕ್ಕ ಸಾಧನೆಯು ಜನರಿಂದಲೇ ನಿರವೇರಬೇಕೆಂದು ಟಾಟಾರವರು ಅಪ್ಪಣೆಕೊಟ್ಟಿರುತ್ತಾರೆ.

ವಿದೇಶಗಳಿಗೆ ಹೋಗಿ ಕಲಾಶಿಕ್ಷಣವನ್ನು ಪಡೆದು ಬಂದಂಥವರಿಗೂ ಕಲಾನೈಪುಣ್ಯವುಳ್ಳವರಿಗೂ ಟಾಟಾರವರು ತಮ್ಮ ಭಾಷಣದಲ್ಲಿ ಕೆಲವು ಬುದ್ಧಿವಚನಗಳನ್ನು ಹೇಳಿರುವರು ಶಿಕ್ಷಣ ಪಡದಿದ್ದೇವೆಂಬುವ ಕಾರಣದಿಂದ ಯುವಕರು ಕಾರ್ಖಾನೆಗಳಲ್ಲಿ ಒಂದೇಸಲ ದೊಡ್ಡ ಹುದ್ದೆಗಳನ್ನು ಅಪೇಕ್ಷಿಸುವದು, ಅಥವಾ ಇವುಗಳನ್ನು ವಹಿಸಿಕೊಳ್ಳವದು ವಿಹಿತವಲ್ಲ ಪಾಶ್ಚಾತ್ಯ ಯುವಕರಿಗೆ ಸಹ ಶಿಕ್ಷಣ ಕೊಲೇಜುಗಳನ್ನು ಬಿಟ್ಟ ಒಂದೊಡನೆ ಇಂಥಾ ಹುದ್ದೆಗಳು ಸಿಕ್ಕುವದಿಲ್ಲ. ಏಕಂದರೆ ಕೊಲೇಜುಗಳಲ್ಲಿ ಮಾಡಿದ ಶಿಕ್ಷಣ ಪ್ರಾರಂಭವನ್ನು ಅನೇಕ ಸಂದರ್ಭಗಳಲ್ಲಿ ಕಾರಖಾನೆಗಳಲ್ಲಿ ಮುಕ್ಕಾಯಗೊಳಿಸಬೇಕಾಗುತ್ತದೆ ಆದಕಾರಣ ಕಾರ್ಖಾನೆಗಳ ಕೆಲಸದ ಪೂರ್ಣ ಮಾಹಿತಿಯೂ ಸಿಕ್ಕುವಂತೆ ಪ್ರಾರಂಭದಲ್ಲಿ ಜಿಕ್ಕ ಹುದ್ದೆಗಳನ್ನು ಅಂಗೀಕರಿಸಿಕೊಂಡು, ಶಿಕ್ಷಣ ಯೋಗ್ಯತೆಯೂ ಒಂದೇ ಅಲ್ಲ, ಕೈಗಾರಿಕೆಗಳ ಕಾರ್ಯನಿರ್ವಾಹಕ್ಕೆ ಬೇಕಾದ ಸ್ಥಿರಪ್ರಯತ್ನ, ಸಾಹಸ, ಆಸಕ್ತಿ ಇವೆಲ್ಲವುಗಳು ತಮ್ಮಲ್ಲಿ ಇವೆ ಎಂತ ತೋರಿಸಿಕೊಟ್ಟ ನಂತರ ಕಾರ್ಖಾನೆಗಳಲ್ಲಿ ಯುವಕರು ಕ್ರಮೇಣ ದೊಡ್ಡ ಹುದ್ದೆಗಳನ್ನು ವಹಿಸಿಕೊಳ್ಳವದು ಅಗತ್ಯವು ಈ ರೀತಿ ಕ್ರಮೇಣ ದೊಡ್ಡ ಹುದ್ದೆಗಳನ್ನು ಪಡಿಯವರಿಂದ ಕಾರ್ಖಾನೆಗಳ ಸರ್ವ ವ್ಯವಸ್ಥೆಯ ಅನುಭವವನ್ನು ಸಂಗ್ರಹಿಸಿಕೊಳ್ಳಲು ಅನುಕೂಲವಾಗುತ್ತದೆ. ಆದ್ದರಿಂದ ಕೆಲಸವನ್ನು ಪಡಿಯಬೇಕೆಂಬುವ ತವಕವು ಇರಬೇಕಲ್ಲದೆ, ಅರು ಸಾಲದು, ಇರು ಸಾಲದು, ಅದು ಶ್ರೇಷ್ಠ, ಇದು ಕನಿಷ್ಟ ಎಂಬುವ ಭಾವನೆಯು ಯುವಕರಲ್ಲಿರುವದು ಯುಕ್ತವಲ್ಲವೆಂತ ಟಾಟಾರವರು ಹೇಳಿರುವರು ಟಾಟಾರವರ ಈ ವಚನಗಳನ್ನು ಕಲಾನೈಪುಣ್ಯವನ್ನು ಹೊಂದಿದವರು ಮಾತ್ರವಲ್ಲ ಇತರರೂ ಸಹ ವೃತ್ತಿಗಳನ್ನು ಅವಲಂಬಿಸುವಾಗ ಸ್ಮರಣೆಗೆ ತಂದು ಕೊಳ್ಳವದು ಅಗತ್ಯವೆ

ಕೈಗಾರಿಕೆಗಳ ಅಭಿವೃದ್ಧಿಯನ್ನು ಸಾಧಿಸುವಾಗ ಅಥವಾ ಇವುಗಳ ಕಾರ್ಖಾನೆಗಳನ್ನು ಏರ್ಪಡಿಸುವಾಗ ಜಪಾನಿನ ಮಾದರಿಯನ್ನು ಈ ದೇಶದವರು ಅನುಸರಿಸುವದು ಒಳ್ಳೇದೆಂದು ಟಾಟಾರವರು ಅಜ್ಞಾಪಿಸಿರುತ್ತಾರೆ ಏಕಂದರೆ ನಮ್ಮಲ್ಲಿಯ ಬಂಡವಾಳ ಕೆಲಸಗಾರರ, ಮತ್ತು ಇತರ ಸ್ಥಿತಿಗತಿಗಳು ಸಮಾನತ್ವದಲ್ಲಿ ಇತರ ವಿದೇಶಗಳ ಈ ಸ್ಥಿತಿಗತಿಗಳಿಗಿಂತ ಜಪಾನಿನ ಸ್ಥಿತಿಗತಿಗಳನ್ನು ಅನುಸರಿಸಿ ಇವೆ ಪಾಶ್ಚಾತ್ಯ ದೇಶಗಳಲ್ಲಿ ಅಲ್ಲಿಯ ಜನರ ಬುದ್ಧಿವಿಕಸತೆಗೆ ಅನುಕೂಲವಾದಂಥಾ ಮತ್ತು ವಿಶೇಷ ಕ್ರಯಬಾಳುವ ಯಂತ್ರ ಸಾಹಿತ್ಯಗಳನ್ನು ನೋಡಿಕೊಂಡು ಅಂದವುಗಳನ್ನು ಹಿಂದೂಸ್ಥಾನದಲ್ಲಿ ಸಂಗ್ರಹಿಸುವದಕ್ಕಿಂತ ಜಪಾನೀಯರ ಹಾಗೆ ಸುಲಭ ಕ್ರಯದ ಮತ್ತು ವಿಶೇಷ ಬುದ್ಧಿವಂತಿಕೆಯು ಇಲ್ಲದವರಿಂದ ಸಹ ನಡಿಸಲು ಬಹು ದಾನ ಸಾಹಿತ್ಯಗಳನ್ನು ಹಿಂದುಸ್ಥಾನದವರು ಸಂಗ್ರಹಿಸುವದು ಅಲಾಬಕರವೂ ಸುಲಭಸಾಧ್ಯವೂ ಆಗಿದೆ ಕೈಗಾರಿಕೆಗಳನ್ನು ಸ್ಥಾಪಿಸುವ ಮೊದಲು ಅವುಗಳನ್ನು ಎಂಥಾ ಸ್ಥಳಗಳಲ್ಲಿ ಸ್ಥಾಪಿಸಬೇಕು,—ಕಚ್ಚಾ ಸಾಮಾಗ್ರಿಗಳನ್ನೂ ಕಾರ್ಖಾನೆಗಳಲ್ಲಿ ತಯ್ಯಾರಾಗುವ ಒಡವೆಗಳನ್ನೂ ಅತ್ತಿತ್ತ ಬಯ್ಯಲು ಖರ್ಚು ಹೇಗೆ ತಗಲುವದು,—ಮೊದಲಾದ ವಿಚಾರಗಳನ್ನು ಪೂರ್ಣವಾಗಿ ಮಾಡಿಕೊಂಡು ನಂತರ ಕಾರ್ಖಾನೆಗಳಿಗೆ ಬೇಕಾದ ಸ್ಥಳಗಳನ್ನು ಆರಿಸಬೇಕು ಇದರಿಂದ ವಯ್ಯೋಣದ ಖರ್ಚು ಕಡಮೆಯಾಗಿ ಕಾರ್ಖಾನೆಗಳಲ್ಲಿ ತಯಾರಾಗುವ ಒಡವೆಗಳ ಬೆಲೆಯು ತಗ್ಗುವದು ಜಪಾನೀಯರ ಕೈಗಾರಿಕೆಗಳ ಉನ್ನತಿಯ ಇನ್ನೂ ಕೆಲವು ಕಾರಣಗಳನ್ನು ಕೊಟ್ಟ ಕಾರ್ಖಾನೆಗಳಲ್ಲಿ ಸಾಮಾಗ್ರಿಗಳನ್ನು ತಯ್ಯಾರಿಸುವಾಗ ಕೆಲವು ಸೂತ್ರಗಳನ್ನು ದೃಷ್ಟಿಯಲ್ಲಿಟ್ಟುಕೊಳ್ಳಬೇಕೆಂದು ಹೇಳಿರುತ್ತಾರೆ ತಯ್ಯಾರಾಗುವ ಒಡವೆಗಳಿಗೆ ಗಿರಾಕಿಯು ಈ ದೇಶದ ಸಾಮಾನ್ಯರಾಗಿರುವರು, ಸಾಮಾನ್ಯರ ಉತ್ಪತ್ತಿಯು ಬಹಳ ಸ್ವಲ್ಪವಾಗಿರುವದು, ಆದ್ದರಿಂದ ಕಡಮೆ ಬೆಲೆಯ ವಸ್ತುಗಳೇ ಇಲ್ಲಿ ಬೇಕಾಗಿವೆ—ಎಂಬುದನ್ನು ಮರೆಯದೆ ಕಾರ್ಖಾನೆಗಳನ್ನು ನಡಿಸಬೇಕಾಗಿರುವದು

ಹಿಂದೂಸ್ಥಾನದಲ್ಲಿ ಕೈಗಾರಿಕೆಗಳ ಬೆಳವಣಿಕೆಗೆ ಅನುಕೂಲವಾದ ಸುಂಕವನ್ನ ವಿದೇಶಗಳಿಂದ ಬರುವ ಒಡನೆಗಳ ಮೇಲೆ ಹಾಕಬೇಕೆಂಬುವ ವಿಷಯದಲ್ಲಿ ಟಾಟಾರವರ ಅಭಿಪ್ರಾಯವು—ಹೀಗೆ ಸುಂಕವನ್ನು ವಿಧಿಸುವದು ದೇಶದ ಈಗಿನ ವಿದ್ಯಮಾನಗಳಲ್ಲಿ ಅನಾವಶ್ಯಕವೆಂತಿದೆ, ಏಕಂದರೆ ಸುಂಕವನ್ನು ವಿಧಿಸುವ ಮಾತ್ರದಿಂದ ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾಗಿರುವ ಸೌಕರ್ಯಗಳು ಹೆಚ್ಚುವು ಸ್ಥಾವನೆಯ ಸೌಕರ್ಯಗಳನ್ನು ಹೆಚ್ಚಿಸುವದರಲ್ಲಿ ಪ್ರಕೃತ ನಿರತರಾಗಿರಬೇಕಲ್ಲದೆ ಬರೆ ಸುಂಕವನ್ನು ವಿಶೇಶಿ ವಸ್ತುಗಳ ಮೇಲೆ ಹೊರಿಸಿದರೆ ಪ್ರಯೋಜನವಿರದೆಂಬುದು ಟಾಟಾರವರ ಅಭಿಪ್ರಾಯವಾಗಿದೆ. ಇತರ ದೇಶಗಳಲ್ಲಿ ಸಿಕ್ಕುವ ಭಂಡವಾಳದಮ್ಮು ಭಂಡವಾಳವು ಕೈಗಾರಿಕೆಗಳ ಬಗ್ಗೆ ಇಲ್ಲಿ ಒದಗುವದಿಲ್ಲ. ಹಣವನ್ನು ನಿರರ್ಥಕವಾಗಿ ಕೂಡಿಸಿಡುವ ಅಭ್ಯಾಸವು ಪ್ರಕೃತ ಮೊದಲಿನಮ್ಮು ಇಲ್ಲವಾದರೂ ತಮ್ಮ ನಿತ್ಯವ್ಯಯಗಳಿಂದ ಸ್ವಲ್ಪ ದೂರದಲ್ಲಿ ನಿರ್ವಹಿಸಲ್ಪಡುವ ಕಾರ್ಯಗಳಲ್ಲಿ ಬೇಕಾದಮ್ಮು ಹಣವನ್ನು ವಿನಿಯೋಗಿ

ನಲು ಜನರು ಇನ್ನು ಅಂಜುವರು. ಶಿಕ್ಷಣ ಮೂಲಕ ಈ ಅಂಜಿಕೆಯನ್ನು ಹೋಗ ಗೊಳಿಸಬೇಕು ಕೈಗಾರಿಕೆಗಳನ್ನು ಸ್ಥಾಪಿಸುವ ಮೊದಲು ಒಳ್ಳೇ ಮಾಹೀತಿದಾರ ರಿಂದ ಸ್ಥಾಪಿಸೋಣಾಗುವಂಥಾ ಕೈಗಾರಿಕೆಯು ಲಾಭಕರವೋ ಎಂಬುದನ್ನು ನಿರ್ಣ ಯಿಸಿಕೊಂಡು ಲಾಭಕರವಾದ ರೀತಿಯಲ್ಲಿಯೇ ಇವುಗಳು ನಡಿಸೋಣಾದರೆ ಜನರು ಇಂಥವುಗಳಲ್ಲಿ ಧೈರ್ಯಗೊಂಡು ಹಣವನ್ನು ವಿನಿಯೋಗಿಸಲು ಪ್ರಾರಂಭಿಸುವರು. ಕೈಗಾರಿಕೆಗಳ ಒಗ್ಯ ಬಂಡವಾಳವನ್ನು ಹೀಗೆ ಆಕರ್ಷಿಸುಹುದು. ಭೂಜವಾಬ್ದಾರಿ ಮೇಲೆ ಸಹ ಸೀಕಡಾ ೧೨ರಿಂದ ೨೪ರ ವರೇಗಿನ ಬಡ್ಡಿಯ ವಾಡಿಕೆಯು ದೇಶದಲ್ಲಿರು ವಾಗ ಪಾಶ್ಚಾತ್ಯ ದೇಶಗಳಿಂದ ಈ ದರಗಳಿಗಿಂತ ಕಡಮೆ ದರದ ಮೂಲಧನವು ಸಿಕ್ಕುವ ಕೈಗಾರಿಕೆಗಳಿಗೆ ಭಂಡವಾಳವು ದೊರಕುವದು ಪ್ರಕೃತಕ್ಕೆ ಕಷ್ಟಸಾಧ್ಯವಾಗ ಬಹುದು ಆದರೆ ಪರಸ್ಪರ ಸಹಾಯಕ ಲೇವಾದೇವಿ ಇತ್ಯಾದಿ ಸಂಘಗಳ ಮೂಲಕ ಬಡ್ಡಿಯ ದರವು ಕಡಮೆಯಾಗಿ ಈ ಸಾಧನದಿಂದ ಕೈಗಾರಿಕೆಗಳಿಗೆ ಬೇಕಾದ ಬಂಡ ವಾಳವು ಜನರಿಂದಲೇ ಕ್ರಮೇಣ ದೊರಕಬಹುದೆಂದು ಟಾಟಾರವರು ಅಭಿಪ್ರಾಯ ಪಡುತ್ತಾರೆ

ಶಿಕ್ಷಣ, ಭಂಡವಾಳಗಳ ಸ್ವಸ್ಥಾಪದ ನಂತರ ದೇಶದಲ್ಲಿ ಕಾರ್ಖಾನೆಗಳ ಒಗ್ಯೆ ದೊರೆಯುವ ಕಚ್ಚಾ ಸಾಮಾಗ್ರಿಗಳು, ಮತ್ತು ಕೆಲಸ ನಡಿಬಾಯಿಸುವ ವಿಷಯ ಟಾಟಾರವರು ಪ್ರಸ್ತಾಪಿಸಿರುವರು. ಸಾಕಾದಷ್ಟು ಕಚ್ಚಾ ಸಾಮಾಗ್ರಿಗಳು ಇಲ್ಲಿಜೀ ದೊರಕುವದೆಂಬುವದಕ್ಕೆ ಪರದೇಶಗಳಿಗೆ ಇಲ್ಲಿಂದ ಹೋಗುವ ಈ ಸಾಮಾಗ್ರಿಗಳ ರಾಶಿ ಗಳೇ ಸಾಕ್ಷಿಗಳಾಗಿವೆ ಕೆಲಸಗಾರರಿಂದ ಆಗುವ ಕೆಲಸವು ಈ ದೇಶದಲ್ಲಿ ಅಂಗ್ಲಾಳ ದಲ್ಲಾಗುವ ಕೆಲಸ ಸರಾಸರಿಯು ಅರೆವಾಸಿಯಾಗಿರುವದು. ಆದ್ದರಿಂದ ಕೆಲಸವು ಇದ್ದ ಆಗ್ಗವೆಂಬುವ ಮಾತು ಆಧಾರವಿಲ್ಲದ್ದೆಂದು ಟಾಟಾರವರು ಅನುಭವ ಪೂರ್ವಕ ಹೇಳಿರುವರು. ಕೈಕೆಲಸದ ಬದಲಿಗೆ ಯಂತ್ರ ಉಪಯೋಗವನ್ನು ಮಾಡುವ ಅಪ್ಪರ ವಿರುವ ಕೈಗಾರಿಕೆಗಳಲ್ಲಿ ಯಂತ್ರಗಳ ಉಪಯೋಗವು ಲಾಭಕರವಾಗಿ ಪರಿಣಮಿಸುವ ದೆಂತ ಟಾಟಾರವರು ಅಪ್ಪಣೆ ಕೊಡಿಸಿರುತ್ತಾರೆ

ಕಲ್ಲಿದ್ದಲ್ಲು ಮತ್ತು ಕಬ್ಬಿಣ ಕಾರ್ಖಾನೆಗಳ ಬೆಳವಣಿಕೆಯಿಂದ ದೇಶದ ಇತರ ಕೈಗಾರಿಕೆಗಳ ಬೆಳವಣಿಕೆಯನ್ನು ನಿರ್ಣಯಿಸಿ ದೇಶಬಾಂಧವರೆಲ್ಲರೂ ಕೈಗಾರಿಕೆಗಳ ವಿಷಯಕ್ಕೆ ಹೆಚ್ಚಾದ ಲಕ್ಷ್ಯವನ್ನು ಕೊಡಬೇಕೆಂದು ವಿಜ್ಞಾಪಿಸಿಕೊಂಡಿರುವರು

ನಿರಾಶ್ರಿತ ಜನಸಹಾಯಕ ಸಂಘ, ಮಂಗಳೂರು.

ಈ ಸಂಘದ ೧೪ನೇ ವರುಷದ ವರದಿಯು ಈಗ ಕೆಲವು ವಾರಗಳಿಂದ ನಮ್ಮ ಮುಂದೆ ಇರುವದಾದರೂ ಅದನ್ನು ಕ್ಷಪ್ತಕಾಲದಲ್ಲಿ ಪರಿಶೀಲಿಸಲು ಆಗಲಿಲ್ಲ ಈ ಕಾಲವಿಳಂಬನ್ನು ಸಂಘದ ಆಡಳಿತೆ ಕಮಿಟಿಯವರು ಕ್ಷಮಿಸುವರಾಗಿ ಕೋರುತ್ತೇವೆ

ಯುದ್ಧವು ಪ್ರಾಪ್ತವಾದಂದಿನಿಂದ ಇಂತಿಗೆ ಎತ್ತ ಪರೋಪಕಾರಾರ್ಥವಾದ ಕಾರ್ಯಗಳನ್ನು ನಿರ್ವಹಿಸುವದು ಕಷ್ಟಸಾಧ್ಯವಾಗಿ ಒಂದಿದೆ ಇಲ್ಲಿಯ ಪಂಚಮರ ಉದ್ಧರಣೆಯ ಸಾಧನೆಗೆ ಗತವರುಷದಲ್ಲಿ ಈ ಕಾರಣದಿಂದ ಅಡಚಣೆಯಿದ್ದರೂ ಈ ಸಂಘದ ಸೆಕ್ರೆಟರಿಗಳಾದ ರಾ। ಕುದ್ಮುಲ ರಂಗರಾಯರವರ ವಿಶೇಷ ಶ್ರಮದಿಂದ ಸಂಘದ ಕಾರ್ಯಗಳು ಅಭ್ಯಂತರವಿಲ್ಲದೆ ನಡೆದವು ಮತ್ತು ದೀನರನ್ನು ಉದ್ಧರಿಸುವ ಪ್ರಯತ್ನಗಳು ಮುಂದರಿದವು ಎಂಬುದನ್ನು ತಿಳಿಸಲು ಸಂತೋಷಪಡುತ್ತೇವೆ. ವಾಚಕರ ಮುಂದೆ ತರಬೇಕಾದ ಇನ್ನೊಂದು ಮಹತ್ತರವಾದ ವಿಷಯವು ವರದಿಯಲ್ಲಿರುವದು. ಈ ಬಿಲ್ಲೆಯವರಾದ ಡಾಕ್ಟರ್ ಆರ್. ಎಸ್. ಕಾರ್ನಾಡ ಬಿ ಎ ಎಮ್ ಬಿ. ಸಿ ಯಮ್ ಎಂಬ ಬರೋಡೆಯಲ್ಲಿ ಸಿವಿಲ್ ಸರ್ಜನರಾಗಿದ್ದ ಸಾರಸ್ವತ ಗೃಹಸ್ಥರು ಮೃತ್ಯುಶಯ್ಯೆಯಲ್ಲಿದ್ದಾಗ ಇಲ್ಲಿಯ ದೀನರ ಬಗ್ಯೆ ರೂ. ೬೦೦೦ವನ್ನು ತಮ್ಮ ವಿಲ್ ನಾಮೆಯ ಮೂಲಕ ದಾನವಾಗಿ ಕೊಟ್ಟಿರುವರು. ದೀನರ ಪರವಾಗಿ ಇಂಥಾ ಉದಾರ ಭಾವನೆಯು ದೇಶಬಾಂಧವರಲ್ಲಿ ಹೀಗೆ ಕಾರ್ಯರೂಪು ಹೊಂದುವಂಥಾದ್ದು ದೇಶದ ಮುಂದಿನ ಶ್ರೇಯಸ್ಸನ್ನು ಸೂಚಿಸುವ ಚಿನ್ನೆಯಾಗಿದೆ. ಮತ್ತು ಸತ್ಕಾರ್ಯಗಳ ಸಾಧನೆಯು ಯಥಾರ್ಥಭಾವದಿಂದ ನಡಿಸೋಣಾದ್ದಲ್ಲಿ ಯಾವ ಕಡೆಯಿಂಡಾದರೂ ಸಹಾಯವು ಬಂದೊದಗುವದೆಂಬುವದಕ್ಕೆ ಸಹ ಇದೊಂದು ನಿದರ್ಶನವಾಗಿರುವದು.

ನಿರಾಶ್ರಿತ ಸಂಘದವರ ಕೈಕೆಳಗಿರುವ ಕೋರ್ಟ್ ಗುಡ್ಡೆ ಪಂಚಮಶಾಲೆ, ಬೋಳೂರು ಪಂಚಮಶಾಲೆ, ಜಿಪ್ಪು ಎಲಿಮೆಂಟರಿ ಶಾಲೆ, ಬೋಳೂರು ರಾತ್ರಿ ಶಾಲೆ, ಮತ್ತು ಜಿಪ್ಪು ರಾತ್ರಿ ಶಾಲೆ, ಈ ವಿದ್ಯಾಶಾಲೆಗಳ ಮೂಲಕ ಸುಮಾರು ೨೦೦ ಪಂಚಮ ವಿದ್ಯಾರ್ಥಿಗಳಿಗೆ ವಿದ್ಯೆಯು ಕೊಡೋಣಾಗುತ್ತಿರುವದು. ಸಂಘಮರನ್ನು ಸುಶೀಲವಂತ ರನ್ನಾಗಿ ಮಾಡಲು ಅಗತ್ಯವಾದ ವಿದ್ಯಾರ್ಥಿಭವನದಂತಿರುವೆ ಊಟದ ಮನೆಯೂ ಮಿತ್ರ ಮಂಡಳಿಯೂ ಈ ವಿದ್ಯಾ ಸಂಸ್ಥೆಗಳೊಂದಿಗೆ ಇರುವವು. ಈ ಊಟದ ಮನೆಯನ್ನೂ ಮಿತ್ರ ಮಂಡಳಿಯನ್ನೂ ಪಂಚಮರೇ ನಡಿಸುತ್ತಿರುವರು ಕೈಕೆಲಸ ನೈಪುಣ್ಯ ಓದು ಒರಹದನ್ನೇ ಅಗತ್ಯ ಅಥವಾ ವಿಶೇಷವಾಗಿರುವದೆಂಬುದನ್ನು ಪಂಚಮ ವಿದ್ಯಾರ್ಥಿಗಳಿಗೆ ಚಿಕ್ಕ ವಯಸ್ಸಿನಿಂದಲೇ ಕಲಿಯುಘಂತೆ ಕೈವಣಗ್ಗಗಳಲ್ಲಿಯೂ ಎರಂಡಿ ರೇಶ್ಮೆ ಕೆಲಸ ಗಳಲ್ಲಿಯೂ ಶಿಕ್ಷಣ ಕೊಡುವ ಏರ್ಪಾಡನ್ನು ಸಂಘದವರು ನಡಿಸುತ್ತಿದ್ದಾರೆ. ಪಂಚಮ ರಂಥಾ ಕೈಕಸಬುದಾರರಿಗೆ ಕೊಡೋಣಾಗುವ ಶಿಕ್ಷಣದಲ್ಲಿ ಈ ಏರ್ಪಾಡನ್ನು ಇರಗೊಳಿ ಸಿದ್ದು ಸ್ತುತ್ಯವಾಗಿದೆ ಈ ದೇಶದ ಕೆಲಸಗಾರರಲ್ಲಿ ಜಾಣ್ಮೆಯೂ ಇಲ್ಲ. ಇಲ್ಲಿಯ ವರ ಕೆಲಸದ ಸರಾಸರಿಯು ಇತರ ದೇಶದವರ ಕೆಲಸದ ಸರಾಸರಿಗಿಂತ ಕಡಮೆಯಿದೆ ಎಂಬ ಕೊರತೆಯನ್ನು ನಮ್ಮಲ್ಲಿರುವದು ನಿರಾಶ್ರಿತ ಸಂಘದವರು ಪಂಚಮರಂಥಾ ಕೈಕಸಬುದಾರರಿಗೆ ವಿದ್ಯೆಯನ್ನು ಕೊಡುವಾಗ ಈ ಕೊರತೆಯನ್ನು ಲಕ್ಷ್ಯಕ್ಕೆ ತಂದು ಕೊಂಡು, ಇದರ ನಿವಾರಣೆಗೆ ತಕ್ಕದಾದ ವಿದ್ಯಾ ಏರ್ಪಾಡನ್ನು ಮಾಡಿಕೊಳ್ಳುವದು ಅಗತ್ಯವಾಗಿದೆ ಈಗಿನ ವಿದ್ಯಮಾನಗಳಲ್ಲಿ ದೀನರಿಗೆ ಕೋರ್ಟು ಕಚೇರಿಗಳಲ್ಲಿ ವೇದೆ ಕೆಲಸಗಳು ದೊರಿಯುವದು ಅಥವಾ ಈ ಕೆಲಸಗಳು ಇವರಿಗೆ ಕೊಡೋಣಾಗುವದು ಅಗತ್ಯವೆಂದು ಕಂಡುಬರಬಹುದು ವಿದ್ಯೆಯು ಪರವಾದ ಪ್ರೋತ್ಸಾಹ ಅಥವಾ ಆಸಕ್ತಿಯೂ ಇವರಲ್ಲಿ ಮೂಡಬೇಕಾದರೆ ತತ್ಕಾಲದಲ್ಲಿ ಸರಕಾರದ ಆಫೀಸುಗಳಲ್ಲಿ ಇಂಥಾ ವೃತ್ತಿಯು ಇವರಿಗೆ ದೊರಿಯುವದು ಯುಕ್ತವಾಗಿದೆಂದು ಹೇಳಬಹುದು ಆದರೆ ೬ ಯಾ ೭ ರೂಪಾಯಿಗಳ ನಿಕೃಷ್ಟವಾದ ವೇದೆ ವೃತ್ತಿಗಿಂತ ಹೆಚ್ಚಿನ ಗೌರವವು ರೂ ೨೦ ಯಾ ೩೦ ಕೈಯರಾಗುವ ಕೈಕಸಬುದಾರಿಕೆಯಲ್ಲಿದೆ ಎಂಬುವ ಬೋಧೆಯು ನವೀನ ಸುಧಾರಣೆಯ ಮಟ್ಟಿಗೆಳಾದ ಈ ಪಂಚಮ ವರ್ಗದವರಲ್ಲಿ ಶಿಕ್ಷಣ ಮೂಲಕ ಉಂಟಾಗುವಂತೆ ಮಾಡುವದು ಅಗತ್ಯ

ಪಂಚಮರ ಒಗ್ಯೆ ಏರ್ಪಡಿಸಿದಂಥಾ ವಾಸ್ತವ್ಯಗಳಲ್ಲಿ ೨೯ ಕುಟುಂಬಗಳು ಅಥವಾ ೧೪೮ ಜನ ನಿವಾಸಿಕರಿರುವರು ಗವರ್ನರ ದೊರೆಗಳವರು ಈ ಜಿಲ್ಲೆಗೆ ಜಿತ್ತೈಸಿದಾಗ ಪಂಚಮರು ದೊರೆಗಳವರಿಗೆ ಮಾಡಿಕೊಂಡ ವಿಜ್ಞಾಪನೆಗೆ ದೊರಕಿದ ಉತ್ತರ, ನವೀನ ದರಕಾಸ್ತು ನಿಯಮಗಳಿಂದ ಪಂಚಮರಿಗೆ ಸಿಕ್ಕಿದ ಪ್ರಯೋಜನ, ಪಂಚಮರು ಆ ಗಿಂದಾಗ್ಯೆ ತೋರ್ಪಡಿಸಿದ ರಾಜಭಕ್ತಿ, ಮೊದಲಾದ ಕೆಲವು ವಿಷಯಗಳು ಈ ವರದಿ ಯಲ್ಲಿವೆ. ಆದರೆ ಇದೆಲ್ಲವುಗಳು ಸಂದರ್ಭಾನುಸಾರ ಸ್ವದೇಶಾಭಿಮಾನಿಯಲ್ಲಿ ಪ್ರಸ್ತಾ ಪಿಸಲ್ಪಟ್ಟಿದ್ದರಿಂದ ಇವನ್ನು ತಿರಿಗೊಮ್ಮೆ ಪ್ರಸ್ತಾಪಿಸುವದು ನಮಗೆ ಅಗತ್ಯ ಕಾಣುವ ದಿಲ್ಲ

೧೯೧೪ನೇ ವರುಷದ ಸಿಲಕು ಕೂಡಿ ೧೯೧೫ರ ಉತ್ಪತ್ತಿಯು ಒಟ್ಟಿಗೆ ರೂ ೬೦೬೦—೬ ಮತ್ತು ಖರ್ಚು ರೂ. ೫೯೬೯—೧೫—೯ ಆಗಿತ್ತು ೧೯೧೫ರಲ್ಲಿ ಉತ್ಪತ್ತಿಯ ಸಂಖ್ಯೆಯು ೬೫೦೨—೧೨—೬, ಖರ್ಚಿನ ಸಂಖ್ಯೆಯು ೫೯೩೬—೧—೬ ಈ ರೀತಿಯಾಗಿತ್ತು ಗತವರುಷದಲ್ಲಿ ವಿದ್ಯೆಯ ಬಗ್ಯೆ ರೂ. ೧೦೯—೯—೧೧, ಕೈಗಾ ರಿಕ ಶಾಲೆಯ ಬಗ್ಯೆ ರೂ ೬೦೧—೧೫—೧, ಮತ್ತು ಪಂಚಮರ 'ಕೊಲೊನಿ'ಯಾ ವಾಸ್ತವ್ಯಗಳ ಬಗ್ಯೆ ರೂ. ೧೫೬೬—೬—೯ ಖರ್ಚಾಗಿರುತ್ತದೆ ಸಂಘದ ಕಮ್ಮಿಟಿ ಮೆಂಬರರ ಪೈಕಿ ರ್ಯಾಸಾಹೇಬ ಗೋಪಾಳ ಪೈಗಳವರು ಮೃತಪಟ್ಟಿದ್ದರಿಂದ ಇವರ ಬದಲಿಗೆ ಮ। ರಾ। ಎಮ್. ಮಾಧವರಾಯ ಬಿ. ಎ ಬಿ ಎಲ್. ರವರನ್ನೂ ಮ। ರಾ। ಶೇಷ ಭಟ್ಟ ಭೀಡೆ ಬಿ. ಎ. ಬಿ. ಎಲ್. ರವರು ಸಂಘದ ಸಭೆಗಳಿಗೆ ಬರಲು ಅವಕಾಶವಿಲ್ಲದೆ ಕಮ್ಮಿಟಿ ಮೆಂಬರುತನಕ್ಕೆ ರಾಜಿನಾಮೆ ಕೊಟ್ಟಿದ್ದರಿಂದ ಮ। ರಾ। ಕಾರ್ನಾಡ ಸದಾಶಿವ ರಾವ್ ಬಿ ಎ ಎಲ್. ಎಲ್ ಬಿ. ಯವರನ್ನೂ ಕಮ್ಮಿಟಿ ಮೆಂಬರರಾಗಿ ಆರಿಸಿರುತ್ತಾರೆ. ಪತಿತರ ಉದ್ಧರಣೆಯ ಈ ಸಾಧನೆಯಲ್ಲಿ ಇಲ್ಲಿಯವರ ಪ್ರೋತ್ಸಾಹವೂ ಸಹಾಯವೂ ಮೊದಲಿನಿಗಿಂತ ಹೆಚ್ಚಿಚ್ಚಾಗಿ ದೊರಕುತ್ತಿರುವದೆಂತ ವರದಿಯಲ್ಲಿ ತೋರಿಬರುವದು. ವಿವಾಹ, ಉಪನಯನ, ಉತ್ತರಕ್ರಿಯೆ, ಶ್ರಾದ್ಧ ಮೊದಲಾದವುಗಳ ಕಾಲದಲ್ಲಿ ನಿರಾ ಶ್ರಿತ ಜನಸಹಾಯ ಸಂಘಕ್ಕೆ ಸಹಾಯವನ್ನು ಕೊಡುವ ವಾಡಿಕೆಯು ರೂಢಿಗೆ ಬರುತ್ತಿದೆ.

ಲಕ್ಷ ಕಟ್ಟಳೆಯಲ್ಲಿರುವ ಪತಿತರ ರಾಶಿಯು ಸಮುದ್ರಕ್ಕೆ ಸಮಾನವೆಂತ ಎಣಿಸಿದರೆ ಇವರ ಬಗ್ಗೆ ಈ ತನಕ ನಡೆದಿರುವ ಪ್ರಯತ್ನವು ಬಂದು ಬಿಂದು ಮಾತ್ರವಾಗುವದು. ನೆರವೇರಬೇಕಾದ ಸಾಧನೆಯು ಇನ್ನೂ ಬಹಳವಾಗಿರುವದ್ದು ಪತಿತರ ಉದ್ಧರಣೆಯ ಸಾಧನೆಯು ತಮ್ಮ ಕರ್ತವ್ಯವೆಂತ ತಿಳಿಕೊಂಡ ಜನರ ಸಂಖ್ಯೆಯು ಹೆಚ್ಚಿದಂತೆ ಈ ಸಾಧನೆಯ ಫಲವು ನೆರೆವೇರುವದು.

ಕೆನರಾ ಬಾಲಿಕಾ ಶಾಲೆಯ ವರ್ಷಾವಧಿ ದಿನ ಮು. ರಾ. ಸೂಜೀರ್ ರಘುನಾಥಯ್ಯನವರ ಧರ್ಮಪತ್ನಿಯವರು ಮಾಡಿದ ಭಾಷಣ.

ಈ ಬಾಲಿಕಾ ಪಾಠಶಾಲೆಯು ವರ್ಷಾವಧಿ ವೃತ್ತಾಂತಗಳನ್ನು ಒರಿದ್ದಲ್ಲಿ ಶಾಲೆಯ ಪೂರ್ವಭಾವಿ ದಿನಂಗತರಾದ ಸು.ಬ್ರಾಯ ನೈಗೆಳವರಿಂದ ಮುಖ್ಯವಾಗಿ ಸ್ಥಾಪಿಸಲ್ಪಟ್ಟು, ಅವರ ಈ ಸತ್‌ಕೃತ್ಯವನ್ನು ಅನುಮೋದಿಸುವಂಥ ಅನೇಕ ಸದ್‌ಗೃಹಸ್ಥರು ತಿಂಗಳುಗಳ್ಲೆಯಿಂದ ಮಾಡುತ್ತಾ ಬರುವ ದ್ರವ್ಯ ಸಹಾಯದಿಂದ ಈ ಶಾಲೆಯು ವೃದ್ಧಿಪಡಿಯುತ್ತಾ ಒಂದೆಂಬುವದು ಖಚಿತವಾಗುತ್ತದೆ ಈ ಸಂಸ್ಥೆಯು ನಮ್ಮ ಊರಿನ ಏಳಿಗೆಗೆ ಸಹಕಾರಿಯಾಗಿರುವದರಿಂದ ಈ ಶಾಲಾ ಚಾಲಕಿಯರು ಮಾತ್ರವಲ್ಲಾ, ನಾವೆಲ್ಲರೂ ಸದರಿ ಮಹಾಪುರುಷರ ವತ್ತ ಸದ್‌ಗೃಹಸ್ಥರ ಮಹದುಪಕಾರವನ್ನು ಸ್ಮರಿಸುತ್ತಿರಬೇಕು. ಈ ಶಾಲೆಯಲ್ಲಿ ಸ್ತ್ರೀ ಶಿಕ್ಷಣದ ಬಗ್ಗೆ ಮಾಡುವ ಉಪಾಯದ ಕುರಿತು ವಿದ್ಯಾ ಇಲಾಖೆಯವರು ಸಂತೋಷಪಟ್ಟಿರುತ್ತಾರೆ ಮತ್ತು ಈ ಶಾಲೆಗೆ ಕೊಡುವ ಗ್ರಾಂಟು (ಸಹಾಯ ದ್ರವ್ಯ)ವನ್ನು ವರ್ಷ ವರ್ಷ ಹೆಚ್ಚಿಸುತ್ತಾ ಬಂದಿದ್ದಾರೆಂಬುದು ಸಂತೋಷಕರ ಸಂಗತಿಯಾಗಿದೆ ಈ ಕುರಿತು ಲಗಳಿತೆದಾರರನ್ನೂ ಉಪಾಧ್ಯಾಯಿನಿಯರನ್ನೂ ಅಭಿನಂದಿಸುವರು ನಮ್ಮ ಕರ್ತವ್ಯವಾಗಿದೆ ಸ್ತ್ರೀಶಿಕ್ಷಣದಲ್ಲಿ ಶಾಸ್ತ್ರೀಯವಾದ ಅಭಿರುಚಿಯುಳ್ಳ ಒಬ್ಬ ಸದ್‌ಗೃಹಸ್ಥರು ಬಾಲಕಿಯರಿಗೆ ಸಂಗೀತ ನೈಪುಣ್ಯವನ್ನು ಕೊಡವರ್ಕ್ಯಾಗಿ ಸ್ವತ್ಯ ರೀತ್ಯಾ ಏರ್ಪಾಡುಮಾಡಿದ್ದಾಗಿಯೂ ದಿನನಿತ್ಯದುಳ್ಳ ಕೆಲವು ಮಹಿಳೆಯರು ಈ ಶಾಲೆಗೆ ವಿಶೇಷ ವಿಧಿಯಾಗಿ ದ್ರವ್ಯಸಹಾಯವನ್ನು ಮಾಡಿದ್ದಾಗಿ ಕೂಡಾ ಕಂಡುಬರುತ್ತದೆ ಇವರ ಉದಾರ ನರ್ತನೆಯನ್ನು ಈಶ್ವರಾನುಗ್ರಹದಿಂದ ದಿನಾಭ್ಯುದಾರ ಬೇರೆಯವರೂ ಕೂಡಾ ಅನುವರ್ತಿಸಾನೆಂದು ಕೋರಬೇಕಾಗಿದೆ

ಈ ಹುಡುಗಿಯರ ಶಾಲೆಯಲ್ಲಿ ವಿದ್ಯೆಯು ದಾನವಾಗಿ ಕೊಡಲ್ಪಡುತ್ತೆ ಆ ಕಾರ್ಯವನ್ನು ಸಾಗಿಸುವದಕ್ಕಾಗಿ ನೇಮಿಸಿದ ಉಪಾಧ್ಯಾಯಿನಿಯರ ತಮ್ಮ ಕೆಲಸವನ್ನು ಮನಃಪೂರ್ವಕವಾಗಿ ಶ್ರೇಷ್ಠದಿಂದ ನಿರ್ವಹಿಸಿ ಬರುತ್ತಾರಾಗಿ ಕಂಡು ಬರುವದರಿಂದ, ಇವರಿಬ್ಬರಿಗಾಗಿಯಾದರೂ ಕೂಡಾ ಈ ಶಾಲೆಯ ಹುಡುಗಿಯರು ಪೈಲಾತರಗತಿಗಳನ್ನು ಎಷ್ಟರವರೆಗೆ ವಿದ್ಯಾಭ್ಯಾಸವನ್ನು ಪಡೆಯುವ ಹೊಂಬಯಕೆಯಿಟ್ಟಿಗೆ ಅದನ್ನು ಪಡಕೊಂಡಾರೆಂತ ಕ್ಲೋಬೇಕಾಗಿದೆ ಕೆಳವರ್ಗದಲ್ಲಿ ಪೈಲ ತರಗತಿಗಳಲ್ಲಿ ಹುಡುಗಿಯರು ಸ್ವಲ್ಪವಿಟ್ಟಿಗೆ ಹೆಚ್ಚಿನಂಪದ್ದು ಕಾಣಿ ಸೂಚಕವಿಲ್ಲೆಂಕಂ.

ಈಗ ಮಕ್ಕಳಿಗೆ ಸ್ವಲ್ಪ ಬೋಧನೆಯು ಬಂದೆರಡು ಮಾತುಗಳನ್ನು ಹೇಳುವೆನು.

ಮುದ್ದು ಮಕ್ಕಳಿರಾ! ನೀವು ರುಚಿಕರವಾದ ಮತ್ತು ಪುಷ್ಟಿಕರವಾದ ಶಿಶರ ಆಹಾರವನ್ನು ಮಿತಿಯಿಂದ ಸೇವಿಸಿ ನಿಮ್ಮ ದೇಹವನ್ನು ರತಿಯಾಗಿ ಬಲಿಸಿ ನಿರ್ಮಲವಾದ ಬಟ್ಟೆಗಳನ್ನುಟ್ಟುಕೊಳ್ಳುತ್ತಾ ಅವಶ್ಯವಿರುವ ವಿಹಾರ (ವ್ಯಾಯಾಮ)ವನ್ನು ಮಾಡುತ್ತಿರ್ರು, ನಿಮ್ಮ ದೇಹವನ್ನು ಆರೋಗ್ಯದಿಂದಲೂ ಧೈರ್ಯತೆಯಿಂದಲೂ ಇರಿಸಿರಿ ಓದುಕುಳಿತದಿಂದ ನಿಮ್ಮ ಲೌಕಿಕ ಅನುಭವವನ್ನು ವೃದ್ಧಿಪಡಿಸಿರಿ ಬುದ್ಧಿಶಾಕ್ತಿಯನ್ನು ಹೆಚ್ಚಿಸಿಕೊಳ್ಳಿರಿ. ಗುರುಹಿರಿಯರನ್ನು ಸನ್ಮಾನಿಸಿರಿ ತನ್ನಂತೆಯೇ ಇತರರೆಂದು ತಿಳಿದುಕೊಂಡು ನಿಮ್ಮ ನೆರೆಯವರನ್ನು ಪ್ರೀತಿಸಿರಿ ಶ್ರೀಗುರುದೇವರಲ್ಲಿ ಜೂನ ನಮ್ಮ ಚಕ್ರವರ್ತಿಯರಲ್ಲಿಯೂ ಭಕ್ತಿಯನ್ನು ನಿಷ್ಠೆಯಿರಿ, ಹೀಗೆ ಮಾಡುವದರಿಂದ ನೀವು ಸುಖವನ್ನೂ ಶ್ರೇಯಸ್ಸನ್ನೂ ಪಡೆಯುವಿರಿ. ಹಿಂದಿನ ಕಾಲದಲ್ಲಿ ಈ ನಮ್ಮ ಭರತಖಂಡದಲ್ಲಿ ವಿದುಷಿ ಮತ್ತು ಸುಜ್ಞಾನ ಸಂಪನ್ನತೆಯುಳ್ಳ ಗಾರ್ಗಿ ಸುಲಭಾ ಮೈತ್ರೇಯಿ ಮೊದಲಾದ ಹೆಸರುವಾಸಿಯಾದ ಸ್ತ್ರೀರತ್ನಗಳು ಇದ್ದವು ಎಂಬದು ನೀವು ಕೇಳಿರಬಹುದು ನೀವು ಕೂಡ ಅವರಂತೆಯೇ ಸುಶೀಲೆಯರಾಗಿಯೂ ಸುಜ್ಞಾನಿಗಳಾಗಿಯೂ ಯಾಕೆ ಆಗಕೂಡದು? ಅವರ ಆದರ್ಶನವನ್ನಿಟ್ಟುಕೊಂಡು ನಡೆದರೆ ಆ ಪದವಿಯು ಸುಗಮವಾಗದೇ ಹೋಗದು.

ನೀವು ಆರೋಗ್ಯವಂತರಾಗಿಯೂ ದೇಹಧಾರ್ಢ್ಯ ಉಳ್ಳವರಾಗಿಯೂ ನಿರ್ಮಲತ್ಮೆಯರಾಗಿಯೂ ಗುರುದೇವ ರಾಜಭಕ್ತಿಯುಳ್ಳವರಾಗಿಯೂ ಇದ್ದರೆ, ನಿಮ್ಮಲ್ಲಿ ಜನಿಸುವ ಮಕ್ಕಳೂ ಸಹಜವಾಗಿಯೇ ಬಲಶಾಲಿಗಳಾಗಿಯೂ ಬುದ್ಧಿವಿಚಕ್ಷಣೆಯುಳ್ಳವರಾಗಿಯೂ ಸದ್ಗುಣಿಗಳಾಗಿಯೂ ಆಗುತ್ತಾರೆ ಈ ನಮ್ಮ ಭರತಖಂಡದ ನವ್ಯಭಿಗೆ ಇದಕ್ಕಿಂತಲೂ ಹೆಚ್ಚೇನು ಮಾಡತಕ್ಕದಿದೆ?

ನಾನು ಇನ್ನೊಂದು ಮಾತು ಹೇಳತಕ್ಕದಿದೆ. ಈ ಅಧ್ಯಕ್ಷತೆಗೆ ತಕ್ಕ ವಿದ್ವತ್ತು ಯೋಗ್ಯತೆಯೂ ಉಳ್ಳವರಿಗೆ ಜೊನಾಯಿಸಬೇಕಿತ್ತು. ಈ ಮಾನ್ಯಸ್ಥಾನವನ್ನು ನನಗಿತ್ತು ಸತ್ಕರಿಸಿದುದಕ್ಕೆ ಈ ಶಾಲೆಯ ಆಡಳಿತೆದಾರರಿಗೆ ನಾನು ಆಭಾರಿಯಾಗಿದ್ದೇನೆ.

ಯಂತ್ರ ಮೂಲಕ ನೀರು ಹಾಯಿಸುವುದು

ಯಂತ್ರಗಳ ಮೂಲಕ ನೀರು ಹಾಕಿ ಪೈರು ಬೆಳಿಸುವದಕ್ಕೆ ಬೇಕಾದ ಸೌಕರ್ಯಗಳು ನಮ್ಮ ಜಿಲ್ಲೆಯಲ್ಲಿ ಎಷ್ಟೋ ಕಡೆಗಳಲ್ಲಿ ಇವೆ. ಈ ಬಗ್ಗೆ ಹೊಳೆ ಕೆರೆಯ ವಿಸ್ತಾರವಾದ ಬೆಟ್ಟುಗದ್ದೆಗಳೇ ಯೋಗ್ಯವಾದ ಸ್ಥಳಗಳಾಗಿವೆ. ಈ ರೀತಿ ಕೃಷಿ ಮಾಡುವ ಬಗ್ಗೆ ಕನಿಷ್ಟ ಪಕ್ಷ ೨೦ ಎಕ್ರೆ ಸ್ಥಳವಾದರೂ ಬೇಕು. ಪಂಪು ಹಾಕುವ ಬಗ್ಗೆ ನೀರು ಸಮೃದ್ಧಿಯಾಗಿರಬೇಕು ನೀರು ತಕ್ಕೊಂಡು ಹೋಗಬೇಕಾದ ಸ್ಥಳವು ನೀರಿನಿಂದ ೬೦ ಫೀಟು ಎತ್ತರಕ್ಕಿಂತ ವಿಶೇಷ ಇರುವದು ಲಾಭಕರವಲ್ಲ; ತಗ್ಗಾದಷ್ಟು ಒಳ್ಳೇದು. ಉಪ್ಪು ನೀರು ಉಪಯೋಗವಿಲ್ಲ, ಆದರೆ ಉಪ್ಪುನೀರಿನ ಹೊಳೆಯ ಒಡಿಯಲ್ಲಿ ಕೆರೆ ತೋಡಿ ಧಾರಾಳ ನೀರು ಸಿಕ್ಕುವ ಪಕ್ಷಕ್ಕೆ ಅಂಥಾ ಸ್ಥಳದಲ್ಲಿಯೂ ಯಂತ್ರಗಳನ್ನು ಲಾಭಕರವಾಗಿ ಉಪಯೋಗಿಸಬಹುದು. ಯಂತ್ರಗಳನ್ನು ತಂದು ಸ್ಥಾಪಿಸಲಿಕ್ಕೆ ಒಟ್ಟಿಗೆ ೪ ಸಾವಿರ ರೂಪಾಯಿಗಿಂತ ಕಡಿಮೆ ಸಾಲದು. ನೀರು ಹಾಕಿ ಕೃಷಿ ಮಾಡುವ ಸ್ಥಳದ ವಿಸ್ತೀರ್ಣವು ಎತ್ತರದ ಮೇಲೂ, ಮಣ್ಣಿನ ಗುಣದ ಮೇಲೂ ಹೊಂದಿರುತ್ತದೆ. ನಮ್ಮ ಊರಿನಲ್ಲಿ ಇಂಥಾ ಸೌಕರ್ಯವಾದ ಸ್ಥಳಗಳಿರುವ ವಿಷಯವಂತರು ಒಹು ಮಂದಿ ಇದ್ದಾರೆ ಎಂಬದಕ್ಕೆ ಸಂಶಯವಿಲ್ಲ. ಆದರೂ ಹೀಗೊಂದು ಕ್ರಮದಿಂದ ಕೃಷಿಮಾಡುವದೆಂತ ಕೇಳದವರೂ ಕೂಡಾ ಅನೇಕರಿರುವರು. ವ್ಯವಸಾಯ ಇಲಾಖೆಯವರು ಈ ಕುರಿತು ತಕ್ಕಮಟ್ಟಿಗೆ ಪ್ರಯತ್ನ ತಕ್ಕೊಂಡಿದ್ದಾರೆ. ಆದರೆ ನಮ್ಮ ಊರಲ್ಲಿ ಅವರ ಪ್ರಯತ್ನಗಳೇನೂ ಗೊತ್ತಾಗಲೇ, ಇಲ್ಲ. ಹೀಗಾಗಿರಲಿಕ್ಕೆ ಕಾರಣವೇನೆಂದು ಸೋಡುವ —

ವಿದ್ಯಾಭ್ಯಾಸವು ನಮ್ಮ ಊರಲ್ಲಿ ತೃಪ್ತಿಕರವಾಗಿ ಇಲ್ಲ. ವಿದ್ಯಾ ವಿಷಯದಲ್ಲಿ ತಾತ್ಪರ್ಯವಿರುವವರು ತಮ್ಮ ಮಕ್ಕಳನ್ನು ಸರಕಾರಿ ಉದ್ಯೋಗಕ್ಕೆ ಠಾಗಲಿಕ್ಕೋ ವಕೀಲರಾಗಲಿಕ್ಕೋ ಯೋಗ್ಯರನ್ನಾಗಿ ಮಾಡಬೇಕೆಂತ ಇಚ್ಛಿಸುವರಲ್ಲದೆ ನಮ್ಮ ದೇಶದ ವನಧಾನ್ಯಾಭಿವೃದ್ಧಿಯನ್ನು ಇಚ್ಛಿಸಿ ತಮ್ಮ ಮಕ್ಕಳನ್ನು ಇಂಥಾ ಕೆಲಸಗಳಿಗೆ ಯೋಗ್ಯರನ್ನಾಗಿ ಮಾಡುವವರು ಒಹು ವಿರಲಿ. ಹೀಗಿರುತ್ತಾ ನಮ್ಮ ಊರ ವಿದ್ಯಾವಂತರಿಗೆ ಇಂಥಾ ಕೆಲಸಗಳಿಗೆ ದೃಷ್ಟಿ ಇಡಲಿಕ್ಕೆ ಸೌಕರ್ಯವಿಲ್ಲ.

ಯಂತ್ರಗಳನ್ನು ತಂದು ಸ್ಥಾಪಿಸಿದರೆ ಅವುಗಳ ಪಾರುಪತ್ಯ ತಕ್ಕೊಳ್ಳಲಿಕ್ಕೆ ತಕ್ಕ ಅನುಭವಸ್ಥರು ಬೇಕು ನಮ್ಮ ಊರಲ್ಲಿ ಅಂಥವರು ಒಹು ಕಡಿಮೆ. ಅನ್ಯ ಕಡೆಗಳಿಂದ ಅನುಭವಸ್ಥರನ್ನ ತರಿಸಲಿಕ್ಕೆ ಖರ್ಚು ಹೆಚ್ಚಾಗುವದು. ಯಂತ್ರಗಳನ್ನು ತರಿಸಿ ಸ್ಥಾಪಿಸುವ ಕಾರ್ಯವು ದೊಡ್ಡದಲ್ಲ ಕೆಲಸದ ಮಧ್ಯದಲ್ಲಿ ಸ್ವಲ್ಪ ಕೇಡು ಬಂದರೆ ಅದೇನೆಂದು ಕಂಡುಹಿಡಿದು ಸರಿಪಡಿಸಲಿಕ್ಕೆ ತಕ್ಕ ಜನರಿಲ್ಲದಿರುವದೇ ಯಂತ್ರಗಳ ಉಪಯೋಗಗಳಲ್ಲಿ ಜನರು ಅಧೈರ್ಯಪಡಲಿಕ್ಕೆ ಕಾರಣ. ಈ ಅಧೈರ್ಯವನ್ನು ಬಿಟ್ಟು ಈ ವಿಷಯದಲ್ಲಿ ಕೆಲವರು ಉತ್ತೇಜನ ತಕ್ಕೊಂಡಪಕ್ಷಕ್ಕೆ ಈ ದೇಶದ ಅಭಿವೃದ್ಧಿಯು ಇಮ್ಮಡಿಗಿಂತ ಹೆಚ್ಚಾಗುವದು. ಅನೇಕರಿಗೆ ಜೀವನೋಪಾಯಕ್ಕೆ ದಾರಿಯಾಗುವದು. ಹಣವಂತರು ಮತ್ತಷ್ಟು ಹಣವಂತರಾಗುವರು. ಲಕ್ಷ್ಮೀದೇವಿಯೂ, ಸರಸ್ವತೀದೇವಿಯೂ ನಮ್ಮ ಜನರಿಗೆಲ್ಲಾ ಪ್ರಸನ್ನರಾಗುವರು

ಆದ್ದರಿಂದ ಇಂಥಾ ಯಂತ್ರಗಳನ್ನು ತರಿಸಿ ಸಮುದ್ರಕ್ಕೆ ವೃಥಾ ಹೋಗುವ ನೀರನ್ನು ಪೈರಿಗೆ ಉಪಯೋಗಿಸಲಿಕ್ಕೆ ಇಚ್ಛಿಸುವ ಮಹಾತ್ಮರು ತಿಳಿಯಬೇಕಾದ್ದೇ ನಂದರೆ:

ಯಂತ್ರಗಳನ್ನು ತಿಗಿಯುವವರೇ ಅವುಗಳಲ್ಲಿ ಮಾಹಿತ್ಯವನ್ನು ಕೂಡ ಸಾಧ್ಯವಾದ ಮಟ್ಟಿಗೆ ಕಲಿಯಬೇಕು. ಹಾಗಾದರೆನೇ ಅವರಿಗೆ ಅದರ ಮೇಲೆ ತಾತ್ಪರ್ಯ ಬೀಳುವದಷ್ಟೆ. ಒಮ್ಮೆ ಯಂತ್ರಗಳ ಪಾರುಪತ್ಯದಲ್ಲಿರುವವರು ಸಂಬಳದ ಚರ್ಚೆಯಿಂದ ಬಿಟ್ಟುಹೋದರೂ ಕೂಡಾ ಗಣ್ಯಮಾಡಬೇಕಾದ್ದು ಅಗತ್ಯವಿಲ್ಲ ನಾವು ಹೇಳಿದ ಸಂಬಳಕ್ಕೆ ಕೆಲಸದವರು ಸಿಕ್ಕುವರು. ಯಂತ್ರಗಳಲ್ಲಿ ಸ್ವತಹಾ ಮಾಹಿತ್ಯ ಪಡಿಯಲಿಕ್ಕೆ ಸುರುವಿನಲ್ಲಿ ಸ್ವಲ್ಪ ಕಷ್ಟಪಡಬೇಕಾದೀತು. ಆದರೆ ಫಲವು ನಂತರದಲ್ಲಿ ಸಿಕ್ಕುವದು.

ಕೃಷಿಗೆ ನೀರು ಹಾಕುವ ಬಗ್ಗೆ ಸೆಂಟ್ರಿಫ್ಯೂಗಲ್ ಪಂಪ್ ಮತ್ತು ಓಯಿಲ್ ಅಥವಾ ಗ್ಯಾಸಿಂಜನ್ ಬೇಕು. ಇವುಗಳಲ್ಲಿ ಸಾಕಷ್ಟು ಅನುಭವಪಡಿಯಲಿಕ್ಕೆ ಹೆಚ್ಚಾದರೆ ೬ ತಿಂಗಳು ಬೇಕು. ಬುದ್ಧಿವಂತರಿಗೆ ಒಂದೇ ತಿಂಗಳು ಸಾಕಾಗುವದುಂಟು. ಇನ್ನು ಕೆಲವು ವಿವರನ್ನು ಹಿಂದಿನಿಂದ ಬರಕೊಳ್ಳುತ್ತೇನೆ.

N. K. Bhatt.

ಯುದ್ಧ ಸವಾಚಾರ.

———o———

ತಾ. ೩೦ನೇ ದಶಂಬರ.

ವೈಪ್ರೆಸ್ ಪ್ರಾಂತ್ಯದಲ್ಲಿ ತೋಪು ಕಾಳಗವು ನಡೆಯುತ್ತಿದೆ ಒಂದು ಕಡೆಯಲ್ಲಿ ಶತ್ರುಗಳು ಹಿನ್ನೆಟ್ಟಿರುವರು ವಾಯುನಾವೆಗಳ ಕದನ ನಡೆದು ಶತ್ರುಗಳ ಎರಡು ವಾಯುನಾವೆಗಳ ನಾಶವಾಗಿರುವವು ವಿತ್ರರ ಒಂದು ವಾಯು ನಾವೆಯು ಕಾಣೆಯಾಗಿರುತ್ತದೆ ಶತ್ರುಗಳ ತೋಪುಗಳು ವೈಪ್ರೆಸ್ ಮತ್ತು ಸೈಂಟ್ ಜೀನ್ ಎಂಬಲ್ಲಿ ಗುಂಡು ಹಾರಿಸುತ್ತಲಿವೆ

ರುಶ್ಯಾ ಸೇನೆಯ ಜನರಲ್ ರಶ್ಕಿಯವರ ಆರೋಗ್ಯ ಸೆಟ್ಟಿಗಿಲ್ಲದಿರುವ ಕಾರಣ ಕೆಲಸದಿಂದ ನಿವೃತ್ತರಾಗಿರುವರು

ಬಲ್ಗೇರಿಯನರ ಸೈನ್ಯವು ಎಲ್ಬಾಸಾನಿಗೆ ತಲಪಿ, ಡುರಾಜೊ ಕಡೆಗೆ ಮುಂದರಿಯುತ್ತಲಿದೆ ಎಂದು "ಪೆಟಿಟ್ ಜರ್ನಲ್"ನ ಅಥೆನ್ಸ್ ವಾರ್ತಾಹಾರರು ತಿಳಿಸುವರು

ಬಲ್ಗೇರಿಯನರು ಗ್ರೀಕ ಸರಹದ್ದನ್ನು ದಾಟಿ ಬಂದರೆ ಕಾವು ಪ್ರೆಂಚರೊಡನೆ ಸೇರಿಕೊಳ್ಳುವೆವೆಂತ ಗ್ರೀಕ ಸೇನೆಯ ಆಫೀಸರರು ಹೇಳಿರುವರೆಂತ ಸಲೋನಿಕದಿಂದ ತಂತೀ ಬಂದದೆ ಬಲ್ಗೇರಿಯನರು ಗ್ರೀಕ ಸರಹದ್ದನ್ನು ದಾಟಿದಂತೆ ಜರ್ಮನರ ಆಪ್ತರೆ ಕೊಟ್ಟಿರುವರೆಂತ ತಿಳಿದು ಬಂದದೆ ಆಸ್ಟ್ರಿಯ ವತ್ತ ಜರ್ಮನರು ಗ್ರೀಕ ಮಕೆಡೋನಿಯವನ್ನು ನುಗ್ಗಿ ಬರಲು ಸಕಲ್ಪಿಸಿ, ಗ್ರೀಕ ಸರಹದ್ದಿನಲ್ಲಿ ೧೫೦,೦೦೦ ಸೇನಿಕರನ್ನೂ, ಅಪಾರವಾದ ಆಯುಧ ಧಾನ್ಯಾಗ್ರಿಗಳನ್ನೂ ಒಟ್ಟು ಹಾಕಿರುತ್ತಾರೆ

ಬೊಸ್ಫರಸ್ ಅತ್ಯಾಕ್ರಮವನ್ನು ರಣರಂಗದಿಂದ ಬ್ರಿಟಿಷರ ತಮ್ಮ ಸೇನೆಯನ್ನು ಹಿಂದಕ್ಕೆ ಕರೆಸಿರ ಕ್ರಾತಿ

ತಾ. ೨೩ನೇ ದಶಂಬರ.

ಬ್ರಿಟಿಷರ 'ಹಂಟ್ಲಿ' ಮತ್ತು 'ಬಾಫ್ಟೆರ್ಡ್" ಎಂಬ ಎರಡ ಹಡಗಗಳನ್ನು ಜರ್ಮನರ ಜಲಂತರ್ಗಾಮಿ ನಾವೆಗಳು ವಜ್ರಾಘಿಸಿರುತ್ತವೆ ಮೋರ್ವೇ ದೇಶವರ 'ಗ್ರಿನ್‌ಲೇಂಡ್' ಎಂಬ ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ಹಿಡಿದಿರುತ್ತದೆ

ಫ್ರಾನ್ಸ್ ರಣರಂಗದಲ್ಲಿ ಹಾರ್ಟ್‌ಮಾನ್ ಸ್ವೆಲ್ಟ್‌ಕೊಫ್ ಎಂಬಲ್ಲಿ ಪ್ರೆಂಚರಿಗೆ ಒಂದು ದೊಡ್ಡ ಜಯವಾಗಿರ ಕ್ರದೆ ಇಲ್ಲಿ ಪ್ರೆಂಚರು ೧೫೦೦ ಜರ್ಮನ ಸೇನಿಕರನ್ನು ಶೆರೆಹಿಡಿದಿರುತ್ತಾರೆ

ಜರ್ಮನಿಯ ಮೆಸ್ಸಿನ್ಸ್ ಎಂಬಲ್ಲಿಯ ಗುಂಡುವರ್ಷಗಳನ್ನು ವಾಡುವ ಕಾರ್ಖಾನೆಯಲ್ಲಿ ನಿತ್ಯ ಉಂಟಾಗಿ ವಿಶ್ವ ಹಾನಿಯಂಟಾಗಿದೆ ಅಲ್ಲಿ ಕೆಲಸ ಮಾಡುತ್ತಿದ್ದ ೬೦೦ ಹೆಂಗಸರಲ್ಲಿ ೩೦೦ ಹೆಂಗಸರು ಮಡಿದುಹೋದರು

ಜರ್ಮನ ಕೈಸರನ ದೌತ್ಯಸ್ಥಿತಿಯು ಸೆಟ್ಟಿಗಿಲ್ಲವೆಂಬುದರಿಂದ ಕೈಸರ್ ಬರ್ಲಿನ್ ನಗರದಿಂದ ರಣರಂಗಕ್ಕೆ ಹೊರಡಲ್ಲಿರುವೆಂತ ತಿಳಿದುಬಂದದೆ

ಗ್ರೀಕ – ಅಲ್ಬಾನಿಯ ಸರಹದ್ದು ದಾಟಿ ಮುಂದೆ ಬಂದ ಬಲ್ಗೇರಿಯನರ ಸೇನೆಗೂ ಗ್ರೀಕ ಸೇನೆಗೂ ಕೊರಿಟ್ಟ ಪ್ರಾಂತ್ಯದಲ್ಲಿ ಕದನ ನಡೆದು ಉಭಯತರಲ್ಲಿಯೂ ನಷ್ಟ ಉಂಟಾಗಿರುವದು. ಗ್ರೀಕರ ಬೆಂಬಲ ಸೇನೆ ಕೊರಿಟ್ಟ ಪ್ರಾಂತ್ಯಕ್ಕೆ ಹೋಗಿರ ಕ್ರದೆ

ಬ್ರಿಟಿಷರ ಜಲಂತರ್ಗಾಮಿ ನಾವೆಯು ಜರ್ಮನರ "ಮೊರೊಸ್" ಎಂಬ ಹಡಗವನ್ನ ವಮೋರೀರದಲ್ಲಿ ವಜ್ರಾಘಿಸಿರ ಕ್ರದೆ

ತಾ. ೨೪ನೇ ದಶಂಬರ.

ಜರ್ಮನರ ಜಲಂತರ್ಗಾಮಿ ನಾವೆಯು ಜಪಾನರ 'ಯಸಾಕ ಮೂರು' ಎಂಬ ಹಡಗನ್ನು ಮುಳುಗಿಸಿರುತ್ತದೆ ಈ ಹಡಗವು ಕಳದ ವರ್ಷದಲ್ಲಿ ಕಟ್ಟಿಸಿದ್ದು ೧೦,೯೩೦ ಟನ್ ಭಾರವಾಗಿದ್ದಿತು ಹಡಗದಲ್ಲಿ ಅನೇಕ ಪ್ರಯಾಣಿಕರೂ ಕ್ರಯಬಾಳುವ ಸಾಮಾನುಗಳೂ ಇದ್ದವು. ಹಡಗವು ೪೫ ನಿಮಿಷದೊಳಗೆ ಮುಣುಗಿಹೋಯಿತು

ಆಸ್ಟ್ರಿಯನರು "ಆಂಕೋನ" ಹಡಗವನ್ನು ಮುಣುಗಿಸಿದ ಸಂಬಂಧವಾಗಿ ಅಮೇರಿಕ ಸರಕಾರದವರು ಆಸ್ಟ್ರಿಯ ಸರಕಾರದವರಿಗೆ ಕಡೆಯ ಪತ್ರವನ್ನು ಕಳುಹಿಸಿಕೊಟ್ಟಿರುವರೆಂತ ತಿಳಿದುಬಂದದೆ

ಟೆಲ್ಲಮ್ ರಣರಂಗದಲ್ಲಿ ಲಾಬಾಸ್ಸೆ ಮತ್ತು ವೈಪ್ರೆಸಿನಲ್ಲಿ ತೋಪು ಕಾಳಗವು ಮಡೆಯುತ್ತಿರುವದು.

ವೊಸ್ಗೆ ಪರ್ವತ ಶಿಖರದಲ್ಲಿದ್ದ ಜರ್ಮನರ ಮದ್ದುಗುಂಡುಗಳ ಕೊರಡಿಯನ್ನು ಪ್ರೆಂಚರ ತೋಪುಗಳು ನಾಶಮಾಡಿರುತ್ತವೆ. ಪ್ರೆಂಚರು ೧೫೦೦ ಜರ್ಮನ ಸೇನಿಕರನ್ನು ಶೆರೆಹಿಡಿದಿರುತ್ತಾರೆ.

ರಣರಂಗದಲ್ಲಿರುವ ಬ್ರಿಟಿಷ ಸೇನಿಕರಲ್ಲಿ ತಿಂಗಳು ಒಂದಕ್ಕೆ ೯ಕಡಾ ೧೫ರಂತೆ ನಷ್ಟವಾಗುತ್ತಿರುವರು

ದಶಂಬರ ತಾ ೨೦ರ ವರೆಗೆ ಎಡೆನ್ ರಣರಂಗದಲ್ಲಿ ಬದಲಾವನೆಯಾಗಿಲ್ಲ. ಈ ಮಧ್ಯೆ ಒಂದೆರಡು ಸಣ್ಣ ಕದನಗಳು ನಡೆದು ಶತ್ರುಗಳಲ್ಲಿ ೯ ಮಂದಿ ಹತರಾಗಿರುವರು ಒಬ್ಬನು ಶೆರೆಬಿದ್ದಿರುವನ ವತ್ತೊಬ್ಬನು ಗಾಯಪೊಡದಿರುವನ್ನು ಎಂತ ತಿಳಿದು ಬಂದದೆ

ರುಶ್ಯನರು ಡ್ವಿನ ರಣರಂಗದಲ್ಲಿ ತಮ್ಮ ನೆಲೆಯನ್ನು ಇನ್ನೂ ಕಾಪಾಡಿಕೊಂಡಿರುತ್ತಾರೆ

ರುಶ್ಯನರ ಸೈನ್ಯವು ವರ್ಷದಲ್ಲಿ ಇಳಿದಿರ ತ್ತದೆಂತ ವಾರ್ತೆ ಇದೆ ತಾ ೨೧ನೇ ರುಶ್ಯನರ ಎರಡು ಟೊರ್ಪೆಡೋ ದೋಣಿಗಳ ವರ್ಷ ಆಚರಿಸಲ್ಪಟ್ಟಿದ್ದ ಬಲ್ಗೇರಿಯನರ ಒಂದ ಟೊರ್ಪೆಡೋ ದೋಣಿಯನ್ನ ಅಟ್ಟಿಕೊಂಡು ಹೋಗಿರ ತ್ತದೆ ಈ ಮಧ್ಯೆ ರೋಂದು ಮಾಡುತ್ತಿದ್ದ ತುರ್ಕರ ಎರಡು ಹಡಗಗರ್ನ್ನ ರುಶ್ಯನರು ಮುಣುಗಿಸಿ ನಾವಿಕರನ್ನ ಶೆರೆಹಿಡಿದಿರ ಕ್ರಾರೆ

ಕೌಕಾಸಸ್ ಪ್ರಾಕೃದ ಒಬ್ಬ ಎಂಬಲ್ಲಿ ರುಶ್ಯನರು ತುರ್ಕ ಸೈನ್ಯವನ್ನ ಅಪಾರವಾದ ನಷ್ಟವನ್ನುಂಟು ಮಾಡಿರುವರು

ಡರ್ಡನೆಲ್ಲಿಸ್‌ನಲ್ಲಿ ಬ್ರಿಟಿಷ ಸೈನ್ಯದಲ್ಲಿ ೨೯೯ ಆಫೀಸರರೂ ೬೭,೨೬೨ ಮಂದಿ ಸೈನಿಕರೂ ಗಾಯಪೊಡೆದಿರುವರ ೩೫೬ ಆಫೀಸರರೂ ೧೫೧೧೪ ಸೈನಿಕರೂ ಕಾಣೆಯಾಗಿರುವರು

ತಾ. ೨೫ನೇ ದಶಂಬರ.

ಜಪಾನರ ಒಸಾಕವಾರು ಎಂಬ ಹಡಗವನ್ನು ಜರ್ಮನರ ಜಲಂತರ್ಗಾಮಿ ನಾವೆಯು ವಜ್ರಾಘಿಸಿದ್ದನ್ನು ಪ್ರೆಂಚರ ಧೂಮ ಹಡಗವು ಕಂಡು ವಧ್ಯಪ್ರತ್ಯಾಯದಿಸ್ಸೂ ಬಹಳ ಪ್ರಯತ್ನದಿಂದ ಕಡಗದಲ್ಲಿದ್ದ ೧೩೦ ಪ್ರಯಾಣಿಕರನ್ನೂ ಹಡಗದ ನಾವಿಕರನ್ನೂ ರಕ್ಷಿಸಿತ ಪಡೆದಲ್ಲಿ ೮೦ ಬ್ರಿಟಿಷ ಪ್ರಜೆಗಳೂ ಒಬ್ಬ ಅಮೆರಿಕಾನನೂ ಇದ್ದರ

ಫ್ರಾನ್ಸ್ ರಣರಂಗದಲ್ಲಿ ತೋಪು ಕಾಳಗವು ನಡೆಯುತ್ತಿರುವದು

ಯುದ್ಧ ಸಂಬಂಧವಾದ ಅಸಂತೃಪ್ತಿಯು ಜರ್ಮನಿಯ ನೃತಿ ಕಡೆಯಲ್ಲಿಯೂ ಹಬ್ಬಿರ ವದೆಂತ ವಾರ್ತೆ ಇದೆ ಬೆರ್ಲಿನ್ ನಗರದಲ್ಲಿ ಪ ಗೆಗಳು ಎದ್ದಿರುವವು ಸಾವಿರಾರು ಜನರು ಮುಷ್ಕಿವಾಗಿ ಹೋಗಸರ ಸಾಮಗ್ರಿಗಳನ್ನ ಅಧ್ವ ಕಟ್ಟಿ ಕೈಸರರಿಗೆ ವಿರೋಧವಾಗಿ ಕೂಗಿ ನವಗೆ ನಮ್ಮ ಮಕ್ಕಳನ್ನು ಹಿಂದೆ ಕೊಡಿರಿ, ನಮಗೆ ಕೆಲಸ ಯೂ ರೊಟ್ಟಿ ಕೊಡಿ ನವಗೆ ಸವಪ್ರಧಾನಬೇಕು ಎಂದು ಬೊಬ್ಬಿಟ್ಟರು ಹೀಗೆ ತಿನ್ನಲ್ಲರ ಅರಮನೆಯ ಮುಂದುಗಡೆ ಬೊಬ್ಬಿಡವ ಈ ಹೆಂಗಸರ ಗುಂಪನ್ನ ಪೊಲಿಸಿನವರು ಚದರಿಸಿರುವರು ಎಂಬ ಆಮ್ಸ್‌ಟರ್‌ಡಮಿನ 'ಸೆಂಟ್ರಲ್ ನ್ಯೂಸ್' ಪತ್ರಿಕೆಯಲ್ಲಿ ಪ್ರಕಟವಾಗಿದೆ ಜರ್ಮನರ ಈ ಯುದ್ಧವನ್ನು ಖಂಡಿಸುವ ವಂಥಾ ಭಾಷಣಗಳ ಲಿಪ್‌ಜಿಗ್ ಪಟ್ಟಣದಲ್ಲಿ ಸೊಶ್ಯಲಿಸ್ಟ್ ಪಕ್ಷದವ್ವಿಂದ ಕೊಡೋಣಾಗಿರುವವು ಈ ಗಂಟಲನ್ನು ಪೊಲಿಸಿನವರು ಬೆದರಿಸಿ ಕೆಲವರನ್ನು ಕೊಂದು ಅನೇಕರನ್ನು ಗಾಯಪಡಿಸಿರುವರು. ಎಂಬ ವಾರ್ತೆಯೂ ಬಂದಿರುತ್ತದೆ.

ಪ್ರೆಂಚ್ ಸೇನೆಯ ಶ್ರೇಷ್ಠಧಿಕಾರಿಯಾಗಿರುವ ಜನರಲ್ ಕಸ್ತ್ರಲಾವರವರು ಸಲೋನಿಕಕ್ಕೆ ಹೋಗಿರುವರು.

ಜರ್ಮನರು ತಮ್ಮ ಎರಡು ಜಲಂತರ್ಗಾಮಿ ನಾವೆಗಳನ್ನು ಬಲ್ಗೇರಿಯರಿಗೆ ಕಳುಹಿಸಿ ಕೊಟ್ಟಿರುವರ. ಈ ನಾವೆಗಳು ಡ್ಯೆಬ್ರ್ ಯೆಲ್ಲಿ ರಸ್ತೆಚಿಕೆಗೆ ಹೋಗಿ ಅಲ್ಲಿಂದ ವರ್ನಾಕ್ಕೆ ಕಳುಹಿಸಲ್ಪಡುವದು

ಇಟಲಿಯನರ ಒಂದು ಡಿಸ್ಟ್ರೋಯರ್ ನಾವೆಯು ಅಡ್ರಿಯಾಟಿಕ್ ಸಮುದ್ರದಲ್ಲಿ ಶತ್ರುಗಳ ಒಂದು ಡಿಸ್ಟ್ರೋಯರ್ ನಾವೆಯನ್ನು ಆಸ್ಟ್ರಿಯನರ ಒಂದು ದೊಡ್ಡ ಹಡಗವನ್ನೂ ಮುಣುಗಿಸಿರುವದು.

ರುಶ್ಯನರು ತಮ್ಮ ಸೇನೆಯನ್ನು ವರ್ಷದಲ್ಲಿ ಇಳಿಸಿರುವರೆಂಬ ವಾರ್ತೆಗೆ ಆಧಾರವಿಲ್ಲ.

ಕೊರಿಟ್ಟಿದಲ್ಲಿ ಗ್ರೀಕರಿಗೂ, ಬಲ್ಗೇರಿಯರಿಗೂ ಆದ ಕಾಳಗ ನದ ಸಂಬಂಧ ಬಲ್ಗೇರಿಯನರು ಗ್ರೀಕರೊಡನೆ ಕ್ಷಮಾಪಣೆ ಕೇಳಿಕೊಂಡಿರುವರು ಎಂಬ ವಾರ್ತೆ ಇದೆ.

ದಶಂಬರ ತಾ ೧೫ರ ವರೆಗೆ ಡರ್ಡನೆಲ್ಲಿಸ್‌ನಲ್ಲಿ ಒಟ್ಟಿಗೆ ೧೩,೭೩೧ ಮಂದಿಯ ನಷ್ಟ ಉಂಟಾಗಿರುವದು ಈ ಪೈಕಿ ೧೫೦ ಆಫೀಸರರು ಮತ್ತು ೩೩೬೦ ಸೈನಿಕರು ಹತರಾಗಿರುವರು ' ಎಪ್ರೀಲ್ ತಾ ೩ರಿಂದ ದಶಂಬರ ತಾ ೧೫ ವರೆಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿದ ಸೇನಿಕರ ಸಂಖ್ಯೆ ೧೨,೬೭೨ ಎಂತ ಪ್ರಕಟವಾಗಿದೆ

ಪಾರ್ಸಿಸ್ತಾನದಲ್ಲಿ ರುಶ್ಯನರಿಗೆ ಜಯವಾಗುತ್ತಲಿದೆ ರುಶ್ಯನರು ಕುಮ್ ಎಂಬ ಸ್ಥಳವನ್ನು ಸ್ವಾಧೀನ ಮಾಡಿಕೊಂಡು ಶತ್ರುಗಳನ್ನು ಪೂರ್ಣವಾಗಿ ಸೋಲಿಸಿರುವರು.

ತಾ ೩೦ನೇ ದಶಂಬರ

ಫ್ರಾನ್ಸ್ ಮತ್ತು ಬೆಲ್ಜಿಯಂ ರಣರಂಗದಲ್ಲಿ ಈ ದಿನ ವಿಶೇಷ ಸಂಗತಿಗಳೇನೂ ನಡೆದಿರುವದಿಲ್ಲ

ದಶಂಬರ ತಾ ೧೮ರ ವರೆಗೆ ಫ್ರಾನ್ಸಿನಲ್ಲಿ ಬ್ರಿಟಿಷರ ೪೭೧೫ ಮಂದಿ ಸೈನಿಕರ ಪ್ರಾಣಾಪಾಯ ಹೊಂದಿದರು ಈ ಪೈಕಿ ೪೮೨ ಆಫೀಸರರ ಮತ್ತು ೭೭,೪೭೪ ಸೈನಿಕರು ಹತರಾದರ ೧೫೯ ಆಫೀಸರರು ವತ್ತ ೫೦೩೮ ಸೈನಿಕರು ಕಾಣೆಯಾಗಿರುವರು ಡರ್ಡನೆಲ್ಲಿಸ್‌ನಲ್ಲಿ ಪ್ರಾಣಾಪಾಯ ಹೊಂದಿದವರ ಸಂಖ್ಯೆಯನ್ನ ಬಿಟ್ಟರೆ ಇತರ ರಣರಂಗದಲ್ಲಿ ಪ್ರಾಣಾಪಾಯ ಹೊಂದಿದವರ ಸಂಖ್ಯೆ ೩೪೨೦೧ ಈ ಪೈಕಿ ೪೭೧ ಆಫೀಸರರೂ ೧೫೯೦ ಸೈನಿಕರೂ ಹತರಾಗಿರುವರ ಎಲ್ಲಾ ರಣರಂಗದಲ್ಲಿ ಒಟ್ಟಿಗೆ ಬ್ರಿಟಿಷರ ಸೈನ್ಯದಲ್ಲಿ ೧೫೯,೭೩೩ ಮಂದಿ ಹತರಾಗಿರುವರ ೩೫೬ ಆಫೀಸರರೂ ೧೫೧೧೪ ಮಂದಿ ಗಾಯ ಪೊಡೆದಿರುವರ ೬೯,೫೫೩ ಮಂದಿ ಕಾಣೆಯಾಗಿರವರು ಎಂತ ಮೆ ಆಸ್ಪ್ವಿಕರವರು ಹೇಳಿರುತ್ತಾರೆ

ತೀನದ ಯುವಾನ್ ನಗರದಲ್ಲಿ ದಂಗೆ ಎದ್ದಿರವದು ಚೀನ ಸರಕಾರದವರು ಈ ದಂಗೆಯನ್ನ ಅಡಗಿಸಲವೆ ೩೦,೦೦೦ ಸೇನಿಕರನ್ನ ಅಲ್ಲಿಗೆ ಕಳಹಿಸಿರುವರ ಎಂತ ವಾರ್ತೆ ಬಂದಿದೆ

ರುಶ್ಯನರಿಗೂ ಜರ್ಮನರಿಗೂ ಕೆಲವು ಕಡೆಗಳಲ್ಲಿ ತೀಕ್ಷ್ಣವಾದ ಕದನಗಳು ನಡೆದ ಜರ್ಮನರ ಹಿನ್ನೆಟ್ಟಿರುವರ

ವಿತ್ರರಾಷ್ಟ್ರಗಳಿಗೆ ಜಯ ಉಂಟಾಗ ವ ಹಾಗೆ ಜನವ ತಾ ೨೬ನೇ ಆವಿಶ್ಯಕವಾದ ಎಲ್ಲಾ ಕೈಸ್ತ ದೇವಾಲಯಗಳಲ್ಲಿ ಪ್ರಾರ್ಥನೆಯು ನಡೆಯುವದು

ಶತ್ರುಗಳ ಈ ತನಕ ಗ್ರೀಕ ಸರಹದ್ದನ್ನು ದಾಟಲು ಪ್ರಯತ್ನ ಮಾಡಿದ್ದಿಲ್ಲ

ಪ್ರೆಂಚರ ಜನರಲ್ ಕೆಸ್ತಲಾರವರು ಸಲೋನಿಕದಲ್ಲಿರುವ ವಿತ್ರ ಸೇನಿಕರ ನೆಲೆಗಳನ್ನು ಸಂದರ್ಶಿಸಿ ಕೃಪ್ರರಾಗಿ ಅಲ್ಲಿಂದ ಗ್ರೀಕರ ಅರಸರಿಗೆ ಭೇಟಿಕೊಡುವ ಬಗ್ಗೆ ಅಫೆಸ್ಸಿಗೆ ಹೋಗಿರುವರು.

ಬಲ್ಗೇರಿಯನರು ಗ್ರೀಕ ಸರಹದ್ದನ್ನ ದಾಟದಂತೆ ತಡೆ ಮಾಡುವ ವಿಷಯದಲ್ಲಿ ಗ್ರೀಕ ಸರಕಾರದವರು ಜರ್ಮನಿಗೆ ಕಳುಹಿಸಿ ಕೊಟ್ಟ ಪತ್ರಕ್ಕೆ ಜರ್ಮನಿಯಿಂದ ಸಮರ್ಪಕವಾದ ಉತ್ತರವು ದೊರ ಕಿರುವದಿಲ್ಲ. ಜರ್ಮನರು ಗ್ರೀಕ ಸರಹದ್ದಿನಲ್ಲಿ ಸೇನೆಯನ್ನು ಕಂದೊಡ್ಡುತ್ತಿರುವರು.

ಡರ್ಡನೆಲ್ಲಿಸ್‌ನಲ್ಲಿ ತೋಪು ಕಾಳಗವು ನಡೆದಿದ್ದಿತು.

ಇಟಲಿ ರಣರಂಗದ ಟೈರೋಲಿನಲ್ಲಿ ಕಠಿಣ ತೋಪು ಕಾಳಗವು ನಡೆಯುತ್ತಿದೆ

ಪಾರ್ಸಿಸ್ತಾನದ ತೇರಾನಿನ ಸಮೀಪ ರುಶ್ಯನರಿಗೂ 'ಶತ್ರು ಪಕ್ಷದ ೧೩೦೦ ಸೇನಿಕರಿಗೂ ಕದನ ನಡೆದು ಶತ್ರು ಪಕ್ಷದಲ್ಲಿ ೧೪೦ ಮಂದಿ ಹತರಾದರು. ೯೭ ಮಂದಿ ಶೆರೆಬಿದ್ದಿರು

ಮೆಸಪಟಾಮಿಯದಲ್ಲಿ ತಾ ೨೫ರಲ್ಲಿ ತುರ್ಕ ಸೇನಿಕರು ಬ್ರಿಟಿಷ ಸೇನೆಯ ವೇಲ್ಲಾಯಿದು ವಿಶೇಷ ನಷ್ಟವನ್ನು ಹಿನ್ನೆಟ್ಟಿರುವರು ಶತ್ರುಗಳಲ್ಲಿ ೭೦೦-೮೦೦ ಸೇನಿಕರು ಹತರಾಗಿರುವರು. ಬ್ರಿಟಿಷ ಸೇನೆಯಲ್ಲಿ ಸುಮಾರು ೨೦೦ ಸೇನಿಕರ ನಷ್ಟವಾಗಿರ ಬಹುದು.

ತಾ. ೩೧ನೇ ದಶಂಬರ.

ಈಜಿಪ್ಟ್ ಮತ್ತು ಸಿರಿನೇಸಿಯದ ಮಧ್ಯೆ [illegible] ಜೊತೆಗೆ ಪ್ರೆಂಚರ ಕ್ಯಾಪ್ಟರ್ ಯುದ್ಧಾವಾಯು ಸಾಗಿ [illegible]

ಟ್ಯಟ್ಸೀರಿಯನ್ನು ನಾಶಮಾಡಿ, ಶತ್ರುಗಳ ಎರಡು ಜಲಂತರ್ಗಾಮಿ ನಾವೆಗಳ ಮೇಲೆ ಗುಂಡು ಹಾರಿಸಿರುತ್ತದೆ

ಜರ್ಮನರ ಜಲಂತರ್ಗಾಮಿ ನಾವೆಗಳು ಫ್ರೆನ: ಬ್ರಿಟಿಷರ ಮೂರು ಹಡಗುಗಳನ್ನೂ ಫ್ರೆಂಚರ ಎರಡು ಹಡಗುಗಳನ್ನೂ ಟಿಲ್ಲಿಯ ನರ ಒಂದು ನಾವೆಯನ್ನೂ ಮುಳುಗಿಸಿರುತ್ತದೆ

ಫ್ರೆಂಚ್ ರಣರಂಗದಲ್ಲಿ ಫ್ರೆಂಚರ ತೋಪು ಸೇನೆಗಳು ಅಲ್ಲಲ್ಲಿ ಕದನಗಳನ್ನು ಮಾಡುತ್ತಿದ್ದು ಶತ್ರುಗಳ ಕಂದಕ ಇತ್ಯಾದಿಗಳನ್ನು ನಾಶಪಡಿಸುತ್ತಲಿರುವರು

ಹಿಂದೂಸ್ಥಾನದಿಂದ ಫ್ರಾನ್ಸಿಗೆ ಹೋಗಿದ್ದ ಭಾರತೀಯ ಸೇನೆಯು ಫ್ರಾನ್ಸಿನಿಂದ ಮತ್ತೊಂದು ರಣರಂಗಕ್ಕೆ ಹೋಗಿರುತ್ತದೆ

ಲಂಡನ್ನಲ್ಲಿ ಕ್ರಿಸ್ಮಸ್ ದಿನ 14 ತಾಸುಗಳವರೆಗೆ ಬಿಡದೆ ಬರುವುಳಿಯು ಗರೆದು ತೀವ್ರ ನಷ್ಟಿಯಲ್ಲಿ ನೆರೆಬಂದಿರುವದು ಆನೇಕ ವರ್ಗಗಳ ಬಿಡ್ಡು ಕೊಡುವ ಕಾರ್ಯವಳಿಯಲ್ಲಿಯೂ ವಿಶೇಷ ನಷ್ಟವಾಗಿದೆ

ಕಾ ಕೆಲವು ಮೊ ಟಲಿಯೊಯನಗೂ ಆಸ್ಟ್ರಿಯನಗೂ ಸಂಧಾನಕಿನ ಬಗ್ಗೆ ಕಂಡಿಯಾ ನಡೆಯತ ಆಸ್ಟ್ರಿಯನರ ಸೋತ ರಣರಂಗದಲ್ಲಿ ಸಂಭವ ಕೆಲವು ಹೆಚ್ಚಿನ ಶವಗಳನ್ನು ಬಿಟ್ಟು ಓಡಿಹೋದರು ಆಸ್ಟ್ರಿಯನರಲ್ಲಿ ಮಂದಿ ಶವಬಿದ್ದರು ಮೊಂಟಿನಿಗ್ರೊಯರಾ ವಿಜಯದಲ್ಲಿ ಶವನಮಾಡಿ ಕೆಲವು ಗ್ರಾವಗಳನ್ನು ಸ್ವಾಧಿನಪಡಿಸಿಕೊಂಡರು ಆಸ್ಟ್ರಿಯಾನರ ಸೈನಿಯಲ್ಲಿ ವಿಶೇಷ ನಷ್ಟವು ಬಿದ್ದಿರುವದು

ಸರ್ಬಿಯದ ಆರಸ್ಕಾಪ ಪೀಟರನವರ ವಲೋನದಿಂದ ಇಟಲಿಗೆ ಬಂದಿರುವ

ಪರ್ಶಿಯದ ತೆಂಡಾನ್ ಮತ್ತು ಹೆಮಡಾನಿನ ವಧ್ಯೆ ರಷ್ಯನರ ಶತ್ರುಗಳನ್ನು ಸೊಲಿಸಿತ್ತಾ ಶತಗಳ ಕೆಲವು ನೆಲೆಗಳನ್ನು ಕಳಕೊಂಡರು ಕೆಲವು ವಿವಾದಿತರ ಉಳಿದವರು ಓಡಿಹೋದರು

ಉತ್ತರ ಹಿಂದೂಸ್ಥಾನ

ರಘುಗಾರ್ ರಾಜರವರ ಯಷ್ಟದ ಬಗ್ಗೆ ತಮ್ಮ ಸೊಟ್ಟೆ ಒಂದಿಗಳನು ಕೊಂಡ ಕೊಳ್ಳುವರೆ ಸರಕಾರದವರಿಗೆ ರೂಪಾಯಿಗಳನ್ನು ದಾನಮಾಡಿರುತ್ತಾರೆ

ಇದೇ ತಾ ಎಳರಲ್ಲು ಮುಂಬಾಯಲ್ಲಿ ಇಂಡಸ್ಟ್ರಿಯಲ್ ಕನ್ಫರೆನ್ಸ್ ಎಂಬ ಔದ್ಯೋಗಿಕ ಸಭೆಯು ಸರ್ ಡಿ ಟಾಟಾರವರ ಅಧ್ಯಕ್ಷತೆಯಲ್ಲಿ ಕೂಡಿ ಒಂತ ಇಂಥಾ ಸಭೆಯ ಮುಂಬಯಲ್ಲಿ ಕೂಡಿದ್ದು ಪ್ರಥಮ ಸಾರಿಯಾದರೂ ಸಭೆ ಕೂಡಿ ಂದ ಪ್ರತಿನಿಧಿಗಳು ಸಂದರ್ಶಕರು ಸಂಖ್ಯೆಯು ಅಧಿಕವಾಗಿತ್ತು ಇಂಪೀರಿಯಲ್ ಹೋಲ್ಕರ್ ಮಹಾರಾಜರವರೂ ಬರೋಡಾ ಮಹಾರಾಜರವರೂ ಈ ಸಭೆಗೆ ಹಾಜರಿದ್ದರು ಸ್ವಾಗತ ಕಮಿಟಿಯ ಸರ್ ಡಿ ಪೆಟಿಟರವರ ಭಾಷಣವಾದ ನಂತರ ಅಧ್ಯಕ್ಷರವರು ಕಾಲೋಚಿತ ಭಾಷಣವನ್ನು ಕೊಟ್ಟರು ಅನಂತರ ವಾರ್ಷಿಕ ವರದಿಯ ಸಭೆಯ ಸೆಕ್ರಟರಿಯವರಿಂದ ಓದೋಣಾಯಿತ ಲಂಡಂ ರೂಪಾಯಿಗಳ ಫಂಡನ್ನು ಸ್ಥಾಪಿಸಬೇಕೆಂತ ಈ ಸಭೆಯಲ್ಲಿ ವಿಜ್ಞಾಪಿಸಲ್ಪಟ್ಟಿದ್ದರೂ ಈ ವರೆಗೆ ಅಧಿಕ ರೂಪಾಯಿಗಳು ಮಾತ್ರ ಕೂಡಿರುವದೆಂದೂ ಜರ್ಮನ ಆಸ್ಟಿಯ ಕೈಗಾರಿಕೆಗಳ ಮೇಲಾಟವು ಇಲ್ಲದ ಈ ಕಾಲ್ಪದಲ್ಲಿ ಹಿಂದೂಸ್ಥಾನದ ಕೈಗಾರಿಕೆಗಳನ್ನು ಅಭಿವೃದ್ಧಿಗೆ ತರುವ ಪ್ರಯತ್ನವು ಸರಕಾರದಿಂದಾಗಲೀ ಭಾರತೀಯ ಜನರ ಮುಂದಾಳುಗಳಿಂದಾಗಲೀ ಕೈಕೊಳ್ಳೋಣಾಗಲಿಲ್ಲ ಎಂಬ ವಿಷಾದವು ಈ ರಿಪೋರ್ಟಿನಲ್ಲಿ ಸೂಚಿಸ್ತೋಷಾಗಿತ್ತು ದಿಲ್ಲಿದರ್ಬಾರು ನಡೆದನಂತರ ಸಾರ್ವಭೌಮರು ಮುಂಬಾಯಿ ನಗರವನ್ನು ಬಿಟ್ಟು ಶೀಮೆಗೆ ತೆರಳುವಾಗ "ಇವೇರು ತುಂದಿದಂತಾಗಿ "ಅಹಾ! ಈ ಸುಂದರವಾದ ಪಟ್ಟಣವನ್ನು ನಾನು ನೋಡುವದು ಕಡೆಯು ಗಂಂ, ರಂಗೂನಿನ ಮಾ ಪಾ. ಜಿ. ಮೀಧಾಧವರು ರೂ ಸಾರಿಯಾಗಿರುವದು" ಎಂದು ಹೇಳಿದ ಸಾರ್ವಭೌಮರ ಮಾತನ್ನು ಸಭಾ ಪ್ರೆಸಿಡೆಂಟರು ಉದಾಹರಣೆಯಾಗಿಟ್ಟು ಸಾರ್ವಭೌಮರಿಗೆ ಹಿಂದೂಸ್ಥಾನದ ಕಡೆಗಿರುವ ಪ್ರೇಮವನ್ನು ಸಭಿಕರಲ್ಲಿ ಮಂದಟ್ಟು ಮಾಡಿ ರಾಜಭಕ್ತಿಯನ್ನು ಸೂಚಿಸುವ ಮಸೂದೆಯನ್ನು ಸಭೆಯ ಮಂದಿಟ್ಟರು ಬಳಿಕ ಮಾನ್ಯಗಂಧಿ ಮೊದಲಾದ ಮಾನ್ಯ ಗೃಹಸ್ಥರಿಂದ ಹಲವು ಮಸೂದೆಗಳು ಸಭೆಯು ಮಂದೆ ತರಲ್ಪಟ್ಟ ಮಂಜೂರಾತಿಯನ್ನ ಹೊಂದಿರುವದು

ಕಲ್ಕತ್ತೆಯಲ್ಲಿಯ ಒಬ್ಬ ಮಾರ್ವಾಡಿಯ ೧೫,೭೦೦ ರೂಪಾಯಿ ಕಾಣೆಯಾಗಿರುವದು ಸದರಿ ಮಾರ್ವಾಡಿಯು ೧೫,೭೦೦ ರೂಪಾಯಿ ಚೇಕನ್ನು ದಿಲ್ಲಿ ಎಂಡ್ ಲಂಡನ್ ಬೇಂಕಿನಲ್ಲಿ ವರಾಯಿಸುವ ಬಗ್ಗೆ ಒಬ್ಬ ಬಂಗಾಳಿ ಸರಕಾರನೊಡನೆ ಕೊಟ್ಟ ಕಳುಹಿಸಿದ್ದನು ಸರಕಾರನು ಚೇಕನ್ನು ಬೇಂಕಿನಲ್ಲಿ ವಟಾಯಿಸಿ ರೂ ೧೦೦೦ ರಂಂ ನೋಟು ಪತ್ತು ಹತ್ತತ್ತು ರೂಪಾಯಿಗಳ ೭೦ ನೋಟುಗಳನ್ನು ಬೇಂಕಿನಿಂದ ಹಿಡಕೊಂಡು ಹೋದವನು ಕಾಣೆಯಾಗಿರುವನು ಆ ಮಾರ್ವಾಡಿಯು ಇನ್ನು ಸಾವಿರ ರೂಪಾಯಿಗಳ ಚೇಕನ್ನು ವಟಾಯಿಸದೆ ಏನ್ನೊಂದ ಜವಾಬ್ದಾರಿ ಇಲ್ಲದ ಆ ಕೆಲಸದವನೊಡನೆ ಕೊಟ್ಟ ಈಗ ಪಶ್ಚಾತ್ತಾಪಪಡುತ್ತಿರುವನ

ನವಂಬರ ತಾ ಗಾಲಕ್ಕೆ ಲಂತ್ಯವಾಗುವ ವಾರದಲ್ಲಿ ಕಲ್ಕತ್ತೆ ವಂದಿಗೆ ಪ್ಲೇಗ ಬೇನೆಯಂ ಸೋಂಕಿ ೪೦೭೦ ಮಂದಿ ಮೃತರಾದರು ಈ ಪೈಕಿ ಮುಂಬಾಯಿ ಸಂಸ್ಥಾನದಲ್ಲಿ ಗಳಾತ ಮಂದಿ ಪ್ಲೇಗ ಬೇನೆಯು ಸೋಂಕಿ ಗಳಾಗ ವಂದಿ ಮೃತರಾದರು ಮದ್ರಾಸಿನಲ್ಲಿ ೨೮೫ ವಂದಿ ಪ್ಲೇಗ ಬೇನೆಯು ಸೋಂಕಿ ಗಳಂ ಮಂದಿ ಮೃತರಾದರು ಬಿಹಾರ್ ಪ್ರಾಂತ್ಯದಲ್ಲಿ ೭೬೧ ಮಂದಿಗೆ ಪ್ಲೇಗ ಬೇನೆಯು ಸೋಂಕಿ ೫೭೭ ಮರಣಗಳಾದವ್ ಪಂಜಾಬಿನಲ್ಲಿ ೬೭ ವಂದಿಗೆ ಪ್ಲೇಗ ಬೇನೆಯ ಸೋಂಕಿ ೫೮ ವರಣಗಳಾದವು ಬರ್ಮ ಗಿಂಗ ನುಂದಿಗೆ ಪ್ಲೇಗ ಬೇನೆಯು ಸೋಂಕಿ ಗಂಗ ಮರಣಗಳಾದವು ಮಧ್ಯ ಸಂಸ್ಥಾನ ೫೪೪ ವಂದಿಗೆ ಪ್ಲೇಗ ಬೇನೆಯು ಸೋಂಕಿ ೫೮೭ ವಂದಿ ಮೃತರಾದರು ಕೊಡಗ ವರಣ ವೈಸೂರು ಸಂಸ್ಥಾನ ಗಂಗ ವಂದಿಗೆ ಪ್ಲೇಗಬೇನೆಯು ಸೋಂಕಿ ಗಂ ವರಣಗಳಾದವು ಕಾಶ್ಮೀರದಲ್ಲಿ ಂಂ ಜನರಿಗೆ ಪ್ಲೇಗ ಸೋಂಕಿ ೫೪ ವಂದಿ ಮೃತರಾದರ

ಗೋಪಾಲಯವರ ಸ್ಮಾರಕ ಫಂಡಿಗೆ ವೈಸರಾಯ ಪ್ರಭುಗಳವರು ರೂ ೭೦೦೦ ತಿರುವಂಕೋಡಿನ ಮಹಾರಾಜರವರು ರೂ ೧೦೦೦ ನಾಜರು ಮಹಾರಾಜರವರು ರೂ ೧೫೦೦, ಮುನ್ಸೆಬಡ್ ಪ್ರೊವಿನ್ಸಿನ ಲಪ್ಟನೆಂಟ್ ಗವರ್ನರರು ರೂ ೬೫೦ ಸೋಂಡಾಲಿನ ಮಾನ್ಯ ಟಾಕೂರ ಸಾಹೇಬರು ರೂ ೧೦೦೦, ಮಾನ್ಯ ಆಘಖಾನರವರು ರೂ ೪೦೦೦, ಬಹುಮಾನಪಟ್ಟ ಡಾಕ್ಟರ್ ಸುಂದರಲಾಲ ಸಿ ಐ ಇ ರವರು ರೂ ೨೦೦೦, ಬಹುಮಾನಪಟ್ಟ ಮೆ ಕಾರ್ವರ್‌ರವರು ರೂ ೫೦, ಟ್ಯಾಂಪರಿನ ನವಾಬರವರು ರೂ ೫೦೦, ನತಿಪುರದ ಮಹಾರಾಜರವರು ರೂ. ೫೦೦; ಬಹುಮಾನಪಟ್ಟ ಸರ್ ಡಬ್ಲ್ಯು ಕ್ಲಾರ್ಕರವರು ರೂ. ೨೦೦ ಬಹುಮಾನಪಟ್ಟ ಮೆ| ಜೆ. ಬಿ. ಬರ್ನ್‌ಯೇಟ್ಟರವರು ರೂ. ೧೦೦, ಸದರ್ನ ಮಹಾರಾಷ್ಟ್ರ ಜನರಲ್ ಕಂಪನಿಯವರು ರೂ ೧೦೦೦, ಮೆ| ರಾ ಲಾಲ ಶ್ರೀ ರಾಮರವರು ರೂ ೧೦೧, ಸರ್ದಾರ ಯೋಗೇಂದ್ರ ಸಿಂಗ ರೂ. ೧೦೦ ಮೆ| ರಾ ಎಮ್. ಬಿ ಕೃಷ್ಣ ಚೆಟ್ಟಿಯರ್ ರೂ ೧೦೦, ಮುಮುಲಾ ರೂ ೧೫,೮೧೧ ಜಮೆಯಾಗಿರುವದು

ಗಾಂಜೀ ಇನವಿ ಫೇಬ್ರುವರಿ ತಾ ಳರಲ್ಲಿ ಹಿಂದು ಯುನಿವರ್ಸಿಟಿಯ ಶಂಕುಸ್ಥಾಪನೆಯು ಹಾರ್ಡಿಂಜ ಪ್ರಭುಗಳವರಿಂದ ಮಾಡೋಣಾಗುವದು

ರಾಷ್ಟ್ರೀಯ ಸಭೆಗೆ ಸರಕಾರಿ ನೌಕರರಿಗೆ ಹೋಗಲಿಕ್ಕೆ ಅಡ್ಡಿ ಇರುವುದಿಲ್ಲವೆಂತ ಮುಂಬಾಯಿ ಸರಕಾರದವರು ತಿಳಿಯ ಪಡಿಸಿರುತ್ತಾರೆ

ಒಳ್ಳೇ ಹಾಲನ್ನು ಪಟ್ಟಣಿಗರಿಗೆ ಒದಗಿಸಿಕೊಡುವ ಪ್ರಯತ್ನವು ದಿಲ್ಲಿ ಮುನ್ಸಿಪಾಲಿಟಿಯಲ್ಲಿ ನಡೆದಿರುವದು ಈ ಒಳ್ಳೆ ಸರಕಾರದವರು ಯಮುನಾ ನದಿಯ ಬಳಿ ಮುನಿಸಿಪಾಲಿಟಿಯವರಿಗೆ ಒಂದು ಸ್ಥಳವನ್ನ ಕೊಟ್ಟಿರುವರು ಈ ಸ್ಥಳದಲ್ಲಿ ಎಮ್ಮೆಗಳ ಬಗ್ಗೆ ಮುನಿಸಿಪಾಲಿಟಿಯವರ ಹಲ್ಲುಗಾವಲನ್ನು ಬೆಳಸಿರುವರ ಈ ಹುಲ್ಲುಗಾವಲಲ್ಲಿಯ ನಗಳನ್ನು ಮುನ್ಸಿಫಲ್ ಮಾರ್ಕೆಟಿನಲ್ಲಿ ಮಾರುತ್ತಿರುವರು ಲೀಟೆಯಲ್ಲಿ ಸಿಕ್ಕುವ ಹಾಲಿಗಿಂತ ಈ ಹಾಲಿನ ಕ್ರಯವು ಸ್ವಲ್ಪ ಹೆಚ್ಚಾದರೂ ಜನರು ಈ ಹಾಲನ್ನೇ ಕೊಂಡ ಕೊಳ್ಳುತ್ತಿರುವರರಿಂದ ಮುನ್ಸಿಪಾಲಿಟಿಯವರು ಪಟ್ಟಣಿಗರಿಗೆ ಬೇಕಾದಷ್ಟು ಒಳ್ಳೇ ಹಾಲನ್ನು ಒದಗಿಸಿಕೊಡುವ ಹಂಚಿಕೆಮಾಡ ಯೋಚಿಸಿರುವರು

ಇದೇ ತಾ 27ರಲ್ಲು ರಾಷ್ಟ್ರೀಯ ಸಭೆಯು ಮುಂಬಾಯಲ್ಲಿ ಕೂಡಿ ಬಂದಿರುತ್ತದೆ ಮಧ್ಯಾನ್ಹ 1 ಘಂಟೆಗೆ ಸರಿಯಾಗಿ ರಾಷ್ಟ್ರೀಯ ಸಭೆಯ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿದ್ದ ಸರ್ ಎ ಸಿನ್ಹರವರು ಆಲ್ ಇಂಡಿಯ ಕಾಂಗ್ರೆಸ್ ಕಮಿಟಿ ಪಿಂಚರೊಡನೆ ಕಾಂಗ್ರೆಸ್ ಮಂಟಪಕ್ಕೆ ಪ್ರವೇಶಿಸಿದರ ಮಂಟಪದಲ್ಲಿದ್ದ ಜನಸಮುದಾಯವು ಜಯಧ್ವನಿಯನ್ನು ಮಾಡಿತು ಒಟ್ಟಿಗೆ ಈ ಮಂಟಪದಲ್ಲಿ 20 ಸಾವಿರ ಜನರು ನೆರೆದು ಒಂದಿದ್ದರ ಮಂಟಪದ ನಿಲ್ದಾಣದಲ್ಲಿ ಸುಮಾರ 500 ಹೆಂಗಸರೂ ಗಂಡಸರೂ ಇದ್ದರು ಹಿಂದೂ ಮತ್ತು ಮಹಮ್ಮದೀಯರ ಪ್ರತಿನಿಧಿಗಳೆಲ್ಲರೂ ಹಾಜರಿದ್ದರು ಮುಂಬಾಯಿ ಸರಕಾರ ಆಫೀಸರರಲ್ಲಿ ಮೆ ಹೌಬಾಲರ ಹೊರತು ಬೇರೆ ಯಾರೂ ಈ ಸಭೆಗೆ ಚಿತ್ತೈಸಿರಲಿಲ್ಲ ಯೂರೋಪಿಯನಾರ ಪೈಕಿ ಬೋಂಬೆ ಕ್ರೊನಿಕಲ್ ಪತ್ರಿಕೆಯ ಸಂಪಾದಕರ ವಿನಹಾ ಬೇರೆ ಯಾರೂ ಸಭೆಗೆ ಬಂದಿರಲಿಲ್ಲ - ಮುಂಬಾಯಿ ಪಟ್ಟಣದ 500 ಪ್ರತಿನಿಧಿಗಳು, ಮುಂಬಾಯಿ ಸಂಸ್ಥಾನದ 350 ಮದ್ರಾಸ್ ಸಂಸ್ಥಾನದ 350 ಬಂಗಾಳ 80, ಪಂಜಾಬ 22, ಸೆಂಟ್ರಲ್ ಪ್ರೊವಿನ್ಸ್ 30, ಬಿಹಾರ್ 20, ಬಿರಾರ 10 ಪ್ರತಿನಿಧಿಗಳು ಹಾಜರಿದ್ದರು ಅನಂತರ ಸ್ವಾಗತ ಕಮಿಟಿಯ ಅಧ್ಯಕ್ಷರಾದ ಮೆ| ವಾಛಾರವರ ಭಾಷಣವಾಗಿ, ಅಧ್ಯಕ್ಷರನ್ನು ಚುನಾಯಿಸಿದನಂತರ ಅಧ್ಯಕ್ಷರವರು ಭಾಷಣವನ್ನು ಕೊಟ್ಟರು.

ತಾ. 25ರಲ್ಲು ಥಿಯೋಸಫಿಕಲ್ ಮಹಾಸಭೆಯು ಮುಂಬಾಯಲ್ಲಿ ಕೂಡಿ ಬಂದಿರುವದು. ಹಿಂದೂಸ್ಥಾನದ ಅಯಾ ಕಡೆಗಳ ಪ್ರತಿನಿಧಿಗಳು ಈ ಸಭೆಗೆ ಬಂದಿದ್ದರು.

ತಾ. 26ರಲ್ಲು ಆಲ್ ಇಂಡಿಯಾ ಹಿಂದೂ ಕನ್ಫರೆನ್ಸ್ ಮಾನ್ಯಪಂಡಿತ ಮದನ ಮಲವಿಯರ ಅಧ್ಯಕ್ಷತೆಯಲ್ಲಿ ಕೂಡಿ ಬಂದಿರುತ್ತದೆ. ಸುಮಾರು 3000 ಮಂದಿ ಈ ಸಭೆಗೆ ಹಾಜರಿದ್ದರು ಹಿಂದೂ ಜಾತಿಯನ್ನು ಒಲಪಡಿಸಿ, ಈ ಜಾತಿಯ ಪ್ರಾಚೀನ ಪ್ರಭಾವವನ್ನು ಪುನಃ ಅಂಕುರಿಸುವಂತೆ ಪ್ರಯತ್ನಿಸುವದು ಪ್ರತಿ ಹಿಂದೂವಿನ ಹೆಂಗಾಗಿದೆಂಬದು ಅಧ್ಯಕ್ಷರ ಭಾಷಣದ ಮುಖ್ಯ ತಾತ್ಪರ್ಯವಾಗಿತ್ತು ಹಿಂದೂಸ್ಥಾನದ ಇತರ ಜಾತಿಯವರೊಂದಿಗೆ ಕಲೆತು ಐಕ್ಯಭಾವದಿಂದಿರಬೇಕೆಂಬ ಸೂಚನೆಯನ್ನು ಮಿಸಿಸ್ ಸರೋಜಿನಿ ನ್ಯಾಡುರವರು ಸಭೆಯ ಮುಂದೆ ತಂದು ಈ ವಿಷಯದಲ್ಲಿ ಅರ್ಥಗರ್ಭಿತವಾದ ಭಾಷಣವನ್ನು ಕೊಟ್ಟಿರುತ್ತಾರೆ.

ಪಕೇಶ್ವರವಾದಿಗಳ ಮಹಾಸಭೆಯು ಬಹುಮಾನ ಪಟ್ಟ ಡಾಕ್ಟರ್ ನೀಲರತ್ನರವರ ಅಧ್ಯಕ್ಷತೆಯಲ್ಲಿ ತಾ 25ನೇ ಬೆಳಿಗ್ಗೆ ಕೂಡಿ ಬಂದಿರುವದು

ತಾ 26ರಲ್ಲು ಹಿಂದೂಸ್ಥಾನದ ವ್ಯಾಪಾರ ಸಂಬಂಧವಾದ "ಕಮ್ಮರ್ಷಿಯಲ್" ಕನ್ಫರೆನ್ಸ್ ಮುಂಬಾಯಿಯ ಪ್ರಖ್ಯಾತ ಸಾಹುಕಾರರೂ ಕಾರ್ಖಾನೆಗಳ ಯಜಮಾನರೂ ಆದ ಬಹುಮಾನಪಟ್ಟ ಸರ್ ಫಜುಲಭಾಯಿ ಕರಿಂ ಭಾಯಿರವರ ಅಧ್ಯಕ್ಷತೆಯಲ್ಲಿ ಕೂಡಿ ಬಂದಿರುತ್ತದೆ

ಬರೋಡೆಯ ಗಾಯಕವಾಡರು ಮತ್ತು ಮೈಸೂರಿನ ಮಹಾರಾಜರು ತಮ್ಮ ರಾಜ್ಯಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ಕೊಡಿಸುವ ಏರ್ಪಾಡು ಮಾಡಿರುವದಷ್ಟೆ ಇವರ ಹೆಜ್ಜೆಜಾಡಿಗಳನ್ನು ಇಂಡೋರಿನ ಹೋಲ್ಕರ್ ಮಹಾರಾಜರವರೂ ಹಿಂಬಾಲಿಸಿ ತನ್ನ ರಾಜ್ಯದಲ್ಲಿಯೂ ಪ್ರಾಥಮಿಕ ವಿದ್ಯಾದ್ಯಾನವನ್ನು ಕಡ್ಡಾಯವಾಗಿ ಕೊಡಿಸುವ ಏರ್ಪಾಡು ಮಾಡಿರುವರು

"ಆಲ್ ಇಂಡಿಯಾ ಮಹಮ್ಮದನ್ ಎಡ್ಯೂಕೇಶನಲ್ ಕನ್ಫರೆನ್ಸ್" ಎಂಬ ಹಿಂದೂಸ್ಥಾನದ ಮಹಮ್ಮದೀಯರ ವಿದ್ಯಾ ಸಂಬಂಧವಾದ ಒಟ್ಟಿನ ಮಹಾ ಸಭೆಯು ಪೂನೆಯಲ್ಲಿ ಇದೇ ತಾ. 30ರಲ್ಲಿ ಜಸ್ಟಿಸ್ ಅಬ್ದುಲ್ ರಹಿಮ್‌ರವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸಿನ ಪಾರ್ಕ್ ಅಥವಾ ಉದ್ಯಾವನದ ಸಂತೆ ಮತ್ತು ಕೈಗಾರಿಕೆಗಳ ಪ್ರದರ್ಶನವು ಇದೇ ತಾ. 30ರಲ್ಲು ಮದ್ರಾಸ್ ಗವರ್ನರ ಪ್ರಭುಗಳವರಿಂದ ತೆರೆಯೋಡಾಯಿತು. ಬಹುಮಾನಪಟ್ಟ ಸರ್ ಪಿ. ಶಿವಸ್ವಾಮಿ ಆಯ್ಯರರು ಅಲ್ಲಿ ನಡೆದ ಆಯಾ ವಿನೋದಾಟಗಳ ಸ್ಪೆಸಿಡೆಂಟರಾಗಿದ್ದು ಆಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಿದರು. ಸರಕಾರ ಕಾರ್ಖಾನೆಗಳಲ್ಲಿ ಮತ್ತು ಖಾಸಗಿ ಕಂಪೆನಿಗಳಲ್ಲಿ ತಯಾರಾದ ಸಾವಿರಾರು ಬಗೆಯ ವಸ್ತುಗಳು ಈ ಪ್ರದರ್ಶನಕ್ಕೆ ಬಂದಿದ್ದು ಸುಮಾರು ೨೦ ಎಕ್ರೆ ವಿಸ್ತೀರ್ಣದ ಸ್ಥಳದಲ್ಲಿ ಇಡಲ್ಪಟ್ಟಿದ್ದು ಪ್ರೇಕ್ಷಕರನ್ನು ಆಕರ್ಷಿಸುತ್ತಿತ್ತು. ಈ ವಸ್ತುಗಳೆಲ್ಲಾ ಮದ್ರಾಸ್, ಕೊಚ್ಚಿ ಮತ್ತು ತಿರುವಂಕೋಡು ಸಂಸ್ಥಾನಗಳ ಕಸಬುದಾರರಿಂದ ಅತಿ ವಿಚಕ್ಷಣತೆಯಿಂದ ಮಾಡಲ್ಪಟ್ಟಿದ್ದು ಪ್ರತಿ ಒಬ್ಬರೂ ಆ ವಸ್ತುಗಳನ್ನು ನೋಡಿ ಅವುಗಳಿಂದ ಹೊಸ ವಿಷಯವನ್ನು ಕಲಿತುಕೊಳ್ಳುವಷ್ಟು ವಿಶೇಷವುಳ್ಳದ್ದಾಗಿದ್ದವು.

ಮದ್ರಾಸ್ ಕ್ರೈಸ್ತಿಯನ್ ಕಾಲೇಜು ಡೇ ಇದೇ ತಾ. ೨೮ರಲ್ಲು ಡ್ಯೂಪ್ಲಿಟೆ ಎಕೌಂಟಾಟ ಜನರಲರಾದ ಮಾ. ರಾ. ಶ್ರೀನಿವಾಸ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಹಿಂದೂಸ್ಥಾನದ ಜನರ ಪ್ರಾಕೃತಿಕ ಶಕ್ತಿಯನ್ನು ಹೆಚ್ಚಿಸುವಂತೆ ಪ್ರಯತ್ನ ಮಾಡಬೇಕೆಂದೂ ಮಾತೃಭಾಷೆಗೆ ಉತ್ತೇಜನಕೊಡಬೇಕೆಂದೂ ಅಧ್ಯಕ್ಷರು ತನ್ನ ಭಾಷಣದಲ್ಲಿ ದೇಶಬಾಂಧವರನ್ನು ವಿಜ್ಞಾಪಿಸಿಕೊಂಡಿರುವರು.

ದಕ್ಷಿಣ ಕನ್ನಡ.

ಸಹಕಾರ

ಸರ್ಕಿಲಾರು ನಂಬ್ರ ೧೬

ಸಾಲಗಳ ಲೆಕ್ಕ ಆಖೈರು ಮಾಡೋಣ

ಕ್ಲುಪ್ತಕಾಲಕ್ಕೆ ವಸೂಲಾಗದ ಸಾಲಗಳ ಲೆಕ್ಕವನ್ನು ಕೂಡಲೇ ಆಖೈರು ಮಾಡಿ, ಅಂದಿನಿಂದ ಒಟ್ಟಿಕಾದ ಅಸಲು ವಡ್ಡಿಯ ಹಣಕ್ಕೆ ಕೂಡಾ ವಸೂಲು ತಾರೀಕು ವರೆಗೆ ತಿಂಗಳು ಬಂದರ ರೂಪಾಯಿ ಒಂದಕ್ಕೆ ಎರಡು ಪೈ ಪ್ರಕಾರ ದಂಡನೆಯನ್ನು ಹೊರಿಸಬೇಕೆಂಬ ಕ್ರಮವು ಎಲ್ಲಾ ಸಂಘಗಳಲ್ಲಿದ್ದರೂ, ಅನೇಕ ಸಂಘಗಳಲ್ಲಿ ಲೆಕ್ಕ ಆಖೈರು ಮಾಡುವುದೆಂಬ ವಾಡಿಕೆಯೇ ಇಲ್ಲವೆಂದು ಕಾಣುತ್ತದೆ. ವಾಯಿದೆಗೆ ಬಾರದಿದ್ದ ಸಾಲಗಳನ್ನು ಸಹ ಸಾಲದ ಖಾತೆಯಲ್ಲಿ ಇದ್ದಂತೆ ಇರಗೊಡಿಸಿ ಬಡ್ಡಿ ಹುನ್ನೆಣಿಸುವಾಗ ಮಾತ್ರ ದಂಡನೆಯ ವರದಲ್ಲಿ ಎಣಿಸುತ್ತಾರೆ ಇದು ಕ್ರಮಕ್ಕೆ ವಿರೋಧವಾಗಿರುತ್ತದೆ ಲೆಕ್ಕ ಆಖೈರು ಮಾಡಿದ ಸಾಲಗಳ ಮೇಲೆ ಮಾತ್ರ ಮತ್ತು ಲೆಕ್ಕ ಆಖೈರು ಮಾಡಿದ ತಾರೀಕಿನಿಂದ ಮಾತ್ರ ದಂಡನೆಯ ದರವ ಒಡ್ಡಿಯನ್ನು ವಸೂಲು ಮಾಡುವ ಅಧಿಕಾರ ವಿದೆ. ಆದುದರಿಂದ ಲೆಕ್ಕ ಆಖೈರು ಮಾಡುವದೆಂಬದು ಮುಖ್ಯವಾದ ಕೆಲಸವಾಗಿರುತ್ತದೆ. ಯಾವ ಸಾಲದ ಲೆಕ್ಕವನ್ನು ಆಖೈರು ಮಾಡಬೇಕೋ, ಆ ಸಾಲದ ಪ್ರತಿ ಪ್ರತಿದರಲ್ಲಿ ಹೀಗೆಂದು ಬರೆಯತಕ್ಕದ್ದು:—"ಈ ಸಾಲವು ವಾಯಿದೆಗೆ ವಸೂಲಾಗದುದರಿಂದ (ಅಥವಾ ಕಂತು ತಪ್ಪಿದುದರಿಂದ, ಅಥವಾ ದುರುಪಯೋಗಪಡಿಸಿದುದರಿಂದ, ಎಂಬ ಮುಂತಾದ ಕಾರಣಗಳನ್ನು ಸೂಚಿಸಿ), ಇದರ ಲೆಕ್ಕ ಆಖೈರು ಮಾಡಲಾಯಿತು.

ಇದರ ಬಾಬತು ಬರತಕ್ಕ ವಸೂಲು ರೂ.

ಬಡ್ಡಿ ರೂ. ---

ಜುಮುಲಾ ರೂ.

(ತಾರೀಕು)

(ಕಾರ್ಯದರ್ಶಿಯ ದಸ್ಕತು.)

ಕಾರ್ಯದರ್ಶಿ"

ಇದೇ ಲೆಕ್ಕ ಆಖೈರು ಮಾಡುವ ಕ್ರಮವಾದ ವಿಧಿಯು. ಅನೇಕ ಸಂಘಗಳಲ್ಲಿ ಈ ಸಂಪ್ರದಾಯವು ಇಲ್ಲವೇ ಇಲ್ಲದುದರಿಂದ, ಅದನ್ನು ಇಲ್ಲಿ ತೋರಿಸಿಯದೆ.

ಕಂತುಗಳಿಂದ ಮರುಪಾವತಿ ಮಾಡಲ್ಪಡುವ ಸಾಲಗಳ ಮಟ್ಟಿಗೆ ಕೆಲವು ಸಂಘಗಳಲ್ಲಿ ತಪ್ಪಿದ ಕಂತುಗಳನ್ನು ಮಾತ್ರ ದಂಡನೆಯ ಬಡ್ಡಿಯ ಸಮೇತ ತೆಗೆದುಕೊಂಡು ಮುಂದಿನ ಕಂತುಗಳನ್ನು ಮೊದಲಿನಂತೆಯೇ ಇರಗೊಡಿಸುತ್ತಾರೆ. ಇದು ಶುದ್ಧ ತಪ್ಪಾಗಿರುತ್ತದೆ. ಹಾಗೆ ಮಾಡುವರೆ ಯಾವ ಕ್ರಮದಲ್ಲಿಯೂ ಅಧಿಕಾರವಿಲ್ಲ. ಸಾಲಗಳನ್ನು ಸೇಂಕ್ಷನ್ ಮಾಡಿದ ಶರ್ತಗಳ ಪೈಕಿ ಯಾವ ಶರ್ತವು ಉಲ್ಲಂಘಿಸಲ್ಪಟ್ಟರೂ, ಪೂರಾ ಶರ್ತಗಳು ತನ್ನ ವ್ಯಕ್ಕೆ ರದ್ದಾಗಿ ಸಾಲವು ಕೂಡಲೇ ಕೊಡಬೇಕಾಗುವುದು. ಆದುದರಿಂದ ಈ ವಿಷಯಗಳನ್ನು ಸಹ ಪ್ರತಿಯೊಂದು ಸಂಘದವರೂ ಜೆನ್ನಾಗಿ ಗ್ರಹಿಸಿ ಕ್ರಮಗಳಿಗನುಸಾರವಾಗಿಯೇ ಎಲ್ಲಾ ಕೆಲಸಗಳನ್ನು ಮಾಡಬೇಕು.

ದಕ್ಷಿಣಕನ್ನಡಾ ಸೆಂಟ್ರಲ್ ಕೊ ಆಪರೇಟಿವ್ ಬೇಂಕ್, ಲಿಮಿಟೆಡ್ ಪುತ್ತೂರು ಕಾ. 27—12—15. } ಎಮ್. ಅನಂತರಾವ್ ಕಾರ್ಯದರ್ಶಿ.

ಉಡುಪಿ:—ಕೆಲವು ದಿವಸ ಭಿಳಿಯು ಬಹಳ ಹೆಚ್ಚಾಗಿದ್ದಿತು. ಈಗ ಕಡಿಮೆಯಾಗಿ ಈ ತಾ 25ರಲ್ಲು ಚನ್ನಾಗಿ ಮಳೆ ಸುರಿಯಿತು ಈ ಮಳೆಯಿಂದ ಫಲವೈರುಗಳಿಗೂ ಧಾನ್ಯಗಳಿಗೂ ಕೇಡಲ್ಲದೆ ಉಪದ್ರವೋಗವಿಲ್ಲವಾಗಿ ಸಾಮಾನ್ಯ ಭಾವನೆ ಇರುವದು.

ಪರ್ಯಾಯೋತ್ಸವಕ್ಕಾಗಿ ಅನೇಕ ದೇಶಗಳಿಂದ ಯಾತ್ರೆಯ ನೂರಾರು ಜನರು ಈಗಲೆ ಒಂದು ಕಲೆತಿರುವರು. ಈ ವರ್ಷ ಪ್ಲೇಗಿನಿರ್ಬಂಧ ವಗೈರೆ ಇಲ್ಲದಿರುವದರಿಂದ ಇಷ್ಟು ವರ್ಷಗಳಿಗಿಂತಲೂ ಜನಸ್ತೋಮವು ಜಾಸ್ತಿಯಾಗಿ ಸೇರುವದೆಂತ ತೋರುತ್ತದೆ.

ಶರಹಟ್ಟಿ ನಾಟಕ ಕಂಪನಿಯವರು ಸದ್ಯ ಇಲ್ಲಿಗೆ ಬರುತ್ತಾರಾಗಿ ವದಂತಿ ಇದೆ. ನಾಟಕಶಾಲೆಯು ತಯಾರಾಗುತ್ತಲಿದೆ

ಈ ತಿಂಗಳ 12ನೇ ತಾರೀಕಿನಲ್ಲಿ ಶ್ರೀ ಸೀರೂರು ಸ್ವಾಮಿಯವರು ಕಟ್ಟಿಸಿದ ಭೋಜನಶಾಲಾ ಪ್ರವೇಶ ಸಮಾರಂಭವು ಬಹು ವಿಜೃಂಭಣೆಯಿಂದ ನೆರವೇರಿದ್ದಾಯಿತು. ಇಂಥಾ ಶಾಶ್ವತವಾದ ಕಟ್ಟೋಣವು ಈ ಊರಲ್ಲಿ ಇದುವರೆಗೆ ಆಗಿರುವ ಕಟ್ಟೋಣಗಳಲ್ಲಿ ಇಲ್ಲವಾಗಿ ತೋರುತ್ತದೆ ಇದಕ್ಕೆ ಅಂದಾಜು 50 ಸಾವಿರಿ ರೂಪಾಯಿ ತಗಲಬಹುದೆಂತ ತೋರುತ್ತದೆ. ಪರರ ಸಹಾಯ ವಿಶೇಷವಿಲ್ಲದೆ, ಉಪೋದ್ರವವಿಲ್ಲದೆ ಇಂಥ ಮಹತ್ಕಾರ್ಯವನ್ನು ಮಾಡಿದವರು ಈ ಜಿಲ್ಲೆಯೊಳಗಾಗಿ ಶ್ರೀ ಸೀರೂರು ಸ್ವಾಮಿಯರೇ ಮೊದಲನೆಯವರೆಂತ ಹೇಳಬಹುದು. ಆ ಭೋಜನ ಶಾಲೆಯ ವಿಶಾಲವಾದ ಗೋಡೆಯಲ್ಲಿ ಈ ಕೆಳಗಿನ ಧರ್ಮಸೂತ್ರಗಳನ್ನು ದೊಡ್ಡ ಅಕ್ಷರಗಳಿಂದ ಬರೆಸಿದರೆ ಆಗಬಹುದೆಂತ ತೋರುತ್ತದೆ. ಅವು ಯಾವವೆಂದರೆ:—ಬ್ರಾಹ್ಮಣನು ನಿರೋದ್ಯೋಗಿಯಾಗಿರಬಾರದು. ವಿದ್ಯಾವಂತನಾಗಿರಬೇಕು. ಉದ್ಯೋಗಿಯಾಗಿರಬೇಕು. ಆಚಾರಶೀಲನಾಗಿರಬೇಕು. ವರ್ಣಾಶ್ರಮ ಧರ್ಮವನ್ನು ಪರಿಪಾಲಿಸುತ್ತಿರಬೇಕು. ಹರಿಗುರುಗಳಲ್ಲಿ ಭಕ್ತಿಯುಳ್ಳವನಾಗಿರಬೇಕು. ಸತ್ಯವನ್ನೇ ಆಡಬೇಕು. ಭೂತದಯೆಯುಳ್ಳವನಾಗಿರಬೇಕು. ಹಿಂಸೆ ಪಡಿಸಬಾರದು. ಇವೇ ಮೊದಲಾದವನ್ನು ಬರಿಸಿದರೆ ಏಕಕಾಲದಲ್ಲಿಯೇ ಅನ್ನದಾನವನ್ನೂ ವಿದ್ಯಾದಾನವನ್ನೂ ಮಾಡಿದಂತಾಗುವದು. ಇದರಿಂದ ಒಮ್ಮೆಯಲ್ಲದಿದ್ದರೆ ಮತ್ತೊಮ್ಮೆಯಾದರೂ ಒಬ್ಬನಿಗಲ್ಲದಿದ್ದರೆ ಮತ್ತೊಬ್ಬನಿಗಾದರೂ ಫಲವಾಗದೆ ಹೋಗಲಾರದು.

ಇಲ್ಲಿಯ ಸರ್ವಜ್ಞಾಲಯವು ಇದೇ ತಾ. 25ರಲ್ಲು ಪ್ರಾರಂಭವಾಯಿತು. ಈ ಶಾಲೆಗೆ ಸೇರಿದ 35 ಮಂದಿ ವಿದ್ಯಾರ್ಥಿಗಳಲ್ಲಿ

ಗಳೂ ತಮಗೆ ಉಪಾಧ್ಯಾಯರಾಗಿದ್ದ ಇಲ್ಲಿಯ ಲೇಂಡ್ ರಿಕಾರ್ಡ್ಸ್ ಇನ್ಸ್‌ಪೆಕ್ಟರವರು ಮ. ರಾ ಕೃಷ್ಣಪ್ಪನವರನ್ನು ಬಹಳವಾಗಿ ಶ್ಲಾಘಿಸುತ್ತಿರುವರು. ಕಡೆ ದಿವಸ ಉಪನ್ಯಾಸಗಳು ನಡೆದು ಇವರೆಲ್ಲರ ಭಾವಚಿತ್ರವು ತೆಗೆಯಲ್ಪಟ್ಟಿತು. ಈ ವರ್ಷ ನಡೆದ ಸರ್ವೆಶಾಲೆಗಳೆಲ್ಲ ಇಲ್ಲಿಯ ಶಾಲೆಯ ಫಲವೇ ಪೂರ್ಣ ತೃಪ್ತಿಯುಳ್ಳದ್ದಾಗಿರುವದಾಗಿ ಲೇಂಡ್ ರಿಕೋರ್ಡ್ಸ್ ತಹಸಿಲ್‌ದಾರರು ಅಭಿಪ್ರಾಯ ಪಟ್ಟಿರುವರಾಗಿ ತಿಳಿದುಬರುತ್ತದೆ

ಬಂಟವಾಳ:—ಗತಿಸಿದ ಕೊಳಕೆರೆ ರಾಮ ನಾಯಕರಿಗೆ ಪುತ್ರಸಂತಾನವಿಲ್ಲದೆ ಇದ್ದುದರಿಂದ ಅವರ ವಿಧವೆ ತುಳಸಮ್ಮನು ಇದೇ ತಾ ೩೦ರಲ್ಲಿ (ಮಾರ್ಗಶಿರ ಶು. ೧೪) ಇನ್ನಳ್ಳಿ ನರಸಿಂಹಪೈಯವರ ಪುತ್ರ ಚಿ। ಪಾಂಡುರಂಗನೆಂಬ ಹುಡುಗನನ್ನು ದತ್ತಸ್ವೀಕಾರ ಹೋಮ ವಿಧಿಯ ಪೂರ್ವಕವಾಗಿ, ತನ್ನ ಉತ್ತರಾಧಿಕಾರಿಯಾಗಿ ಸ್ವೀಕರಿಸಿಕೊಂಡ್ದರಿಂದ, ಸದರಿ ವರ ಆಸ್ತಿಯ ಸರಕ್ಷಣೆಯು ನಿರ್ವಿಘ್ನವಾಗಿ ನಡೆವಂತೆಯಾಯಿತು. ಆ ದಿನ ಇಲ್ಲಿಯ ದೇವಾಲಯಗಳಲ್ಲೆಲ್ಲಿಯೂ ದರ್ಮ, ಸಮಾರಾಧನೆ, ಉತ್ಸವಾದಿಗಳೂ, (ಮೊಗರನಾಡು, ಪಾಣೆಮಂಗಳೂರು ದೇವಸ್ಥಾನಗಳಲ್ಲಿಯೂ ಕೂಡಾ) ನಡೆಯಿಸಲಾದುವು ಮುಂದೆ ಆಸ್ತಿಯನ್ನು ನ್ಯಾಜ್ಯಗಳಿಗೆ ಒಡ್ಡದಂತೆ ಈ ಹೊಂಗಸು ಮಾಡಿದ ದತ್ತ ಸ್ವೀಕಾರವು ಸರ್ವ ಸಮ್ಮತವಾಗಿಯೂ ಉಚಿತವಾದುದೆನ್ನಬಹುದಾಗಿದೆ

